# ಭಾರತ ಉತ್ತರಾಧಿಕಾರ ಅಧಿನಿಯಮ, 1925

## ವಿಷಯಾನುಕ್ರಮಣಿಕೆ


ಪ್ರಕರಣಗಳು: ಪುಟ

ಭಾಗ - I

ಪ್ರಾರಂಭಿಕ

1. ಚಿಕ್ಕ ಹೆಸರು 1
2. ಪರಿಭಾಷೆಗಳು 1
3. ರಾಜ್ಯದ ಯಾವುದೇ ಜನಾಂಗ, ಪಂಥ ಅಥವಾ ಬುಡಕಟ್ಟನ್ನು ಈ ಅಧಿನಿಯಮದ ಪ್ರವರ್ತನೆಯಿಂದ ವಿನಾಯಿತಿಗೊಳಿಸಲು ರಾಜ್ಯ ಸರ್ಕಾರದ ಅಧಿಕಾರ 1

ಭಾಗ - II

ಅಧಿವಾಸದ ಬಗ್ಗೆ

4. ಈ ಭಾಗದ ಅನ್ವಯ 2
5. ಮೃತ ವ್ಯಕ್ತಿಯ ಸ್ಥಿರ ಮತ್ತು ಚರ ಸ್ವತ್ತುಗಳಿಗೆ ಉತ್ತರಾಧಿಕಾರವನ್ನು ವಿನಿಯಮಿಸುವ ಕಾನೂನು 2
6. ಒಂದು ಅಧಿವಾಸವು ಮಾತ್ರ ಚರ ಸ್ವತ್ತುಗಳ ಉತ್ತರಾಧಿಕಾರಕ್ಕೆ ಪರಿಣಾಮವನ್ನುಂಟು ಮಾಡುತ್ತದೆ 2
7. ಔರಸ ಜನನದ ವ್ಯಕ್ತಿಯ ಮೂಲ ಅಧಿವಾಸ 2
8. ಅನೌರಸ ಮಗುವಿನ ಮೂಲ ಅಧಿವಾಸ 2
9. ಮೂಲ ಅಧಿವಾಸದ ಮುಂದುವರಿಕೆ 2
10. ಹೊಸ ಅಧಿವಾಸದ ಆರ್ಜನೆ 2
11. ಭಾರತದಲ್ಲಿ ಅಧಿವಾಸವನ್ನು ಆರ್ಜಿಸುವ ವಿಶೇಷ ವಿಧಾನ 3
12. ವಿದೇಶಿ ಸರ್ಕಾರದ ಪ್ರತಿನಿಧಿಯಾಗಿ ಅಥವಾ ಅವನ ಕುಟುಂಬದ ಭಾಗವಾಗಿ ವಾಸಿಸುವ ಮೂಲಕ ಅಧಿವಾಸವನ್ನು ಆರ್ಜಿಸಲಾಗದು 3
13. ಹೊಸ ಅಧಿವಾಸದ ಮುಂದುವರಿಕೆ 3
14. ಅಪ್ರಾಪ್ತ ವಯಸ್ಕನ ಅಧಿವಾಸ 3
15. ವಿವಾಹವಾದ ಮೇಲೆ ಮಹಿಳೆಯು ಆರ್ಜಿಸಿದ ಅಧಿವಾಸ 3
16. ವಿವಾಹಿತ ಜೀವನದ ಅವಧಿಯಲ್ಲಿ ಹೆಂಡತಿಯ ಅಧಿವಾಸ 3
17. ಅಪ್ರಾಪ್ತ ವಯಸ್ಕನು ಹೊಸ ಅಧಿವಾಸವನ್ನು ಆರ್ಜಿಸುವುದು 4
18. ಮನೋವಿಕಲನು ಹೊಸ ಅಧಿವಾಸವನ್ನು ಆರ್ಜಿಸುವುದು 4
19. ಬೇರೆಡೆ ಅಧಿವಾಸದ ರುಜುವಾತು ಇಲ್ಲದಿರುವಲ್ಲಿ ಭಾರತದಲ್ಲಿನ ಚರಸ್ವತ್ತಿಗೆ ಉತ್ತರಾಧಿಕಾರ 4

ಭಾಗ - III

ವಿವಾಹ

20. ವಿವಾಹದ ಮೂಲಕ ಹಿತಾಸಕ್ತಿಗಳು ಮತ್ತು ಅಧಿಕಾರಗಳನ್ನು ಆರ್ಜಿಸಿಕೊಳ್ಳಲಾಗದು ಅಥವಾ ಕಳೆದುಕೊಳ್ಳಲಾಗದು 4
21. ಭಾರತದಲ್ಲಿ ಅಧಿವಾಸಿಯಾದ ವ್ಯಕ್ತಿಯ ಮತ್ತು ಅಧಿವಾಸಿಯಾಗಿರದ ವ್ಯಕ್ತಿಯ ನಡುವಣ ವಿವಾಹದ ಪರಿಣಾಮ 4
22. ವಿವಾಹದ ನಿರೀಕ್ಷಣೆಯಲ್ಲಿ ಅಪ್ರಾಪ್ತ ವಯಸ್ಕನ ಸ್ವತ್ತಿನ ವ್ಯವಸ್ಥೆ 4

ಭಾಗ - **IV**

ರಕ್ತ ಸಂಬಂಧದ ಬಗ್ಗೆ


23. ಈ ಭಾಗದ ಅನ್ವಯ 4

24. ರಕ್ತ ಸಂಬಂಧಿ ಅಥವಾ ರಕ್ತ ಸಂಬಂಧ 4

25. ವಂಶಾನುಗತ ರಕ್ತ ಸಂಬಂಧ 4

26. ಪಾರ್ಶ್ವಿಕ ರಕ್ತ ಸಂಬಂಧ 5

27. ಉತ್ತರಾಧಿಕಾರದ ಉದ್ದೇಶಕ್ಕಾಗಿ ವ್ಯಕ್ತಿಗಳು ಮೃತ ವ್ಯಕ್ತಿಗೆ ಒಂದೇ ರೀತಿಯಲ್ಲಿ ಸಂಬಂಧಿಸಿದವರೆಂದು ಪರಿಗಣಿಸುವುದು 5

28. ರಕ್ತ ಸಂಬಂಧಿಯ ಶ್ರೇಣಿಗಳನ್ನು ಲೆಕ್ಕ ಹಾಕುವ ವಿಧಾನ 5


ಭಾಗ - **V**

ಮರಣಶಾಸನರಹಿತ ಉತ್ತರಾಧಿಕಾರ

ಅಧ್ಯಾಯ - **I**

ಪ್ರಾರಂಭಿಕ


29. ಈ ಭಾಗದ ಅನ್ವಯ 5

30. ಮೃತನು ಯಾವ ಸ್ವತ್ತಿನ ಬಗ್ಗೆ ಮರಣಶಾಸನರಹಿತವಾಗಿ ಮರಣ ಹೊಂದಿದ್ದಾನೆ ಎಂದು ಪರಿಗಣಿಸುವುದು 5


ಅಧ್ಯಾಯ - **II**

ಪಾರ್ಸಿಗಳಲ್ಲದ ಮರಣಶಾಸನರಹಿತರ ಸಂದರ್ಭಗಳಲ್ಲಿ ನಿಯಮಗಳು


31. ಈ ಅಧ್ಯಾಯವು ಪಾರ್ಸಿಗಳಿಗೆ ಅನ್ವಯಿಸತಕ್ಕುದಲ್ಲ 6

32. ಅಂಥ ಸ್ವತ್ತಿನ ಪ್ರಾಪ್ತಿ 6

33. ಮರಣಶಾಸನರಹಿತನು ವಿಧವೆ ಮತ್ತು ಪಿತೃವಂಶಜರನ್ನು ಅಥವಾ ವಿಧವೆ ಮತ್ತು ರಕ್ತ ಸಂಬಂಧಿಯನ್ನು ಮಾತ್ರ ಅಥವಾ ರಕ್ತ ಸಂಬಂಧಿಯಿಲ್ಲದೆ ವಿಧವೆಯನ್ನು ಮಾತ್ರ ಬಿಟ್ಟು ಹೋಗಿರುವ ಸಂದರ್ಭ 6

33ಎ. ಮರಣ ಶಾಸನ ರಹಿತನು, ಪಿತೃವಂಶಜರು ಯಾರೂ ಇಲ್ಲದೆ ವಿಧವೆಯನ್ನು ಮಾತ್ರ ಬಿಟ್ಟು ಹೋಗಿರುವ ಸಂದರ್ಭದಲ್ಲಿ ವಿಶೇಷ ಉಪಬಂಧ 6

34. ಮರಣಶಾಸನರಹಿತನು ಯಾವ ವಿಧವೆಯನ್ನೂ ಬಿಟ್ಟು ಹೋಗಿಲ್ಲದ ಸಂದರ್ಭ ಮತ್ತು ಯಾವ ರಕ್ತ ಸಂಬಂಧಿಯನ್ನೂ ಬಿಟ್ಟುಹೋಗಿಲ್ಲದ ಸಂದರ್ಭ 7

35. ವಿಧುರನ ಹಕ್ಕುಗಳು 7

36. ವಿತರಣಾ ನಿಯಮಗಳು 7

37. ಮರಣಶಾಸನರಹಿತನು ಮಗು ಅಥವಾ ಮಕ್ಕಳನ್ನು ಮಾತ್ರ ಬಿಟ್ಟುಹೋಗಿರುವಲ್ಲಿ 7

38. ಮರಣಶಾಸನರಹಿತನು ಯಾವುದೇ ಮಗುವನ್ನು ಬಿಟ್ಟು ಹೋಗದೆ ಮೊಮ್ಮಗು ಅಥವಾ ಮೊಮ್ಮಕ್ಕಳನ್ನು ಬಿಟ್ಟು ಹೋಗಿರುವಲ್ಲಿ 7

39. ಮರಣಶಾಸನರಹಿತನು ಮರಿ ಮೊಮ್ಮಕ್ಕಳನ್ನು ಅಥವಾ ದೂರದ ಪಿತೃವಂಶಜರನ್ನು ಮಾತ್ರ ಬಿಟ್ಟು ಹೋಗಿರುವಲ್ಲಿ 7

40. ಮರಣಶಾಸನರಹಿತನು ಎಲ್ಲರೂ ಒಂದೇ ಶ್ರೇಣಿಯ ರಕ್ತ ಸಂಬಂಧಿಗಳಾಗಿರದ ಪಿತೃವಂಶಜರನ್ನು ಬಿಟ್ಟು ಹೋಗಿರುವಲ್ಲಿ ಮತ್ತು ಯಾರ ಮೂಲಕ ಹೆಚ್ಚು ದೂರದ ವಂಶಜರು ಬಂದಿದ್ದಾರೋ ಅವರು ಮೃತರಾಗಿರುವಲ್ಲಿ 8

41. ಮರಣಶಾಸನರಹಿತನು ಯಾರೇ ಪಿತೃವಂಶಜರನ್ನು ಬಿಟ್ಟುಹೋಗದಿರುವ ಸಂದರ್ಭದಲ್ಲಿ ವಿತರಣೆಯ ನಿಯಮಗಳು 8

42. ಮರಣಶಾಸನರಹಿತನ ತಂದೆಯು ಜೀವಂತವಿರುವಲ್ಲಿ 8

43. ಮರಣಶಾಸನರಹಿತನ ತಂದೆಯು ಮೃತನಾಗಿದ್ದು ಅವನ ತಾಯಿ, ಸಹೋದರರು ಮತ್ತು ಸಹೋದರಿಯರು ಜೀವಂತವಿರುವಲ್ಲಿ 8

44. ಮರಣಶಾಸನರಹಿತನ ತಂದೆ ಮೃತನಾಗಿದ್ದು ಅವನ ತಾಯಿ, ಒಬ್ಬ ಸಹೋದರ ಅಥವಾ ಸಹೋದರಿ ಮತ್ತು ಯಾವನೇ ಮೃತ ಸಹೋದರನ ಅಥವಾ ಸಹೋದರಿಯ ಮಕ್ಕಳು ಜೀವಿಸಿರುವಲ್ಲಿ 9

45. ಮರಣಶಾಸನರಹಿತನ ತಂದೆಯು ಮೃತನಾಗಿದ್ದು, ಅವನ ತಾಯಿ ಮತ್ತು ಯಾವನೇ ಮೃತ ಸಹೋದರನ ಅಥವಾ ಸಹೋದರಿಯ ಮಕ್ಕಳು ಜೀವಂತವಿರುವಲ್ಲಿ 9

46. ಮರಣಶಾಸನರಹಿತನ ತಂದೆಯು ಮರಣ ಹೊಂದಿದ್ದು, ತಾಯಿಯು ಜೀವಂತವಿರುವಾಗ ಮತ್ತು ಯಾವ ಸಹೋದರ ಅಥವಾ ಸಹೋದರಿ ಅಥವಾ ಸಹೋದರನ ಮಗ ಅಥವಾ ಸಹೋದರನ ಮಗಳೂ ಇಲ್ಲದಿರುವಾಗ 9

47. ಮರಣಶಾಸನರಹಿತನು ಪಿತೃವಂಶಜನನ್ನಾಗಲೀ ತಂದೆ ಅಥವಾ ತಾಯಿಯರನ್ನಾಗಲೀ ಬಿಟ್ಟು ಹೋಗಿಲ್ಲದಿರುವಲ್ಲಿ 9

48. ಮರಣಶಾಸನ ರಹಿತನು ಪಿತೃವಂಶಜ, ತಂದೆ ಅಥವಾ ತಾಯಿ ಅಥವಾ ಸಹೋದರ ಅಥವಾ ಸಹೋದರಿಯನ್ನು ಬಿಟ್ಟು ಹೋಗಿಲ್ಲದಿರುವಲ್ಲಿ 10

49. ಅವಿಭಕ್ತ ಆಸ್ತಿಯಲ್ಲಿ ಮಕ್ಕಳ ಅಭ್ಯುದಯದ ಖರ್ಚನ್ನು ಪರಿಗಣಿಸದಿರುವುದು 10

## ಅಧ್ಯಾಯ - III

### ಮರಣಶಾಸನ ರಹಿತ ಪಾರ್ಸಿಗಳ ಬಗ್ಗೆ ವಿಶೇಷ ನಿಯಮಗಳು

50. ಮರಣ ಶಾಸನರಹಿತನ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಸಾಮಾನ್ಯ ತತ್ವಗಳು 10

51. ಮರಣಶಾಸನ ರಹಿತ ಸ್ವತ್ತನ್ನು ಅವನ ವಿಧವೆ, ವಿಧುರ, ಮಕ್ಕಳು ಮತ್ತು ತಂದೆ ತಾಯಿಗಳ ನಡುವೆ ವಿಭಜಿಸುವುದು 10

52. 1991ರ 51ನೇ ಸಂಖ್ಯೆಯ ಅಧಿನಿಯಮದ ಮೂಲಕ ಮೂಲ ಅಧಿನಿಯಮದ 51 ಮತ್ತು 52ನೇ ಪ್ರಕರಣಕ್ಕೆ ಬದಲಾಗಿ ಪ್ರಕರಣ 51ನ್ನು ಪ್ರತ್ಯಾಯೋಜಿಸಲಾಗಿದೆ. 11

53. ಪಿತೃವಂಶಜರನ್ನು ಬಿಟ್ಟು ಹೋಗಿರುವ ಮರಣ ಶಾಸನ ರಹಿತನಿಗಿಂತ ಮೊದಲೇ ಮೃತನಾದ ಮಗುವಿನ ಪಾಲಿನ ವಿಭಜನೆ 11

54. ಮರಣಶಾಸನರಹಿತನು ಯಾವನೇ ಪಿತೃವಂಶಜನನ್ನು ಬಿಟ್ಟುಹೋಗದೇ ವಿಧವೆ ಅಥವಾ ವಿಧುರನನ್ನು ಅಥವಾ ಯಾವನೇ ಪಿತೃವಂಶಜನ ವಿಧವೆಯನ್ನು ಅಥವಾ ವಿಧುರನನ್ನು ಬಿಟ್ಟು ಹೋಗಿರುವಲ್ಲಿ ಸ್ವತ್ತಿನ ವಿಭಜನೆ 11

55. ಮರಣಶಾಸನರಹಿತನು ಪಿತೃವಂಶಜರನ್ನಾಗಲಿ ಅಥವಾ ಒಬ್ಬ ವಿಧವೆ ಅಥವಾ ವಿಧುರನನ್ನಾಗಲಿ ಅಥವಾ ಯಾವನೇ ಪಿತೃವಂಶಜನ ವಿಧವೆಯನ್ನೇ ಆಗಲಿ ಬಿಟ್ಟು ಹೋಗಿರದಿರುವ ಸಂಬಂಧದಲ್ಲಿ ಸ್ವತ್ತಿನ ವಿಭಜನೆ 12

56. ಈ ಅಧ್ಯಾಯದ ಇತರ ಉಪಬಂಧಗಳ ಮೇರೆಗೆ ಉತ್ತರಾಧಿಕಾರಿಯಾಗಲು ಹಕ್ಕುಳ್ಳ ಯಾವನೇ ಬಂಧುವು ಇಲ್ಲದಿರುವಲ್ಲಿ ಸ್ವತ್ತಿನ ವಿಭಜನೆ 12

## ಭಾಗ - VI

### ಮರಣ ಶಾಸನಸಹಿತ ಉತ್ತರಾಧಿಕಾರ

## ಅಧ್ಯಾಯ - I

### ಪ್ರಾಸ್ತಾವಿಕ

57. ಹಿಂದೂಗಳು, ಮುಂತಾದವರು ಮಾಡಿದ ಉಯಿಲುಗಳ ವರ್ಗಕ್ಕೆ ಈ ಭಾಗದ ಕೆಲವು ಉಪಬಂಧಗಳ ಅನ್ವಯ 13

58. ಈ ಭಾಗದ ಸಾಮಾನ್ಯಾನ್ವಯ 13

ಅಧ್ಯಾಯ - **II**

ಉಯಿಲುಗಳು ಮತ್ತು ಉಯಿಲಿನ ಅನುಬಂಧಗಳ ಬಗ್ಗೆ


59. ಉಯಿಲುಗಳನ್ನು ಮಾಡಲು ಸಮರ್ಥನಾದ ವ್ಯಕ್ತಿ 13

60. ಮರಣಶಾಸನ ಸಹಿತ ಪಾಲಕ 14

61. ಮೋಸ, ಬಲಾತ್ಕಾರ ಅಥವಾ ಅತಿಯಾಚನೆಯ ಮೂಲಕ ಪಡೆದ ಉಯಿಲು 14

62. ಉಯಿಲನ್ನು ರದ್ದುಗೊಳಿಸಬಹುದು ಅಥವಾ ಬದಲಾಯಿಸಬಹುದು 15


ಅಧ್ಯಾಯ - **III**

ವಿಶೇಷಾಧಿಕಾರವಿಲ್ಲದ ಉಯಿಲುಗಳನ್ನು ಬರೆದುಕೊಡುವುದರ ಬಗ್ಗೆ


63. ವಿಶೇಷಾಧಿಕಾರವಿಲ್ಲದ ಉಯಿಲುಗಳನ್ನು ಬರೆದುಕೊಡುವುದು 15

64. ಉಲ್ಲೇಖದ ಮೂಲಕ ಕಾಗದ ಪತ್ರಗಳ ಸೇರ್ಪಡೆ 15


ಅಧ್ಯಾಯ - **IV**

ವಿಶೇಷಾಧಿಕಾರದ ಉಯಿಲುಗಳ ಬಗ್ಗೆ


65. ವಿಶೇಷಾಧಿಕಾರದ ಉಯಿಲುಗಳು 15

66. ವಿಶೇಷಾಧಿಕಾರದ ಉಯಿಲುಗಳನ್ನು ಮಾಡುವ ವಿಧಾನ ಮತ್ತು ಅವುಗಳನ್ನು ಬರೆದುಕೊಡುವ ನಿಯಮಗಳು 16


ಅಧ್ಯಾಯ - **V**

ಉಯಿಲುಗಳ ಅನುಪ್ರಮಾಣ, ರದ್ದಿಯಾತಿ, ಬದಲಾವಣೆ ಮತ್ತು ಪುನರುಜ್ಜೀವನದ ಬಗ್ಗೆ


67. ಅನುಪ್ರಮಾಣಿಸುವ ಸಾಕ್ಷಿಗೆ ಮಾಡಿದ ದಾನದ ಪರಿಣಾಮ 16

68. ಹಿತಾಸಕ್ತಿಯ ಕಾರಣದಿಂದ ಅಥವಾ ನಿರ್ವಾಹಕನಾಗಿರುವುದರಿಂದ ಸಾಕ್ಷಿಯು ಅನರ್ಹನಾಗದಿರುವುದು 16

69. ಮರಣಶಾಸನ ಕರ್ತನ ವಿವಾಹದ ಮೂಲಕ ಉಯಿಲಿನ ರದ್ದಿಯಾತಿ 17

70. ವಿಶೇಷಾಧಿಕಾರವಿಲ್ಲದ ಉಯಿಲು ಅಥವಾ ಉಯಿಲಿನ ಅನುಬಂಧದ ರದ್ದಿಯಾತಿ 17

71. ವಿಶೇಷಾಧಿಕಾರವಿಲ್ಲದ ಉಯಿಲಿನಲ್ಲಿ ಅಳಿಸಿಬಿಡುವಿಕೆ, ಒಳಪಂಕ್ತಿ ಬರಹ ಅಥವಾ ಬದಲಾವಣೆಯ ಪರಿಣಾಮ 17

72. ವಿಶೇಷಾಧಿಕಾರದ ಉಯಿಲಿನ ಅಥವಾ ಉಯಿಲಿನ ಅನುಬಂಧದ ರದ್ದಿಯಾತಿ 17

73. ವಿಶೇಷಾಧಿಕಾರವಿಲ್ಲದ ಉಯಿಲಿನ ಪುನರುಜ್ಜೀವನ 17


ಅಧ್ಯಾಯ - **VI**

ಉಯಿಲುಗಳನ್ನು ಅರ್ಥೈಸುವ ಬಗ್ಗೆ


74. ಉಯಿಲಿನ ಪದಪ್ರಯೋಗ 18

75. ಉಯಿಲಿನ ಉದ್ದೇಶ ಅಥವಾ ವಿಷಯದ ಬಗ್ಗೆ ಪ್ರಶ್ನೆಗಳನ್ನು ನಿರ್ಧರಿಸಲು ವಿಚಾರಣೆಗಳು 18

76. ಸ್ವೀಕರ್ತನ ತಪ್ಪು ಹೆಸರು ಅಥವಾ ತಪ್ಪು ವಿವರಣೆ 18

77. ಪದಗಳನ್ನು ಯಾವಾಗ ತುಂಬಬಹುದು 19

78. ವಿಷಯದ ವಿವರಣೆಯಲ್ಲಿನ ತಪ್ಪು ವಿವರಣೆಗಳನ್ನು ತಿರಸ್ಕರಿಸುವುದು 19

79. ವಿವರಣೆಯ ಭಾಗವನ್ನು ತಪ್ಪೆಂದು ಯಾವಾಗ ತಿರಸ್ಕರಿಸಲಾಗದು 19

80. ಸ್ಪಷ್ಟ ಸಂದಿಗ್ಧತೆಯ ಸಂದರ್ಭಗಳಲ್ಲಿ ಬಾಹ್ಯ ಸಾಕ್ಷ್ಯದ ಅಂಗೀಕಾರ 20

81. ಸ್ಪಷ್ಟ ಸಂದಿಗ್ಧತೆ ಅಥವಾ ನ್ಯೂನತೆಯ ಸಂದರ್ಭದಲ್ಲಿ ಬಾಹ್ಯ ಸಾಕ್ಷ್ಯವನ್ನು ಅಂಗೀಕರಿಸದಿರುವುದು 20

82. ಇಡೀ ಉಯಿಲಿನಿಂದ ಖಂಡದ ಅರ್ಥವನ್ನು ಗ್ರಹಿಸುವುದು 20

83. ಪದಗಳನ್ನು ಯಾವಾಗ ಪರಿಬಂಧಿತ ಅರ್ಥದಲ್ಲಿ ಮತ್ತು ಯಾವಾಗ ಅವುಗಳನ್ನು ಸಾಮಾನ್ಯವಾದುದಕ್ಕಿಂತ ಹೆಚ್ಚು ವಿಶಾಲವಾದ ಅರ್ಥದಲ್ಲಿ ಅರ್ಥ ಮಾಡಿಕೊಳ್ಳಬಹುದು 21

84. ಎರಡು ಅರ್ಥಾನ್ವಯಗಳು ಸಾಧ್ಯವಿರುವಾಗ ಯಾವುದಕ್ಕೆ ಪ್ರಾಶಸ್ತ್ಯ 21

85. ಯುಕ್ತವಾಗಿ ಅರ್ಥೈಸಬಹುದಾಗಿರುವ ಯಾವುದೇ ಭಾಗವನ್ನು ತಿರಸ್ಕರಿಸದಿರುವುದು 21

86. ಉಯಿಲಿನ ಬೇರೆ ಬೇರೆ ಭಾಗಗಳಲ್ಲಿ ಪುನರಾವೃತ್ತಿಯಾದ ಪದಗಳ ಅರ್ಥ ವಿವರಣೆ 21

87. ಮರಣಶಾಸನ ಕರ್ತನ ಉದ್ದೇಶವನ್ನು ಸಾಧ್ಯವಾಗುವಷ್ಟರ ಮಟ್ಟಿಗೆ ಪರಿಣಾಮಕಾರಿಗೊಳಿಸುವುದು 21

88. ಎರಡು ಅಸಂಗತ ಖಂಡಗಳಲ್ಲಿ ಕೊನೆಯದು ಪ್ರಭಾವವುಳ್ಳದ್ದಾಗಿರುತ್ತದೆ 22

89. ಅನಿಶ್ಚಿತತೆಯಿಂದಾಗಿ ಉಯಿಲು ಅಥವಾ ಮರಣಶಾಸನ ದಾನವು ಶೂನ್ಯವಾಗುವುದು 22

90. ವಿಷಯವನ್ನು ವಿವರಿಸುವ ಪದಗಳು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಆ ವಿವರಣೆಗೆ ಅನುಗುಣವಾಗಿರುವ ಸ್ವತ್ತಿಗೆ ಸಂಬಂಧಪಡುವುದು 22

91. ಸಾಮಾನ್ಯ ಮರಣಶಾಸನ ದಾನದ ಮೂಲಕ ಬರೆದುಕೊಟ್ಟ ನಿಗದಿಪಡಿಸುವ ಅಧಿಕಾರ ಪತ್ರ 22

92. ನಿಗದಿಪಡಿಸಲು ತಪ್ಪಿದಲ್ಲಿ ಅಧಿಕಾರ ಪತ್ರದ ಉದ್ದೇಶಗಳಿಗೆ ಇಂಗಿತದಾನ 22

93. ಪರಿಮಿತಗೊಳಿಸುವ ನಿಬಂಧನೆಗಳಿಲ್ಲದೆ ನಿರ್ದಿಷ್ಟ ವ್ಯಕ್ತಿಯ "ವಾರಸುದಾರರು" ಮುಂತಾದವರಿಗೆ ಮರಣಶಾಸನ ದಾನ 23

94. ನಿರ್ದಿಷ್ಟ ವ್ಯಕ್ತಿಯ "ಪ್ರತಿನಿಧಿಗಳು" ಮುಂತಾದವರಿಗೆ ಮಾಡಿದ ಮರಣಶಾಸನ ದಾನ 23

95. ಪರಿಮಿತಿ ಸೂಚಕ ಶಬ್ದಗಳಿಲ್ಲದ ಮರಣಶಾಸನದಾನ 23

96. ಪರ್ಯಾಯವಾಗಿ ಮರಣಶಾಸನದಾನ 23

97. ಒಬ್ಬ ವ್ಯಕ್ತಿಗೆ ಕೊಟ್ಟ ಮರಣಶಾಸನ ದಾನಕ್ಕೆ ಸೇರಿಸಲಾದ ಒಂದು ವರ್ಗವನ್ನು ವಿವರಿಸುವ ಪದಗಳ ಪರಿಣಾಮ 24

98. ಸಾಮಾನ್ಯ ವಿವರಣೆಯ ಮೇರೆಗೆ ಮಾತ್ರವೇ ವ್ಯಕ್ತಿಗಳ ವರ್ಗಕ್ಕೆ ಮರಣಶಾಸನದಾನ 25

99. ಪದಗಳ ಅರ್ಥಾನ್ವಯ 25

100. ಬಂಧುತ್ವವನ್ನು ವ್ಯಕ್ತಪಡಿಸುವ ಪದಗಳು ಔರಸ ಬಂಧುಗಳನ್ನು ಮಾತ್ರ ಅಥವಾ ಅಂಥ ಬಂಧುಗಳು ಇಲ್ಲದಿದ್ದರೆ ಔರಸರೆಂದು ಭಾವಿಸಲಾದಂಥ ಬಂಧುಗಳನ್ನು ಸೂಚಿಸುತ್ತದೆ. 25

101. ಉಯಿಲಿನಲ್ಲಿ ಒಬ್ಬನೇ ವ್ಯಕ್ತಿಗೆ ಎರಡು ಮರಣಶಾಸನ ದಾನಗಳನ್ನು ಮಾಡಿರುವುದಾಗಿ ತಾತ್ಪರ್ಯವಾಗುವಲ್ಲಿ ಅರ್ಥಾನ್ವಯದ ನಿಯಮಗಳು 26

102. ಶೇಷ ಲೆಗಟಿಯನ್ನು ನೇಮಿಸುವುದು 27

103. ಶೇಷ ಲೆಗಟಿಯು ಹಕ್ಕುಳ್ಳವನಾಗುವಂಥ ಸ್ವತ್ತು 28

104. ಸಾಮಾನ್ಯ ಪದಗಳಲ್ಲಿರುವ ಮರಣಶಾಸನ ಸ್ವತ್ತು ನಿಹಿತವಾಗುವ ಕಾಲ 28

105. ಯಾವ ಸಂದರ್ಭದಲ್ಲಿ ಮರಣಶಾಸನ ಸ್ವತ್ತು ರದ್ದಾಗುತ್ತದೆ 28

106. ಜಂಟಿ ಲೆಗಟಿಗಳಲ್ಲಿ ಒಬ್ಬನು ಮರಣಶಾಸನ ಕರ್ತನಿಗಿಂತ ಮುಂಚೆ ಮರಣ ಹೊಂದಿದ್ದರೆ ಮರಣಶಾಸನ ದಾನವು ರದ್ದಾಗುವುದಿಲ್ಲ 29

107. ವಿಭಿನ್ನ ಪಾಲುಗಳನ್ನು ಕೊಡುವ ಮರಣಶಾಸನ ಕರ್ತನ ಉದ್ದೇಶವನ್ನು ಸೂಚಿಸುವ ಪದಗಳ ಪರಿಣಾಮ 29

108. ರದ್ದಾದ ಪಾಲು ಯಾವಾಗ ವಿಲೆಯಾಗದೆ ಇರುವುದು 29

109. ಮರಣಶಾಸನ ಕರ್ತನ ಜೀವಿತ ಕಾಲದಲ್ಲಿ ಮರಣಶಾಸನ ಕರ್ತನ ಮಗು ಅಥವಾ ಪಿತೃವಂಶಜನಿಗೆ ಕೊಟ್ಟ ಮರಣಶಾಸನ ದಾನವು, ಅವನು ಮರಣ ಹೊಂದಿದ ಮೇಲೆ ಯಾವಾಗ ರದ್ದಾಗುವುದಿಲ್ಲ 29

110. 'ಬಿ' ನ ಪ್ರಯೋಜನಕ್ಕಾಗಿ 'ಎ' ನಿಗೆ ಕೊಟ್ಟ ಮರಣಶಾಸನ ದಾನವು 'ಎ' ನ ಮರಣದಿಂದ ರದ್ದಾಗದಿರುವುದು 29

111. ವಿವರಿಸಿದ ವರ್ಗಕ್ಕೆ ಮಾಡಿದ ಮರಣಶಾಸನ ದಾನದ ಸಂದರ್ಭದಲ್ಲಿ ಉತ್ತರ ಜೀವಿತಾಧಿಕಾರ 29

## ಅಧ್ಯಾಯ - VII

### ಶೂನ್ಯ ಮರಣಶಾಸನ ದಾನಗಳ ಬಗ್ಗೆ

112. ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಅಸ್ತಿತ್ವದಲ್ಲಿರುವ ವ್ಯಕ್ತಿಗೆ ವಿಶಿಷ್ಟ ವಿವರಣೆಯ ಮೂಲಕ ಮರಣಶಾಸನ ದಾನ 30

113. ಹಿಂದಿನ ಮರಣಶಾಸನ ದಾನಕ್ಕೆ ಒಳಪಟ್ಟು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಅಸ್ತಿತ್ವದಲ್ಲಿರದ ವ್ಯಕ್ತಿಗೆ ಮರಣಶಾಸನ ದಾನ 31

114. ಶಾಶ್ವತತೆಯ ವಿರುದ್ಧ ನಿಯಮ 32

115. ಯಾವ ವರ್ಗದಲ್ಲಿ ಕೆಲವರಿಗೆ 113ನೇ ಪ್ರಕರಣ ಅಥವಾ 114ನೇ ಪ್ರಕರಣಗಳ ನಿಯಮಗಳು ಅನ್ವಯಿಸಬಹುದೋ ಆ ವರ್ಗಕ್ಕೆ ಮಾಡಿದ ಮರಣಶಾಸನ ದಾನ 33

116. ಮೊದಲಿನ ಮರಣಶಾಸನ ದಾನವು ವಿಫಲವಾದ ಮೇಲೆ ಪರಿಣಾಮಕಾರಿಯಾಗತಕ್ಕ ಮರಣಶಾಸನ ದಾನ 33

117. ಸಂಚಯದ ಬಗ್ಗೆ ನೀಡಿದ ನಿರ್ದೇಶನ ಪರಿಣಾಮ 34

118. ಧಾರ್ಮಿಕ ಅಥವಾ ಧರ್ಮಾರ್ಥ ಉಪಯೋಗಗಳಿಗೆ ಮರಣಶಾಸನ ದಾನ 34

## ಅಧ್ಯಾಯ - VIII

### ಮರಣಶಾಸನ ಸ್ವತ್ತುಗಳು ನಿಹಿತವಾಗುವುದರ ಬಗ್ಗೆ

119. ಸಂದಾಯ ಅಥವಾ ಸ್ವಾಧೀನವನ್ನು ಮುಂದೂಡಿದಾಗ ಮರಣಶಾಸನ ಸ್ವತ್ತು ನಿಹಿತವಾಗುವ ದಿನಾಂಕ 35

120. ನಿರ್ದಿಷ್ಟ ಅನಿಶ್ಚಿತ ಘಟನೆಯು ನಡೆಯುವುದರ ಮೇಲೆ ಅವಲಂಬಿತವಾದ ಮರಣಶಾಸನ ಸ್ವತ್ತು ನಿಹಿತವಾಗುವ ದಿನಾಂಕ 35

121. ನಿರ್ದಿಷ್ಟ ವಯಸ್ಸು ತುಂಬುವಂಥ ಒಂದು ವರ್ಗದ ಸದಸ್ಯರಿಗೆ ಕೊಟ್ಟ ಮರಣಶಾಸನ ದಾನದಲ್ಲಿನ ಹಿತಾಸಕ್ತಿಯು ನಿಹಿತವಾಗುವುದು 37

## ಅಧ್ಯಾಯ - IX

### ಹೊಣೆಯುಳ್ಳ ಮರಣಶಾಸನ ದಾನಗಳ ಬಗ್ಗೆ

122. ಹೊಣೆಯುಳ್ಳ ಮರಣಶಾಸನ ದಾನಗಳು 37

123. ಒಬ್ಬನೇ ವ್ಯಕ್ತಿಗೆ ಕೊಡಲಾದ ಎರಡು ಪ್ರತ್ಯೇಕ ಮತ್ತು ಸ್ವತಂತ್ರ ಮರಣಶಾಸನ ದಾನಗಳಲ್ಲಿ ಒಂದನ್ನು ಅಂಗೀಕರಿಸಬಹುದು ಮತ್ತು ಇನ್ನೊಂದನ್ನು ನಿರಾಕರಿಸಬಹುದು 37

## ಅಧ್ಯಾಯ - X

### ಅವಲಂಬಿತ ಮರಣಶಾಸನ ದಾನಗಳ ಬಗ್ಗೆ

124. ನಿರ್ದಿಷ್ಟ ಅನಿಶ್ಚಿತ ಘಟನೆಯು ಸಂಭವಿಸುವ ಬಗ್ಗೆ ಯಾವುದೇ ಕಾಲವನ್ನು ನಮೂದಿಸದಿರುವಾಗ ಅಂಥ ಘಟನೆಯ ಮೇಲೆ ಅವಲಂಬಿತವಾದ ಮರಣಶಾಸನ ದಾನ 37

125. ನಿರ್ದಿಷ್ಟಪಡಿಸದ ಯಾವುದೇ ಅವಧಿಯಲ್ಲಿ ಉತ್ತರ ಜೀವಿಗಳಾಗತಕ್ಕಂಥ ಕೆಲವು ವ್ಯಕ್ತಿಗಳಿಗೆ ಮರಣಶಾಸನ ದಾನ 38

## ಅಧ್ಯಾಯ - XI

### ಷರತ್ತು ಪೂರ್ವಕ ಮರಣಶಾಸನ ದಾನಗಳ ಬಗ್ಗೆ


126. ಈಡೇರಿಸಲು ಸಾಧ್ಯವಾಗದ ಷರತ್ತಿನ ಮೇಲೆ ಮರಣಶಾಸನ ದಾನ 39

127. ಕಾನೂನು ಬಾಹಿರ ಅಥವಾ ಅನೈತಿಕ ಷರತ್ತಿನ ಮೇಲೆ ಕೊಟ್ಟ ಮರಣಶಾಸನ ದಾನ 39

128. ಮರಣಶಾಸನ ಸ್ವತ್ತು ನಿಹಿತವಾಗಲು ಪೂರ್ವ ಷರತ್ತಿನ ಈಡೇರಿಕೆ 39

129. 'ಎ' ನಿಗೆ ಕೊಟ್ಟ ಮರಣಶಾಸನ ದಾನವು ವಿಫಲವಾದಾಗ ಅದು 'ಬಿ' ನಿಗೆ ಸೇರುವುದು 40

130. ಮೊದಲ ಮರಣಶಾಸನ ದಾನವು ವಿಫಲಗೊಂಡ ಮೇಲೆ ಎರಡನೆಯದು ಯಾವಾಗ ಪರಿಣಾಮಕಾರಿಯಾಗುವುದು 40

131. ನಿರ್ದಿಷ್ಟ ಅನಿಶ್ಚಿತ ಘಟನೆಯು ಸಂಭವಿಸುವ ಅಥವಾ ಸಂಭವಿಸದಿರುವ ಷರತ್ತಿನ ಮರಣಶಾಸನ ದಾನವು ಇನ್ನೊಬ್ಬನಿಗೆ ಹೋಗುವುದು 40

132. ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸುವುದು 41

133. ಮೂಲ ಮರಣಶಾಸನ ದಾನವು ಎರಡನೆಯದರ ಅಸಿಂಧುತ್ವದ ಕಾರಣದಿಂದಾಗಿ ಬಾಧಕಗೊಳ್ಳದಿರುವುದು 41

134. ನಿರ್ದಿಷ್ಟ ಅನಿಶ್ಚಿತ ಘಟನೆಯು ಸಂಭವಿಸುವ ಅಥವಾ ಸಂಭವಿಸದಿರುವ ಪಕ್ಷದಲ್ಲಿ ಮರಣಶಾಸನ ದಾನವು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕುದೆಂಬ ಷರತ್ತುಳ್ಳ ಮರಣಶಾಸನದಾನ 42

135. ಅಂಥ ಷರತ್ತು 120ನೇ ಪ್ರಕರಣದ ಮೇರೆಗೆ ಅಸಿಂಧುವಾಗದಿರುವುದು 42

136. ಯಾವ ಕಾರ್ಯಕ್ಕಾಗಿ ಯಾವುದೇ ಕಾಲವನ್ನು ನಿಗದಿಪಡಿಸಿಲ್ಲವೋ ಮತ್ತು ಯಾವ ಕಾರ್ಯವನ್ನು ನೆರವೇರಿಸದಿದ್ದರೆ ವಸ್ತು ವಿಷಯವು ಬೇರೊಬ್ಬರಿಗೆ ಹೋಗುವುದೋ ಆ ಯಾವುದೇ ಕಾರ್ಯವನ್ನು ಲೆಗಟೆಯು ಅಸಾಧ್ಯವನ್ನಾಗಿಸುವ ಅಥವಾ ಅನಿರ್ದಿಷ್ಟವಾಗಿ ಮುಂದೂಡುವುದರ ಪರಿಣಾಮ 42

137. ಮುಂಚಿನ ಅಥವಾ ತರುವಾಯದ ಷರತ್ತನ್ನು ನಿರ್ದಿಷ್ಟಪಡಿಸಿದ ಕಾಲದೊಳಗೆ ನೆರವೇರಿಸುವುದು ಮೋಸದ ಸಂದರ್ಭದಲ್ಲಿ ಇನ್ನೂ ಹೆಚ್ಚಿನ ಕಾಲ 43


## ಅಧ್ಯಾಯ - XII

### ವಿನಿಯೋಗ ಅಥವಾ ಉಪಭೋಗದ ಸಂಬಂಧದಲ್ಲಿ ನಿರ್ದೇಶನಗಳಿಂದ ಕೂಡಿದ ಮರಣಶಾಸನ ದಾನಗಳ ಬಗ್ಗೆ


138. ಯಾವನೇ ವ್ಯಕ್ತಿಗೆ ಅಥವಾ ಅವನ ಪ್ರಯೋಜನಕ್ಕಾಗಿ ಮಾಡಿದ ನಿಧಿಯ ನಿರುಪಾಧಿಕ ಮರಣಶಾಸನ ದಾನವನ್ನು ಅನುಸರಿಸಿ ಅದನ್ನು ವಿಶಿಷ್ಟ ರೀತಿಯಲ್ಲಿ ವಿನಿಯೋಗಿಸತಕ್ಕುದೆಂಬ ಬಗ್ಗೆ ನಿರ್ದೇಶನ 43

139. ನಿರುಪಾಧಿಕ ಮರಣಶಾಸನ ದಾನದ ಉಪಭೋಗದ ವಿಧಾನವನ್ನು ಲೆಗಟಿಗೆ ನಿರ್ದಿಷ್ಟ ಪ್ರಯೋಜನವನ್ನು ದೊರಕಿಸಿಕೊಡಲು ಮಿತಿಗೊಳಿಸಬೇಕೆಂಬ ನಿರ್ದೇಶನ 43

140. ಯಾವ ನಿರ್ದಿಷ್ಟ ಉದ್ದೇಶಗಳಲ್ಲಿ ಕೆಲವನ್ನು ಈಡೇರಿಸಲಾಗುವುದಿಲ್ಲವೋ ಆ ನಿರ್ದಿಷ್ಟ ಉದ್ದೇಶಗಳಿಗಾಗಿ ಮರಣಶಾಸನದ ಮೂಲಕ ನಿಧಿಯ ದಾನ 43


## ಅಧ್ಯಾಯ - XIII

### ನಿರ್ವಾಹಕನಿಗೆ ಕೊಟ್ಟ ಮರಣಶಾಸನ ದಾನಗಳ ಬಗ್ಗೆ


141. ನಿರ್ವಾಹಕನಾಗಿ ಹೆಸರಿಸಲಾದ ಲೆಗಟೆಯು ನಿರ್ವಾಹಕನಾಗಿ ಕಾರ್ಯನಿರ್ವಹಿಸುವ ಆಶಯವನ್ನು ತೋರಿಸುವ ಹೊರತು ಮರಣಶಾಸನ ಸ್ವತ್ತನ್ನು ತೆಗೆದುಕೊಳ್ಳಲಾಗದು 44


## ಅಧ್ಯಾಯ - XIV

### ನಿರ್ದಿಷ್ಟ ಮರಣಶಾಸನ ಸ್ವತ್ತುಗಳ ಬಗ್ಗೆ


142. ನಿರ್ದಿಷ್ಟ ಮರಣಶಾಸನ ಸ್ವತ್ತಿನ ಪರಿಭಾಷೆ 44

143. ಉಯಿಲಿನಲ್ಲಿ ವಿವರಿಸಿದ ಸ್ಟಾಕು ಮುಂತಾದವುಗಳನ್ನು ಹೂಡಿದ ಅನಿಶ್ಚಿತ ಹಣದ ಮೊತ್ತದ ಮರಣಶಾಸನ ದಾನ 46

144. ಮರಣಶಾಸನ ಕರ್ತನು ಉಯಿಲಿನ ದಿನಾಂಕದಂದು ಒಂದೇ ಬಗೆಯ ಸ್ಟಾಕಿನ ಸಮನಾದ ಅಥವಾ ಅದಕ್ಕೂ ಹೆಚ್ಚಿನ ಮೊತ್ತವನ್ನು ಹೊಂದಿದಲ್ಲಿ ಸ್ಟಾಕಿನ ಮರಣಶಾಸನ ದಾನ 46

145. ಮರಣಶಾಸನ ಕರ್ತನ ಸ್ವತ್ತಿನ ಒಂದು ಭಾಗವನ್ನು ನಿಶ್ಚಿತ ರೀತಿಯಲ್ಲಿ ವಿಲೆ ಮಾಡುವವರೆಗೆ ಸಂದಾಯ ಮಾಡಬೇಕಾಗಿಲ್ಲದ ಹಣದ ಮರಣಶಾಸನ ದಾನ 46

146. ನಮೂದು ಮಾಡಿದ ವಸ್ತುಗಳನ್ನು ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟಿಲ್ಲವೆಂದು ಯಾವಾಗ ಭಾವಿಸುವುದು 47

147. ಹಲವಾರು ವ್ಯಕ್ತಿಗಳಿಗೆ ಒಬ್ಬರಾದ ಮೇಲೆ ಒಬ್ಬರಿಗೆ ಕೊಟ್ಟಿರುವ ನಿರ್ದಿಷ್ಟ ಮರಣ ಶಾಸನದಾನವನ್ನು ಹೇಳಿರುವ ನಮೂನೆಯಲ್ಲಿ ಉಳಿಸಿಕೊಳ್ಳುವುದು 47

148. ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳಿಗೆ ಒಬ್ಬರಾದ ಮೇಲೆ ಒಬ್ಬರಂತೆ ಮರಣಶಾಸನದ ಮೂಲಕ ಕೊಟ್ಟ ಸ್ವತ್ತಿನ ಮಾರಾಟ ಮತ್ತು ಅದರ ಉತ್ಪತ್ತಿಗಳ ಹೂಡಿಕೆ 47

149. ಮರಣಶಾಸನ ಸ್ವತ್ತುಗಳನ್ನು ಸಂದಾಯ ಮಾಡಲು ಆಸ್ತಿಗಳು ಸಾಲದೇ ಹೋದಲ್ಲಿ ನಿರ್ದಿಷ್ಟ ಮರಣಶಾಸನ ಸ್ವತ್ತು ಸಾಮಾನ್ಯ ಮರಣಶಾಸನ ಸ್ವತ್ತುಗಳೊಂದಿಗೆ ಕೊನೆಗೊಳ್ಳತಕ್ಕುದಲ್ಲ. 47

## ಅಧ್ಯಾಯ - **XV**

### ನಿರ್ದೇಶನಾತ್ಮಕ ಮರಣಶಾಸನ ಸ್ವತ್ತುಗಳ ಬಗ್ಗೆ

150. ನಿರ್ದೇಶನಾತ್ಮಕ ಮರಣಶಾಸನ ಸ್ವತ್ತಿನ ಪರಿಭಾಷೆ 48

151. ಮರಣಶಾಸನ ಸ್ವತ್ತನ್ನು ನಿರ್ದಿಷ್ಟ ಮರಣಶಾಸನ ಸ್ವತ್ತಿನ ವಸ್ತು ವಿಷಯವಾದ ನಿಧಿಯಿಂದ ಸಂದಾಯ ಮಾಡಬೇಕೆಂದು ನಿರ್ದೇಶಿಸಿರುವಾಗ ಸಂದಾಯದ ಕ್ರಮ 48

## ಅಧ್ಯಾಯ - **XVI**

### ಮರಣಶಾಸನ ಸ್ವತ್ತುಗಳನ್ನು ಹಿಂತೆಗೆದುಕೊಳ್ಳುವುದರ ಬಗ್ಗೆ

152. ಹಿಂತೆಗೆದುಕೊಳ್ಳುವಿಕೆಯ ವಿವರಣೆ 49

153. ನಿರ್ದೇಶನಾತ್ಮಕ ಮರಣಶಾಸನ ಸ್ವತ್ತನ್ನು ಹಿಂತೆಗೆದುಕೊಳ್ಳದೆ ಇರುವುದು 49

154. ಮೂರನೆಯವನಿಂದ ಏನನ್ನಾದರೂ ಸ್ವೀಕರಿಸುವ ಹಕ್ಕಿನ ನಿರ್ದಿಷ್ಟ ಮರಣಶಾಸನ ದಾನವನ್ನು ಹಿಂತೆಗೆದುಕೊಳ್ಳುವುದು 49

155. ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟಿರುವ ಒಟ್ಟು ವಸ್ತುವಿನ ಒಂದು ಭಾಗವನ್ನು ಮರಣಶಾಸನ ಕರ್ತನು ಸ್ವೀಕರಿಸುವಷ್ಟರ ಮಟ್ಟಿಗೆ ಹಿಂತೆಗೆದುಕೊಳ್ಳುವುದು 50

156. ಯಾವ ಒಟ್ಟು ನಿಧಿಯ ಭಾಗವನ್ನು ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಡಲಾಗಿದೆಯೋ ಆ ಯಾವುದೇ ಒಟ್ಟು ನಿಧಿಯ ಭಾಗವನ್ನು ಮರಣಶಾಸನ ಕರ್ತನು ಸ್ವೀಕರಿಸುವುದರ ಮೂಲಕ ಅಷ್ಟರಮಟ್ಟಿಗೆ ಹಿಂತೆಗೆದುಕೊಳ್ಳುವುದು 50

157. ಒಬ್ಬ ಲೆಗಟಿಗೆ ಮರಣಶಾಸನದ ಮೂಲಕ ನಿಧಿಯ ಒಂದು ಭಾಗವನ್ನು ನಿರ್ದಿಷ್ಟವಾಗಿ ಕೊಡಲಾಗಿರುವಲ್ಲಿ ಮತ್ತು ಮರಣಶಾಸನ ಸ್ವತ್ತನ್ನು ಇನ್ನೊಬ್ಬನಿಗೆ ಅದೇ ನಿಧಿಯ ಮೇಲೆ ಋಣಭಾರವನ್ನಾಗಿ ಹೊರಿಸಿರುವಲ್ಲಿ ಮತ್ತು ಮರಣಶಾಸನ ಕರ್ತನು ಆ ನಿಧಿಯ ಭಾಗವನ್ನು ಸ್ವೀಕರಿಸಿದ್ದು ಶೇಷವು ಎರಡು ಮರಣಶಾಸನ ಸ್ವತ್ತುಗಳ ಸಂದಾಯ ಮಾಡಲು ಸಾಕಷ್ಟಾಗದಿರುವಲ್ಲಿ ಸಂದಾಯದ ಕ್ರಮ 50

158. ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟ ಸ್ಟಾಕು, ಮರಣಶಾಸನಕರ್ತನ ಮರಣದ ಕಾಲದಲ್ಲಿ ಅಸ್ತಿತ್ವದಲ್ಲಿ ಇಲ್ಲದಿರುವಲ್ಲಿ ಅದನ್ನು ಹಿಂತೆಗೆದುಕೊಳ್ಳುವುದು 51

159. ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟ ಸ್ಟಾಕು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಭಾಗಶಃ ಮಾತ್ರ ಅಸ್ತಿತ್ವದಲ್ಲಿರುವಷ್ಟರ ಮಟ್ಟಿಗೆ ಅದನ್ನು ಹಿಂತೆಗೆದುಕೊಳ್ಳುವುದು 51

160. ನಿಶ್ಚಿತ ಸ್ಥಳಕ್ಕೆ ಸಂಬಂಧಿಸಿದಂತೆ ವಿವರಿಸಲಾದ ಸರಕುಗಳ ನಿರ್ದಿಷ್ಟ ಮರಣಶಾಸನ ದಾನವನ್ನು ಅವುಗಳನ್ನು ಸ್ಥಳಾಂತರಿಸುವ ಕಾರಣದಿಂದಾಗಿ ಹಿಂತೆಗೆದುಕೊಳ್ಳದೇ ಇರುವುದು 51

161. ಮರಣಶಾಸನದ ಮೂಲಕ ಕೊಟ್ಟ ವಸ್ತುವನ್ನು ಸ್ಥಳಾಂತರಿಸುವುದು ಯಾವಾಗ ಹಿಂತೆಗೆದುಕೊಂಡಂತಾಗದು 51

162. ಮರಣಶಾಸನದ ಮೂಲಕ ಕೊಟ್ಟ ವಸ್ತುವು, ಮರಣಶಾಸನ ಕರ್ತನು ಮೂರನೇ ವ್ಯಕ್ತಿಯಿಂದ ಸ್ವೀಕರಿಸಬೇಕಾದ ಬೆಲೆಯುಳ್ಳ ವಸ್ತುವಾಗಿದ್ದು ಅದನ್ನು ಮರಣಶಾಸನ ಕರ್ತನು ತಾನೇ ಸ್ವತಃ ಅಥವಾ ತನ್ನ ಪ್ರತಿನಿಧಿಯ ಮೂಲಕ ಸ್ವೀಕರಿಸಿದಾಗ 52

163. ಉಯಿಲಿನ ದಿನಾಂಕ ಮತ್ತು ಮರಣಶಾಸನ ಕರ್ತನ ಮರಣದ ದಿನಾಂಕ ಇವುಗಳ ನಡುವೆ ನಿರ್ದಿಷ್ಟ ಮರಣಶಾಸನದ ವಸ್ತು ವಿಷಯವು ಕಾನೂನಿನ ಪ್ರವರ್ತನೆಯ ಮೂಲಕ ಬದಲಾಗುವುದು 52

164. ಮರಣ ಶಾಸನ ಕರ್ತನಿಗೆ ತಿಳಿಯದೆ ವಸ್ತುವಿನ ಬದಲಾವಣೆ 53

165. ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟ ಸ್ಟಾಕನ್ನು, ಬದಲಿ ಸ್ಟಾಕನ್ನು ಕೊಡಬೇಕೆಂಬ ಷರತ್ತಿನ ಮೇಲೆ ಮೂರನೇ ವ್ಯಕ್ತಿಗೆ ಎರವಲು ನೀಡುವುದು 53

166. ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟ ಸ್ಟಾಕನ್ನು ಮಾರಾಟ ಮಾಡಿದ ತರುವಾಯ ಅದಕ್ಕೆ ಬದಲಿಯಾಗಿ ಒದಗಿಸಿದ ಮತ್ತು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಅವನಿಗೆ ಸೇರಿದ್ದ ಸ್ಟಾಕು 53

ಅಧ್ಯಾಯ - **XVII**

ಮರಣಶಾಸನ ದಾನದ ವಸ್ತುವಿನ ಸಂಬಂಧದಲ್ಲಿನ ಹೊಣೆಗಾರಿಕೆಗಳ ಸಂದಾಯದ ಬಗ್ಗೆ

167. ನಿರ್ದಿಷ್ಟ ಲೆಗಟಿಗಳನ್ನು ವಿಮೋಚನೆ ಮಾಡಲು ನಿರ್ವಾಹಕನಿಗೆ ಹೊಣೆಗಾರಿಕೆ ಇಲ್ಲದಿರುವುದು 53

168. ಮರಣಶಾಸನದ ಮೂಲಕ ಕೊಟ್ಟ ವಸ್ತುಗಳಿಗೆ ಮರಣಶಾಸನ ಕರ್ತನ ಸ್ವಾಮ್ಯವನ್ನು, ಅವನ ಎಸ್ಟೇಟಿನ ಖರ್ಚಿನಲ್ಲಿ ಪೂರ್ಣಗೊಳಿಸುವುದು 53

169. ಭೂ ಕಂದಾಯ ಅಥವಾ ಬಾಡಿಗೆಯನ್ನು ನಿಯತಕಾಲಿಕವಾಗಿ ಸಂದಾಯ ಮಾಡಬೇಕಾದ ಲೆಗಟಿಯ ಸ್ಥಿರ ಸ್ವತ್ತಿನ ವಿಮೋಚನೆ 54

170. ನಿರ್ದಿಷ್ಟ ಲೆಗಟಿಯ ಜಾಯಿಂಟ್ ಸ್ಟಾಕ್ ಕಂಪನಿಯಲ್ಲಿನ ಸ್ಟಾಕಿನ ವಿಮೋಚನೆ 54

ಅಧ್ಯಾಯ - **XVIII**

ಸಾಮಾನ್ಯ ಪದಗಳಲ್ಲಿ ವಿವರಿಸಿದ ವಸ್ತುಗಳ ಮರಣಶಾಸನ ದಾನಗಳ ಬಗ್ಗೆ

171. ಸಾಮಾನ್ಯ ಪದಗಳಲ್ಲಿ ವಿವರಿಸಿದ ವಸ್ತುಗಳ ಮರಣಶಾಸನ ದಾನ 55

ಅಧ್ಯಾಯ - **XIX**

ನಿಧಿಯ ಬಡ್ಡಿ ಅಥವಾ ಉತ್ಪನ್ನದ ಮರಣಶಾಸನ ದಾನದ ಬಗ್ಗೆ

172. ನಿಧಿಯ ಬಡ್ಡಿ ಅಥವಾ ಉತ್ಪನ್ನದ ಮರಣಶಾಸನ ದಾನ 55

ಅಧ್ಯಾಯ - **XX**

ವರ್ಷಾಶನಗಳ ಮರಣ ಶಾಸನ ದಾನಗಳ ಬಗ್ಗೆ

173. ಉಯಿಲಿನಲ್ಲಿ ತದ್ವಿರುದ್ಧ ಉದ್ದೇಶವು ಕಂಡುಬಂದ ಹೊರತು ಆ ಉಯಿಲಿನಲ್ಲಿ ಸೂಚಿಸಲಾದ ವರ್ಷಾಶನವನ್ನು ಜೀವಿತ ಕಾಲದವರೆಗೆ ಮಾತ್ರ ಸಂದಾಯ ಮಾಡುವುದು 55

174. ಸ್ವತ್ತಿನ ಉತ್ಪತ್ತಿಗಳಿಂದ ಅಥವಾ ಸಾಮಾನ್ಯವಾಗಿ ಸ್ವತ್ತಿನಿಂದ ವರ್ಷಾಶನವನ್ನು ಒದಗಿಸಬೇಕೆಂದು ಅಥವಾ ಮರಣಶಾಸನದ ಮೂಲಕ ಕೊಟ್ಟ ಹಣವನ್ನು ವರ್ಷಾಶನವನ್ನು ಖರೀದಿಸಲು ಹೂಡಬೇಕೆಂದು ಉಯಿಲು ನಿರ್ದೇಶಿಸಿರುವಲ್ಲಿ, ನಿಹಿತವಾಗುವ ಅವಧಿ 56

175. ವರ್ಷಾಶನವು ಕಡಿಮೆಯಾಗುವುದು 56

176. ವರ್ಷಾಶನದ ದಾನ ಮತ್ತು ಶೇಷ ದಾನದ ಸಂದರ್ಭದಲ್ಲಿ ಇಡೀ ವರ್ಷಾಶನವನ್ನು ಮೊದಲು ಪೂರೈಸತಕ್ಕುದು 56

ಅಧ್ಯಾಯ - **XXI**

ಸಾಲಿಗರಿಗೆ ಮತ್ತು ಹಿಸ್ಸೇದಾರರಿಗೆ ಮರಣ ಶಾಸನ ಸ್ವತ್ತುಗಳನ್ನು ಕೊಡುವುದರ ಬಗ್ಗೆ

177. ಮೊದಲ ನೋಟಕ್ಕೆ ಸಾಲಿಗನು ಮರಣಶಾಸನ ಸ್ವತ್ತು ಹಾಗೂ ಋಣಕ್ಕೆ ಹಕ್ಕುಳ್ಳವನಾಗುವುದು 56

178. ಮೊದಲ ನೋಟಕ್ಕೆ ಮಗುವು ಮರಣಶಾಸನ ಸ್ವತ್ತು ಹಾಗೂ ಭಾಗಕ್ಕೆ ಹಕ್ಕುಳ್ಳದ್ದಾಗಿರುವುದು 57

179. ಲೆಗಟಿಗಾಗಿ ಮಾಡಿದ ತರುವಾಯದ ಏರ್ಪಾಟಿನ ಮೂಲಕ ಯಾವುದೇ ಮರಣಶಾಸನ ದಾನವನ್ನು ಹಿಂತೆಗೆದುಕೊಂಡಂತಾಗದಿರುವುದು 57

ಅಧ್ಯಾಯ - **XXII**

ಆಯ್ಕೆಯ ಬಗ್ಗೆ

180. ಆಯ್ಕೆಯು ನಡೆಯುವಂಥ ಸಂದರ್ಭಗಳು 57

181. ಒಡೆಯನು ಬಿಟ್ಟುಕೊಟ್ಟ ಹಿತಾಸಕ್ತಿಯ ಪ್ರಾಪ್ತಿ 57

182. ಒಡೆತನದ ಬಗ್ಗೆ ಮರಣ ಶಾಸನ ಕರ್ತನ ನಂಬುಗೆಯು ಗೌಣವಾಗಿರುವುದು 57

183. ಆಯ್ಕೆಯ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯ ಪ್ರಯೋಜನಕ್ಕಾಗಿ ಕೊಟ್ಟ ಮರಣ ಶಾಸನ ದಾನವನ್ನು ಹೇಗೆ ಪರಿಗಣಿಸುವುದು 58

184. ಪರೋಕ್ಷವಾಗಿ ಪ್ರಯೋಜನ ಪಡೆಯುವ ವ್ಯಕ್ತಿಗೆ ಆಯ್ಕೆಯ ಅವಕಾಶವಿಲ್ಲದಿರುವುದು 58

185. ಉಯಿಲಿನ ಮೇರೆಗೆ ವೈಯಕ್ತಿಕ ಸಾಮರ್ಥ್ಯದಲ್ಲಿ ತೆಗೆದುಕೊಳ್ಳುವ ವ್ಯಕ್ತಿಯು ಇತರ ಸಾಮರ್ಥ್ಯದಲ್ಲಿ ಉಯಿಲಿಗೆ ವ್ಯತಿರಿಕ್ತವಾಗಿ ತೆಗೆದುಕೊಳ್ಳಲು ಆಯ್ಕೆ ಮಾಡಬಹುದು 58

186. ಈ ಹಿಂದಿನ ಆರು ಪ್ರಕರಣಗಳ ಉಪಬಂಧಗಳಿಗೆ ಅಪವಾದ 59

187. ಉಯಿಲು ಮೂಲಕ ಕೊಟ್ಟ ಪ್ರಯೋಜನದ ಅಂಗೀಕಾರವು ಯಾವಾಗ ಉಯಿಲಿನ ಮೇರೆಗೆ ಅದನ್ನು ತೆಗೆದುಕೊಳ್ಳಲು ಆಯ್ಕೆ ಮಾಡಿದಂತಾಗುವುದು 59

188. ತಿಳಿವಳಿಕೆಯನ್ನು ಅಥವಾ ವಿಚಾರಣೆಯನ್ನು ಬಿಟ್ಟುಕೊಡುವುದನ್ನು ಪೂರ್ವಭಾವನೆ ಮಾಡಬಹುದಾದ ಅಥವಾ ಊಹಿಸಬಹುದಾದ ಸಂದರ್ಭಗಳು 60

189. ಮರಣಶಾಸನ ಕರ್ತನ ಪ್ರತಿನಿಧಿಗಳು ಯಾವಾಗ ಲೆಗಟಿಯನ್ನು ಆಯ್ಕೆ ಮಾಡಲು ಕೋರಬಹುದು 60

190. ಅಸಮರ್ಥತೆಯ ಸಂದರ್ಭದಲ್ಲಿ ಆಯ್ಕೆಯ ಮುಂದೂಡಿಕೆ 60

ಅಧ್ಯಾಯ - **XXIII**

ಮರಣದ ನಿರೀಕ್ಷೆಯಲ್ಲಿ ಮಾಡಿದ ದಾನಗಳ ಬಗ್ಗೆ

191. ಮರಣದ ನಿರೀಕ್ಷೆಯಲ್ಲಿ ಮಾಡಿದ ದಾನದ ಮೂಲಕ ವರ್ಗಾಯಿಸಬಹುದಾದ ಸ್ವತ್ತು 60

ಭಾಗ - **VII**

ಮೃತನ ಸ್ವತ್ತಿನ ಸಂರಕ್ಷಣೆ

192. ಮೃತನ ಸ್ವತ್ತಿಗೆ ಉತ್ತರಾಧಿಕಾರದ ಮೂಲಕ ಹಕ್ಕನ್ನು ಕ್ಲೇಮು ಮಾಡುವ ವ್ಯಕ್ತಿಯು, ಅಕ್ರಮ ಸ್ವಾಧೀನದ ವಿರುದ್ಧ ಪರಿಹಾರಕ್ಕಾಗಿ ಅರ್ಜಿ ಹಾಕಿಕೊಳ್ಳಬಹುದು 61

193. ನ್ಯಾಯಾಧೀಶನು ಮಾಡಬೇಕಾದ ವಿಚಾರಣೆ 61

194. ಪ್ರಕ್ರಿಯೆ 61

195. ವ್ಯವಹರಣೆಯು ಇತ್ಯರ್ಥದಲ್ಲಿರುವಾಗ ಕ್ಯುರೇಟರನ ನೇಮಕ 62

196. ಕ್ಯುರೇಟರನಿಗೆ ಪ್ರದಾನ ಮಾಡಬಹುದಾದ ಅಧಿಕಾರಗಳು 62

197. ಕ್ಯುರೇಟರುಗಳು ಕೆಲವು ಅಧಿಕಾರಗಳನ್ನು ಚಲಾಯಿಸುವುದಕ್ಕೆ ನಿಷೇಧ 62

198. ಕ್ಯುರೇಟರನು ಭದ್ರತೆಯನ್ನು ಕೊಡುವುದು ಮತ್ತು ಪರಿಶ್ರಮ ಧನವನ್ನು ಸ್ವೀಕರಿಸುವುದು 62

199. ಕಂದಾಯವು ಸಂದಾಯವಾಗತಕ್ಕ ಭೂಮಿಯನ್ನು ಎಸ್ಟೇಟು ಒಳಗೊಂಡಿರುವಲ್ಲಿ ಕಲೆಕ್ಟರನಿಂದ ವರದಿ 62

200. ದಾವೆಗಳನ್ನು ಹೂಡುವುದು ಮತ್ತು ಅವುಗಳ ಪ್ರತಿರಕ್ಷೆ 63

201. ಕ್ಯುರೇಟರನ ಅಭಿರಕ್ಷೆಯಲ್ಲಿರುವವರೆಗೆ ಒಡೆಯರೆಂದು ಕಂಡುಬರುವವರಿಗೆ ಭತ್ಯೆಗಳು 63

202. ಕ್ಯುರೇಟರನು ಲೆಕ್ಕಪತ್ರಗಳನ್ನು ದಾಖಲು ಮಾಡುವುದು 63

203. ಲೆಕ್ಕಪತ್ರಗಳ ಪರಿಶೀಲನೆ ಮತ್ತು ಹಿತಾಸಕ್ತಿಯನ್ನು ಹೊಂದಿದ ಪಕ್ಷಕಾರನು ದ್ವಿಪ್ರತಿಯನ್ನು ಇಟ್ಟುಕೊಳ್ಳುವ ಹಕ್ಕು 63

204. ಒಂದೇ ಸ್ವತ್ತಿಗೆ ಎರಡನೇ ಕ್ಯುರೇಟರನ ನೇಮಕಾತಿಗೆ ಪ್ರತಿಷೇಧ 63

205. ಕ್ಯುರೇಟರನ ನೇಮಕಾತಿ ಕೋರಿ ಅರ್ಜಿ ಹಾಕಿಕೊಳ್ಳಲು ಕಾಲದ ಪರಿಮಿತಿ 63

206. ಮೃತನು ಮಾಡಿದ ಸಾರ್ವಜನಿಕ ವ್ಯವಸ್ಥೆ ಅಥವಾ ಕಾನೂನು ಸಮ್ಮತ್ರ ನಿರ್ದೇಶನಗಳಿಗೆ ವಿರುದ್ಧವಾಗಿ ಈ ಭಾಗವನ್ನು ಜಾರಿಗೊಳಿಸುವುದಕ್ಕೆ ಪ್ರತಿಷೇಧ 64

207. ಅಪ್ರಾಪ್ತ ವಯಸ್ಕರು, ಪ್ರತಿಪಾಲಿತರ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಒಳಪಟ್ಟು ಸ್ವತ್ತನ್ನು ಹೊಂದಿರುವ ಸಂದರ್ಭದಲ್ಲಿ ಆ ನ್ಯಾಯಾಲಯವನ್ನೇ ಕ್ಯುರೇಟರನನ್ನಾಗಿ ಮಾಡತಕ್ಕುದು 64

208. ದಾವೆಯನ್ನು ಹೂಡುವ ಹಕ್ಕನ್ನು ಉಳಿಸುವುದು 64

209. ಕ್ಷಿಪ್ರ ವ್ಯವಹರಣೆಯ ತೀರ್ಮಾನದ ಪರಿಣಾಮ 64

210. ಸರ್ಕಾರೀ ಕ್ಯುರೇಟರ್‌ಗಳ ನೇಮಕಾತಿ 64

## ಭಾಗ - VIII

### ಉತ್ತರಾಧಿಕಾರದ ತರುವಾಯ ಮೃತನ ಸ್ವತ್ತಿಗೆ ಪ್ರಾತಿನಿಧಿಕ ಸ್ವಾಮ್ಯ

211. ನಿರ್ವಾಹಕ ಅಥವಾ ಆಡಳಿತಗಾರನಾಗಿರತಕ್ಕವನ ಸ್ಥಾನ ಮತ್ತು ಸ್ವತ್ತು 64

212. ಮರಣ ಶಾಸನ ರಹಿತನ ಸ್ವತ್ತಿಗೆ ಹಕ್ಕು 64

213. ನಿರ್ವಾಹಕ ಅಥವಾ ಲೆಗಟಿಯಾಗಿ ಯಾವಾಗ ಹಕ್ಕು ಸ್ಥಾಪಿತವಾಗುತ್ತದೆ 64

214. ಮೃತರ ಋಣಿಗಳಿಂದ ಋಣಗಳನ್ನು ನ್ಯಾಯಾಲಯಗಳ ಮೂಲಕ ವಸೂಲಿ ಮಾಡಲು ಪ್ರಾತಿನಿಧಿಕ ಸ್ವಾಮ್ಯದ ರುಜುವಾತು ಪೂರ್ವ ಷರತ್ತಾಗಿರುವುದು 65

215. ಪ್ರಮಾಣ ಪತ್ರದ ಮೇಲೆ, ತರುವಾಯದ ಪ್ರೊಬೇಟು ಅಥವಾ ಆಡಳಿತ ಪತ್ರದ ಪರಿಣಾಮ 65

216. ಪ್ರೊಬೇಟು ಅಥವಾ ಆಡಳಿತ ಪತ್ರವು ರದ್ದಾಗುವವರೆಗೆ ಅದನ್ನು ಪಡೆದವನು ಮಾತ್ರ ದಾವೆ, ಇತ್ಯಾದಿಗಳನ್ನು ಹೂಡುವುದು 65

## ಭಾಗ - IX

### ಪ್ರೊಬೇಟು, ಆಡಳಿತ ಪತ್ರ ಮತ್ತು ಮೃತನ ಆಸ್ತಿಗಳ ಬಗ್ಗೆ ಆಡಳಿತ

217. ಈ ಭಾಗದ ಅನ್ವಯ 66

## ಅಧ್ಯಾಯ - I

### ಪ್ರೊಬೇಟು ಮತ್ತು ಆಡಳಿತ ಪತ್ರದ ನೀಡಿಕೆ ಬಗ್ಗೆ

218. ಮೃತನು ಒಬ್ಬ ಹಿಂದು, ಮಹಮದೀಯ, ಬೌದ್ಧ, ಸಿಖ್, ಜೈನ್ ಅಥವಾ ವಿನಾಯಿತಿ ಪಡೆದ ವ್ಯಕ್ತಿಯಾಗಿರುವಲ್ಲಿ ಆಡಳಿತ ಪತ್ರವನ್ನು ಯಾರಿಗೆ ಕೊಡಬಹುದು 66

219. ಮೃತನು ಹಿಂದು, ಮಹಮದೀಯ, ಬೌದ್ಧ, ಸಿಖ್, ಜೈನ ಅಥವಾ ವಿನಾಯಿತಿ ಪಡೆದ ವ್ಯಕ್ತಿಯಾಗಿಲ್ಲದಿರುವಲ್ಲಿ 66

220. ಆಡಳಿತ ಪತ್ರದ ಪರಿಣಾಮ 67

221. ಆಡಳಿತದಿಂದಾಗಿ ಕಾರ್ಯಗಳು ಸಿಂಧುವಾಗದಿರುವುದು 67

222. ನೇಮಕಗೊಂಡ ನಿರ್ವಾಹಕನಿಗೆ ಮಾತ್ರ ಪ್ರೊಬೇಟು 67

223. ಯಾವ ವ್ಯಕ್ತಿಗಳಿಗೆ ಪ್ರೊಬೇಟನ್ನು ನೀಡಲಾಗದು 67

224. ಒಂದೇ ಕಾಲದಲ್ಲಿ ಅಥವಾ ಬೇರೆ ಬೇರೆ ಕಾಲಗಳಲ್ಲಿ ಹಲವಾರು ನಿರ್ವಾಹಕರಿಗೆ ಪ್ರೊಬೇಟಿನ ನೀಡಿಕೆ 67

225. ಪ್ರೊಬೇಟನ್ನು ನೀಡಿದ ತರುವಾಯ ಕಂಡುಬಂದ ಮರಣ ಶಾಸನ ಅನುಬಂಧದ ಬಗ್ಗೆ ಪ್ರತ್ಯೇಕ ಪ್ರೊಬೇಟು 67

226. ಉತ್ತರ ಜೀವಿಯಾದ ನಿರ್ವಾಹಕನಿಗೆ ಪ್ರಾತಿನಿಧ್ಯದ ಪ್ರಾಪ್ತಿ 68

227. ಪ್ರೊಬೇಟಿನ ಪರಿಣಾಮ 68

228. ವಿದೇಶದಲ್ಲಿ ರುಜುವಾತಾದ ಉಯಿಲಿನ ಅಧಿಪ್ರಮಾಣಿತ ಪ್ರತಿಯ ಪ್ರತಿಯನ್ನು ಲಗತ್ತಿಸಿ ಆಡಳಿತ ಪತ್ರ ನೀಡುವುದು 68

229. ನಿರ್ವಾಹಕನು ಪರಿತ್ಯಜಿಸದಿರುವಲ್ಲಿ ಆಡಳಿತ ಮಂಜೂರಾತಿ 68

230. ನಿರ್ವಾಹಕತ್ವದ ಪರಿತ್ಯಜನದ ನಮೂನೆ ಮತ್ತು ಪರಿಣಾಮ 68

231. ನಿರ್ವಾಹಕನು ಪರಿತ್ಯಜಿಸುವಲ್ಲಿ ಅಥವಾ ಪರಿಮಿತ ಕಾಲದೊಳಗೆ ಅಂಗೀಕರಿಸಲು ತಪ್ಪಿದಲ್ಲಿ ಪ್ರಕ್ರಿಯೆ 68

232. ಸರ್ವಸ್ವ ಅಥವಾ ಶೇಷ ಲೆಗಟಿಗಳಿಗೆ ಆಡಳಿತ ಪತ್ರದ ನೀಡಿಕೆ 68

233. ಮೃತ ಶೇಷ ಲೆಗಟಿಯ ಪ್ರತಿನಿಧಿಗಿರುವ ಆಡಳಿತದ ಹಕ್ಕು 68

234. ಯಾವನೇ ನಿರ್ವಾಹಕ, ಶೇಷ ಲೆಗಟಿ ಅಥವಾ ಅಂಥ ಲೆಗಟಿಯ ಪ್ರತಿನಿಧಿಯು ಇಲ್ಲದಿರುವಲ್ಲಿ ಆಡಳಿತ ಪತ್ರದ ನೀಡಿಕೆ 68

235. ಸರ್ವಸ್ವ ಅಥವಾ ಶೇಷ ಲೆಗಟಿಯನ್ನು ಹೊರತುಪಡಿಸಿ, ಲೆಗಟಿಗೆ ಆಡಳಿತ ಪತ್ರವನ್ನು ನೀಡುವ ಮುಂಚೆ ಕರೆಯಾಜ್ಞೆ 68

236. ಆಡಳಿತಪತ್ರವನ್ನು ಯಾರಿಗೆ ನೀಡಬಾರದು 69

236ಎ. ನಿಯಮಗಳನ್ನು ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸುವುದು 69

## ಅಧ್ಯಾಯ - II

### ಪರಿಮಿತ ನೀಡಿಕೆಗಳ ಬಗ್ಗೆ

### ಕಾಲಪರಿಮಿತ ನೀಡಿಕೆಗಳು

237. ಕಳೆದುಹೋದ ಉಯಿಲಿನ ಪ್ರತಿಯ ಅಥವಾ ಕರಡಿನ ಪ್ರೊಬೇಟು 69

238. ಕಳೆದುಹೋದ ಅಥವಾ ನಾಶವಾದ ಉಯಿಲಿನ ಒಳಾಂಶಗಳ ಪ್ರೊಬೇಟು 69

239. ಮೂಲ ಪ್ರತಿಯು ಇರುವಲ್ಲಿ ಪ್ರತಿಯ ಪ್ರೊಬೇಟು 69

240. ಉಯಿಲನ್ನು ಹಾಜರುಪಡಿಸುವವರೆಗೆ ಆಡಳಿತ 69

241. ಗೈರು ಹಾಜರಿರುವ ನಿರ್ವಾಹಕನ ಅಟಾರ್ನಿಗೆ ಉಯಿಲು ಲಗತ್ತಿಸಿದ ಆಡಳಿತ ಪತ್ರ 69

242. ಗೈರುಹಾಜರಿರುವ ಯಾವ ವ್ಯಕ್ತಿಯು ಹಾಜರಿದ್ದರೆ ಆಡಳಿತ ನಡೆಸಲು ಹಕ್ಕುಳ್ಳವನಾಗುತ್ತಿದ್ದನೋ ಅವನ ಅಟಾರ್ನಿಗೆ ಉಯಿಲು ಲಗತ್ತಿಸಿದ ಆಡಳಿತ ಪತ್ರ 69

243. ಮರಣಶಾಸನವಿಲ್ಲದಿರುವ ಸಂದರ್ಭದಲ್ಲಿ ಆಡಳಿತ ನಿರ್ವಹಿಸಲು ಹಕ್ಕುಳ್ಳವನಾದ ಗೈರುಹಾಜರಾದ ವ್ಯಕ್ತಿಯ ಅಟಾರ್ನಿಗೆ ಆಡಳಿತ ಪತ್ರ 69

244. ಏಕೈಕ ನಿರ್ವಾಹಕನ ಅಥವಾ ಶೇಷ ಲೆಗಟಿಯ ಅಪ್ರಾಪ್ತ ವಯಸ್ಕತೆಯ ಕಾಲದಲ್ಲಿ ಆಡಳಿತ 69

245. ಹಲವಾರು ನಿರ್ವಾಹಕರು ಅಥವಾ ಶೇಷ ಲೆಗಟಿಗಳ ಅಪ್ರಾಪ್ತ ವಯಸ್ಕತೆಯ ಕಾಲದಲ್ಲಿ ಆಡಳಿತ 70

246. ಮನೋವಿಕಲ ಅಥವಾ ಅಪ್ರಾಪ್ತ ವಯಸ್ಕನ ಉಪಯೋಗ ಅಥವಾ ಪ್ರಯೋಜನಕ್ಕಾಗಿ ಆಡಳಿತ 70

247. ದಾವೆಯು ನಡೆಯುತ್ತಿರುವಾಗ ಆಡಳಿತ 70

248. ಉಯಿಲಿನಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಕ್ಕೆ ಪರಿಮಿತವಾದ ಪ್ರೊಬೇಟು 70

249. ನಿರ್ದಿಷ್ಟ ಉದ್ದೇಶಕ್ಕೆ ಪರಿಮಿತಗೊಳಿಸಿ ಉಯಿಲು ಲಗತ್ತಿಸಿದ ಆಡಳಿತ ಪತ್ರ 70

250. ವ್ಯಕ್ತಿಯು ಪ್ರಯೋಜನಕಾರಿ ಹಿತಾಸಕ್ತಿಯನ್ನು ಹೊಂದಿರುವಂಥ ಸ್ವತ್ತಿಗೆ ಪರಿಮಿತಿಗೊಳಿಸಿದ ಆಡಳಿತ 70

251. ದಾವೆಗೆ ಪರಿಮಿತಿಗೊಳಿಸಿದ ಆಡಳಿತ 70

252. ಆಡಳಿತಗಾರನ ವಿರುದ್ಧ ಹೂಡಬೇಕಾದ ದಾವೆಗೆ ಪಕ್ಷಕಾರನಾಗುವ ಉದ್ದೇಶಕ್ಕೆ ಪರಿಮಿತಿಗೊಳಿಸಿದ ಆಡಳಿತ 70

253. ಮೃತನ ಸ್ವತ್ತಿನ ಸಂಗ್ರಹಣೆ ಹಾಗೂ ಪರಿರಕ್ಷಣೆಗೆ ಪರಿಮಿತಿಗೊಳಿಸಿದ ಆಡಳಿತ 71

254. ಸಾಮಾನ್ಯ ಸನ್ನಿವೇಶಗಳಲ್ಲಿ ಆಡಳಿತಕ್ಕೆ ಹಕ್ಕುಳ್ಳವನಾಗಬಹುದಾಗಿದ್ದ ವ್ಯಕ್ತಿಯನ್ನು ಹೊರತುಪಡಿಸಿ ಇತರ ವ್ಯಕ್ತಿಯನ್ನು ಆಡಳಿತಗಾರನನ್ನಾಗಿ ನೇಮಕ ಮಾಡುವುದು 71

255. ವಿನಾಯಿತಿಗೆ ಒಳಪಟ್ಟು ಉಯಿಲನ್ನು ಲಗತ್ತಿಸಿ ಪ್ರೊಬೇಟು ಅಥವಾ ಆಡಳಿತ ಪತ್ರ ನೀಡಿಕೆ 71

256. ವಿನಾಯಿತಿಯೊಂದಿಗೆ ಆಡಳಿತ ಪತ್ರ 71

257. ಉಳಿದ ಭಾಗಗಳ ಬಗ್ಗೆ ಪ್ರೊಬೇಟು ಅಥವಾ ಆಡಳಿತ ಪತ್ರ 71

258. ಆಡಳಿತ ನಿರ್ವಹಣೆಯಾಗದೆ ಇರುವ ಸ್ವತ್ತುಗಳ ಬಗ್ಗೆ ನೀಡಿಕೆ 71

259. ಆಡಳಿತ ನಿರ್ವಹಣೆಯಾಗದೆ ಇರುವ ಸ್ವತ್ತುಗಳ ನೀಡಿಕೆ ನಿಯಮಗಳು 71

260. ಪರಿಮಿತ ನೀಡಿಕೆಯು ಮುಕ್ತಾಯವಾಗಿದ್ದು ಎಸ್ಟೇಟಿನ ಕೆಲವು ಭಾಗದ ಆಡಳಿತವು ಇನ್ನೂ ನಿರ್ವಹಣೆಯಾಗದೆ ಇರುವಾಗ ಆಡಳಿತ ಪತ್ರದ ನೀಡಿಕೆ 72

ಅಧ್ಯಾಯ - **III**

ನೀಡಿಕೆಗಳ ಬದಲಾವಣೆ ಮತ್ತು ರದ್ದಿಯಾತಿ

261. ನ್ಯಾಯಾಲಯವು ಯಾವ ತಪ್ಪುಗಳನ್ನು ಸರಿಪಡಿಸಬಹುದು 72

262. ಉಯಿಲನ್ನು ಲಗತ್ತಿಸಿ ಆಡಳಿತ ಪತ್ರವನ್ನು ನೀಡಿದ ತರುವಾಯ ಮರಣ ಶಾಸನದ ಅನುಬಂಧವು ಕಂಡುಬಂದಲ್ಲಿ ಪ್ರಕ್ರಿಯೆ 72

263. ನ್ಯಾಯಸಮ್ಮತ ಕಾರಣಕ್ಕಾಗಿ ರದ್ದಿಯಾತಿ ಅಥವಾ ಶೂನ್ಯಗೊಳಿಸುವಿಕೆ 72

ಅಧ್ಯಾಯ - **IV**

ಪ್ರೊಬೇಟುಗಳು ಮತ್ತು ಆಡಳಿತ ಪತ್ರವನ್ನು ನೀಡುವ ಮತ್ತು ರದ್ದುಗೊಳಿಸುವ ಪದ್ಧತಿಯ ಬಗ್ಗೆ

264. ಪ್ರೊಬೇಟುಗಳು ಇತ್ಯಾದಿಗಳನ್ನು ನೀಡುವುದು ಮತ್ತು ರದ್ದುಪಡಿಸುವಲ್ಲಿ ಜಿಲ್ಲಾ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿ 72

265. ವಿವಾದವಿಲ್ಲದ ಪ್ರಕರಣಗಳಲ್ಲಿ ವ್ಯವಹರಿಸಲು ಜಿಲ್ಲಾ ನ್ಯಾಯಾಧೀಶನ ಪ್ರತಿನಿಧಿಯನ್ನು ನೇಮಕ ಮಾಡುವ ಅಧಿಕಾರ 73

266. ಪ್ರೊಬೇಟು ಮತ್ತು ಆಡಳಿತ ಪತ್ರವನ್ನು ನೀಡುವ ಬಗ್ಗೆ ಜಿಲ್ಲಾ ನ್ಯಾಯಾಧೀಶನ ಅಧಿಕಾರಗಳು 73

267. ಮರಣಶಾಸನಿಕ ಕಾಗದ ಪತ್ರಗಳನ್ನು ಹಾಜರುಪಡಿಸಲು ಜಿಲ್ಲಾ ನ್ಯಾಯಾಧೀಶನು ವ್ಯಕ್ತಿಗೆ ಆದೇಶಿಸಬಹುದು 73

268. ಪ್ರೊಬೇಟು ಮತ್ತು ಆಡಳಿತ ಪತ್ರಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ನ್ಯಾಯಾಧೀಶನ ನ್ಯಾಯಾಲಯದ ವ್ಯವಹರಣೆಗಳು 73

269. ಸ್ವತ್ತಿನ ಸಂರಕ್ಷಣೆಗಾಗಿ ಯಾವಾಗ ಮತ್ತು ಹೇಗೆ ಜಿಲ್ಲಾ ನ್ಯಾಯಾಧೀಶನು ಮಧ್ಯ ಪ್ರವೇಶಿಸಬಹುದು 73

270. ಜಿಲ್ಲಾ ನ್ಯಾಯಾಧೀಶನು ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ಯಾವಾಗ ನೀಡಬಹುದು 73

271. ಯಾವ ಜಿಲ್ಲೆಯೊಳಗೆ ಮೃತನಿಗೆ ನಿಗದಿತ ವಾಸಸ್ಥಳವಿದ್ದಿಲ್ಲವೋ ಆ ಜಿಲ್ಲೆಯ ನ್ಯಾಯಾಧೀಶನಿಗೆ ಹಾಕಿಕೊಂಡ ಅರ್ಜಿಯ ವಿಲೇವಾರಿ 74

272. ಪ್ರತಿನಿಧಿಯು ಪ್ರೊಬೇಟು ಮತ್ತು ಆಡಳಿತ ಪತ್ರವನ್ನು ನೀಡಬಹುದು 74

273. ಪ್ರೊಬೇಟು ಅಥವಾ ಆಡಳಿತ ಪತ್ರವು ನಿರ್ಣಾಯಕವಾಗಿರುವುದು 74

274. 273ನೇ ಪ್ರಕರಣದ ಪರಂತುಕದ ಮೇರೆಗೆ ನೀಡಿದ ಪ್ರಮಾಣಪತ್ರವನ್ನು ಉಚ್ಚ ನ್ಯಾಯಾಲಯಕ್ಕೆ ರವಾನಿಸುವುದು 74

275. ಪ್ರೊಬೇಟು ಅಥವಾ ಆಡಳಿತ ಪತ್ರದ ಬಗ್ಗೆ ಅರ್ಜಿಯನ್ನು ಸರಿಯಾಗಿ ಹಾಕಿಕೊಳ್ಳಲಾಗಿದ್ದರೆ ಮತ್ತು ಅದರ ಸತ್ಯಾಪನೆ ಮಾಡಲಾಗಿದ್ದರೆ ಅದು ನಿರ್ಣಾಯಕವಾಗಿರುವುದು 75

276. ಪ್ರೊಬೇಟಿಗಾಗಿ ಅರ್ಜಿ 75

277. ಯಾವ ಸಂದರ್ಭಗಳಲ್ಲಿ ಉಯಿಲಿನ ಭಾಷಾಂತರವನ್ನು ಅರ್ಜಿಗೆ ಲಗತ್ತಿಸುವುದು ಮತ್ತು ನ್ಯಾಯಾಲಯದ ಭಾಷಾಂತರಕಾರನನ್ನು ಹೊರತುಪಡಿಸಿ ಬೇರೊಬ್ಬ ವ್ಯಕ್ತಿಯು ಭಾಷಾಂತರವನ್ನು ಸತ್ಯಾಪಿಸುವುದು 75

278. ಆಡಳಿತ ಪತ್ರಕ್ಕಾಗಿ ಅರ್ಜಿ 75

279. ಕೆಲವು ಪ್ರಕರಣಗಳಲ್ಲಿ ಪ್ರೊಬೇಟು ಅಥವಾ ಆಡಳಿತ ಪತ್ರಕ್ಕಾಗಿ ಅರ್ಜಿ ಇತ್ಯಾದಿಯಲ್ಲಿ ಹೇಳಿಕೆಗೆ ಸೇರ್ಪಡೆ 76

280. ಪ್ರೊಬೇಟು ಇತ್ಯಾದಿಗಳಿಗೆ ಸಲ್ಲಿಸಿದ ಅರ್ಜಿಗೆ ರುಜು ಮಾಡುವುದು ಮತ್ತು ಅದನ್ನು ಸತ್ಯಾಪನೆ ಮಾಡುವುದು 76

281. ಪ್ರೊಬೇಟಿಗಾಗಿ ಸಲ್ಲಿಸಿದ ಅರ್ಜಿಯನ್ನು ಉಯಿಲಿನ ಒಬ್ಬ ಸಾಕ್ಷಿಯು ಸತ್ಯಾಪನೆ ಮಾಡುವುದು 76

282. ಅರ್ಜಿ ಅಥವಾ ಘೋಷಣೆಯಲ್ಲಿ ಮಾಡಿದ ಸುಳ್ಳು ದೃಢೋಕ್ತಿಗಾಗಿ ದಂಡನೆ 76

283. ಜಿಲ್ಲಾ ನ್ಯಾಯಾಧೀಶನ ಅಧಿಕಾರಗಳು 76

284. ಪ್ರೊಬೇಟು ಅಥವಾ ಆಡಳಿತ ಪತ್ರದ ನೀಡಿಕೆ ವಿರುದ್ಧ ಎಚ್ಚರಿಕೆ ಪತ್ರಗಳು 77

285. ಎಚ್ಚರಿಕೆ ಪತ್ರವನ್ನು ದಾಖಲು ಮಾಡಿದ ತರುವಾಯ, ಅದನ್ನು ಸಲ್ಲಿಸಿದವನಿಗೆ ನೋಟೀಸನ್ನು ಕೊಡುವವರೆಗೆ ಅರ್ಜಿಯ ಮೇಲೆ ಯಾವುದೇ ವ್ಯವಹರಣೆಯನ್ನು ಕೈಗೊಳ್ಳದಿರುವುದು 77

286. ಜಿಲ್ಲಾ ಪ್ರತಿನಿಧಿಯ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ಯಾವಾಗ ನೀಡದಿರುವುದು 77

287. ವಿವಾದವಿಲ್ಲದಿರುವ ಸಂದೇಹಾಸ್ಪದ ಪ್ರಕರಣಗಳಲ್ಲಿ ಜಿಲ್ಲಾ ನ್ಯಾಯಾಧೀಶನಿಗೆ ಹೇಳಿಕೆಯನ್ನು ರವಾನಿಸಲು ಅಧಿಕಾರ 77

288. ವಿವಾದವಿರುವಲ್ಲಿ ಅಥವಾ ಜಿಲ್ಲಾ ಪ್ರತಿನಿಧಿಯು ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ತನ್ನ ನ್ಯಾಯಾಲಯದಲ್ಲಿ ನಿರಾಕರಿಸಬೇಕೆಂದು ಯೋಚಿಸುವಲ್ಲಿ ಪ್ರಕ್ರಿಯೆ 78

289. ಪ್ರೊಬೇಟನ್ನು ನ್ಯಾಯಾಲಯದ ಮೊಹರು ಹಾಕಿ ನೀಡುವುದು 78

290. ಆಡಳಿತ ಪತ್ರವನ್ನು ನ್ಯಾಯಾಲಯದ ಮೊಹರು ಹಾಕಿ ನೀಡುವುದು 78

291. ಆಡಳಿತ ಬಂಧಪತ್ರ 78

292. ಆಡಳಿತ ಬಂಧಪತ್ರವನ್ನು ವಹಿಸಿಕೊಡುವುದು 78

293. ಪ್ರೊಬೇಟು ಮತ್ತು ಆಡಳಿತ ಪತ್ರವನ್ನು ನೀಡುವ ಕಾಲ 78

294. ಪ್ರೊಬೇಟು ಅಥವಾ ಉಯಿಲು ಲಗತ್ತಿಸಿದ ಆಡಳಿತ ಪತ್ರವನ್ನು ನೀಡಲಾಗಿರುವಂಥ ಮೂಲ ಉಯಿಲುಗಳನ್ನು ದಾಖಲು ಮಾಡುವುದು 78

295. ವಿವಾದಗ್ರಸ್ತ ಪ್ರಕರಣಗಳಲ್ಲಿ ಪ್ರಕ್ರಿಯೆ 78

296. ರದ್ದಾದ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ಬಿಟ್ಟುಕೊಡುವುದು 79

297. ಪ್ರೊಬೇಟು ಅಥವಾ ಆಡಳಿತ ಪತ್ರ ರದ್ದುಪಡಿಸುವುದಕ್ಕೆ ಮುಂಚೆ ನಿರ್ವಾಹಕನಿಗೆ ಅಥವಾ ಆಡಳಿತಗಾರನಿಗೆ ಸಂದಾಯ ಮಾಡುವುದು 79

298. ಆಡಳಿತ ಪತ್ರವನ್ನು ನಿರಾಕರಿಸಲು ಅಧಿಕಾರ 79

299. ಜಿಲ್ಲಾ ನ್ಯಾಯಾಧೀಶನ ಆದೇಶಗಳ ವಿರುದ್ಧ ಅಪೀಲುಗಳು 79

300. ಉಚ್ಚ ನ್ಯಾಯಾಲಯದ ಸಮವರ್ತಿ ಅಧಿಕಾರ ವ್ಯಾಪ್ತಿ 79

301. ನಿರ್ವಾಹಕ ಅಥವಾ ಆಡಳಿತಗಾರನನ್ನು ತೆಗೆದುಹಾಕುವುದು ಮತ್ತು ಉತ್ತರಾಧಿಕಾರಿಗಾಗಿ ವ್ಯವಸ್ಥೆ ಮಾಡುವುದು 79

302. ನಿರ್ವಾಹಕ ಅಥವಾ ಆಡಳಿತಗಾರನಿಗೆ ನಿರ್ದೇಶನಗಳು 79

## ಅಧ್ಯಾಯ - V

### ಅನಧಿಕೃತ ನಿರ್ವಾಹಕರ ಬಗ್ಗೆ

303. ಅನಧಿಕೃತ ನಿರ್ವಾಹಕ 79

304. ಅನಧಿಕೃತ ನಿರ್ವಾಹಕನ ಹೊಣೆಗಾರಿಕೆ 80

## ಅಧ್ಯಾಯ - VI

### ನಿರ್ವಾಹಕ ಅಥವಾ ಆಡಳಿತಗಾರನ ಅಧಿಕಾರಗಳ ಬಗ್ಗೆ

305. ಮೃತನ ನಂತರ ಉಳಿದಿರುವ ವ್ಯಾಜ್ಯ ಕಾರಣಗಳು ಮತ್ತು ಮರಣದ ಕಾಲದಲ್ಲಿ ಬಾಕಿ ಬರಬೇಕಾದ ಋಣಗಳು 80

306. ಮೃತನ ಅಥವಾ ಅವನ ವಿರುದ್ಧದ ತಗಾದೆಗಳು ಮತ್ತು ಕ್ರಮ ಕೈಗೊಳ್ಳುವ ಹಕ್ಕುಗಳು ನಿರ್ವಾಹಕ ಅಥವಾ ಆಡಳಿತಗಾರನಿಗೆ ಮತ್ತು ಅವನ ವಿರುದ್ಧ ಉಳಿಯುವುದು 80

307. ಸ್ವತ್ತನ್ನು ವಿಲೆ ಮಾಡಲು ನಿರ್ವಾಹಕನ ಅಥವಾ ಆಡಳಿತಗಾರನ ಅಧಿಕಾರ 80

308. ಆಡಳಿತದ ಸಾಮಾನ್ಯಾಧಿಕಾರಗಳು 81

309. ದಲ್ಲಾಳಿ ಅಥವಾ ಏಜೆನ್ಸಿ ವೆಚ್ಚಗಳು 81

310. ಮೃತನ ಸ್ವತ್ತನ್ನು ನಿರ್ವಾಹಕ ಅಥವಾ ಆಡಳಿತಗಾರನು ಖರೀದಿ ಮಾಡುವುದು 81

311. ಹಲವಾರು ನಿರ್ವಾಹಕರು ಅಥವಾ ಆಡಳಿತಗಾರರ ಅಧಿಕಾರಗಳನ್ನು ಒಬ್ಬನೇ ಚಲಾಯಿಸಬಹುದು 82

312. ಹಲವಾರು ನಿರ್ವಾಹಕರು ಅಥವಾ ಆಡಳಿತಗಾರರಲ್ಲಿ ಒಬ್ಬನು ಮೃತನಾದ ಮೇಲೆ ಅಧಿಕಾರಗಳು ನಿಹಿತಗೊಳ್ಳುವುದು 82

313. ಆಡಳಿತ ನಿರ್ವಹಣೆಯಾಗದೆ ಇರುವ ಸ್ವತ್ತುಗಳ ಬಗ್ಗೆ ಆಡಳಿತಗಾರನ ಅಧಿಕಾರ 82

314. ಅಪ್ರಾಪ್ತ ವಯಸ್ಕನಾಗಿರುವ ಅವಧಿಯಲ್ಲಿ ಆಡಳಿತಗಾರನ ಅಧಿಕಾರಗಳು 82

315. ವಿವಾಹಿತ ನಿರ್ವಾಹಕಿ ಅಥವಾ ಆಡಳಿತಗಾರ್ತಿಯ ಅಧಿಕಾರಗಳು 82

## ಅಧ್ಯಾಯ - VII

### ನಿರ್ವಾಹಕ ಅಥವಾ ಆಡಳಿತಗಾರನ ಕರ್ತವ್ಯಗಳ ಬಗ್ಗೆ

316. ಮೃತನ ಶವ ಸಂಸ್ಕಾರದ ಬಗ್ಗೆ 82

317. ವಿವರಣಪಟ್ಟಿ ಮತ್ತು ಲೆಕ್ಕ 82

318. ಕೆಲವು ಪ್ರಕರಣಗಳಲ್ಲಿ ವಿವರಣ ಪಟ್ಟಿಯು ಭಾರತದ ಯಾವುದೇ ಭಾಗದಲ್ಲಿರುವ ಸ್ವತ್ತನ್ನು ಒಳಗೊಳ್ಳುವುದು 83

319. ಮೃತನ ಸ್ವತ್ತು ಮತ್ತು ಅವನಿಗೆ ಬರಬೇಕಾದ ಋಣಗಳ ಬಗ್ಗೆ 83

320. ಎಲ್ಲ ಋಣಗಳಿಗಿಂತ ಮುಂಚೆ ವೆಚ್ಚಗಳನ್ನು ಸಂದಾಯಮಾಡುವುದು 83

321. ಅಂಥ ವೆಚ್ಚಗಳ ಸಂದಾಯದ ತರುವಾಯ ಸಂದಾಯ ಮಾಡಬೇಕಾದ ಇತರ ವೆಚ್ಚಗಳು 83

322. ಕೆಲವು ಸೇವೆಗಳ ಮಜೂರಿಯನ್ನು ತರುವಾಯ ಸಂದಾಯ ಮಾಡುವುದು ಮತ್ತು ಆ ಬಳಿಕ ಇತರ ಋಣಗಳನ್ನು ಸಂದಾಯ ಮಾಡುವುದು 83

323. ಹಿಂದೆ ಹೇಳಿದಂತೆ ಹೊರತು, ಎಲ್ಲಾ ಋಣಗಳನ್ನು ಸಮವಾಗಿ ಮತ್ತು ದಾಮಾಷಾ ಪ್ರಕಾರ ಸಂದಾಯ ಮಾಡುವುದು 83

324. ಅಧಿವಾಸವು ಭಾರತದಲ್ಲಿ ಇಲ್ಲದೇ ಇರುವಲ್ಲಿ ಋಣಗಳ ಸಂದಾಯಕ್ಕೆ ಚರ ಸ್ವತ್ತಿನ ವಿನಿಯೋಗ 83

325. ಮರಣ ಶಾಸನ ಸ್ವತ್ತುಗಳನ್ನು ಸಂದಾಯ ಮಾಡುವುದಕ್ಕೆ ಮುಂಚೆ ಋಣಗಳನ್ನು ಸಂದಾಯ ಮಾಡುವುದು 84

326. ನಿರ್ವಾಹಕ ಅಥವಾ ಆಡಳಿತಗಾರನು ನಷ್ಟಭರ್ತಿ ಇಲ್ಲದೆ ಮರಣ ಶಾಸನ ಸ್ವತ್ತುಗಳನ್ನು ಸಂದಾಯ ಮಾಡಲು ಬದ್ಧನಾಗದಿರುವುದು 84

327. ಸಾಮಾನ್ಯ ಮರಣಶಾಸನ ಸ್ವತ್ತುಗಳ ಕೊನೆಗೊಳ್ಳುವಿಕೆ 84

328. ಋಣಗಳನ್ನು ಸಂದಾಯ ಮಾಡಲು ಸಾಕಷ್ಟು ಆಸ್ತಿಗಳಿರುವಾಗ ನಿರ್ದಿಷ್ಟ ಮರಣಶಾಸನ ಸ್ವತ್ತಿನ ಕೊನೆಯಾಗದಿರುವುದು 84

329. ಋಣಗಳನ್ನು ಮತ್ತು ಅವಶ್ಯ ವೆಚ್ಚಗಳನ್ನು ಸಂದಾಯ ಮಾಡಲು ಆಸ್ತಿಗಳು ಸಾಕಷ್ಟಿರುವಾಗ ನಿರ್ದೇಶಿತ ಮರಣ ಶಾಸನ ಸ್ವತ್ತಿನ ಮೇರೆಗಿನ ಹಕ್ಕು 84

330. ನಿರ್ದಿಷ್ಟ ಮರಣ ಶಾಸನ ಸ್ವತ್ತುಗಳು ದಾಮಾಷ ಪ್ರಕಾರ ಕಡಿಮೆಯಾಗುವುದು 84

331. ಕಡಿಮೆಗೊಳಿಸುವ ಉದ್ದೇಶಕ್ಕಾಗಿ ಮರಣ ಶಾಸನ ಸ್ವತ್ತುಗಳನ್ನು ಸಾಮಾನ್ಯ ಮರಣ ಶಾಸನ ಸ್ವತ್ತುಗಳೆಂದು ಪರಿಗಣಿಸುವುದು 84

## ಅಧ್ಯಾಯ - VIII

### ಮರಣಶಾಸನ ಸ್ವತ್ತಿಗೆ ನಿರ್ವಾಹಕನ ಅಥವಾ ಆಡಳಿತಗಾರನ ಅನುಮತಿಯ ಬಗ್ಗೆ

332. ಲೆಗಟಿಯ ಸ್ವಾಮ್ಯವನ್ನು ಪೂರ್ಣಗೊಳಿಸಲು ಅನುಮತಿ ಅವಶ್ಯ 84

333. ನಿರ್ದಿಷ್ಟ ಮರಣ ಶಾಸನ ಸ್ವತ್ತಿಗೆ ನಿರ್ವಾಹಕನ ಅನುಮತಿಯ ಪರಿಣಾಮ 85

334. ಷರತ್ತುಪೂರ್ವಕ ಅನುಮತಿ 85

335. ತನಗೇ ಸೇರಿದ ಮರಣ ಶಾಸನ ಸ್ವತ್ತಿಗೆ ನಿರ್ವಾಹಕನ ಅನುಮತಿ 86

336. ನಿರ್ವಾಹಕನ ಅನುಮತಿಯ ಪರಿಣಾಮ 86

337. ನಿರ್ವಾಹಕನು ಮರಣ ಶಾಸನ ಸ್ವತ್ತುಗಳನ್ನು ಯಾವಾಗ ವಶಾವಣೆ ಮಾಡುವುದು 86

## ಅಧ್ಯಾಯ - IX

### ವರ್ಷಾಶನಗಳ ಸಂದಾಯ ಮತ್ತು ಹಂಚಿಕೆ

338. ಉಯಿಲಿನಲ್ಲಿ ಯಾವುದೇ ಕಾಲವನ್ನು ನಿಗದಿಪಡಿಸಿರದಿರುವಾಗ ವರ್ಷಾಶನದ ಆರಂಭ 86

339. ತ್ರೈಮಾಸಿಕವಾಗಿ ಅಥವಾ ಮಾಸಿಕವಾಗಿ ಸಂದಾಯ ಮಾಡಬೇಕಾದ ವರ್ಷಾಶನವು ಯಾವಾಗ ಮೊದಲು ಬಾಕಿಯಾಗುವುದು 86

340. ಮೊದಲ ಸಂದಾಯವನ್ನು ಒಂದು ಗೊತ್ತಾದ ಕಾಲದೊಳಗೆ ಅಥವಾ ನಿರ್ದಿಷ್ಟ ಮಾಡಬೇಕೆಂದು ನಿರ್ದೇಶಿಸಿದಾಗ ಅನುಕ್ರಮ ಸಂದಾಯದ ದಿನಾಂಕಗಳು 86

## ಅಧ್ಯಾಯ - X

### ಮರಣಶಾಸನ ಸ್ವತ್ತುಗಳಿಗಾಗಿ ವ್ಯವಸ್ಥೆ ಮಾಡಲು ನಿಧಿಗಳ ಹೂಡಿಕೆಯ ಬಗ್ಗೆ

341. ಆಜೀವ ಪರ್ಯಂತ ಕೊಟ್ಟ ಮರಣ ಶಾಸನದ ಸ್ವತ್ತು ಅನಿರ್ದಿಷ್ಟವಾಗಿರುವಲ್ಲಿ, ಮರಣ ಶಾಸನದ ಮೂಲಕ ಕೊಟ್ಟ ಮೊತ್ತದ ಹೂಡಿಕೆ 87

342. ಭವಿಷ್ಯ ಕಾಲದಲ್ಲಿ ಸಂದಾಯ ಮಾಡಬೇಕಾದ ಸಾಮಾನ್ಯ ಮರಣ ಶಾಸನ ಸ್ವತ್ತಿನ ಹೂಡಿಕೆ, ಮಧ್ಯಕಾಲೀನ ಬಡ್ಡಿಯ ವಿಲೆ 87

343. ವರ್ಷಾಶನಕ್ಕಾಗಿ ಯಾವುದೇ ನಿಧಿಯ ಮೇಲೆ ಋಣಭಾರ ಹೊರಿಸದಿರುವಾಗ ಅಥವಾ ಅದಕ್ಕೆ ವಿನಿಯೋಗಿಸದಿರುವಾಗ ಪ್ರಕ್ರಿಯೆ 87

344. ಅವಲಂಬಿತ ಮರಣಶಾಸನ ದಾನವನ್ನು ಶೇಷ ಲೆಗಟಿಗೆ ವರ್ಗಾಯಿಸುವುದು 87

345. ನಿರ್ದಿಷ್ಟ ಭದ್ರತೆಗಳಲ್ಲಿ ಹೂಡಬೇಕೆಂಬ ನಿರ್ದೇಶನವಿಲ್ಲದೆ ಜೀವನಪರ್ಯಂತ ಮರಣಶಾಸನ ದಾನದ ಮೂಲಕ ಕೊಟ್ಟ ಶೇಷದ ಹೂಡಿಕೆ 87

346. ನಿರ್ದಿಷ್ಟ ಭದ್ರತೆಗಳಲ್ಲಿ ಹೂಡಬೇಕೆಂಬ ನಿರ್ದೇಶನದೊಂದಿಗೆ ಜೀವನ ಪರ್ಯಂತ ಮರಣಶಾಸನದ ಮೂಲಕ ಕೊಟ್ಟ ಶೇಷದ ಹೂಡಿಕೆ 87

347. ಪರಿವರ್ತನೆ ಮತ್ತು ಹೂಡಿಕೆಯ ಕಾಲ ಮತ್ತು ರೀತಿ 87

348. ಅಪ್ರಾಪ್ತ ವಯಸ್ಕನು ಮರಣಶಾಸನ ಸ್ವತ್ತಿನ ತ್ವರಿತ ಸಂದಾಯಕ್ಕೆ ಅಥವಾ ಸ್ವಾಧೀನಕ್ಕೆ ಹಕ್ಕುಳ್ಳವನಾಗಿರುವಲ್ಲಿ ಮತ್ತು ಅವನ ಪರವಾಗಿ ಯಾವನೇ ವ್ಯಕ್ತಿಗೆ ಸಂದಾಯ ಮಾಡಬೇಕೆಂಬ ಯಾವುದೇ ನಿರ್ದೇಶನವು ಇರದಿರುವಲ್ಲಿ ಪ್ರಕ್ರಿಯೆ 88

ಅಧ್ಯಾಯ - **XI**

ಮರಣಶಾಸನ ಸ್ವತ್ತುಗಳ ಉತ್ಪತ್ತಿ ಮತ್ತು ಬಡ್ಡಿಯ ಬಗ್ಗೆ

349. ನಿರ್ದಿಷ್ಟ ಮರಣಶಾಸನ ಸ್ವತ್ತಿನ ಉತ್ಪತ್ತಿಗೆ ಲೆಗಟಿಯ ಸ್ವಾಮ್ಯ 88

350. ಶೇಷನಿಧಿಯ ಉತ್ಪತ್ತಿಗೆ ಶೇಷ ಲೆಗಟಿಯ ಸ್ವಾಮ್ಯ 88

351. ಸಾಮಾನ್ಯ ಮರಣಶಾಸನ ಸ್ವತ್ತನ್ನು ಸಂದಾಯ ಮಾಡುವುದಕ್ಕೆ ಯಾವುದೇ ಕಾಲವನ್ನು ನಿಗದಿಪಡಿಸಿರದಿರುವಾಗ ಬಡ್ಡಿ ಪ್ರಾರಂಭವಾಗುವ ಕಾಲ 89

352. ಕಾಲವನ್ನು ನಿಗದಿಪಡಿಸಿರುವಾಗ ಬಡ್ಡಿಯ ಪ್ರಾರಂಭ 89

353. ಬಡ್ಡಿಯ ದರ 89

354. ಮರಣಶಾಸನ ಕರ್ತನ ಮರಣದ ತರುವಾಯ ಮೊದಲನೆಯ ವರ್ಷದ ಒಳಗೆ ವರ್ಷಾಶನದ ಬಾಕಿಯ ಮೇಲೆ ಯಾವುದೇ ಬಡ್ಡಿ ಇಲ್ಲದಿರುವುದು 89

355. ವರ್ಷಾಶನವನ್ನು ದೊರಕಿಸಲು ಮೊತ್ತದ ಮೇಲಿನ ಬಡ್ಡಿಯನ್ನು ಹೂಡುವುದು 89

ಅಧ್ಯಾಯ - **XII**

ಮರಣಶಾಸನ ಸ್ವತ್ತುಗಳ ಮರುಪಾವತಿಯ ಬಗ್ಗೆ

356. ನ್ಯಾಯಾಲಯದ ಆದೇಶಗಳ ಮೇರೆಗೆ ಸಂದಾಯ ಮಾಡಿದ ಮರಣಶಾಸನ ಸ್ವತ್ತಿನ ಮರುಪಾವತಿ 89

357. ಸ್ವಯಿಚ್ಛೆಯಿಂದ ಸಂದಾಯ ಮಾಡಿದ್ದರೆ ಮರುಪಾವತಿ ಇಲ್ಲದಿರುವುದು 90

358. 137ನೇ ಪ್ರಕರಣದ ಮೇರೆಗೆ ಅನುಮತಿಸಲಾದ ಹೆಚ್ಚಿನ ಕಾಲದೊಳಗೆ, ಷರತ್ತಿನ ನೆರವೇರಿಕೆಯ ಮೇಲೆ ಮರಣಶಾಸನ ಸ್ವತ್ತು ಬಾಕಿಯಾಗಿರುವಾಗ ಮರುಪಾವತಿ 90

359. ಪ್ರಮಾಣಾನುಸಾರ ಮರುಪಾವತಿ ಮಾಡಲು ಪ್ರತಿಯೊಬ್ಬ ಲೆಗಟಿಯನ್ನು ಯಾವಾಗ ಒತ್ತಾಯಿಸಬಹುದು 90

360. ಆಸ್ತಿಗಳ ಹಂಚಿಕೆ 90

361. ಸಾಲ ಕೊಟ್ಟವನು ಲೆಗಟಿಯನ್ನು ಮರುಪಾವತಿ ಮಾಡಲು ಕೋರಬಹುದು 90

362. ತೃಪ್ತನಾಗದ ಅಥವಾ 361ನೇ ಪ್ರಕರಣದ ಮೇರೆಗೆ ಮರುಪಾವತಿ ಮಾಡಲು ಒತ್ತಾಯಕ್ಕೆ ಒಳಗಾಗಿರುವ ಲೆಗಟಿಯು ಪೂರ್ಣ ಸಂದಾಯವನ್ನು ಪಡೆದ ವ್ಯಕ್ತಿಯನ್ನು ಮರುಪಾವತಿ ಮಾಡುವಂತೆ ಯಾವಾಗ ಒತ್ತಾಯಿಸದಿರುವುದು 90

363. ನಿರ್ವಾಹಕನು ಧನಾನುಕೂಲವುಳ್ಳವನಾಗಿದ್ದರೆ ಅವನ ವಿರುದ್ಧ ತೃಪ್ತನಾಗದ ಲೆಗಟಿಯು ಯಾವಾಗ ಮೊದಲು ಕ್ರಮ ಜರುಗಿಸಬೇಕು 90

364. ಒಬ್ಬ ಲೆಗಟಿಯು ಇನ್ನೊಬ್ಬ ಲೆಗಟಿಗೆ ಮರುಪಾವತಿ ಮಾಡುವ ಬಗ್ಗೆ ಮಿತಿ 90

365. ಮರುಪಾವತಿಯು ಬಡ್ಡಿ ರಹಿತವಾಗಿರತಕ್ಕುದು 91

366. ಮಾಮೂಲು ಸಂದಾಯಗಳ ತರುವಾಯದ ಶೇಷವನ್ನು ಶೇಷ ಲೆಗಟಿಗೆ ಸಂದಾಯ ಮಾಡುವುದು 91

367. ಅಧಿವಾಸದ ದೇಶದಲ್ಲಿರುವ ನಿರ್ವಾಹಕ ಅಥವಾ ಆಡಳಿತಗಾರನಿಗೆ ಹಂಚಿಕೆಗಾಗಿ ಭಾರತದಿಂದ ಆಸ್ತಿಗಳ ವರ್ಗಾವಣೆ 91

ಅಧ್ಯಾಯ - **XIII**

ಹಾಳಾಗುವಿಕೆ ನಿರ್ವಾಹಕ ಅಥವಾ ಆಡಳಿತಗಾರನ ಹೊಣೆಗಾರಿಕೆ

368. ಹಾಳಾಗುವಿಕೆಗೆ ನಿರ್ವಾಹಕ ಅಥವಾ ಆಡಳಿತಗಾರನ ಹೊಣೆಗಾರಿಕೆ 91

369. ಸ್ವತ್ತಿನ ಯಾವುದೇ ಭಾಗವನ್ನು ಪಡೆಯಲು ನಿರ್ವಾಹಕನು ಅಥವಾ ಆಡಳಿತಗಾರನು ಉಪೇಕ್ಷಿಸಿದಾಗ ಅವನ ಹೊಣೆಗಾರಿಕೆ 91

ಭಾಗ - **X**

ಉತ್ತರಾಧಿಕಾರ ಪ್ರಮಾಣ ಪತ್ರಗಳು

370. ಈ ಭಾಗದ ಮೇರೆಗೆ ಪ್ರಮಾಣ ಪತ್ರಗಳ ನೀಡಿಕೆಯ ಮೇಲೆ ಪರಿಬಂಧ 92

371. ಪ್ರಮಾಣ ಪತ್ರವನ್ನು ನೀಡಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯ 92

372. ಪ್ರಮಾಣ ಪತ್ರಕ್ಕಾಗಿ ಅರ್ಜಿ 92

373. ಅರ್ಜಿಯನ್ನು ಸಲ್ಲಿಸಿದ ಮೇಲೆ ಪ್ರಕ್ರಿಯೆ 93

374. ಪ್ರಮಾಣ ಪತ್ರದ ಒಳಾಂಶಗಳು 93

375. ಪ್ರಮಾಣ ಪತ್ರ ಪಡೆದವನಿಂದ ಭದ್ರತೆಯನ್ನು ಕಡ್ಡಾಯ ಕೋರುವುದು 93

376. ಪ್ರಮಾಣ ಪತ್ರದ ವಿಸ್ತರಣೆ 94

377. ಪ್ರಮಾಣ ಪತ್ರ ಮತ್ತು ವಿಸ್ತರಿಸಿದ ಪ್ರಮಾಣ ಪತ್ರದ ನಮೂನೆಗಳು 94

378. ಭದ್ರತೆಗಳ ಬಗೆಗಿನ ಅಧಿಕಾರಗಳಿಗೆ ಸಂಬಂಧಿಸಿದಂತೆ ಪ್ರಮಾಣಪತ್ರಗಳ ತಿದ್ದುಪಡಿ 94

379. ಪ್ರಮಾಣ ಪತ್ರಗಳ ಸಂಬಂಧದಲ್ಲಿ ನ್ಯಾಯಾಲಯ ಫೀಜುಗಳನ್ನು ವಸೂಲ್ಮಾಡುವ ವಿಧಾನ 94

380. ಪ್ರಮಾಣಪತ್ರದ ಸ್ಥಳೀಯ ವ್ಯಾಪ್ತಿ 94

381. ಪ್ರಮಾಣಪತ್ರದ ಪರಿಣಾಮ 94

382. ವಿದೇಶಿ ರಾಜ್ಯದಲ್ಲಿ ಭಾರತೀಯ ಪ್ರತಿನಿಧಿಯು ಮತ್ತು ಇತರ ಪ್ರಕರಣಗಳಲ್ಲಿ ನೀಡಿದ ಅಥವಾ ವಿಸ್ತರಿಸಿದ ಪ್ರಮಾಣಪತ್ರದ ಪರಿಣಾಮ 94

383. ಪ್ರಮಾಣಪತ್ರದ ರದ್ದಿಯಾತಿ 95

384. ಅಪೀಲು 95

385. ಪ್ರಮಾಣಪತ್ರದ ಮೇಲೆ ಈ ಹಿಂದೆ ನೀಡಿದ ಪ್ರಮಾಣಪತ್ರ, ಪ್ರೊಬೇಟು ಅಥವಾ ಆಡಳಿತಾಧಿಕಾರ ಪತ್ರದ ಪರಿಣಾಮ 95

386. ಅಸಿಂಧುವಾದ ಪ್ರಮಾಣಪತ್ರದ ಧಾರಕನಿಗೆ ಸದ್ಭಾವನೆಯಿಂದ ಮಾಡಿದ ಕೆಲವು ಸಂದಾಯಗಳನ್ನು ಸಿಂಧುಗೊಳಿಸುವುದು 95

387. ಈ ಅಧಿನಿಯಮದ ಮೇರೆಗಿನ ತೀರ್ಮಾನಗಳ ಪರಿಣಾಮ ಮತ್ತು ಅದರ ಮೇರೆಗಿನ ಪ್ರಮಾಣ ಪತ್ರದ ಧಾರಕನ ಹೊಣೆಗಾರಿಕೆ 96

388. ಈ ಅಧಿನಿಯಮದ ಉದ್ದೇಶಗಳಿಗಾಗಿ ಕೆಳ ನ್ಯಾಯಾಲಯಗಳಲ್ಲಿ ಜಿಲ್ಲಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ನಿಹಿತಗೊಳಿಸುವುದು 96

389. ರದ್ದುಗೊಳಿಸಿದ ಮತ್ತು ಅಸಿಂಧುವಾದ ಪ್ರಮಾಣ ಪತ್ರಗಳನ್ನು ಒಪ್ಪಿಸುವುದು 96

390. ಮುಂಬಯಿ ರೆಗ್ಯುಲೇಶನ್, 1827ರ 8ರ ಮೇರೆಗಿನ ಪ್ರಮಾಣಪತ್ರಗಳಿಗೆ ಸಂಬಂಧಿಸಿದಂತೆ ಉಪಬಂಧಗಳು 96

ಭಾಗ - **XI**

ಸಂಕೀರ್ಣ

391. ಉಳಿಸುವಿಕೆಗಳು 97

392. ನಿರಸನಗಳು 97

ಅನುಸೂಚಿಗಳು:- I - IX 98

सत्यमेव जयते

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಭಾರತ ಉತ್ತರಾಧಿಕಾರ ಅಧಿನಿಯಮ, 1925

(1925ರ ಅಧಿನಿಯಮ ಸಂಖ್ಯೆ 39)

[ಜುಲೈ 27, 2003 ರಂದು ಜಾರಿಯಲ್ಲಿದ್ದಂತೆ]

# THE INDIAN SUCCESSION ACT, 1925

(Act No. 39 of 1925)

[As on 27th July 2003]

ಭಾರತ ಸರ್ಕಾರದ ಪರವಾಗಿ, ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ
ಮತ್ತು ಪ್ರಕಟಣೆಗಳ ಇಲಾಖೆಯ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ

2003

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಭಾರತ ಉತ್ತರಾಧಿಕಾರ ಅಧಿನಿಯಮ, 1925

(1925ರ ಅಧಿನಿಯಮ ಸಂಖ್ಯೆ 39)

[ಜುಲೈ 27, 2003 ರಂದು ಜಾರಿಯಲ್ಲಿದ್ದಂತೆ]

# THE INDIAN SUCCESSION ACT, 1925

(Act No. 39 of 1925)

[As on 27th July 2003]

## ಮುನ್ನುಡಿ

27.7.2003 ರಂದು ಜಾರಿಯಲ್ಲಿದ್ದಂತೆ ಭಾರತ ಉತ್ತರಾಧಿಕಾರ ಅಧಿನಿಯಮ 1925ರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 27.7.2003 ರ ಭಾರತ ರಾಜ್ಯಪತ್ರದ IXನೇ ಭಾಗದ, 1ನೇ ವಿಭಾಗದ, 26ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 2 ರಿಂದ 104 ರವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

ಟಿ.ಕೆ. ವಿಶ್ವನಾಥನ್
ಕಾರ್ಯದರ್ಶಿ,
ವಿಧಾಯೀ ಇಲಾಖೆ,
ಭಾರತ ಸರ್ಕಾರ.

ನವದೆಹಲಿ

## PREFACE

The Edition of the Indian Succession Act, 1925 as on the 27.7.2003 contains the authoritative text of that Act in Kannada which was published in the Gazette of India Extraordinary, Part IX, Section 1, No. 1, Volume 26, dated 27.7.2003 on pages 2 to 104.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

**T.K. Viswanathan**
Secretary,
Legislative Department,
Government of India.

New Delhi

# ಭಾರತ ಉತ್ತರಾಧಿಕಾರ ಅಧಿನಿಯಮ, 1925

(1925ರ 39)

[30ನೇ ಸೆಪ್ಟೆಂಬರ್, 1925]

ಮರಣಶಾಸನ ರಹಿತ ಮತ್ತು ಮರಣ ಶಾಸನ ಸಹಿತ ಉತ್ತರಾಧಿಕಾರಕ್ಕೆ ಅನ್ವಯವಾಗುವ ಕಾನೂನನ್ನು ಕ್ರೋಡೀಕರಿಸುವ ಅಧಿನಿಯಮ.

ಮರಣ ಶಾಸನ ರಹಿತ ಮತ್ತು ಮರಣಶಾಸನ ಸಹಿತ ಉತ್ತರಾಧಿಕಾರಕ್ಕೆ ಅನ್ವಯವಾಗುವ ಕಾನೂನನ್ನು ಕ್ರೋಡೀಕರಿಸುವುದು ವಿಹಿತವಾಗಿರುವುದರಿಂದ ಅದನ್ನು ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:-

## ಭಾಗ -I

### ಪ್ರಾರಂಭಿಕ

1. ಚಿಕ್ಕ ಹೆಸರು:- ಈ ಅಧಿನಿಯಮವನ್ನು ಭಾರತ ಉತ್ತರಾಧಿಕಾರ ಅಧಿನಿಯಮ, 1925 ಎಂದು ಕರೆಯತಕ್ಕದ್ದು.

2. ಪರಿಭಾಷೆಗಳು:- ಈ ಅಧಿನಿಯಮದಲ್ಲಿ ವಿಷಯ ಅಥವಾ ಸಂದರ್ಭದಲ್ಲಿ ತದ್ವಿರುದ್ಧವಾದುದು ಏನಾದರೂ ಇದ್ದ ಹೊರತು:-

(ಎ) "ಆಡಳಿತಗಾರ" ಎಂದರೆ ನಿರ್ವಾಹಕನಿಲ್ಲದಿರುವಾಗ, ಮರಣ ಹೊಂದಿದ ವ್ಯಕ್ತಿಯ ಸಂಪದದ ಆಡಳಿತವನ್ನು ನೋಡಿಕೊಳ್ಳಲು ಸಕ್ಷಮ ಪ್ರಾಧಿಕಾರಿಯು ನೇಮಕ ಮಾಡಿದ ವ್ಯಕ್ತಿ;

(ಬಿ) "ಉಯಿಲಿನ ಅನುಬಂಧ" ಎಂದರೆ ಒಂದು ಉಯಿಲಿಗೆ ಸಂಬಂಧಪಟ್ಟಂತೆ ಮಾಡಿದ ಮತ್ತು ಅದರ ವಿಲೇವಾರಿಗಳನ್ನು ವಿವರಿಸುವ, ಬದಲಾಯಿಸುವ ಅಥವಾ ಅದಕ್ಕೆ ಸೇರಿಸುವ ಒಂದು ಲಿಖಿತ ಮತ್ತು ಅದನ್ನು ಉಯಿಲಿನ ಭಾಗವೆಂದು ಭಾವಿಸತಕ್ಕದ್ದು;

(ಬಿಬಿ) "ಜಿಲ್ಲಾ ನ್ಯಾಯಾಧೀಶ" ಎಂದರೆ ಅಸಲು ಅಧಿಕಾರ ವ್ಯಾಪ್ತಿಯ ಪ್ರಧಾನ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ;

(ಸಿ) "ನಿರ್ವಾಹಕ" ಎಂದರೆ, ಮರಣ ಹೊಂದಿದ ವ್ಯಕ್ತಿಯ ಕೊನೆಯ ಉಯಿಲಿನ ನಿರ್ವಹಣೆಯನ್ನು, ಮರಣ ಶಾಸನ ಕರ್ತನು ಮಾಡಿದ ನೇಮಕಾತಿಯ ಮೂಲಕ, ಯಾವ ವ್ಯಕ್ತಿಗೆ ನಂಬಿಕೆಯಿಂದ ಒಪ್ಪಿಸಲಾಗಿದೆಯೋ ಆ ವ್ಯಕ್ತಿ;

(ಸಿಸಿ) "ಭಾರತ" ಎಂದರೆ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಭಾರತದ ರಾಜ್ಯಕ್ಷೇತ್ರ;

(ಡಿ) "ಭಾರತೀಯ ಕ್ರೈಸ್ತ" ಎಂದರೆ ಮಿಶ್ರಣಗೊಳ್ಳದ ಏಷಿಯಾದ ಸಂತತಿಯವನಾಗಿರುವ ಅಥವಾ ಹಾಗೆಂದು ಸದ್ಭಾವನೆಯಿಂದ ಕ್ಲೇಮು ಮಾಡುವ ಕ್ರೈಸ್ತ ಧರ್ಮದ ಯಾವುದೇ ರೂಪವನ್ನು ಅಂಗೀಕರಿಸಿರುವ ಭಾರತದ ದೇಶೀಯ;

(ಇ) "ಅಪ್ರಾಪ್ತ ವಯಸ್ಕ" ಎಂದರೆ ಭಾರತ ಪ್ರಾಪ್ತ ವಯಸ್ಕತಾ ಅಧಿನಿಯಮ, 1875ಕ್ಕೆ (1875ರ 9) ಒಳಪಟ್ಟಿರುವ ಮತ್ತು ಆ ಅಧಿನಿಯಮದ ಅರ್ಥ ವ್ಯಾಪ್ತಿಯಲ್ಲಿ, ಪ್ರಾಪ್ತ ವಯಸ್ಸು ತಲುಪದಿರುವ ಯಾವನೇ ವ್ಯಕ್ತಿ ಮತ್ತು ಹದಿನೆಂಟು ವರ್ಷ ವಯಸ್ಸು ತುಂಬಿರದ ಯಾವನೇ ಇತರ ವ್ಯಕ್ತಿ ಮತ್ತು "ಅಪ್ರಾಪ್ತ ವಯಸ್ಕತೆ" ಎಂದರೆ, ಅಂತಹ ಯಾವನೇ ವ್ಯಕ್ತಿಯ ಸ್ಥಾನಮಾನ;

(ಎಫ್) "ಪ್ರೊಬೇಟು" ಎಂದರೆ ಮರಣ ಶಾಸನ ಕರ್ತನ ಸಂಪದಕ್ಕೆ ಸಂಬಂಧಿಸಿದ ಆಡಳಿತ ಪತ್ರದೊಂದಿಗೆ ಸಕ್ಷಮ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯದ ಮೊಹರಿನಿಂದ ಪ್ರಮಾಣೀಕರಿಸಿದ ಉಯಿಲಿನ ಪ್ರತಿ;

(ಜಿ) "ರಾಜ್ಯ" ಎಂಬುದು, ಅಂತಿಮ ಅಧಿಕಾರ ವ್ಯಾಪ್ತಿಯ ನ್ಯಾಯಾಲಯವನ್ನು ಹೊಂದಿರುವ ಭಾರತದ ಯಾವುದೇ ವಿಭಾಗವನ್ನು ಒಳಗೊಳ್ಳುತ್ತದೆ; ಮತ್ತು

(ಎಚ್) "ಉಯಿಲು" ಎಂದರೆ ಮರಣಶಾಸನಕರ್ತನು ತನ್ನ ಸ್ವತ್ತಿನ ಬಗ್ಗೆ ಅವನ ಮರಣದ ತರುವಾಯ ಜಾರಿಗೊಳಿಸಬೇಕೆಂದು ಇಚ್ಛಿಸುವಂಥ ಅವನ ಉದ್ದೇಶದ ಕಾನೂನುಸಮ್ಮತ ಘೋಷಣೆ.

3. ರಾಜ್ಯದ ಯಾವುದೇ ಜನಾಂಗ, ಪಂಥ ಅಥವಾ ಬುಡಕಟ್ಟನ್ನು ಈ ಅಧಿನಿಯಮದ ಪ್ರವರ್ತನೆಯಿಂದ ವಿನಾಯಿತಿಗೊಳಿಸಲು ರಾಜ್ಯ ಸರ್ಕಾರದ ಅಧಿಕಾರ:- (1) ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, 1865ರ ಮಾರ್ಚ್ ಹದಿನಾರನೇ ದಿನದಿಂದ ಪೂರ್ವಾನ್ವಯವಾಗಿ ಅಥವಾ ಉತ್ತರಾನ್ವಯವಾಗಿ, ಈ ಅಧಿನಿಯಮದ ಕೆಳಕಂಡ ಯಾವುದೇ ಉಪಬಂಧದ ಎಂದರೆ, 5 ರಿಂದ 49ರ ವರೆಗೆ, 58 ರಿಂದ 191ರ ವರೆಗೆ, 212, 213 ಮತ್ತು 215 ರಿಂದ 369ರ ವರೆಗಿನ ಪ್ರಕರಣಗಳ ಪ್ರವರ್ತನೆಯಿಂದ, ಆದೇಶದಲ್ಲಿ ನಮೂದಿಸಿದಂಥ ಉಪಬಂಧಗಳನ್ನು ಅಥವಾ ಅವುಗಳಲ್ಲಿ ಯಾವುದೇ ಒಂದನ್ನು ಅನ್ವಯಿಸಲು ಅಸಾಧ್ಯವೆಂದು ಅಥವಾ ವಿಹಿತವಲ್ಲ ಎಂದು ರಾಜ್ಯ ಸರ್ಕಾರವು ಪರ್ಯಾಲೋಚಿಸುವ, ರಾಜ್ಯದಲ್ಲಿನ ಯಾವುದೇ ಜನಾಂಗ, ಪಂಥ ಅಥವಾ ಬುಡಕಟ್ಟಿನ ಅಥವಾ ಅಂಥ ಜನಾಂಗ, ಪಂಥ ಅಥವಾ ಬುಡಕಟ್ಟಿನ ಯಾವುದೇ ಭಾಗದ ಸದಸ್ಯರನ್ನು ವಿನಾಯಿತಿಗೊಳಿಸಬಹುದು.

(2) ರಾಜ್ಯ ಸರ್ಕಾರವು, ಅದೇ ಬಗೆಯ ಅಧಿಸೂಚನೆಯ ಮೂಲಕ ಅಂತಹ ಯಾವುದೇ ಆದೇಶವನ್ನು ರದ್ದುಗೊಳಿಸಬಹುದು. ಆದರೆ, ಅಂತಹ ರದ್ದಿಯಾತಿಯು, ಪೂರ್ವಾನ್ವಯ ಪರಿಣಾಮವನ್ನು ಹೊಂದಿರತಕ್ಕುದಲ್ಲ.

(3) ಈ ಪ್ರಕರಣದ ಮೇರೆಗೆ ಅಥವಾ ಭಾರತ ಉತ್ತರಾಧಿಕಾರ ಅಧಿನಿಯಮ, 1865ರ (1865ರ 10) ಯಾವುದೇ ಉಪಬಂಧದ ಪ್ರವರ್ತನೆಯಿಂದ, ಆ ಅಧಿನಿಯಮದ 332ನೇ ಪ್ರಕರಣದ ಮೇರೆಗೆ ವಿನಾಯಿತಿಗೊಳಿಸಿದ ವ್ಯಕ್ತಿಗಳನ್ನು ಈ ಅಧಿನಿಯಮದಲ್ಲಿ "ವಿನಾಯಿತಿಗೊಳಿಸಿದ ವ್ಯಕ್ತಿಗಳು" ಎಂದು ಉಲ್ಲೇಖಿಸಲಾಗಿದೆ.

## ಭಾಗ- II

## ಅಧಿವಾಸದ ಬಗ್ಗೆ

4. ಈ ಭಾಗದ ಅನ್ವಯ:- ಮೃತನು ಹಿಂದೂ, ಮಹಮದೀಯ, ಬೌದ್ಧ, ಸಿಖ್ ಅಥವಾ ಜೈನನಾಗಿದ್ದರೆ, ಈ ಭಾಗವು ಅನ್ವಯವಾಗತಕ್ಕುದಲ್ಲ.

5. ಮೃತ ವ್ಯಕ್ತಿಯ ಸ್ಥಿರ ಮತ್ತು ಚರ ಸ್ವತ್ತುಗಳಿಗೆ ಉತ್ತರಾಧಿಕಾರವನ್ನು ವಿನಿಯಮಿಸುವ ಕಾನೂನು:-

(1) ಮೃತ ವ್ಯಕ್ತಿಯ ಭಾರತದಲ್ಲಿನ ಸ್ಥಿರ ಸ್ವತ್ತಿಗೆ ಉತ್ತರಾಧಿಕಾರವು, ಅಂತಹ ವ್ಯಕ್ತಿಯು ತನ್ನ ಮರಣದ ಕಾಲದಲ್ಲಿ ಅಧಿವಾಸವನ್ನು ಎಲ್ಲೇ ಹೊಂದಿರಬಹುದಾಗಿದ್ದರೂ, ಭಾರತದ ಕಾನೂನಿನ ಮೂಲಕ ವಿನಿಯಮಿತವಾಗತಕ್ಕುದು.

(2) ಮೃತ ವ್ಯಕ್ತಿಯ ಚರ ಸ್ವತ್ತಿಗೆ ಉತ್ತರಾಧಿಕಾರವು, ಅಂತಹ ವ್ಯಕ್ತಿಯು ತನ್ನ ಮರಣದ ಕಾಲದಲ್ಲಿ ತನ್ನ ಅಧಿವಾಸವನ್ನು ಹೊಂದಿದ್ದಂಥ ದೇಶದ ಕಾನೂನಿನ ಮೂಲಕ ವಿನಿಯಮಿತವಾಗತಕ್ಕುದು.

ದೃಷ್ಟಾಂತಗಳು

(i) 'ಎ' ನು ಭಾರತದಲ್ಲಿ ತನ್ನ ಅಧಿವಾಸವನ್ನು ಹೊಂದಿದ್ದು ಫ್ರಾನ್ಸಿನಲ್ಲಿ ಚರಸ್ವತ್ತನ್ನು, ಇಂಗ್ಲೆಂಡಿನಲ್ಲಿ ಚರಸ್ವತ್ತನ್ನು ಮತ್ತು ಭಾರತದಲ್ಲಿ ಚರ ಹಾಗೂ ಸ್ಥಿರ ಸ್ವತ್ತುಗಳನ್ನು ಬಿಟ್ಟು ಫ್ರಾನ್ಸಿನಲ್ಲಿ ಮರಣ ಹೊಂದುತ್ತಾನೆ. ಅವುಗಳೆಲ್ಲದಕ್ಕೆ ಉತ್ತರಾಧಿಕಾರವು ಭಾರತದ ಕಾನೂನಿನ ಮೂಲಕ ವಿನಿಯಮಿತವಾಗುತ್ತದೆ.

(ii) ಇಂಗ್ಲಿಷ್‌ನವನಾದ 'ಎ' ನು ಫ್ರಾನ್ಸಿನಲ್ಲಿ ತನ್ನ ಅಧಿವಾಸವನ್ನು ಹೊಂದಿದ್ದು ಭಾರತದಲ್ಲಿ ಮರಣ ಹೊಂದುತ್ತಾನೆ ಮತ್ತು ಭಾರತದಲ್ಲಿ ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಬಿಟ್ಟಿರುತ್ತಾನೆ. ಚರ ಸ್ವತ್ತಿಗೆ ಉತ್ತರಾಧಿಕಾರವು, ಫ್ರಾನ್ಸಿನಲ್ಲಿ ಅಧಿವಾಸಿತನಾಗಿ ಮರಣ ಹೊಂದುವ ಇಂಗ್ಲಿಷ್‌ನವನ ಚರಸ್ವತ್ತಿಗೆ, ಫ್ರಾನ್ಸಿನಲ್ಲಿ ಉತ್ತರಾಧಿಕಾರವನ್ನು ನಿಯಂತ್ರಿಸುವಂಥ ನಿಯಮಗಳ ಮೂಲಕ ವಿನಿಯಮಿತವಾಗುತ್ತದೆ, ಮತ್ತು ಸ್ಥಿರ ಸ್ವತ್ತಿಗೆ ಉತ್ತರಾಧಿಕಾರವು ಭಾರತದ ಕಾನೂನಿನ ಮೂಲಕ ವಿನಿಯಮಿತವಾಗುತ್ತದೆ.

6. ಒಂದು ಅಧಿವಾಸವು ಮಾತ್ರ ಚರ ಸ್ವತ್ತುಗಳ ಉತ್ತರಾಧಿಕಾರಕ್ಕೆ ಪರಿಣಾಮವನ್ನುಂಟು ಮಾಡುತ್ತದೆ:- ಒಬ್ಬ ವ್ಯಕ್ತಿಯು, ತನ್ನ ಚರ ಸ್ವತ್ತಿನ ಉತ್ತರಾಧಿಕಾರದ ಉದ್ದೇಶಕ್ಕಾಗಿ ಒಂದು ಅಧಿವಾಸವನ್ನು ಮಾತ್ರ ಹೊಂದಿರತಕ್ಕುದು.

7. ಔರಸ ಜನನದ ವ್ಯಕ್ತಿಯ ಮೂಲ ಅಧಿವಾಸ:- ಔರಸ ಜನನದ ಪ್ರತಿಯೊಬ್ಬ ವ್ಯಕ್ತಿಯ ಮೂಲ ಅಧಿವಾಸವು, ಅವನು ಹುಟ್ಟಿದ ಕಾಲದಲ್ಲಿ ಅವನ ತಂದೆಯು ಅಧಿವಾಸಿತನಾಗಿದ್ದಂಥ ದೇಶದ್ದಾಗಿರುತ್ತದೆ; ಅಥವಾ ಅವನು ತಂದೆಯ ಮರಣಾನಂತರ ಹುಟ್ಟಿದ ಮಗುವಾಗಿದ್ದರೆ, ಅವನ ತಂದೆಯು ಮರಣ ಕಾಲದಲ್ಲಿ ಅಧಿವಾಸಿತನಾಗಿದ್ದಂಥ ದೇಶದ್ದಾಗಿರುತ್ತದೆ.

ದೃಷ್ಟಾಂತಗಳು

'ಎ' ನು ಹುಟ್ಟಿದ ಕಾಲದಲ್ಲಿ ಅವನ ತಂದೆಯು ಇಂಗ್ಲೆಂಡಿನಲ್ಲಿ ಅಧಿವಾಸಿತನಾಗಿದ್ದನು. ಅವನು ಹುಟ್ಟಿದಂಥ ದೇಶವು ಯಾವುದೇ ಆಗಿದ್ದರೂ 'ಎ' ನ ಮೂಲ ಅಧಿವಾಸವು ಇಂಗ್ಲೆಂಡಿನದಾಗಿರುತ್ತದೆ.

8. ಅನೌರಸ ಮಗುವಿನ ಮೂಲ ಅಧಿವಾಸ:- ಅನೌರಸ ಮಗುವಿನ ಮೂಲ ಅಧಿವಾಸವು, ಅವನು ಹುಟ್ಟಿದ ಕಾಲದಲ್ಲಿ ಅವನ ತಾಯಿಯು ಅಧಿವಾಸಿತಳಾಗಿದ್ದಂಥ ದೇಶದ್ದಾಗಿರುತ್ತದೆ.

9. ಮೂಲ ಅಧಿವಾಸದ ಮುಂದುವರಿಕೆ:- ಮೂಲ ಅಧಿವಾಸವು ಹೊಸ ಅಧಿವಾಸವನ್ನು ಆರ್ಜಿಸುವವರೆಗೂ ಚಾಲ್ತಿಯಲ್ಲಿರುತ್ತದೆ.

10. ಹೊಸ ಅಧಿವಾಸದ ಆರ್ಜನೆ:- ಒಬ್ಬ ಮನುಷ್ಯನು ತನ್ನ ಮೂಲ ಅಧಿವಾಸವಲ್ಲದಂಥ ದೇಶದಲ್ಲಿ ನಿಗದಿತ ವಾಸವನ್ನು ಮಾಡುವ ಮೂಲಕ ಹೊಸ ಅಧಿವಾಸವನ್ನು ಆರ್ಜಿಸುತ್ತಾನೆ.

ವಿವರಣೆ:- ಒಬ್ಬ ವ್ಯಕ್ತಿಯು, ಸರ್ಕಾರದ ಸಿವಿಲ್, ಸೇನಾ, ನೌಕಾ ಅಥವಾ ವಾಯು ದಳದ ಸೇವೆಯಲ್ಲಿ ಅಥವಾ ಯಾವುದೇ ವೃತ್ತಿ ಅಥವಾ ಆಜೀವಿಕೆಯನ್ನು ನಡೆಸುವಲ್ಲಿ ಅವನು ಭಾರತದಲ್ಲಿ ವಾಸವಾಗಿರುವನೆಂಬ ಕಾರಣ ಮಾತ್ರದಿಂದಲೇ, ಅವನು ಅಲ್ಲಿ ನಿಗದಿತ ವಾಸವನ್ನು ಹೊಂದಿದ್ದಾನೆಂದು ಭಾವಿಸತಕ್ಕುದಲ್ಲ.

ದೃಷ್ಟಾಂತಗಳು

(i) ಮೂಲ ಅಧಿವಾಸವು ಇಂಗ್ಲೆಂಡಿನಲ್ಲಿರುವ 'ಎ' ಭಾರತಕ್ಕೆ ಹೊರಡುತ್ತಾನೆ. ಅವನು ಉಳಿದ ಜೀವಿತ ಕಾಲವೆಲ್ಲ ಅಲ್ಲಿಯೇ ಉಳಿಯುವ ಉದ್ದೇಶ ಹೊಂದಿದ್ದು, ಅಲ್ಲಿ ಬ್ಯಾರಿಸ್ಟರ್ ಅಥವಾ ವ್ಯಾಪಾರಿಯಾಗಿ ನೆಲಸುತ್ತಾನೆ. ಅವನ ಅಧಿವಾಸವು ಈಗ ಭಾರತದಲ್ಲಿದೆ.

(ii) ಇಂಗ್ಲೆಂಡಿನಲ್ಲಿ ಅಧಿವಾಸಿಯಾಗಿರುವ 'ಎ'ನು ಆಸ್ಟ್ರಿಯಾಕ್ಕೆ ಹೋಗುತ್ತಾನೆ ಮತ್ತು ಆಸ್ಟ್ರಿಯಾದ ಸೇವೆಗೆ, ಆ ಸೇವೆಯಲ್ಲಿ ಉಳಿಯುವ ಉದ್ದೇಶದಿಂದ ಸೇರುತ್ತಾನೆ. 'ಎ' ಆಸ್ಟ್ರಿಯಾದಲ್ಲಿ ಅಧಿವಾಸವನ್ನು ಆರ್ಜಿಸಿದ್ದಾನೆ.

(iii) ಫ್ರಾನ್ಸಿನ ಅಧಿವಾಸಿಯಾದ 'ಎ' ನು ಕೇಂದ್ರ ಸರ್ಕಾರದೊಂದಿಗೆ ಮಾಡಿಕೊಂಡ ವಚನ ಬಂಧದ ಮೇರೆಗೆ ಕೆಲವು ವರ್ಷಗಳವರೆಗೆ ಭಾರತದಲ್ಲಿ ವಾಸಿಸಲು ಬರುತ್ತಾನೆ. ಆ ಅವಧಿಯು ಮುಕ್ತಾಯವಾದಾಗ ಫ್ರಾನ್ಸಿಗೆ ಹಿಂತಿರುಗುವುದು ಅವನ ಉದ್ದೇಶ. ಅವನು ಭಾರತದಲ್ಲಿ ಅಧಿವಾಸವನ್ನು ಆರ್ಜಿಸುವುದಿಲ್ಲ.

(iv) ಇಂಗ್ಲೆಂಡಿನಲ್ಲಿ ಅಧಿವಾಸಿಯಾದ 'ಎ' ನು ವಿಘಟಿತವಾದಂಥ ಪಾಲುಗಾರಿಕೆಯ ವ್ಯವಹಾರಗಳನ್ನು ಸಮಾಪನಗೊಳಿಸುವ ಉದ್ದೇಶಕ್ಕಾಗಿ ಮತ್ತು ಆ ಉದ್ದೇಶವನ್ನು ಸಾಧಿಸಿದ ಕೂಡಲೇ ಇಂಗ್ಲೆಂಡಿಗೆ ಹಿಂತಿರುಗುವ ಉದ್ದೇಶದಿಂದ, ಭಾರತದಲ್ಲಿ ವಾಸಿಸಲು ಹೋಗುತ್ತಾನೆ. ಆ ವಾಸವು ಎಷ್ಟೇ ದೀರ್ಘಕಾಲದಲ್ಲಿದ್ದಾಗ್ಯೂ, ಅವನು ಅಂಥ ವಾಸದ ಮೂಲಕ ಭಾರತದಲ್ಲಿನ ಅಧಿವಾಸವನ್ನು ಆರ್ಜಿಸುವುದಿಲ್ಲ.

(v) ಹಿಂದಿನ ಕೊನೆಯ ದೃಷ್ಟಾಂತದಲ್ಲಿ ನಮೂದಿಸಿದ ಸನ್ನಿವೇಶಗಳಲ್ಲಿ ಭಾರತದಲ್ಲಿ ವಾಸಿಸಲು 'ಎ' ನು ಹೋಗಿದ್ದು ಆ ತರುವಾಯ ತನ್ನ ಆಶಯವನ್ನು ಬದಲಾಯಿಸುತ್ತಾನೆ ಮತ್ತು ಭಾರತದಲ್ಲಿ ನಿಗದಿತವಾಗಿ ವಾಸ ಮಾಡುತ್ತಾನೆ 'ಎ' ನು ಭಾರತದಲ್ಲಿ ಅಧಿವಾಸವನ್ನು ಆರ್ಜಿಸಿರುತ್ತಾನೆ.

(vi) ಚಂದ್ರ ನಾಗೊರದ ಫ್ರೆಂಚ್ ವಸಾಹತುವಿನಲ್ಲಿ ಅಧಿವಾಸಿಯಾದ 'ಎ' ನು ರಾಜಕೀಯ ಘಟನೆಗಳಿಂದಾಗಿ ಕಲ್ಕತ್ತದಲ್ಲಿ ಆಶ್ರಯ ಹೊಂದಲೇಬೇಕಾಗುತ್ತದೆ ಮತ್ತು ಚಂದ್ರನಾಗೊರಗೆ ಸುರಕ್ಷಿತವಾಗಿ ಹಿಂತಿರುಗಲು ಅವನಿಗೆ ಅನುಕೂಲವಾಗುವಂತಹ ರಾಜಕೀಯ ಬದಲಾವಣೆಗಳ ನಿರೀಕ್ಷೆಯಲ್ಲಿ ಕಲ್ಕತ್ತದಲ್ಲಿ ಅನೇಕ ವರ್ಷಗಳ ಕಾಲ ವಾಸಿಸುತ್ತಾನೆ. ಅಂತಹ ವಾಸದ ಮೂಲಕ ಅವನು ಭಾರತದಲ್ಲಿ ಅಧಿವಾಸವನ್ನು ಆರ್ಜಿಸುವುದಿಲ್ಲ.

(vii) ಹಿಂದಿನ ಕೊನೆಯ ದೃಷ್ಟಾಂತದಲ್ಲಿ ವಿವರಿಸಿದ ಸನ್ನಿವೇಶಗಳಲ್ಲಿ 'ಎ' ನು ಕಲ್ಕತ್ತಕ್ಕೆ ಬಂದಿದ್ದು, ಚಂದ್ರ ನಾಗೊರಕ್ಕೆ ಸುರಕ್ಷಿತವಾಗಿ ಹಿಂತಿರುಗಲು ಅವನಿಗೆ ಅನುಕೂಲವಾಗುವಂಥ ರಾಜಕೀಯ ಬದಲಾವಣೆಗಳು ಸಂಭವಿಸಿದ ತರುವಾಯ ಅಲ್ಲಿಯೇ ವಾಸಿಸಲು ಮುಂದುವರಿಯುತ್ತಾನೆ ಮತ್ತು ಕಲ್ಕತ್ತದಲ್ಲಿನ ಅವನ ವಾಸವು, ಖಾಯಂ ಆಗಿರತಕ್ಕುದೆಂದು ಅವನು ಆಶಿಸುತ್ತಾನೆ 'ಎ' ನು ಭಾರತದಲ್ಲಿ ಅಧಿವಾಸವನ್ನು ಆರ್ಜಿಸಿದ್ದಾನೆ.

11. ಭಾರತದಲ್ಲಿ ಅಧಿವಾಸವನ್ನು ಆರ್ಜಿಸುವ ವಿಶೇಷ ವಿಧಾನ:- ಯಾವನೇ ವ್ಯಕ್ತಿಯು ಭಾರತದಲ್ಲಿ ಅಧಿವಾಸವನ್ನು, ಈ ಬಗ್ಗೆ ರಾಜ್ಯ ಸರ್ಕಾರವು ಗೊತ್ತುಪಡಿಸಿದ ಯಾವುದೇ ಕಚೇರಿಯಲ್ಲಿ, ಅಂತಹ ಅಧಿವಾಸವನ್ನು ಆರ್ಜಿಸುವ ತನ್ನ ಇಚ್ಛೆಯನ್ನು, ತಾನು ರುಜು ಹಾಕಿ ಬರಹದಲ್ಲಿ ಘೋಷಣೆಯನ್ನು ಮಾಡಿ ಮತ್ತು ಅಲ್ಲಿ ಅದನ್ನು ಸಲ್ಲಿಸುವ ಮೂಲಕ ಆರ್ಜಿಸಬಹುದು; ಪರಂತು, ಅಂತಹ ಘೋಷಣೆಯನ್ನು ಮಾಡುವ ಕಾಲದ ನಿಕಟ ಪೂರ್ವದಲ್ಲಿ ಅವನು ಭಾರತದಲ್ಲಿ ಒಂದು ವರ್ಷ ಕಾಲ ನಿವಾಸಿಯಾಗಿದ್ದಿರಬೇಕು.

12. ವಿದೇಶಿ ಸರ್ಕಾರದ ಪ್ರತಿನಿಧಿಯಾಗಿ ಅಥವಾ ಅವನ ಕುಟುಂಬದ ಭಾಗವಾಗಿ ವಾಸಿಸುವ ಮೂಲಕ ಅಧಿವಾಸವನ್ನು ಆರ್ಜಿಸಲಾಗದು:- ಒಂದು ದೇಶದ ಸರ್ಕಾರದಿಂದ ಅದರ ರಾಯಭಾರಿ, ಕಾನ್ಸಲ್ ಅಥವಾ ಇತರ ಪ್ರತಿನಿಧಿಯಾಗಿ ಬೇರೆ ದೇಶದಲ್ಲಿ ನೇಮಕಗೊಂಡಿರುವ ವ್ಯಕ್ತಿಯು, ಅವನ ನೇಮಕಾತಿಯ ಅನುಸರಣೆಯಲ್ಲಿ, ಆ ಬೇರೆ ದೇಶದಲ್ಲಿ ವಾಸಿಸುವ ಕಾರಣ ಮಾತ್ರದಿಂದಲೇ ಅಧಿವಾಸವನ್ನು ಆರ್ಜಿಸುವುದಿಲ್ಲ; ಹಾಗೂ ಯಾವನೇ ಇತರ ವ್ಯಕ್ತಿಯು ಮೊದಲು ಹೇಳಿದಂಥ ವ್ಯಕ್ತಿಯೊಡನೆ ಅವನ ಕುಟುಂಬದ ಒಂದು ಭಾಗವಾಗಿ ಅಥವಾ ಸೇವಕನಾಗಿ ವಾಸಿಸುವ ಕಾರಣಮಾತ್ರದಿಂದಲೇ ಅಂಥ ಅಧಿವಾಸವನ್ನು ಆರ್ಜಿಸುವುದಿಲ್ಲ.

13. ಹೊಸ ಅಧಿವಾಸದ ಮುಂದುವರಿಕೆ:- ಹೊಸ ಅಧಿವಾಸವು ಮೊದಲಿನ ಅಧಿವಾಸವನ್ನು ಪುನರಾರಂಭವಾಗುವವರೆಗೆ ಅಥವಾ ಬೇರೊಂದು ಆರ್ಜಿತವಾಗುವವರೆಗೆ ಮುಂದುವರಿಯುತ್ತದೆ.

14. ಅಪ್ರಾಪ್ತ ವಯಸ್ಕನ ಅಧಿವಾಸ:- ಅಪ್ರಾಪ್ತ ವಯಸ್ಕನ ಅಧಿವಾಸವು, ಅವನು ಯಾವ ತಂದೆ ತಾಯಿಯ ಮೂಲಕ ತನ್ನ ಮೂಲ ಅಧಿವಾಸವನ್ನು ಪಡೆದನೋ ಆ ತಂದೆ ತಾಯಿಯ ಅಧಿವಾಸವನ್ನು ಅನುಸರಿಸುತ್ತದೆ.

ಅಪವಾದ:- ಅಪ್ರಾಪ್ತ ವಯಸ್ಕನು ಮದುವೆಯಾಗಿದ್ದರೆ ಅಥವಾ ಸರ್ಕಾರದ ಸೇವೆಯಲ್ಲಿ ಯಾವುದೇ ಪದ ಅಥವಾ ನಿಯೋಜನೆಯನ್ನು ಧಾರಣ ಮಾಡಿದ್ದರೆ, ಅಥವಾ ತಂದೆ- ತಾಯಿಯ ಸಮ್ಮತಿಯೊಂದಿಗೆ ಯಾವುದೇ ವಿಭಿನ್ನ ವ್ಯವಹಾರವನ್ನು ಸ್ಥಾಪಿಸಿದ್ದರೆ, ಆ ಅಪ್ರಾಪ್ತ ವಯಸ್ಕನ ಅಧಿವಾಸವು, ಅವನ ತಂದೆ - ತಾಯಿಯ ಅಧಿವಾಸದೊಡನೆ ಬದಲಾಗುವುದಿಲ್ಲ.

15. ವಿವಾಹವಾದ ಮೇಲೆ ಮಹಿಳೆಯು ಆರ್ಜಿಸಿದ ಅಧಿವಾಸ:- ಒಬ್ಬ ಮಹಿಳೆಯು ತನ್ನ ವಿವಾಹಕ್ಕೆ ಮುಂಚೆ ತನ್ನ ಗಂಡನ ಅಧಿವಾಸವನ್ನು ಹೊಂದಿರದಿದ್ದರೆ, ಅವಳು ವಿವಾಹದ ಮೂಲಕ ತನ್ನ ಗಂಡನ ಅಧಿವಾಸವನ್ನು ಆರ್ಜಿಸುತ್ತಾಳೆ.

16. ವಿವಾಹಿತ ಜೀವನದ ಅವಧಿಯಲ್ಲಿ ಹೆಂಡತಿಯ ಅಧಿವಾಸ:- ಹೆಂಡತಿಯ ಅಧಿವಾಸವು ಅವಳ ವಿವಾಹಿತ ಜೀವನದ ಅವಧಿಯಲ್ಲಿ ಅವಳ ಗಂಡನ ಅಧಿವಾಸವನ್ನು ಅನುಸರಿಸುತ್ತದೆ.

ಅಪವಾದ:- ಸಕ್ಷಮ ನ್ಯಾಯಾಲಯದ ಶಿಕ್ಷೆಯ ಆದೇಶದ ಮೂಲಕ ಗಂಡ - ಹೆಂಡತಿಯು ಪ್ರತ್ಯೇಕಗೊಂಡರೆ ಅಥವಾ ಗಂಡನು ಗಡೀಪಾರು ಶಿಕ್ಷೆಯನ್ನು ಅನುಭವಿಸುತ್ತಿದ್ದರೆ, ಹೆಂಡತಿಯ ಅಧಿವಾಸವು ಆ ತರುವಾಯ ಅವಳ ಗಂಡನ ಅಧಿವಾಸವನ್ನು ಅನುಸರಿಸುವುದಿಲ್ಲ.

17. ಅಪ್ರಾಪ್ತ ವಯಸ್ಕನು ಹೊಸ ಅಧಿವಾಸವನ್ನು ಆರ್ಜಿಸುವುದು:- ಈ ಭಾಗದಲ್ಲಿ ಈ ಹಿಂದೆ ಅನ್ಯಥಾ ಉಪಬಂಧಿಸಿದ್ದ ಹೊರತು, ಒಬ್ಬ ವ್ಯಕ್ತಿಯು, ಅಪ್ರಾಪ್ತ ವಯಸ್ಕನಾಗಿರುವಾಗ ಹೊಸ ಅಧಿವಾಸವನ್ನು ಆರ್ಜಿಸಲಾಗದು.

18. ಮನೋವಿಕಲನು ಹೊಸ ಅಧಿವಾಸವನ್ನು ಆರ್ಜಿಸುವುದು:- ಮನೋವಿಕಲ ವ್ಯಕ್ತಿಯು ಹೊಸ ಅಧಿವಾಸವನ್ನು, ಅವನ ಅಧಿವಾಸವು ಇನ್ನೊಬ್ಬ ವ್ಯಕ್ತಿಯ ಅಧಿವಾಸವನ್ನು ಅನುಸರಿಸುವ ಮೂಲಕವಲ್ಲದೆ ಇತರ ಯಾವುದೇ ರೀತಿಯಲ್ಲಿ ಆರ್ಜಿಸಲಾಗದು.

19. ಬೇರೆಡೆ ಅಧಿವಾಸದ ರುಜುವಾತು ಇಲ್ಲದಿರುವಲ್ಲಿ ಭಾರತದಲ್ಲಿನ ಚರಸ್ವತ್ತಿಗೆ ಉತ್ತರಾಧಿಕಾರ:- ಒಬ್ಬ ವ್ಯಕ್ತಿಯು ಚರಸ್ವತ್ತನ್ನು ಭಾರತದಲ್ಲಿ ಬಿಟ್ಟು ಮರಣ ಹೊಂದಿದ್ದರೆ ಬೇರೆಡೆಯ ಯಾವುದೇ ಅಧಿವಾಸದ ರುಜುವಾತು ಇಲ್ಲದಿರುವಲ್ಲಿ ಆ ಸ್ವತ್ತಿಗೆ ಉತ್ತರಾಧಿಕಾರವು ಭಾರತದ ಕಾನೂನಿನ ಮೂಲಕ ವಿನಿಯಮಿತವಾಗುತ್ತದೆ.

## ಭಾಗ - III

## ವಿವಾಹ

20. ವಿವಾಹದ ಮೂಲಕ ಹಿತಾಸಕ್ತಿಗಳು ಮತ್ತು ಅಧಿಕಾರಗಳನ್ನು ಆರ್ಜಿಸಿಕೊಳ್ಳಲಾಗದು ಅಥವಾ ಕಳೆದುಕೊಳ್ಳಲಾಗದು:- (1) ಯಾವನೇ ವ್ಯಕ್ತಿಯು, ವಿವಾಹದ ಮೂಲಕ ಅವನು ಅಥವಾ ಅವಳು ವಿವಾಹವಾಗುವ ವ್ಯಕ್ತಿಯ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿಯನ್ನು ಆರ್ಜಿಸತಕ್ಕುದಲ್ಲ ಅಥವಾ ಅವನು ಅಥವಾ ಅವಳು, ಸ್ವಂತ ಸ್ವತ್ತಿಗೆ ಸಂಬಂಧಿಸಿದಂತೆ, ಅವಿವಾಹಿತರಾಗಿದ್ದರೆ ಅವನು ಅಥವಾ ಅವಳು ಮಾಡಬಹುದಾಗಿದ್ದಂಥ ಯಾವುದೇ ಕಾರ್ಯವನ್ನು ಮಾಡಲು ಅಸಮರ್ಥರಾಗತಕ್ಕುದಲ್ಲ.

(2) ಈ ಪ್ರಕರಣವು,-

(ಎ) 1866ರ ಜನವರಿ ಒಂದನೇ ದಿನಕ್ಕೆ ಮುಂಚೆ ಮಾಡಿಕೊಂಡ ಯಾವುದೇ ವಿವಾಹಕ್ಕೆ ಅನ್ವಯವಾಗತಕ್ಕುದಲ್ಲ;

(ಬಿ) ಯಾವ ವಿವಾಹಕ್ಕೆ ಒಂದು ಅಥವಾ ಎರಡೂ ಪಕ್ಷಗಳು, ವಿವಾಹದ ಕಾಲದಲ್ಲಿ, ಹಿಂದೂ, ಮಹಮದೀಯ, ಬೌದ್ಧ, ಸಿಖ್ ಅಥವಾ ಜೈನ ಧರ್ಮವನ್ನು ಅಂಗೀಕರಿಸುವುದೋ, ಆ ಯಾವುದೇ ವಿವಾಹಕ್ಕೆ ಅನ್ವಯವಾಗತಕ್ಕುದಲ್ಲ ಮತ್ತು ಯಾವತ್ತೂ ಅನ್ವಯವಾಗಿತ್ತೆಂದು ಭಾವಿಸತಕ್ಕುದಲ್ಲ.

21. ಭಾರತದಲ್ಲಿ ಅಧಿವಾಸಿಯಾದ ವ್ಯಕ್ತಿಯ ಮತ್ತು ಅಧಿವಾಸಿಯಾಗಿರದ ವ್ಯಕ್ತಿಯ ನಡುವಣ ವಿವಾಹದ ಪರಿಣಾಮ:- ಭಾರತದಲ್ಲಿ ಅಧಿವಾಸಿಯಾಗಿಲ್ಲದಿರುವ ವ್ಯಕ್ತಿಯು ಭಾರತದಲ್ಲಿ ಅಧಿವಾಸಿಯಾಗಿರುವ ವ್ಯಕ್ತಿಯನ್ನು ಭಾರತದಲ್ಲಿ ವಿವಾಹವಾದರೆ ವಿವಾಹಕ್ಕೆ ಪೂರ್ವದಲ್ಲಿ ಮಾಡಿಕೊಂಡ ವ್ಯವಸ್ಥೆಯಲ್ಲಿ ಒಳಗೊಂಡಿರದ ಇತರ ಪಕ್ಷಕಾರನ ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ ಅವನು ಅಥವಾ ಅವಳು, ವಿವಾಹದ ಕಾಲದಲ್ಲಿ ಭಾರತದಲ್ಲಿ ಅವರಿಬ್ಬರೂ ಅಧಿವಾಸಿಸಿದ್ದರೆ, ಆ ಮೂಲಕ ಆರ್ಜಿಸಲಾಗದಂಥ ಯಾವುವೇ ಹಕ್ಕುಗಳನ್ನು ಯಾವುದೇ ಪಕ್ಷಕಾರನು ವಿವಾಹದ ಮೂಲಕ ಆರ್ಜಿಸುವುದಿಲ್ಲ.

22. ವಿವಾಹದ ನಿರೀಕ್ಷಣೆಯಲ್ಲಿ ಅಪ್ರಾಪ್ತ ವಯಸ್ಕನ ಸ್ವತ್ತಿನ ವ್ಯವಸ್ಥೆ:- (1) ಅಪ್ರಾಪ್ತ ವಯಸ್ಕನ ಸ್ವತ್ತಿನ ಬಗ್ಗೆ, ವಿವಾಹದ ನಿರೀಕ್ಷಣೆಯಲ್ಲಿ ವ್ಯವಸ್ಥೆ ಮಾಡಬಹುದು, ಪರಂತು, ಅಪ್ರಾಪ್ತ ವಯಸ್ಕನು ತನ್ನ ತಂದೆಯ ಸಮ್ಮತಿಯೊಂದಿಗೆ ಅಥವಾ ತಂದೆಯು ಮೃತನಾಗಿದ್ದರೆ ಅಥವಾ ಭಾರತದಲ್ಲಿ ಇಲ್ಲದಿದ್ದರೆ, ಉಚ್ಚನ್ಯಾಯಾಲಯದ ಸಮ್ಮತಿಯೊಂದಿಗೆ ಆ ವ್ಯವಸ್ಥೆಯನ್ನು ಮಾಡಿರಬೇಕು.

(2) ಈ ಪ್ರಕರಣದಲ್ಲಿ ಅಥವಾ 21ನೇ ಪ್ರಕರಣದಲ್ಲಿ ಇರುವುದಾವುದೂ, 1866ರ ಜನವರಿಯ ಮೊದಲನೇ ದಿನಕ್ಕೆ ಮುಂಚೆ ಮಾಡಿದ ಯಾವುದೇ ಉಯಿಲಿಗೆ ಅಥವಾ ಮರಣ ಶಾಸನ ರಹಿತತೆಗೆ ಅಥವಾ ಯಾವನೇ ಹಿಂದೂ, ಮಹಮದೀಯ, ಬೌದ್ಧ, ಸಿಖ್ ಅಥವಾ ಜೈನನ ಸ್ವತ್ತಿನ ಮರಣ ಶಾಸನ ರಹಿತ ಅಥವಾ ಮರಣ ಶಾಸನ ಸಹಿತ ಉತ್ತರಾಧಿಕಾರಕ್ಕೆ ಅನ್ವಯವಾಗತಕ್ಕುದಲ್ಲ.

## ಭಾಗ - IV

## ರಕ್ತ ಸಂಬಂಧದ ಬಗ್ಗೆ

23. ಈ ಭಾಗದ ಅನ್ವಯ:- ಈ ಭಾಗದಲ್ಲಿರುವುದು ಯಾವುದೂ 1866ರ ಜನವರಿಯ ಮೊದಲನೇ ದಿನಕ್ಕೆ ಮುಂಚೆ ಮಾಡಿದ ಯಾವುದೇ ಉಯಿಲಿಗೆ ಅಥವಾ ಸಂಭವಿಸಿದ ಮರಣಶಾಸನರಹಿತತೆಗೆ ಅಥವಾ ಯಾವನೇ ಹಿಂದೂ, ಮಹಮದೀಯ, ಬೌದ್ಧ, ಸಿಖ್, ಜೈನ ಅಥವಾ ಪಾರ್ಸಿಯ ಸ್ವತ್ತಿನ ಮರಣ ಶಾಸನ ರಹಿತ ಅಥವಾ ಮರಣ ಶಾಸನ ಸಹಿತ ಉತ್ತರಾಧಿಕಾರಕ್ಕೆ ಅನ್ವಯಿಸತಕ್ಕುದಲ್ಲ.

24. ರಕ್ತ ಸಂಬಂಧಿ ಅಥವಾ ರಕ್ತ ಸಂಬಂಧ:- ರಕ್ತ ಸಂಬಂಧಿ ಅಥವಾ ರಕ್ತ ಸಂಬಂಧ ಎಂದರೆ ಒಂದೇ ವಂಶಮೂಲ ಅಥವಾ ಒಬ್ಬನೇ ಪೂರ್ವಜನಿಂದ ವಂಶಕ್ರಮವಾಗಿ ಬಂದ ವ್ಯಕ್ತಿಗಳ ಸಂಬಂಧ ಅಥವಾ ಬಾಂಧವ್ಯ.

25. ವಂಶಾನುಗತ ರಕ್ತ ಸಂಬಂಧ:- (1) ವಂಶಾನುಗತ ರಕ್ತ ಸಂಬಂಧ ಎಂದರೆ ಇಬ್ಬರು ವ್ಯಕ್ತಿಗಳ ನಡುವೆ, ಅವರಲ್ಲಿ ಒಬ್ಬ ವ್ಯಕ್ತಿಯು ಮತ್ತೊಬ್ಬನ ನೇರ ಪೀಳಿಗೆಯವನಿಂದ ಬಂದಿರುವ ವ್ಯಕ್ತಿ ಮತ್ತು ಅವನ ತಂದೆ, ತಾತ ಮತ್ತು ಮುತ್ತಜ್ಜ ಮತ್ತು ಹೀಗೆಯೇ ನೇರವಾಗಿ ಆರೋಹಣ ರೇಖೆಯಲ್ಲಿ ಬರುವವರು, ಅಥವಾ ಒಬ್ಬ ವ್ಯಕ್ತಿ, ಅವನ ಮಗ, ಮೊಮ್ಮಗ, ಮರಿಮಗ ಮತ್ತು ಹಾಗೆಯೇ ನೇರವಾದ ಅವರೋಹಣ ರೇಖೆಯಲ್ಲಿ ಇಳಿಯುತ್ತ ಬಂದಿರುವವರು.

(2) ಪ್ರತಿಯೊಂದು ಪೀಳಿಗೆಯೂ ಆರೋಹಣ ಇಲ್ಲವೇ ಅವರೋಹಣ ಶ್ರೇಣಿಯನ್ನು ಒಳಗೊಳ್ಳುತ್ತದೆ.

(3) ಒಬ್ಬ ವ್ಯಕ್ತಿಯ ತಂದೆ ಅವನಿಗೆ ಮೊದಲನೇ ಶ್ರೇಣಿಯಲ್ಲಿ ಸಂಬಂಧಿಯಾಗಿರುತ್ತಾನೆ ಮತ್ತು ಅದೇ ರೀತಿಯಲ್ಲಿ ಅವನ ಮಗನೂ ಸಂಬಂಧಿಯಾಗಿರುತ್ತಾನೆ; ಅವನ ತಾತ ಮೊಮ್ಮಗ ಎರಡನೇ ಶ್ರೇಣಿಯಲ್ಲಿ, ಅವನ ಮುತ್ತಜ್ಜ ಮತ್ತು ಮರಿಮಗ ಮೂರನೇ ಶ್ರೇಣಿಯಲ್ಲಿ ಬರುತ್ತಾರೆ ಮತ್ತು ಹಾಗೆಯೇ ಮುಂದುವರಿಯುತ್ತದೆ.

26. ಪಾರ್ಶ್ವಿಕ ರಕ್ತ ಸಂಬಂಧ:- (1) ಪಾರ್ಶ್ವಿಕ ರಕ್ತ ಸಂಬಂಧವು, ಒಂದೇ ವಂಶ ಮೂಲದಿಂದ ಅಥವಾ ಪೂರ್ವಜನಿಂದ ವಂಶಕ್ರಮವಾಗಿ ಬಂದ ಇಬ್ಬರು ವ್ಯಕ್ತಿಗಳ ನಡುವೆ ಅಸ್ತಿತ್ವದಲ್ಲಿರತಕ್ಕುದು. ಆದರೆ ಅವರಲ್ಲಿ ಯಾರೊಬ್ಬರೂ ಇನ್ನೊಬ್ಬರ ಪೀಳಿಗೆಯಿಂದ ಬಂದವರಾಗಿರಬಾರದು.

(2) ಮೃತ ವ್ಯಕ್ತಿಗೆ ಯಾವನೇ ಪಾರ್ಶ್ವಿಕ ಸಂಬಂಧಿಯು ಯಾವ ಶ್ರೇಣಿಯ ಬಂಧುವಾಗುತ್ತಾನೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಮೃತ ವ್ಯಕ್ತಿಯಿಂದ ಸಾಮಾನ್ಯ ಪೂರ್ವಜನವರೆಗೆ ಮೇಲುಗಡೆಗೆ ಮತ್ತು ನಂತರ ಪಾರ್ಶ್ವಿಕ ಬಂಧುವಿನವರೆಗೆ ಕೆಳಗಡೆಗೆ ಪ್ರತಿಯೊಬ್ಬ ವ್ಯಕ್ತಿಗೆ ಆರೋಹಣ ಮತ್ತು ಅವರೋಹಣ ಶ್ರೇಣಿಯನ್ನು ಕೊಟ್ಟು ಲೆಕ್ಕ ಹಾಕುವುದು ಅವಶ್ಯಕ.

27. ಉತ್ತರಾಧಿಕಾರದ ಉದ್ದೇಶಕ್ಕಾಗಿ ವ್ಯಕ್ತಿಗಳು ಮೃತ ವ್ಯಕ್ತಿಗೆ ಒಂದೇ ರೀತಿಯಲ್ಲಿ ಸಂಬಂಧಿಸಿದವರೆಂದು ಪರಿಗಣಿಸುವುದು:- ಉತ್ತರಾಧಿಕಾರದ ಉದ್ದೇಶಕ್ಕಾಗಿ,-

(ಎ) ಮೃತ ವ್ಯಕ್ತಿಗೆ ಅವನ ತಂದೆಯ ಮೂಲಕ ಸಂಬಂಧಿಗಳಾಗಿರುವವರ ಮತ್ತು ಅವನ ತಾಯಿಯ ಮೂಲಕ ಅವನಿಗೆ ಸಂಬಂಧಿಗಳಾಗಿರುವವರ ನಡುವೆ; ಅಥವಾ

(ಬಿ) ಮೃತ ವ್ಯಕ್ತಿಗೆ ಪೂರ್ಣ ರಕ್ತ ಸಂಬಂಧದ ಮೂಲಕ ಸಂಬಂಧಿಗಳಾಗಿರುವವರ ಮತ್ತು ಅರ್ಧ ರಕ್ತದ ಮೂಲಕ ಅವನಿಗೆ ಸಂಬಂಧಿಗಳಾಗಿರುವವರ ನಡುವೆ; ಅಥವಾ

(ಸಿ) ಮೃತ ವ್ಯಕ್ತಿಯ ಜೀವಿತ ಕಾಲದಲ್ಲಿ ಹುಟ್ಟಿದವರ ಮತ್ತು ಅವನ ಮರಣದ ಕಾಲದಲ್ಲಿ ಗರ್ಭಸ್ಥರಾಗಿದ್ದು ತರುವಾಯ ಜೀವಂತವಾಗಿ ಹುಟ್ಟಿದವರ ನಡುವೆ

- ಯಾವುದೇ ಭೇದವಿಲ್ಲ.

28. ರಕ್ತ ಸಂಬಂಧಿಯ ಶ್ರೇಣಿಗಳನ್ನು ಲೆಕ್ಕ ಹಾಕುವ ವಿಧಾನ:- ರಕ್ತ ಸಂಬಂಧಿಯ ಶ್ರೇಣಿಗಳನ್ನು 1ನೇ ಅನುಸೂಚಿಯಲ್ಲಿ ವಿವರಿಸಲಾದ ರಕ್ತ ಸಂಬಂಧದ ಕೋಷ್ಟಕದಲ್ಲಿ ನಿರೂಪಿಸಿದ ರೀತಿಯಲ್ಲಿ ಲೆಕ್ಕ ಹಾಕಲಾಗುತ್ತದೆ.

ದೃಷ್ಟಾಂತಗಳು

(i) ಯಾರ ಬಂಧುಗಳನ್ನು ಲೆಕ್ಕ ಹಾಕಬೇಕಾಗಿದೆಯೋ ಆ ವ್ಯಕ್ತಿ ಮತ್ತು ಅವನ ಸಮೀಪ ದಾಯಾದಿ ಅಥವಾ ಮೊದಲನೇ ದಾಯಾದಿ-ಇವರು ಕೋಷ್ಟಕದಲ್ಲಿ ತೋರಿಸಿದಂತೆ ನಾಲ್ಕನೇ ಶ್ರೇಣಿಯಲ್ಲಿ ಬಂಧುಗಳಾಗುತ್ತಾರೆ. ತಂದೆಗೆ ಒಂದು ಆರೋಹಣ ಶ್ರೇಣಿಯವನಾಗಿರುತ್ತಾನೆ ಮತ್ತು ಇನ್ನೊಂದು ಒಬ್ಬನೇ ಪೂರ್ವಜ ತಾತನಿಗೆ ಮತ್ತು ಅವನಿಂದ ವಂಶಾನುಕ್ರಮವಾಗಿ ಬಂದ ಚಿಕ್ಕಪ್ಪನಿಗೆ ಮತ್ತು ಇನ್ನೊಂದು ಸಮೀಪ ದಾಯಾದಿಗೆ-ಇವೆಲ್ಲವೂ ನಾಲ್ಕು ಶ್ರೇಣಿಗಳಾಗುತ್ತವೆ.

(ii) ಸಹೋದರನ ಮೊಮ್ಮಗ ಮತ್ತು ಚಿಕ್ಕಪ್ಪನ ಮಗ ಅಂದರೆ ಮರಿ ಸೋದರ ಮಗ ಮತ್ತು ಸಮೀಪ ದಾಯಾದಿ ನಾಲ್ಕು ಶ್ರೇಣಿಗಳಷ್ಟು ದೂರದವರಾದುದರಿಂದ ಸಮನಾದ ಶ್ರೇಣಿಯಲ್ಲಿರುತ್ತಾರೆ.

(iii) ಸಮೀಪ ದಾಯಾದಿಯ ಮೊಮ್ಮಗ ಮತ್ತು ಮುತ್ತ ಚಿಕ್ಕಜ್ಜನ ಮೊಮ್ಮಗ ಇಬ್ಬರು ಒಂದೇ ಶ್ರೇಣಿಯವರಾಗುತ್ತಾರೆ. ಏಕೆಂದರೆ ಇಬ್ಬರೂ ರಕ್ತ ಸಂಬಂಧಿಯಾದ ಆರನೇ ಶ್ರೇಣಿಯಲ್ಲಿ ಇರುತ್ತಾರೆ.

## ಭಾಗ - V

## ಮರಣಶಾಸನರಹಿತ ಉತ್ತರಾಧಿಕಾರ

### ಅಧ್ಯಾಯ - I

### ಪ್ರಾರಂಭಿಕ

29. ಈ ಭಾಗದ ಅನ್ವಯ:- (1) ಈ ಭಾಗವು 1866ರ ಜನವರಿಯ ಮೊದಲನೇ ದಿನಕ್ಕೆ ಮುಂಚೆ ಸಂಭವಿಸಿದ ಯಾವುದೇ ಮರಣ ಶಾಸನ ರಹಿತತೆಗೆ ಅಥವಾ ಯಾವನೇ ಹಿಂದೂ, ಮಹಮದೀಯ, ಬೌದ್ಧ, ಸಿಖ್ ಅಥವಾ ಜೈನರ ಸ್ವತ್ತಿಗೆ ಅನ್ವಯಿಸತಕ್ಕುದಲ್ಲ.

(2) (1)ನೇ ಉಪಪ್ರಕರಣದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಉಪಬಂಧಿಸಿರುವಂತೆ ಹೊರತು, ಈ ಭಾಗದ ಉಪಬಂಧಗಳು, ಮರಣಶಾಸನರಹಿತತೆಯ ಎಲ್ಲ ಪ್ರಕರಣಗಳಲ್ಲಿ ಭಾರತದ ಕಾನೂನಾಗಿರತಕ್ಕುದು.

30. ಮೃತನು ಯಾವ ಸ್ವತ್ತಿನ ಬಗ್ಗೆ ಮರಣಶಾಸನರಹಿತವಾಗಿ ಮರಣ ಹೊಂದಿದ್ದಾನೆ ಎಂದು ಪರಿಗಣಿಸುವುದು:- ಒಬ್ಬ ವ್ಯಕ್ತಿಯು, ತನ್ನ ಯಾವ ಸ್ವತ್ತಿಗೆ ಸಂಬಂಧಿಸಿ ಪರಿಣಾಮಕಾರಿಯಾಗತಕ್ಕ ಮರಣಶಾಸನ ಸಹಿತ ವಿಲೇಯನ್ನು ಅವನು ಮಾಡಿಲ್ಲವೋ ಆ ಎಲ್ಲ ಸ್ವತ್ತಿಗೆ ಸಂಬಂಧಿಸಿದಂತೆ, ಅವನು ಮರಣ ಶಾಸನ ರಹಿತವಾಗಿ ಮರಣ ಹೊಂದಿದ್ದಾನೆ ಎಂದು ಭಾವಿಸತಕ್ಕುದು.

ದೃಷ್ಟಾಂತಗಳು

(i) 'ಎ' ನು ಯಾವ ಉಯಿಲನ್ನೂ ಮಾಡಿಲ್ಲ. ಅವನು ತನ್ನ ಎಲ್ಲಾ ಸ್ವತ್ತಿನ ಸಂಬಂಧದಲ್ಲಿ ಮರಣಶಾಸನರಹಿತನಾಗಿ ಮೃತನಾಗಿದ್ದಾನೆ.

(ii) 'ಎ' ನು ಉಯಿಲನ್ನು ಮಾಡಿದ್ದಾನೆ, ಅದರ ಮೂಲಕ ಅವನು 'ಬಿ' ನನ್ನು ತನ್ನ ನಿರ್ವಾಹಕನನ್ನಾಗಿ ನೇಮಿಸಿರುತ್ತಾನೆ; ಆದರೆ ಆ ಉಯಿಲು ಯಾವುದೇ ಇತರ ಉಪಬಂಧವನ್ನು ಒಳಗೊಂಡಿರುವುದಿಲ್ಲ 'ಎ' ನು ತನ್ನ ಸ್ವತ್ತಿನ ವಿತರಣೆಯ ಸಂಬಂಧದಲ್ಲಿ ಮರಣಶಾಸನರಹಿತನಾಗಿ ಮೃತನಾಗಿರುತ್ತಾನೆ.

(iii) 'ಎ' ನು ತನ್ನ ಸಂಪೂರ್ಣ ಸ್ವತ್ತನ್ನು ಕಾನೂನು ಬಾಹಿರ ಉದ್ದೇಶಕ್ಕಾಗಿ ಮರಣಶಾಸನದ ಮೂಲಕ ಕೊಟ್ಟಿರುತ್ತಾನೆ.'ಎ' ನು ತನ್ನ ಸ್ವತ್ತಿನ ವಿತರಣೆಯ ಸಂಬಂಧದಲ್ಲಿ ಮರಣಶಾಸನರಹಿತನಾಗಿ ಮೃತನಾಗಿದ್ದಾನೆ.

(iv) 'ಎ' ನು 1,000 ರೂಪಾಯಿಗಳನ್ನು 'ಬಿ' ನಿಗೆ ಮತ್ತು 1,000 ರೂಪಾಯಿಗಳನ್ನು "ಸಿ" ನ ಹಿರಿಯ ಮಗನಿಗೆ ಮರಣಶಾಸನ ದಾನದ ಮೂಲಕ ಕೊಟ್ಟಿರುತ್ತಾನೆ. ಮತ್ತು ಯಾವುದೇ ಇತರ ಮರಣ ಶಾಸನವನ್ನು ಮಾಡಿರುವುದಿಲ್ಲ; ಮತ್ತು ಅವನು 2,000 ರೂಪಾಯಿ ಮೊತ್ತವನ್ನು ಬಿಟ್ಟು ಹೋಗಿದ್ದಾನೆ. ಬೇರಾವ ಆಸ್ತಿಯನ್ನು ಬಿಟ್ಟು ಹೋಗಿಲ್ಲ. "ಸಿ" ನು ಯಾವ ಗಂಡು ಮಗುವೂ ಇಲ್ಲದೆ 'ಎ' ನಿಗಿಂತ ಮುಂಚೆಯೇ ಮರಣ ಹೊಂದುತ್ತಾನೆ. 'ಎ'ನು 1,000 ರೂಪಾಯಿ ವಿತರಣೆಯ ಸಂಬಂಧದಲ್ಲಿ ಮರಣಶಾಸನರಹಿತನಾಗಿ ಮರಣ ಹೊಂದಿದ್ದಾನೆ.

## ಅಧ್ಯಾಯ - II

### ಪಾರ್ಸಿಗಳಲ್ಲದ ಮರಣಶಾಸನರಹಿತರ ಸಂದರ್ಭಗಳಲ್ಲಿ ನಿಯಮಗಳು

31. ಈ ಅಧ್ಯಾಯವು ಪಾರ್ಸಿಗಳಿಗೆ ಅನ್ವಯಿಸತಕ್ಕುದಲ್ಲ:- ಈ ಅಧ್ಯಾಯದಲ್ಲಿರುವುದಾವುದೂ ಪಾರ್ಸಿಗಳಿಗೆ ಅನ್ವಯಿಸತಕ್ಕುದಲ್ಲ.

32. ಅಂಥ ಸ್ವತ್ತಿನ ಪ್ರಾಪ್ತಿ:- ಮರಣಶಾಸನರಹಿತ ಸ್ವತ್ತು, ಮೃತನ ಹೆಂಡತಿಗೆ ಅಥವಾ ಗಂಡನಿಗೆ ಅಥವಾ ಮೃತನ ರಕ್ತ ಸಂಬಂಧಿಗಳಿಗೆ, ಈ ಅಧ್ಯಾಯದಲ್ಲಿ ಇನ್ನು ಮುಂದೆ ಅಡಕವಾಗಿರುವ ನಿಯಮಗಳ ಕ್ರಮದಲ್ಲಿ ಮತ್ತು ಅದಕ್ಕನುಸಾರವಾಗಿ ಪ್ರಾಪ್ತವಾಗತಕ್ಕುದು.

33. ಮರಣಶಾಸನರಹಿತನು ವಿಧವೆ ಮತ್ತು ಪಿತೃವಂಶಜರನ್ನು ಅಥವಾ ವಿಧವೆ ಮತ್ತು ರಕ್ತ ಸಂಬಂಧಿಯನ್ನು ಮಾತ್ರ ಅಥವಾ ರಕ್ತ ಸಂಬಂಧಿಯಿಲ್ಲದೆ ವಿಧವೆಯನ್ನು ಮಾತ್ರ ಬಿಟ್ಟು ಹೋಗಿರುವ ಸಂದರ್ಭ:- ಮರಣ ಶಾಸನ ರಹಿತನು ಒಬ್ಬ ವಿಧವೆಯನ್ನು ಬಿಟ್ಟು ಹೋಗಿರುವಲ್ಲಿ,-

(ಎ) ಅವನು ಯಾರೇ ಪಿತೃವಂಶಜರನ್ನು ಸಹ ಬಿಟ್ಟು ಹೋಗಿದ್ದರೆ, ಅವನ ಸ್ವತ್ತಿನ ಮೂರನೇ ಒಂದು ಭಾಗವು ಅವನ ವಿಧವೆಗೆ ಸೇರತಕ್ಕುದು ಮತ್ತು ಉಳಿದ ಮೂರನೇ ಎರಡು ಭಾಗವು, ಇದರಲ್ಲಿ ಇನ್ನು ಮುಂದೆ ಅಡಕಗೊಂಡ ನಿಯಮಗಳಿಗನುಸಾರವಾಗಿ ಅವನ ಪಿತೃವಂಶಜರಿಗೆ ಹೋಗತಕ್ಕುದು.

(ಬಿ) 33ಎ ಪ್ರಕರಣದ ಮೂಲಕ ಉಪಬಂಧಿಸಿರುವ ಹೊರತು, ಅವನು ಯಾರೇ ಪಿತೃವಂಶಜರನ್ನೂ ಬಿಟ್ಟು ಹೋಗಿರದಿದ್ದರೆ ಆದರೆ ಅವನಿಗೆ ರಕ್ತ ಸಂಬಂಧಿಗಳಾಗಿರುವ ವ್ಯಕ್ತಿಗಳನ್ನು ಬಿಟ್ಟುಹೋಗಿದ್ದರೆ ಅವನ ಸ್ವತ್ತಿನ ಅರ್ಧಭಾಗ ಅವನ ವಿಧವೆಗೆ ಸೇರತಕ್ಕುದು ಮತ್ತು ಉಳಿದ ಅರ್ಧ ಭಾಗವು ಅವನಿಗೆ ರಕ್ತ ಸಂಬಂಧಿಗಳಾಗಿರುವವರಿಗೆ ಇದರಲ್ಲಿ ಇನ್ನು ಮುಂದೆ ಅಡಕವಾಗಿರುವ ನಿಯಮಗಳ ಕ್ರಮದಲ್ಲಿ ಮತ್ತು ಅನುಸಾರವಾಗಿ ಹೋಗತಕ್ಕುದು.

(ಸಿ) ಅವನಿಗೆ ರಕ್ತ ಸಂಬಂಧಿಗಳಾದ ಯಾರನ್ನೂ ಅವನು ಬಿಟ್ಟುಹೋಗಿರದಿದ್ದರೆ, ಅವನ ಸಂಪೂರ್ಣ ಸ್ವತ್ತು ಅವನ ವಿಧವೆಗೆ ಸೇರತಕ್ಕುದು.

33ಎ. ಮರಣ ಶಾಸನ ರಹಿತನು, ಪಿತೃವಂಶಜರು ಯಾರೂ ಇಲ್ಲದೆ ವಿಧವೆಯನ್ನು ಮಾತ್ರ ಬಿಟ್ಟು ಹೋಗಿರುವ ಸಂದರ್ಭದಲ್ಲಿ ವಿಶೇಷ ಉಪಬಂಧ:- (1) ಮರಣ ಶಾಸನ ರಹಿತನು ಪಿತೃವಂಶಜರು ಯಾರೂ ಇಲ್ಲದೆ ವಿಧವೆಯನ್ನು ಮಾತ್ರ ಬಿಟ್ಟುಹೋಗಿರುವಲ್ಲಿ ಮತ್ತು ಅವನ ಸ್ವತ್ತಿನ ನಿವ್ವಳ ಮೌಲ್ಯವು ಐದು ಸಾವಿರ ರೂಪಾಯಿಗಳನ್ನು ಮೀರದಿರುವಲ್ಲಿ, ಅವನ ಸಂಪೂರ್ಣ ಸ್ವತ್ತು ಅವನ ವಿಧವೆಗೆ ಸೇರತಕ್ಕುದು.

(2) ಸ್ವತ್ತಿನ ನಿವ್ವಳ ಮೌಲ್ಯವು ಐದು ಸಾವಿರ ರೂಪಾಯಿಗಳ ಮೊತ್ತವನ್ನು ಮೀರುವಲ್ಲಿ, ವಿಧವೆಯು ಅದರ ಐದು ಸಾವಿರ ರೂಪಾಯಿಗಳಿಗೆ ಹಕ್ಕುಳ್ಳವಳಾಗಿರತಕ್ಕುದು, ಮತ್ತು ಅದರ ಮೇಲಿನ ಬಡ್ಡಿಯೊಂದಿಗೆ ಅಂಥ ಸಂಪೂರ್ಣ ಸ್ವತ್ತಿನ ಮೇಲೆ ಮರಣ ಶಾಸನರಹಿತನ ಮರಣದ ದಿನಾಂಕದಿಂದ ಹಣ ಸಂದಾಯದವರೆಗೆ ವಾರ್ಷಿಕ ಶೇಕಡ 4ರ ಬಡ್ಡಿಯೊಂದಿಗೆ ಐದು ಸಾವಿರ ರೂಪಾಯಿಗಳ ಸದರಿ ಅಂಥ ಮೊತ್ತಕ್ಕಾಗಿ ಋಣಭಾರವನ್ನು ಹೊಂದಿರತಕ್ಕುದು.

(3) ಈ ಪ್ರಕರಣದ ಮೂಲಕ ವಿಧವೆಗಾಗಿ ಮಾಡಿದ ಉಪಬಂಧವು, ಹಿಂದೆ ಹೇಳಿದಂತೆ ಬಡ್ಡಿಯೊಂದಿಗೆ ಐದು ಸಾವಿರ ರೂಪಾಯಿಗಳ ಸದರಿ ಮೊತ್ತದ ಸಂದಾಯದ ತರುವಾಯ ಉಳಿಯುವ ಅಂಥ ಮರಣ ಶಾಸನರಹಿತನ ಸಂಪದದ ಉಳಿಕೆಯಲ್ಲಿನ ಅವಳ ಹಿತಾಸಕ್ತಿಗೆ ಮತ್ತು ಪಾಲಿಗೆ ಹೆಚ್ಚಿಗೆಯಾಗಿರತಕ್ಕುದು ಮತ್ತು ಅದಕ್ಕೆ ಬಾಧಕವಾಗದಂತೆ ಇರತಕ್ಕುದು. ಮತ್ತು ಅಂತಹ ಉಳಿಕೆಯನ್ನು 33ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ, ಅದು ಅಂತಹ ಮರಣಶಾಸನರಹಿತನ ಸಂಪೂರ್ಣ ಸ್ವತ್ತಾಗಿದ್ದರೆ ಹೇಗೋ ಹಾಗೆ ಹಂಚಿಕೆ ಮಾಡತಕ್ಕುದು.

(4) ಸ್ವತ್ತಿನ ನಿವ್ವಳ ಮೌಲ್ಯವನ್ನು, ಅದರ ಒಟ್ಟು ಮೌಲ್ಯದಿಂದ ಎಲ್ಲ ಋಣಗಳು ಮತ್ತು ಮರಣಶಾಸನರಹಿತನ ಉತ್ತರಕ್ರಿಯೆ ಹಾಗೂ ಎಲ್ಲ ಆಡಳಿತ ವೆಚ್ಚಗಳು ಮತ್ತು ಆ ಸ್ವತ್ತು ಒಳಪಟ್ಟಿರುವಂಥ ಎಲ್ಲ ಇತರ ಕಾನೂನು ಸಮ್ಮತ ಹೊಣೆಗಾರಿಕೆಗಳು ಮತ್ತು ಋಣಭಾರಗಳನ್ನು ಕಳೆಯುವ ಮೂಲಕ ನಿರ್ಧರಿಸತಕ್ಕುದು.

(5) ಈ ಪ್ರಕರಣವು,-

(ಎ) (i) ಯಾವನೇ ಭಾರತೀಯ ಕ್ರೈಸ್ತನ;

(ii) ಅವನ ಮರಣ ಕಾಲದಲ್ಲಿ ಭಾರತೀಯ ಕ್ರೈಸ್ತನಾಗಿರುವ ಅಥವಾ ಆಗಿದ್ದ ಯಾವನೇ ಗಂಡಸಿನ ಯಾವುದೇ ಮಗು ಅಥವಾ ಮೊಮ್ಮಗುವಿನ; ಅಥವಾ

(iii) ವಿಶೇಷ ವಿವಾಹ ಅಧಿನಿಯಮ, 1872ರ (1872ರ 3) 24ನೇ ಪ್ರಕರಣದ ಮೇರೆಗೆ ಹಿಂದೂ, ಬೌದ್ಧ, ಸಿಖ್ ಅಥವಾ ಜೈನ ಧರ್ಮವನ್ನು ಆಚರಿಸುತ್ತಿರುವ ಯಾರ ಸ್ವತ್ತಿಗೆ ಉತ್ತರಾಧಿಕಾರವು, ಈ ಅಧಿನಿಯಮದ ಉಪಬಂಧಗಳ ಮೂಲಕ ವಿನಿಯಮಿತವಾಗುವುದೋ ಆ ವ್ಯಕ್ತಿಯ ಸ್ವತ್ತಿಗೆ;

(ಬಿ) ಮೃತನು ತನ್ನ ಎಲ್ಲಾ ಸ್ವತ್ತಿನ ಬಗ್ಗೆ ಮರಣಶಾಸನರಹಿತನಾಗಿ ಮರಣಹೊಂದಿದ್ದ ಹೊರತು

-ಅನ್ವಯವಾಗತಕ್ಕದ್ದಲ್ಲ.

34. ಮರಣಶಾಸನರಹಿತನು ಯಾವ ವಿಧವೆಯನ್ನೂ ಬಿಟ್ಟು ಹೋಗಿಲ್ಲದ ಸಂದರ್ಭ ಮತ್ತು ಯಾವ ರಕ್ತ ಸಂಬಂಧಿಯನ್ನೂ ಬಿಟ್ಟುಹೋಗಿಲ್ಲದ ಸಂದರ್ಭ:- ಮರಣ ಶಾಸನ ರಹಿತನು ತನ್ನ ವಿಧವೆಯನ್ನು ಬಿಟ್ಟು ಹೋಗಿಲ್ಲದ ಸಂದರ್ಭದಲ್ಲಿ ಅವನ ಸ್ವತ್ತು ಅವನ ಪಿತೃವಂಶಜರಿಗೆ ಅಥವಾ ಪಿತೃವಂಶಜರಾಗಿರದ ಅವನ ರಕ್ತ ಸಂಬಂಧಿಗಳಿಗೆ, ಇದರಲ್ಲಿ ಇನ್ನು ಮುಂದೆ ಅಡಕವಾಗಿರುವ ನಿಯಮಗಳಿಗೆ ಅನುಸಾರವಾಗಿ ಹೋಗತಕ್ಕುದು ಮತ್ತು ಅವನು ರಕ್ತ ಸಂಬಂಧಿಗಳಾರನ್ನೂ ಬಿಟ್ಟುಹೋಗಿಲ್ಲದ ಸಂದರ್ಭದಲ್ಲಿ, ಅದು ಸರ್ಕಾರಕ್ಕೆ ಹೋಗತಕ್ಕುದು.

35. ವಿಧುರನ ಹಕ್ಕುಗಳು:- ಹೆಂಡತಿಯು ಮರಣಶಾಸನರಹಿತಳಾಗಿ ಮರಣ ಹೊಂದಿದ್ದರೆ ಉತ್ತರಜೀವಿಯಾದ ಅವಳ ಗಂಡನು, ಅವಳ ಸ್ವತ್ತಿಗೆ ಸಂಬಂಧಿಸಿದಂತೆ, ಒಬ್ಬ ವಿಧವೆಯು ತನ್ನ ಗಂಡನ ಸ್ವತ್ತಿಗೆ, ಅವನು ಮರಣಶಾಸನರಹಿತನಾಗಿ ಮೃತನಾಗಿದ್ದರೆ ಹೊಂದಿರುವಂಥವೇ ಹಕ್ಕುಗಳನ್ನು ಹೊಂದಿರುತ್ತಾನೆ.

ಪಿತೃವಂಶಜರಿರುವಲ್ಲಿ ವಿತರಣೆ

36. ವಿತರಣಾ ನಿಯಮಗಳು:- ಮರಣಶಾಸನರಹಿತನ ಸ್ವತ್ತನ್ನು (ಅವನು ತನ್ನ ವಿಧವೆಯನ್ನು ಬಿಟ್ಟು ಹೋಗಿರುವಲ್ಲಿ, ವಿಧವೆಯ ಪಾಲನ್ನು ಕಳೆದ ನಂತರ) ಅವನ ಪಿತೃವಂಶಜರೊಳಗೆ ವಿತರಣೆ ಮಾಡುವ ನಿಯಮಗಳು, 37 ರಿಂದ 40ನೇ ಪ್ರಕರಣಗಳಲ್ಲಿ ಅಡಕಗೊಂಡ ನಿಯಮಗಳಾಗಿರತಕ್ಕುದು.

37. ಮರಣಶಾಸನರಹಿತನು ಮಗು ಅಥವಾ ಮಕ್ಕಳನ್ನು ಮಾತ್ರ ಬಿಟ್ಟುಹೋಗಿರುವಲ್ಲಿ:- ಮರಣಶಾಸನರಹಿತನು ತನ್ನ ಉತ್ತರ ಜೀವಿಯಾಗಿ ಮಗು ಅಥವಾ ಮಕ್ಕಳನ್ನು ಬಿಟ್ಟುಹೋಗಿರುವಲ್ಲಿ, ಆದರೆ, ಮೃತ ಮಗುವಿನ ಮೂಲಕ ದೂರದ ಪಿತೃವಂಶಜರಾರೂ ಇಲ್ಲದಿರುವಲ್ಲಿ ಆ ಸ್ವತ್ತನ್ನು, ಉತ್ತರ ಜೀವಿಯಾದ ಮಗುವು, ಒಂದೇ ಇದ್ದರೆ, ಅದಕ್ಕೆ ಸೇರತಕ್ಕುದು ಅಥವಾ ಉತ್ತರ ಜೀವಿಯಾಗಿರುವ ಅವನ ಎಲ್ಲಾ ಮಕ್ಕಳಲ್ಲಿ ಸಮನಾಗಿ ಹಂಚಿಕೆಯಾಗತಕ್ಕುದು.

38 ಮರಣಶಾಸನರಹಿತನು ಯಾವುದೇ ಮಗುವನ್ನು ಬಿಟ್ಟು ಹೋಗದೆ ಮೊಮ್ಮಗು ಅಥವಾ ಮೊಮ್ಮಕ್ಕಳನ್ನು ಬಿಟ್ಟು ಹೋಗಿರುವಲ್ಲಿ:- ಮರಣಶಾಸನರಹಿತನು ತನ್ನ ಉತ್ತರ ಜೀವಿಯಾಗಿ ಯಾವುದೇ ಮಗುವನ್ನು ಬಿಟ್ಟುಹೋಗದೆ, ಮೊಮ್ಮಗನನ್ನು ಅಥವಾ ಮೊಮ್ಮಕ್ಕಳನ್ನು ಮಾತ್ರ ಬಿಟ್ಟುಹೋಗಿರುವಲ್ಲಿ, ಮತ್ತು ಮೃತ ಮೊಮ್ಮಗನ ಮೂಲಕ ಯಾರೇ ದೂರದ ವಂಶಜರು ಇಲ್ಲದಿರುವಲ್ಲಿ, ಸ್ವತ್ತು ಉತ್ತರಜೀವಿಯಾದ ಮೊಮ್ಮಗು ಒಂದೇ ಇದ್ದರೆ, ಅದಕ್ಕೆ ಸೇರತಕ್ಕುದು ಅಥವಾ ಅವನ ಎಲ್ಲಾ ಉತ್ತರಜೀವಿ ಮೊಮ್ಮಕ್ಕಳಲ್ಲಿ ಸಮನಾಗಿ ಹಂಚಿಕೆಯಾಗತಕ್ಕುದು.

ದೃಷ್ಟಾಂತಗಳು

(i) "ಎ" ನಿಗೆ ಜಾನ್, ಮೇರಿ ಮತ್ತು ಹೆನ್ರಿ ಎಂಬ ಮೂರು ಮಕ್ಕಳಿದ್ದಾರೆ, ಮತ್ತು ಇನ್ನಾರೂ ಇಲ್ಲ, ಅವರೆಲ್ಲಾ ತಂದೆಗಿಂತ ಮೊದಲೇ-ಜಾನ್ ಎರಡು ಮಕ್ಕಳನ್ನೂ, ಮೇರಿ ಮೂವರನ್ನು ಮತ್ತು ಹೆನ್ರಿ ನಾಲ್ವರನ್ನು ಬಿಟ್ಟು ಮರಣ ಹೊಂದುತ್ತಾರೆ ಆ ತರುವಾಯ 'ಎ' ನು ಮರಣಶಾಸನ ರಹಿತನಾಗಿ, ಆ ಒಂಬತ್ತು ಮೊಮ್ಮಕ್ಕಳನ್ನು ಬಿಟ್ಟು ಮತ್ತು ಮೃತ ಮೊಮ್ಮಗುವಿನ ವಂಶಜರಾರೂ ಇಲ್ಲದೆ ಮರಣಹೊಂದುತ್ತಾನೆ. ಅವನ ಪ್ರತಿಯೊಬ್ಬ ಮೊಮ್ಮಕ್ಕಳು ಒಂಬತ್ತನೇ ಒಂದು ಭಾಗವನ್ನು ಪಡೆಯುತ್ತಾರೆ.

(ii) ಆದರೆ ಹೆನ್ರಿ ಯಾವ ಮಕ್ಕಳನ್ನೂ ಬಿಡದೆ ಮರಣ ಹೊಂದಿದ್ದರೆ, ಆಗ ಸಂಪೂರ್ಣ ಸ್ವತ್ತನ್ನು ಜಾನ್ ಮತ್ತು ಮೇರಿಯವರ ಮಕ್ಕಳು ಎಂದರೆ ಮರಣಶಾಸನ ರಹಿತನ ಐದು ಮೊಮ್ಮಕ್ಕಳ ನಡುವೆ ಸಮನಾಗಿ ಹಂಚಬೇಕಾಗುತ್ತದೆ.

39. ಮರಣಶಾಸನರಹಿತನು ಮರಿ ಮೊಮ್ಮಕ್ಕಳನ್ನು ಅಥವಾ ದೂರದ ಪಿತೃವಂಶಜರನ್ನು ಮಾತ್ರ ಬಿಟ್ಟು ಹೋಗಿರುವಲ್ಲಿ:- ಅದೇ ರೀತಿಯಲ್ಲಿ, ಪಿತೃವಂಶಜರ ಉತ್ತರ ಜೀವಿಗಳೆಲ್ಲರೂ, ಮರಣಶಾಸನರಹಿತನಿಗೆ ಮರಿ ಮೊಮ್ಮಕ್ಕಳ ಶ್ರೇಣಿಯಲ್ಲಿ ಅಥವಾ ಇನ್ನೂ ಹೆಚ್ಚಿನ ದೂರದ ಶ್ರೇಣಿಯಲ್ಲಿರುವ ಸಂದರ್ಭದಲ್ಲಿ ಮರಣ ಶಾಸನ ರಹಿತನಿಗೆ ಅತಿ ಹತ್ತಿರದವರಿಗೆ ಶ್ರೇಣಿಯಲ್ಲಿರುವವರಿಗೆ ಆ ಸ್ವತ್ತು ಹೋಗತಕ್ಕುದು.

40. ಮರಣಶಾಸನರಹಿತನು ಎಲ್ಲರೂ ಒಂದೇ ಶ್ರೇಣಿಯ ರಕ್ತ ಸಂಬಂಧಿಗಳಾಗಿರದ ಪಿತೃವಂಶಜರನ್ನು ಬಿಟ್ಟು ಹೋಗಿರುವಲ್ಲಿ ಮತ್ತು ಯಾರ ಮೂಲಕ ಹೆಚ್ಚು ದೂರದ ವಂಶಜರು ಬಂದಿದ್ದಾರೋ ಅವರು ಮೃತರಾಗಿರುವಲ್ಲಿ:- (1) ಮರಣಶಾಸನರಹಿತನು ತನಗೆ ಒಂದೇ ಶ್ರೇಣಿಯಲ್ಲಿ ರಕ್ತ ಸಂಬಂಧಿಗಳಾಗಿರದ ಪಿತೃವಂಶಜರನ್ನು ಬಿಟ್ಟು ಹೋಗಿದ್ದರೆ ಮತ್ತು ಯಾವ ವ್ಯಕ್ತಿಗಳ ಮೂಲಕ ಅವನಿಗೆ ಹೆಚ್ಚು ದೂರದ ಪಿತೃವಂಶಜರು ಬಂದಿರುತ್ತಾರೋ ಆ ವ್ಯಕ್ತಿಗಳು ಮರಣ ಹೊಂದಿದ್ದರೆ, ಮರಣಶಾಸನ ರಹಿತನ ಮರಣ ಕಾಲದಲ್ಲಿ ಅವನಿಗೆ ರಕ್ತ ಸಂಬಂಧಿಗಳ ಅತಿ ಹತ್ತಿರದ ಶ್ರೇಣಿಯಲ್ಲಿರುವ ಅಥವಾ ಅವನಿಗೆ ರಕ್ತ ಸಂಬಂಧಿಯಾಗಿ ಅದೇ ಶ್ರೇಣಿಯನ್ನು ಹೊಂದಿದ್ದು ಮರಣ ಶಾಸನ ರಹಿತನ ಉತ್ತರಜೀವಿ ಪಿತೃವಂಶಜರನ್ನು ಬಿಟ್ಟು ಆ ಮರಣ ಶಾಸನ ರಹಿತನಿಗಿಂತ ಮುಂಚೆ ಮರಣ ಹೊಂದಿರುವ ಅವನ ವಂಶಜರ ಸಂಖ್ಯೆಗೆ ಸಂವಾದಿಯಾಗಬಹುದಾದಷ್ಟು ಸಂಖ್ಯೆಯ ಸಮಪಾಲುಗಳಲ್ಲಿ ಸ್ವತ್ತನ್ನು ಹಂಚಿಕೆ ಮಾಡತಕ್ಕುದು.

(2) ಮರಣ ಶಾಸನ ರಹಿತನಿಗೆ, ಅವನ ಮರಣ ಕಾಲದಲ್ಲಿ ರಕ್ತ ಸಂಬಂಧಿಗಳ ಅತಿ ಹತ್ತಿರದ ಶ್ರೇಣಿಯಲ್ಲಿದ್ದ ಪ್ರತಿಯೊಬ್ಬ ಪಿತೃವಂಶಜರಿಗೂ ಅಂಥ ಪಾಲುಗಳಲ್ಲಿ ಒಂದು ಪಾಲನ್ನು ಹಂಚತಕ್ಕುದು. ಅಂಥ ಮೃತ ಪಿತೃವಂಶಜರಲ್ಲಿ ಪ್ರತಿಯೊಬ್ಬನ ಸಂಬಂಧದಲ್ಲಿ ಅಂತಹ ಪಾಲುಗಳಲ್ಲಿ ಒಂದೊಂದು ಪಾಲನ್ನು ಹಂಚತಕ್ಕುದು, ಮತ್ತು ಅಂತಹ ಪ್ರತಿಯೊಬ್ಬ ಮೃತ ಪಿತೃವಂಶಜರಿಗೆ ಸಂಬಂಧಿಸಿದಂತೆ ಹಂಚಿದ ಪಾಲು ಸಂದರ್ಭಾನುಸಾರ ಅವನ ಉತ್ತರಜೀವಿ ಮಗು ಅಥವಾ ಮಕ್ಕಳಿಗೆ ಅಥವಾ ಇನ್ನೂ ಹೆಚ್ಚು ದೂರದ ಪಿತೃವಂಶಜರಿಗೆ ಸೇರತಕ್ಕುದು; ಮತ್ತು ಅಂಥ ಉತ್ತರಜೀವಿ ಮಗು ಅಥವಾ ಮಕ್ಕಳು ಅಥವಾ ಇನ್ನೂ ಹೆಚ್ಚಿನ ದೂರದ ಪಿತೃವಂಶಜರು, ಅವನ ತಂದೆ ತಾಯಿ ಅಥವಾ ಅವರ ತಂದೆ ತಾಯಿಗಳು, ಆ ತಂದೆ ತಾಯಿಗಳು ಮರಣ ಶಾಸನ ರಹಿತನಿಗೆ ಉತ್ತರಜೀವಿಗಳಾಗಿದ್ದಿದ್ದರೆ ಯಾವ ಪಾಲಿಗೆ ಅನುಕ್ರಮವಾಗಿ ಹಕ್ಕುಳ್ಳವರಾಗಿರಬಹುದಾಗಿತ್ತೊ ಆ ಪಾಲನ್ನು ತೆಗೆದುಕೊಳ್ಳಬೇಕು.

ದೃಷ್ಟಾಂತಗಳು

(i) "ಎ" ನಿಗೆ ಜಾನ್, ಮೇರಿ ಮತ್ತು ಹೆನ್ರಿ ಎಂಬ ಮೂರು ಮಕ್ಕಳಿದ್ದರು; ಮತ್ತು ಜಾನ್ ನಾಲ್ಕು ಮಕ್ಕಳನ್ನು ಬಿಟ್ಟು ಮರಣ ಹೊಂದಿದನು, ಮತ್ತು ಮೇರಿ ಒಂದು ಮಗುವನ್ನು ಬಿಟ್ಟು ಮರಣ ಹೊಂದಿದಳು ಮತ್ತು ಹೆನ್ರಿಯೊಬ್ಬನೇ ತಂದೆಯ ಉತ್ತರ ಜೀವಿಯಾದನು. "ಎ" ನು ಮರಣ ಶಾಸನ ರಹಿತನಾಗಿ ಮರಣ ಹೊಂದಿದ ಮೇಲೆ ಮೂರನೇ ಒಂದು ಭಾಗವನ್ನು ಹೆನ್ರಿಗೆ, ಮೂರನೇ ಒಂದು ಭಾಗವನ್ನು ಜಾನ್‌ನ ನಾಲ್ಕು ಮಕ್ಕಳಿಗೆ ಮತ್ತು ಉಳಿದ ಮೂರನೇ ಒಂದು ಭಾಗವನ್ನು ಮೇರಿಯ ಒಂದು ಮಗುವಿಗೆ ಹಂಚಲಾಗುವುದು.

(ii) "ಎ" ನು ಯಾವ ಮಗುವನ್ನು ಬಿಟ್ಟು ಹೋಗಿರುವುದಿಲ್ಲ, ಆದರೆ ಎಂಟು ಮೊಮ್ಮಕ್ಕಳನ್ನು ಮತ್ತು ಮೃತ ಮೊಮ್ಮಗುವಿನ ಇಬ್ಬರು ಮಕ್ಕಳನ್ನು ಬಿಟ್ಟು ಹೋಗಿದ್ದಾನೆ. ಸ್ವತ್ತನ್ನು ಒಂಬತ್ತು ಭಾಗಗಳಾಗಿ ವಿಭಜಿಸಿ ಪ್ರತಿಯೊಬ್ಬ ಮೊಮ್ಮಗನಿಗೂ ಒಂದೊಂದು ಪಾಲನ್ನು ಹಂಚಲಾಗುತ್ತದೆ ಮತ್ತು ಉಳಿದ ಒಂಬತ್ತನೇ ಒಂದು ಪಾಲನ್ನು ಇಬ್ಬರು ಮರಿ ಮೊಮ್ಮಕ್ಕಳ ನಡುವೆ ಸಮನಾಗಿ ಹಂಚಲಾಗುವುದು.

(iii) "ಎ" ನಿಗೆ ಜಾನ್, ಮೇರಿ ಮತ್ತು ಹೆನ್ರಿ ಎಂಬ ಮೂರು ಮಕ್ಕಳು; ಜಾನ್ ನಾಲ್ವರು ಮಕ್ಕಳನ್ನು ಬಿಟ್ಟು ಮರಣ ಹೊಂದುತ್ತಾನೆ; ಮತ್ತು ಜಾನ್‌ನ ಒಂದು ಮಗು ಇಬ್ಬರು ಮಕ್ಕಳನ್ನು ಬಿಟ್ಟು ಮರಣ ಹೊಂದುತ್ತಾನೆ. ಮೇರಿ ಒಂದು ಮಗುವನ್ನು ಬಿಟ್ಟು ಮೃತಳಾಗುತ್ತಾಳೆ. "ಎ" ನು ಆಮೇಲೆ ಮರಣ ಶಾಸನ ರಹಿತವಾಗಿ ಮರಣ ಹೊಂದುತ್ತಾನೆ. ಅವನ ಸ್ವತ್ತಿನ ಮೂರನೇ ಒಂದು ಭಾಗವನ್ನು ಹೆನ್ರಿಗೆ, ಮೂರನೇ ಒಂದು ಭಾಗವನ್ನು ಮೇರಿಯ ಮಗುವಿಗೆ ಮತ್ತು ಮೂರನೇ ಒಂದು ಭಾಗವನ್ನು ನಾಲ್ಕು ಭಾಗಗಳಾಗಿ ವಿಭಜಿಸಿ, ಜಾನ್‌ನ ಉತ್ತರ ಜೀವಿಗಳಾದ ಮೂರು ಮಕ್ಕಳಿಗೆ ಪ್ರತಿಯೊಬ್ಬರಿಗೆ ಒಂದೊಂದು ಪಾಲನ್ನು ಹಂಚಲಾಗುವುದು ಮತ್ತು ಉಳಿದ ಭಾಗವನ್ನು ಜಾನ್‌ನ ಇಬ್ಬರು ಮೊಮ್ಮಕ್ಕಳ ನಡುವೆ ಸಮನಾಗಿ ಹಂಚಲಾಗುವುದು.

(iv) "ಎ" ನಿಗೆ ಜಾನ್ ಮತ್ತು ಮೇರಿ ಎಂಬ ಎರಡು ಮಕ್ಕಳಿದ್ದಾರೆ. ಮತ್ತು ಇನ್ನಾರೂ ಇಲ್ಲ. ಜಾನ್ ತನ್ನ ತಂದೆಗಿಂತ ಮೊದಲೇ ತನ್ನ ಗರ್ಭಿಣಿ ಹೆಂಡತಿಯನ್ನು ಬಿಟ್ಟು ಮರಣ ಹೊಂದುತ್ತಾನೆ. ಆಗ ಮೇರಿಯನ್ನು ತನ್ನ ಉತ್ತರಜೀವಿಯಾಗಿ ಬಿಟ್ಟು "ಎ" ನು ಮರಣ ಹೊಂದುತ್ತಾನೆ. ಮತ್ತು ಯುಕ್ತ ಕಾಲದಲ್ಲಿ ಜಾನ್‌ನ ಮಗುವು ಹುಟ್ಟುತ್ತದೆ. "ಎ"ನು ಸ್ವತ್ತನ್ನು ಮೇರಿ ಮತ್ತು ಆ ತಂದೆಯ ಮರಣಾನಂತರ ಹುಟ್ಟಿದ ಮಗುವಿಗೆ ಸಮನಾಗಿ ಹಂಚಬೇಕು.

ಪಿತೃವಂಶಜರು ಇಲ್ಲದಿರುವ ಸಂದರ್ಭದಲ್ಲಿ ವಿತರಣೆ

41. ಮರಣಶಾಸನರಹಿತನು ಯಾರೇ ಪಿತೃವಂಶಜರನ್ನು ಬಿಟ್ಟುಹೋಗದಿರುವ ಸಂದರ್ಭದಲ್ಲಿ ವಿತರಣೆಯ ನಿಯಮಗಳು:- ಮರಣ ಶಾಸನ ರಹಿತನು ಯಾವ ಪಿತೃವಂಶಜರನ್ನೂ ಬಿಟ್ಟು ಹೋಗಿಲ್ಲದಿರುವಲ್ಲಿ (ಅವನು ತನ್ನ ವಿಧವೆಯನ್ನು ಬಿಟ್ಟು ಹೋಗಿರುವಲ್ಲಿ, ವಿಧವೆಯ ಪಾಲನ್ನು ಕಳೆದ ನಂತರ) ಅವನ ಸ್ವತ್ತಿನ ವಿತರಣೆಯ ನಿಯಮಗಳು 42 ರಿಂದ 48ನೇ ಪ್ರಕರಣಗಳಲ್ಲಿ ಅಡಕಗೊಂಡವುಗಳಾಗಿರತಕ್ಕುದು.

42. ಮರಣಶಾಸನರಹಿತನ ತಂದೆಯು ಜೀವಂತವಿರುವಲ್ಲಿ:- ಮರಣಶಾಸನರಹಿತನ ತಂದೆಯು ಜೀವಂತವಿದ್ದರೆ, ಆ ಸ್ವತ್ತಿಗೆ ಅವನು ಉತ್ತರಾಧಿಕಾರಿಯಾಗತಕ್ಕುದು.

43. ಮರಣಶಾಸನರಹಿತನ ತಂದೆಯು ಮೃತನಾಗಿದ್ದು ಅವನ ತಾಯಿ, ಸಹೋದರರು ಮತ್ತು ಸಹೋದರಿಯರು ಜೀವಂತವಿರುವಲ್ಲಿ:- ಮರಣ ಶಾಸನ ರಹಿತನ ತಂದೆಯು ಮರಣ ಹೊಂದಿದ್ದು ಮರಣಶಾಸನ ರಹಿತನ ತಾಯಿ ಮತ್ತು ಮರಣಶಾಸನರಹಿತನ ಸಹೋದರರು ಅಥವಾ ಸಹೋದರಿಯರು ಸಹಾ ಜೀವಂತವಿದ್ದರೆ ಮೃತ ಸಹೋದರನ ಅಥವಾ ಮೃತ ಸಹೋದರಿಯ ಯಾವುದೇ

ಮಗುವೂ ಜೀವಂತವಿಲ್ಲದಿದ್ದರೆ, ಆ ತಾಯಿ ಮತ್ತು ಜೀವಂತವಿರುವ ಪ್ರತಿಯೊಬ್ಬ ಸಹೋದರ ಅಥವಾ ಸಹೋದರಿಯು ಸ್ವತ್ತಿಗೆ ಸಮಪಾಲುಗಳ ಉತ್ತರಾಧಿಕಾರಿಗಳಾಗತಕ್ಕುದು.

ದೃಷ್ಟಾಂತ

"ಎ" ನು ಮರಣಶಾಸನರಹಿತನಾಗಿ ತನ್ನ ತಾಯಿ ಮತ್ತು ಇಬ್ಬರು ಪೂರ್ಣ ರಕ್ತದ ಸಹೋದರರಾದ ಜಾನ್ ಮತ್ತು ಹೆನ್ರಿಯನ್ನು ಮತ್ತು ತನ್ನ ತಾಯಿಯ ಮಗಳಾದ ಆದರೆ ತಂದೆಯ ಮಗಳಲ್ಲದ ಒಬ್ಬ ಸಹೋದರಿ ಮೇರಿಯನ್ನು ಉತ್ತರ ಜೀವಿಗಳನ್ನಾಗಿ ಬಿಟ್ಟು ಮರಣ ಹೊಂದುತ್ತಾನೆ. ತಾಯಿಯು ನಾಲ್ಕರಲ್ಲಿ ಒಂದು ಭಾಗವನ್ನು, ಪ್ರತಿಯೊಬ್ಬ ಸಹೋದರನೂ ನಾಲ್ಕರಲ್ಲಿ ಒಂದು ಭಾಗವನ್ನು ಅರ್ಧ ರಕ್ತದ ಸಹೋದರಿ ಮೇರಿಯು ನಾಲ್ಕರಲ್ಲಿ ಒಂದು ಭಾಗವನ್ನು ತೆಗೆದುಕೊಳ್ಳುತ್ತಾರೆ.

44. ಮರಣಶಾಸನರಹಿತನ ತಂದೆ ಮೃತನಾಗಿದ್ದು ಅವನ ತಾಯಿ, ಒಬ್ಬ ಸಹೋದರ ಅಥವಾ ಸಹೋದರಿ ಮತ್ತು ಯಾವನೇ ಮೃತ ಸಹೋದರನ ಅಥವಾ ಸಹೋದರಿಯ ಮಕ್ಕಳು ಜೀವಿಸಿರುವಲ್ಲಿ:- ಮರಣ ಶಾಸನರಹಿತನ ತಂದೆಯು ಮರಣ ಹೊಂದಿದ್ದರೆ, ಆದರೆ ಮರಣಶಾಸನ ರಹಿತನಾಗಿ ಮರಣ ಹೊಂದಿದವನ ತಾಯಿಯು ಜೀವಂತವಿದ್ದರೆ ಮತ್ತು ಯಾವನೇ ಸಹೋದರನು ಅಥವಾ ಸಹೋದರಿಯು ಮತ್ತು ಮರಣ ಶಾಸನ ರಹಿತನ ಜೀವಿತ ಕಾಲದಲ್ಲಿ ಮರಣ ಹೊಂದಿರಬಹುದಾದ ಯಾವನೇ/ಯಾವಳೇ ಸಹೋದರ ಅಥವಾ ಸಹೋದರಿಯ ಮಗ ಅಥವಾ ಮಕ್ಕಳು ಸಹ ಬದುಕಿದ್ದರೆ, ಆಗ ಆ ತಾಯಿ ಮತ್ತು ಬದುಕಿರುವ ಪ್ರತಿಯೊಬ್ಬ ಸಹೋದರ ಅಥವಾ ಸಹೋದರಿ ಮತ್ತು ಪ್ರತಿಯೊಬ್ಬ ಮೃತ ಸಹೋದರ ಅಥವಾ ಸಹೋದರಿಯ ಬದುಕಿರುವ ಮಗು ಅಥವಾ ಮಕ್ಕಳು (ಒಬ್ಬರಿಗಿಂತ ಹೆಚ್ಚು ಮಂದಿ ಇರುವಲ್ಲಿ) ಅವರ ತಂದೆ ತಾಯಿಗಳು ಮರಣ ಶಾಸನ ರಹಿತನ ಮರಣದ ಕಾಲದಲ್ಲಿ ಬದುಕಿದ್ದಿದ್ದರೆ ಅವುಗಳಲ್ಲಿ ಕ್ರಮವಾಗಿ ಪಡೆಯಬಹುದಾಗಿದ್ದಂಥ ಪಾಲುಗಳನ್ನು ಸಮಪಾಲುಗಳಲ್ಲಿ ಪಡೆಯಲು ಹಕ್ಕುಳ್ಳವರಾಗಿರತಕ್ಕುದು.

ದೃಷ್ಟಾಂತ

ಮರಣಶಾಸನರಹಿತನಾಗಿ ಮರಣ ಹೊಂದಿದ 'ಎ'ನು ತನ್ನ ತಾಯಿಯನ್ನು, ತನ್ನ ಸಹೋದರರಾದ ಜಾನ್ ಮತ್ತು ಹೆನ್ರಿಯನ್ನು ಮತ್ತು ಮೃತ ಸಹೋದರಿ ಮೇರಿಯ ಒಂದು ಮಗುವನ್ನು ಮತ್ತು ಮೃತ ಸಹೋದರನಾದ, ತನ್ನ ತಂದೆಯ ಮಗನಾದ ಆದರೆ ತಾಯಿಯ ಮಗನಲ್ಲದ ಅರ್ಧ ರಕ್ತ ಸಹೋದರ ಜಾರ್ಜ್‌ನ ಇಬ್ಬರು ಮಕ್ಕಳನ್ನೂ ಬಿಟ್ಟು ಮರಣ ಹೊಂದುತ್ತಾನೆ. ತಾಯಿಯು ಐದನೇ ಒಂದು ಭಾಗವನ್ನು ತೆಗೆದುಕೊಳ್ಳುತ್ತಾಳೆ. ಜಾನ್ ಮತ್ತು ಹೆನ್ರಿ ಪ್ರತಿಯೊಬ್ಬನು ಐದನೇ ಒಂದು ಭಾಗವನ್ನು ತೆಗೆದುಕೊಳ್ಳುತ್ತಾರೆ. ಮೇರಿಯ ಮಗು ಐದನೇ ಒಂದು ಭಾಗವನ್ನು ತೆಗೆದುಕೊಳ್ಳುತ್ತದೆ ಮತ್ತು ಜಾರ್ಜ್‌ನ ಎರಡು ಮಕ್ಕಳು ಉಳಿದ ಐದನೇ ಒಂದು ಭಾಗವನ್ನು ಸಮನಾಗಿ ಅವರ ನಡುವೆ ಹಂಚಿಕೊಳ್ಳುತ್ತಾರೆ.

45. ಮರಣಶಾಸನರಹಿತನ ತಂದೆಯು ಮೃತನಾಗಿದ್ದು, ಅವನ ತಾಯಿ ಮತ್ತು ಯಾವನೇ ಮೃತ ಸಹೋದರನ ಅಥವಾ ಸಹೋದರಿಯ ಮಕ್ಕಳು ಜೀವಂತವಿರುವಲ್ಲಿ:- ಮರಣಶಾಸನರಹಿತನ ತಂದೆಯು ಮರಣ ಹೊಂದಿದ್ದು, ಮರಣ ಶಾಸನರಹಿತನ ತಾಯಿಯು ಜೀವಂತವಿದ್ದರೆ ಮತ್ತು ಸಹೋದರ ಮತ್ತು ಸಹೋದರಿಯರೆಲ್ಲಾ ಮರಣ ಹೊಂದಿದ್ದು ಅವರೆಲ್ಲರೂ ಅಥವಾ ಅವರಲ್ಲಿ ಯಾರಾದರೂ ಒಬ್ಬರು ಮರಣ ಶಾಸನ ರಹಿತನ ಉತ್ತರ ಜೀವಿಗಳಾದ ಮಕ್ಕಳನ್ನು ಬಿಟ್ಟು ಹೋಗಿದ್ದರೆ, ಆ ತಾಯಿ ಮತ್ತು ಪ್ರತಿಯೊಬ್ಬ ಮೃತ ಸಹೋದರನ ಅಥವಾ ಸಹೋದರಿಯ ಮಗು ಅಥವಾ ಮಕ್ಕಳು ಸಮಪಾಲುಗಳಲ್ಲಿ ಸ್ವತ್ತಿಗೆ ಹಕ್ಕುಳ್ಳವರಾಗಿರತಕ್ಕುದು. ಅಂತಹ ಮಕ್ಕಳು (ಒಬ್ಬರಿಗಿಂತ ಹೆಚ್ಚು ಮಂದಿ ಇರುವಲ್ಲಿ) ಅವರ ತಂದೆ ತಾಯಿಗಳು ಮರಣ ಶಾಸನ ರಹಿತನ ಮರಣ ಕಾಲದಲ್ಲಿ ಬದುಕಿದ್ದಿದ್ದರೆ ಕ್ರಮವಾಗಿ ತೆಗೆದುಕೊಳ್ಳಬಹುದಾಗಿದ್ದಂತಹ ಪಾಲನ್ನು ಮಾತ್ರ ಸಮಪಾಲುಗಳಲ್ಲಿ ತೆಗೆದುಕೊಳ್ಳಲು ಹಕ್ಕುಳ್ಳವರಾಗಿರತಕ್ಕುದು.

ದೃಷ್ಟಾಂತ

ಮರಣಶಾಸನ ರಹಿತನಾದ "ಎ' ನು ಯಾವ ಸಹೋದರ ಅಥವಾ ಸಹೋದರಿಯನ್ನು ಬಿಟ್ಟುಹೋಗಿಲ್ಲ, ಆದರೆ ಅವನ ತಾಯಿ ಮತ್ತು ಮೃತ ಸಹೋದರಿ ಮೇರಿಯ ಒಬ್ಬ ಮಗನನ್ನು ಮತ್ತು ಮೃತ ಸಹೋದರ ಜಾರ್ಜ್‌ನ ಎರಡು ಮಕ್ಕಳನ್ನು ಬಿಟ್ಟುಹೋಗಿದ್ದಾನೆ. ತಾಯಿಯು ಮೂರನೇ ಒಂದು ಭಾಗವನ್ನು ತೆಗೆದುಕೊಳ್ಳುತ್ತಾಳೆ ಮತ್ತು ಜಾರ್ಜ್‌ನ ಮಕ್ಕಳು ಉಳಿದ ಮೂರನೇ ಒಂದು ಭಾಗವನ್ನು ಅವರ ನಡುವೆ ಸಮನಾಗಿ ಹಂಚಿಕೊಳ್ಳುತ್ತಾರೆ.

46. ಮರಣಶಾಸನರಹಿತನ ತಂದೆಯು ಮರಣ ಹೊಂದಿದ್ದು, ತಾಯಿಯು ಜೀವಂತವಿರುವಾಗ ಮತ್ತು ಯಾವ ಸಹೋದರ ಅಥವಾ ಸಹೋದರಿ ಅಥವಾ ಸಹೋದರನ ಮಗ ಅಥವಾ ಸಹೋದರನ ಮಗಳೂ ಇಲ್ಲದಿರುವಾಗ:- ಮರಣ ಶಾಸನ ರಹಿತನ ತಂದೆಯು ಮರಣ ಹೊಂದಿದ್ದು, ಮರಣ ಶಾಸನ ರಹಿತನ ತಾಯಿಯು ಜೀವಂತವಾಗಿದ್ದರೆ, ಮತ್ತು ಮರಣ ಶಾಸನ ರಹಿತನ ಯಾವನೇ ಸಹೋದರ ಅಥವಾ ಸಹೋದರಿಯಾಗಲೀ ಅಥವಾ ಆ ಯಾವನೇ ಸಹೋದರ ಅಥವಾ ಸಹೋದರಿಯ ಮಗುವಾಗಲೀ ಇಲ್ಲದಿರುವಲ್ಲಿ ಸ್ವತ್ತು ತಾಯಿಗೆ ಸೇರತಕ್ಕುದು.

47. ಮರಣಶಾಸನರಹಿತನು ಪಿತೃವಂಶಜನನ್ನಾಗಲೀ ತಂದೆ ಅಥವಾ ತಾಯಿಯರನ್ನಾಗಲೀ ಬಿಟ್ಟು ಹೋಗಿಲ್ಲದಿರುವಲ್ಲಿ:- ಮರಣ ಶಾಸನ ರಹಿತನು ಯಾವನೇ ಪಿತೃವಂಶಜನನ್ನು ಅಥವಾ ತಂದೆಯನ್ನು ಅಥವಾ ತಾಯಿಯನ್ನು ಬಿಟ್ಟುಹೋಗಿಲ್ಲದಿರುವಲ್ಲಿ, ಸ್ವತ್ತನ್ನು ಅವನ ಸಹೋದರ ಮತ್ತು ಸಹೋದರಿಯರಲ್ಲಿ ಮತ್ತು ಅವನಿಗಿಂತ ಮೊದಲು ಮರಣ ಹೊಂದಿರಬಹುದಾದಂಥ ಸಹೋದರನ ಅಥವಾ ಸಹೋದರಿಯ ಮಗು ಅಥವಾ ಮಕ್ಕಳಲ್ಲಿ ಸಮನಾಗಿ ಹಂಚತಕ್ಕುದು, ಅಂತಹ ಮಕ್ಕಳು (ಒಂದಕ್ಕಿಂತ ಹೆಚ್ಚಾಗಿರುವಲ್ಲಿ) ಅವರ ತಂದೆ ತಾಯಿಗಳು ಮರಣ ಶಾಸನ ರಹಿತನ ಮರಣ ಕಾಲದಲ್ಲಿ ಬದುಕಿದ್ದಿದ್ದರೆ ಕ್ರಮವಾಗಿ ತೆಗೆದುಕೊಳ್ಳಬಹುದಾಗಿದ್ದಂಥ ಪಾಲುಗಳನ್ನು ಸಮಪಾಲುಗಳಲ್ಲಿ ಹಂಚಿಕೊಳ್ಳಬೇಕು.

48. ಮರಣಶಾಸನ ರಹಿತನು ಪಿತೃವಂಶಜ, ತಂದೆ ಅಥವಾ ತಾಯಿ ಅಥವಾ ಸಹೋದರ ಅಥವಾ ಸಹೋದರಿಯನ್ನು ಬಿಟ್ಟು ಹೋಗಿಲ್ಲದಿರುವಲ್ಲಿ:- ಮರಣ ಶಾಸನ ರಹಿತನು ಪಿತೃವಂಶಜನನ್ನು ಅಥವಾ ತಂದೆ ಅಥವಾ ತಾಯಿಯನ್ನು ಅಥವಾ ಸಹೋದರ ಅಥವಾ ಸಹೋದರಿಯನ್ನು ಬಿಟ್ಟು ಹೋಗಿಲ್ಲದಿರುವಲ್ಲಿ ಅವನ ಸ್ವತ್ತನ್ನು ಅವನಿಗೆ ರಕ್ತ ಸಂಬಂಧಿಗಳ ಅತಿ ಹತ್ತಿರದ ಶ್ರೇಣಿಯಲ್ಲಿರುವ ಬಂಧುಗಳೊಳಗೆ ಸಮನಾಗಿ ಹಂಚತಕ್ಕುದು.

ದೃಷ್ಟಾಂತಗಳು

(i) ಮರಣಶಾಸನರಹಿತನಾದ "ಎ" ನು ಒಬ್ಬ ಅಜ್ಜನನ್ನು ಮತ್ತು ಒಬ್ಬ ಅಜ್ಜಿಯನ್ನು ಬಿಟ್ಟು ಹೋಗಿದ್ದಾನೆ ಮತ್ತು ಅವನಿಗೆ ಅದೇ ಶ್ರೇಣಿಯ ಅಥವಾ ರಕ್ತ ಸಂಬಂಧಿಯಾದ ಇನ್ನೂ ಹತ್ತಿರದ ಶ್ರೇಣಿಯ ಇತರ ಯಾವ ಬಂಧುವೂ ಇಲ್ಲ. ಮರಣ ಶಾಸನ ರಹಿತನ ಯಾವನೇ ಚಿಕ್ಕಪ್ಪ ಅಥವಾ ಚಿಕ್ಕಮ್ಮ ಮೂರನೇ ಶ್ರೇಣಿಯವರಾಗಿರುವುದರಿಂದ, ಅವರನ್ನು ಹೊರತುಪಡಿಸಿ ಅಜ್ಜ ಮತ್ತು ಅಜ್ಜಿಯು ಎರಡನೇ ಶ್ರೇಣಿಯವರಾಗಿರುವುದರಿಂದ, ಅವರು ಸ್ವತ್ತಿಗೆ ಸಮಪಾಲುಗಳಲ್ಲಿ ಹಕ್ಕುಳ್ಳವರಾಗಿರುತ್ತಾರೆ.

(ii) ಮರಣ ಶಾಸನ ರಹಿತನಾದ "ಎ" ನು ಒಬ್ಬ ಮುತ್ತಜ್ಜನನ್ನು ಅಥವಾ ಒಬ್ಬ ಮುತ್ತಜ್ಜಿಯನ್ನು ಮತ್ತು ಚಿಕ್ಕಪ್ಪಂದಿರು ಮತ್ತು ಚಿಕ್ಕಮ್ಮಂದಿರನ್ನು ಬಿಟ್ಟು ಹೋಗಿದ್ದಾನೆ ಮತ್ತು ಅವನಿಗೆ ಅದೇ ಶ್ರೇಣಿಯ ಅಥವಾ ರಕ್ತ ಸಂಬಂಧಿಯ ಇನ್ನೂ ಹತ್ತಿರದ ಶ್ರೇಣಿಯಲ್ಲಿ ಯಾವ ಬಂಧುಗಳೂ ಇರುವುದಿಲ್ಲ. ಇವರೆಲ್ಲರೂ ಮೂರನೇ ಶ್ರೇಣಿಯಲ್ಲಿರುವುದರಿಂದ ಅವರು ಸಮಪಾಲುಗಳನ್ನು ತೆಗೆದುಕೊಳ್ಳುತ್ತಾರೆ.

(iii) ಮರಣ ಶಾಸನ ರಹಿತನಾದ 'ಎ' ನು ಒಬ್ಬ ಮುತ್ತಜ್ಜನನ್ನು, ಒಬ್ಬ ಚಿಕ್ಕಪ್ಪನನ್ನು , ಮತ್ತು ಒಬ್ಬ ಸೋದರ ಸಂಬಂಧಿಯನ್ನು ಬಿಟ್ಟಿರುತ್ತಾನೆ. ಆದರೆ ಅವನಿಗೆ ರಕ್ತ ಸಂಬಂಧದ ಇನ್ನೂ ಹತ್ತಿರದ ಶ್ರೇಣಿಯಲ್ಲಿರುವ ಯಾವ ಬಂಧುಗಳೂ ಇರುವುದಿಲ್ಲ. ಇವರೆಲ್ಲರೂ ಮೂರನೇ ಶ್ರೇಣಿಯಲ್ಲಿರುವುದರಿಂದ ಅವರು ಸಮಪಾಲುಗಳನ್ನು ತೆಗೆದುಕೊಳ್ಳುತ್ತಾರೆ.

(iv) ಮರಣಶಾಸನರಹಿತನ ಒಬ್ಬ ಸಹೋದರ ಅಥವಾ ಸಹೋದರಿಯ ಮತ್ತು ಮಕ್ಕಳು ಮತ್ತು ಮರಣ ಶಾಸನ ರಹಿತನ ಮತ್ತೊಬ್ಬ ಸಹೋದರ ಅಥವಾ ಸಹೋದರಿಯ ಒಂದು ಮಗುವು ರಕ್ತ ಸಂಬಂಧದ ಅತಿ ಹತ್ತಿರದ ಶ್ರೇಣಿಯ ಬಂಧುಗಳ ವರ್ಗದವರಾಗುತ್ತಾರೆ. ಅವರಲ್ಲಿ ಪ್ರತಿಯೊಬ್ಬನೂ ಸ್ವತ್ತಿನ ಹನ್ನೊಂದನೇ ಒಂದು ಭಾಗವನ್ನು ತೆಗೆದುಕೊಳ್ಳುತ್ತಾನೆ.

49. ಅವಿಭಕ್ತ ಆಸ್ತಿಯಲ್ಲಿ ಮಕ್ಕಳ ಅಭ್ಯುದಯದ ಖರ್ಚನ್ನು ಪರಿಗಣಿಸದಿರುವುದು:- ಮರಣಶಾಸನರಹಿತನ ಸ್ವತ್ತಿನ ವಿತರಣಾ ಪಾಲನ್ನು, ಅಂಥ ವ್ಯಕ್ತಿಯ ಮಗು ಅಥವಾ ಮಗುವಿನ ಯಾವನೇ ವಂಶಜನು ಕ್ಲೇಮು ಮಾಡಿರುವಾಗ, ಅಂಥ ವಿತರಣಾ ಪಾಲನ್ನು ಅಂದಾಜು ಮಾಡುವಲ್ಲಿ, ಯಾವ ಮಗು ಅಥವಾ ಮಗುವಿನ ವಂಶಜನಿಗೆ ಅಥವಾ ಅವನ ಅಭ್ಯುದಯಕ್ಕೆ ಮರಣ ಶಾಸನ ರಹಿತನು ತನ್ನ ಜೀವಿತ ಕಾಲದಲ್ಲಿ ಸಂದಾಯ ಮಾಡಿರಬಹುದಾದ ಅಥವಾ ಕೊಟ್ಟಿರಬಹುದಾದ ಅಥವಾ ವ್ಯವಸ್ಥೆ ಮಾಡಿರಬಹುದಾದಂಥ ಯಾವುದೇ ಹಣ ಅಥವಾ ಇತರ ಸ್ವತ್ತನ್ನು ಗಣನೆಗೆ ತೆಗೆದುಕೊಳ್ಳತಕ್ಕುದಲ್ಲ.

## ಅಧ್ಯಾಯ - III

### ಮರಣಶಾಸನ ರಹಿತ ಪಾರ್ಸಿಗಳ ಬಗ್ಗೆ ವಿಶೇಷ ನಿಯಮಗಳು

50. ಮರಣ ಶಾಸನರಹಿತ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಸಾಮಾನ್ಯ ತತ್ವಗಳು:- ಪಾರ್ಸಿಗಳಲ್ಲಿ ಮರಣಶಾಸನರಹಿತ ಉತ್ತರಾಧಿಕಾರದ ಉದ್ದೇಶಕ್ಕಾಗಿ,

(ಎ) ಮೃತ ವ್ಯಕ್ತಿಯ ಜೀವಿತ ಕಾಲದಲ್ಲಿ ವಾಸ್ತವವಾಗಿ ಜನಿಸಿದ ಮತ್ತು ಅವನ ಮರಣದ ಕಾಲದಲ್ಲಿ ಗರ್ಭದೊಳಗಿದ್ದು ಆದರೆ ತರುವಾಯ ಜೀವಂತವಾಗಿ ಹುಟ್ಟಿದವರ ಮಧ್ಯ ಯಾವ ಭೇದಭಾವವೂ ಇರುವುದಿಲ್ಲ;

(ಬಿ) ಮರಣಶಾಸನ ರಹಿತನ ಜೀವಿತ ಕಾಲದಲ್ಲಿ ವಿಧವೆಯನ್ನು ಅಥವಾ ವಿಧುರನನ್ನು ಅಥವಾ ಯಾವನೇ ಪಿತೃವಂಶಜನನ್ನು ಅಥವಾ ಯಾವನೇ ಪಿತೃವಂಶಜನ ವಿಧವೆಯನ್ನು ಅಥವಾ ವಿಧುರನನ್ನು ಬಿಡದೆ ಮೃತನಾದ ಪಿತೃವಂಶಜನನ್ನು ಮರಣ ಶಾಸನ ರಹಿತನು ಯಾವ ಸ್ವತ್ತಿನ ಬಗ್ಗೆ ಮರಣ ಶಾಸನ ರಹಿತವಾಗಿ ಮರಣ ಹೊಂದಿದನೋ ಆ ಸ್ವತ್ತನ್ನು ವಿಭಜಿಸತಕ್ಕಂಥ ರೀತಿಯನ್ನು ನಿರ್ಧರಿಸುವಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕುದಲ್ಲ;

(ಸಿ) ಮರಣ ಶಾಸನ ರಹಿತನ ಯಾವನೇ ಬಂಧುವಿನ ವಿಧವೆಯು ಅಥವಾ ವಿಧುರನು ಮರಣ ಶಾಸನ ರಹಿತನ ಜೀವಿತ ಕಾಲದಲ್ಲಿಯೇ ಪುನಃ ವಿವಾಹವಾಗಿರುವಲ್ಲಿ, ಅಂಥ ವಿಧವೆಯು ಅಥವಾ ವಿಧುರನು, ಮರಣ ಶಾಸನ ರಹಿತನು ಯಾವ ಸ್ವತ್ತಿನ ಬಗ್ಗೆ ಮರಣ ಶಾಸನ ರಹಿತನಾಗಿ ಮರಣ ಹೊಂದಿರುವನೋ ಆ ಸ್ವತ್ತಿನ ಯಾವುದೇ ಭಾಗವನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕುದಲ್ಲ ಮತ್ತು ಅಂಥ ವಿಧವೆಯು ಅಥವಾ ವಿಧುರನು ಮರಣ ಶಾಸನ ರಹಿತನ ಮರಣ ಕಾಲದಲ್ಲಿ ಅಸ್ತಿತ್ವದಲ್ಲಿರಲಿಲ್ಲವೆಂದು ಭಾವಿಸತಕ್ಕುದು.

51. ಮರಣಶಾಸನ ರಹಿತನ ಸ್ವತ್ತನ್ನು ಅವನ ವಿಧವೆ, ವಿಧುರ, ಮಕ್ಕಳು ಮತ್ತು ತಂದೆ ತಾಯಿಗಳ ನಡುವೆ ವಿಭಜಿಸುವುದು:- (1)(2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಮರಣ ಶಾಸನ ರಹಿತನಾಗಿ ಮರಣ ಹೊಂದಿರುವ ಒಬ್ಬ ಪಾರ್ಸಿಯ ಸ್ವತ್ತನ್ನು,

(ಎ) ಅವನು ವಿಧವೆ, ವಿಧುರ ಮತ್ತು ಮಕ್ಕಳನ್ನು ಬಿಟ್ಟು ಹೋಗಿರುವಲ್ಲಿ ವಿಧವೆ ಅಥವಾ ವಿಧುರ ಮತ್ತು ಮಕ್ಕಳ ನಡುವೆ, ವಿಧವೆ ವಿಧುರ ಮತ್ತು ಪ್ರತಿಯೊಂದು ಮಗು ಸಮನಾಗಿ ಪಡೆಯುವಂತೆ ಅಥವಾ

(ಬಿ) ಅವನು, ಯಾವ ವಿಧವೆಯನ್ನು ಅಥವಾ ವಿಧುರನನ್ನು ಬಿಟ್ಟು ಹೋಗದೆ ಮಕ್ಕಳನ್ನು ಮಾತ್ರ ಬಿಟ್ಟು ಮರಣ ಹೊಂದಿರುವಲ್ಲಿ, ಮಕ್ಕಳ ನಡುವೆ, ಪ್ರತಿಯೊಬ್ಬ ಮಗುವಿನ ಪಾಲು ಸಮನಾಗಿರುವಂತೆ

- ವಿಭಜಿಸತಕ್ಕುದು.

(2) ಒಬ್ಬ ಪಾರ್ಸಿಯು ಮಕ್ಕಳು ಅಥವಾ ವಿಧವೆ ಅಥವಾ ವಿಧುರ ಮತ್ತು ಮಕ್ಕಳೊಂದಿಗೆ, ತಂದೆ ತಾಯಿಗಳಲ್ಲಿ ಒಬ್ಬರನ್ನು ಅಥವಾ ಇಬ್ಬರನ್ನೂ ಬಿಟ್ಟು ಮರಣ ಹೊಂದಿದ್ದರೆ, ಅವನು ಮರಣ ಶಾಸನ ರಹಿತನಾಗಿ ಮರಣ ಹೊಂದಿದಂಥ ಸ್ವತ್ತನ್ನು ತಾಯಿ, ತಂದೆ ಅಥವಾ ಅವರಲ್ಲಿ ಪ್ರತಿಯೊಬ್ಬರೂ ಪ್ರತಿ ಮಗುವಿನ ಪಾಲಿನಲ್ಲಿ ಅರ್ಧಕ್ಕೆ ಸಮನಾದ ಪಾಲನ್ನು ಪಡೆಯುವಂತೆ ವಿಭಜಿಸತಕ್ಕುದು.

52. [***] 1991 ರ 51ನೇ ಸಂಖ್ಯೆಯ ಅಧಿನಿಯಮದ ಮೂಲಕ ಮೂಲ ಅಧಿನಿಯಮದ 51 ಮತ್ತು 52ನೇ ಪ್ರಕರಣಕ್ಕೆ ಬದಲಾಗಿ ಪ್ರಕರಣ 51 ನ್ನು ಪ್ರತ್ಯಾಯೋಜಿಸಲಾಗಿದೆ.

53. ಪಿತೃವಂಶಜರನ್ನು ಬಿಟ್ಟು ಹೋಗಿರುವ ಮರಣ ಶಾಸನ ರಹಿತನಿಗಿಂತ ಮೊದಲೇ ಮೃತನಾದ ಮಗುವಿನ ಪಾಲಿನ ವಿಭಜನೆ:- ಯಾವನೇ ಪಿತೃವಂಶಜನನ್ನು ಬಿಟ್ಟು ಪಾರ್ಸಿಯು ಮರಣ ಹೊಂದುವ ಎಲ್ಲ ಸಂದರ್ಭಗಳಲ್ಲಿ, ಅಂಥ ಮರಣ ಶಾಸನ ರಹಿತನ ಯಾವುದೇ ಮಗುವು ಮರಣ ಶಾಸನ ರಹಿತನ ಜೀವಿತಕಾಲದಲ್ಲಿ ಮೃತಪಟ್ಟಿದ್ದರೆ, ಯಾವ ಸ್ವತ್ತಿನ ಬಗ್ಗೆ ಮರಣ ಶಾಸನರಹಿತನು ಮರಣ ಶಾಸನವಿಲ್ಲದೆ ಮೃತಪಟ್ಟಿರುವನೋ, ಆ ಯಾವುದೇ ಸ್ವತ್ತಿನ ಪಾಲಿನ ವಿಭಜನೆಯು, ಅಂಥ ಮಗುವು ಮರಣ ಶಾಸನ ರಹಿತನ ಮರಣ ಕಾಲದಲ್ಲಿ ಜೀವಂತವಾಗಿದ್ದಿದ್ದರೆ ಪಡೆಯಬಹುದಾಗಿದ್ದಂಥ ಈ ಕೆಳಕಂಡ ನಿಯಮಗಳಿಗೆ ಅನುಸಾರವಾಗಿ ಇರತಕ್ಕುದು, ಎಂದರೆ:-

(ಎ) ಅಂಥ ಮೃತ ಮಗು ಮಗನಾಗಿದ್ದರೆ, ಅವನ ವಿಧವೆ ಮತ್ತು ಮಕ್ಕಳು, ಅವನು ಮರಣ ಶಾಸನ ರಹಿತನ ಮರಣದ ನಿಕಟೋತ್ತರದಲ್ಲಿ ಮರಣ ಹೊಂದಿದ್ದರೆ ಹೇಗೋ ಹಾಗೆ ಈ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಪಾಲುಗಳನ್ನು ತೆಗೆದುಕೊಳ್ಳತಕ್ಕುದು:

ಪರಂತು, ಅಂತಹ ಮೃತ ಮಗನು ಯಾವ ಪಿತೃವಂಶಜರನ್ನೂ ಬಿಡದೆ ಒಬ್ಬ ವಿಧವೆಯನ್ನು ಅಥವಾ ಒಬ್ಬ ಪಿತೃವಂಶಜನ ವಿಧವೆಯನ್ನು ಬಿಟ್ಟು ಹೋಗಿರುವಲ್ಲಿ, ಅಂತಹ ವಿತರಣೆಯನ್ನು ಮಾಡಿದ ತರುವಾಯ ಅವನ ಪಾಲಿನಲ್ಲಿ ಉಳಿದದ್ದನ್ನು ಮರಣ ಶಾಸನ ರಹಿತನು ಯಾವ ಸ್ವತ್ತಿನ ಬಗ್ಗೆ ಮರಣ ಶಾಸನವಿಲ್ಲದೆ ಮರಣ ಹೊಂದಿರುವನೋ ಆ ಸ್ವತ್ತಿನಂತೆ, ಈ ಅಧ್ಯಾಯದ ಉಪಬಂಧಗಳಿಗೆ ಅನುಸಾರವಾಗಿ ವಿಭಜಿಸತಕ್ಕುದು ಮತ್ತು ಹಾಗೆ ಉಳಿದಿದ್ದನ್ನು ವಿಭಜಿಸುವಲ್ಲಿ ಮರಣ ಶಾಸನ ರಹಿತನ ಸದರಿ ಮೃತ ಮಗನನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕುದಲ್ಲ.

(ಬಿ) ಅಂತಹ ಮೃತ ಮಗುವು ಮಗಳಾಗಿದ್ದರೆ ಅವಳ ಪಾಲನ್ನು ಅವಳ ಮಕ್ಕಳಲ್ಲಿ ಸಮವಾಗಿ ವಿಭಜಿಸತಕ್ಕುದು.

(ಸಿ) ಅಂತಹ ಮೃತ ಮಗುವಿನ ಯಾವುದೇ ಮಗುವು ಮರಣ ಶಾಸನ ರಹಿತನ ಜೀವಿತ ಕಾಲದಲ್ಲಿ ಮರಣ ಹೊಂದಿದ್ದರೂ ಮರಣ ಶಾಸನ ರಹಿತನ ಮರಣ ಕಾಲದಲ್ಲಿ ಅವನು ಅಥವಾ ಅವಳು ಬದುಕಿದ್ದರೆ ತೆಗೆದುಕೊಳ್ಳುತ್ತಿದ್ದಂಥ ಪಾಲನ್ನು, ಸಂದರ್ಭಾನುಸಾರ (ಎ) ಖಂಡ ಅಥವಾ (ಬಿ) ಖಂಡದ ಅನುಸಾರವಾಗಿ ಅದೇ ರೀತಿಯಲ್ಲಿ ವಿಭಜಿಸತಕ್ಕುದು.

(ಡಿ) ಮರಣ ಶಾಸನ ರಹಿತನ ಜೀವಿತ ಕಾಲದಲ್ಲಿ ಅವನ ಇನ್ನೂ ದೂರದ ಪಿತೃವಂಶಜ ಮರಣ ಹೊಂದಿರುವಲ್ಲಿ, ಅವನ ಅಥವಾ ಅವಳ ಹಾಗೂ ಮರಣ ಶಾಸನ ರಹಿತನ ನಡುವೆ ನೇರವಾಗಿ ಬಂದಿರುವ ಪಿತೃವಂಶಜರು ಈ ಮುಂಚೆಯೇ ಮೃತರಾಗಿರುವ ಕಾರಣದಿಂದಾಗಿ ಅವನು ಅಥವಾ ಅವಳು ಮರಣ ಶಾಸನ ರಹಿತನ ಮರಣ ಕಾಲದಲ್ಲಿ ಜೀವಂತವಾಗಿದ್ದಿದ್ದರೆ ಯಾವ ಪಾಲಿನ ವಿಭಜನೆಗೆ ಹಕ್ಕುಳ್ಳವರಾಗಬಹುದಾಗಿತ್ತೊ ಆ ಪಾಲಿನ ವಿಭಜನೆಗೆ (ಸಿ) ಖಂಡದ ಉಪಬಂಧಗಳು ಯಥೋಚಿತ ಬದಲಾವಣೆಗಳೊಡನೆ ಅನ್ವಯವಾಗತಕ್ಕುದು.

54. ಮರಣಶಾಸನರಹಿತನು ಯಾವನೇ ಪಿತೃವಂಶಜನನ್ನು ಬಿಟ್ಟುಹೋಗದೆ ವಿಧವೆ ಅಥವಾ ವಿಧುರನನ್ನು ಅಥವಾ ಯಾವನೇ ಪಿತೃವಂಶಜನ ವಿಧವೆಯನ್ನು ಅಥವಾ ವಿಧುರನನ್ನು ಬಿಟ್ಟು ಹೋಗಿರುವಲ್ಲಿ ಸ್ವತ್ತಿನ ವಿಭಜನೆ:- ಒಬ್ಬ ಪಾರ್ಸಿಯು, ಯಾವನೇ ಪಿತೃವಂಶಜನನ್ನು ಬಿಟ್ಟು ಹೋಗಿರದೆ ಒಬ್ಬ ವಿಧವೆ ಅಥವಾ ವಿಧುರನನ್ನು ಅಥವಾ ಪಿತೃವಂಶಜನ ವಿಧವೆ ಅಥವಾ ವಿಧುರನನ್ನು ಬಿಟ್ಟು ಮರಣ ಹೊಂದಿರುವಲ್ಲಿ ಯಾವ ಸ್ವತ್ತಿನ ಬಗ್ಗೆ ಮರಣ ಶಾಸನ ರಹಿತನು ಮರಣ ಶಾಸನವಿಲ್ಲದೆ ಮರಣ ಹೊಂದಿರುವನೋ ಆ ಸ್ವತ್ತನ್ನು ಈ ಕೆಳಕಂಡ ನಿಯಮಗಳಿಗನುಸಾರವಾಗಿ ವಿಭಜಿಸತಕ್ಕುದು, ಎಂದರೆ:-

(ಎ) ಮರಣ ಶಾಸನ ರಹಿತನು/ಳು ಒಬ್ಬ ವಿಧವೆ ಅಥವಾ ವಿಧುರನನ್ನು ಬಿಟ್ಟು ಹೋಗಿದ್ದು ಪಿತೃವಂಶಜನ ಯಾವಳೇ ವಿಧವೆ ಅಥವಾ ವಿಧುರನನ್ನು ಬಿಟ್ಟು ಹೋಗಿರದಿದ್ದರೆ, ಅಥವಾ ವಿಧುರನು ಆ ವಿಧವೆ ಅಥವಾ ವಿಧುರನು ಸದರಿ ಸ್ವತ್ತಿನ ಅರ್ಧ ಭಾಗವನ್ನು ತೆಗೆದುಕೊಳ್ಳತಕ್ಕುದು.

(ಬಿ) ಮರಣ ಶಾಸನ ರಹಿತನು/ಳು ಒಬ್ಬ ವಿಧವೆ ಅಥವಾ ವಿಧುರನನ್ನು ಬಿಟ್ಟುಹೋಗಿದ್ದು ಮತ್ತು ಯಾವನೇ ಪಿತೃವಂಶಜನ ವಿಧವೆ ಅಥವಾ ವಿಧುರನನ್ನು ಬಿಟ್ಟುಹೋಗಿದ್ದರೆ ಅವನ ವಿಧವೆ ಅಥವಾ ಅವಳ ವಿಧುರನು ಸದರಿ ಸ್ವತ್ತಿನ ಮೂರನೇ ಒಂದು ಭಾಗವನ್ನು ಸ್ವೀಕರಿಸತಕ್ಕುದು, ಮತ್ತು ಯಾವನೇ ಪಿತೃವಂಶಜನ ವಿಧವೆಯು ಅಥವಾ ವಿಧುರನು ಮತ್ತೊಂದು ಮೂರನೇ ಒಂದು ಭಾಗವನ್ನು ಸ್ವೀಕರಿಸತಕ್ಕುದು ಪಿತೃವಂಶಜರಿಗೆ ಒಬ್ಬರಿಗಿಂತ ಹೆಚ್ಚು ವಿಧವೆ ಅಥವಾ ವಿಧುರರು ಇದ್ದರೆ ಕೊನೆಯಲ್ಲಿ ಹೇಳಿದ ಮೂರನೇ ಒಂದು ಭಾಗವನ್ನು ಅವರೊಳಗೆ ಸಮನಾಗಿ ವಿಭಜಿಸತಕ್ಕುದು.

(ಸಿ) ಮರಣ ಶಾಸನ ರಹಿತನು/ಳು ಯಾರೇ ವಿಧವೆ ಅಥವಾ ವಿಧುರನನ್ನೂ ಬಿಟ್ಟುಹೋಗಿರದೆ ಪಿತೃವಂಶಜನ ಒಬ್ಬ ವಿಧವೆ ಅಥವಾ ವಿಧುರನನ್ನು ಬಿಟ್ಟುಹೋಗಿದ್ದರೆ ಅಂಥ ವಿಧವೆ ಅಥವಾ ವಿಧುರನು ಸದರಿ ಸ್ವತ್ತಿನ ಮೂರನೇ ಒಂದು ಭಾಗವನ್ನು ಸ್ವೀಕರಿಸತಕ್ಕುದು ಅಥವಾ ಮರಣ ಶಾಸನ ರಹಿತನು/ಳು ಯಾವಳೇ ವಿಧವೆ ಅಥವಾ ಯಾವನೇ ವಿಧುರನನ್ನು ಬಿಟ್ಟುಹೋಗಿರದೆ ಪಿತೃವಂಶಜನ ಒಬ್ಬಳಿಗಿಂತ ಹೆಚ್ಚು ವಿಧವೆ ಅಥವಾ ವಿಧುರನನ್ನು ಬಿಟ್ಟುಹೋಗಿದ್ದರೆ, ಸದರಿ ಸ್ವತ್ತಿನ ಮೂರನೇ ಎರಡು ಭಾಗವನ್ನು ಪಿತೃವಂಶಜನ ಅಂಥ ವಿಧವೆ ಅಥವಾ ವಿಧುರರಲ್ಲಿ ಸಮನಾದ ಪಾಲುಗಳಲ್ಲಿ ವಿಭಜಿಸತಕ್ಕುದು.

(ಡಿ) (ಎ), (ಬಿ) ಅಥವಾ (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ವಿಭಜನೆಯನ್ನು ಮಾಡಿದ ತರುವಾಯ ಉಳಿದುದನ್ನು II ನೇ ಅನುಸೂಚಿಯ ಭಾಗ I ರಲ್ಲಿ ನಿರ್ದಿಷ್ಟಪಡಿಸಿದ ಕ್ರಮದಲ್ಲಿ ಮರಣ ಶಾಸನ ರಹಿತನ ಬಂಧುಗಳಲ್ಲಿ ವಿತರಣೆ ಮಾಡತಕ್ಕುದು; ಆ ಅನುಸೂಚಿಯ 1ನೇ ಭಾಗದಲ್ಲಿ ಮೊದಲನೆಯವನಾಗಿರುವ ನಿಕಟ ಬಂಧುವನ್ನು ಎರಡನೆಯವನಿಗೆ ಬದಲಾಗಿ, ಎರಡನೆಯವನನ್ನು ಮೂರನೆಯವನ ಬದಲಾಗಿ ಮತ್ತು ಹಾಗೆಯೇ ಕ್ರಮಶಃ ಉತ್ತರಾಧಿಕಾರದಲ್ಲಿ ಆರಿಸಿಕೊಳ್ಳತಕ್ಕುದು. ಪರಂತು ಆ ಸ್ವತ್ತನ್ನು ಹತ್ತಿರದ ಅದೇ ಶ್ರೇಣಿಯಲ್ಲಿರುವ ಪ್ರತಿಯೊಬ್ಬ ಪುರುಷ ಮತ್ತು ಮಹಿಳೆಯು ಸಮ ಪಾಲನ್ನು ತೆಗೆದುಕೊಳ್ಳುವ ಹಾಗೆ ವಿತರಣೆ ಮಾಡತಕ್ಕುದು.

(ಇ) (ಡಿ) ಖಂಡದ ಮೇರೆಗೆ ಉಳಿದ ಸ್ವತ್ತಿಗೆ ಹಕ್ಕುಳ್ಳವರಾದ ಯಾರೇ ಬಂಧುಗಳು ಇರದಿದ್ದರೆ, ಉಳಿದದ್ದನ್ನು ಪೂರ್ತಿ ಈ ಪ್ರಕರಣದ ಮೇರೆಗೆ ಪಾಲುಗಳನ್ನು ಸ್ವೀಕರಿಸಲು ಹಕ್ಕುಳ್ಳವರಾದ ವ್ಯಕ್ತಿಗಳೊಳಗೆ ನಿರ್ದಿಷ್ಟಪಡಿಸಿದ ಪಾಲುಗಳ ಪ್ರಮಾಣಕ್ಕನುಸಾರವಾಗಿ ವಿತರಣೆ ಮಾಡತಕ್ಕುದು.

55. ಮರಣಶಾಸನರಹಿತನು ಪಿತೃವಂಶಜರನ್ನಾಗಲಿ ಅಥವಾ ಒಬ್ಬ ವಿಧವೆ ಅಥವಾ ವಿಧುರನನ್ನಾಗಲಿ ಅಥವಾ ಯಾವನೇ ಪಿತೃವಂಶಜನ ವಿಧವೆಯನ್ನೇ ಆಗಲಿ ಬಿಟ್ಟು ಹೋಗಿರದಿರುವ ಸಂಬಂಧದಲ್ಲಿ ಸ್ವತ್ತಿನ ವಿಭಜನೆ:- ಪಾರ್ಸಿಯು, ಯಾವನೇ ಪಿತೃವಂಶಜನನ್ನೇ ಆಗಲಿ ಅಥವಾ ವಿಧವೆ ಅಥವಾ ವಿಧುರನನ್ನೇ ಆಗಲಿ ಅಥವಾ ಯಾವನೇ ಪಿತೃವಂಶಜನ ವಿಧವೆಯನ್ನು ಅಥವಾ ವಿಧುರನನ್ನೇ ಆಗಲಿ ಬಿಡದೆ ಮರಣ ಹೊಂದಿದಾಗ ಅವನ ಅಥವಾ ಅವಳ ನಿಕಟ ಬಂಧುವು II ನೇ ಅನುಸೂಚಿಯ II ನೇ ಭಾಗದಲ್ಲಿ ವಿವರಿಸಿದ ಕ್ರಮದಲ್ಲಿ ಅವನು ಅಥವಾ ಅವಳು ಮರಣ ಶಾಸನ ರಹಿತನಾಗಿ/ಳಾಗಿ ಮರಣ ಹೊಂದಿದಂಥ ಇಡೀ ಸ್ವತ್ತಿಗೆ ಉತ್ತರಾಧಿಕಾರಿಯಾಗಲು ಹಕ್ಕುಳ್ಳವನಾಗಿರತಕ್ಕುದು/ಳಾಗಿರತಕ್ಕುದು, ಆ ಅನುಸೂಚಿಯ II ನೇ ಭಾಗದಲ್ಲಿ ಮೊದಲಲ್ಲಿರುವ ನಿಕಟಬಂಧುವನ್ನು ಎರಡನೆಯ ಸ್ಥಾನದಲ್ಲಿರುವವನ ಬದಲಾಗಿ, ಎರಡನೆಯವನು ಮೂರನೆಯ ಸ್ಥಾನದಲ್ಲಿರುವವನ ಬದಲಾಗಿ ಮತ್ತು ಹಾಗೆಯೇ ಕ್ರಮಶಃ ಆರಿಸಿಕೊಳ್ಳತಕ್ಕುದು, ಆದರೆ ಆ ಸ್ವತ್ತನ್ನು ಹತ್ತಿರದ ಅದೇ ಶ್ರೇಣಿಯಲ್ಲಿರುವ ಪ್ರತಿಯೊಬ್ಬ ಪುರುಷನು ಮತ್ತು ಮಹಿಳೆಯು ಸಮಾನ ಪಾಲನ್ನು ತೆಗೆದುಕೊಳ್ಳುವ ಹಾಗೆ ವಿತರಣೆ ಮಾಡತಕ್ಕುದು.

56. ಈ ಅಧ್ಯಾಯದ ಇತರ ಉಪಬಂಧಗಳ ಮೇರೆಗೆ ಉತ್ತರಾಧಿಕಾರಿಯಾಗಲು ಹಕ್ಕುಳ್ಳ ಯಾವನೇ ಬಂಧುವು ಇಲ್ಲದಿರುವಲ್ಲಿ ಸ್ವತ್ತಿನ ವಿಭಜನೆ:- ಮರಣ ಶಾಸನ ರಹಿತನಾಗಿ ಮರಣ ಹೊಂದಿರುವಂಥ ಪಾರ್ಸಿಯ ಸ್ವತ್ತಿಗೆ ಈ ಅಧ್ಯಾಯದ ಇತರ ಉಪಬಂಧಗಳ ಮೇರೆಗೆ ಉತ್ತರಾಧಿಕಾರಿಯಾಗಲು ಹಕ್ಕುಳ್ಳ ಯಾವ ಬಂಧುವೂ ಇಲ್ಲದಿರುವಲ್ಲಿ, ಸದರಿ ಸ್ವತ್ತನ್ನು ಮರಣ ಶಾಸನ ರಹಿತನ ರಕ್ತ ಸಂಬಂಧಿಗಳ ಅತಿ ನಿಕಟ ಶ್ರೇಣಿಯಲ್ಲಿರುವ ಅವನ ಬಂಧುಗಳಲ್ಲಿ ಸಮನಾಗಿ ವಿಭಜಿಸತಕ್ಕುದು.

## ಭಾಗ - VI

## ಮರಣ ಶಾಸನಸಹಿತ ಉತ್ತರಾಧಿಕಾರ

### ಅಧ್ಯಾಯ - I

### ಪ್ರಾಸ್ತಾವಿಕ

57. ಹಿಂದೂಗಳು, ಮುಂತಾದವರು ಮಾಡಿದ ಉಯಿಲುಗಳ ವರ್ಗಕ್ಕೆ ಈ ಭಾಗದ ಕೆಲವು ಉಪಬಂಧಗಳ ಅನ್ವಯ:- III ನೇ ಅನುಸೂಚಿಯಲ್ಲಿ ವಿವರಿಸಿದಂಥ ಈ ಭಾಗದ ಉಪಬಂಧಗಳು, ಅದರಲ್ಲಿ ನಿರ್ದಿಷ್ಟಪಡಿಸಿದ ಪರಿಬಂಧಗಳು ಮತ್ತು ಮಾರ್ಪಾಟುಗಳಿಗೆ ಒಳಪಟ್ಟು,-

(ಎ) 1870ರ ಸೆಪ್ಟೆಂಬರ್ ಮೊದಲನೆಯ ದಿನದಂದು ಅಥವಾ ಆ ತರುವಾಯ, ಸದರಿ ದಿನಾಂಕದಂದು ಬಂಗಾಳದ ಲೆಫ್ಟಿನೆಂಟ್ ಗವರ್ನರ್ ಆಡಳಿತಕ್ಕೆ ಒಳಪಟ್ಟಿದ್ದಂಥ ರಾಜ್ಯ ಕ್ಷೇತ್ರಗಳೊಳಗೆ ಅಥವಾ ಮದ್ರಾಸ್ ಮತ್ತು ಮುಂಬೈನಲ್ಲಿನ ಉಚ್ಚ ನ್ಯಾಯಾಲಯಗಳ ಸಾಮಾನ್ಯ ಅಸಲು ಸಿವಿಲ್ ಅಧಿಕಾರ ವ್ಯಾಪ್ತಿಯಲ್ಲಿನ ಸ್ಥಳೀಯ ಪರಿಮಿತಿಗಳೊಳಗೆ ಯಾವನೇ ಹಿಂದು, ಬೌದ್ಧ, ಸಿಖ್ ಅಥವಾ ಜೈನನು ಮಾಡಿದ ಎಲ್ಲಾ ಉಯಿಲುಗಳು ಮತ್ತು ಉಯಿಲಿನ ಅನುಬಂಧಗಳಿಗೆ; ಮತ್ತು

(ಬಿ) ಆ ರಾಜ್ಯ ಕ್ಷೇತ್ರಗಳ ಮತ್ತು ಪರಿಮಿತಿಗಳ ಒಳಗೆ ಇರುವ ಸ್ಥಿರ ಸ್ವತ್ತಿಗೆ ಸಂಬಂಧಿಸುವಷ್ಟರ ಮಟ್ಟಿಗೆ ಆ ರಾಜ್ಯ ಕ್ಷೇತ್ರಗಳು ಮತ್ತು ಪರಿಮಿತಿಗಳ ಹೊರಗೆ ಮಾಡಿದ ಅಂಥ ಎಲ್ಲ ಉಯಿಲುಗಳು ಮತ್ತು ಉಯಿಲಿನ ಅನುಬಂಧಗಳಿಗೆ; ಮತ್ತು

(ಸಿ) 1927ರ ಜನವರಿ ಒಂದನೇ ದಿವಸದಂದು ಅಥವಾ ಆ ತರುವಾಯ ಯಾವನೇ ಹಿಂದೂ, ಬೌದ್ಧ, ಸಿಖ್ ಅಥವಾ ಜೈನನು ಮಾಡಿದ ಯಾವ ಉಯಿಲುಗಳು ಮತ್ತು ಉಯಿಲಿನ ಅನುಬಂಧಗಳಿಗೆ (ಎ) ಮತ್ತು (ಬಿ) ಖಂಡಗಳ ಮೂಲಕ ಆ ಉಪಬಂಧವು ಅನ್ವಯವಾಗುವುದಿಲ್ಲವೋ ಆ ಎಲ್ಲ ಉಯಿಲುಗಳಿಗೆ ಮತ್ತು ಉಯಿಲಿನ ಅನುಬಂಧಗಳಿಗೆ

- ಅನ್ವಯವಾಗತಕ್ಕುದು:

ಪರಂತು, ವಿವಾಹವು ಯಾವುದೇ ಉಯಿಲು ಅಥವಾ ಉಯಿಲಿನ ಅನುಬಂಧವನ್ನು ರದ್ದುಪಡಿಸತಕ್ಕುದಲ್ಲ.

58. ಈ ಭಾಗದ ಸಾಮಾನ್ಯಾನ್ವಯ :- (1) ಈ ಭಾಗದ ಉಪಬಂಧಗಳು ಯಾವನೇ ಮಹಮದೀಯನ ಸ್ವತ್ತಿನ ಮರಣ ಶಾಸನ ಸಹಿತ ಉತ್ತರಾಧಿಕಾರಕ್ಕೆ ಅಥವಾ 57ನೇ ಪ್ರಕರಣದಲ್ಲಿ ಉಪಬಂಧಿಸಿದಂತೆ ಹೊರತು ಯಾವನೇ ಹಿಂದು, ಬೌದ್ಧ, ಸಿಖ್ ಅಥವಾ ಜೈನ್‌ನ ಸ್ವತ್ತಿನ ಮರಣ ಶಾಸನ ಸಹಿತ ಉತ್ತರಾಧಿಕಾರಕ್ಕೆ ಅಥವಾ 1866ರ ಜನವರಿ ಮೊದಲನೇ ದಿವಸಕ್ಕೆ ಮುಂಚೆ ಮಾಡಿದ ಯಾವುದೇ ಉಯಿಲಿಗೆ ಅನ್ವಯವಾಗತಕ್ಕುದಲ್ಲ.

(2) (1)ನೇ ಉಪಪ್ರಕರಣದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಉಪಬಂಧಿಸಿದ್ದಂತೆ ಹೊರತು, ಈ ಭಾಗದ ಉಪಬಂಧಗಳು, ಎಲ್ಲಾ ಮರಣ ಶಾಸನ ಸಹಿತ ಉತ್ತರಾಧಿಕಾರದ ಎಲ್ಲಾ ಪ್ರಕರಣಗಳಿಗೆ ಅನ್ವಯವಾಗುವ ಭಾರತ ಕಾನೂನಾಗಿರತಕ್ಕುದು.

### ಅಧ್ಯಾಯ - II

### ಉಯಿಲುಗಳು ಮತ್ತು ಉಯಿಲಿನ ಅನುಬಂಧಗಳ ಬಗ್ಗೆ

59. ಉಯಿಲುಗಳನ್ನು ಮಾಡಲು ಸಮರ್ಥನಾದ ವ್ಯಕ್ತಿ:- ಅಪ್ರಾಪ್ತ ವಯಸ್ಕನಲ್ಲದ ಸ್ವಸ್ಥಚಿತ್ತನಾದ ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ವತ್ತನ್ನು ಉಯಿಲಿನ ಮೂಲಕ ವಿಲೆ ಮಾಡಬಹುದು.

ವಿವರಣೆ 1 :- ಒಬ್ಬ ವಿವಾಹಿತ ಮಹಿಳೆಯು ತನ್ನ ಜೀವಿತ ಕಾಲದಲ್ಲಿ ತನ್ನ ಸ್ವಂತ ಕಾರ್ಯದ ಮೂಲಕ ಪರಭಾರೆ ಮಾಡಬಹುದಾದಂಥ ಯಾವುದೇ ಸ್ವತ್ತನ್ನು ಉಯಿಲಿನ ಮೂಲಕ ವಿಲೆ ಮಾಡಬಹುದು.

ವಿವರಣೆ 2 :- ಕಿವುಡ ಅಥವಾ ಮೂಕ ಅಥವಾ ಕುರುಡ ಇವರು, ಉಯಿಲು ಮೂಲಕ ತಾವು ಏನು ಮಾಡುತ್ತಿದ್ದೇವೆಂದು ತಿಳಿಯಲು ಸಮರ್ಥರಾಗಿದ್ದರೆ, ಅವರು ಆ ಮೂಲಕ ಉಯಿಲು ಮಾಡಲು ಅಸಮರ್ಥರಾಗತಕ್ಕುದಲ್ಲ.

ವಿವರಣೆ 3 :- ಸಾಮಾನ್ಯವಾಗಿ ಮನೋವಿಕಲನಾದ ವ್ಯಕ್ತಿಯು, ಅವನು ಸ್ವಸ್ಥಚಿತ್ತನಾಗಿರುವಂಥ ಮಧ್ಯಂತರದಲ್ಲಿ ಉಯಿಲನ್ನು ಮಾಡಬಹುದು.

ವಿವರಣೆ 4 :- ಯಾವನೇ ವ್ಯಕ್ತಿಯು ಪಾನಮತ್ತತೆಯಿಂದ ಅಥವಾ ಕಾಯಿಲೆಯಿಂದ ಅಥವಾ ಇತರ ಯಾವುದೇ ಕಾರಣದಿಂದ ತಾನು ಏನನ್ನು ಮಾಡುತ್ತಿದ್ದೇನೆಂದು ತಿಳಿಯಲಾಗದಂತಹ ಮನಸ್ಥಿತಿಯಲ್ಲಿರುವಾಗ ಯಾವುದೇ ಉಯಿಲನ್ನು ಮಾಡಲಾಗದು.

ದೃಷ್ಟಾಂತಗಳು

(i) 'ಎ' ನು ತನ್ನ ನಿಕಟ ನೆರೆಯಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಗ್ರಹಿಸಬಲ್ಲ ಮತ್ತು ಪರಿಚಿತ ಪ್ರಶ್ನೆಗಳಿಗೆ ಉತ್ತರ ಕೊಡಬಲ್ಲ, ಆದರೆ ತನ್ನ ಸ್ವತ್ತಿನ ಸ್ವರೂಪ ಅಥವಾ ಅವನಿಗೆ ರಕ್ತಸಂಬಂಧಿಕರಾದ ವ್ಯಕ್ತಿಗಳು ಯಾರು ಎಂಬ ಬಗ್ಗೆ ಅಥವಾ ಯಾರ ಹೆಸರಿನಲ್ಲಿ ತಾನು ಉಯಿಲನ್ನು ಮಾಡುವುದು ಸರಿ ಎಂಬುದರ ಬಗ್ಗೆ ಸಕ್ಷಮ ತಿಳಿವಳಿಕೆಯನ್ನು ಹೊಂದಿಲ್ಲ. 'ಎ' ನು ಸಿಂಧುವಾದ ಉಯಿಲನ್ನು ಮಾಡಲಾಗದು.

(ii) 'ಎ' ನು ಉಯಿಲೆಂದು ತಾತ್ಪರ್ಯವಾಗುವ ಒಂದು ಲಿಖಿತವನ್ನು ಬರೆಯುತ್ತಾನೆ. ಆದರೆ ಅವನು ಪತ್ರದ ಸ್ವರೂಪವನ್ನಾಗಲಿ ಅಥವಾ ಅದರ ಉಪಬಂಧಗಳ ಪರಿಣಾಮವನ್ನಾಗಲಿ ತಿಳಿಯಲಾರ. ಈ ಲಿಖಿತವು ಸಿಂಧುವಾದ ಉಯಿಲಾಗುವುದಿಲ್ಲ.

(iii) 'ಎ' ನು ಬಹಳ ಅಶಕ್ತ ಮತ್ತು ಬಲಹೀನನಾಗಿದ್ದಾನೆ, ಆದರೆ ತನ್ನ ಸ್ವತ್ತನ್ನು ವಿಲೆ ಮಾಡುವ ಸರಿಯಾದ ವಿಧಾನದ ಬಗ್ಗೆ ತೀರ್ಮಾನವನ್ನು ಕೈಗೊಳ್ಳಲು ಸಮರ್ಥನಾಗಿದ್ದು ಉಯಿಲು ಮಾಡುತ್ತಾನೆ. ಇದು ಸಿಂಧುವಾದ ಉಯಿಲಾಗುತ್ತದೆ.

60. ಮರಣಶಾಸನ ಸಹಿತ ಪಾಲಕ:- ಒಬ್ಬ ತಂದೆಯು, ಅವನ ವಯಸ್ಸು ಏನೇ ಆಗಿರಲಿ, ಉಯಿಲು ಮೂಲಕ ಅವನ ಮಗುವಿಗಾಗಿ, ಆ ಮಗು ಅಪ್ರಾಪ್ತ ವಯಸ್ಕನಾಗಿರುವಾಗ ಪಾಲಕ ಅಥವಾ ಪಾಲಕರನ್ನು ನೇಮಕ ಮಾಡಬಹುದು.

61. ಮೋಸ, ಬಲಾತ್ಕಾರ ಅಥವಾ ಅತಿಯಾಚನೆಯ ಮೂಲಕ ಪಡೆದ ಉಯಿಲು:- ಯಾವ ಉಯಿಲು ಅಥವಾ ಅದರ ಯಾವುದೇ ಭಾಗವನ್ನು ಮೋಸ, ಬಲಾತ್ಕಾರ ಅಥವಾ ಮರಣಶಾಸನ ಕರ್ತನ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುವಂತೆ ಒತ್ತಾಯ ಪೂರ್ವಕ ಬೇಡಿಕೆಯ ಮೂಲಕ ಮಾಡಿಸಲಾಗಿದೆಯೋ ಆ ಯಾವುದೇ ಉಯಿಲು ಅಥವಾ ಅದರ ಯಾವುದೇ ಭಾಗವು ಶೂನ್ಯವಾಗುತ್ತದೆ.

ದೃಷ್ಟಾಂತಗಳು

(i) 'ಎ' ನು ಮರಣಶಾಸನ ಕರ್ತನಿಗೆ, ಮರಣಶಾಸನ ಕರ್ತನ ಒಂದೇ ಮಗುವು ಮೃತವಾಗಿದೆಯೆಂದು, ಅಥವಾ ಅವನು ಯಾವುದೇ ಅವಿಧೇಯ ಕಾರ್ಯವನ್ನು ಮಾಡಿದ್ದಾನೆಂದು ಸುಳ್ಳಾಗಿ ಮತ್ತು ಸುಳ್ಳೆಂದು ತಿಳಿದೂ ನಿರೂಪಿಸುತ್ತಾನೆ ಮತ್ತು ಆ ಮೂಲಕ ಮರಣಶಾಸನ ಕರ್ತರನ್ನು ತನ್ನ ಅಂದರೆ 'ಎ' ನ ಹೆಸರಿನಲ್ಲಿ ಉಯಿಲನ್ನು ಮಾಡಲು ಪ್ರೇರೇಪಿಸುತ್ತಾನೆ; ಅಂಥ ಮರಣಶಾಸನವನ್ನು, ಮೋಸದಿಂದ ಪಡೆಯಲಾಗಿದೆ. ಆದ್ದರಿಂದ ಅದು ಅಸಿಂಧುವಾಗಿದೆ.

(ii) 'ಎ' ನು ಮೋಸದಿಂದ ಮತ್ತು ವಂಚನೆಯಿಂದ ತನಗೆ ಮರಣ ಶಾಸನ ಸ್ವತ್ತನ್ನು ಮರಣಶಾಸನದ ಮೂಲಕ ಕೊಡುವಂತೆ ಮರಣಶಾಸನ ಕರ್ತೃವನ್ನು ಒಪ್ಪಿಸುತ್ತಾನೆ. ಆ ಮರಣಶಾಸನ ದಾನವು ಶೂನ್ಯವಾಗುತ್ತದೆ.

(iii) 'ಎ' ನು ಕಾನೂನು ಸಮ್ಮತ ಅಧಿಕಾರದ ಮೂಲಕ ಬಂಧಿಯಾಗಿದ್ದು, ತನ್ನ ಉಯಿಲನ್ನು ಮಾಡುತ್ತಾನೆ. ಆ ಕಾರಾವಾಸದ ಕಾರಣದಿಂದಾಗಿ ಮರಣಶಾಸನವು ಅಸಿಂಧುವಾಗದು.

(iv) 'ಎ' ನು 'ಬಿ' ನಿಗೆ, ಅವನು 'ಸಿ' ನ ಹೆಸರಿನಲ್ಲಿ ಮರಣಶಾಸನದಾನವನ್ನು ಮಾಡದಿದ್ದರೆ ಗುಂಡಿಕ್ಕುವುದಾಗಿ ಅಥವಾ ಅವನ ಮನೆಯನ್ನು ಸುಡುವುದಾಗಿ ಅಥವಾ ಅಪರಾಧಿಕ ಆರೋಪದ ಮೇಲೆ ಅವನನ್ನು ದಸ್ತಗಿರಿ ಮಾಡಿಸುವುದಾಗಿ ಬೆದರಿಕೆ ಹಾಕುತ್ತಾನೆ. ಆ ಪರಿಣಾಮವಾಗಿ 'ಬಿ' ನು 'ಸಿ' ನ ಹೆಸರಿನಲ್ಲಿ ಮರಣ ಶಾಸನ ದಾನವನ್ನು ಮಾಡುತ್ತಾನೆ. ಬಲಾತ್ಕಾರದ ಮೂಲಕ ಆ ಮರಣಶಾಸನ ದಾನವನ್ನು ಮಾಡಿಕೊಂಡಿರುವುದರಿಂದ ಅದು ಶೂನ್ಯವಾಗುತ್ತದೆ.

(v) ಇತರರ ಪ್ರಭಾವದ ಮೂಲಕ ಕ್ಷೋಭೆಗೊಳ್ಳದಿದ್ದರೆ ಉಯಿಲನ್ನು ಮಾಡಲು ಸಾಕಷ್ಟು ಬುದ್ಧಿಶಕ್ತಿವುಳ್ಳವನಾಗಿದ್ದು, ಆದರೂ ತಾನು ಸ್ವತಂತ್ರನಾಗಿರದಷ್ಟರ ಮಟ್ಟಿಗೆ 'ಬಿ' ನ ಹತೋಟಿಯಲ್ಲಿದ್ದು ಉಯಿಲನ್ನು 'ಬಿ' ನು ಹೇಳಿ ಬರೆಯಿಸಿದಂತೆ ಮಾಡುತ್ತಾನೆ. 'ಬಿ' ನ ಅಂಜಿಕೆಯಿಲ್ಲದಿದ್ದರೆ ಮರಣಶಾಸನವನ್ನು ಅವನು ಬರೆದುಕೊಡುತ್ತಿರಲಿಲ್ಲವೆಂದು ಕಂಡುಬರುತ್ತದೆ. ಉಯಿಲು ಅಸಿಂಧುವಾಗಿದೆ.

(vi) 'ಎ' ನು ಅತಿಯಾಚನೆಯನ್ನು ತಡೆದುಕೊಳ್ಳಲು ಅಸಮರ್ಥನಾಗಿರುವ ಹಾಗೆ ಅಶಕ್ತ ಆರೋಗ್ಯ ಸ್ಥಿತಿಯವನಾಗಿದ್ದು, ಒಂದು ನಿಶ್ಚಿತ ಅರ್ಥದ ಉಯಿಲನ್ನು ಮಾಡಲು 'ಬಿ' ನು ಅವನನ್ನು ಒತ್ತಾಯಿಸುತ್ತಾನೆ. ಕೇವಲ ಶಾಂತಿಯನ್ನು ಪಡೆಯುವುದಕ್ಕಾಗಿ ಮಾತ್ರ 'ಬಿ' ನಿಗೆ ಮಣಿದು ಹಾಗೆ ಮಾಡುತ್ತಾನೆ. ಆ ಉಯಿಲು ಅಸಿಂಧುವಾಗಿದೆ.

(vii) 'ಎ'ನು ತನ್ನ ಸ್ವಂತ ತೀರ್ಮಾನ ಹಾಗೂ ಇಚ್ಛಾಶಕ್ತಿಯನ್ನು ಚಲಾಯಿಸಲು ಸಮರ್ಥನಾಗಿರುವಂಥ ಆರೋಗ್ಯ ಸ್ಥಿತಿಯಲ್ಲಿದ್ದು, ಒಂದು ನಿಶ್ಚಿತ ಅರ್ಥದ ಉಯಿಲನ್ನು ಮಾಡಲು ಅವನನ್ನು ಪ್ರೇರೇಪಿಸಲು 'ಬಿ' ನು ಅವಸರದ ಮಧ್ಯಸ್ಥಿಕೆ ವಹಿಸಿ ಮನವೊಲಿಸುತ್ತಾನೆ. 'ಎ' ನು ಆ ಮಧ್ಯಸ್ಥಿಕೆ ಮತ್ತು ಮನವೊಲಿಸುವಿಕೆಯ ಪರಿಣಾಮವಾಗಿ ಮತ್ತು ತನ್ನ ತೀರ್ಮಾನ ಮತ್ತು ಇಚ್ಛಾಶಕ್ತಿಯನ್ನು ಸ್ವತಂತ್ರವಾಗಿ ಉಪಯೋಗಿಸಿ 'ಬಿ' ನು ಶಿಫಾರಸು ಮಾಡಿದ ರೀತಿಯಲ್ಲಿ ತನ್ನ ಉಯಿಲನ್ನು ಮಾಡುತ್ತಾನೆ. 'ಬಿ' ನ ಮಧ್ಯಸ್ಥಿಕೆ ಹಾಗೂ ಮನವೊಲಿಸುವಿಕೆಯಿಂದಾಗಿ ಉಯಿಲು ಅಸಿಂಧುವಾಗುವುದಿಲ್ಲ.

(viii) 'ಎ' ನು 'ಬಿ' ನಿಂದ ಮರಣಶಾಸನ ಸ್ವತ್ತನ್ನು ಪಡೆಯುವ ದೃಷ್ಟಿಯಿಂದ ಅವನ ಕಡೆ ಗಮನ ಕೊಡುತ್ತಾನೆ ಮತ್ತು ಅವನ ಮುಖಸ್ತುತಿ ಮಾಡುತ್ತಾನೆ ಮತ್ತು ಆ ಮೂಲಕ ಅವನಲ್ಲಿ 'ಎ' ನ ಪರವಾಗಿ ವಿಚಿತ್ರ ಪಕ್ಷಪಾತವುಂಟಾಗುವಂತೆ ಮಾಡುತ್ತಾನೆ. 'ಬಿ' ನು ಅಂಥ ಗಮನ ಕೊಡುವಿಕೆ ಮತ್ತು ಮುಖಸ್ತುತಿಯ ಪರಿಣಾಮವಾಗಿ 'ಎ' ನಿಗೆ ಒಂದು ಮರಣಶಾಸನ ಸ್ವತ್ತನ್ನು ಕೊಡುವಂಥ ಉಯಿಲು ಮಾಡುತ್ತಾನೆ. ಆ ಮರಣಶಾಸನ ದಾನವು 'ಎ' ಗಮನ ಕೊಡುವಿಕೆ ಮತ್ತು ಮುಖಸ್ತುತಿಯಿಂದ ಅಸಿಂಧುವಾಗತಕ್ಕುದಲ್ಲ.

62. ಉಯಿಲನ್ನು ರದ್ದುಗೊಳಿಸಬಹುದು ಅಥವಾ ಬದಲಾಯಿಸಬಹುದು:- ಒಂದು ಉಯಿಲನ್ನು ಮಾಡಿದವನು, ಅವನ ಸ್ವತ್ತನ್ನು ಮರಣಶಾಸನದ ಮೂಲಕ ವಿಲೆ ಮಾಡಲು ಅವನು ಸಕ್ಷಮನಾಗಿರುವಾಗ ಯಾವುದೇ ಕಾಲದಲ್ಲಿ ಅದನ್ನು ರದ್ದುಗೊಳಿಸಬಹುದು ಅಥವಾ ಬದಲಾಯಿಸಬಹುದು.

## ಅಧ್ಯಾಯ - III

### ವಿಶೇಷಾಧಿಕಾರವಿಲ್ಲದ ಉಯಿಲುಗಳನ್ನು ಬರೆದುಕೊಡುವುದರ ಬಗ್ಗೆ

63. ವಿಶೇಷಾಧಿಕಾರವಿಲ್ಲದ ಉಯಿಲುಗಳನ್ನು ಬರೆದುಕೊಡುವುದು:- ದಂಡ ಯಾತ್ರೆಯಲ್ಲಿ ನಿಯೋಜಿತನಾದ ಅಥವಾ ವಾಸ್ತವ ಯುದ್ಧದಲ್ಲಿ ತೊಡಗಿದ ಅಥವಾ ಹಾಗೆ ನಿಯೋಜಿತನಾದ ಅಥವಾ ತೊಡಗಿದ ವೈಮಾನಿಕನಲ್ಲದ ಅಥವಾ ಸಮುದ್ರದ ಮೇಲೆ ನಾವಿಕನಲ್ಲದ ಪ್ರತಿಯೊಬ್ಬ ಮರಣಶಾಸನ ಕರ್ತನು ತನ್ನ ಉಯಿಲನ್ನು ಈ ಕೆಳಕಂಡ ನಿಯಮಗಳಿಗೆ ಅನುಸಾರವಾಗಿ ಬರೆದುಕೊಡತಕ್ಕುದು:-

(ಎ) ಮರಣಶಾಸನ ಕರ್ತನು ಉಯಿಲಿಗೆ ರುಜು ಮಾಡತಕ್ಕುದು. ಅದಕ್ಕೆ ತನ್ನ ಗುರುತನ್ನು ಹಾಕತಕ್ಕುದು ಅಥವಾ ಅವನ ಸಮಕ್ಷಮದಲ್ಲಿ ಮತ್ತು ಅವನ ನಿರ್ದೇಶನದ ಮೇರೆಗೆ ಯಾವನೇ ಇತರ ವ್ಯಕ್ತಿಯು ಅದಕ್ಕೆ ರುಜು ಮಾಡತಕ್ಕುದು.

(ಬಿ) ಮರಣಶಾಸನ ಕರ್ತನು ರುಜು ಅಥವಾ ಗುರುತು ಅಥವಾ ಅವನಿಗಾಗಿ ರುಜು ಮಾಡುವ ವ್ಯಕ್ತಿಯ ರುಜು, ಆ ಮೂಲಕ ಉಯಿಲೆಂಬಂತೆ ಆ ಬರಹವನ್ನು ಜಾರಿಗೊಳಿಸಲು ಉದ್ದೇಶಿಸಲಾಗಿತ್ತೆಂದು ಅದು ಕಂಡುಬರುವ ಹಾಗೆ ಇರತಕ್ಕುದು.

(ಸಿ) ಉಯಿಲಿಗೆ ಇಬ್ಬರು ಅಥವಾ ಹೆಚ್ಚು ಸಾಕ್ಷಿಗಳು ಅನುಪ್ರಮಾಣಿಸತಕ್ಕುದು. ಅವರಲ್ಲಿ ಪ್ರತಿಯೊಬ್ಬನು ಮರಣಶಾಸನ ಕರ್ತನ ಉಯಿಲಿಗೆ ರುಜು ಮಾಡುವುದನ್ನು ಅಥವಾ ಗುರುತು ಹಾಕುವುದನ್ನು ನೋಡಿರಬೇಕು, ಅಥವಾ ಮರಣಶಾಸನ ಕರ್ತನ ಸಮಕ್ಷಮದಲ್ಲಿ ಮತ್ತು ಅವನ ನಿರ್ದೇಶನದ ಮೇರೆಗೆ ಉಯಿಲಿಗೆ ಬೇರೊಬ್ಬ ವ್ಯಕ್ತಿಯು ರುಜು ಮಾಡುವುದನ್ನು ನೋಡಿರಬೇಕು ಅಥವಾ ಮರಣಶಾಸನ ಕರ್ತನಿಂದ ಅವನ ರುಜು ಅಥವಾ ಗುರುತಿನ ಬಗ್ಗೆ ಅಥವಾ ಅಂಥ ಇತರ ವ್ಯಕ್ತಿಯ ರುಜುವಿನ ಬಗ್ಗೆ ವೈಯಕ್ತಿಕ ಒಪ್ಪಿಗೆಯನ್ನು ಪಡೆದಿರಬೇಕು ಮತ್ತು ಪ್ರತಿಯೊಬ್ಬ ಸಾಕ್ಷಿಯು ಮರಣಶಾಸನ ಕರ್ತನ ಸಮಕ್ಷಮದಲ್ಲಿ ಉಯಿಲಿಗೆ ರುಜು ಹಾಕತಕ್ಕುದು. ಆದರೆ ಆ ಸಮಯದಲ್ಲಿ ಒಬ್ಬನಿಗಿಂತ ಹೆಚ್ಚು ಸಾಕ್ಷಿಗಳು ಹಾಜರಿರುವುದು ಅವಶ್ಯವಿರತಕ್ಕುದಲ್ಲ ಮತ್ತು ಅನುಪ್ರಮಾಣದ ಯಾವುದೇ ವಿಶಿಷ್ಟ ರೀತಿಯು ಅವಶ್ಯವಿರತಕ್ಕುದಲ್ಲ.

64. ಉಲ್ಲೇಖದ ಮೂಲಕ ಕಾಗದ ಪತ್ರಗಳ ಸೇರ್ಪಡೆ:- ಮರಣ ಶಾಸನ ಕರ್ತನು, ಕ್ರಮಬದ್ಧವಾಗಿ ಅನುಪ್ರಮಾಣಿತವಾದ ಉಯಿಲು ಅಥವಾ ಉಯಿಲಿನ ಅನುಬಂಧದಲ್ಲಿ ತನ್ನ ಆಶಯಗಳ ಯಾವುದೇ ಭಾಗವನ್ನು ವ್ಯಕ್ತಪಡಿಸುವಂತೆ ಆಗ ವಾಸ್ತವವಾಗಿ ಬರೆಯಲಾದ ಯಾವುದೇ ಇತರ ದಸ್ತಾವೇಜಿನ ಬಗ್ಗೆ ಉಲ್ಲೇಖಿಸಿದರೆ, ಅಂತಹ ದಸ್ತಾವೇಜು, ಅದನ್ನು ಉಲ್ಲೇಖಿಸಿರುವಂಥ ಉಯಿಲು ಅಥವಾ ಉಯಿಲಿನ ಅನುಬಂಧದ ಭಾಗವಾಗಿರುವುದಾಗಿ ಭಾವಿಸತಕ್ಕುದು.

## ಅಧ್ಯಾಯ - IV

### ವಿಶೇಷಾಧಿಕಾರದ ಉಯಿಲುಗಳ ಬಗ್ಗೆ

65. ವಿಶೇಷಾಧಿಕಾರದ ಉಯಿಲುಗಳು:- ದಂಡಯಾತ್ರೆಯಲ್ಲಿ ನಿಯೋಜಿತನಾದ ಅಥವಾ ವಾಸ್ತವವಾಗಿ ಯುದ್ಧದಲ್ಲಿ ತೊಡಗಿರುವ ಯಾವನೇ ಸೈನಿಕ ಅಥವಾ ಹಾಗೆ ನಿಯೋಜಿತನಾದ ಅಥವಾ ತೊಡಗಿರುವ ಒಬ್ಬ ವೈಮಾನಿಕ ಅಥವಾ ಸಮುದ್ರದ ಮೇಲಿರುವ ಯಾವನೇ ನಾವಿಕನು, ಅವನು ಹದಿನೆಂಟು ವರ್ಷ ವಯಸ್ಸನ್ನು ಪೂರ್ಣಗೊಳಿಸಿದ್ದರೆ ತನ್ನ ಸ್ವತ್ತನ್ನು 66ನೇ ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಉಯಿಲಿನ ಮೂಲಕ ವಿಲೆ ಮಾಡಬಹುದು. ಅಂಥ ಉಯಿಲುಗಳನ್ನು ವಿಶೇಷಾಧಿಕಾರದ ಉಯಿಲುಗಳೆಂದು ಕರೆಯಲಾಗುತ್ತದೆ.

ದೃಷ್ಟಾಂತಗಳು

(i) ಒಂದು ರೆಜಿಮೆಂಟಿಗೆ ಸೇರಿದ ವೈದ್ಯಾಧಿಕಾರಿಯಾದ 'ಎ' ನು ದಂಡಯಾತ್ರೆಯಲ್ಲಿ ವಾಸ್ತವವಾಗಿ ನಿಯೋಜಿತನಾಗಿದ್ದಾನೆ. ಅವನು ಒಂದು ದಂಡಯಾತ್ರೆಯಲ್ಲಿ ವಾಸ್ತವವಾಗಿ ನಿಯೋಜಿತನಾದ ಒಬ್ಬ ಸೈನಿಕನಾಗಿದ್ದಾನೆ. ಅವನು ವಿಶೇಷಾಧಿಕಾರದ ಉಯಿಲನ್ನು ಮಾಡಬಹುದು.

(ii) 'ಎ' ನು ನೌಕಾ ಕೋಶಾಧಿಕಾರಿಯಾಗಿರುವಂಥ ವ್ಯಾಪಾರಿ ಹಡಗಿನಲ್ಲಿ ಸಮುದ್ರದಲ್ಲಿದ್ದಾನೆ. ಅವನು ಒಬ್ಬ ನಾವಿಕನಾಗಿದ್ದಾನೆ. ಅವನು ಸಮುದ್ರದಲ್ಲಿರುವುದರಿಂದ ವಿಶೇಷಾಧಿಕಾರದ ಉಯಿಲನ್ನು ಮಾಡಬಹುದು.

(iii) ದಂಗೆ ಕೋರರ ವಿರುದ್ಧ ಯುದ್ಧ ಭೂಮಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸೈನಿಕನಾದ 'ಎ' ನು ವಾಸ್ತವವಾಗಿ ಯುದ್ಧದಲ್ಲಿ ತೊಡಗಿದ ಸೈನಿಕನಾಗಿದ್ದಾನೆ ಮತ್ತು ಹಾಗಿರುವುದರಿಂದ ವಿಶೇಷಾಧಿಕಾರದ ಉಯಿಲನ್ನು ಮಾಡಬಹುದು.

(iv) ಹಡಗಿನ ನಾವಿಕನಾದ 'ಎ'ನು ಸಮುದ್ರಯಾನದ ಕ್ರಮದಲ್ಲಿ ಹಡಗು ಬಂದರಿನಲ್ಲಿರುವಾಗ ತಾತ್ಕಾಲಿಕವಾಗಿ ತೀರದಲ್ಲಿರುತ್ತಾನೆ. ಈ ಪ್ರಕರಣದ ಉದ್ದೇಶಗಳಿಗಾಗಿ ಅವನು ಸಮುದ್ರದಲ್ಲಿರುವ ನಾವಿಕ ಹೀಗಾಗಿ ವಿಶೇಷಾಧಿಕಾರದ ಉಯಿಲನ್ನು ಮಾಡಬಹುದು.

(v) ನೌಕಾದಳದ ಆಧಿಪತ್ಯವನ್ನು ಹೊಂದಿರುವ ಅಡ್ಮಿರಲ್ ಆದ, ಆದರೆ ತೀರದಲ್ಲಿ ವಾಸಿಸುತ್ತಿರುವ ಮತ್ತು ಆಗಾಗ ಅವನ ಹಡಗಿಗೆ ಹೋಗುವ 'ಎ' ನನ್ನು ಸಮುದ್ರದಲ್ಲಿರುವನೆಂದು ಪರಿಗಣಿಸಲಾಗುವುದಿಲ್ಲ. ಅವನು ಒಂದು ವಿಶೇಷಾಧಿಕಾರದ ಉಯಿಲನ್ನು ಮಾಡಲಾಗದು.

(vi) ಸೈನಿಕ ದಂಡಯಾತ್ರೆಯಲ್ಲಿ ಭಾಗವಹಿಸಿ ಸೇವೆ ಸಲ್ಲಿಸುತ್ತಿರುವ ನಾವಿಕನಾದ, ಆದರೆ ಸಮುದ್ರದಲ್ಲಿರದ 'ಎ' ನನ್ನು ಒಬ್ಬ ಸೈನಿಕನೆಂದು ಪರಿಗಣಿಸಲಾಗಿದೆ, ಅವನು ಒಂದು ವಿಶೇಷಾಧಿಕಾರದ ಉಯಿಲನ್ನು ಮಾಡಬಹುದು.

66. ವಿಶೇಷಾಧಿಕಾರದ ಉಯಿಲುಗಳನ್ನು ಮಾಡುವ ವಿಧಾನ ಮತ್ತು ಅವುಗಳನ್ನು ಬರೆದು ಕೊಡುವ ನಿಯಮಗಳು:- (1) ವಿಶೇಷಾಧಿಕಾರದ ಉಯಿಲುಗಳು ಬರಹದಲ್ಲಿರಬಹುದು ಅಥವಾ ಅವುಗಳನ್ನು ಬಾಯಿಮಾತಿನ ಮೂಲಕ ಮಾಡಬಹುದು.

(2) ವಿಶೇಷಾಧಿಕಾರದ ಉಯಿಲುಗಳನ್ನು ಬರೆದು ಕೊಡುವುದು ಈ ಕೆಳಕಂಡ ನಿಯಮಗಳ ಮೂಲಕ ನಿಯಂತ್ರಿತವಾಗತಕ್ಕುದು:-

(ಎ) ಉಯಿಲನ್ನು ಪೂರ್ಣವಾಗಿ ಮರಣ ಶಾಸನ ಕರ್ತನು ತನ್ನ ಸ್ವಂತ ಬರಹದಲ್ಲಿ ಬರೆಯಬಹುದು. ಅಂತಹ ಸಂದರ್ಭದಲ್ಲಿ ಅದಕ್ಕೆ ರುಜು ಹಾಕಬೇಕಾಗಿಲ್ಲ ಅಥವಾ ಅದನ್ನು ಅನುಪ್ರಮಾಣಿಸಬೇಕಿಲ್ಲ.

(ಬಿ) ಅದನ್ನು ಪೂರ್ಣವಾಗಿ ಅಥವಾ ಭಾಗಶಃ ಬೇರೊಬ್ಬ ವ್ಯಕ್ತಿಯು ಬರೆಯಬಹುದು ಮತ್ತು ರುಜು ಹಾಕಬಹುದು. ಅಂತಹ ಸಂದರ್ಭದಲ್ಲಿ ಅದನ್ನು ಅನುಪ್ರಮಾಣಿಸಬೇಕಾಗಿಲ್ಲ.

(ಸಿ) ಉಯಿಲೆಂದು ತಾತ್ಪರ್ಯವಾಗುವ ಲಿಖಿತವನ್ನು ಪೂರ್ಣವಾಗಿ ಅಥವಾ ಭಾಗಶಃ ಬೇರೊಬ್ಬ ವ್ಯಕ್ತಿಯು ಬರೆದಿದ್ದರೆ ಮತ್ತು ಮರಣಶಾಸನ ಕರ್ತನು ರುಜು ಮಾಡಿಲ್ಲದಿದ್ದರೆ ಅದನ್ನು ಮರಣಶಾಸನ ಕರ್ತನ ನಿರ್ದೇಶನಗಳಂತೆ ಬರೆಯಲಾಗಿತ್ತು ಅಥವಾ ಅವನು ಅದನ್ನು ತನ್ನ ಉಯಿಲೆಂದು ಮನ್ನಣೆ ಮಾಡಿದ್ದಾನೆಂದು ತೋರಿಸಿದರೆ ಅದನ್ನು ಅವನ ಉಯಿಲೆಂದು ಭಾವಿಸತಕ್ಕುದು.

(ಡಿ) ಮರಣಶಾಸನ ಕರ್ತನು ಉದ್ದೇಶಿಸಿದ್ದ ರೀತಿಯಲ್ಲಿ ಲಿಖಿತವನ್ನು ಬರೆಯುವುದನ್ನು ಪೂರ್ಣಗೊಳಿಸಿರಲಿಲ್ಲವೆಂದು ಮೇಲ್ನೋಟಕ್ಕೆ ಕಂಡುಬಂದರೆ, ಆ ಲಿಖಿತವು ಆ ಸಂದರ್ಭದ ಕಾರಣದಿಂದಾಗಿ ಅಸಿಂಧುವಾಗತಕ್ಕುದಲ್ಲ. ಆದರೆ ಅವನು ಅದನ್ನು ಬರೆದುಕೊಡದೆ ಇರುವುದನ್ನು, ಆ ಲಿಖಿತದಲ್ಲಿ ವ್ಯಕ್ತಪಡಿಸಿದ ಮರಣಶಾಸನ ಉದ್ದೇಶಗಳನ್ನು ಬಿಟ್ಟು ಬಿಡುವುದಕ್ಕೆ ಹೊರತಾದ ಇತರ ಕಾರಣಕ್ಕೆ ಯುಕ್ತವಾಗಿ ಆರೋಪಿಸುವಂತಿರಬೇಕು.

(ಇ) ಆ ಸೈನಿಕನು, ವೈಮಾನಿಕನು ಅಥವಾ ನಾವಿಕನು ತನ್ನ ಉಯಿಲನ್ನು ತಯಾರಿಸುವುದಕ್ಕಾಗಿ ಅನುದೇಶಗಳನ್ನು ಬರೆದಿದ್ದರೆ ಆದರೆ ಅದನ್ನು ತಯಾರಿಸುವುದಕ್ಕೆ ಮತ್ತು ಬರೆದುಕೊಡುವುದಕ್ಕೆ ಮುಂಚೆ ಮರಣ ಹೊಂದಿದ್ದರೆ ಅಂತಹ ಅನುದೇಶಗಳು ಅವನ ಉಯಿಲು ಆಗಿರುವುದಾಗಿ ಪರಿಗಣಿಸತಕ್ಕದ್ದು.

(ಎಫ್) ಆ ಸೈನಿಕನು, ವೈಮಾನಿಕನು ಅಥವಾ ನಾವಿಕನು ಇಬ್ಬರು ಸಾಕ್ಷಿಗಳ ಸಮಕ್ಷಮದಲ್ಲಿ ತನ್ನ ಉಯಿಲಿನ ತಯಾರಿಕೆಗಾಗಿ ಬಾಯಿಮಾತಿನಲ್ಲಿ ಅನುದೇಶವನ್ನು ಕೊಟ್ಟಿದ್ದರೆ ಮತ್ತು ಅವುಗಳನ್ನು ಅವನ ಜೀವಿತ ಕಾಲದಲ್ಲಿ ಬರೆದಿಟ್ಟಿದ್ದರೆ, ಆದರೆ ಅವನು ಲಿಖಿತವನ್ನು ತಯಾರಿಸುವುದಕ್ಕೆ ಮತ್ತು ಬರೆದುಕೊಡುವುದಕ್ಕೆ ಮುಂಚೆಯೇ ಮರಣ ಹೊಂದಿದ್ದರೆ ಅಂತಹ ಅನುದೇಶಗಳನ್ನು ಅವನ ಸಮಕ್ಷಮದಲ್ಲಿ ಬರೆಯದೆ ಇದ್ದಾಗ್ಯೂ ಅಥವಾ ಅವನಿಗೆ ಓದಿ ಹೇಳದೆ ಇದ್ದಾಗ್ಯೂ ಅದು ಅವನ ಉಯಿಲು ಆಗಿರುವುದಾಗಿ ಪರಿಗಣಿತವಾಗತಕ್ಕದ್ದು.

(ಜಿ) ಸೈನಿಕನು, ವೈಮಾನಿಕನು ಅಥವಾ ನಾವಿಕನು ಆ ಸಮಯದಲ್ಲಿ ಹಾಜರಿರುವ ಇಬ್ಬರು ಸಾಕ್ಷಿಗಳ ಮುಂದೆ ತನ್ನ ಉದ್ದೇಶಗಳನ್ನು ಘೋಷಿಸಿ ಹಾಗೆ ಬಾಯಿ ಮಾತಿನ ಮೂಲಕ ಉಯಿಲನ್ನು ಮಾಡಬಹುದು.

(ಎಚ್) ಬಾಯಿಮಾತಿನ ಮೂಲಕ ಮಾಡಿದ ಉಯಿಲು, ಮರಣಶಾಸನ ಕರ್ತನು ಇನ್ನೂ ಜೀವಂತನಾಗಿದ್ದು ವಿಶೇಷಾಧಿಕಾರದ ಉಯಿಲನ್ನು ಮಾಡಲು ಹಕ್ಕುಳ್ಳವನಾಗಿರುವುದು ನಿಂತು ಹೋದ ತರುವಾಯ ಒಂದು ತಿಂಗಳು ಮುಕ್ತಾಯವಾಗುತ್ತಲೇ ಅದು ಶೂನ್ಯವಾಗತಕ್ಕುದು.

## ಅಧ್ಯಾಯ - V

### ಉಯಿಲುಗಳ ಅನುಪ್ರಮಾಣ, ರದ್ದಿಯಾತಿ, ಬದಲಾವಣೆ ಮತ್ತು ಪುನರುಜ್ಜೀವನದ ಬಗ್ಗೆ

67. ಅನುಪ್ರಮಾಣಿಸುವ ಸಾಕ್ಷಿಗೆ ಮಾಡಿದ ದಾನದ ಪರಿಣಾಮ:- ಉಯಿಲನ್ನು ಅನುಪ್ರಮಾಣಿಸುವ ಯಾವನೇ ವ್ಯಕ್ತಿಗೆ ಅಥವಾ ಅವನ ಹೆಂಡತಿಗೆ ಅಥವಾ ಅವಳ ಗಂಡನಿಗೆ ಮರಣಶಾಸನ ದಾನದ ಮೂಲಕ ಅಥವಾ ನೇಮಕಾತಿಯ ಮೂಲಕ, ಕೊಟ್ಟ ಯಾವುದೇ ಪ್ರಯೋಜನದ ಕಾರಣದಿಂದಾಗಿ ಅದನ್ನು ಅಸಮರ್ಪಕವಾಗಿ ಅನುಪ್ರಮಾಣಿಸಲಾಗಿದೆಯೆಂದು ಭಾವಿಸತಕ್ಕುದಲ್ಲ. ಆದರೆ ಆ ಮರಣಶಾಸನ ದಾನ ಅಥವಾ ನೇಮಕಾತಿಯು ಹಾಗೆ ಅನುಪ್ರಮಾಣಿಸುವ ವ್ಯಕ್ತಿಗೆ ಅಥವಾ ಅಂಥ ವ್ಯಕ್ತಿಯ ಹೆಂಡತಿಗೆ ಅಥವಾ ಗಂಡನಿಗೆ ಅಥವಾ ಅವರ ಪೈಕಿ ಯಾರೊಬ್ಬರ ಅಡಿಯಲ್ಲಿ ಕ್ಲೇಮು ಮಾಡುವ ಯಾವನೇ ವ್ಯಕ್ತಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಅದು ಶೂನ್ಯವಾಗತಕ್ಕುದು.

ವಿವರಣೆ:- ಒಂದು ಉಯಿಲಿನ ಮೇರೆಗಿನ ಲೆಗಟಿಯು ಉಯಿಲನ್ನು ಸ್ಥಿರೀಕರಿಸುವಂಥ ಒಂದು ಉಯಿಲಿನ ಅನುಬಂಧವನ್ನು ಅನುಪ್ರಮಾಣಗೊಳಿಸುವ ಮೂಲಕ ತನ್ನ ಮರಣಶಾಸನ ಸ್ವತ್ತನ್ನು ಕಳೆದುಕೊಳ್ಳುವುದಿಲ್ಲ.

68. ಹಿತಾಸಕ್ತಿಯ ಕಾರಣದಿಂದ ಅಥವಾ ನಿರ್ವಾಹಕನಾಗಿರುವುದರಿಂದ ಸಾಕ್ಷಿಯು ಅನರ್ಹನಾಗದಿರುವುದು:-ಯಾವನೇ ವ್ಯಕ್ತಿಯು ಉಯಿಲಿನಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಕಾರಣದಿಂದ ಅಥವಾ ಅವನು ಅದರ ನಿರ್ವಾಹಕನಾಗಿರುವ ಕಾರಣದಿಂದ ಉಯಿಲನ್ನು ಬರೆದುಕೊಟ್ಟಿರುವುದನ್ನು ರುಜುವಾತುಪಡಿಸಲು ಅಥವಾ ಅದರ ಸಿಂಧುತ್ವ ಅಥವಾ ಅಸಿಂಧುತ್ವವನ್ನು ರುಜುವಾತುಪಡಿಸಲು ಸಾಕ್ಷಿಯಾಗಿರಲು ಅನರ್ಹನಾಗತಕ್ಕುದಲ್ಲ.

69. ಮರಣಶಾಸನ ಕರ್ತನ ವಿವಾಹದ ಮೂಲಕ ಉಯಿಲಿನ ರದ್ದಿಯಾತಿ:- ನೇಮಕಾತಿ ಅಧಿಕಾರವನ್ನು ಚಲಾಯಿಸಿ ಮಾಡಿದ ಉಯಿಲನ್ನು ಹೊರತುಪಡಿಸಿ, ಯಾವ ಸ್ವತ್ತಿನ ಮೇಲೆ ನೇಮಕಾತಿ ಅಧಿಕಾರವನ್ನು ಚಲಾಯಿಸಲಾಗಿದೆಯೋ ಆ ಸ್ವತ್ತು, ಅಂತಹ ನೇಮಕಾತಿಯು ಇಲ್ಲದಿದ್ದಲ್ಲಿ ಅವನ ಅಥವಾ ಅವಳ ನಿರ್ವಾಹಕ ಅಥವಾ ಆಡಳಿತಗಾರ ಅಥವಾ ಮರಣ ಶಾಸನವಿಲ್ಲದೆಯಿರುವ ಸಂದರ್ಭದಲ್ಲಿ ಹಕ್ಕುಳ್ಳವನಾಗುವ ವ್ಯಕ್ತಿಗೆ ಹೋಗದಿರುವಾಗ, ಪ್ರತಿಯೊಂದು ಉಯಿಲು, ಅದನ್ನು ಮಾಡಿದವನ ವಿವಾಹದ ಮೂಲಕ ರದ್ದಾಗತಕ್ಕುದು.

ವಿವರಣೆ:- ತಾನು ಒಡೆಯನಾಗಿಲ್ಲದಿರುವಂಥ ಸ್ವತ್ತಿನ ವಿಲೇವಾರಿಯನ್ನು ನಿರ್ಧರಿಸಲು ಒಬ್ಬ ವ್ಯಕ್ತಿಗೆ ಅಧಿಕಾರವನ್ನು ನೀಡಿರುವಲ್ಲಿ, ಅವನು ಅಂಥ ಸ್ವತ್ತನ್ನು ನಿಗದಿಪಡಿಸಲು ಅಧಿಕಾರವನ್ನು ಹೊಂದಿದ್ದಾನೆ ಎಂದು ಹೇಳಲಾಗುತ್ತದೆ.

70. ವಿಶೇಷಾಧಿಕಾರವಿಲ್ಲದ ಉಯಿಲು ಅಥವಾ ಉಯಿಲಿನ ಅನುಬಂಧದ ರದ್ದಿಯಾತಿ:- ಯಾವುದೇ ವಿಶೇಷಾಧಿಕಾರವಿಲ್ಲದ ಉಯಿಲು ಅಥವಾ ಉಯಿಲಿನ ಅನುಬಂಧವನ್ನು ಅಥವಾ ಅದರ ಯಾವುದೇ ಭಾಗವನ್ನು ವಿವಾಹದ ಮೂಲಕ ಅಥವಾ ಇನ್ನೊಂದು ಉಯಿಲು ಅಥವಾ ಉಯಿಲಿನ ಅನುಬಂಧದ ಮೂಲಕ ಅಥವಾ ಅದನ್ನು ರದ್ದುಪಡಿಸುವ ಉದ್ದೇಶವನ್ನು ಘೋಷಿಸುವ ಮತ್ತು ಈ ಮುಂಚೆ ವಿಶೇಷಾಧಿಕಾರವಿಲ್ಲದ ಉಯಿಲನ್ನು ಬರೆದುಕೊಡುವಂತೆ ಅಗತ್ಯಪಡಿಸಲಾದ ರೀತಿಯಲ್ಲಿ ಬರೆದುಕೊಟ್ಟ ಯಾವುದೇ ಬರಹದ ಮೂಲಕ ಅಥವಾ ಮರಣ ಶಾಸನ ಕರ್ತ ಅಥವಾ ಅವನ ಸಮಕ್ಷಮದಲ್ಲಿ ಇತರ ವ್ಯಕ್ತಿಯು ಮತ್ತು ಅದನ್ನು ರದ್ದುಗೊಳಿಸುವ ಉದ್ದೇಶದಿಂದ ಅವನ ನಿರ್ದೇಶನದ ಮೇರೆಗೆ ಅದನ್ನು ಸುಟ್ಟುಹಾಕುವ, ಹರಿದು ಹಾಕುವ ಅಥವಾ ಬೇರೆ ರೀತಿಯಲ್ಲಿ ನಾಶಪಡಿಸುವ ಮೂಲಕವಲ್ಲದೆ ಅನ್ಯಥಾ ರದ್ದುಗೊಳಿಸತಕ್ಕುದಲ್ಲ.

ದೃಷ್ಟಾಂತಗಳು

(i) 'ಎ' ನು ಒಂದು ವಿಶೇಷಾಧಿಕಾರವಿಲ್ಲದ ಉಯಿಲನ್ನು ಮಾಡಿದ್ದಾನೆ. ಆ ತರುವಾಯ ಮೊದಲನೆಯದನ್ನು ರದ್ದುಗೊಳಿಸುವುದೆಂದು ತಾತ್ಪರ್ಯವಾಗುವಂಥ ಇನ್ನೊಂದು ವಿಶೇಷಾಧಿಕಾರವಿಲ್ಲದ ಉಯಿಲನ್ನು 'ಎ' ನು ಮಾಡುತ್ತಾನೆ. ಇದು ರದ್ದಿಯಾತಿ.

(ii) 'ಎ' ನು ಒಂದು ವಿಶೇಷಾಧಿಕಾರವಿಲ್ಲದ ಉಯಿಲನ್ನು ಮಾಡಿದ್ದಾನೆ. ಆ ತರುವಾಯ ವಿಶೇಷಾಧಿಕಾರವುಳ್ಳ ಉಯಿಲನ್ನು ಮಾಡಲು ಹಕ್ಕುಳ್ಳವನಾಗಿದ್ದು ತನ್ನ ವಿಶೇಷಾಧಿಕಾರವಿಲ್ಲದ ಉಯಿಲನ್ನು ರದ್ದುಗೊಳಿಸುವುದೆಂದು ತಾತ್ಪರ್ಯವಾಗುವಂಥ ಒಂದು ವಿಶೇಷಾಧಿಕಾರದ ಉಯಿಲನ್ನು ಮಾಡುತ್ತಾನೆ. ಇದು ರದ್ದಿಯಾತಿ.

71. ವಿಶೇಷಾಧಿಕಾರವಿಲ್ಲದ ಉಯಿಲಿನಲ್ಲಿ ಅಳಿಸಿಬಿಡುವಿಕೆ, ಒಳಪಂಕ್ತಿ ಬರಹ ಅಥವಾ ಬದಲಾವಣೆಯ ಪರಿಣಾಮ:- ವಿಶೇಷಾಧಿಕಾರವಿಲ್ಲದ ಯಾವುದೇ ಉಯಿಲಿನಲ್ಲಿ, ಅದನ್ನು ಬರೆದುಕೊಟ್ಟ ತರುವಾಯ ಮಾಡಿದ ಯಾವುದೇ ಅಳಿಸಿಹಾಕುವಿಕೆ, ಒಳಪಂಕ್ತಿ ಬರಹ ಅಥವಾ ಇತರ ಬದಲಾವಣೆಯು, ಉಯಿಲನ್ನು ಬರೆದುಕೊಡಲು ಈ ಮುಂಚೆ ಅಗತ್ಯಪಡಿಸಿದಂಥ ರೀತಿಯಲ್ಲಿ ಅಂಥ ಬದಲಾವಣೆಯನ್ನು ಮಾಡಿದ್ದ ಹೊರತು, ಉಯಿಲಿನ ಪದಗಳು ಅಥವಾ ಅರ್ಥವು ಆ ಮೂಲಕ ಅಸ್ಪುಟ ಅಥವಾ ತಿಳಿದುಕೊಳ್ಳಲಾಗದಂತೆ ಆಗಿರುವ ಮಟ್ಟಿಗೆ ಹೊರತು ಯಾವುದೇ- ಪರಿಣಾಮವನ್ನು ಹೊಂದಿರತಕ್ಕುದಲ್ಲ:

ಪರಂತು, ಹಾಗೆ ಬದಲಾಯಿಸಿದ ಉಯಿಲನ್ನು ಅಂಥ ಬದಲಾವಣೆಯ ಎದುರಿಗೆ ಅಥವಾ ಹತ್ತಿರ ಉಯಿಲಿನ ಅಂಚಿನಲ್ಲಿ ಅಥವಾ ಅದರ ಇತರ ಯಾವುದೇ ಭಾಗದಲ್ಲಿ, ಅಥವಾ ಅಂಥ ಬದಲಾವಣೆಯನ್ನು ಉಲ್ಲೇಖಿಸುವ ಮತ್ತು ಉಯಿಲಿನ ಕೊನೆಯಲ್ಲಿ ಅಥವಾ ಅದರ ಇತರ ಯಾವುದೇ ಭಾಗದಲ್ಲಿ ಬರೆದಿರುವ ಟಿಪ್ಪಣಿಯ ಅಡಿಯಲ್ಲಿ ಅಥವಾ ಕೊನೆಯಲ್ಲಿ ಅಥವಾ ಅದರ ಎದುರಿನಲ್ಲಿ ಮರಣ ಶಾಸನ ಕರ್ತನ ರುಜುವನ್ನು ಮತ್ತು ಸಾಕ್ಷಿಗಳ ರುಜುವನ್ನು ಮಾಡಿದ್ದರೆ, ಅದನ್ನು ಕ್ರಮಬದ್ಧವಾಗಿ ಬರೆದುಕೊಡಲಾಗಿದೆ ಎಂದು ಭಾವಿಸತಕ್ಕುದು.

72. ವಿಶೇಷಾಧಿಕಾರದ ಉಯಿಲಿನ ಅಥವಾ ಉಯಿಲಿನ ಅನುಬಂಧದ ರದ್ದಿಯಾತಿ:- ವಿಶೇಷಾಧಿಕಾರದ ಉಯಿಲನ್ನು ಅಥವಾ ಉಯಿಲಿನ ಅನುಬಂಧವನ್ನು ಮರಣ ಶಾಸನ ಕರ್ತನು ವಿಶೇಷಾಧಿಕಾರವಿಲ್ಲದ ಉಯಿಲಿನ ಅನುಬಂಧದ ಮೂಲಕ ಅಥವಾ ಅದನ್ನು ರದ್ದುಪಡಿಸುವ ಉದ್ದೇಶವನ್ನು ವ್ಯಕ್ತಪಡಿಸುವ ಮತ್ತು ವಿಶೇಷ ಅಧಿಕಾರದ ಉಯಿಲಿಗೆ ಸಿಂಧುತ್ವವನ್ನು ಕೊಡಲು ಸಾಕಷ್ಟಾಗುವಂಥ ಔಪಚಾರಿಕತೆಗಳಿಂದ ಕೂಡಿದ ಯಾವುದೇ ಕಾರ್ಯದ ಮೂಲಕ ಅಥವಾ ಅದನ್ನು ಮರಣ ಶಾಸನ ಕರ್ತನು ಅಥವಾ ಅವನ ಸಮಕ್ಷಮದಲ್ಲಿ ಬೇರೊಬ್ಬ ವ್ಯಕ್ತಿಯು ಮತ್ತು ಅವನ ನಿರ್ದೇಶನದ ಮೇರೆಗೆ ಅದನ್ನು ರದ್ದುಪಡಿಸುವ ಉದ್ದೇಶದಿಂದ ಸುಟ್ಟು ಹಾಕುವ, ಹರಿದು ಹಾಕುವ ಅಥವಾ ಅನ್ಯಥಾ ನಾಶಪಡಿಸುವ ಮೂಲಕ ರದ್ದು ಮಾಡಬಹುದು.

ವಿವರಣೆ:- ವಿಶೇಷಾಧಿಕಾರದ ಉಯಿಲು ಅಥವಾ ಉಯಿಲಿನ ಅನುಬಂಧಕ್ಕೆ ಸಿಂಧುತ್ವವನ್ನು ಕೊಡಲು ಸಾಕಷ್ಟಾಗುವಂಥ ಔಪಚಾರಿಕತೆಗಳಿಂದ ಕೂಡಿದ ಯಾವುದೇ ಕಾರ್ಯದ ಮೂಲಕ ವಿಶೇಷಾಧಿಕಾರದ ಉಯಿಲು ಅಥವಾ ಉಯಿಲಿನ ಅನುಬಂಧವನ್ನು ರದ್ದು ಮಾಡಲು, ಮರಣ ಶಾಸನ ಕರ್ತನು ಆ ಕಾರ್ಯವನ್ನು ಮಾಡುವ ಕಾಲದಲ್ಲಿ ವಿಶೇಷಾಧಿಕಾರದ ಉಯಿಲನ್ನು ಮಾಡಲು ಅವನನ್ನು ಹಕ್ಕುಳ್ಳವನನ್ನಾಗಿಸುವಂಥ ಪರಿಸ್ಥಿತಿಯಲ್ಲಿರುವುದು ಅವಶ್ಯವಿಲ್ಲ.

73. ವಿಶೇಷಾಧಿಕಾರವಿಲ್ಲದ ಉಯಿಲಿನ ಪುನರುಜ್ಜೀವನ:- (1) ಯಾವುದೇ ರೀತಿಯಲ್ಲಿ ರದ್ದುಗೊಳಿಸಿರುವಂಥ ವಿಶೇಷಾಧಿಕಾರವಿಲ್ಲದ ಯಾವುದೇ ಉಯಿಲು ಅಥವಾ ಉಯಿಲಿನ ಅನುಬಂಧ ಅಥವಾ ಅದರ ಯಾವುದೇ ಭಾಗವನ್ನು, ಅದನ್ನು ಪುನಃ ಬರೆದುಕೊಡುವುದರ ಮೂಲಕ ಅಥವಾ ಈ ಹಿಂದೆ ಅಗತ್ಯಪಡಿಸಿದ ರೀತಿಯಲ್ಲಿ ಬರೆದುಕೊಟ್ಟ ಹಾಗೂ ಅದನ್ನು ಪುನರುಜ್ಜೀವನಗೊಳಿಸುವ ಉದ್ದೇಶವನ್ನು ತೋರಿಸುವ ಉಯಿಲಿನ ಅನುಬಂಧದ ಮೂಲಕವಲ್ಲದೆ ಅನ್ಯಥಾ ಪುನರುಜ್ಜೀವನಗೊಳಿಸತಕ್ಕುದಲ್ಲ.

(2) ಭಾಗಶಃ ರದ್ದುಗೊಳಿಸಿರುವ ಮತ್ತು ಆ ತರುವಾಯ ಪೂರ್ಣವಾಗಿ ರದ್ದುಗೊಳಿಸಿರುವ ಯಾವುದೇ ಉಯಿಲು ಅಥವಾ ಉಯಿಲಿನ ಅನುಬಂಧವನ್ನು ಪುನರುಜ್ಜೀವನಗೊಳಿಸಿದಾಗ ಅಂಥ ಪುನರುಜ್ಜೀವನವು, ಆ ಉಯಿಲು ಅಥವಾ ಉಯಿಲಿನ ಅನುಬಂಧದಿಂದ ತದ್ವಿರುದ್ಧವಾದ ಉದ್ದೇಶವು ಕಂಡುಬಂದ ಹೊರತು, ಆ ಉಯಿಲು ಅಥವಾ ಉಯಿಲಿನ ಅನುಬಂಧವನ್ನು ಪೂರ್ಣವಾಗಿ ರದ್ದುಗೊಳಿಸುವುದಕ್ಕೆ ಮುಂಚೆ ರದ್ದುಗೊಳಿಸಲಾದ ಅದರ ಭಾಗದಷ್ಟು ಮಟ್ಟಿಗೆ ವಿಸ್ತೃತವಾಗತಕ್ಕುದಲ್ಲ.

## ಅಧ್ಯಾಯ - VI

## ಉಯಿಲುಗಳನ್ನು ಅರ್ಥೈಸುವ ಬಗ್ಗೆ

74. ಉಯಿಲಿನ ಪದಪ್ರಯೋಗ:- ಉಯಿಲುಗಳಲ್ಲಿ ಯಾವುದೇ ತಾಂತ್ರಿಕ ಪದಗಳನ್ನು ಅಥವಾ ಕಲಾತ್ಮಕ ಪದಗಳನ್ನು ಬಳಸಬೇಕಾದ ಅವಶ್ಯಕತೆಯಿಲ್ಲ. ಆದರೆ ಮರಣ ಶಾಸನ ಕರ್ತನ ಉದ್ದೇಶಗಳನ್ನು ತಿಳಿಯಬಹುದಾದಂಥ ಪದಪ್ರಯೋಗ ಮಾತ್ರ ಇರತಕ್ಕುದು.

75. ಉಯಿಲಿನ ಉದ್ದೇಶ ಅಥವಾ ವಿಷಯದ ಬಗ್ಗೆ ಪ್ರಶ್ನೆಗಳನ್ನು ನಿರ್ಧರಿಸಲು ವಿಚಾರಣೆಗಳು:- ಉಯಿಲಿನಲ್ಲಿ ಉಪಯೋಗಿಸುವ ಯಾವುವೇ ಪದಗಳು ಯಾವ ವ್ಯಕ್ತಿ ಅಥವಾ ಯಾವ ಸ್ವತ್ತನ್ನು ಸೂಚಿಸುತ್ತವೆ ಎಂಬ ಬಗೆಗಿನ ಪ್ರಶ್ನೆಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ, ನ್ಯಾಯಾಲಯವು, ಅಂತಹ ಉಯಿಲಿನಲ್ಲಿ ಹಿತಾಸಕ್ತಿಯನ್ನು ಹೊಂದಿರುವುದಾಗಿ ಕ್ಲೇಮು ಮಾಡುವ ವ್ಯಕ್ತಿಗಳಿಗೆ ಸಂಬಂಧಪಟ್ಟ ಪ್ರತಿಯೊಂದು ಮುಖ್ಯ ಸಂಗತಿ, ವಿಲೇವಾರಿಯ ವಿಷಯದ ಬಗ್ಗೆ ಕ್ಲೇಮು ಮಾಡಿದಂಥ ಸ್ವತ್ತು, ಮರಣ ಶಾಸನ ಕರ್ತನ ಮತ್ತು ಅವನ ಕುಟುಂಬದ ಪರಿಸ್ಥಿತಿಗಳು ಮತ್ತು ಮರಣಶಾಸನ ಕರ್ತನು ಉಪಯೋಗಿಸಿರುವಂಥ ಪದಗಳ ಸರಿಯಾದ ಅನ್ವಯಕ್ಕೆ ಸಹಾಯಕವಾದಂಥ ತಿಳುವಳಿಕೆಯ ಪ್ರತಿಯೊಂದು ಸಂಗತಿ - ಇವುಗಳ ಬಗ್ಗೆ ವಿಚಾರಣೆ ನಡೆಸತಕ್ಕುದು.

### ದೃಷ್ಟಾಂತಗಳು

(i) 'ಎ' ನು ತನ್ನ ಉಯಿಲಿನ ಮೂಲಕ ಅವನ ಹಿರಿಯ ಮಗನಿಗೆ ಅಥವಾ ಅವನ ಕಿರಿಯ ಮೊಮ್ಮಗುವಿಗೆ ಅಥವಾ ಅವನ ದಾಯಾದಿ ಮೇರೆಗೆ 1000 ರೂಪಾಯಿಗಳನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ನ್ಯಾಯಾಲಯವು ಉಯಿಲಿನಲ್ಲಿನ ವರ್ಣನೆಯು ಯಾವ ವ್ಯಕ್ತಿಗೆ ಅನ್ವಯಿಸುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ವಿಚಾರಣೆ ಮಾಡಬಹುದು.

(ii) 'ಎ' ನು ತನ್ನ ಉಯಿಲಿನ ಮೂಲಕ "ಬ್ಲಾಕ್ ಏಕರ್" ಎಂದು ಕರೆಯಲಾದ ತನ್ನ ಎಸ್ಟೇಟನ್ನು "ಬಿ" ನಿಗೆ ಕೊಡುತ್ತಾನೆ. ಮರಣಶಾಸನ ದಾನದ ವಸ್ತು ವಿಷಯ ಯಾವುದು ಎಂಬುದನ್ನು, ಅಂದರೆ ಮರಣಶಾಸನದ ಕರ್ತನು ಯಾವ ಎಸ್ಟೇಟನ್ನು ಬ್ಲಾಕ್ ಏಕರ್ ಎಂದು ಕರೆಯಲಾಗುವುದು ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸಾಕ್ಷ್ಯವನ್ನು ತೆಗೆದುಕೊಳ್ಳುವುದು ಅವಶ್ಯವಾಗಬಹುದು.

(iii) 'ಎ' ನು ತನ್ನ ಉಯಿಲಿನ ಮೂಲಕ ತಾನು 'ಸಿ' ನಿಂದ ಖರೀದಿ ಮಾಡಿದಂಥ ಎಸ್ಟೇಟನ್ನು 'ಬಿ' ನಿಗೆ ಕೊಡುತ್ತಾನೆ. ಮರಣಶಾಸನ ಕರ್ತನು ಯಾವ ಎಸ್ಟೇಟನ್ನು 'ಸಿ' ನಿಂದ ಖರೀದಿ ಮಾಡಿದ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸಾಕ್ಷ್ಯವನ್ನು ತೆಗೆದುಕೊಳ್ಳುವುದು ಅವಶ್ಯಕವಾಗಬಹುದು.

76. ಸ್ವೀಕರ್ತನ ತಪ್ಪು ಹೆಸರು ಅಥವಾ ತಪ್ಪು ವಿವರಣೆ:- (1) ಉಯಿಲಿನಲ್ಲಿ ಲೆಗೆಟಿ ಅಥವಾ ಲೆಗಟಿಗಳ ವರ್ಗವನ್ನು ಹೆಸರಿಸಲು ಅಥವಾ ವಿವರಿಸಲು ಉಪಯೋಗಿಸಿದ ಪದಗಳು ಏನು ಹೇಳಿವೆಯೆಂಬುದನ್ನು ಸಮರ್ಪಕವಾಗಿ ತೋರಿಸಿರುವಲ್ಲಿ, ಹೆಸರಿನಲ್ಲಿನ ಅಥವಾ ವಿವರಣೆಯಲ್ಲಿನ ತಪ್ಪು, ಆ ಮರಣಶಾಸನ ಸ್ವತ್ತಿನ ನೀಡಿಕೆಯು ಪರಿಣಾಮಕಾರಿಯಾಗುವುದನ್ನು ತಡೆಗಟ್ಟತಕ್ಕುದಲ್ಲ.

(2) ಲೆಗೆಟಿಯ ಹೆಸರಿನ ತಪ್ಪನ್ನು ಅವನ ವಿವರಣೆಯ ಮೂಲಕ ಸರಿಪಡಿಸಬಹುದು ಮತ್ತು ಲೆಗೆಟಿಯ ವಿವರಣೆಯ ತಪ್ಪನ್ನು ಅವನ ಹೆಸರಿನ ಮೂಲಕ ಸರಿಪಡಿಸಿಕೊಳ್ಳಬಹುದು.

### ದೃಷ್ಟಾಂತಗಳು

(i) 'ಎ' ನು ಒಂದು ಮರಣಶಾಸನ ದಾನವನ್ನು 'ನನ್ನ ಸಹೋದರ ಜಾನ್‌ನ ಎರಡನೇ ಮಗನಾದ ಥಾಮಸ್‌ನಿಗೆ' ಎಂದು ಬರೆದು ಮರಣಶಾಸನದ ಮೂಲಕ ಕೊಡುತ್ತಾನೆ. ಮರಣಶಾಸನ ಕರ್ತನಿಗೆ ಜಾನ್ ಎಂಬ ಹೆಸರಿನ ಒಬ್ಬನೇ ಸಹೋದರನಿರುತ್ತಾನೆ. ಅವನಿಗೆ ಥಾಮಸ್ ಎಂಬ ಹೆಸರಿನ ಯಾವ ಮಗನೂ ಇರುವುದಿಲ್ಲ, ಆದರೆ ವಿಲಿಯಂ ಎಂಬ ಹೆಸರಿನ ಎರಡನೇ ಮಗನು ಇದ್ದಾನೆ. ವಿಲಿಯಂನು ಮರಣಶಾಸನ ಸ್ವತ್ತನ್ನು ಪಡೆಯುತ್ತಾನೆ.

(ii) 'ಎ' ನು ಒಂದು ಮರಣ ಶಾಸನ ಸ್ವತ್ತನ್ನು "ನನ್ನ ಸಹೋದರ ಜಾನ್ ನ ಎರಡನೇ ಮಗನಾದ ಥಾಮಸ್‌ನಿಗೆ" ಎಂದು ಬರೆದು ಮರಣ ಶಾಸನದ ಮೂಲಕ ಕೊಡುತ್ತಾನೆ. ಮರಣಶಾಸನ ಕರ್ತನಿಗೆ ಜಾನ್ ಎಂಬ ಒಬ್ಬನೇ ಸಹೋದರನಿರುತ್ತಾನೆ. ಅವನ ಮೊದಲನೆಯ ಮಗನ ಹೆಸರು ಥಾಮಸ್ ಮತ್ತು ಎರಡನೆಯ ಮಗನ ಹೆಸರು ವಿಲಿಯಂ. ಥಾಮಸ್ ಮರಣಶಾಸನದ ಸ್ವತ್ತನ್ನು ಪಡೆಯುತ್ತಾನೆ.

(iii) ಮರಣಶಾಸನ ಕರ್ತನು ತನ್ನ ಸ್ವತ್ತನ್ನು "ಸಿ" ನ ಔರಸ ಮಕ್ಕಳಾದ 'ಎ' ಮತ್ತು 'ಬಿ' ಇವರಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. 'ಸಿ' ನಿಗೆ ಯಾವುದೇ ಔರಸ ಮಗು ಇರುವುದಿಲ್ಲ, ಆದರೆ 'ಎ' ಮತ್ತು 'ಬಿ' ಎಂಬ ಇಬ್ಬರು ಅನೌರಸ ಮಕ್ಕಳು ಇರುತ್ತಾರೆ. 'ಎ' ಮತ್ತು 'ಬಿ' ಇವರಿಗೆ ಕೊಟ್ಟ ಮರಣಶಾಸನ ದಾನವು ಅವರು ಅನೌರಸವಾಗಿದ್ದಾಗ್ಯೂ ಪರಿಣಾಮಕಾರಿಯಾಗುತ್ತದೆ.

(iv) ಮರಣಶಾಸನ ಕರ್ತನು ತನ್ನ ಶೇಷ ಸಂಪದವನ್ನು "ನನ್ನ ಏಳು ಜನ ಮಕ್ಕಳ" ನಡುವೆ ಹಂಚಬೇಕೆಂದು ಕೊಡುತ್ತಾನೆ, ಮತ್ತು ಅವರುಗಳನ್ನು ನಮೂದಿಸುವಾಗ ಆರು ಹೆಸರುಗಳನ್ನು ಮಾತ್ರ ಹೇಳುತ್ತಾನೆ. ಈ ಲೋಪವು ಏಳನೇ ಮಗುವು ಇತರರೊಂದಿಗೆ ತನ್ನ ಪಾಲನ್ನು ಪಡೆಯುವುದನ್ನು ತಡೆಯುವುದಿಲ್ಲ.

(v) ಆರು ಜನ ಮೊಮ್ಮಕ್ಕಳನ್ನು ಹೊಂದಿರುವ ಮರಣಶಾಸನ ಕರ್ತನು ಮರಣಶಾಸನ ದಾನವನ್ನು "ನನ್ನ ಆರು ಜನ ಮೊಮ್ಮಕ್ಕಳಿಗೆ" ಕೊಡುತ್ತಾನೆ. ಮತ್ತು ಅವರ ಕ್ರೈಸ್ತನಾಮಗಳನ್ನು ನಮೂದಿಸುವಾಗ ಒಬ್ಬನನ್ನು ಎರಡು ಬಾರಿ ನಮೂದಿಸಿ ಇನ್ನೊಬ್ಬನ ಹೆಸರನ್ನು ಪೂರ್ತಿಯಾಗಿ ಬಿಟ್ಟುಬಿಡುತ್ತಾನೆ. ಯಾವನ ಹೆಸರನ್ನು ನಮೂದು ಮಾಡಿಲ್ಲವೋ ಅವನೂ ಇತರರೊಂದಿಗೆ ಒಂದು ಪಾಲನ್ನು ಪಡೆಯುತ್ತಾನೆ.

(vi) ಮರಣಶಾಸನ ಕರ್ತನು 'ಎ' ನ ಮೂರು ಜನ ಮಕ್ಕಳಲ್ಲಿ ಪ್ರತಿಯೊಬ್ಬರಿಗೂ 1000 ರೂಪಾಯಿಗಳನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಉಯಿಲಿನ ದಿನಾಂಕದಂದು 'ಎ' ನಿಗೆ ನಾಲ್ಕು ಜನ ಮಕ್ಕಳಿರುತ್ತಾರೆ. ಈ ನಾಲ್ಕು ಜನ ಮಕ್ಕಳಲ್ಲಿ ಪ್ರತಿಯೊಬ್ಬನು, ಮರಣಶಾಸನ ಕರ್ತನ ಮರಣದ ತರುವಾಯ ಉಳಿದಿದ್ದರೆ ಅವನು 1000 ರೂಪಾಯಿಯ ಮರಣಶಾಸನ ಸ್ವತ್ತನ್ನು ಪಡೆಯುತ್ತಾನೆ.

77. ಪದಗಳನ್ನು ಯಾವಾಗ ತುಂಬಬಹುದು:- ಅರ್ಥದ ಪೂರ್ಣ ಅಭಿವ್ಯಕ್ತಿಗೆ ಮುಖ್ಯವಾದ ಯಾವುದೇ ಪದವನ್ನು ಬಿಟ್ಟುಬಿಟ್ಟಿರುವಲ್ಲಿ, ಅದನ್ನು ಸಂದರ್ಭಕ್ಕೆ ಅನುಸಾರವಾಗಿ ತುಂಬಬಹುದು.

ದೃಷ್ಟಾಂತ

ಮರಣಶಾಸನ ಕರ್ತನು 'ಐದುನೂರ' ರ ಮರಣಶಾಸನ ಸ್ವತ್ತನ್ನು ತನ್ನ ಮಗಳು 'ಎ' ಳಿಗೂ ಮತ್ತು 'ಐದು ನೂರು ರೂಪಾಯಿಗಳ' ಮರಣಶಾಸನದ ಸ್ವತ್ತನ್ನು ತನ್ನ ಮಗಳು 'ಬಿ' ಳಿಗೂ ಕೊಡುತ್ತಾನೆ. 'ಎ' ಳು ಐದು ನೂರು ರೂಪಾಯಿಗಳ ಮರಣಶಾಸನ ಸ್ವತ್ತನ್ನು ಪಡೆಯುತ್ತಾಳೆ.

78. ವಿಷಯದ ವಿವರಣೆಯಲ್ಲಿನ ತಪ್ಪು ವಿವರಣೆಗಳನ್ನು ತಿರಸ್ಕರಿಸುವುದು:- ಮರಣಶಾಸನ ಕರ್ತನು ಮರಣಶಾಸನದ ಮೂಲಕ ಕೊಡಲು ಉದ್ದೇಶಿಸಿದಂಥ ವಸ್ತುವನ್ನು ಉಯಿಲಿನಲ್ಲಿ ಕೊಟ್ಟಿರುವ ವಿವರಣೆಯಿಂದ ಸಮರ್ಪಕವಾಗಿ ಗುರುತಿಸಬಹುದಾಗಿದ್ದು, ಅದರ ವಿವರಣೆಯ ಕೆಲವು ಭಾಗಗಳು ಅನ್ವಯಿಸದಿದ್ದರೆ, ವಿವರಣೆಯ ಅಂತಹ ಭಾಗಗಳನ್ನು ತಪ್ಪೆಂದು ತಿರಸ್ಕರಿಸತಕ್ಕುದು ಮತ್ತು ಮರಣಶಾಸನ ದಾನವು ಪರಿಣಾಮಕಾರಿಯಾಗತಕ್ಕುದು.

ದೃಷ್ಟಾಂತಗಳು

(i) 'ಎ' ನು 'ಬಿ' ನಿಗೆ "ಎಲ್" ನಲ್ಲಿ ಇರುವ ಮತ್ತು 'ಎಕ್ಸ್' ನ ಅಧಿಭೋಗದಲ್ಲಿರುವ ನನ್ನ ಜೌಗು ಭೂಮಿಗಳನ್ನು" ಮರಣಶಾಸನದ ಮೂಲಕ ಕೊಡುತ್ತಾನೆ. ಮರಣಶಾಸನ ಕರ್ತನು 'ಎಲ್' ನಲ್ಲಿ ಜೌಗು ಭೂಮಿಗಳನ್ನು ಹೊಂದಿದ್ದ. ಆದರೆ 'ಎಕ್ಸ್' ನ ಅಧಿಭೋಗದಲ್ಲಿ ಯಾವುದೇ ಜೌಗು ಭೂಮಿಯನ್ನು ಹೊಂದಿರಲಿಲ್ಲ. 'ಎಕ್ಸ್' ನ ಅಧಿಭೋಗದಲ್ಲಿರುವ ಎಂಬ ಪದಗಳನ್ನು ತಪ್ಪೆಂದು ತಿರಸ್ಕರಿಸತಕ್ಕುದು ಮತ್ತು 'ಎಲ್' ನಲ್ಲಿ ಇರುವ ಮರಣಶಾಸನ ಕರ್ತನು ಜೌಗು ಭೂಮಿಗಳು ಮರಣಶಾಸನ ದಾನದ ಮೂಲಕ ಹೋಗುತ್ತದೆ.

(ii) ಮರಣಶಾಸನ ಕರ್ತನು "ರಾಮಪುರದ ನನ್ನ ಜಮೀನ್ದಾರಿ ಸ್ವತ್ತನ್ನು 'ಎ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. ಅವನು ರಾಮಪುರದಲ್ಲಿ ಒಂದು ಎಸ್ಟೇಟನ್ನು ಹೊಂದಿದ್ದ. ಆದರೆ ಅದು ತಾಲೂಕು ಸ್ವತ್ತಾಗಿತ್ತು. ಆದರೆ ಜಮೀನ್ದಾರಿ ಸ್ವತ್ತು ಆಗಿರಲಿಲ್ಲ. ಆದ್ದರಿಂದ ತಾಲೂಕು ಸ್ವತ್ತು ಈ ಮರಣಶಾಸನದ ಮೂಲಕ ಹೋಗುತ್ತದೆ.

79. ವಿವರಣೆಯ ಭಾಗವನ್ನು ತಪ್ಪೆಂದು ಯಾವಾಗ ತಿರಸ್ಕರಿಸಲಾಗದು:- ಮರಣಶಾಸನದ ಮೂಲಕ ಮರಣಶಾಸನ ಕರ್ತನು ಕೊಡಲು ಉದ್ದೇಶಿಸಿದಂಥ ವಸ್ತುವಿನ ವಿವರಣೆಯಾಗಿ ಹಲವಾರು ಸಂದರ್ಭಗಳನ್ನು ಉಯಿಲಿನಲ್ಲಿ ನಮೂದಿಸಿದ್ದರೆ, ಮತ್ತು ಆ ಎಲ್ಲ ಸಂದರ್ಭಗಳು ಅನ್ವಯಿಸುವಂಥ ಅವನ ಯಾವುದಾದರೂ ಸ್ವತ್ತು ಇದ್ದರೆ ಮರಣಶಾಸನ ದಾನವು ಅಂಥ ಸ್ವತ್ತಿಗೆ ಸೀಮಿತವಾಗಿರುವುದಾಗಿ ಪರಿಗಣಿಸತಕ್ಕುದು ಮತ್ತು ಮರಣಶಾಸನ ಕರ್ತನು ಅಂಥ ವಿವರಣೆಯ ಭಾಗವು ಅನ್ವಯವಾಗದಂಥ ಇತರ ಸ್ವತ್ತನ್ನು ಹೊಂದಿದ್ದನೆಂಬ ಕಾರಣಕ್ಕಾಗಿ ಆ ವಿವರಣೆಯ ಯಾವುದೇ ಭಾಗವು ತಪ್ಪು ಎಂದು ತಿರಸ್ಕರಿಸುವುದು, ಕಾನೂನು ಸಮ್ಮತವಾಗಿರತಕ್ಕುದಲ್ಲ.

ವಿವರಣೆ:- ಯಾವುದೇ ಸಂದರ್ಭವು, ಈ ಪ್ರಕರಣದ ಅರ್ಥದೊಳಗೆ ಬರುತ್ತದೆಯೋ ಹೇಗೆ ಎಂಬುದನ್ನು ತೀರ್ಮಾನಿಸುವಲ್ಲಿ 78ನೇ ಪ್ರಕರಣದ ಮೇರೆಗೆ ತಿರಸ್ಕೃತವಾಗಬಹುದಾದಂಥ ಯಾವುವೇ ಪದಗಳನ್ನು ಉಯಿಲಿನಲ್ಲಿ ಹೊಡೆದು ಹಾಕಲಾಗಿದೆಯೆಂದು ಭಾವಿಸತಕ್ಕುದು.

ದೃಷ್ಟಾಂತಗಳು

(i) 'ಎ' ನು "ಎಲ್" ನಲ್ಲಿ ಇರುವ ಮತ್ತು 'ಎಕ್ಸ್' ನ ಅಧಿಭೋಗದಲ್ಲಿರುವ ನನ್ನ ಜೌಗು ಭೂಮಿಗಳನ್ನು" ಮರಣಶಾಸನದ ಮೂಲಕ 'ಬಿ' ನಿಗೆ ಕೊಡುತ್ತಾನೆ. ಮರಣಶಾಸನ ಕರ್ತನು 'ಎಲ್' ನಲ್ಲಿ ಜೌಗು ಭೂಮಿಗಳನ್ನು ಹೊಂದಿದ್ದನು. ಅವುಗಳಲ್ಲಿ ಕೆಲವು 'ಎಕ್ಸ್' ನ ಅಧಿಭೋಗದಲ್ಲಿದ್ದವು ಮತ್ತು ಕೆಲವು 'ಎಕ್ಸ್' ನ ಅಧಿಭೋಗದಲ್ಲಿ ಇರಲಿಲ್ಲ. ಈ ಮರಣಶಾಸನ ದಾನವನ್ನು 'ಎಕ್ಸ್' ನ ಅಧಿಭೋಗದಲ್ಲಿದ್ದ 'ಎಲ್' ನಲ್ಲಿರುವ ಮರಣಶಾಸನ ಕರ್ತನ ಜೌಗು ಭೂಮಿಗಳಿಗೆ ಸೀಮಿತವಾಗಿರುವುದೆಂದು ಪರಿಗಣಿಸಲಾಗುವುದು.

(ii) 'ಎ' ನು "ಎಲ್' ನಲ್ಲಿ ಇರುವ ಮತ್ತು 'ಎಕ್ಸ್' ನ ಅಧಿಭೋಗದಲ್ಲಿರುವ 1000 ಬಿಘಾಗಳ ಭೂಮಿಗಳನ್ನು ಒಳಗೊಂಡಿರುವ ನನ್ನ ಜೌಗು ಭೂಮಿಗಳನ್ನು" "ಬಿ" ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. ಮರಣಶಾಸನ ಕರ್ತನು 'ಎಲ್' ನಲ್ಲಿ ಜೌಗು ಭೂಮಿಗಳನ್ನು ಹೊಂದಿದ್ದು ಅವುಗಳಲ್ಲಿ ಕೆಲವು 'ಎಕ್ಸ್' ನ ಅಧಿಭೋಗದಲ್ಲಿದ್ದವು. ಕೆಲವು 'ಎಕ್ಸ್' ನ ಅಧಿಭೋಗದಲ್ಲಿ ಇರಲಿಲ್ಲ. ಆ ಅಳತೆಯು, ಎರಡೂ ವರ್ಗದ ಜೌಗು ಭೂಮಿಗಳಿಗೆ ಆಗಲಿ ಅಥವಾ ಒಟ್ಟು ಇಡಿಯಾಗಿ ತೆಗೆದುಕೊಂಡಾಗಲಾಗಲೀ ಪೂರ್ಣವಾಗಿ ಅನ್ವಯವಾಗುವುದಿಲ್ಲ. ಆದ್ದರಿಂದ ಅಳತೆಯನ್ನು ಉಯಿಲಿನಿಂದ ಹೊಡೆದು ಹಾಕಿರುವುದಾಗಿ ಪರಿಗಣಿಸಲಾಗುವುದು ಮತ್ತು 'ಎಕ್ಸ್' ನ ಅಧಿಭೋಗದಲ್ಲಿದ್ದ 'ಎಲ್' ನಲ್ಲಿರುವ ಮರಣ ಶಾಸನ ಕರ್ತನು ಆ ಜೌಗು ಭೂಮಿಗಳು ಮಾತ್ರ ಮರಣಶಾಸನದ ಮೂಲಕ ಹೋಗತಕ್ಕುದು.

80. ಸ್ಪಷ್ಟ ಸಂದಿಗ್ಧತೆಯ ಸಂದರ್ಭಗಳಲ್ಲಿ ಬಾಹ್ಯ ಸಾಕ್ಷ್ಯದ ಅಂಗೀಕಾರ:- ಉಯಿಲಿನ ಪದಗಳು ಸ್ಪಷ್ಟವಾಗಿದ್ದೂ ಅವು ಬಾಹ್ಯ ಸಾಕ್ಷ್ಯದ ಮೂಲಕ ಹಲವು ಅನ್ವಯಗಳಿಗೆ ಎಡೆಮಾಡಿಕೊಡುತ್ತವೆಂದು ಕಂಡು ಬಂದರೆ ಅವುಗಳಲ್ಲಿ ಮರಣಶಾಸನ ಕರ್ತನು ಒಂದನ್ನು ಮಾತ್ರ ಉದ್ದೇಶಿಸಿರಬಹುದಾಗಿದ್ದರೆ, ಈ ಅರ್ಥಾನ್ವಯಗಳಲ್ಲಿ ಯಾವುದನ್ನು ಉದ್ದೇಶಿಸಲಾಗಿತ್ತು ಎಂಬುದನ್ನು ತೋರಿಸಲು ಬಾಹ್ಯ ಸಾಕ್ಷ್ಯವನ್ನು ಪಡೆಯಬಹುದು.

ದೃಷ್ಟಾಂತಗಳು

(i) ಮೇರಿ ಎಂಬ ಹೆಸರಿನ ಇಬ್ಬರು ದಾಯಾದಿಗಳನ್ನು ಹೊಂದಿರುವ ಒಬ್ಬ ವ್ಯಕ್ತಿಯು ಹಣದ ಒಂದು ಮೊತ್ತವನ್ನು "ನನ್ನ ದಾಯಾದಿ ಮೇರಿಗೆ" ಮರಣಶಾಸನದ ಮೂಲಕ ಕೊಡುತ್ತಾನೆ. ಉಯಿಲಿನಲ್ಲಿರುವ ವಿವರಣೆಗೆ ಅನುಗುಣವಾಗಿರುವ ಇಬ್ಬರು ವ್ಯಕ್ತಿಗಳು ಇರುವುದು ಕಂಡುಬರುತ್ತದೆ. ಆದ್ದರಿಂದ ಆ ವಿವರಣೆಯು ಎರಡು ಅನ್ವಯಗಳಿಗೆ ಅವಕಾಶ ಮಾಡಿಕೊಡುತ್ತದೆ. ಅವುಗಳಲ್ಲಿ ಒಂದನ್ನು ಮಾತ್ರ ಮರಣಶಾಸನ ಕರ್ತನು ಉದ್ದೇಶಿಸಿರಲು ಸಾಧ್ಯ. ಈ ಎರಡು ಅನ್ವಯಗಳಲ್ಲಿ ಯಾವುದನ್ನು ಉದ್ದೇಶಿಸಲಾಗಿತ್ತು ಎಂಬುದನ್ನು ತೋರಿಸಲು ಸಾಕ್ಷ್ಯವನ್ನು ಅಂಗೀಕರಿಸಬಹುದು.

(ii) 'ಎ' ನು ತನ್ನ ಉಯಿಲಿನ ಮೂಲಕ 'ಬಿ' ನಿಗೆ "ಸುಲ್ತಾನಪುರ ಖುರ್ದ್ ಎಂಬ ನನ್ನ ಎಸ್ಟೇಟನ್ನು" ಕೊಡುತ್ತಾನೆ. ಅವನು ಸುಲ್ತಾನಪುರ ಖುರ್ದ್ ಎಂಬ ಹೆಸರಿನ ಎರಡು ಎಸ್ಟೇಟುಗಳನ್ನು ಹೊಂದಿದ್ದನೆಂದು ತಿಳಿದುಬರುತ್ತದೆ. ಯಾವ ಎಸ್ಟೇಟನ್ನು ಉದ್ದೇಶಿಸಲಾಗಿತ್ತು ಎಂಬುದನ್ನು ತೋರಿಸಲು ಸಾಕ್ಷ್ಯವನ್ನು ಅಂಗೀಕರಿಸಬಹುದು.

81. ಸ್ಪಷ್ಟ ಸಂದಿಗ್ಧತೆ ಅಥವಾ ನ್ಯೂನತೆಯ ಸಂದರ್ಭದಲ್ಲಿ ಬಾಹ್ಯ ಸಾಕ್ಷ್ಯವನ್ನು ಅಂಗೀಕರಿಸದಿರುವುದು:- ಮೇಲ್ನೋಟಕ್ಕೆ ಉಯಿಲಿನಲ್ಲಿ ಸಂದಿಗ್ಧತೆ ಅಥವಾ ನ್ಯೂನತೆಯು ಇರುವಲ್ಲಿ ಮರಣಶಾಸನ ಕರ್ತನು ಉದ್ದೇಶಗಳ ಬಗ್ಗೆ ಯಾವ ಬಾಹ್ಯ ಸಾಕ್ಷ್ಯವನ್ನೂ ಅಂಗೀಕರಿಸತಕ್ಕುದಲ್ಲ.

ದೃಷ್ಟಾಂತಗಳು

(i) ಒಬ್ಬ ವ್ಯಕ್ತಿಗೆ ಕೆರೊಲಿನ್ ಎಂಬ ಆಂಟಿ ಮತ್ತು ಮೇರಿ ಎಂಬ ದಾಯಾದಿ ಇರುತ್ತಾರೆ. ಆದರೆ ಮೇರಿ ಎಂಬ ಹೆಸರಿನ ಆಂಟಿ ಇರುವುದಿಲ್ಲ. ಅವನು ತನ್ನ ಉಯಿಲಿನ ಮೂಲಕ 1000 ರೂಪಾಯಿಗಳನ್ನು "ನನ್ನ ಆಂಟಿ ಕೆರೊಲಿನ್‌ಗೆ" ಮತ್ತು 1000 ರೂಪಾಯಿಗಳನ್ನು "ನನ್ನ ದಾಯಾದಿ ಮೇರಿಗೆ" ಮರಣ ಶಾಸನದ ಮೂಲಕ ಕೊಡುತ್ತಾನೆ ಮತ್ತು ಆ ತರುವಾಯ 2000 ರೂಪಾಯಿಗಳನ್ನು "ಹಿಂದೆ ಹೇಳಿದ ನನ್ನ ಆಂಟಿ ಮೇರಿಗೆ" ಮರಣಶಾಸನದ ಮೂಲಕ ಕೊಡುತ್ತಾನೆ. ಉಯಿಲಿನಲ್ಲಿ ಕೊಟ್ಟಿರುವ ವಿವರಣೆಯು ಅನ್ವಯವಾಗಬಹುದಾದ ಯಾವನೇ ವ್ಯಕ್ತಿಯು ಇರುವುದಿಲ್ಲ ಮತ್ತು "ಹಿಂದೆ ಹೇಳಿದ ನನ್ನ ಆಂಟಿ ಮೇರಿ" ಎಂದರೆ ಯಾರು ಎಂಬುದನ್ನು ತೋರಿಸಲು ಸಾಕ್ಷ್ಯವನ್ನು ಅಂಗೀಕರಿಸಲಾಗುವುದಿಲ್ಲ. ಆದ್ದರಿಂದ ಮರಣಶಾಸನ ದಾನವು 89ನೇ ಪ್ರಕರಣದ ಮೇರೆಗೆ ಅನಿಶ್ಚಯತೆಯಿಂದಾಗಿ ಶೂನ್ಯವಾಗುತ್ತದೆ.

(ii) 'ಎ' ನು 1000 ರೂಪಾಯಿಗಳನ್ನು........ ಗೆ ಎಂದು ಲೆಗಟಿಯ ಹೆಸರಿಗಾಗಿ ಖಾಲಿ ಜಾಗವನ್ನು ಬಿಟ್ಟು ಮರಣಶಾಸನದ ಮೂಲಕ ಕೊಡುತ್ತಾನೆ. ಯಾವ ಹೆಸರನ್ನು ಸೇರಿಸಲು ಉದ್ದೇಶಿಸಿದ್ದಾನೆಂಬುದನ್ನು ತೋರಿಸಲು ಸಾಕ್ಷ್ಯವನ್ನು ಅಂಗೀಕರಿಸತಕ್ಕುದಲ್ಲ.

(iii) 'ಎ' ನು 'ಬಿ' ಗೆ ......... ರೂಪಾಯಿಗಳನ್ನು ಅಥವಾ "ನನ್ನ...... ಎಸ್ಟೇಟನ್ನು" ಎಂದು ಹೇಳಿ ಮರಣಶಾಸನದ ಮೂಲಕ ಕೊಡುತ್ತಾನೆ. ಮರಣಶಾಸನ ಕರ್ತನು ಎಷ್ಟು ಮೊತ್ತ ಅಥವಾ ಯಾವ ಎಸ್ಟೇಟನ್ನು ಅಲ್ಲಿ ಸೇರಿಸಬೇಕೆಂದು ಉದ್ದೇಶಿಸಿದ್ದನೆನ್ನುವುದನ್ನು ತೋರಿಸಲು ಸಾಕ್ಷ್ಯವನ್ನು ಅಂಗೀಕರಿಸತಕ್ಕುದಲ್ಲ.

82. ಇಡೀ ಉಯಿಲಿನಿಂದ ಖಂಡದ ಅರ್ಥವನ್ನು ಗ್ರಹಿಸುವುದು:- ಉಯಿಲಿನ ಯಾವುದೇ ಖಂಡದ ಅರ್ಥವನ್ನು ಇಡೀ ಲಿಖಿತದಿಂದ ಗ್ರಹಿಸತಕ್ಕುದು ಮತ್ತು ಅದರ ಎಲ್ಲಾ ಭಾಗಗಳನ್ನು ಪರಸ್ಪರ ಉಲ್ಲೇಖದೊಂದಿಗೆ ಅರ್ಥೈಸತಕ್ಕುದು.

ದೃಷ್ಟಾಂತಗಳು

(i) ಮರಣಶಾಸನ ಕರ್ತನು 'ಬಿ' ನಿಗೆ 'ಎ' ನ ಮರಣದ ಕಾಲದಲ್ಲಿ ನಿರ್ದಿಷ್ಟ ನಿಧಿ ಅಥವಾ ಸ್ವತ್ತನ್ನು ಕೊಡುತ್ತಾನೆ ಮತ್ತು ತರುವಾಯದ ಖಂಡದ ಮೂಲಕ ತನ್ನ ಸ್ವತ್ತನ್ನು 'ಎ' ನಿಗೆ ಕೊಡುತ್ತಾನೆ. ಒಟ್ಟಾಗಿ ತೆಗೆದುಕೊಂಡ ಹಲವಾರು ಖಂಡಗಳ ಪರಿಣಾಮವನ್ನು ನಿರ್ದಿಷ್ಟ ನಿಧಿ ಅಥವಾ ಸ್ವತ್ತನ್ನು ಜೀವಿತ ಕಾಲಕ್ಕಾಗಿ 'ಎ' ನಲ್ಲಿ ಮತ್ತು ಅವನ ಮರಣದ ತರುವಾಯ 'ಬಿ' ನಲ್ಲಿ ನಿಹಿತಗೊಳಿಸುವುದೇ ಆಗಿದೆ. 'ಬಿ' ನಿಗೆ ಮಾಡಿದ ಮರಣಶಾಸನ ದಾನದಿಂದ ಆ ಮರಣಶಾಸನ ಕರ್ತನು

'ಎ' ನಿಗೆ ಅವನು ಕೊಟ್ಟಿರುವುದನ್ನು ಅವನು ವಿವರಿಸಿರುವಂಥ ಪದಗಳನ್ನು ಪರಿಮಿತ ಅರ್ಥದಲ್ಲಿ ಉಪಯೋಗಿಸಲು ಉದ್ದೇಶಿಸಿದ್ದನೆಂದು ಕಂಡುಬರುತ್ತದೆ.

(ii) ಬ್ಲಾಕ್ ಏಕರ್ ಎಂದು ಕರೆಯಲಾಗುವಂಥ ಒಂದು ಭಾಗವಿರುವ ಎಸ್ಟೇಟನ್ನು ಮರಣಶಾಸನ ಕರ್ತನು ಹೊಂದಿದ್ದು ಅವನು ಇಡೀ ಎಸ್ಟೇಟನ್ನು 'ಎ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ ಮತ್ತು ಅವನ ಉಯಿಲಿನ ಇನ್ನೊಂದು ಭಾಗದಲ್ಲಿ ಬ್ಲಾಕ್‌ಏಕರ್ ಅನ್ನು 'ಬಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. ಎರಡನೇ ಮರಣಶಾಸನದ ದಾನವನ್ನು "ನಾನು ಬ್ಲಾಕ್ ಏಕರ್ ಅನ್ನು 'ಬಿ' ನಿಗೆ ಮತ್ತು ನನ್ನ ಉಳಿದ ಇಡೀ ಎಸ್ಟೇಟನ್ನು 'ಎ' ನಿಗೆ ಕೊಡುತ್ತಾನೆ" ಎಂದು ಅವನು ಹೇಳಿದ್ದಿದ್ದರೆ ಹೇಗೋ ಹಾಗೆ ಮೊದಲನೆಯದಕ್ಕೆ ಅಪವಾದವೆಂಬಂತೆ ಓದಿಕೊಳ್ಳತಕ್ಕುದು.

83. ಪದಗಳನ್ನು ಯಾವಾಗ ಪರಿಬಂಧಿತ ಅರ್ಥದಲ್ಲಿ ಮತ್ತು ಯಾವಾಗ ಅವುಗಳನ್ನು ಸಾಮಾನ್ಯವಾದುದಕ್ಕಿಂತ ಹೆಚ್ಚು ವಿಶಾಲವಾದ ಅರ್ಥದಲ್ಲಿ ಅರ್ಥ ಮಾಡಿಕೊಳ್ಳಬಹುದು:- ಮರಣಶಾಸನ ಕರ್ತನು ಸಾಮಾನ್ಯ ಪದಗಳನ್ನು ಪರಿಬಂಧಿತ ಅರ್ಥದಲ್ಲಿ ಉಪಯೋಗಿಸಲು ಉದ್ದೇಶಿಸಿದ್ದಾನೆಂದು ಉಯಿಲಿನಿಂದ ಗ್ರಹಿಸಬಹುದಾಗಿರುವಲ್ಲಿ , ಆ ಪದಗಳನ್ನು ಪರಿಬಂಧಿತ ಅರ್ಥದಲ್ಲಿ ತಿಳಿದುಕೊಳ್ಳಬಹುದು. ಮತ್ತು ಮರಣಶಾಸನ ಕರ್ತನು ಪದಗಳನ್ನು ವಿಶಾಲವಾದ ಅರ್ಥದಲ್ಲಿ ಉಪಯೋಗಿಸಲು ಉದ್ದೇಶಿಸಿದ್ದಾನೆಂದು ಉಯಿಲಿನ ಇತರ ಪದಗಳಿಂದ ಅದನ್ನು ಗ್ರಹಿಸಬಹುದಾಗಿರುವಲ್ಲಿ , ಸಾಮಾನ್ಯವಾಗಿ ಆ ಪದಗಳು ಹೊಂದಿರುವುದಕ್ಕಿಂತ ಹೆಚ್ಚಿನ ವಿಶಾಲ ಅರ್ಥದಲ್ಲಿ ಅವುಗಳನ್ನು ಅರ್ಥಮಾಡಿಕೊಳ್ಳಬಹುದು.

ದೃಷ್ಟಾಂತಗಳು

(i) ಒಬ್ಬ ಮರಣಶಾಸನ ಕರ್ತನು 'ಎ' ನಿಗೆ "ಬಿ" ನ ಅಧಿಭೋಗದಲ್ಲಿರುವ ನನ್ನ ಫಾರಂನ್ನು" ಮತ್ತು 'ಸಿ' ನಿಗೆ "ಎಲ್" ನಲ್ಲಿರುವ ನನ್ನ ಎಲ್ಲಾ ಜೌಗು ಭೂಮಿಗಳನ್ನು" ಎಂದು ಸೂಚಿಸಿ ಮರಣಶಾಸನದ ಮೂಲಕ ಕೊಡುತ್ತಾನೆ. 'ಬಿ' ನ ಅಧಿಭೋಗದಲ್ಲಿರುವ ಫಾರಂನ ಭಾಗವು 'ಎಲ್' ನಲ್ಲಿನ ಜೌಗು ಭೂಮಿಗಳನ್ನು ಒಳಗೊಂಡಿದೆ ಮತ್ತು ಮರಣ ಶಾಸನ ಕರ್ತನು 'ಎಲ್' ನಲ್ಲಿ ಇತರ ಜೌಗು ಭೂಮಿಗಳನ್ನು ಸಹ ಹೊಂದಿದ್ದಾನೆ. "ಎಲ್" ನಲ್ಲಿನ "ನನ್ನ ಎಲ್ಲಾ ಜೌಗು ಭೂಮಿಗಳು" ಎಂಬ ಸಾಮಾನ್ಯ ಪದಗಳು 'ಎ' ನಿಗೆ ಮಾಡಿದ ದಾನದ ಮೂಲಕ ಪರಿಬಂಧಿತವಾಗಿದೆ 'ಬಿ' ನ ಅಧಿಭೋಗದಲ್ಲಿರುವ ಇಡೀ ಫಾರಂ ಅನ್ನು 'ಎಲ್' ನಲ್ಲಿನ ಜೌಗು ಭೂಮಿಗಳನ್ನು ಒಳಗೊಂಡಿರುವಂಥ ಫಾರಂನ ಭಾಗವನ್ನು ಒಳಗೊಂಡು ತೆಗೆದುಕೊಳ್ಳುತ್ತಾನೆ.

(ii) ಒಬ್ಬ ಮರಣಶಾಸನ ಕರ್ತನು (ಹಡಗಿನಲ್ಲಿರುವ ನಾವಿಕ) ತನ್ನ ತಾಯಿಗೆ ಅವನ ಚಿನ್ನದ ಉಂಗುರ, ಗುಂಡಿಗಳು ಮತ್ತು ಬಟ್ಟೆಗಳ ಪಠಾರಿಗಳನ್ನು ಮತ್ತು ತನ್ನ ಸ್ನೇಹಿತನಾದ 'ಎ' ನಿಗೆ (ಹಡಗಿನಲ್ಲಿನ ಜತೆಗಾರ) ಅವನ ಕೆಂಪುಪೆಟ್ಟಿಗೆ, ಮಡಿಚುವ ಚಾಕು ಮತ್ತು ಈ ಹಿಂದೆ ಮರಣಶಾಸನದ ಮೂಲಕ ಕೊಟ್ಟಿರುವ ಎಲ್ಲಾ ವಸ್ತುಗಳನ್ನು ಮರಣಶಾಸನದ ಮೂಲಕ ಕೊಟ್ಟಿರುತ್ತಾನೆ. ಈ ಮರಣಶಾಸನದ ಮೇರೆಗೆ ಮರಣಶಾಸನ ಕರ್ತನ ಮನೆಯಲ್ಲಿನ ಪಾಲು 'ಎ' ನಿಗೆ ಹೋಗುವುದಿಲ್ಲ.

(iii) 'ಎ' ನು ತನ್ನ ಉಯಿಲಿನ ಮೂಲಕ 'ಬಿ' ನಿಗೆ ಅವನ ಮನೆಯ ಎಲ್ಲ ಪೀಠೋಪಕರಣಗಳು, ತಟ್ಟೆ, ಬಟ್ಟೆ, ಪಿಂಗಾಣಿ ಸಾಮಾನು, ಪುಸ್ತಕಗಳು, ಚಿತ್ರಪಟಗಳು ಮತ್ತು ಯಾವುದೇ ಬಗೆಯ ಎಲ್ಲ ಇತರ ಸರಕುಗಳನ್ನು ಮರಣಶಾಸನದ ಮೂಲಕ ಕೊಟ್ಟಿದ್ದಾನೆ ಮತ್ತು ಆ ತರುವಾಯ 'ಎ' ನಿಗೆ ತನ್ನ ಸ್ವತ್ತಿನ ನಿರ್ದಿಷ್ಟ ಭಾಗವನ್ನು ಮರಣಶಾಸನದ ಮೂಲಕ ಕೊಟ್ಟಿದ್ದಾನೆ. ಮೊದಲನೆಯ ಮರಣಶಾಸನದಾನದ ಮೇರೆಗೆ ಅದರಲ್ಲಿ ನಮೂದಿಸಿರುವ ವಸ್ತುಗಳಂಥದೇ ಆದ ಸ್ವರೂಪದ ಮರಣಶಾಸನ ಕರ್ತನು ಅಂಥ ವಸ್ತುಗಳಿಗೆ ಮಾತ್ರವೇ ಹಕ್ಕುಳ್ಳವನಾಗುತ್ತಾನೆ.

84. ಎರಡು ಅರ್ಥಾನ್ವಯಗಳು ಸಾಧ್ಯವಿರುವಾಗ ಯಾವುದಕ್ಕೆ ಪ್ರಾಶಸ್ತ್ಯ:- ಒಂದು ಖಂಡಕ್ಕೆ ಎರಡು ಅರ್ಥಗಳ ಅವಕಾಶವಿದ್ದು, ಅವುಗಳಲ್ಲಿ ಒಂದರ ಅನುಸಾರ ಆ ಖಂಡಕ್ಕೆ ತಕ್ಕಮಟ್ಟಿನ ಪರಿಣಾಮವಿರುವಾಗ ಮತ್ತು ಇನ್ನೊಂದರ ಅನುಸಾರ ಅದಕ್ಕೆ ಯಾವುದೇ ಪರಿಣಾಮ ಇಲ್ಲದೇ ಇರುವಾಗ ಮೊದಲನೆಯ ಅರ್ಥಕ್ಕೆ ಪ್ರಾಶಸ್ತ್ಯವನ್ನು ಕೊಡತಕ್ಕುದು.

85. ಯುಕ್ತವಾಗಿ ಅರ್ಥೈಸಬಹುದಾಗಿರುವ ಯಾವುದೇ ಭಾಗವನ್ನು ತಿರಸ್ಕರಿಸದಿರುವುದು:- ಮರಣ ಶಾಸನದ ಯಾವುದೇ ಭಾಗವನ್ನು ಯುಕ್ತವಾಗಿ ಅರ್ಥೈಸಲು ಸಾಧ್ಯವಾಗಿದ್ದರೆ ಅರ್ಥರಹಿತವಾದುದೆಂದು ಅದನ್ನು ತಿರಸ್ಕರಿಸತಕ್ಕುದಲ್ಲ.

86. ಉಯಿಲಿನ ಬೇರೆ ಬೇರೆ ಭಾಗಗಳಲ್ಲಿ ಪುನರಾವೃತ್ತಿಯಾದ ಪದಗಳ ಅರ್ಥ ವಿವರಣೆ:- ಒಂದೇ ಬಗೆಯ ಪದಗಳು ಒಂದೇ ಉಯಿಲಿನ ಬೇರೆ ಬೇರೆ ಭಾಗಗಳಲ್ಲಿ ಬಂದರೆ ಅವುಗಳನ್ನು ತದ್ವಿರುದ್ಧವಾದ ಉದ್ದೇಶಗಳು ಕಂಡು ಬಂದ ಹೊರತು ಎಲ್ಲ ಕಡೆಯಲ್ಲೂ ಅದೇ ಅರ್ಥದಲ್ಲಿ ಉಪಯೋಗಿಸಲಾಗಿದೆ ಎಂದು ಭಾವಿಸತಕ್ಕುದು.

87. ಮರಣಶಾಸನ ಕರ್ತನ ಉದ್ದೇಶವನ್ನು ಸಾಧ್ಯವಾಗುವಷ್ಟರ ಮಟ್ಟಿಗೆ ಪರಿಣಾಮಕಾರಿಗೊಳಿಸುವುದು:- ಮರಣಶಾಸನ ಕರ್ತನ ಉದ್ದೇಶವನ್ನು ಅದು ಸಂಪೂರ್ಣವಾಗಿ ಪರಿಣಾಮಕಾರಿಯಾಗುವುದಿಲ್ಲ ಎಂಬ ಕಾರಣದಿಂದ ತಳ್ಳಿಹಾಕತಕ್ಕುದಲ್ಲ. ಸಾಧ್ಯವಾಗುವಷ್ಟರ ಮಟ್ಟಿಗೆ ಅದಕ್ಕೆ ಪರಿಣಾಮವನ್ನು ಕೊಡತಕ್ಕುದು.

ದೃಷ್ಟಾಂತ

ಮರಣಶಾಸನ ಕರ್ತನು ತನ್ನ ಮರಣ ಶಯ್ಯೆಯಲ್ಲಿ ಮಾಡಿದ ಉಯಿಲಿನ ಮೂಲಕ ತನ್ನ ಎಲ್ಲಾ ಸ್ವತ್ತನ್ನು 'ಸಿಡಿ' ನಿಗೆ ಜೀವನಪರ್ಯಂತ ಮತ್ತು ಅವನು ಮರಣ ಹೊಂದಿದ ತರುವಾಯ ಒಂದು ಗೊತ್ತು ಪಡಿಸಿದ ಆಸ್ಪತ್ರೆಗೆ ಮರಣಶಾಸನದ ಮೂಲಕ ಕೊಟ್ಟಿದ್ದಾನೆ. ಆ ಆಸ್ಪತ್ರೆಗೆ ಮಾಡಿದ ದಾನವು 118ನೇ ಪ್ರಕರಣದ ಮೇರೆಗೆ ಶೂನ್ಯವಾಗಿರುವುದರಿಂದ ಮರಣಶಾಸನ ಕರ್ತನ ಉದ್ದೇಶವು ಸಂಪೂರ್ಣವಾಗಿ ಪರಿಣಾಮಕಾರಿಯಾಗುವುದಿಲ್ಲ. ಆದರೆ 'ಸಿಡಿ' ನಿಗೆ ಮಾಡಿದ ದಾನಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಪರಿಣಾಮಕಾರಿಯಾಗುತ್ತದೆ.

88. ಎರಡು ಅಸಂಗತ ಖಂಡಗಳಲ್ಲಿ ಕೊನೆಯದು ಪ್ರಭಾವವುಳ್ಳದ್ದಾಗಿರುತ್ತದೆ:- ಉಯಿಲಿನಲ್ಲಿನ ದಾನಕ್ಕೆ ಸಂಬಂಧಿಸಿದ ಎರಡು ಖಂಡಗಳು ಪರಸ್ಪರ ಕೂಡಿಕೊಳ್ಳಲಾಗದ ಹಾಗೆ ಅವುಗಳಲ್ಲಿ ಹೊಂದಾಣಿಕೆ ಇಲ್ಲದಿರುವಲ್ಲಿ ಕೊನೆಯ ಖಂಡವು ಪ್ರಭಾವವುಳ್ಳದ್ದಾಗಿರತಕ್ಕುದು.

ದೃಷ್ಟಾಂತಗಳು

(i) ಮರಣಶಾಸನ ಕರ್ತನು ತನ್ನ ಉಯಿಲಿನ ಮೊದಲನೆಯ ಖಂಡದ ಮೂಲಕ ತನ್ನ ರಾಮನಗರದ ಎಸ್ಟೇಟನ್ನು "ಎ" ನಿಗೆ ಕೊಡುತ್ತಾನೆ ಮತ್ತು ತನ್ನ ಉಯಿಲಿನ ಕೊನೆಯ ಖಂಡದ ಮೂಲಕ "ಬಿ" ನಿಗೆ ಆದರೆ "ಎ" ನಿಗೆ ಅಲ್ಲ ಎಂದು ಅದನ್ನು ಕೊಡುತ್ತಾನೆ. 'ಬಿ' ನು ಅದನ್ನು ತೆಗೆದುಕೊಳ್ಳುತ್ತಾನೆ.

(ii) ಒಬ್ಬ ವ್ಯಕ್ತಿಯು ತನ್ನ ಉಯಿಲಿನ ಪ್ರಾರಂಭದಲ್ಲಿ ತನ್ನ ಮನೆಯನ್ನು 'ಎ' ನಿಗೆ ಕೊಟ್ಟಿದ್ದರೆ ಮತ್ತು ಉಯಿಲಿನ ಕೊನೆಯಲ್ಲಿ ತನ್ನ ಮನೆಯನ್ನು ಮಾರತಕ್ಕುದು ಮತ್ತು ಉತ್ಪತ್ತಿಯನ್ನು 'ಬಿ' ನ ಪ್ರಯೋಜನಕ್ಕಾಗಿ ಹೂಡತಕ್ಕುದು ಎಂದು ನಿರ್ದೇಶಿಸಿದ್ದರೆ ಎರಡನೆಯ ವಿಲೇವಾರಿಯು ಪ್ರಭಾವವುಳ್ಳದ್ದಾಗಿರುವುದು.

89. ಅನಿಶ್ಚಿತತೆಯಿಂದಾಗಿ ಉಯಿಲು ಅಥವಾ ಮರಣಶಾಸನ ದಾನವು ಶೂನ್ಯವಾಗುವುದು:- ಯಾವುದೇ ನಿಶ್ಚಿತ ಉದ್ದೇಶವನ್ನು ವ್ಯಕ್ತಪಡಿಸದ ಉಯಿಲು ಅಥವಾ ಮರಣಶಾಸನ ದಾನವು ಅನಿಶ್ಚಿತತೆಯಿಂದಾಗಿ ಶೂನ್ಯವಾಗುತ್ತದೆ.

ದೃಷ್ಟಾಂತ

ಮರಣಶಾಸನ ಕರ್ತನು "ನಾನು 'ಎ' ನಿಗೆ ಸರಕುಗಳನ್ನು ಮರಣಶಾಸನದ ಮೂಲಕ ಕೊಡುತ್ತೇನೆ" ಅಥವಾ "ನಾನು 'ಎ' ನಿಗೆ ಅನುಸೂಚಿಯಲ್ಲಿ ನಮೂದಿಸಿದ ಎಲ್ಲ ಸರಕುಗಳನ್ನು ಕೊಡುತ್ತೇನೆ" ಎಂದು ಹೇಳಿದ್ದರೆ ಮತ್ತು ಯಾವುದೇ ಅನುಸೂಚಿಯೂ ಅದರಲ್ಲಿ ಕಂಡುಬರದಿದ್ದರೆ ಅಥವಾ "ನಾನು ಹಣ, ಗೋಧಿ, ಎಣ್ಣೆಯನ್ನು ಅಥವಾ ಅದೇ ಬಗೆಯ ವಸ್ತುವನ್ನು ಮರಣಶಾಸನದ ಮೂಲಕ ಕೊಡುತ್ತೇನೆ" ಎಂದು ಹೇಳಿದ್ದು , ಆದರೆ ಎಷ್ಟು ಎಂಬುದನ್ನು ತಿಳಿಸದಿದ್ದರೆ ಅದು ಶೂನ್ಯವಾಗುತ್ತದೆ.

90. ವಿಷಯವನ್ನು ವಿವರಿಸುವ ಪದಗಳು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಆ ವಿವರಣೆಗೆ ಅನುಗುಣವಾಗಿರುವ ಸ್ವತ್ತಿಗೆ ಸಂಬಂಧಪಡುವುದು:- ಉಯಿಲಿನಲ್ಲಿನ ದಾನದ ವಿಷಯಕ್ಕೆ ಸಂಬಂಧಿಸಿದ ಸ್ವತ್ತಿನ ವಿವರಣೆಯು ಉಯಿಲಿನಲ್ಲಿ ತದ್ವಿರುದ್ಧ ಉದ್ದೇಶವು ಕಂಡುಬಂದ ಹೊರತು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಆ ವಿವರಣೆಗೆ ಅನುಗುಣವಾಗಿರುವ ಸ್ವತ್ತಿಗೆ ಸಂಬಂಧಪಟ್ಟಿರುವುದಾಗಿ ಮತ್ತು ಆ ಸ್ವತ್ತನ್ನು ಒಳಗೊಂಡಿರುವುದಾಗಿ ಭಾವಿಸತಕ್ಕುದು.

91. ಸಾಮಾನ್ಯ ಮರಣಶಾಸನ ದಾನದ ಮೂಲಕ ಬರೆದುಕೊಟ್ಟ ನಿಗದಿಪಡಿಸುವ ಅಧಿಕಾರ ಪತ್ರ:- ಉಯಿಲಿನಲ್ಲಿ ತದ್ವಿರುದ್ಧವಾದ ಉದ್ದೇಶವು ಕಂಡುಬಂದ ಹೊರತು, ಮರಣಶಾಸನ ಕರ್ತನು ಎಸ್ಟೇಟಿನ ಮರಣಶಾಸನ ದಾನವು ಅವನು ಯುಕ್ತವೆಂದು ಆಲೋಚಿಸಬಹುದಾದ ಯಾವುದೇ ಉದ್ದೇಶಕ್ಕೆ ಉಯಿಲು ಮೂಲಕ ನಿಗದಿಪಡಿಸುವ ಅಧಿಕಾರವನ್ನು ಅವನು ಹೊಂದಿರಬಹುದಾದಂಥ ಯಾವುದೇ ಸ್ವತ್ತನ್ನು ಒಳಗೊಳ್ಳುವುದಾಗಿ ಎಂದು ಅರ್ಥೈಸತಕ್ಕುದು, ಮತ್ತು ಆ ಮರಣಶಾಸನ ದಾನವು ಅಂಥ ಅಧಿಕಾರದ ನಿರ್ವಹಣೆಯಾಗಿ ಪ್ರವರ್ತಿಸತಕ್ಕುದು ಮತ್ತು ಸಾಮಾನ್ಯ ರೀತಿಯಲ್ಲಿ ವಿವರಿಸಿದ ಸ್ವತ್ತಿನ ಮರಣಶಾಸನ ದಾನವು ಅಂತಹ ವಿವರಣೆಯು ವ್ಯಾಪ್ತವಾಗಬಹುದಾದಂಥ ಮತ್ತು ಅವನು ಯುಕ್ತವೆಂದು ಯೋಚಿಸಬಹುದಾದಂಥ ಉದ್ದೇಶಕ್ಕೆ ಉಯಿಲಿನ ಮೂಲಕ ನಿಗದಿಪಡಿಸಲು ಅವನು ಅಧಿಕಾರ ಹೊಂದಿರಬಹುದಾದಂಥ ಯಾವುದೇ ಸ್ವತ್ತನ್ನು ಒಳಗೊಂಡಿರುವುದಾಗಿ ಎಂದು ಅರ್ಥೈಸತಕ್ಕುದು ಮತ್ತು ಮರಣಶಾಸನ ದಾನವು ಅಂಥ ಅಧಿಕಾರದ ನಿರ್ವಹಣೆಯಾಗಿ ಪ್ರವರ್ತಿಸತಕ್ಕುದು.

92. ನಿಗದಿಪಡಿಸಲು ತಪ್ಪಿದಲ್ಲಿ ಅಧಿಕಾರ ಪತ್ರದ ಉದ್ದೇಶಗಳಿಗೆ ಇಂಗಿತದಾನ:- ನಿರ್ದಿಷ್ಟ ವ್ಯಕ್ತಿಯು ನಿಗದಿಪಡಿಸಬಹುದಾದ ಕೆಲವು ಉದ್ದೇಶಗಳಿಗಾಗಿ ಅಥವಾ ಅವುಗಳ ಪ್ರಯೋಜನಕ್ಕಾಗಿ ಅಥವಾ ನಿರ್ದಿಷ್ಟ ವ್ಯಕ್ತಿಯು ನಿಗದಿಪಡಿಸಬಹುದಾದಂಥ ಪ್ರಮಾಣಗಳಲ್ಲಿ, ಕೆಲವು ಉದ್ದೇಶಗಳ ಪ್ರಯೋಜನಕ್ಕಾಗಿ ಸ್ವತ್ತನ್ನು ಮರಣಶಾಸನದ ಮೂಲಕ ಕೊಟ್ಟಿರುವಲ್ಲಿ ಮತ್ತು ಉಯಿಲಿನಲ್ಲಿ ನಿಗದಿಪಡಿಸದಿರುವ ಯಾವುದೇ ಸಂದರ್ಭದ ಬಗ್ಗೆ ಉಪಬಂಧವಿಲ್ಲದಿರುವಲ್ಲಿ ಮತ್ತು ಉಯಿಲು ಮೂಲಕ ಕೊಟ್ಟಿರುವ ಅಧಿಕಾರವನ್ನು ಚಲಾಯಿಸದಿದ್ದರೆ, ಆ ಸ್ವತ್ತು ಅಧಿಕಾರ ಪತ್ರದ ಎಲ್ಲ ಉದ್ದೇಶಗಳಿಗೆ ಸಮಪಾಲುಗಳಲ್ಲಿ ಸೇರುತ್ತದೆ.

ದೃಷ್ಟಾಂತ

'ಎ' ನು ತನ್ನ ಉಯಿಲಿನ ಮೂಲಕ ಒಂದು ನಿಧಿಯನ್ನು ತನ್ನ ಹೆಂಡತಿಗೆ ಆಕೆಯ ಜೀವನ ಪರ್ಯಂತ ಮರಣಶಾಸನ ದಾನವಾಗಿ ಕೊಡುತ್ತಾನೆ ಮತ್ತು ಅವಳ ಮರಣದ ನಂತರ ಅವಳು ನಿಗದಿಪಡಿಸುವ ಪ್ರಮಾಣಗಳಲ್ಲಿ ಅವನ ಮಕ್ಕಳ ನಡುವೆ ಹಂಚತಕ್ಕುದು ಎಂದು ನಿರ್ದೇಶಿಸುತ್ತಾನೆ. ಆ ವಿಧವೆಯು ಯಾವುದನ್ನೂ ನಿಗದಿಪಡಿಸದೆ ಮರಣ ಹೊಂದುತ್ತಾಳೆ. ಆ ನಿಧಿಯನ್ನು ಮಕ್ಕಳ ನಡುವೆ ಸಮವಾಗಿ ಹಂಚಲಾಗುವುದು.

93. ಪರಿಮಿತಗೊಳಿಸುವ ನಿಬಂಧನೆಗಳಿಲ್ಲದೆ ನಿರ್ದಿಷ್ಟ ವ್ಯಕ್ತಿಯ "ವಾರಸುದಾರರು" ಮುಂತಾದವರಿಗೆ ಮರಣಶಾಸನ ದಾನ:- ಪರಿಮಿತಗೊಳಿಸುವ ಯಾವುದೇ ನಿಬಂಧನೆಗಳಿಲ್ಲದೆ ನಿರ್ದಿಷ್ಟ ವ್ಯಕ್ತಿಯ "ವಾರಸುದಾರರು" ಅಥವಾ "ಸರಿಯಾದ ವಾರಸುದಾರರು" ಅಥವಾ "ಬಂಧುಗಳು" ಅಥವಾ "ಅತಿ ನಿಕಟ ಬಂಧುಗಳು" ಅಥವಾ "ಕುಟುಂಬ" ಅಥವಾ "ರಕ್ತ ಸಂಬಂಧಿಗಳು" ಅಥವಾ "ಅತಿ ನಿಕಟ ಸಂಬಂಧಿಗಳು" ಅಥವಾ "ನಿಕಟ ಬಂಧುಗಳು" - ಇವರಿಗೆ ಮರಣಶಾಸನ ದಾನವನ್ನು ಮಾಡಿರುವಲ್ಲಿ ಮತ್ತು ಹಾಗೆ ಹೆಸರಿಸಿದ ಆ ವರ್ಗವು ಮರಣಶಾಸನ ದಾನದ ನೇರ ಮತ್ತು ಸ್ವತಂತ್ರ ಉದ್ದೇಶವಾಗಿರುವಲ್ಲಿ, ಮರಣಶಾಸನದ ಮೂಲಕ ಕೊಟ್ಟ ಆ ಸ್ವತ್ತನ್ನು ಅಂತಹ ವ್ಯಕ್ತಿಗೆ ಸೇರಿದ್ದು ಎಂಬಂತೆ ಮತ್ತು ಅವನು ತನ್ನ ಋಣಗಳ ಸಂದಾಯಕ್ಕಾಗಿ ಅಂಥ ಸ್ವತ್ತಿನ ಹೊರತಾಗಿ ಇತರ ಆಸ್ತಿಗಳನ್ನು ಬಿಟ್ಟು ಆ ಸ್ವತ್ತಿಗೆ ಸಂಬಂಧಿಸಿದಂತೆ ಮರಣಶಾಸನ ರಹಿತವಾಗಿ ಮರಣ ಹೊಂದಿದ್ದರೆ ಹೇಗೋ ಹಾಗೆ ಹಂಚತಕ್ಕುದು.

ದೃಷ್ಟಾಂತಗಳು

(i) 'ಎ' ನು ತನ್ನ ಸ್ವತ್ತನ್ನು "ನನ್ನ ಸ್ವಂತ ಅತಿ ಹತ್ತಿರದ ಬಂಧುಗಳಿಗೆ" ಎಂದು ಬಿಟ್ಟು ಹೋಗುತ್ತಾನೆ. ಅವನು ತನ್ನ ಋಣಗಳ ಸಂದಾಯಕ್ಕಾಗಿ ಅಂಥ ಸ್ವತ್ತಲ್ಲದ ಇತರ ಆಸ್ತಿಗಳನ್ನು ಬಿಟ್ಟು ಮರಣಶಾಸನ ರಹಿತನಾಗಿ ಮರಣ ಹೊಂದಿದ್ದರೆ ಆ ಸ್ವತ್ತಿಗೆ ಯಾರು ಹಕ್ಕುಳ್ಳವರಾಗುತ್ತಿದ್ದರೋ ಅವರಿಗೆ ಆ ಸ್ವತ್ತು ಸೇರುತ್ತದೆ.

(ii) 'ಎ' ನು 10,000 ರೂಪಾಯಿಗಳನ್ನು 'ಬಿ' ನಿಗೆ ಅವನ ಜೀವಿತ ಕಾಲಕ್ಕಾಗಿ ಮತ್ತು 'ಬಿ' ನ ಮರಣಾನಂತರ ತನ್ನ ಸ್ವಂತ ಸರಿಯಾದ ವಾರಸುದಾರರಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. ಆ ಮರಣಶಾಸನ ಸ್ವತ್ತು 'ಬಿ' ನ ಮರಣಾನಂತರ ಅದು 'ಎ' ನ ಮರಣಶಾಸನದ ಮೂಲಕ ಕೊಟ್ಟಿರದ ಸ್ವತ್ತಿನ ಭಾಗವಾಗಿದ್ದಿದ್ದರೆ ಅದಕ್ಕೆ ಯಾರು ಹಕ್ಕುಳ್ಳವರಾಗುತ್ತಿದ್ದರೋ ಅವರಿಗೆ ಸೇರುತ್ತದೆ.

(iii) 'ಎ' ನು ತನ್ನ ಸ್ವತ್ತನ್ನು 'ಬಿ' ನಿಗೆ ಕೊಡುತ್ತಾನೆ. ಆದರೆ 'ಬಿ' ನು 'ಎ' ನಿಗಿಂತ ಮೊದಲೇ ಮರಣ ಹೊಂದಿದರೆ ಆ ಸ್ವತ್ತು 'ಬಿ' ನ ನಿಕಟ ಬಂಧುಗಳಿಗೆ ಹೋಗುವಂತೆ ಕೊಡುತ್ತಾನೆ. 'ಬಿ' ನು 'ಎ' ನಿಗಿಂತ ಮೊದಲೆ ಮರಣ ಹೊಂದುತ್ತಾನೆ. ಆ ಸ್ವತ್ತು 'ಬಿ' ನಿಗೆ ಸೇರಿದ್ದರೆ ಮತ್ತು ಅವನು ತನ್ನ ಋಣಗಳ ಸಂದಾಯಕ್ಕಾಗಿ ಅಂಥ ಸ್ವತ್ತಲ್ಲದ ಇತರ ಆಸ್ತಿಗಳನ್ನು ಬಿಟ್ಟು ಮರಣಶಾಸನ ರಹಿತನಾಗಿ ಮರಣ ಹೊಂದಿದ್ದರೆ ಹೇಗೋ ಹಾಗೆ ಆ ಸ್ವತ್ತು ಆ ನಿಕಟ ಬಂಧುಗಳಿಗೆ ಹೋಗುತ್ತದೆ.

(iv) 'ಎ' ನು 10,000 ರೂಪಾಯಿಗಳನ್ನು 'ಬಿ' ನಿಗೆ ಅವನ ಜೀವಿತ ಕಾಲಕ್ಕಾಗಿ ಮತ್ತು ಅವನ ಮರಣಾನಂತರ 'ಸಿ' ನ ವಾರಸುದಾರರಿಗೆ ಎಂದು ಕೊಡುತ್ತಾನೆ. ಆ ಮರಣಶಾಸನ ಸ್ವತ್ತು ಅದು 'ಸಿ' ನಿಗೆ ಸೇರಿದ್ದರೆ ಮತ್ತು ಅವನು ತನ್ನ ಋಣಗಳ ಸಂದಾಯಕ್ಕಾಗಿ ಮರಣಶಾಸನ ಸ್ವತ್ತಲ್ಲದ ಇತರ ಆಸ್ತಿಗಳನ್ನು ಬಿಟ್ಟು ಮರಣಶಾಸನ ರಹಿತನಾಗಿ ಮರಣ ಹೊಂದಿದ್ದರೆ ಹೇಗೋ ಹಾಗೆ 'ಸಿ' ನ ವಾರಸುದಾರರಿಗೆ ಸೇರುತ್ತದೆ.

94. ನಿರ್ದಿಷ್ಟ ವ್ಯಕ್ತಿಯ "ಪ್ರತಿನಿಧಿಗಳು" ಮುಂತಾದವರಿಗೆ ಮಾಡಿದ ಮರಣಶಾಸನದಾನ:- ಮರಣಶಾಸನದಾನವನ್ನು ಒಬ್ಬ ನಿರ್ದಿಷ್ಟ ವ್ಯಕ್ತಿಯ "ಪ್ರತಿನಿಧಿ" ಗಳಿಗೆ ಅಥವಾ "ಕಾನೂನು ಸಮ್ಮತ ಪ್ರತಿನಿಧಿಗಳಿಗೆ" ಅಥವಾ "ವೈಯಕ್ತಿಕ ಪ್ರತಿನಿಧಿಗಳಿಗೆ" ಅಥವಾ "ನಿರ್ವಾಹಕರು ಅಥವಾ ಆಡಳಿತಗಾರರಿಗೆ" ಎಂದು ಮಾಡಲಾಗಿರುವಲ್ಲಿ ಮತ್ತು ಹಾಗೆ ಹೆಸರಿಸಿದ ವರ್ಗವು ಮರಣ ಶಾಸನ ದಾನದ ನೇರ ಮತ್ತು ಸ್ವತಂತ್ರ ಉದ್ದೇಶವಾಗಿದ್ದರೆ ಮರಣಶಾಸನದ ಮೂಲಕ ಕೊಟ್ಟ ಸ್ವತ್ತು ಅಂತಹ ವ್ಯಕ್ತಿಗೆ ಸೇರಿದ್ದಿದ್ದರೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಅವನು ಮರಣಶಾಸನ ರಹಿತನಾಗಿ ಮರಣ ಹೊಂದಿದ್ದರೆ ಹೇಗೋ ಹಾಗೆ ಹಂಚತಕ್ಕುದು.

ದೃಷ್ಟಾಂತ

'ಎ' ನ "ಕಾನೂನು ಸಮ್ಮತ ಪ್ರತಿನಿಧಿಗಳಿಗೆ" ಒಂದು ಮರಣಶಾಸನ ದಾನವನ್ನು ಮಾಡಲಾಗಿದೆ. 'ಎ' ನು ಮರಣಶಾಸನ ರಹಿತವಾಗಿ ಮತ್ತು ದಿವಾಳಿಯಾಗಿ ಮರಣ ಹೊಂದಿದ್ದಾನೆ. 'ಬಿ' ನು ಅವನ ಆಡಳಿತಗಾರ. 'ಬಿ' ನು ಮರಣಶಾಸನ ಸ್ವತ್ತನ್ನು ಸ್ವೀಕರಿಸಲು ಹಕ್ಕುಳ್ಳವನಾಗಿದ್ದಾನೆ ಮತ್ತು ಅದನ್ನು ಮೊಟ್ಟ ಮೊದಲು ಸಂದಾಯವಾಗದೇ ಉಳಿಯಬಹುದಾದ 'ಎ' ನ ಋಣಗಳ ಭಾಗವನ್ನು ತೀರಿಸಲು ವಿನಿಯೋಗಿಸುತ್ತಾನೆ; ಯಾವುದೇ ಹೆಚ್ಚುವರಿ ಇದ್ದರೆ, ಅದನ್ನು 'ಬಿ' ನು 'ಎ' ನ ಋಣಗಳನ್ನು ಸಂದಾಯ ಮಾಡಿದ ತರುವಾಯ ಉಳಿದಿರಬಹುದಾದ 'ಎ' ನ ಯಾವುದೇ ಸ್ವತ್ತನ್ನು 'ಎ' ನ ಮರಣದ ಕಾಲದಲ್ಲಿ ಪಡೆಯಲು ಹಕ್ಕುಳ್ಳವರಾಗುತ್ತಿದ್ದ ವ್ಯಕ್ತಿಗಳಿಗೆ ಅಥವಾ ಅಂಥ ವ್ಯಕ್ತಿಗಳ ಪ್ರತಿನಿಧಿಗಳಿಗೆ ಸಂದಾಯ ಮಾಡುತ್ತಾನೆ.

95. ಪರಿಮಿತಿ ಸೂಚಕ ಶಬ್ದಗಳಿಲ್ಲದ ಮರಣಶಾಸನದಾನ:- ಸ್ವತ್ತನ್ನು ಯಾವನೇ ವ್ಯಕ್ತಿಗೆ ಮರಣಶಾಸನದ ಮೂಲಕ ಕೊಟ್ಟಿರುವಲ್ಲಿ, ಅವನಿಗೆ ಪರಿಬಂಧಿತ ಹಿತಾಸಕ್ತಿಯನ್ನು ಮಾತ್ರವೇ ಕೊಡಲು ಉದ್ದೇಶಿಸಲಾಗಿತ್ತೆಂದು ಉಯಿಲಿನಿಂದ ಕಂಡುಬಂದ ಹೊರತು, ಮರಣಶಾಸನ ಕರ್ತನ ಆ ಸ್ವತ್ತಿನಲ್ಲಿನ ಇಡೀ ಹಿತಾಸಕ್ತಿಗಳಿಗೆ ಅವನು ಹಕ್ಕುಳ್ಳವನಾಗಿರುತ್ತಾನೆ.

96. ಪರ್ಯಾಯವಾಗಿ ಮರಣಶಾಸನದಾನ:- ಸ್ವತ್ತನ್ನು ಒಬ್ಬ ವ್ಯಕ್ತಿಗೆ ಮರಣಶಾಸನ ದಾನದ ಮೂಲಕ ಕೊಟ್ಟಿರುವಲ್ಲಿ ಮತ್ತು ಬೇರೊಬ್ಬ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ ಪರ್ಯಾಯವಾಗಿ ಅದನ್ನು ಮರಣಶಾಸನ ದಾನವಾಗಿ ಕೊಟ್ಟಿರುವಲ್ಲಿ , ಆಗ ಉಯಿಲಿನಲ್ಲಿ ತದ್ವಿರುದ್ಧವಾದ ಉದ್ದೇಶವು ಕಂಡುಬರದಿದ್ದರೆ ಮೊದಲು ಹೆಸರಿಸಿದ ಲೆಗಟೆಯು ಮರಣಶಾಸನ ಸ್ವತ್ತಿಗೆ ಅದು ಪರಿಣಾಮಕಾರಿಯಾಗುವ ಕಾಲದಲ್ಲಿ ಅವನು ಬದುಕಿದ್ದರೆ ಹಕ್ಕುಳ್ಳವನಾಗತಕ್ಕುದು. ಆದರೆ ಆಗ ಅವನು ಮರಣ ಹೊಂದಿದ್ದರೆ ಪರ್ಯಾಯವಾಗಿ ಎರಡನೇ ಶಾಖೆಯಲ್ಲಿ ಹೆಸರಿಸಿದ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗವು ಮರಣಶಾಸನ ಸ್ವತ್ತನ್ನು ತೆಗೆದುಕೊಳ್ಳತಕ್ಕುದು.

ದೃಷ್ಟಾಂತಗಳು

(i) 'ಎ' ನಿಗೆ ಅಥವಾ 'ಬಿ' ನಿಗೆ ಮರಣಶಾಸನದಾನವನ್ನು ಮಾಡಲಾಗಿದೆ. 'ಎ' ನು ಮರಣಶಾಸನ ಕರ್ತನ ಉತ್ತರ ಜೀವಿಯಾಗಿದ್ದಾನೆ. ಆದ್ದರಿಂದ 'ಬಿ' ನು ಏನನ್ನೂ ತೆಗೆದುಕೊಳ್ಳುವುದಿಲ್ಲ.

(ii) 'ಎ' ನಿಗೆ ಅಥವಾ 'ಬಿ' ನಿಗೆ ಒಂದು ಮರಣಶಾಸನ ದಾನವನ್ನು ಮಾಡಲಾಗಿದೆ. 'ಎ' ನು ಉಯಿಲಿನ ದಿನಾಂಕದ ತರುವಾಯ ಮತ್ತು ಮರಣಶಾಸನ ಕರ್ತನಿಗಿಂತ ಮುಂಚೆ ಮರಣ ಹೊಂದುತ್ತಾನೆ. ಮರಣಶಾಸನ ಸ್ವತ್ತು 'ಬಿ' ನಿಗೆ ಹೋಗುತ್ತದೆ.

(iii) 'ಎ' ನಿಗೆ ಅಥವಾ 'ಬಿ' ನಿಗೆ ಒಂದು ಮರಣ ಶಾಸನ ದಾನವನ್ನು ಮಾಡಲಾಗಿದೆ. ಮರಣಶಾಸನದ ದಿನಾಂಕದಂದು 'ಎ' ನು ಮರಣ ಹೊಂದಿದ್ದಾನೆ. ಮರಣಶಾಸನ ಸ್ವತ್ತು 'ಬಿ' ನಿಗೆ ಹೋಗುತ್ತದೆ.

(iv) ಸ್ವತ್ತನ್ನು 'ಎ' ನಿಗೆ ಅಥವಾ ಅವನ ವಾರಸುದಾರರಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನು ಮರಣಶಾಸನ ಕರ್ತನ ಉತ್ತರ ಜೀವಿಯಾಗಿದ್ದಾನೆ. 'ಎ' ನು ಆ ಸ್ವತ್ತನ್ನು ನಿರುಪಾಧಿಕವಾಗಿ ತೆಗೆದುಕೊಳ್ಳುತ್ತಾನೆ.

(v) ಸ್ವತ್ತನ್ನು 'ಎ' ನಿಗೆ ಅಥವಾ ಅವನ ಅತಿ ಹತ್ತಿರದ ಬಂಧುಗಳಿಗೆ ಮರಣಶಾಸನದ ಮೂಲಕ ಕೊಡಲಾಗಿದೆ.'ಎ' ನು ಮರಣಶಾಸನ ಕರ್ತನು ಬದುಕಿರುವಾಗಲೇ ಮರಣ ಹೊಂದುತ್ತಾನೆ. ಮರಣಶಾಸನ ಕರ್ತನು ಮರಣ ಹೊಂದಿದ ಮೇಲೆ 'ಎ' ನ ಅತಿ ಹತ್ತಿರದ ಬಂಧುಗಳಿಗೆ ಮಾಡಿದ ಮರಣಶಾಸನ ದಾನವು ಪರಿಣಾಮಕಾರಿ ಆಗುತ್ತದೆ.

(vi) ಸ್ವತ್ತನ್ನು 'ಎ' ನಿಗೆ ಅವನ ಜೀವಿತ ಕಾಲಕ್ಕಾಗಿ ಮತ್ತು ಅವನ ಮರಣಾನಂತರ 'ಬಿ' ನಿಗೆ ಅಥವಾ ಅವನ ವಾರಸುದಾರರಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ಮತ್ತು 'ಬಿ' ಇವರು ಮರಣಶಾಸನ ಕರ್ತನ ಉತ್ತರ ಜೀವಿಗಳಾಗಿದ್ದಾರೆ. 'ಬಿ' ನು 'ಎ' ಬದುಕಿರುವಾಗಲೇ ಮರಣ ಹೊಂದುತ್ತಾನೆ. 'ಎ' ನು ಮರಣ ಹೊಂದಿದ ಮೇಲೆ 'ಬಿ' ನ ವಾರಸುದಾರರಿಗೆ ಮಾಡಿದ ಮರಣಶಾಸನ ದಾನವು ಪರಿಣಾಮಕಾರಿಯಾಗುತ್ತದೆ.

(vii) ಸ್ವತ್ತನ್ನು 'ಎ' ನಿಗೆ ಅವನ ಜೀವಿತ ಕಾಲಕ್ಕಾಗಿ ಮತ್ತು ಅವನ ಮರಣಾನಂತರ 'ಬಿ' ನಿಗೆ ಅಥವಾ ಅವನ ವಾರಸುದಾರರಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಬಿ' ನು ಮರಣಶಾಸನ ಕರ್ತನ ಜೀವಿತ ಕಾಲದಲ್ಲಿ ಮರಣ ಹೊಂದುತ್ತಾನೆ. 'ಎ' ನು ಮರಣಶಾಸನ ಕರ್ತನು ಉತ್ತರ ಜೀವಿಯಾಗುತ್ತಾನೆ. 'ಎ' ನು ಮರಣ ಹೊಂದಿದ ಮೇಲೆ 'ಬಿ' ನ ವಾರಸುದಾರರಿಗೆ ಮಾಡಿದ ಮರಣಶಾಸನ ದಾನವು ಪರಿಣಾಮಕಾರಿಯಾಗುತ್ತದೆ.

97. ಒಬ್ಬ ವ್ಯಕ್ತಿಗೆ ಕೊಟ್ಟ ಮರಣಶಾಸನ ದಾನಕ್ಕೆ ಸೇರಿಸಲಾದ ಒಂದು ವರ್ಗವನ್ನು ವಿವರಿಸುವ ಪದಗಳ ಪರಿಣಾಮ:- ಸ್ವತ್ತನ್ನು ಒಬ್ಬ ವ್ಯಕ್ತಿಗೆ ಮರಣಶಾಸನದ ಮೂಲಕ ಕೊಟ್ಟಿರುವಲ್ಲಿ ಮತ್ತು ವ್ಯಕ್ತಿಗಳ ಒಂದು ವರ್ಗವನ್ನು ವಿವರಿಸುವಂಥ ಪದಗಳನ್ನು ಅದಕ್ಕೆ ಸೇರಿಸಿದ್ದು, ಆದರೆ ಆ ಪದಗಳು ಒಂದು ವಿಭಿನ್ನ ಮತ್ತು ಸ್ವತಂತ್ರವಾದ ದಾನದ ನೇರ ಉದ್ದೇಶಗಳೆಂದು ಸೂಚಿಸದಿದ್ದರೆ, ಉಯಿಲಿನಲ್ಲಿ ವಿರುದ್ಧವಾದ ಉದ್ದೇಶವು ಕಂಡುಬಂದ ಹೊರತು, ಅದರಲ್ಲಿ ಮರಣಶಾಸನ ಕರ್ತನ ಸ್ವತ್ತಿನಲ್ಲಿನ ಪೂರ್ಣ ಹಿತಾಸಕ್ತಿಗೆ ಅಂಥ ವ್ಯಕ್ತಿಯು ಹಕ್ಕುಳ್ಳವನಾಗುತ್ತಾನೆ.

ದೃಷ್ಟಾಂತಗಳು

(i) ಒಂದು ಮರಣಶಾಸನ ದಾನವನ್ನು-

'ಎ' ಮತ್ತು ಅವನ ಮಕ್ಕಳಿಗೆ,

'ಎ' ಮತ್ತು ಈಗಿರುವ ಅವನ ಹೆಂಡತಿಯ ಮೂಲಕ ಆದ ಅವನ ಮಕ್ಕಳಿಗೆ,

'ಎ' ಮತ್ತು ಅವನ ವಾರಸುದಾರರಿಗೆ,

'ಎ' ಮತ್ತು ಅವನ ಆತ್ಮಜರಿಗೆ,

'ಎ' ಮತ್ತು ಅವನ ಪುರುಷ ಆತ್ಮಜರಿಗೆ,

'ಎ' ಮತ್ತು ಅವನ ಮಹಿಳಾ ಆತ್ಮಜರಿಗೆ,

'ಎ' ಮತ್ತು ಅವನ ಸಂತತಿಗೆ,

'ಎ' ಮತ್ತು ಅವನ ಕುಟುಂಬಕ್ಕೆ,

'ಎ' ಮತ್ತು ಅವನ ವಂಶಜರಿಗೆ,

'ಎ' ಮತ್ತು ಅವನ ಪ್ರತಿನಿಧಿಗಳಿಗೆ,

'ಎ' ಮತ್ತು ಅವನ ವೈಯಕ್ತಿಕ ಪ್ರತಿನಿಧಿಗಳಿಗೆ,

'ಎ' ಮತ್ತು ಅವನ ನಿರ್ವಾಹಕರು ಮತ್ತು ಆಡಳಿತಗಾರರಿಗೆ,

-ಮಾಡಲಾಗಿದೆ.

ಈ ಪ್ರತಿಯೊಂದು ಸಂದರ್ಭದಲ್ಲಿ 'ಎ' ಮರಣಶಾಸನ ಕರ್ತನು ಸ್ವತ್ತಿನಲ್ಲಿ ಹೊಂದಿದ್ದ ಸಂಪೂರ್ಣ ಹಿತಾಸಕ್ತಿಯನ್ನು ಪಡೆಯುತ್ತಾನೆ.

(ii) 'ಎ' ಮತ್ತು ಅವನ ಸಹೋದರರಿಗೆ ಒಂದು ಮರಣಶಾಸನ ದಾನವನ್ನು ಮಾಡಲಾಗಿದೆ. 'ಎ' ಮತ್ತು ಅವನ ಸಹೋದರರು ಜಂಟಿಯಾಗಿ ಆ ಮರಣಶಾಸನ ಸ್ವತ್ತಿಗೆ ಹಕ್ಕುಳ್ಳವರಾಗಿರುತ್ತಾರೆ.

(iii) ಒಂದು ಮರಣಶಾಸನ ದಾನವನ್ನು 'ಎ' ನಿಗೆ ಜೀವಿತ ಕಾಲಕ್ಕಾಗಿ ಮತ್ತು ಅವನ ಮರಣಾನಂತರ ಅವನ ಸಂತತಿಗೆ ಮಾಡಲಾಗಿದೆ. 'ಎ' ನು ಮರಣ ಹೊಂದಿದಾಗ ಸ್ವತ್ತು ಆಗ 'ಎ' ನ ಸಂತತಿಯ ವಿವರಣೆಯನ್ನು ಹೊಂದಿರುವ ಎಲ್ಲ ವ್ಯಕ್ತಿಗಳಿಗೂ ಸಮಪಾಲುಗಳಲ್ಲಿ ಸೇರುತ್ತದೆ.

98. ಸಾಮಾನ್ಯ ವಿವರಣೆಯ ಮೇರೆಗೆ ಮಾತ್ರವೇ ವ್ಯಕ್ತಿಗಳ ವರ್ಗಕ್ಕೆ ಮರಣಶಾಸನದಾನ:- ಸಾಮಾನ್ಯ ವಿವರಣೆಯ ಮೇರೆಗೆ ಮಾತ್ರವೇ ವ್ಯಕ್ತಿಗಳ ಒಂದು ವರ್ಗಕ್ಕೆ ಮರಣಶಾಸನದಾನವನ್ನು ಮಾಡಿರುವಲ್ಲಿ, ವಿವರಣೆಯ ಪದಗಳು ಅವುಗಳ ಸಾಮಾನ್ಯ ಅರ್ಥದಲ್ಲಿ ಯಾರಿಗೆ ಅನ್ವಯವಾಗುವುದಿಲ್ಲವೋ ಆ ಯಾವೊಬ್ಬನೂ, ಮರಣಶಾಸನ ಸ್ವತ್ತನ್ನು ಪಡೆಯತಕ್ಕುದಲ್ಲ.

99. ಪದಗಳ ಅರ್ಥಾನ್ವಯ:- ಒಂದು ಉಯಿಲಿನಲ್ಲಿ , -

(ಎ) "ಮಕ್ಕಳು" ಎಂಬ ಪದವು ಯಾವ ವ್ಯಕ್ತಿಯ "ಮಕ್ಕಳನ್ನು" ಕುರಿತು ಹೇಳಲಾಗಿದೆಯೋ ಆ ವ್ಯಕ್ತಿಯ ಮೊದಲನೇ ಶ್ರೇಣಿಯಲ್ಲಿನ ಪಿತೃವಂಶಜರಿಗೆ ಮಾತ್ರ ಅನ್ವಯವಾಗುತ್ತದೆ.

(ಬಿ) "ಮೊಮ್ಮಕ್ಕಳು" ಎಂಬ ಪದವು ಯಾವ "ಮೊಮ್ಮಕ್ಕಳನ್ನು" ಕುರಿತು ಹೇಳಲಾಗಿದೆಯೋ ಆ ವ್ಯಕ್ತಿಯ ಎರಡನೇ ಶ್ರೇಣಿಯ ಪಿತೃವಂಶಜರಿಗೆ ಮಾತ್ರ ಅನ್ವಯವಾಗುತ್ತದೆ.

(ಸಿ) "ಸೋದರ ಮಗ" "ಸೋದರ ಮಗಳು" ಎಂಬ ಪದಗಳು ಸೋದರರು ಅಥವಾ ಸೋದರಿಯರ ಮಕ್ಕಳಿಗೆ ಮಾತ್ರ ಅನ್ವಯವಾಗುತ್ತದೆ.

(ಡಿ) "ದಾಯಾದಿಗಳು" ಅಥವಾ "ಪ್ರಥಮ ದಾಯಾದಿಗಳು" ಅಥವಾ "ಪ್ರಥಮ ಶ್ರೇಣಿಯ ದಾಯಾದಿಗಳು" ಎಂಬ ಪದಗಳು ಯಾವ ವ್ಯಕ್ತಿಯ "ದಾಯಾದಿಗಳು" ಅಥವಾ "ಪ್ರಥಮ ದಾಯಾದಿಗಳು" ಅಥವಾ "ಪ್ರಥಮ ಶ್ರೇಣಿಯ ದಾಯಾದಿ" ಯನ್ನು ಕುರಿತು ಹೇಳಲಾಗಿದೆಯೋ ಆ ವ್ಯಕ್ತಿಯ ತಂದೆಯ ಅಥವಾ ತಾಯಿಯ ಅಥವಾ ಸೋದರರ ಅಥವಾ ಸೋದರಿಯರ ಮಕ್ಕಳಿಗೆ ಮಾತ್ರ ಅನ್ವಯವಾಗುತ್ತದೆ.

(ಇ) "ಎರಡನೇ ಹಂತದ ಪ್ರಥಮ ದಾಯಾದಿಗಳು" ಎಂಬ ಪದಗಳು ಪ್ರಥಮ ಶ್ರೇಣಿಯ ದಾಯಾದಿಗಳ ಮಕ್ಕಳು ಅಥವಾ ಯಾವ ವ್ಯಕ್ತಿಯ ಎರಡನೇ ಹಂತದ ಪ್ರಥಮ ದಾಯಾದಿಗಳನ್ನು ಕುರಿತು ಹೇಳಲಾಗಿದೆಯೋ ಆ ವ್ಯಕ್ತಿಯ ತಂದೆ/ತಾಯಿಯ ಪ್ರಥಮ ಶ್ರೇಣಿಯ ದಾಯಾದಿಗಳಿಗೆ ಮಾತ್ರ ಅನ್ವಯವಾಗುತ್ತದೆ.

(ಎಫ್) "ಎರಡನೇ ಶ್ರೇಣಿಯ ದಾಯಾದಿಗಳು" ಎಂಬ ಪದಗಳು ಯಾವ ಎರಡನೇ ಶ್ರೇಣಿಯ ದಾಯಾದಿಗಳನ್ನು ಕುರಿತು ಹೇಳಲಾಗುತ್ತಿದೆಯೋ ಆ ವ್ಯಕ್ತಿಯ ಅಜ್ಜ ಅಥವಾ ಅಜ್ಜಿಯ ಸಹೋದರರು ಅಥವಾ ಸಹೋದರಿಯರ ಮೊಮ್ಮಕ್ಕಳಿಗೆ ಮಾತ್ರ ಅನ್ವಯವಾಗುತ್ತದೆ.

(ಜಿ) "ಸಂತತಿ" ಮತ್ತು "ವಂಶಜರು" ಎಂಬ ಪದಗಳು ಯಾವ ವ್ಯಕ್ತಿಯ ಸಂತತಿ ಅಥವಾ ವಂಶಜರನ್ನು ಕುರಿತು ಹೇಳಲಾಗಿದೆಯೋ ಆ ವ್ಯಕ್ತಿಯು ಯಾರೇ ಆದರೂ ಎಲ್ಲ ಪಿತೃವಂಶಜರಿಗೆ ಅನ್ವಯವಾಗುತ್ತದೆ.

(ಎಚ್) ಪಾರ್ಶ್ವಿಕ ಬಂಧುತ್ವವನ್ನು ವ್ಯಕ್ತಪಡಿಸುವ, ಎಲ್ಲ ಪದಗಳು ಪೂರ್ಣ ಮತ್ತು ಅರ್ಧ ರಕ್ತ ಬಂಧುಗಳಿಗೆ ಒಂದೇ ರೀತಿಯಾಗಿ ಅನ್ವಯವಾಗುತ್ತದೆ.

(ಐ) ಬಂಧುತ್ವವನ್ನು ವ್ಯಕ್ತಪಡಿಸುವ ಎಲ್ಲ ಪದಗಳು ತರುವಾಯದಲ್ಲಿ ಜೀವಂತವಾಗಿ ಹುಟ್ಟುವ ಬಸಿರಿನಲ್ಲಿನ ಮಗುವಿಗೆ ಅನ್ವಯವಾಗುತ್ತವೆ.

100. ಬಂಧುತ್ವವನ್ನು ವ್ಯಕ್ತಪಡಿಸುವ ಪದಗಳು ಔರಸ ಬಂಧುಗಳನ್ನು ಮಾತ್ರ ಅಥವಾ ಅಂಥ ಬಂಧುಗಳು ಇಲ್ಲದಿದ್ದರೆ ಔರಸರೆಂದು ಭಾವಿಸಲಾದಂಥ ಬಂಧುಗಳನ್ನು ಸೂಚಿಸುತ್ತದೆ:- ಉಯಿಲಿನಲ್ಲಿ ತದ್ವಿರುದ್ಧವಾಗಿ ಯಾವುದೇ ಸೂಚನೆಯೂ ಇಲ್ಲದಿರುವಲ್ಲಿ "ಮಗು" ಎಂಬ ಪದವು "ಮಗ" ಎಂಬ ಪದವು "ಮಗಳು" ಎಂಬ ಪದವು ಅಥವಾ ಸಿಂಧುತ್ವವನ್ನು ವ್ಯಕ್ತಪಡಿಸುವಂಥ ಯಾವುದೇ ಪದವು ಔರಸ ಬಂಧುವನ್ನು ಮಾತ್ರ ಸೂಚಿಸುವುದಾಗಿ ಅಥವಾ ಅಂಥ ಯಾವನೇ ಔರಸ ಬಂಧುವು ಇಲ್ಲದೇ ಇರುವಲ್ಲಿ ಉಯಿಲಿನ ದಿನಾಂಕದಂದು ಅಂತಹ ಬಂಧುವೆಂಬ ಭಾವನೆಯನ್ನು ಆರ್ಜಿಸಿರುವ ವ್ಯಕ್ತಿಯನ್ನು ಸೂಚಿಸುವುದಾಗಿ ತಿಳಿದುಕೊಳ್ಳತಕ್ಕುದು.

ದೃಷ್ಟಾಂತಗಳು

(i) 'ಎ' ನು 'ಬಿ','ಸಿ' ಮತ್ತು 'ಡಿ' ಎಂಬ ಮೂರು ಮಕ್ಕಳನ್ನು ಹೊಂದಿದ್ದು , ಅವರಲ್ಲಿ 'ಬಿ' ಮತ್ತು 'ಸಿ' ಔರಸರಾಗಿದ್ದು ಮತ್ತು 'ಡಿ' ನು ಅನೌರಸನಾಗಿದ್ದು ತನ್ನ ಸ್ವತ್ತನ್ನು "ನನ್ನ ಮಕ್ಕಳಲ್ಲಿ" ಸಮನಾಗಿ ಹಂಚಬೇಕೆಂದು ಬಿಡುತ್ತಾನೆ. ಆ ಸ್ವತ್ತು 'ಡಿ' ನನ್ನು ಹೊರತುಪಡಿಸಿ 'ಬಿ' ಮತ್ತು 'ಸಿ' ಗಳಿಗೆ ಸಮಪಾಲುಗಳಲ್ಲಿ ಸೇರುತ್ತದೆ.

(ii) 'ಎ' ನು ಅನೌರಸನಾಗಿ ಹುಟ್ಟಿದ ಅವನ ಸೋದರ ಮಗಳಾಗಿರುವುದಾಗಿ ಭಾವನೆಯನ್ನು ಆರ್ಜಿಸಿರುವ ಒಬ್ಬ ಸೋದರ ಮಗಳನ್ನು ಹೊಂದಿದ್ದು ಮತ್ತು ಯಾವಳೇ ಔರಸ ಸೋದರಮಗಳನ್ನು ಹೊಂದಿರದೇ ತನ್ನ ಸೋದರ ಮಗಳಿಗೆ ಹಣದ

ಮೊತ್ತವನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಅನೌರಸಳಾದ ಸೋದರ ಮಗಳು ಆ ಮರಣಶಾಸನ ಸ್ವತ್ತಿಗೆ ಹಕ್ಕುಳ್ಳವಳಾಗುತ್ತಾಳೆ.

(iii) 'ಎ' ನು ತನ್ನ ಉಯಿಲಿನಲ್ಲಿ ತನ್ನ ಮಕ್ಕಳನ್ನು ನಮೂದು ಮಾಡಿ ಅನೌರಸನಾದ, 'ಬಿ' ನನ್ನು ಅವರ ಪೈಕಿ ಒಬ್ಬನೆಂದು ಹೆಸರಿಸಿ ಸದರಿ ತನ್ನ ಮಕ್ಕಳಿಗೆ ಮರಣಶಾಸನ ಸ್ವತ್ತನ್ನು ಬಿಡುತ್ತಾನೆ. 'ಬಿ' ನು ಔರಸ ಮಕ್ಕಳೊಡನೆ ಮರಣಶಾಸನ ಸ್ವತ್ತಿನಲ್ಲಿ ಒಂದು ಪಾಲನ್ನು ತೆಗೆದುಕೊಳ್ಳುತ್ತಾನೆ.

(iv) 'ಎ' ನು "ಬಿ' ನ ಮಕ್ಕಳಿಗೆ" ಮರಣಶಾಸನ ಸ್ವತ್ತನ್ನು ಬಿಟ್ಟು ಹೋಗುತ್ತಾನೆ. 'ಬಿ' ನು ಮರಣ ಹೊಂದಿದ್ದಾನೆ. ಮತ್ತು ಅವನು ಅನೌರಸ ಮಕ್ಕಳನ್ನು ಹೊರತು ಬೇರೆ ಯಾರನ್ನೂ ಬಿಟ್ಟುಹೋಗಿಲ್ಲ. ಉಯಿಲಿನ ದಿನಾಂಕದಂದು 'ಬಿ' ನ ಮಕ್ಕಳಾಗಿರುವುದಾಗಿ ಭಾವನೆಯನ್ನು ಆರ್ಜಿಸಿರುವ ಎಲ್ಲರೂ ಆ ದಾನಕ್ಕೆ ಪಾತ್ರರಾಗಿರುತ್ತಾರೆ.

(v) 'ಎ' ನು "ಬಿ' ನ ಮಕ್ಕಳಿಗೆ" ಮರಣಶಾಸನ ಸ್ವತ್ತನ್ನು ಮರಣಶಾಸನದ ಮೂಲಕ ಕೊಡುತ್ತಾನೆ. 'ಬಿ' ನಿಗೆ ಯಾವುದೇ ಔರಸ ಮಗು ಯಾವತ್ತೂ ಇರಲಿಲ್ಲ. 'ಸಿ' ಮತ್ತು 'ಡಿ' ರು ಉಯಿಲಿನ ದಿನಾಂಕದಂದು 'ಬಿ' ನ ಮಕ್ಕಳಾಗಿರುವುದಾಗಿ ಭಾವನೆಯನ್ನು ಆರ್ಜಿಸಿದ್ದರು. ಉಯಿಲಿನ ದಿನಾಂಕದ ತರುವಾಯ ಮತ್ತು ಮರಣಶಾಸನ ಕರ್ತನ ಮರಣಕ್ಕೆ ಮುಂಚೆ 'ಇ' ಮತ್ತು 'ಎಫ್' ರು ಹುಟ್ಟಿದ್ದರು ಮತ್ತು 'ಬಿ' ನ ಮಕ್ಕಳಾಗಿರುವುದಾಗಿ ಭಾವನೆಯನ್ನು ಆರ್ಜಿಸಿದ್ದರು. 'ಸಿ' ಮತ್ತು 'ಡಿ' ರು ಮಾತ್ರ ಮರಣಶಾಸನ ದಾನಕ್ಕೆ ಪಾತ್ರರಾಗುತ್ತಾರೆ.

(vi) 'ಎ' ನು ತನ್ನ ಹೆಂಡತಿಯಲ್ಲದ ಒಬ್ಬ ಹೆಂಗಸಿನ ಮೂಲಕ ಪಡೆದ ಅವನ ಮಗುವಿನ ಹೆಸರಿನಲ್ಲಿ ಒಂದು ಮರಣಶಾಸನ ದಾನವನ್ನು ಮಾಡುತ್ತಾನೆ. ಉಯಿಲಿನ ದಿನಾಂಕದಂದು ಹೆಸರಿಸಿದ ಆ ಹೆಂಗಸಿನ ಮೂಲಕ ಹುಟ್ಟಿದ 'ಎ' ನ ಮಗುವಾಗಿರುವುದಾಗಿ ಭಾವನೆಯನ್ನು 'ಬಿ' ನು ಆರ್ಜಿಸಿದ್ದ. 'ಬಿ' ನು ಮರಣಶಾಸನ ಸ್ವತ್ತನ್ನು ಪಡೆಯುತ್ತಾನೆ.

(vii) 'ಎ' ನು ಎಂದೂ ಅವನ ಹೆಂಡತಿಯಾಗಿರದ ಒಬ್ಬ ಹೆಂಗಸಿಗೆ ಹುಟ್ಟಲಿರುವ ಅವನ ಮಗುವಿನ ಹೆಸರಿನಲ್ಲಿ ಒಂದು ಮರಣಶಾಸನ ದಾನವನ್ನು ಮಾಡುತ್ತಾನೆ, ಆ ಮರಣಶಾಸನ ದಾನವು ಶೂನ್ಯವಾಗುತ್ತದೆ.

(viii) 'ಎ' ನು, ಅವನಿಗೆ ಮದುವೆಯಾಗಿರದ, ಒಬ್ಬ ಗರ್ಭಿಣಿ ಮಹಿಳೆಯ ಮಗುವಿನ ಹೆಸರಿನಲ್ಲಿ ಮರಣಶಾಸನ ದಾನವನ್ನು ಮಾಡುತ್ತಾನೆ. ಆ ಮರಣಶಾಸನ ದಾನವು ಶೂನ್ಯವಾಗುತ್ತದೆ.

101. ಉಯಿಲಿನಲ್ಲಿ ಒಬ್ಬನೇ ವ್ಯಕ್ತಿಗೆ ಎರಡು ಮರಣಶಾಸನ ದಾನಗಳನ್ನು ಮಾಡಿರುವುದಾಗಿ ತಾತ್ಪರ್ಯವಾಗುವಲ್ಲಿ ಅರ್ಥಾನ್ವಯದ ನಿಯಮಗಳು:- ಉಯಿಲಿನಲ್ಲಿ ಒಬ್ಬನೇ ವ್ಯಕ್ತಿಗೆ ಎರಡು ಮರಣಶಾಸನ ದಾನಗಳನ್ನು ಮಾಡಿರುವುದಾಗಿ ತಾತ್ಪರ್ಯವಾದರೆ ಮತ್ತು ಮರಣಶಾಸನ ಕರ್ತನು ಮೊದಲನೆಯದಕ್ಕೆ ಬದಲಾಗಿ ಅಥವಾ ಅದರ ಜೊತೆಗೆ ಎರಡನೆಯ ಮರಣಶಾಸನ ದಾನವನ್ನು ಮಾಡಲು ಉದ್ದೇಶಿಸಿದ್ದನೋ ಹೇಗೆ ಎಂಬ ಪ್ರಶ್ನೆಯು ಉದ್ಭವಿಸಿದರೆ ಉಯಿಲಿನಲ್ಲಿ ಅವನ ಉದ್ದೇಶ ಏನಿತ್ತು ಎಂಬುದನ್ನು ತೋರಿಸಲು ಉಯಿಲಿನಲ್ಲಿ ಏನೂ ಇಲ್ಲದಿದ್ದರೆ ಈ ಕೆಳಕಂಡ ನಿಯಮಗಳು ಉಯಿಲಿನ ಅರ್ಥಾನ್ವಯವನ್ನು ನಿರ್ಧರಿಸುವಲ್ಲಿ ಪರಿಣಾಮಕಾರಿಯಾಗಿರತಕ್ಕುದು.

(ಎ) ಒಂದೇ ಉಯಿಲಿನಲ್ಲಿ ಅಥವಾ ಉಯಿಲಿನಲ್ಲಿ ಮತ್ತು ಪುನಃ ಉಯಿಲಿನ ಅನುಬಂಧದಲ್ಲಿ ಒಂದೇ ನಿರ್ದಿಷ್ಟ ವಸ್ತುವನ್ನು ಒಂದೇ ಲೆಗಟಿಗೆ ಎರಡು ಸಲ ಮರಣಶಾಸನದ ಮೂಲಕ ಕೊಟ್ಟಿದ್ದರೆ, ಆ ಲೆಗಟಿಯು ಆ ನಿರ್ದಿಷ್ಟ ವಸ್ತುವನ್ನು ಮಾತ್ರ ಪಡೆಯಲು ಹಕ್ಕುಳ್ಳವನಾಗಿದ್ದಾನೆ.

(ಬಿ) ಒಂದೇ ಉಯಿಲು ಅಥವಾ ಒಂದೇ ಉಯಿಲಿನ ಅನುಬಂಧವು ಎರಡು ಸ್ಥಳಗಳಲ್ಲಿ ಒಬ್ಬನೇ ವ್ಯಕ್ತಿಗೆ ಯಾವುದೇ ವಸ್ತುವಿನ ಒಂದೇ ಪ್ರಮಾಣವನ್ನು ಅಥವಾ ಮೊತ್ತವನ್ನು ಕೊಡುವುದಾಗಿ ತಾತ್ಪರ್ಯವಾಗುವಲ್ಲಿ, ಅವನು ಅಂಥ ಒಂದು ಮರಣಶಾಸನ ಸ್ವತ್ತಿಗೆ ಮಾತ್ರ ಹಕ್ಕುಳ್ಳವನಾಗಿರತಕ್ಕುದು.

(ಸಿ) ಒಬ್ಬನೇ ವ್ಯಕ್ತಿಗೆ ಒಂದೇ ಉಯಿಲಿನಲ್ಲಿ ಅಥವಾ ಒಂದೇ ಉಯಿಲಿನ ಅನುಬಂಧದಲ್ಲಿ ಅಸಮಾನ ಮೊತ್ತದ ಎರಡು ಮರಣಶಾಸನ ಸ್ವತ್ತುಗಳನ್ನು ಕೊಟ್ಟಿರುವಲ್ಲಿ, ಆ ಲೆಗಟಿಯು ಅವೆರಡಕ್ಕೂ ಹಕ್ಕುಳ್ಳವನಾಗುತ್ತಾನೆ;

(ಡಿ) ಸಮಾನ ಅಥವಾ ಅಸಮಾನ ಮೊತ್ತದ ಎರಡು ಮರಣಶಾಸನ ಸ್ವತ್ತುಗಳನ್ನು ಒಬ್ಬನೇ ಲೆಗಟಿಗೆ, ಒಂದನ್ನು ಉಯಿಲಿನ ಮೂಲಕ ಮತ್ತು ಇನ್ನೊಂದನ್ನು ಉಯಿಲಿನ ಅನುಬಂಧದ ಮೂಲಕ ಅಥವಾ ಪ್ರತಿಯೊಂದನ್ನು ಬೇರೆ ಬೇರೆ ಮರಣಶಾಸನ ಅನುಬಂಧದ ಮೂಲಕ ಕೊಟ್ಟಿರುವಲ್ಲಿ , ಆ ಲೆಗಟಿಯು ಎರಡೂ ಮರಣಶಾಸನ ಸ್ವತ್ತುಗಳಿಗೆ ಹಕ್ಕುಳ್ಳವನಾಗುತ್ತಾನೆ.

ವಿವರಣೆ:- ಈ ಪ್ರಕರಣದ (ಎ) ದಿಂದ (ಡಿ) ವರೆಗಿನ ಖಂಡಗಳ "ಉಯಿಲು" ಎಂಬ ಪದವು ಉಯಿಲಿನ ಅನುಬಂಧವನ್ನು ಒಳಗೊಳ್ಳುವುದಿಲ್ಲ.

ದೃಷ್ಟಾಂತಗಳು

(i) 'ಎ' ನು ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಹತ್ತು ಷೇರುಗಳನ್ನಷ್ಟೆ ಹೊಂದಿದ್ದು ಅವನು ತನ್ನ ಉಯಿಲನ್ನು ಮಾಡಿದ್ದಾನೆ. ಅದರ ಪ್ರಾರಂಭದಲ್ಲಿ "ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿನ ನನ್ನ ಹತ್ತು ಷೇರುಗಳನ್ನು ನಾನು 'ಬಿ' ನಿಗೆ ಮರಣಶಾಸನದ ಮೂಲಕ ಕೊಟ್ಟಿದ್ದೇನೆ." ಎಂಬ ಪದಗಳು ಇವೆ. ಇತರ ಮರಣಶಾಸನ ದಾನಗಳ ತರುವಾಯ "ಉಯಿಲು ಮತ್ತು ನಾನು ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ನ ನನ್ನ ಹತ್ತು ಷೇರುಗಳನ್ನು

'ಬಿ' ನಿಗೆ ಮರಣಶಾಸನದ ಮೂಲಕ ಕೊಟ್ಟಿದ್ದೇನೆ" ಎಂಬ ಪದಗಳೊಂದಿಗೆ ಮುಕ್ತಾಯವಾಗುತ್ತದೆ. 'ಬಿ' ನು ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿನ 'ಎ' ನ ಹತ್ತು ಷೇರುಗಳನ್ನು ಪಡೆಯಲು ಮಾತ್ರ ಹಕ್ಕುಳ್ಳವನಾಗಿರುತ್ತಾನೆ.

(ii) 'ಎ' ನು ಅವನಿಗೆ 'ಬಿ' ನು ಕೊಟ್ಟಿದ್ದಂಥ ಒಂದು ವಜ್ರದುಂಗುರವನ್ನು ಹೊಂದಿದ್ದು ಅದನ್ನು 'ಸಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನು ಆ ತರುವಾಯ ತನ್ನ ಉಯಿಲಿಗೆ ಒಂದು ಉಯಿಲಿನ ಅನುಬಂಧವನ್ನು ಸೇರಿಸುತ್ತಾನೆ. ಮತ್ತು ಆ ಮೂಲಕ ಇತರ ಮರಣಶಾಸನ ಸ್ವತ್ತುಗಳನ್ನು ಕೊಟ್ಟ ತರುವಾಯ 'ಬಿ' ನು ಅವನಿಗೆ ಕೊಟ್ಟಿದ್ದಂಥ ವಜ್ರದುಂಗುರವನ್ನು 'ಸಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. 'ಬಿ' ನು 'ಎ' ನಿಗೆ ಕೊಟ್ಟಿದ್ದಂಥ ಆ ವಜ್ರದುಂಗುರವನ್ನು ಹೊರತು ಬೇರೆ ಏನನ್ನೂ 'ಸಿ' ನು ಕ್ಲೇಮು ಮಾಡಲಾಗದು.

(iii) 'ಎ' ನು ತನ್ನ ಉಯಿಲು ಮೂಲಕ 'ಬಿ' ನಿಗೆ 5000 ರೂಪಾಯಿಗಳ ಮೊತ್ತವನ್ನು ಕೊಡುತ್ತಾನೆ ಮತ್ತು ಆ ತರುವಾಯ ಅದೇ ಉಯಿಲಿನಲ್ಲಿ ಆ ಮರಣಶಾಸನ ದಾನವನ್ನು ಅದೇ ಪದಗಳಲ್ಲಿ ಮತ್ತೆ ಹೇಳುತ್ತಾನೆ. 'ಬಿ' ನು 5000 ರೂಪಾಯಿಗಳ ಮಾತ್ರದ ಒಂದು ಮರಣಶಾಸನ ಸ್ವತ್ತಿಗೆ ಹಕ್ಕುಳ್ಳವನಾಗುತ್ತಾನೆ.

(iv) 'ಎ' ನು ತನ್ನ ಉಯಿಲು ಮೂಲಕ 'ಬಿ' ನಿಗೆ 5000 ರೂಪಾಯಿಗಳ ಮೊತ್ತವನ್ನು ಕೊಡುತ್ತಾನೆ ಮತ್ತು ಆ ತರುವಾಯ ಅದೇ ಮರಣ ಶಾಸನದಲ್ಲಿ 'ಬಿ' ನಿಗೆ 6000 ರೂಪಾಯಿಗಳ ಮೊತ್ತವನ್ನು ಮರಣಶಾಸನದ ಮೂಲಕ ಕೊಡುತ್ತಾನೆ, 'ಬಿ' ನು 11000 ರೂಪಾಯಿಗಳನ್ನು ಸ್ವೀಕರಿಸಲು ಹಕ್ಕುಳ್ಳವನಾಗುತ್ತಾನೆ.

(v) 'ಎ' ನು ಮರಣಶಾಸನದ ಮೂಲಕ 'ಬಿ' ನಿಗೆ 5000 ರೂಪಾಯಿಗಳನ್ನು ಕೊಡುತ್ತಾನೆ ಮತ್ತು ಉಯಿಲಿನ ಅನುಬಂಧದ ಮೂಲಕ 5000 ರೂಪಾಯಿಗಳನ್ನು ಅವನಿಗೆ ಕೊಡುತ್ತಾನೆ. 'ಬಿ' ನು 10,000 ರೂಪಾಯಿಗಳನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರುತ್ತಾನೆ.

(vi) 'ಎ' ನು ತನ್ನ ಉಯಿಲಿನ ಒಂದು ಉಯಿಲಿನ ಅನುಬಂಧದ ಮೂಲಕ 'ಬಿ' ನಿಗೆ 5000 ರೂಪಾಯಿಗಳನ್ನು ಕೊಡುತ್ತಾನೆ ಮತ್ತು ಇನ್ನೊಂದು ಉಯಿಲಿನ ಅನುಬಂಧದ ಮೂಲಕ 6000 ರೂಪಾಯಿಗಳನ್ನು ಅವನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. 'ಬಿ' ನು 11000 ರೂಪಾಯಿಗಳನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರುತ್ತಾನೆ.

(vii) 'ಎ' ನು ತನ್ನ ಉಯಿಲು ಮೂಲಕ 'ಬಿ' ಳಿಗೆ ಅವಳು ನನ್ನ ನರ್ಸ್ ಆಗಿದ್ದರಿಂದ 500 ರೂಪಾಯಿಗಳನ್ನು" ಎಂದು ಕೊಡುತ್ತಾನೆ ಮತ್ತು ಉಯಿಲಿನ ಇನ್ನೊಂದು ಭಾಗದಲ್ಲಿ 500 ರೂಪಾಯಿಗಳನ್ನು 'ಬಿ' ಳಿಗೆ "ಅವಳು ನನ್ನ ಮಕ್ಕಳೊಂದಿಗೆ ಇಂಗ್ಲೆಂಡಿಗೆ ಹೋಗಿದ್ದರಿಂದ" ಎಂದು ಕೊಡುತ್ತಾನೆ. 'ಬಿ' ಳು 1000 ರೂಪಾಯಿಗಳನ್ನು ಸ್ವೀಕರಿಸಲು ಹಕ್ಕುಳ್ಳವಳಾಗಿರುತ್ತಾಳೆ.

(viii) 'ಎ' ನು ತನ್ನ ಉಯಿಲು ಮೂಲಕ 'ಬಿ' ನಿಗೆ 5000 ರೂಪಾಯಿಗಳ ಮೊತ್ತವನ್ನು ಮತ್ತು ಉಯಿಲಿನ ಇನ್ನೊಂದು ಭಾಗದಲ್ಲಿ 400 ರೂಪಾಯಿಗಳ ವರ್ಷಾಶನವನ್ನು ಸಹ ಕೊಡುತ್ತಾನೆ. 'ಬಿ' ನು ಅವೆರಡೂ ಮರಣಶಾಸನ ಸ್ವತ್ತುಗಳಿಗೆ ಸಹ ಹಕ್ಕುಳ್ಳವನಾಗಿರುತ್ತಾನೆ.

(ix) 'ಎ' ನು ತನ್ನ ಉಯಿಲು ಮೂಲಕ 'ಬಿ'ನಿಗೆ 5000 ರೂಪಾಯಿಗಳ ಮೊತ್ತವನ್ನು ಕೊಡುತ್ತಾನೆ ಮತ್ತು ಅವನಿಗೆ 18 ವರ್ಷಗಳು ತುಂಬಿದ ಮೇಲೆ ಪಡೆಯುವಂತೆ 5000 ರೂಪಾಯಿಗಳ ಮೊತ್ತವನ್ನು ಸಹ ಮರಣಶಾಸನದ ಮೂಲಕ ಕೊಡುತ್ತಾನೆ. 'ಬಿ' ನು 5000 ರೂಪಾಯಿಗಳ ಒಂದು ಮೊತ್ತಕ್ಕೆ ನಿರುಪಾಧಿಕವಾಗಿ ಹಕ್ಕುಳ್ಳವನಾಗುತ್ತಾನೆ ಮತ್ತು ಇನ್ನೊಂದು 5000 ರೂಪಾಯಿಗಳ ಮೊತ್ತಕ್ಕೆ ಪ್ರಾಸಂಗಿಕ ಹಿತಾಸಕ್ತಿಯನ್ನು ಪಡೆಯುತ್ತಾನೆ.

102. ಶೇಷ ಲೆಗಟಿಯನ್ನು ನೇಮಿಸುವುದು:- ಮರಣಶಾಸನ ಕರ್ತನು ಹೆಸರಿಸಿದ ವ್ಯಕ್ತಿಯ ಮರಣಶಾಸನ ಕರ್ತನು ಸ್ವತ್ತಿನ ಹೆಚ್ಚಳ ಅಥವಾ ಶೇಷವನ್ನು ತೆಗೆದುಕೊಳ್ಳತಕ್ಕುದು ಎಂಬ ಮರಣಶಾಸನ ಕರ್ತನ ಉದ್ದೇಶವನ್ನು ಸೂಚಿಸುವ ಯಾವುವೇ ಪದಗಳ ಮೂಲಕ ಒಬ್ಬ ಶೇಷ ಲೆಗಟಿಯನ್ನು ನೇಮಕ ಮಾಡಬಹುದು.

ದೃಷ್ಟಾಂತಗಳು

(i) 'ಎ' ಳು ಹಲವಾರು ಮರಣಶಾಸನ ಸಹಿತ ಪತ್ರಗಳನ್ನು ಒಳಗೊಂಡ ತನ್ನ ಉಯಿಲನ್ನು ಮಾಡುತ್ತಾಳೆ. ಅವುಗಳಲ್ಲಿ ಒಂದರಲ್ಲಿ ಈ ಕೆಳಕಂಡ ಪದಗಳು ಒಳಗೊಂಡಿವೆ:- "ಉತ್ತರ ಕ್ರಿಯೆ ಇತ್ಯಾದಿ ವೆಚ್ಚಗಳನ್ನು ವಹಿಸಿದ ತರುವಾಯ, ಈಗ ಶಾಲೆಗೆ ಹೋಗುತ್ತಿರುವ 'ಬಿ' ನಿಗೆ ಅವನು ಇನ್ನು ಮುಂದೆ ನೇಮಕಗೊಳ್ಳಬಹುದಾದ ಯಾವುದೇ ವೃತ್ತಿಗೆ ಅವನನ್ನು ಸಜ್ಜುಗೊಳಿಸುವುದಕ್ಕೆ ಕೊಡಲು ಏನಾದರೂ ಉಳಿಯುತ್ತದೆ ಎಂದು ನನಗೆ ತೋಚುತ್ತದೆ."

-ಇಲ್ಲಿ 'ಬಿ' ಳು ಶೇಷ ಲೆಗಟಿ.

(ii) 'ಎ' ನು ಒಂದು ಉಯಿಲನ್ನು ಮಾಡುತ್ತಾನೆ, ಆ ಉಯಿಲಿನ ಕೊನೆಯಲ್ಲಿ ಹೀಗಿದೆ. " ನನ್ನ ಋಣಗಳನ್ನು ಭರಿಸಲು ತೀರಿಸಲು ನನ್ನ ಬ್ಯಾಂಕರನ ಬಳಿ ಸಾಕಷ್ಟು ಇರುವುದಾಗಿ ನಾನು ನಂಬಿದ್ದೇನೆ. ಈ ಕೆಲಸವನ್ನು 'ಬಿ' ಳು ಮಾಡಬೇಕೆಂದು ಮತ್ತು ಉಳಿದುದನ್ನು ಆಕೆ ತನ್ನ ಸ್ವಂತ ಉಪಯೋಗಕ್ಕೆ ಮತ್ತು ತೃಪ್ತಿಗಾಗಿ ಇಟ್ಟುಕೊಳ್ಳಬೇಕೆಂದು ನಾನು ಈ ಮೂಲಕ ಇಚ್ಛಿಸುತ್ತೇನೆ". ಇಲ್ಲಿ "ಬಿ" ಳು ಶೇಷ ಲೆಗಟಿಯಾಗುತ್ತಾಳೆ.

(iii) 'ಎ' ನು 'ಸಿ' ನಿಗೆ ತನ್ನ ಮರಣಶಾಸನದ ಮೂಲಕ ಕೊಟ್ಟಿರುವಂಥ ಸ್ಟಾಕುಗಳು ಮತ್ತು ನಿಧಿಗಳನ್ನು ಹೊರತುಪಡಿಸಿ ಮಿಕ್ಕ ಅವನ ಎಲ್ಲ ಸ್ವತ್ತನ್ನು 'ಬಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. 'ಬಿ' ನು ಶೇಷ ಲೆಗಟೀಯಾಗಿದ್ದಾನೆ.

103. ಶೇಷ ಲೆಗಟೀಯು ಹಕ್ಕುಳ್ಳವನಾಗುವಂಥ ಸ್ವತ್ತು:- ಮರಣಶಾಸನ ದಾನದ ಮೇರೆಗೆ ಲೆಗಟೀಯು ಮರಣಶಾಸನ ಕರ್ತನು ಮರಣದ ಕಾಲದಲ್ಲಿ ಅವನಿಗೆ ಸೇರಿದ ಎಲ್ಲ ಸ್ವತ್ತಿಗೆ ಹಕ್ಕುಳ್ಳವನಾಗುತ್ತಾನೆ. ಆದರೆ ಮರಣಶಾಸನ ಕರ್ತನು ಆ ಸ್ವತ್ತಿಗೆ ಸಂಬಂಧಿಸಿದಂತೆ ಜಾರಿಗೊಳಿಸಲು ಸಾಧ್ಯವಿರುವಂಥ ಯಾವುದೇ ಮರಣಶಾಸನಿಕ ವಿಲೇವಾರಿಯನ್ನು ಮಾಡಿರಬಾರದು.

ದೃಷ್ಟಾಂತ

'ಎ' ನು ತನ್ನ ಉಯಿಲು ಮೂಲಕ ಕೆಲವು ಮರಣಶಾಸನ ಸ್ವತ್ತುಗಳನ್ನು ಕೊಡುತ್ತಾನೆ, ಅವುಗಳಲ್ಲಿ ಒಂದು ಸ್ವತ್ತು 118ನೇ ಪ್ರಕರಣದ ಮೇರೆಗೆ ಶೂನ್ಯವಾಗಿರುತ್ತದೆ ಮತ್ತು ಇನ್ನೊಂದು ಲೆಗಟೀಯ ಮರಣದಿಂದಾಗಿ ರದ್ದಾಗುತ್ತದೆ. ಅವನು ತನ್ನ ಸ್ವತ್ತಿನ ಶೇಷವನ್ನು 'ಬಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. ತನ್ನ ಉಯಿಲಿನ ದಿನಾಂಕದ ತರುವಾಯ 'ಎ' ನು ಒಂದು ಜಮೀನ್ದಾರಿಯನ್ನು ಖರೀದಿಸುತ್ತಾನೆ. ಅದು ಅವನ ಮರಣ ಕಾಲದಲ್ಲಿ ಅವನಿಗೆ ಸೇರಿತ್ತು 'ಬಿ' ನು ಶೇಷದ ಭಾಗವಾಗಿ ಆ ಎರಡೂ ಮರಣಶಾಸನ ಸ್ವತ್ತುಗಳಿಗೆ ಮತ್ತು ಆ ಜಮೀನ್ದಾರಿಗೆ ಹಕ್ಕುಳ್ಳವನಾಗುತ್ತಾನೆ.

104. ಸಾಮಾನ್ಯ ಪದಗಳಲ್ಲಿರುವ ಮರಣಶಾಸನ ಸ್ವತ್ತು ನಿಹಿತವಾಗುವ ಕಾಲ:- ಒಂದು ಮರಣಶಾಸನ ಸ್ವತ್ತನ್ನು ಸಾಮಾನ್ಯ ಪದಗಳ ಮೂಲಕ ಆ ಮರಣಶಾಸನ ಸ್ವತ್ತನ್ನು ಕೊಡತಕ್ಕ ಕಾಲವನ್ನು ನಿರ್ದಿಷ್ಟಪಡಿಸದೇ ಕೊಡಲಾಗಿದ್ದರೆ, ಲೆಗಟೀಯು ಮರಣಶಾಸನ ಕರ್ತನು ಮರಣದ ದಿವಸದಿಂದ ನಿಹಿತ ಹಿತಾಸಕ್ತಿಯನ್ನು ಹೊಂದಿರುತ್ತಾನೆ ಮತ್ತು ಅದನ್ನು ಸ್ವೀಕರಿಸದೇ ಅವನು ಮರಣ ಹೊಂದಿದರೆ ಅದು ಅವನ ಪ್ರತಿನಿಧಿಗಳಿಗೆ ಹೋಗತಕ್ಕುದು.

105. ಯಾವ ಸಂದರ್ಭದಲ್ಲಿ ಮರಣಶಾಸನ ಸ್ವತ್ತು ರದ್ದಾಗುತ್ತದೆ:- (1) ಲೆಗಟೀಯು ಮರಣಶಾಸನ ಕರ್ತನ ಉತ್ತರ ಜೀವಿಯಾಗಿಲ್ಲದಿದ್ದರೆ ಆ ಮರಣಶಾಸನದ ಸ್ವತ್ತು ಪರಿಣಾಮಕಾರಿಯಾಗುವುದಿಲ್ಲ. ಆದರೆ ರದ್ದಾಗತಕ್ಕುದು ಮತ್ತು ಮರಣಶಾಸನ ಕರ್ತನು ಅದು ಬೇರೊಬ್ಬ ವ್ಯಕ್ತಿಗೆ ಹೋಗತಕ್ಕುದು ಎಂಬ ಉದ್ದೇಶವನ್ನು ಹೊಂದಿದ್ದನೆಂದು ಉಯಿಲಿನಿಂದ ಕಂಡುಬಂದ ಹೊರತು ಅದು ಮರಣಶಾಸನ ಕರ್ತನ ಸ್ವತ್ತಿನ ಶೇಷ ಭಾಗವಾಗತಕ್ಕುದು.

(2) ಆ ಮರಣಶಾಸನ ಸ್ವತ್ತನ್ನು ಸ್ವೀಕರಿಸಲು ಲೆಗಟೀಯ ಪ್ರತಿನಿಧಿಗಳನ್ನು ಹಕ್ಕುಳ್ಳವರನ್ನಾಗಿಸಲು ಅವನು ಮರಣಶಾಸನ ಕರ್ತನು ಉತ್ತರ ಜೀವಿಯಾಗಿದ್ದನೆಂದು ರುಜುವಾತುಪಡಿಸತಕ್ಕುದು.

ದೃಷ್ಟಾಂತಗಳು

(i) ಮರಣಶಾಸನ ಕರ್ತನು 'ಬಿ' ನಿಗೆ "ಬಿ' ನು ನನಗೆ ಕೊಡಬೇಕಾಗಿರುವಂಥ 500 ರೂಪಾಯಿಗಳನ್ನು" ಮರಣಶಾಸನದ ಮೂಲಕ ಕೊಡುತ್ತಾನೆ. 'ಬಿ' ನು ಮರಣಶಾಸನ ಕರ್ತನಿಗೆ ಮುಂಚೆ ಮರಣ ಹೊಂದುತ್ತಾನೆ. ಆದ್ದರಿಂದ ಮರಣಶಾಸನ ದಾನವು ರದ್ದಾಗುತ್ತದೆ.

(ii) 'ಎ' ಮತ್ತು ಅವನ ಮಕ್ಕಳಿಗೆ ಒಂದು ಮರಣಶಾಸನ ದಾನವನ್ನು ಕೊಡಲಾಗಿದೆ. 'ಎ' ನು ಮರಣಶಾಸನ ಕರ್ತನಿಗೆ ಮುಂಚೆ ಮರಣ ಹೊಂದುತ್ತಾನೆ ಅಥವಾ ಮರಣಶಾಸನವನ್ನು ಮಾಡಿದಾಗ ಮರಣ ಹೊಂದಿರುತ್ತಾನೆ. 'ಎ' ನಿಗೆ ಮಾಡಿದ ಮತ್ತು ಅವನ ಮಕ್ಕಳಿಗೆ ಕೊಟ್ಟ ಮರಣಶಾಸನ ದಾನವು ರದ್ದಾಗುತ್ತದೆ.

(iii) ಒಂದು ಮರಣಶಾಸನ ಸ್ವತ್ತನ್ನು 'ಎ' ನಿಗೆ ಮತ್ತು ಮರಣಶಾಸನ ಕರ್ತನಿಗಿಂತ ಮುಂಚೆ ಅವನು ಮರಣ ಹೊಂದಿದ ಸಂದರ್ಭದಲ್ಲಿ 'ಬಿ' ನಿಗೆ ಕೊಡಲಾಗಿದೆ. 'ಎ' ನು ಮರಣಶಾಸನ ಕರ್ತನಿಗಿಂತ ಮುಂಚೆ ಮರಣ ಹೊಂದುತ್ತಾನೆ. ಆದ್ದರಿಂದ ಮರಣಶಾಸನ ಸ್ವತ್ತು 'ಬಿ' ನಿಗೆ ಹೋಗುತ್ತದೆ.

(iv) ಹಣದ ಒಂದು ಮೊತ್ತವನ್ನು 'ಎ' ನಿಗೆ ಅವನ ಜೀವಿತ ಕಾಲಕ್ಕಾಗಿ ಮತ್ತು ಅವನ ಮರಣದ ತರುವಾಯ 'ಬಿ' ನಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನು ಮರಣಶಾಸನ ಕರ್ತನ ಜೀವಿತಕಾಲದಲ್ಲಿ ಮರಣ ಹೊಂದುತ್ತಾನೆ. 'ಬಿ' ನು ಮರಣಶಾಸನ ಕರ್ತನ ಉತ್ತರ ಜೀವಿಯಾಗುತ್ತಾನೆ. 'ಬಿ' ನಿಗೆ ಮಾಡಿದ ಮರಣಶಾಸನ ದಾನವು ಪರಿಣಾಮಕಾರಿಯಾಗುತ್ತದೆ.

(v) ಹಣದ ಒಂದು ಮೊತ್ತವನ್ನು 'ಎ' ನಿಗೆ ಹದಿನೆಂಟನೆಯ ವರ್ಷ ತುಂಬಿದ ಮೇಲೆ ಅವನಿಗೆ ಸೇರುವಂತೆ ಮತ್ತು ಅವನಿಗೆ ಹದಿನೆಂಟು ತುಂಬುವುದಕ್ಕೆ ಮುಂಚೆಯೇ ಅವನು ಮರಣ ಹೊಂದಿದರೆ 'ಬಿ' ನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನಿಗೆ ಹದಿನೆಂಟು ವರ್ಷ ತುಂಬುತ್ತದೆ ಮತ್ತು ಮರಣಶಾಸನ ಕರ್ತನ ಜೀವಿತ ಕಾಲದಲ್ಲಿ ಮರಣ ಹೊಂದುತ್ತಾನೆ. 'ಎ' ನಿಗೆ ಕೊಟ್ಟ ಮರಣಶಾಸನ ದಾನವು ರದ್ದಾಗುತ್ತದೆ ಮತ್ತು 'ಬಿ' ನಿಗೆ ಮಾಡಿದ ಮರಣಶಾಸನ ದಾನವು ಪರಿಣಾಮಕಾರಿಯಾಗುವುದಿಲ್ಲ.

(vi) ಮರಣಶಾಸನ ಕರ್ತ ಮತ್ತು ಲೆಗಟೀಯು ಒಂದೇ ನೌಕಾ ದುರಂತದಲ್ಲಿ ಮೃತರಾಗುತ್ತಾರೆ. ಅವರಿಬ್ಬರ ಪೈಕಿ ಮೊದಲು ಯಾರು ಮರಣ ಹೊಂದಿದರೆಂಬುದನ್ನು ತೋರಿಸಲು ಯಾವುದೇ ಸಾಕ್ಷ್ಯವಿಲ್ಲ. ಮರಣಶಾಸನ ದಾನವು ರದ್ದಾಗುತ್ತದೆ.

106. ಜಂಟಿ ಲೆಗಟಿಗಳಲ್ಲಿ ಒಬ್ಬನು ಮರಣಶಾಸನ ಕರ್ತನಿಗಿಂತ ಮುಂಚೆ ಮರಣ ಹೊಂದಿದರೆ ಮರಣಶಾಸನ ದಾನವು ರದ್ದಾಗುವುದಿಲ್ಲ:- ಒಂದು ಮರಣಶಾಸನ ಸ್ವತ್ತನ್ನು ಇಬ್ಬರು ವ್ಯಕ್ತಿಗಳಿಗೆ ಜಂಟಿಯಾಗಿ ಕೊಟ್ಟಿದ್ದರೆ ಮತ್ತು ಅದರಲ್ಲಿ ಒಬ್ಬನು ಮರಣಶಾಸನ ಕರ್ತನಿಗಿಂತ ಮುಂಚೆ ಮರಣ ಹೊಂದಿದರೆ ಆ ಇನ್ನೊಬ್ಬ ಲೆಗಟಿಯು ಅದನ್ನು ಸಂಪೂರ್ಣವಾಗಿ ಪಡೆಯುತ್ತಾನೆ.

ದೃಷ್ಟಾಂತ

ಮರಣಶಾಸನ ಸ್ವತ್ತನ್ನು ಕೇವಲ 'ಎ' ಮತ್ತು 'ಬಿ' ನಿಗೆ ಕೊಡಲಾಗಿದೆ. 'ಎ' ನು ಮರಣಶಾಸನ ಕರ್ತನಿಗಿಂತ ಮುಂಚೆ ಮರಣ ಹೊಂದುತ್ತಾನೆ. 'ಬಿ' ನು ಮರಣಶಾಸನ ಸ್ವತ್ತನ್ನು ಪಡೆಯುತ್ತಾನೆ.

107. ವಿಭಿನ್ನ ಪಾಲುಗಳನ್ನು ಕೊಡುವ ಮರಣಶಾಸನ ಕರ್ತನ ಉದ್ದೇಶವನ್ನು ಸೂಚಿಸುವ ಪದಗಳ ಪರಿಣಾಮ:- ಮರಣಶಾಸನ ಸ್ವತ್ತಿನಲ್ಲಿ ವಿಭಿನ್ನ ಪಾಲುಗಳನ್ನು ಲೆಗಟಿಗಳಿಗೆ ಕೊಡಲು ಮರಣಶಾಸನ ಕರ್ತನು ಉದ್ದೇಶಿಸಿದ್ದನೆಂದು ಸೂಚಿಸುವಂಥ ಪದಗಳ ಮೂಲಕ, ಅವನಿಗೆ ಅದನ್ನು ಕೊಟ್ಟಿದ್ದು, ಯಾವನೇ ಒಬ್ಬ ಲೆಗಟಿಯು ಮರಣಶಾಸನ ಕರ್ತನಿಗಿಂತ ಮುಂಚೆ ಮರಣ ಹೊಂದಿದರೆ, ಅವನಿಗಾಗಿ ಉದ್ದೇಶಿಸಿದ್ದಷ್ಟು ಮರಣಶಾಸನ ಸ್ವತ್ತು ಮರಣಶಾಸನ ಕರ್ತನ ಸ್ವತ್ತಿನ ಶೇಷ ಭಾಗಕ್ಕೆ ಸೇರತಕ್ಕುದು.

ದೃಷ್ಟಾಂತ

ಹಣದ ಒಂದು ಮೊತ್ತವನ್ನು 'ಎ' 'ಬಿ' ಮತ್ತು 'ಸಿ' ರಿಗೆ ಅವರ ನಡುವೆ ಸಮನಾಗಿ ಹಂಚಿಕೊಳ್ಳಲು ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನು ಮರಣಶಾಸನ ಕರ್ತನಿಗಿಂತ ಮುಂಚೆ ಮರಣ ಹೊಂದುತ್ತಾನೆ. 'ಬಿ' ಮತ್ತು 'ಸಿ' ರು 'ಎ' ನು ಮರಣಶಾಸನ ಕರ್ತನ ಉತ್ತರ ಜೀವಿ ಆಗಿದ್ದಿದ್ದರೆ, ಅವರು ತೆಗೆದುಕೊಳ್ಳಬಹುದಾಗಿದ್ದಂಥ ಪಾಲನ್ನು ಮಾತ್ರ ತೆಗೆದುಕೊಳ್ಳುತ್ತಾರೆ.

108. ರದ್ದಾದ ಪಾಲು ಯಾವಾಗ ವಿಲೆಯಾಗದೆ ಇರುವುದು:- ರದ್ದಾದ ಪಾಲು, ಮರಣಶಾಸನದ ಮೂಲಕ ಕೊಟ್ಟ ಸಾಮಾನ್ಯ ಶೇಷದ ಭಾಗವಾಗಿರುವಲ್ಲಿ , ಆ ಪಾಲು ವಿಲೆಯಾಗದೆ ಉಳಿಯುತ್ತದೆ.

ದೃಷ್ಟಾಂತ

ಮರಣಶಾಸನ ಕರ್ತನು ತನ್ನ ಎಸ್ಟೇಟಿನ ಶೇಷವನ್ನು 'ಎ' 'ಬಿ' ಮತ್ತು 'ಸಿ' ರಿಗೆ ಅವರ ನಡುವೆ ಸಮನಾಗಿ ಹಂಚಿಕೊಳ್ಳಲು ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನು ಮರಣ ಶಾಸನ ಕರ್ತನಿಗಿಂತ ಮುಂಚೆ ಮರಣ ಹೊಂದುತ್ತಾನೆ. ಆ ಶೇಷ ಸ್ವತ್ತಿನ ಅವನ ಮೂರನೇ ಒಂದು ಭಾಗವು ವಿಲೆಯಾಗದೆ ಹಾಗೆ ಉಳಿಯುತ್ತದೆ.

109. ಮರಣಶಾಸನ ಕರ್ತನ ಜೀವಿತ ಕಾಲದಲ್ಲಿ ಮರಣಶಾಸನ ಕರ್ತನ ಮಗು ಅಥವಾ ಪಿತೃವಂಶಜನಿಗೆ ಕೊಟ್ಟ ಮರಣಶಾಸನ ದಾನವು, ಅವನು ಮರಣ ಹೊಂದಿದ ಮೇಲೆ ಯಾವಾಗ ರದ್ದಾಗುವುದಿಲ್ಲ:- ಮರಣ ಶಾಸನ ಕರ್ತನು ಯಾವುದೇ ಮಗು ಅಥವಾ ಇತರ ಪಿತೃವಂಶಜನಿಗೆ ಮರಣಶಾಸನ ದಾನವನ್ನು ಮಾಡಲಾಗಿದ್ದರೆ ಮತ್ತು ಲೆಗಟಿಯು ಮರಣಶಾಸನ ಕರ್ತನ ಜೀವಿತ ಕಾಲದಲ್ಲಿ ಮರಣ ಹೊಂದಿದರೆ, ಮತ್ತು ಅವನ ಯಾವನೇ ಪಿತೃವಂಶಜನು ಮರಣಶಾಸನ ಕರ್ತನ ಉತ್ತರ ಜೀವಿಯಾಗಿದ್ದರೆ, ಮರಣ ಶಾಸನ ದಾನವು ರದ್ದಾಗತಕ್ಕದ್ದಲ್ಲ. ಆದರೆ ಉಯಿಲಿನಲ್ಲಿ ತದ್ವಿರುದ್ಧವಾದ ಉದ್ದೇಶವು ಕಂಡುಬಂದ ಹೊರತು ಮರಣಶಾಸನ ಕರ್ತನ ಮರಣದ ನಿಕಟೋತ್ತರದಲ್ಲಿ ಲೆಗಟಿಯ ಮರಣವು ಸಂಭವಿಸಿದ್ದಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗತಕ್ಕುದು.

ದೃಷ್ಟಾಂತ

'ಎ' ನು ತನ್ನ ಉಯಿಲನ್ನು ಮಾಡಿ ಅದರ ಮೂಲಕ ಅವನ ಮಗ 'ಬಿ' ನಿಗೆ ಅವನ ಸ್ವಂತ ನಿರುಪಾಧಿಕ ಉಪಯೋಗ ಮತ್ತು ಪ್ರಯೋಜನಕ್ಕಾಗಿ ಹಣದ ಒಂದು ಮೊತ್ತವನ್ನು ಮರಣಶಾಸನ ದಾನವಾಗಿ ಕೊಡುತ್ತಾನೆ. 'ಬಿ' ನು 'ಎ' ನಿಗಿಂತ ಮುಂಚೆ 'ಸಿ' ಎಂಬ ಒಬ್ಬ ಮಗನನ್ನು ಬಿಟ್ಟು ಸಾಯುತ್ತಾನೆ. 'ಸಿ' ನು 'ಎ' ನ ಉತ್ತರಜೀವಿಯಾಗುತ್ತಾನೆ. ಮತ್ತು ತನ್ನ ಎಲ್ಲ ಸ್ವತ್ತನ್ನು ಅವನ ವಿಧವೆ 'ಡಿ' ಳಿಗೆ ಅವನ ಮರಣಶಾಸನವನ್ನು ಬರೆದುಕೊಟ್ಟು ಆ ಮೂಲಕ ಮರಣಶಾಸನ ದಾನವನ್ನು ಕೊಡುತ್ತಾನೆ. ಆದ್ದರಿಂದ ಹಣವು 'ಡಿ' ಳಿಗೆ ಸೇರುತ್ತದೆ.

110. 'ಬಿ' ನ ಪ್ರಯೋಜನಕ್ಕಾಗಿ 'ಎ' ನಿಗೆ ಕೊಟ್ಟ ಮರಣಶಾಸನ ದಾನವು 'ಎ' ನ ಮರಣದಿಂದ ರದ್ದಾಗದಿರುವುದು:- ಇನ್ನೊಬ್ಬನ ಪ್ರಯೋಜನಕ್ಕಾಗಿ ಒಬ್ಬ ವ್ಯಕ್ತಿಗೆ ಮರಣಶಾಸನ ದಾನವನ್ನು ಮಾಡಲಾಗಿರುವಲ್ಲಿ, ಮರಣಶಾಸನ ಕರ್ತನ ಜೀವಿತ ಕಾಲದಲ್ಲಿ, ಯಾರಿಗೆ ಮರಣಶಾಸನ ದಾನವನ್ನು ಮಾಡಲಾಗಿದೆಯೋ ಆ ವ್ಯಕ್ತಿಯ ಮರಣದಿಂದಾಗಿ ಮರಣಶಾಸನ ದಾನವು ರದ್ದಾಗುವುದಿಲ್ಲ.

111. ವಿವರಿಸಿದ ವರ್ಗಕ್ಕೆ ಮಾಡಿದ ಮರಣಶಾಸನ ದಾನದ ಸಂದರ್ಭದಲ್ಲಿ ಉತ್ತರ ಜೀವಿತಾಧಿಕಾರ:- ಮರಣಶಾಸನ ದಾನವನ್ನು ಕೇವಲ ವಿವರಿಸಿದ ವ್ಯಕ್ತಿಗಳ ವರ್ಗಕ್ಕೆ ಮಾಡಲಾಗಿರುವಲ್ಲಿ ಮರಣಶಾಸನ ದಾನವಾಗಿ ಕೊಟ್ಟ ವಸ್ತುವು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಬದುಕಿರುವಂಥವರಿಗೆ ಹೋಗತಕ್ಕುದು.

ಅಪವಾದ:- ಸ್ವತ್ತನ್ನು ಒಬ್ಬ ನಿರ್ದಿಷ್ಟ ವ್ಯಕ್ತಿಗೆ ಒಂದು ನಿರ್ದಿಷ್ಟ ಬಂಧುತ್ವದ ಶ್ರೇಣಿಯಲ್ಲಿ ಇರುವರೆಂದು ವಿವರಿಸಿದ ವ್ಯಕ್ತಿಗಳ ಒಂದು ವರ್ಗಕ್ಕೆ ಮರಣಶಾಸನ ದಾನವಾಗಿ ಕೊಟ್ಟಿದ್ದರೆ, ಹಿಂದಿನ ಮರಣಶಾಸನ ದಾನದ ಕಾರಣದಿಂದಾಗಿ ಅಥವಾ ಅನ್ಯಥಾ ಮರಣಶಾಸನ ಕರ್ತನ ಮರಣದ ತರುವಾಯದ ಕಾಲದವರೆಗೆ ಅವುಗಳ ಸ್ವಾಧೀನವನ್ನು ಮುಂದಕ್ಕೆ ಹಾಕಿದ್ದರೆ, ಆ ಸ್ವತ್ತು ಆ ಕಾಲದಲ್ಲಿ ಆಗ ಬದುಕಿರುವಂಥವರಿಗೆ, ಮತ್ತು ಮರಣಶಾಸನ ಕರ್ತನ ಮರಣದ ತರುವಾಯ, ಮರಣ ಹೊಂದಿದ ಅವರ ಯಾರೇ ಪ್ರತಿನಿಧಿಗಳಿಗೆ ಸೇರತಕ್ಕುದು.

ದೃಷ್ಟಾಂತಗಳು

(i) 'ಎ' ನು 1000 ರೂಪಾಯಿಗಳನ್ನು "ಬಿ' ನ ಮಕ್ಕಳಿಗೆ" ಅವರಲ್ಲಿ ಯಾವಾಗ ಅದನ್ನು ಹಂಚಬೇಕೆಂಬುದನ್ನು ಹೇಳದೆ ಮರಣಶಾಸನ ದಾನವಾಗಿ ಕೊಡುತ್ತಾನೆ. 'ಬಿ' ನು ಮರಣಶಾಸನದ ದಿನಾಂಕಕ್ಕೆ ಮೊದಲೇ ಮೂವರು ಮಕ್ಕಳಾದ 'ಸಿ' 'ಡಿ' 'ಇ' ಇವರನ್ನು ಬಿಟ್ಟು ಮೃತನಾಗಿದ್ದಾನೆ. 'ಇ' ನು ಮರಣ ಶಾಸನದ ದಿನಾಂಕದ ತರುವಾಯ ಆದರೆ 'ಎ' ನ ಮರಣಕ್ಕೆ ಮುಂಚೆ ಸತ್ತಿದ್ದಾನೆ. 'ಸಿ' ಮತ್ತು 'ಡಿ' ರು 'ಎ' ನ ಉತ್ತರ ಜೀವಿಯಾಗಿದ್ದಾರೆ. ಆ ಮರಣಶಾಸನ ಸ್ವತ್ತು 'ಇ' ನ ಪ್ರತಿನಿಧಿಗಳನ್ನು ಹೊರತುಪಡಿಸಿ 'ಸಿ' ಮತ್ತು 'ಡಿ' ಗೆ ಸೇರುತ್ತದೆ.

(ii) ಒಂದು ಮನೆಯ ಕೆಲವು ವರ್ಷಗಳವರೆಗಿನ ಗೇಣಿಯನ್ನು 'ಎ' ನಿಗೆ ಅವನ ಜೀವಿತ ಕಾಲಕ್ಕಾಗಿ ಮತ್ತು ಅವನ ಮರಣದ ತರುವಾಯ 'ಬಿ' ನ ಮಕ್ಕಳಿಗೆ ಮರಣಶಾಸನದ ಮೂಲಕ ಕೊಡಲಾಗಿತ್ತು. ಮರಣಶಾಸನ ಕರ್ತನ ಮರಣದ ಕಾಲದಲ್ಲಿ 'ಬಿ' ನಿಗೆ 'ಸಿ' ಮತ್ತು 'ಡಿ' ಎಂಬ ಬದುಕಿರುವ ಇಬ್ಬರು ಮಕ್ಕಳು ಇದ್ದರು ಮತ್ತು ಅವನಿಗೆ ಬೇರಾವ ಮಗುವೂ ಇರಲಿಲ್ಲ. ಆ ತರುವಾಯ 'ಎ' ನ ಜೀವಿತ ಕಾಲದಲ್ಲಿ 'ಸಿ' ನು 'ಇ' ಎಂಬ ಕಾರ್ಯನಿರ್ವಾಹಕನನ್ನು ಬಿಟ್ಟು ಮರಣ ಹೊಂದಿದನು. 'ಡಿ' ನು 'ಎ' ನ ಉತ್ತರ ಜೀವಿಯಾಗಿದ್ದಾನೆ. 'ಡಿ' ಮತ್ತು 'ಇ' ರು ಗುತ್ತಿಗೆಯು ಮುಗಿಯದೇ ಇರುವಂಥ ಅವಧಿಯಷ್ಟಕ್ಕೆ ಮಾತ್ರ ಜಂಟಿಯಾಗಿ ಹಕ್ಕುಳ್ಳವರಾಗಿರುತ್ತಾರೆ.

(iii) ಹಣದ ಒಂದು ಮೊತ್ತವನ್ನು 'ಎ' ಳ ಜೀವಿತ ಕಾಲಕ್ಕಾಗಿ ಮತ್ತು ಆಕೆಯ ಮರಣದ ತರುವಾಯ 'ಬಿ' ಳ ಮಕ್ಕಳಿಗಾಗಿ ಮರಣಶಾಸನದ ಮೂಲಕ ಕೊಡಲಾಗಿತ್ತು. ಮರಣಶಾಸನ ಕರ್ತನ ಮರಣದ ಕಾಲದಲ್ಲಿ 'ಬಿ' ನಿಗೆ 'ಸಿ' ಮತ್ತು 'ಡಿ' ಎಂಬ ಬದುಕಿರುವ ಇಬ್ಬರು ಮಕ್ಕಳು ಇದ್ದರು ಮತ್ತು ಆ ಘಟನೆಯ ತರುವಾಯ 'ಬಿ' ನಿಗೆ 'ಇ' ಮತ್ತು 'ಎಫ್' ಎಂಬ ಎರಡು ಮಕ್ಕಳು ಹುಟ್ಟಿದರು. 'ಎ' ನ ಜೀವಿತ ಕಾಲದಲ್ಲಿ 'ಸಿ' ಮತ್ತು 'ಇ'ರು ಮೃತರಾದರು. 'ಸಿ' ನು ಉಯಿಲನ್ನು ಮಾಡಿದ್ದನು. 'ಇ' ನು ಉಯಿಲನ್ನು ಮಾಡಿರಲಿಲ್ಲ. 'ಎ' ಳು ತನ್ನ ಉತ್ತರ ಜೀವಿಗಳಾಗಿ 'ಡಿ' ಮತ್ತು 'ಎಫ್' ಳನ್ನು ಬಿಟ್ಟು ಮರಣ ಹೊಂದಿದ್ದಾಳೆ. ಆ ಮರಣಶಾಸನ ಸ್ವತ್ತನ್ನು ನಾಲ್ಕು ಸಮಭಾಗಗಳಾಗಿ ಹಂಚತಕ್ಕುದು. ಅವುಗಳಲ್ಲಿ ಒಂದು ಭಾಗವನ್ನು 'ಸಿ' ನ ಕಾರ್ಯನಿರ್ವಾಹಕನಿಗೆ, ಒಂದು ಭಾಗವನ್ನು 'ಇ' ನ ಆಡಳಿತಗಾರನಿಗೆ ಮತ್ತು ಒಂದು ಭಾಗವನ್ನು 'ಎಫ್' ನಿಗೆ ಸಂದಾಯ ಮಾಡತಕ್ಕುದು.

(iv) 'ಎ' ನು ತನ್ನ ಭೂಮಿಗಳಲ್ಲಿ ಮೂರನೇ ಒಂದು ಭಾಗವನ್ನು 'ಬಿ' ನಿಗೆ ಜೀವಿತ ಕಾಲಕ್ಕಾಗಿ ಮತ್ತು ಅವನ ಮರಣದ ತರುವಾಯ 'ಬಿ' ನ ಸೋದರಿಯರಿಗೆ ಮರಣ ಶಾಸನದ ಮೂಲಕ ಕೊಡುತ್ತಾನೆ. ಮರಣಶಾಸನ ಕರ್ತನ ಮರಣದ ಕಾಲದಲ್ಲಿ 'ಬಿ' ನಿಗೆ 'ಸಿ' ಮತ್ತು 'ಡಿ' ರೆಂಬ ಇಬ್ಬರು ಜೀವಂತ ಸೋದರಿಯರು ಇದ್ದರು ಮತ್ತು ಆ ಘಟನೆಯ ತರುವಾಯ ಮತ್ತೊಬ್ಬ ಸೋದರಿ 'ಇ' ಹುಟ್ಟಿದಳು. 'ಬಿ' ನ ಜೀವಿತ ಕಾಲದಲ್ಲಿಯೇ 'ಸಿ' ಮರಣ ಹೊಂದುತ್ತಾಳೆ. 'ಡಿ' ಮತ್ತು 'ಇ' ರು 'ಬಿ' ನ ಉತ್ತರ ಜೀವಿಯಾಗಿರುತ್ತಾರೆ. 'ಎ' ನ ಭೂಮಿಗಳ ಮೂರನೇ ಒಂದು ಭಾಗವು 'ಡಿ' 'ಇ' ಮತ್ತು 'ಸಿ' ನ ಪ್ರತಿನಿಧಿಗಳಿಗೆ ಸಮಪಾಲುಗಳಲ್ಲಿ ಸೇರುತ್ತದೆ.

(v) 'ಎ' ನು 'ಬಿ' ನಿಗೆ ಅವನ ಜೀವಿತ ಕಾಲಕ್ಕಾಗಿ ಮತ್ತು ಅವನ ಮರಣದ ತರುವಾಯ 'ಸಿ' ನ ಮಕ್ಕಳಲ್ಲಿ ಸಮನಾಗಿ 1000 ರೂಪಾಯಿಗಳನ್ನು ಮರಣ ಶಾಸನದ ಮೂಲಕ ಕೊಡುತ್ತಾನೆ.'ಬಿ' ನು ಮರಣ ಹೊಂದುವವರೆಗೆ 'ಸಿ' ನಿಗೆ ಯಾವುದೇ ಮಗು ಇರಲಿಲ್ಲ. 'ಬಿ' ನ ಮರಣದ ತರುವಾಯ ಮರಣಶಾಸನ ದಾನ ಶೂನ್ಯವಾಗುತ್ತದೆ.

(vi) 'ಎ' ನು 1000 ರೂಪಾಯಿಗಳನ್ನು 'ಬಿ' ನ ಹುಟ್ಟಿರುವ ಮತ್ತು ಹುಟ್ಟಲಿರುವ ಎಲ್ಲ ಮಕ್ಕಳಿಗೆ, 'ಸಿ' ನ ಮರಣದ ಕಾಲದಲ್ಲಿ ಹಂಚುವುದಕ್ಕಾಗಿ ಮರಣಶಾಸನದ ಮೂಲಕ ಕೊಡುತ್ತಾನೆ. ಮರಣಶಾಸನ ಕರ್ತನ ಮರಣದ ಕಾಲದಲ್ಲಿ 'ಬಿ' ನು 'ಡಿ' ಮತ್ತು 'ಇ' ಎಂಬ ಬದುಕಿರುವ ಇಬ್ಬರು ಮಕ್ಕಳನ್ನು ಹೊಂದಿದ್ದಾನೆ. ಮರಣಶಾಸನ ಕರ್ತನ ಮರಣದ ತರುವಾಯ ಆದರೆ 'ಸಿ' ನ ಜೀವಿತ ಕಾಲದಲ್ಲಿ 'ಎಫ್' ಮತ್ತು 'ಜಿ' ಎಂಬ ಇಬ್ಬರು ಮಕ್ಕಳು 'ಬಿ' ನಿಗೆ ಹುಟ್ಟಿದ್ದಾರೆ. 'ಸಿ' ನ ಮರಣದ ತರುವಾಯ 'ಬಿ' ನಿಗೆ ಇನ್ನೊಂದು ಮಗು ಹುಟ್ಟಿದೆ. ಆ ಮರಣಶಾಸನ ಸ್ವತ್ತು 'ಬಿ' ನಿಗೆ ತರುವಾಯ ಹುಟ್ಟಿದ ಮಗುವನ್ನು ಹೊರತುಪಡಿಸಿ 'ಡಿ','ಇ', 'ಎಫ್' ಮತ್ತು 'ಜಿ' ಗಳಿಗೆ ಸೇರುತ್ತದೆ.

(vii) 'ಎ' ನು 'ಬಿ' ನ ಮಕ್ಕಳಿಗೆ, ಅವರಲ್ಲಿ ಹಿರಿಯವನು ಪ್ರಾಪ್ತ ವಯಸ್ಕನಾದಾಗ ಅವರಲ್ಲಿ ಹಂಚುವುದಕ್ಕಾಗಿ ಒಂದು ನಿಧಿಯನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಮರಣಶಾಸನ ಕರ್ತನ ಮರಣದ ಕಾಲದಲ್ಲಿ 'ಬಿ' ನಿಗೆ 'ಸಿ' ಎಂಬ ಹೆಸರಿನ ಒಂದು ಬದುಕಿರುವ ಮಗು ಇತ್ತು. ಆ ತರುವಾಯ ಅವನಿಗೆ 'ಡಿ' ಮತ್ತು 'ಇ' ಎಂಬ ಹೆಸರಿನ ಇಬ್ಬರು ಇತರ ಮಕ್ಕಳು ಆದವು. 'ಇ' ಮರಣ ಹೊಂದುತ್ತಾನೆ. ಸಿ' ಮತ್ತು 'ಡಿ' ಬದುಕಿದ್ದಾರೆ. ಆ ನಿಧಿಯು 'ಸಿ' ನು ಪ್ರಾಪ್ತ ವಯಸ್ಕನಾದ ತರುವಾಯ 'ಬಿ' ನಿಗೆ ಹುಟ್ಟಬಹುದಾದ ಯಾವುದೇ ಮಗುವನ್ನು ಹೊರತುಪಡಿಸಿ 'ಸಿ', 'ಡಿ' ರಿಗೆ ಮತ್ತು 'ಇ' ನ ಪ್ರತಿನಿಧಿಗಳಿಗೆ ಸೇರುತ್ತದೆ.

## ಅಧ್ಯಾಯ - VII

### ಶೂನ್ಯ ಮರಣಶಾಸನ ದಾನಗಳ ಬಗ್ಗೆ

112. ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಅಸ್ತಿತ್ವದಲ್ಲಿರುವ ವ್ಯಕ್ತಿಗೆ ವಿಶಿಷ್ಟ ವಿವರಣೆಯ ಮೂಲಕ ಮರಣಶಾಸನ ದಾನ:- ವಿಶಿಷ್ಟ ವಿವರಣೆಯ ಮೂಲಕ ಒಬ್ಬ ವ್ಯಕ್ತಿಗೆ ಒಂದು ಮರಣಶಾಸನ ದಾನವನ್ನು ಮಾಡಿದ್ದರೆ ಮತ್ತು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಆ ವಿವರಣೆಯನ್ನು ಹೋಲುವ ಯಾವನೇ ವ್ಯಕ್ತಿಯು ಇಲ್ಲದಿದ್ದರೆ ಮರಣಶಾಸನದಾನವು ಶೂನ್ಯವಾಗುತ್ತದೆ.

ಅಪವಾದ:- ಒಂದು ರಕ್ತ ಸಂಬಂಧದ ವಿಶಿಷ್ಟ ಶ್ರೇಣಿಯಲ್ಲಿ ಇರುವನೆಂದು ವಿವರಿಸಿದ ಒಬ್ಬ ವ್ಯಕ್ತಿಗೆ ಸ್ವತ್ತನ್ನು ಮರಣಶಾಸನದ ಮೂಲಕ ಕೊಟ್ಟಿದ್ದು , ಹಿಂದಿನ ಮರಣಶಾಸನ ದಾನದ ಕಾರಣದಿಂದಾಗಿ ಅಥವಾ ಅನ್ಯಥಾ ಮರಣಶಾಸನ ಕರ್ತನ ಮರಣದ ತರುವಾಯದ ಕಾಲದವರೆಗೆ ಅವನ ಸ್ವಾಧೀನವು ಮುಂದಕ್ಕೆ ಹೋಗಿದ್ದರೆ, ಮತ್ತು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಆ ವಿವರಣೆಯನ್ನು ಹೋಲುವ ವ್ಯಕ್ತಿಯು ಬದುಕಿದ್ದರೆ ಅಥವಾ ಆ ಘಟನೆಯ ಮತ್ತು ಅಂಥ ತರುವಾಯದ ಕಾಲದ ನಡುವೆ ಅಸ್ತಿತ್ವಕ್ಕೆ ಬಂದರೆ, ಆ ಸ್ವತ್ತು ಅಂತಹ ತರುವಾಯದ ಕಾಲದಲ್ಲಿ ಆ ವ್ಯಕ್ತಿಗೆ ಅಥವಾ ಅವನು ಮರಣ ಹೊಂದಿದ್ದರೆ ಅವನ ಪ್ರತಿನಿಧಿಗಳಿಗೆ ಹೋಗತಕ್ಕುದು.

ದೃಷ್ಟಾಂತಗಳು

(i) 'ಎ' ನು 1000 ರೂಪಾಯಿಗಳನ್ನು 'ಬಿ' ನ ಹಿರಿಯ ಮಗನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. ಮರಣಶಾಸನ ಕರ್ತನ ಮರಣದ ಕಾಲದಲ್ಲಿ 'ಬಿ' ನಿಗೆ ಮಗ ಇರಲಿಲ್ಲ. ಮರಣ ಶಾಸನ ದಾನವು ಶೂನ್ಯವಾಗುತ್ತದೆ.

(ii) 'ಎ' ನು 1000 ರೂಪಾಯಿಗಳನ್ನು 'ಬಿ' ನಿಗೆ ಜೀವನ ಪರ್ಯಂತ ಮತ್ತು ಅವನ ಮರಣದ ತರುವಾಯ 'ಸಿ' ನ ಹಿರಿಯ ಮಗನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. ಮರಣಶಾಸನ ಕರ್ತನ ಮರಣದ ಕಾಲದಲ್ಲಿ 'ಸಿ' ನಿಗೆ ಮಗನು ಇರಲಿಲ್ಲ. ಆ ತರುವಾಯ 'ಬಿ' ನ ಜೀವಿತ ಕಾಲದಲ್ಲಿ 'ಸಿ' ನಿಗೆ ಒಬ್ಬ ಮಗನು ಹುಟ್ಟುತ್ತಾನೆ. 'ಬಿ' ನು ಮರಣ ಹೊಂದಿದ ಮೇಲೆ ಆ ಮರಣಶಾಸನ ಸ್ವತ್ತು 'ಸಿ' ನ ಮಗನಿಗೆ ಹೋಗುತ್ತದೆ.

(iii) 'ಎ' ನು 1000 ರೂಪಾಯಿಗಳನ್ನು 'ಬಿ' ನಿಗೆ ಜೀವನ ಪರ್ಯಂತ ಮತ್ತು ಅವನ ಮರಣದ ತರುವಾಯ 'ಸಿ' ನ ಹಿರಿಯ ಮಗನಿಗೆ ಮರಣಶಾಸನ ಮೂಲಕ ಕೊಡುತ್ತಾನೆ. ಮರಣಶಾಸನ ಕರ್ತನ ಮರಣದ ಕಾಲದಲ್ಲಿ 'ಸಿ' ನಿಗೆ ಮಗನು ಇರಲಿಲ್ಲ ಆ ತರುವಾಯ 'ಬಿ' ನ ಜೀವಿತ ಕಾಲದಲ್ಲಿ 'ಸಿ' ನಿಗೆ 'ಡಿ' ಎಂಬ ಹೆಸರಿನ ಒಬ್ಬ ಮಗ ಹುಟ್ಟುತ್ತಾನೆ. 'ಇ' ನು ಮರಣ ಹೊಂದುತ್ತಾನೆ. ಅನಂತರ 'ಬಿ' ನು ಮರಣ ಹೊಂದುತ್ತಾನೆ. ಆ ಮರಣಶಾಸನ ಸ್ವತ್ತು 'ಡಿ' ನ ಪ್ರತಿನಿಧಿಗಳಿಗೆ ಹೋಗುತ್ತದೆ.

(iv) 'ಎ' ನು ಅವನ ಗ್ರೀನ್ ಏಕರ್‌ನ ಎಸ್ಟೇಟನ್ನು 'ಬಿ' ನಿಗೆ ಜೀವನ ಪರ್ಯಂತ ಮತ್ತು ಅವನು ಮರಣ ಹೊಂದಿದ ಮೇಲೆ 'ಸಿ' ನ ಹಿರಿಯ ಮಗನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. "ಬಿ" ನು ಮರಣ ಹೊಂದುವ ತನಕ 'ಸಿ' ನಿಗೆ ಮಗನು ಇರಲಿಲ್ಲ. 'ಸಿ' ನ ಹಿರಿಯ ಮಗನಿಗೆ ಕೊಟ್ಟ ಮರಣಶಾಸನ ದಾನವು ಶೂನ್ಯವಾಗುತ್ತದೆ.

(v) 'ಎ' ನು 1000 ರೂಪಾಯಿಗಳನ್ನು 'ಸಿ' ನ ಹಿರಿಯ ಮಗನಿಗೆ 'ಬಿ' ನ ಮರಣದ ತರುವಾಯ ಅವನಿಗೆ ಸಂದಾಯ ಮಾಡಬೇಕೆಂದು ಮರಣಶಾಸನದ ಮೂಲಕ ಕೊಡುತ್ತಾನೆ. ಮರಣಶಾಸನ ಕರ್ತನ ಮರಣದ ಕಾಲದಲ್ಲಿ 'ಸಿ' ನಿಗೆ ಮಗನು ಇರಲಿಲ್ಲ. ಆದರೆ ಆ ತರುವಾಯ 'ಬಿ' ನ ಜೀವಿತ ಕಾಲದಲ್ಲಿ ಅವನಿಗೆ ಒಬ್ಬ ಮಗನು ಹುಟ್ಟುತ್ತಾನೆ ಮತ್ತು ಅವನು 'ಬಿ' ನ ಮರಣದ ಕಾಲದಲ್ಲಿ ಬದುಕಿರುತ್ತಾನೆ. 'ಸಿ' ನ ಮಗನು 1000 ರೂಪಾಯಿಗಳಿಗೆ ಹಕ್ಕುಳ್ಳವನಾಗಿರುತ್ತಾನೆ.

113. ಹಿಂದಿನ ಮರಣಶಾಸನ ದಾನಕ್ಕೆ ಒಳಪಟ್ಟು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಅಸ್ತಿತ್ವದಲ್ಲಿರದ ವ್ಯಕ್ತಿಗೆ ಮರಣಶಾಸನ ದಾನ:- ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಅಸ್ತಿತ್ವದಲ್ಲಿರದ ವ್ಯಕ್ತಿಗೆ ಉಯಿಲಿನಲ್ಲಿ ಒಳಗೊಂಡ ಹಿಂದಿನ ಮರಣಶಾಸನ ದಾನಕ್ಕೆ ಒಳಪಟ್ಟು ಮರಣಶಾಸನ ದಾನವನ್ನು ಮಾಡಿರುವಲ್ಲಿ ತರುವಾಯದ ಮರಣಶಾಸನ ದಾನವು ಮರಣಶಾಸನದ ಮೂಲಕ ಕೊಟ್ಟ ವಸ್ತುವಿನಲ್ಲಿ ಮರಣಶಾಸನ ಕರ್ತನ ಉಳಿದ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಒಳಗೊಂಡಿದ್ದ ಹೊರತು, ಶೂನ್ಯವಾಗತಕ್ಕುದು.

ದೃಷ್ಟಾಂತಗಳು

(i) ಸ್ವತ್ತನ್ನು 'ಎ' ನಿಗೆ ಅವನ ಜೀವನ ಪರ್ಯಂತ ಮತ್ತು ಅವನ ಮರಣದ ತರುವಾಯ ಅವನ ಹಿರಿಯ ಮಗನಿಗೆ ಜೀವನ ಪರ್ಯಂತ ಮತ್ತು ತರುವಾಯದವನ ಮರಣದ ತರುವಾಯ ಅವನ ಹಿರಿಯ ಮಗನಿಗೆ ಮರಣ ಶಾಸನದ ಮೂಲಕ ಕೊಡಲಾಗಿದೆ. ಮರಣಶಾಸನ ಕರ್ತನ ಮರಣದ ಕಾಲದಲ್ಲಿ 'ಎ' ನಿಗೆ ಮಗನು ಇರಲಿಲ್ಲ. ಇಲ್ಲಿ 'ಎ' ನ ಹಿರಿಯ ಮಗನಿಗೆ ಮಾಡಿದ ಮರಣಶಾಸನ ದಾನವು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಅಸ್ತಿತ್ವದಲ್ಲಿರದ ವ್ಯಕ್ತಿಗೆ ಮಾಡಿದ ಮರಣಶಾಸನ ದಾನವಾಗಿದೆ. ಅದು ಮರಣಶಾಸನ ಕರ್ತನಿಗೆ ಉಳಿದಿರುವ ಸಂಪೂರ್ಣ ಹಿತಾಸಕ್ತಿಯ ಮರಣಶಾಸನ ದಾನವಾಗಿರುವುದಿಲ್ಲ. 'ಎ' ನ ಹಿರಿಯ ಮಗನಿಗೆ ಅವನ ಜೀವನ ಪರ್ಯಂತಕ್ಕಾಗಿ ಮಾಡಿದ ಮರಣಶಾಸನ ದಾನವು ಶೂನ್ಯವಾಗುತ್ತದೆ.

(ii) ಒಂದು ನಿಧಿಯನ್ನು 'ಎ' ನಿಗೆ ಅವನ ಜೀವನ ಪರ್ಯಂತ ಮತ್ತು ಅವನ ಮರಣದ ತರುವಾಯ ಅವನ ಹೆಣ್ಣು ಮಕ್ಕಳಿಗೆ ಮರಣ ಶಾಸನದ ಮೂಲಕ ಕೊಡಲಾಗಿದೆ. 'ಎ' ನು ಮರಣಶಾಸನ ಕರ್ತನ ಉತ್ತರ ಜೀವಿಯಾಗಿದ್ದಾನೆ. 'ಎ' ನಿಗೆ ಹೆಣ್ಣು ಮಕ್ಕಳಿದ್ದಾರೆ. ಅವರಲ್ಲಿ ಕೆಲವರು ಮರಣ ಶಾಸನ ಕರ್ತನ ಮರಣದ ಕಾಲದಲ್ಲಿ ಅಸ್ತಿತ್ವದಲ್ಲಿರಲಿಲ್ಲ. 'ಎ' ನ ಹೆಣ್ಣು ಮಕ್ಕಳಿಗೆ ಮಾಡಿದ ಮರಣಶಾಸನದಾನವು ಮರಣಶಾಸನದ ಮೂಲಕ ಕೊಟ್ಟ ವಸ್ತುವಿನಲ್ಲಿ ಮರಣಶಾಸನ ಕರ್ತನಿಗೆ ಉಳಿದಿರುವ ಸಂಪೂರ್ಣ ಹಿತಾಸಕ್ತಿಯನ್ನು ಒಳಗೊಂಡಿದೆ. 'ಎ' ನ ಹೆಣ್ಣು ಮಕ್ಕಳಿಗೆ ಮಾಡಿದ ಮರಣಶಾಸನ ದಾನವು ಸಿಂಧುವಾಗಿರುತ್ತದೆ.

(iii) ಒಂದು ನಿಧಿಯನ್ನು 'ಎ' ನಿಗೆ ಅವನ ಜೀವನ ಪರ್ಯಂತ ಮತ್ತು ಅವನ ಮರಣದ ತರುವಾಯ ಅವನ ಹೆಣ್ಣು ಮಕ್ಕಳಿಗೆ ಅವರಲ್ಲಿ ಯಾರೇ ಆಗಲಿ ಹದಿನೆಂಟು ವರ್ಷವಯಸ್ಸಿನ ಒಳಗೆ ಮದುವೆಯಾದರೆ ಅವಳ ಭಾಗವು ಅವಳಿಗೆ ಜೀವನ

ಪರ್ಯಂತ ಸೇರುವ ಹಾಗೆ, ಅವಳ ಮರಣದ ತರುವಾಯ ಅವಳ ಮಕ್ಕಳಲ್ಲಿ ವಿಭಜನೆ ಆಗುವ ಹಾಗೆ ವ್ಯವಸ್ಥೆ ಮಾಡತಕ್ಕುದೆಂಬ ನಿರ್ದೇಶನದೊಂದಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನಿಗೆ ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಬದುಕಿರುವ ಯಾವ ಹೆಣ್ಣು ಮಕ್ಕಳೂ ಇರಲಿಲ್ಲ. ಆ ತರುವಾಯ ಹುಟ್ಟಿದ ಹೆಣ್ಣು ಮಕ್ಕಳು ಅವನ ಉತ್ತರ ಜೀವಿಗಳಾಗಿದ್ದಾರೆ. ಇಲ್ಲಿ ವ್ಯವಸ್ಥೆಯ ಬಗೆಗಿನ ನಿರ್ದೇಶನವು ಹದಿನೆಂಟು ವರ್ಷದೊಳಗೆ ಮದುವೆಯಾಗುವ ಪ್ರತಿಯೊಬ್ಬ ಮಗಳ ಸಂದರ್ಭದಲ್ಲಿ ಅವಳಿಗೆ ಮಾಡಿದ ನಿರುಪಾಧಿಕ ಮರಣಶಾಸನ ದಾನಕ್ಕೆ ಬದಲಾಗಿ, ಅವಳ ಜೀವನ ಪರ್ಯಂತ ಮಾತ್ರ ಅವಳಿಗೆ ಮಾಡಿದ ಮರಣಶಾಸನ ದಾನದ ಪರಿಣಾಮವನ್ನು ಹೊಂದಿರುತ್ತದೆ. ಹಾಗೆಂದರೆ ಮರಣಶಾಸನದ ಮೂಲಕ ಕೊಟ್ಟ ವಸ್ತುವಿನಲ್ಲಿ ಮರಣಶಾಸನ ಕರ್ತನಿಗೆ ಉಳಿದಿರುವ ಹಿತಾಸಕ್ತಿಗಿಂತ ಕಡಿಮೆಯಾಗಿವೆ. ವಸ್ತುವನ್ನು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಅಸ್ತಿತ್ವದಲ್ಲಿರದ ಒಬ್ಬ ವ್ಯಕ್ತಿಗೆ ಮಾಡಿದ ಮರಣಶಾಸನ ದಾನ ನಿಧಿಯನ್ನು ವ್ಯವಸ್ಥೆ ಮಾಡುವ ನಿರ್ದೇಶನವು ಶೂನ್ಯವಾಗಿರುತ್ತದೆ.

(iv) 'ಎ' ನು ಹಣದ ಒಂದು ಮೊತ್ತವನ್ನು 'ಬಿ' ನಿಗೆ ಜೀವನ ಪರ್ಯಂತ ಮರಣಶಾಸನದ ಮೂಲಕ ಕೊಡುತ್ತಾನೆ. ಮತ್ತು 'ಬಿ' ನು ಮರಣ ಹೊಂದಿದ ಮೇಲೆ ಆ ನಿಧಿಯು ಅವನ ಹೆಣ್ಣು ಮಕ್ಕಳಿಗೆ ಪ್ರತಿಯೊಬ್ಬ ಹೆಣ್ಣು ಮಗಳ ಭಾಗವು ಜೀವನ ಪರ್ಯಂತ ಅವಳಿಗೆ ಸೇರುವ ಹಾಗೆ ಮತ್ತು ಅವಳ ಮರಣಾನಂತರ ಅವಳ ಮಕ್ಕಳಲ್ಲಿ ವಿಭಜನೆ ಮಾಡಬಹುದೆಂದು ವ್ಯವಸ್ಥೆಯಾಗತಕ್ಕುದೆಂದು ನಿರ್ದೇಶಿಸುತ್ತಾನೆ. ಮರಣಶಾಸನ ಕರ್ತನ ಮರಣದ ಕಾಲದಲ್ಲಿ 'ಬಿ' ನಿಗೆ ಬದುಕಿರುವ ಮಗಳು ಇರಲಿಲ್ಲ. ಆ ಸಂದರ್ಭದಲ್ಲಿ 'ಬಿ' ನ ಹೆಣ್ಣುಮಕ್ಕಳಿಗೆ ಕೊಟ್ಟ ಮರಣಶಾಸನ ದಾನವು ಮಾತ್ರ ನಿಧಿಯನ್ನು ವ್ಯವಸ್ಥೆ ಮಾಡುವ ನಿರ್ದೇಶನದಲ್ಲಿ ಅಡಕವಾಗಿದೆ. ಮತ್ತು ಈ ನಿರ್ದೇಶನವು ಇನ್ನೂ ಹುಟ್ಟಿರದ ವ್ಯಕ್ತಿಗಳಿಗೆ ನಿಧಿಯಲ್ಲಿನ ಆಜೀವ ಹಿತಾಸಕ್ತಿಯು ಮರಣಶಾಸನ ದಾನವಾಗುತ್ತದೆ. ಹಾಗೆಂದರೆ ಮರಣ ಶಾಸನದ ಮೂಲಕ ಕೊಟ್ಟ ವಸ್ತುವಿನಲ್ಲಿ ಮರಣಶಾಸನ ಕರ್ತನಿಗೆ ಉಳಿದ ಸಂಪೂರ್ಣ ಹಿತಾಸಕ್ತಿಗಿಂತ ಕಡಿಮೆ ಇರುವಂಥದ್ದು. 'ಬಿ' ನ ಹೆಣ್ಣು ಮಕ್ಕಳಿಗೆ ನಿಧಿಯನ್ನು ವ್ಯವಸ್ಥೆ ಮಾಡುವ ನಿರ್ದೇಶನವು ಶೂನ್ಯವಾಗುತ್ತದೆ.

114. ಶಾಶ್ವತತೆಯ ವಿರುದ್ಧ ನಿಯಮ:- ಯಾವ ಮರಣಶಾಸನ ದಾನದ ಮೂಲಕ ಕೊಟ್ಟ ವಸ್ತುವು ನಿಹಿತಗೊಳ್ಳುವುದು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಬದುಕಿರುವ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳ ಜೀವಿತ ಕಾಲವನ್ನು ಮೀರಿ ಮತ್ತು ಆ ಅವಧಿಯ ಮುಕ್ತಾಯ ಕಾಲದಲ್ಲಿ ಅಸ್ತಿತ್ವದಲ್ಲಿರತಕ್ಕ ಮತ್ತು ಯಾವ ವ್ಯಕ್ತಿಯು ವಯಸ್ಸಿಗೆ ಬಂದರೆ ಮರಣಶಾಸನ ಮೂಲಕ ಕೊಟ್ಟ ವಸ್ತುವು ಅವನಿಗೆ ಸೇರಬೇಕಾಗಿದೆಯೋ ಆ ಯಾವನೇ ವ್ಯಕ್ತಿಯ ಅಪ್ರಾಪ್ತ ವಯಸ್ಕತೆಯನ್ನು ಮೀರಿ ವಿಳಂಬವಾಗಬಹುದೋ ಆ ಯಾವುದೇ ಮರಣಶಾಸನ ದಾನವು ಸಿಂಧುವಾಗುವುದಿಲ್ಲ.

ದೃಷ್ಟಾಂತಗಳು

(i) ಒಂದು ನಿಧಿಯನ್ನು 'ಎ' ನಿಗೆ ಅವನ ಜೀವನ ಪರ್ಯಂತ ಮತ್ತು ಅವನ ಮರಣಾನಂತರ 'ಬಿ' ನಿಗೆ ಅವನ ಜೀವನ ಪರ್ಯಂತ ಮತ್ತು 'ಬಿ' ನ ಮರಣಾನಂತರ 25 ವರ್ಷಗಳು ಮೊದಲು ತುಂಬುವಂಥ 'ಬಿ' ನ ಗಂಡು ಮಕ್ಕಳಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ಮತ್ತು 'ಬಿ' ರು ಮರಣಶಾಸನ ಕರ್ತನ ಉತ್ತರಜೀವಿಗಳಾಗಿರುತ್ತಾರೆ. ಇಲ್ಲಿ 25 ವರ್ಷ ಮೊದಲು ತುಂಬುವ 'ಬಿ' ನ ಮಗನು ಮರಣಶಾಸನ ಕರ್ತನ ಮರಣಾನಂತರ ಹುಟ್ಟಿದ ಮಗನಾಗಿರಬಹುದು. ಅಂತಹ ಮಗನಿಗೆ, 'ಎ' ಮತ್ತು 'ಬಿ' ಇವರಲ್ಲಿ ದೀರ್ಘಕಾಲ ಬದುಕಿದವನ ಮರಣಾನಂತರ 18 ವರ್ಷಕ್ಕಿಂತ ಹೆಚ್ಚು ವರ್ಷಗಳು ಗತಿಸಿಹೋಗುವವರೆಗೆ 25 ವರ್ಷಗಳು ತುಂಬದಿರಬಹುದು ಮತ್ತು ಹೀಗಾಗಿ ನಿಧಿಯು ನಿಹಿತಗೊಳ್ಳುವುದು. 'ಎ' ಮತ್ತು 'ಬಿ' ಗಳ ಜೀವಿತ ಕಾಲವನ್ನು ಮತ್ತು 'ಬಿ' ನ ಗಂಡು ಮಕ್ಕಳ ಅಪ್ರಾಪ್ತ ವಯಸ್ಕತೆಯ ಕಾಲವನ್ನು ಮೀರಿ ವಿಳಂಬವಾಗಬಹುದು. 'ಬಿ' ನ ಮರಣಾನಂತರ ಮರಣಶಾಸನ ದಾನವು ಶೂನ್ಯವಾಗುತ್ತದೆ.

(ii) ಒಂದು ನಿಧಿಯನ್ನು 'ಎ' ನಿಗೆ ಅವನ ಜೀವನ ಪರ್ಯಂತ ಮತ್ತು ಅವನ ಮರಣಾನಂತರ 'ಬಿ' ನಿಗೆ ಅವನ ಜೀವನ ಪರ್ಯಂತ ಮತ್ತು 'ಬಿ' ನ ಮರಣಾನಂತರ 25 ವರ್ಷಗಳು ಮೊದಲು ತುಂಬುವಂಥ 'ಬಿ' ನ ಗಂಡುಮಕ್ಕಳಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಬಿ' ನು ಒಬ್ಬ ಅಥವಾ ಹೆಚ್ಚು ಗಂಡು ಮಕ್ಕಳನ್ನು ಬಿಟ್ಟು ಮರಣ ಶಾಸನ ಕರ್ತನು ಬದುಕಿರುವಾಗಲೇ ಮರಣ ಹೊಂದುತ್ತಾನೆ. ಆ ಸಂದರ್ಭದಲ್ಲಿ 'ಬಿ' ನ ಗಂಡು ಮಕ್ಕಳು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಬದುಕಿರುವ ವ್ಯಕ್ತಿಗಳಾಗಿದ್ದಾರೆ ಮತ್ತು ಅವರಿಬ್ಬರಲ್ಲಿ ಒಬ್ಬನಿಗೆ 25 ವರ್ಷ ತುಂಬುವ ಕಾಲವು ಅವಶ್ಯವಾಗಿ ಅವನ ಜೀವಿತ ಕಾಲದೊಳಗೆ ಬರುತ್ತದೆ. ಆ ಮರಣಶಾಸನ ದಾನವು ಸಿಂಧುವಾಗಿದೆ.

(iii) ಒಂದು ನಿಧಿಯನ್ನು 'ಎ' ನಿಗೆ ಅವನ ಜೀವನ ಪರ್ಯಂತ ಮತ್ತು ಅವನ ಮರಣಾನಂತರ 'ಬಿ' ನಿಗೆ ಅವನ ಜೀವನ ಪರ್ಯಂತ 'ಬಿ' ನ ಮರಣಾನಂತರ 'ಬಿ' ನ ಮಕ್ಕಳಲ್ಲಿ ಹದಿನೆಂಟು ವಯಸ್ಸು ತುಂಬುವಂಥ ಮಕ್ಕಳೊಳಗೆ ಹಂಚತಕ್ಕುದು. ಆದರೆ 'ಬಿ' ನ ಯಾವುದೇ ಮಗುವಿಗೆ ಆ ವಯಸ್ಸು ತುಂಬದಿದ್ದರೆ ಆ ನಿಧಿಯು 'ಸಿ' ನಿಗೆ ಹೋಗತಕ್ಕುದು ಎಂಬ ನಿರ್ದೇಶನದೊಂದಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. ಇಲ್ಲಿ ಆ ನಿಧಿಯನ್ನು ಹಂಚುವ ಕಾಲವು, ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಬದುಕಿರುವ 'ಬಿ' ನ ಮರಣಾನಂತರ ಕೊನೇಪಕ್ಷ 18 ವರ್ಷಗಳು ಮುಕ್ತಾಯವಾಗಬೇಕು. ಈ ಎಲ್ಲ ಮರಣಶಾಸನ ದಾನಗಳು ಸಿಂಧುವಾಗಿವೆ.

(iv) ಒಂದು ನಿಧಿಯನ್ನು ಮರಣಶಾಸನ ಕರ್ತನು ಹೆಣ್ಣು ಮಕ್ಕಳ ಪ್ರಯೋಜನಕ್ಕಾಗಿ, ಅವರ ಪೈಕಿ ಯಾರಾದರೂ ಚಿಕ್ಕ ವಯಸ್ಸಿನಲ್ಲಿ ಮದುವೆಯಾದರೆ ಆ ನಿಧಿಯಲ್ಲಿನ ಅವಳ ಪಾಲು ಅವಳ ಮರಣಾನಂತರ 18 ವರ್ಷ ತುಂಬುವಂಥ

ಅವಳ ಮಕ್ಕಳಿಗೆ ಪ್ರಾಪ್ತವಾಗುವಂತೆ ವ್ಯವಸ್ಥೆ ಮಾಡತಕ್ಕುದೆಂಬ ನಿರ್ದೇಶನದೊಂದಿಗೆ, ನ್ಯಾಸಧಾರಿಗಳಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. ಈ ನಿರ್ದೇಶನವು ಅನ್ವಯಿಸುವ ಮರಣ ಶಾಸನ ಕರ್ತನ ಯಾವಳೇ ಮಗಳು ಅವನ ಮರಣದ ಕಾಲದಲ್ಲಿ ಅಸ್ತಿತ್ವದಲ್ಲಿರಬೇಕು ಮತ್ತು ನಿರ್ದೇಶಿಸಿದಂತೆ ಅಂತಿಮವಾಗಿ ವ್ಯವಸ್ಥೆ ಮಾಡಬಹುದಾದಂಥ ಆ ನಿಧಿಯ ಯಾವುದೇ ಭಾಗವು ಅದು ಯಾವ ಹೆಣ್ಣು ಮಕ್ಕಳ ಪಾಲಾಗಿತ್ತೋ ಆ ಹೆಣ್ಣು ಮಕ್ಕಳು ಮರಣವಾದಂದಿನಿಂದ 18 ವರ್ಷಗಳಿಗೆ ಮೀರದೆ ನಿಹಿತವಾಗತಕ್ಕುದು. ಈ ಎಲ್ಲ ಏರ್ಪಾಡುಗಳು ಸಿಂಧುವಾಗಿವೆ.

115. ಯಾವ ವರ್ಗದಲ್ಲಿ ಕೆಲವರಿಗೆ 113ನೇ ಪ್ರಕರಣ ಅಥವಾ 114ನೇ ಪ್ರಕರಣಗಳ ನಿಯಮಗಳು ಅನ್ವಯಿಸಬಹುದೋ ಆ ವರ್ಗಕ್ಕೆ ಮಾಡಿದ ಮರಣಶಾಸನ ದಾನ:- ಒಂದು ಮರಣಶಾಸನ ದಾನವನ್ನು ವ್ಯಕ್ತಿಗಳ ಒಂದು ವರ್ಗಕ್ಕೆ ಮಾಡಲಾಗಿದ್ದು ಅವರ ಪೈಕಿ ಯಾರಿಗೆ ಸಂಬಂಧಿಸಿದಂತೆ 113ನೇ ಪ್ರಕರಣ ಅಥವಾ 114ನೇ ಪ್ರಕರಣದ ಉಪಬಂಧಗಳ ಕಾರಣದಿಂದಾಗಿ ಅದು ಪರಿಣಾಮಕಾರಿಯಾಗುವುದಿಲ್ಲವೋ ಅಂತಹ ವ್ಯಕ್ತಿಗಳ ಬಗ್ಗೆ ಮಾತ್ರ ಮಾಡಿದ ಮರಣಶಾಸನ ದಾನವು ಮಾತ್ರ ಶೂನ್ಯವಾಗತಕ್ಕುದು, ಆದರೆ ಆ ಇಡೀ ವರ್ಗದ ಬಗ್ಗೆ ಅಲ್ಲ.

ದೃಷ್ಟಾಂತಗಳು

(i) ಒಂದು ನಿಧಿಯನ್ನು 'ಎ' ನಿಗೆ ಜೀವನ ಪರ್ಯಂತ ಮತ್ತು ಅವನ ಮರಣಾನಂತರ 25 ವಯಸ್ಸು ತುಂಬುವ ಅವನ ಎಲ್ಲಾ ಮಕ್ಕಳಿಗೆ ಮರಣ ಶಾಸನದ ಮೂಲಕ ಕೊಡಲಾಗಿದೆ. 'ಎ' ನು ಮರಣಶಾಸನ ಕರ್ತನ ಉತ್ತರಜೀವಿಯಾಗುತ್ತಾನೆ ಮತ್ತು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಕೆಲವು ಮಕ್ಕಳನ್ನು ಹೊಂದಿದ್ದಾನೆ. ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಬದುಕಿರುವ 'ಎ' ನ ಪ್ರತಿಯೊಂದು ಮಗು ಮರಣಶಾಸನ ದಾನಕ್ಕಾಗಿ ಅವಕಾಶ ಮಾಡಿಕೊಟ್ಟ ಪರಿಮಿತಿಗಳೊಳಗೆ (ಆಗುವ ಹಾಗಿದ್ದರೆ) 25ರ ವಯಸ್ಸು ತುಂಬಿರಲೇಬೇಕು. ಆದರೆ ಮರಣಶಾಸನ ಕರ್ತನ ಮರಣಾನಂತರ 'ಎ' ನು ಮಕ್ಕಳನ್ನು ಪಡೆಯಬಹುದು. ಅವರಲ್ಲಿ ಕೆಲವರಿಗೆ 'ಎ' ನ ಮರಣಾನಂತರ 18 ವರ್ಷಕ್ಕಿಂತ ಹೆಚ್ಚು ವರ್ಷಗಳು ಗತಿಸುವವರೆಗೆ 25ರ ವಯಸ್ಸು ತುಂಬದಿರಬಹುದು. 'ಎ' ನ ಮಕ್ಕಳಿಗೆ ಮಾಡಿದ ಮರಣಶಾಸನ ದಾನವು, ಆದುದರಿಂದ ಮರಣಶಾಸನ ಕರ್ತನ ಮರಣಾನಂತರ ಹುಟ್ಟಿದ ಯಾವುದೇ ಮಗುವಿನ ಬಗ್ಗೆ ಮತ್ತು 'ಎ' ನ ಮರಣಾನಂತರ 18 ವರ್ಷದೊಳಗೆ 25ರ ವಯಸ್ಸು ತುಂಬದೆ ಇರುವವರ ಬಗ್ಗೆ ಪರಿಣಾಮವಾಗುವುದಿಲ್ಲ. ಆದರೆ 'ಎ' ನ ಇತರ ಮಕ್ಕಳ ಬಗ್ಗೆ ಪರಿಣಾಮವಾಗಿದೆ.

(ii) ಒಂದು ನಿಧಿಯನ್ನು 'ಎ' ನಿಗೆ ಅವನ ಜೀವನ ಪರ್ಯಂತ ಮತ್ತು ಅವನ ಮರಣಾನಂತರ ಬಿ, ಸಿ, ಡಿ ಮತ್ತು 25ರ ವಯಸ್ಸು ತುಂಬುವ 'ಎ' ನ ಎಲ್ಲಾ ಇತರ ಮಕ್ಕಳಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. ಬಿ, ಸಿ, ಡಿ ಗಳು ಮರಣಶಾಸನ ಕರ್ತನ ಮರಣದ ಕಾಲದಲ್ಲಿ 'ಎ' ನ ಬದುಕಿರುವ ಮಕ್ಕಳಾಗಿರುತ್ತಾರೆ. ಇತರ ಎಲ್ಲಾ ರೀತಿಯಲ್ಲಿ ಈ ಪ್ರಕರಣವು (i) ನೇ ದೃಷ್ಟಾಂತದಲ್ಲಿ ಹೇಳಿದಂತಹುದೇ ಆಗಿದೆ. ಬಿ, ಸಿ, ಮತ್ತು ಡಿ ಗಳನ್ನು ನಮೂದಿಸಿರುವುದು, ಆ ಮರಣಶಾಸನವನ್ನು ಒಂದು ವರ್ಗಕ್ಕೆ ಮಾಡಿದ ಮರಣಶಾಸನ ದಾನವೆಂಬಂತೆ ಪರಿಗಣಿಸುವುದನ್ನು ಪ್ರತಿಬಂಧಿಸದಿದ್ದಾಗ್ಯೂ ಅದು ಸಂಪೂರ್ಣವಾಗಿ ಶೂನ್ಯವಾಗಿರುವುದಿಲ್ಲ. ಅದು 'ಎ' ನ ಮರಣಾನಂತರ 18 ವರ್ಷಗಳ ಒಳಗೆ 25ರ ವಯಸ್ಸನ್ನು ತುಂಬುವ 'ಬಿ', 'ಸಿ' ಅಥವಾ 'ಡಿ' ಗಳ ಯಾವುದೇ ಮಗುವಿನ ಬಗ್ಗೆ ಪರಿಣಾಮವಾಗಿರುತ್ತದೆ.

116. ಮೊದಲಿನ ಮರಣಶಾಸನ ದಾನವು ವಿಫಲವಾದ ಮೇಲೆ ಪರಿಣಾಮಕಾರಿಯಾಗತಕ್ಕ ಮರಣಶಾಸನ ದಾನ:- 113 ಮತ್ತು 114ನೇ ಪ್ರಕರಣಗಳಲ್ಲಿ ಅಡಕವಾಗಿರುವ ಯಾವುದೇ ನಿಯಮದ ಕಾರಣದಿಂದಾಗಿ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗದ ಹೆಸರಿನಲ್ಲಿ ಮಾಡಿದ ಯಾವುದೇ ಮರಣಶಾಸನ ದಾನವು, ಅಂಥ ವ್ಯಕ್ತಿಗೆ ಅಥವಾ ಅಂಥ ಇಡೀ ವರ್ಗದ ಬಗ್ಗೆ ಶೂನ್ಯವಾಗಿರುವಲ್ಲಿ, ಅದೇ ಉಯಿಲಿನಲ್ಲಿ ಅಡಕವಾಗಿರುವ ಮತ್ತು ಅಂಥ ಮೊದಲಿನ ಮರಣಶಾಸನ ದಾನವು ವಿಫಲವಾದ ತರುವಾಯ ಅಥವಾ ವಿಫಲವಾದ ಮೇಲೆ ಪರಿಣಾಮಕಾರಿಯಾಗಬೇಕೆಂದು ಉದ್ದೇಶಿಸಿದ ಯಾವುದೇ ಮರಣಶಾಸನ ದಾನವೂ ಸಹ ಶೂನ್ಯವಾಗುತ್ತದೆ.

ದೃಷ್ಟಾಂತಗಳು

(i) ಒಂದು ನಿಧಿಯನ್ನು 'ಎ' ನಿಗೆ ಅವನ ಜೀವನ ಪರ್ಯಂತ ಮತ್ತು ಅವನ ಮರಣಾನಂತರ ಅವನ ಗಂಡುಮಕ್ಕಳಲ್ಲಿ ಯಾರಿಗೆ ಮೊದಲು 25ರ ವಯಸ್ಸು ತುಂಬುತ್ತದೋ ಆ ಮಗನಿಗೆ ಅವನ ಜೀವನ ಪರ್ಯಂತ ಮತ್ತು ಅಂತಹ ಮಗನ ಮರಣಾನಂತರ 'ಬಿ' ನಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ಮತ್ತು 'ಬಿ' ಗಳು ಮರಣ ಶಾಸನ ಕರ್ತನ ಉತ್ತರಜೀವಿಗಳಾಗಿದ್ದಾರೆ. 'ಬಿ' ನಿಗೆ ಕೊಡಲಾದ ಮರಣಶಾಸನ ದಾನವು, 25ರ ವಯಸ್ಸು ಮೊದಲು ತುಂಬತಕ್ಕಂಥ 'ಎ' ನ ಗಂಡುಮಕ್ಕಳಿಗೆ ಕೊಟ್ಟ ಮರಣಶಾಸನ ದಾನವು ವಿಫಲವಾದ ಮೇಲೆ ಪರಿಣಾಮಕಾರಿಯಾಗಬೇಕೆಂದು ಉದ್ದೇಶಿಸಲಾಗಿದೆ. ಈ ಮರಣಶಾಸನದಾನವು 114ನೇ ಪ್ರಕರಣದ ಮೇರೆಗೆ ಶೂನ್ಯವಾಗಿದೆ. 'ಬಿ' ನಿಗೆ ಮಾಡಿದ ಮರಣಶಾಸನ ದಾನವೂ ಶೂನ್ಯವಾಗಿದೆ.

(ii) ಒಂದು ನಿಧಿಯನ್ನು 'ಎ' ನಿಗೆ ಅವನ ಜೀವನ ಪರ್ಯಂತ ಮತ್ತು ಅವನ ಮರಣಾನಂತರ ಅವನ ಗಂಡು ಮಕ್ಕಳಲ್ಲಿ ಯಾರಿಗೆ ಮೊದಲು 25ರ ವಯಸ್ಸು ತುಂಬುತ್ತದೋ ಆ ಮಗನಿಗೆ ಮತ್ತು 'ಎ' ನ ಯಾವನೇ ಮಗನಿಗೆ ಆ ವಯಸ್ಸು ತುಂಬದಿದ್ದರೆ 'ಬಿ' ನಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ಮತ್ತು 'ಬಿ' ಗಳು ಮರಣಶಾಸನ ಕರ್ತನ ಉತ್ತರ ಜೀವಿಗಳಾಗಿರುತ್ತಾರೆ. 'ಬಿ' ನಿಗೆ ಕೊಟ್ಟ ಮರಣಶಾಸನ ದಾನವು 25ರ ವಯಸ್ಸು ಮೊದಲು ತುಂಬತಕ್ಕಂಥ 'ಎ'

ನ ಗಂಡು ಮಕ್ಕಳಿಗೆ ಕೊಟ್ಟ ಮರಣಶಾಸನ ದಾನವು ವಿಫಲವಾದ ಮೇಲೆ ಪರಿಣಾಮಕಾರಿಯಾಗಬೇಕೆಂದು ಉದ್ದೇಶಿಸಲಾಗಿದೆ. ಈ ಮರಣಶಾಸನ ದಾನವು 114ನೇ ಪ್ರಕರಣದ ಮೇರೆಗೆ ಶೂನ್ಯವಾಗಿದೆ. 'ಬಿ' ನಿಗೆ ಕೊಟ್ಟ ಮರಣಶಾಸನ ದಾನವೂ ಶೂನ್ಯವಾಗಿದೆ.

117. ಸಂಚಯದ ಬಗ್ಗೆ ನೀಡಿದ ನಿರ್ದೇಶನ ಪರಿಣಾಮ:- (1) ಒಂದು ಉಯಿಲಿನ ನಿಬಂಧನೆಗಳು, ಯಾವುದೇ ಸ್ವತ್ತಿನಿಂದ ಬರುವ ಆದಾಯವನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಮರಣಶಾಸನ ಕರ್ತನು ಮೃತನಾದಂದಿನಿಂದ ಹದಿನೆಂಟು ವರ್ಷಗಳ ಅವಧಿಗಿಂತ ಹೆಚ್ಚಿನ ಯಾವುದೇ ಅವಧಿಯಲ್ಲಿ ಸಂಚಯ ಮಾಡತಕ್ಕದೆಂದು ನಿರ್ದೇಶಿಸಿರುವಲ್ಲಿ , ಅಂಥ ನಿರ್ದೇಶನ ಇಲ್ಲಿ ಇನ್ನು ಮುಂದೆ ಉಪಬಂಧಿಸಿದಂತೆ ಹೊರತು ಯಾವ ಅವಧಿಯಲ್ಲಿ ಎಷ್ಟರಮಟ್ಟಿಗೆ ಸಂಚಯ ಮಾಡಬೇಕೆಂದು ನಿರ್ದೇಶಿಸಲಾಗಿದೆಯೋ ಆ ಅವಧಿಯ ಹಿಂದೆ ಹೇಳಿದ ಅವಧಿಯನ್ನು ಮೀರುವಷ್ಟರ ಮಟ್ಟಿಗೆ ಶೂನ್ಯವಾಗತಕ್ಕುದು. ಮತ್ತು ಅಂಥ ಹದಿನೆಂಟು ವರ್ಷಗಳ ಅವಧಿಯ ಕೊನೆಯಲ್ಲಿ ಆ ಸ್ವತ್ತು ಹಾಗೂ ಅದರ ಆದಾಯವನ್ನು ಯಾವ ಅವಧಿಯಲ್ಲಿ ಸಂಚಯ ಮಾಡಬೇಕೆಂದು ನಿರ್ದೇಶಿಸಲಾಗಿತ್ತೋ ಆ ಅವಧಿಯು ಗತಿಸಿಹೋಗಿದ್ದರೆ ಹೇಗೋ ಹಾಗೆ ವಿಲೇ ಮಾಡತಕ್ಕುದು.

(2) ಈ ಪ್ರಕರಣವು,-

(i) ಮರಣಶಾಸನ ಕರ್ತನ ಅಥವಾ ಉಯಿಲಿನ ಮೇರೆಗೆ, ಯಾವುದೇ ಹಿತಾಸಕ್ತಿಯನ್ನು ಪಡೆಯುವ ಇತರ ಯಾವನೇ ವ್ಯಕ್ತಿಯ ಋಣಗಳ ಸಂದಾಯ; ಅಥವಾ

(ii) ಮರಣಶಾಸನ ಕರ್ತನ ಅಥವಾ ಉಯಿಲಿನ ಮೇರೆಗೆ ಯಾವುದೇ ಹಿತಾಸಕ್ತಿಯನ್ನು ಪಡೆಯುವ ಯಾವನೇ ಇತರ ವ್ಯಕ್ತಿಯ ಮಕ್ಕಳು ಅಥವಾ ದೂರದ ಸಂತತಿಗಾಗಿ ಹಿಸ್ಸೆಯ ವ್ಯವಸ್ಥೆ ; ಅಥವಾ

(iii) ಮರಣಶಾಸನದ ಮೂಲಕ ಕೊಟ್ಟ ಯಾವುದೇ ಸ್ವತ್ತಿನ ಪರಿರಕ್ಷಣೆ ಮತ್ತು ನಿರ್ವಹಣೆ

-ಇವುಗಳ ಉದ್ದೇಶಕ್ಕಾಗಿ ಸಂಚಯ ಮಾಡುವ ಯಾವುದೇ ನಿರ್ದೇಶನಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ ಮತ್ತು ಅಂತಹ ನಿರ್ದೇಶನವನ್ನು ತದನುಸಾರವಾಗಿ ನೀಡಬಹುದು.

118. ಧಾರ್ಮಿಕ ಅಥವಾ ಧರ್ಮಾರ್ಥ ಉಪಯೋಗಗಳಿಗೆ ಮರಣಶಾಸನ ದಾನ:- ಸೋದರ ಮಗ ಅಥವಾ ಸೋದರ ಮಗಳು ಅಥವಾ ಯಾವನೇ ಹತ್ತಿರದ ಬಂಧುವನ್ನು ಹೊಂದಿರುವ ವ್ಯಕ್ತಿಯು, ಯಾವುದೇ ಸ್ವತ್ತನ್ನು ಧಾರ್ಮಿಕ ಅಥವಾ ಧರ್ಮಾರ್ಥ ಉಪಯೋಗಗಳಿಗಾಗಿ, ತನ್ನ ಮರಣಕ್ಕಿಂತ ಮುಂಚೆ ಹನ್ನೆರಡು ತಿಂಗಳುಗಳಿಗಿಂತ ಕಡಿಮೆಯಿಲ್ಲದಂತೆ ಬರೆದುಕೊಟ್ಟ ಮತ್ತು ಬದುಕಿರುವ ವ್ಯಕ್ತಿಗಳ ಉಯಿಲುಗಳ ಸುರಕ್ಷಿತ ಅಭಿರಕ್ಷೆಗಾಗಿ ಕಾನೂನಿನ ಮೂಲಕ ಏರ್ಪಾಟು ಮಾಡಿದ ಯಾವುದೇ ಸ್ಥಳದಲ್ಲಿ ಆ ಉಯಿಲನ್ನು, ಹಾಗೆ ಬರೆದುಕೊಟ್ಟ ಆರು ತಿಂಗಳೊಳಗೆ ಇಟ್ಟಿದ್ದ ಹೊರತು, ಮರಣಶಾಸನದ ಮೂಲಕ ಕೊಡಲು ಅಧಿಕಾರವನ್ನು ಹೊಂದಿರತಕ್ಕುದಲ್ಲ:

ಪರಂತು ಈ ಪ್ರಕರಣದಲ್ಲಿರುವುದು ಯಾವುದೂ, ಪಾರ್ಸಿಗೆ ಅನ್ವಯವಾಗತಕ್ಕುದಲ್ಲ.

ದೃಷ್ಟಾಂತಗಳು

ಅಗತ್ಯಪಡಿಸಿದ ರೀತಿಯಲ್ಲಿ ಬರೆಯದಿರುವ ಮತ್ತು ಇಡದಿರುವ ಉಯಿಲಿನ ಮೂಲಕ ಸೋದರ ಮಗನನ್ನು ಹೊಂದಿರುವ 'ಎ' ನು ಒಂದು ಮರಣಶಾಸನ ದಾನವನ್ನು,-

ಬಡ ಜನರ ಪರಿಹಾರಕ್ಕಾಗಿ;

ರೋಗಗ್ರಸ್ತ ಸೈನಿಕರ ಪೋಷಣೆಗಾಗಿ;

ಆಸ್ಪತ್ರೆಯ ನಿರ್ಮಾಣ ಅಥವಾ ಅದರ ನಿರ್ವಹಣೆಗಾಗಿ;

ಅನಾಥರ ಶಿಕ್ಷಣ ಮತ್ತು ಅವರ ಪುರೋಭಿವೃದ್ಧಿಗಾಗಿ;

ವಿದ್ವಾಂಸರ ನೆರವಿಗಾಗಿ;

ಶಾಲೆಯ ನಿರ್ಮಾಣ ಅಥವಾ ಅದರ ನಿರ್ವಹಣೆಗಾಗಿ;

ಸೇತುವೆಯನ್ನು ಕಟ್ಟುವುದಕ್ಕಾಗಿ ಮತ್ತು ದುರಸ್ತಿ ಮಾಡುವುದಕ್ಕಾಗಿ;

ರಸ್ತೆಗಳ ನಿರ್ಮಾಣಕ್ಕಾಗಿ;

ಚರ್ಚಿನ ನಿರ್ಮಾಣ ಅಥವಾ ಅದರ ನಿರ್ವಹಣೆಗಾಗಿ;

ಚರ್ಚಿನ ದುರಸ್ತಿಗಾಗಿ;

ಧರ್ಮ ಗುರುಗಳ ಪ್ರಯೋಜನಕ್ಕಾಗಿ;

ಸಾರ್ವಜನಿಕ ಉದ್ಯಾನವನದ ನಿರ್ಮಾಣ ಅಥವಾ ಅದರ ನಿರ್ವಹಣೆಗಾಗಿ

-ಕೊಡುತ್ತಾನೆ .

ಈ ಎಲ್ಲಾ ಮರಣಶಾಸನ ದಾನಗಳು ಶೂನ್ಯವಾಗಿವೆ.

## ಅಧ್ಯಾಯ - VIII

### ಮರಣಶಾಸನ ಸ್ವತ್ತುಗಳು ನಿಹಿತವಾಗುವುದರ ಬಗ್ಗೆ

119. ಸಂದಾಯ ಅಥವಾ ಸ್ವಾಧೀನವನ್ನು ಮುಂದೂಡಿದಾಗ ಮರಣಶಾಸನ ಸ್ವತ್ತು ನಿಹಿತವಾಗುವ ದಿನಾಂಕ:- ಮರಣಶಾಸನ ದಾನದ ನಿಬಂಧನೆಗಳ ಮೇರೆಗೆ ಮರಣಶಾಸನದ ಮೂಲಕ ಕೊಟ್ಟ ವಸ್ತುವಿನ ನೇರ ಸ್ವಾಧೀನಕ್ಕೆ ಲೆಗಟಿಯು ಹಕ್ಕುಳ್ಳವನಾಗಿಲ್ಲದಿರುವಾಗ, ಅದನ್ನು ಯುಕ್ತ ಕಾಲದಲ್ಲಿ ಸ್ವೀಕರಿಸುವ ಹಕ್ಕು, ಉಯಿಲಿನಲ್ಲಿ ತದ್ವಿರುದ್ಧ ಉದ್ದೇಶವು ಕಂಡುಬಂದ ಹೊರತು ಮರಣಶಾಸನ ಕರ್ತನು ಮರಣ ಹೊಂದಿದ ಮೇಲೆ ಲೆಗಟಿಯಲ್ಲಿ ನಿಹಿತವಾಗತಕ್ಕುದು ಮತ್ತು ಅವನು ಆ ಕಾಲಕ್ಕೆ ಮುಂಚೆ ಮತ್ತು ಮರಣಶಾಸನ ಸ್ವತ್ತನ್ನು ಸ್ವೀಕರಿಸದೆಯೆ ಮರಣ ಹೊಂದಿದರೆ ಅದು ಲೆಗಟಿಯ ಪ್ರತಿನಿಧಿಗಳಿಗೆ ಹೋಗತಕ್ಕದ್ದು ಮತ್ತು ಅಂಥ ಪ್ರಕರಣಗಳಲ್ಲಿ ಆ ಮರಣಶಾಸನ ಸ್ವತ್ತು ಮರಣಶಾಸನ ಕರ್ತನು ಮೃತನಾದಂದಿನಿಂದ ಅವರ ಹಿತಾಸಕ್ತಿಯಲ್ಲಿ ನಿಹಿತವಾಗುವುದೆಂದು ಹೇಳಲಾಗುವುದು.

ವಿವರಣೆ:- ಯಾವನೇ ವ್ಯಕ್ತಿಗೆ ಮರಣಶಾಸನ ಸ್ವತ್ತು ಅವನ ಹಿತಾಸಕ್ತಿಯಲ್ಲಿ ನಿಹಿತವಾಗತಕ್ಕುದಲ್ಲ ಎಂಬ ಉದ್ದೇಶವನ್ನು ಮರಣ ಶಾಸನದ ಮೂಲಕ ಕೊಟ್ಟ ವಸ್ತುವಿನ ಸಂದಾಯ ಅಥವಾ ಸ್ವಾಧೀನವನ್ನು ಮುಂದೂಡುವ ಅಥವಾ ಅದರಲ್ಲಿನ ಹಿಂದಿನ ಹಿತಾಸಕ್ತಿಯನ್ನು ಇನ್ನೊಬ್ಬ ವ್ಯಕ್ತಿಗೆ ಮರಣಶಾಸನದ ಮೂಲಕ ಕೊಟ್ಟಿರುವ ಅಥವಾ ಮರಣಶಾಸನದ ಮೂಲಕ ಕೊಟ್ಟ ನಿಧಿಯಿಂದ ಬರುವ ಆದಾಯವನ್ನು ಸಂದಾಯ ಕಾಲದವರೆಗೆ ಸಂಚಯನ ಮಾಡಬೇಕೆಂದು ನಿರ್ದೇಶಿಸಿರುವ ವ್ಯವಸ್ಥೆಯಿಂದ ಅಥವಾ ನಿರ್ದಿಷ್ಟ ಘಟನೆ ನಡೆದರೆ ಮರಣಶಾಸನ ಸ್ವತ್ತು ಬೇರೊಬ್ಬ ವ್ಯಕ್ತಿಗೆ ಹೋಗತಕ್ಕುದೆಂಬ ಏರ್ಪಾಡಿನಿಂದ ಮಾತ್ರವೇ ಊಹಿಸುವ ಹಾಗಿಲ್ಲ.

ದೃಷ್ಟಾಂತಗಳು

(i) 'ಎ' ನು 100 ರೂಪಾಯಿಗಳನ್ನು 'ಬಿ' ನಿಗೆ 'ಸಿ' ನ ಮರಣದ ಕಾಲದಲ್ಲಿ ಅವನಿಗೆ ಸಂದಾಯ ಮಾಡಬೇಕೆಂದು ಮರಣಶಾಸನದ ಮೂಲಕ ಕೊಡುತ್ತಾನೆ.'ಎ' ನು ಮರಣ ಹೊಂದಿದ ಮೇಲೆ ಮರಣಶಾಸನ ಸ್ವತ್ತು 'ಬಿ' ನ ಹಿತಾಸಕ್ತಿಯಲ್ಲಿ ನಿಹಿತವಾಗುತ್ತದೆ ಮತ್ತು ಅವನು 'ಸಿ' ನಿಗಿಂತ ಮುಂಚೆ ಮರಣ ಹೊಂದಿದರೆ 'ಬಿ' ನ ಪ್ರತಿನಿಧಿಗಳು ಆ ಮರಣಶಾಸನ ಸ್ವತ್ತಿಗೆ ಹಕ್ಕುಳ್ಳವರಾಗುತ್ತಾರೆ.

(ii) 'ಎ'ನು 100 ರೂಪಾಯಿಗಳನ್ನು 'ಬಿ' ನಿಗೆ, 18 ರ ವಯಸ್ಸು ತುಂಬಿದ ಮೇಲೆ ಅವನಿಗೆ ಸಂದಾಯ ಮಾಡಬೇಕೆಂದು ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನು ಮರಣ ಹೊಂದಿದ ಮೇಲೆ ಆ ಮರಣಶಾಸನ ಸ್ವತ್ತು 'ಬಿ' ನ ಹಿತಾಸಕ್ತಿಯಲ್ಲಿ ನಿಹಿತವಾಗುತ್ತದೆ.

(iii) ಒಂದು ನಿಧಿಯನ್ನು 'ಎ' ನಿಗೆ ಜೀವನ ಪರ್ಯಂತ ಮತ್ತು ಅವನ ಮರಣಾನಂತರ 'ಬಿ' ನಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. ಮರಣಶಾಸನ ಕರ್ತನು ಮರಣ ಹೊಂದಿದ ಮೇಲೆ 'ಬಿ' ನಿಗೆ ಕೊಟ್ಟ ಮರಣಶಾಸನ ಸ್ವತ್ತು 'ಬಿ' ನ ಹಿತಾಸಕ್ತಿಯಲ್ಲಿ ನಿಹಿತಗೊಳ್ಳುತ್ತದೆ.

(iv) 'ಎ' ನಿಗೆ ಒಂದು ನಿಧಿಯನ್ನು 'ಬಿ' ನು 18ರ ವಯಸ್ಸು ತುಂಬುವವರೆಗೆ ಮತ್ತು ಆಮೇಲೆ 'ಬಿ' ನಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಬಿ' ನಿಗೆ ಕೊಟ್ಟ ಮರಣಶಾಸನ ಸ್ವತ್ತು ಮರಣಶಾಸನ ಕರ್ತನು ಮರಣ ಹೊಂದಿದಂದಿನಿಂದ ಅವನ ಹಿತಾಸಕ್ತಿಯಲ್ಲಿ ನಿಹಿತಗೊಳ್ಳುತ್ತದೆ.

(v) 'ಎ' ನು ತನ್ನ ಇಡೀ ಸ್ವತ್ತನ್ನು 'ಬಿ' ನಿಗೆ ನಂಬಿಕೆಯ ಮೇಲೆ, ಅದರ ಆದಾಯದಿಂದ ಕೆಲವು ಋಣಗಳನ್ನು ಸಂದಾಯ ಮಾಡಲು ಮತ್ತು ಆಮೇಲೆ ಆ ನಿಧಿಯನ್ನು 'ಸಿ' ನಿಗೆ ಕೊಡಬೇಕೆಂದು ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನ ಮರಣದ ಕಾಲದಲ್ಲಿ 'ಸಿ' ನಿಗೆ ಕೊಟ್ಟ ದಾನವು 'ಸಿ' ನ ಹಿತಾಸಕ್ತಿಯಲ್ಲಿ ನಿಹಿತಗೊಳ್ಳುತ್ತದೆ.

(vi) ಒಂದು ನಿಧಿಯನ್ನು 'ಎ', 'ಬಿ' ಮತ್ತು 'ಸಿ' ರಿಗೆ ಸಮಪಾಲುಗಳಲ್ಲಿ ಕ್ರಮವಾಗಿ ಅವರಿಗೆ 18 ವರ್ಷ ತುಂಬಿದ ಮೇಲೆ ಸಂದಾಯ ಮಾಡಬೇಕೆಂದು, ಆದರೆ ಅವರೆಲ್ಲರೂ 18 ವರ್ಷ ವಯಸ್ಸಿನೊಳಗೆ ಮರಣ ಹೊಂದಿದರೆ ಆ ಮರಣಶಾಸನ ಸ್ವತ್ತು 'ಡಿ' ನಿಗೆ ಪ್ರಾಪ್ತವಾಗತಕ್ಕುದೆಂಬ ಪರಂತುಕದೊಂದಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. ಮರಣಶಾಸನ ಕರ್ತನು ಮರಣ ಹೊಂದಿದ ಮೇಲೆ 'ಎ', 'ಬಿ', 'ಸಿ' ರ ಹಿತಾಸಕ್ತಿಯಲ್ಲಿ ನಿಹಿತಗೊಂಡ ಪಾಲುಗಳು, 'ಎ', 'ಬಿ', 'ಸಿ' ಗಳೆಲ್ಲರೂ 18 ವರ್ಷದೊಳಗೆ ಮರಣ ಹೊಂದಿದರೆ ಅವರು ತಮ್ಮ ಪಾಲುಗಳನ್ನು ಕಳೆದುಕೊಳ್ಳುತ್ತಾರೆ. ಅವರಲ್ಲಿ ಯಾರಾದರೂ ಒಬ್ಬರು (ಕೊನೆಯ ಉತ್ತರ ಜೀವಿಯನ್ನು ಹೊರತುಪಡಿಸಿ) 18 ವರ್ಷ ವಯಸ್ಸಿನೊಳಗೆ ಮರಣ ಹೊಂದಿದ ಮೇಲೆ ಅವನ ನಿಹಿತ ಹಿತಾಸಕ್ತಿಯು, ಮೇಲೆ ಹೇಳಿದುದಕ್ಕೆ ಒಳಪಟ್ಟು, ಅವನ ಪ್ರತಿನಿಧಿಗಳಿಗೆ ಹೋಗುತ್ತದೆ.

120. ನಿರ್ದಿಷ್ಟ ಅನಿಶ್ಚಿತ ಘಟನೆಯು ನಡೆಯುವುದರ ಮೇಲೆ ಅವಲಂಬಿತವಾದ ಮರಣಶಾಸನ ಸ್ವತ್ತು ನಿಹಿತವಾಗುವ ದಿನಾಂಕ:- (1) ಒಂದು ನಿರ್ದಿಷ್ಟ ಅನಿಶ್ಚಿತ ಘಟನೆಯು ನಡೆದರೆ ಮರಣಶಾಸನದ ಮೂಲಕ ಕೊಟ್ಟ ಮರಣಶಾಸನ ಸ್ವತ್ತು ಆ ಘಟನೆಯು ನಡೆಯುವವರೆಗೆ ನಿಹಿತವಾಗುವುದಿಲ್ಲ.

(2) ಒಂದು ನಿರ್ದಿಷ್ಟ ಅನಿಶ್ಚಿತ ಘಟನೆಯು ನಡೆಯದಿದ್ದರೆ ಮರಣಶಾಸನದ ಮೂಲಕ ಕೊಟ್ಟ ಮರಣಶಾಸನ ಸ್ವತ್ತು ಆ ಘಟನೆಯು ನಡೆಯುವುದು ಅಸಾಧ್ಯವಾಗುವವರೆಗೆ ನಿಹಿತವಾಗುವುದಿಲ್ಲ.

(3) ಇವರೆಡೂ ಪ್ರಕರಣಗಳಲ್ಲಿ ಷರತ್ತು ಈಡೇರುವವರೆಗೆ ಲೆಗಟಿಯ ಹಿತಾಸಕ್ತಿಯನ್ನು ಅವಲಂಬಿತ ಹಿತಾಸಕ್ತಿ ಎಂದು ಕರೆಯಲಾಗುತ್ತದೆ.

ಅಪವಾದ:- ಒಂದು ನಿಧಿಯನ್ನು ಯಾವನೇ ವ್ಯಕ್ತಿಗೆ ಒಂದು ನಿರ್ದಿಷ್ಟ ವಯಸ್ಸು ತುಂಬಿದ ಮೇಲೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿರುವಲ್ಲಿ ಮತ್ತು ಆ ವಯಸ್ಸನ್ನು ಅವನು ತಲುಪುವ ಮುಂಚೆ ನಿಧಿಯಿಂದ ಬರುವ ಆದಾಯವನ್ನು ಕೂಡಾ ನಿರುಪಾಧಿಕವಾಗಿ ಅವನಿಗೆ ಉಯಿಲು ಮೂಲಕ ಕೊಟ್ಟಿರುವಲ್ಲಿ ಅಥವಾ ಆ ಆದಾಯವನ್ನು ಅಥವಾ ಅವಶ್ಯವಾಗಬಹುದಾದಷ್ಟು ಅದರ ಭಾಗವನ್ನು ಅವನ ಪ್ರಯೋಜನಕ್ಕಾಗಿ ವಿನಿಯೋಗಿಸಬೇಕೆಂದು ನಿರ್ದೇಶಿಸಿರುವಲ್ಲಿ, ಆ ನಿಧಿಯ ಮರಣಶಾಸನ ದಾನ ಅವಲಂಬಿತ ಮರಣಶಾಸನ ದಾನವಾಗುವುದಿಲ್ಲ.

ದೃಷ್ಟಾಂತಗಳು

(i) ಒಂದು ಮರಣಶಾಸನ ಸ್ವತ್ತು 'ಎ', 'ಬಿ' ಮತ್ತು 'ಸಿ' ಎಲ್ಲರೂ 18 ರ ವಯಸ್ಸಿನೊಳಗೆ ಮರಣ ಹೊಂದಿದರೆ ಅದು 'ಡಿ' ನಿಗೆ ಸೇರುವಂತೆ ಮರಣಶಾಸನ ಮೂಲಕ ಕೊಡಲಾಗಿದೆ. 'ಎ' 'ಬಿ' ಮತ್ತು 'ಸಿ' ಗಳೆಲ್ಲರೂ 18ರ ಒಳಗೆ ಮರಣ ಹೊಂದುವವರೆಗೂ ಅಥವಾ ಅವರಲ್ಲೊಬ್ಬರಿಗೆ ಆ ವಯಸ್ಸು ತುಂಬುವವರೆಗೆ 'ಡಿ' ನು ಮರಣಶಾಸನ ಸ್ವತ್ತಿನಲ್ಲಿ ಅವಲಂಬಿತ ಹಿತಾಸಕ್ತಿಯನ್ನು ಹೊಂದಿರುತ್ತಾನೆ.

(ii) ಹಣದ ಮೊತ್ತವನ್ನು 'ಎ' ನಿಗೆ ಅವನಿಗೆ 18 ವರ್ಷ ವಯಸ್ಸು ತುಂಬಿದರೆ ಅಥವಾ "ಅವನು 18 ವರ್ಷ ವಯಸ್ಸಿನವನಾದಾಗ" ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ. ಆ ಮರಣಶಾಸನ ಸ್ವತ್ತಿನಲ್ಲಿ 'ಎ' ನ ಹಿತಾಸಕ್ತಿಯು ಅವನಿಗೆ ಆ ವಯಸ್ಸು ತುಂಬಿ ಆ ಷರತ್ತು ಈಡೇರುವವರೆಗೆ ಅವಲಂಬಿತವಾಗಿದೆ.

(iii) ಒಂದು ಎಸ್ಟೇಟನ್ನು 'ಎ' ನಿಗೆ ಜೀವನ ಪರ್ಯಂತ ಮತ್ತು ಅವನ ಮರಣಾನಂತರ 'ಬಿ' ನು ಆಗ ಬದುಕಿದ್ದರೆ 'ಬಿ' ನಿಗೆ, ಆದರೆ 'ಬಿ' ನು ಆಗ ಬದುಕಿಲ್ಲದಿದ್ದರೆ 'ಸಿ' ನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ', 'ಬಿ' ಮತ್ತು 'ಸಿ' ಇವರು ಮರಣಶಾಸನ ಕರ್ತನ ಉತ್ತರ ಜೀವಿಗಳಾಗಿದ್ದಾರೆ. 'ಬಿ' ಮತ್ತು 'ಸಿ' ಪ್ರತಿಯೊಬ್ಬರು ಯಾವ ಘಟನೆಯು ಸಂಭವಿಸಿದರೆ ಅದು ಒಬ್ಬನಲ್ಲಿ ಅಥವಾ ಇನ್ನೊಬ್ಬನಲ್ಲಿ ನಿಹಿತವಾಗುವುದೋ ಆ ಘಟನೆಯು ಸಂಭವಿಸುವವರೆಗೆ ಎಸ್ಟೇಟಿನಲ್ಲಿನ ಹಿತಾಸಕ್ತಿಯು ಅವಲಂಬಿತವಾಗಿರುತ್ತದೆ.

(iv) ಹಿಂದೆ ಹೇಳಿದ ಪ್ರಕರಣದಲ್ಲಿರುವಂತೆ ಎಸ್ಟೇಟನ್ನು ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ಮತ್ತು 'ಸಿ' ರ ಜೀವಿತ ಕಾಲದಲ್ಲಿ 'ಬಿ' ನು ಮೃತನಾಗುತ್ತಾನೆ. 'ಬಿ' ನು ಮೃತನಾದುದರಿಂದ 'ಸಿ' ನು, 'ಎ' ನ ಮರಣಾನಂತರ ಎಸ್ಟೇಟಿನ ಸ್ವಾಧೀನವನ್ನು ಪಡೆಯುವ ನಿಹಿತ ಹಕ್ಕನ್ನು ಆರ್ಜಿಸುತ್ತಾನೆ.

(v) ಮರಣಶಾಸನ ಸ್ವತ್ತನ್ನು 'ಎ' ಳಿಗೆ, ಅವಳಿಗೆ 18 ವರ್ಷ ತುಂಬಿದಾಗ ಅಥವಾ ಆ ವಯಸ್ಸಿನೊಳಗೆ ಅವಳು 'ಬಿ' ಸಮ್ಮತಿಯಿಂದ ಮದುವೆಯಾದರೆ, ಆದರೆ ಅವಳಿಗೆ 18 ವರ್ಷ ತುಂಬದಿದ್ದರೆ ಅಥವಾ ಆ ವಯಸ್ಸಿನ ಒಳಗೆ 'ಬಿ' ನ ಸಮ್ಮತಿಯಿಂದ ಮದುವೆಯಾಗದಿದ್ದರೆ ಆ ಮರಣಶಾಸನ ಸ್ವತ್ತು 'ಸಿ' ನಿಗೆ ಸೇರಬೇಕೆಂಬ ಪರಂತುಕದೊಂದಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ಮತ್ತು 'ಸಿ' ಗಳಲ್ಲಿ ಪ್ರತಿಯೊಬ್ಬರು ಆ ಮರಣಶಾಸನ ಸ್ವತ್ತಿನಲ್ಲಿ ಅವಲಂಬಿತ ಹಿತಾ ಸಕ್ತಿಯನ್ನು ಪಡೆಯುತ್ತಾರೆ. 'ಎ' ನಿಗೆ 18 ವರ್ಷ ವಯಸ್ಸು ತುಂಬುತ್ತದೆ. 'ಎ' ಳು 18 ವರ್ಷದೊಳಗೆ 'ಬಿ' ನ ಸಮ್ಮತಿ ಇಲ್ಲದೇ ಮದುವೆಯಾಗಿದ್ದಾಗ್ಯೂ ಆ ಮರಣಶಾಸನ ಸ್ವತ್ತಿಗೆ ನಿರುಪಾಧಿಕವಾಗಿ ಹಕ್ಕುಳ್ಳವಳಾಗುತ್ತಾಳೆ.

(vi) ಒಂದು ಎಸ್ಟೇಟನ್ನು 'ಎ' ನಿಗೆ ಅವನು ಮದುವೆಯಾಗುವವರೆಗೆ, ಮತ್ತು ಆ ಘಟನೆಯ ತರುವಾಯ 'ಬಿ' ನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ. ಆ ಮರಣಶಾಸನ ದಾನದಲ್ಲಿನ 'ಬಿ' ನ ಹಿತಾಸಕ್ತಿಯು, 'ಎ' ನ ಮದುವೆಯಾಗುವ ಮೂಲಕ ಆ ಷರತ್ತು ಈಡೇರುವುದರ ಮೇಲೆ ಅವಲಂಬಿತವಾಗಿರುತ್ತದೆ.

(vii) ಒಂದು ಎಸ್ಟೇಟನ್ನು 'ಎ' ನಿಗೆ ಅವನು ದಿವಾಳಿ ಋಣದಾರರ ಪರಿಹಾರಕ್ಕಾಗಿನ ಯಾವುದೇ ಕಾನೂನಿನ ಪ್ರಯೋಜನವನ್ನು ಪಡೆಯುವವರೆಗೆ ಮತ್ತು ಆ ಘಟನೆಯ ತರುವಾಯ 'ಬಿ' ನಿಗೆ ಸೇರುವಂತೆ ಮರಣಶಾಸನ ಮೂಲಕ ಕೊಡಲಾಗಿದೆ. ಮರಣಶಾಸನ ದಾನದಲ್ಲಿನ 'ಬಿ' ನ ಹಿತಾಸಕ್ತಿಯು, 'ಎ' ಅಂತಹ ಕಾನೂನಿನ ಪ್ರಯೋಜನವನ್ನು ಪಡೆಯುವುದರ ಮೇಲೆ ಅವಲಂಬಿತವಾಗಿರುತ್ತದೆ.

(viii) ಒಂದು ಎಸ್ಟೇಟನ್ನು 'ಎ' ನಿಗೆ ಅವನು 'ಬಿ' ನಿಗೆ 500 ರೂಪಾಯಿಗಳನ್ನು ಸಂದಾಯ ಮಾಡಿದರೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ. ಮರಣಶಾಸನ ದಾನದಲ್ಲಿನ 'ಎ' ನ ಹಿತಾಸಕ್ತಿಯು ಅವನು 'ಬಿ' ನಿಗೆ 500 ರೂಪಾಯಿಗಳನ್ನು ಸಂದಾಯ ಮಾಡುವುದರ ಮೇಲೆ ಅವಲಂಬಿತವಾಗಿರುತ್ತದೆ.

(ix) 'ಎ' ನು ತನ್ನ ಸುಲ್ತಾನಪುರ ಖುರ್ದ್‌ನ ಫಾರ್ಮನ್ನು 'ಬಿ' ನಿಗೆ, 'ಬಿ' ನು ಸುಲ್ತಾನ್‌ಪುರ್ ಬುಜರ್ಗ್‌ನ ತನ್ನ ಫಾರ್ಮನ್ನು 'ಸಿ' ನಿಗೆ ಹಸ್ತಾಂತರಿಸಿದಾಗ ಸೇರುವಂತೆ ಕೊಡುತ್ತಾನೆ. ಮರಣಶಾಸನ ದಾನದಲ್ಲಿನ 'ಬಿ' ನ ಹಿತಾಸಕ್ತಿಯು ಅವನು ಎರಡನೆಯ ಫಾರ್ಮನ್ನು 'ಸಿ' ನಿಗೆ ಹಸ್ತಾಂತರಿಸುವುದರ ಮೇಲೆ ಅವಲಂಬಿತವಾಗಿರುತ್ತದೆ.

(x) ಒಂದು ನಿಧಿಯನ್ನು 'ಎ' ನಿಗೆ ಮರಣಶಾಸನ ಕರ್ತನು ಮರಣ ಹೊಂದಿದ ತರುವಾಯದ ಐದು ವರ್ಷಗಳ ಒಳಗೆ 'ಬಿ' ನು 'ಸಿ' ಳನ್ನು ಮದುವೆಯಾಗದಿದ್ದರೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ. ಮರಣಶಾಸನ ಸ್ವತ್ತಿನಲ್ಲಿನ 'ಎ' ನ ಹಿತಾಸಕ್ತಿಯು 'ಬಿ' ನು 'ಸಿ' ಳನ್ನು ಮದುವೆಯಾಗದೆ ಆ ಐದು ವರ್ಷಗಳು ಮುಕ್ತಾಯವಾಗುವ ಮೂಲಕ ಅಥವಾ ಆ ಷರತ್ತಿನ ಈಡೇರುವಿಕೆಯು, ಅಸಾಧ್ಯ ಘಟನೆಯು ಆ ಅವಧಿಯಲ್ಲಿ ಸಂಭವಿಸುವ ಮೂಲಕ ಆ ಷರತ್ತು ಈಡೇರುವುದರ ಮೇಲೆ ಅವಲಂಬಿತವಾಗಿರುತ್ತದೆ.

(xi) ಒಂದು ನಿಧಿಯನ್ನು 'ಎ' ನಿಗೆ 'ಬಿ' ನು ಅವನಿಗಾಗಿ ಉಯಿಲು ಮೂಲಕ ಯಾವುದೇ ಏರ್ಪಾಡನ್ನು ಮಾಡದಿದ್ದರೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ, ಮರಣಶಾಸನ ಸ್ವತ್ತು 'ಬಿ' ನು ಮರಣ ಹೊಂದುವವರೆಗೆ ಅವಲಂಬಿತವಾಗಿರುತ್ತದೆ.

(xii) 'ಎ' ನು 'ಬಿ' ನಿಗೆ ವರ್ಷಕ್ಕೆ 500 ರೂಪಾಯಿಗಳನ್ನು , ಅವನಿಗೆ 18 ವರ್ಷ ತುಂಬಿದ ಮೇಲೆ ಸೇರುವಂತೆ ಮರಣಶಾಸನದ ಮೂಲಕ ಕೊಟ್ಟಿದ್ದಾನೆ ಮತ್ತು ಬಡ್ಡಿ ಅಥವಾ ಅವಶ್ಯವಾಗಬಹುದಾದಷ್ಟು ಭಾಗವನ್ನು ಅವನು ಆ ವಯಸ್ಸಿಗೆ ಬರುವವರೆಗೆ ಅವನ ಪ್ರಯೋಜನಕ್ಕಾಗಿ ಉಪಯೋಗಿಸತಕ್ಕುದೆಂದು ನಿರ್ದೇಶಿಸುತ್ತಾನೆ. ಮರಣಶಾಸನ ಸ್ವತ್ತು ನಿಹಿತವಾಗಿದೆ.

(xiii) 'ಎ' ನು 'ಬಿ' ನಿಗೆ 500 ರೂಪಾಯಿಗಳನ್ನು ಅವನಿಗೆ 18 ವರ್ಷ ವಯಸ್ಸು ತುಂಬಿದಾಗ ಸೇರುವಂತೆ ಮರಣಶಾಸನದ ಮೂಲಕ ಕೊಡುತ್ತಾನೆ ಮತ್ತು ಬೇರೊಂದು ನಿಧಿಯಿಂದ ನಿರ್ದಿಷ್ಟ ಮೊತ್ತವನ್ನು ಅವನು ಆ ವಯಸ್ಸಿಗೆ ಬರುವವರೆಗೆ ಅವನ ಪೋಷಣೆಗಾಗಿ ವಿನಿಯೋಗಿಸತಕ್ಕುದೆಂದು ನಿರ್ದೇಶಿಸುತ್ತಾನೆ. ಆ ಮರಣಶಾಸನ ಸ್ವತ್ತು ಅವಲಂಬಿತವಾಗಿರುತ್ತದೆ.

121. ನಿರ್ದಿಷ್ಟ ವಯಸ್ಸು ತುಂಬುವಂಥ ಒಂದು ವರ್ಗದ ಸದಸ್ಯರಿಗೆ ಕೊಟ್ಟ ಮರಣಶಾಸನ ದಾನದಲ್ಲಿನ ಹಿತಾಸಕ್ತಿಯು ನಿಹಿತವಾಗುವುದು:- ಮರಣಶಾಸನ ಸ್ವತ್ತನ್ನು ಒಂದು ನಿರ್ದಿಷ್ಟ ವಯಸ್ಸು ತುಂಬಿರುವಂಥ ವರ್ಗದ ಸದಸ್ಯರಿಗೆ ಮಾತ್ರ ಕೊಟ್ಟಿರುವಲ್ಲಿ ಆ ವಯಸ್ಸು ತುಂಬದಿರುವಂಥ ವ್ಯಕ್ತಿಯು ಆ ಮರಣಶಾಸನ ಸ್ವತ್ತಿನಲ್ಲಿ ನಿಹಿತ ಹಿತಾಸಕ್ತಿಯನ್ನು ಹೊಂದಿರಲಾಗದು.

ದೃಷ್ಟಾಂತ

ಒಂದು ನಿಧಿಯನ್ನು 18 ವರ್ಷ ತುಂಬುವಂಥ 'ಎ' ನ ಮಕ್ಕಳಿಗೆ, 'ಎ' ನ ಯಾವುದೇ ಮಗು 18 ವರ್ಷದೊಳಗಿದ್ದರೆ ಅವನು ಮುಂದೆ ಹಕ್ಕುದಾರನಾಗಬಹುದೆಂದು ಪೂರ್ವಭಾವನೆ ಮಾಡಬಹುದಾದಂಥ ಪಾಲಿನ ಆದಾಯವನ್ನು ಅವನ ಪೋಷಣೆ ಮತ್ತು ಶಿಕ್ಷಣಕ್ಕಾಗಿ ವಿನಿಯೋಗಿಸತಕ್ಕುದೆಂಬ ನಿರ್ದೇಶನದೊಂದಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 18 ವರ್ಷದೊಳಗಿರುವ 'ಎ' ನ ಯಾವುದೇ ಮಗು ಮರಣಶಾಸನ ದಾನದಲ್ಲಿ ನಿಹಿತ ಹಿತಾಸಕ್ತಿಯನ್ನು ಹೊಂದಿರುವುದಿಲ್ಲ.

## ಅಧ್ಯಾಯ - IX

## ಹೊಣೆಯುಳ್ಳ ಮರಣಶಾಸನ ದಾನಗಳ ಬಗ್ಗೆ

122. ಹೊಣೆಯುಳ್ಳ ಮರಣಶಾಸನ ದಾನಗಳು:- ಒಂದು ಮರಣಶಾಸನ ದಾನವು ಲೆಗಟಿಯ ಮೇಲೆ ಹೊಣೆಯನ್ನು ಹೊರಿಸಿರುವಲ್ಲಿ ಆ ದಾನವನ್ನು ಅವನು ಪೂರ್ಣವಾಗಿ ಅಂಗೀಕರಿಸಿದ್ದ ಹೊರತು ಅದರಿಂದ ಏನನ್ನೂ ಪಡೆಯುವಂತಿಲ್ಲ.

ದೃಷ್ಟಾಂತ

'ಎ' ನು ಉಚ್ಛ್ರಾಯ ಸ್ಥಿತಿಯಲ್ಲಿರುವ (ಎಕ್ಸ್) ಎಂಬ ಜಾಯಿಂಟ್ ಸ್ಟಾಕ್ ಕಂಪನಿಯಲ್ಲಿ ಷೇರುಗಳನ್ನು ಹೊಂದಿದ್ದಾನೆ. ಹಾಗೆಯೇ ಷೇರುಗಳ ಬಗ್ಗೆ ಭಾರಿ ತಗಾದೆ ಮಾಡುವುದನ್ನು ನಿರೀಕ್ಷಿಸಲಾಗಿರುವ ಮತ್ತು ತೊಂದರೆಯಲ್ಲಿರುವ (ವೈ) ಎಂಬ ಜಾಯಿಂಟ್ ಸ್ಟಾಕ್ ಕಂಪನಿಯಲ್ಲಿಯೂ ಸಹ ಅವನು ಷೇರುಗಳನ್ನು ಹೊಂದಿದ್ದಾನೆ. ಈ ಎರಡೂ ಜಾಯಿಂಟ್ ಸ್ಟಾಕ್ ಕಂಪನಿಗಳಲ್ಲಿನ ತನ್ನ ಎಲ್ಲ ಷೇರುಗಳನ್ನು ಅವನು 'ಎ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. ಆದರೆ (ವೈ) ನಲ್ಲಿನ ಷೇರುಗಳನ್ನು ಅಂಗೀಕರಿಸಲು 'ಬಿ' ನು ನಿರಾಕರಿಸುತ್ತಾನೆ. ಹೀಗಾಗಿ (ಎಕ್ಸ್) ನಲ್ಲಿನ ಷೇರುಗಳನ್ನು ಅವನು ಕಳೆದುಕೊಳ್ಳುತ್ತಾನೆ.

123. ಒಬ್ಬನೇ ವ್ಯಕ್ತಿಗೆ ಕೊಡಲಾದ ಎರಡು ಪ್ರತ್ಯೇಕ ಮತ್ತು ಸ್ವತಂತ್ರ ಮರಣಶಾಸನ ದಾನಗಳಲ್ಲಿ ಒಂದನ್ನು ಅಂಗೀಕರಿಸಬಹುದು ಮತ್ತು ಇನ್ನೊಂದನ್ನು ನಿರಾಕರಿಸಬಹುದು:- ಒಬ್ಬನೇ ವ್ಯಕ್ತಿಗೆ ಕೊಟ್ಟ ಪ್ರತ್ಯೇಕ ಮತ್ತು ಸ್ವತಂತ್ರವಾದ ಎರಡು ಮರಣಶಾಸನ ದಾನಗಳನ್ನು ಒಂದು ಉಯಿಲು ಒಳಗೊಂಡಿರುವಲ್ಲಿ, ಮೊದನೆಯ ಮರಣಶಾಸನ ದಾನವು ಪ್ರಯೋಜನಕಾರಿಯಾಗಿದ್ದು ಎರಡನೆಯದು ಹೊಣೆಯುಳ್ಳದ್ದಾಗಿರಬಹುದಾಗಿದ್ದಾಗ್ಯೂ ಲೆಗಟಿಯು ಅವುಗಳಲ್ಲಿ ಮೊದಲನೆಯದನ್ನು ಅಂಗೀಕರಿಸಲು ಮತ್ತು ಎರಡನೆಯದನ್ನು ನಿರಾಕರಿಸಲು ಸ್ವತಂತ್ರನಾಗಿದ್ದಾನೆ.

ದೃಷ್ಟಾಂತ

'ಎ' ನು ಒಂದು ಮನೆಯನ್ನು ಕೆಲವು ವರ್ಷಗಳ ಅವಧಿಗಾಗಿ ಬಾಡಿಗೆಗೆ ಪಡೆದಿರುತ್ತಾನೆ. ಆ ಬಾಡಿಗೆಯನ್ನು ಅವನು ಮತ್ತು ಅವನ ಪ್ರತಿನಿಧಿಗಳು ಆ ಅವಧಿಯಲ್ಲಿ ಸಂದಾಯ ಮಾಡಲು ಬದ್ಧರಾಗಿರುತ್ತಾರೆ ಮತ್ತು ಅದು ಆ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದರೆ ಬರಬಹುದಾದ ಬಾಡಿಗೆಗಿಂತ ಹೆಚ್ಚಾಗಿದೆ. ಆ ಬಾಡಿಗೆಗೆ ಪಡೆದಿರುವುದನ್ನು ಮತ್ತು ಹಣದ ಒಂದು ಮೊತ್ತವನ್ನು ಮರಣಶಾಸನ ಮೂಲಕ 'ಎ' ನಿಗೆ ಕೊಡುತ್ತಾನೆ. 'ಬಿ' ನು ಬಾಡಿಗೆಗೆ ಪಡೆದಿರುವುದನ್ನು ಅಂಗೀಕರಿಸಲು ನಿರಾಕರಿಸುತ್ತಾನೆ. ಈ ನಿರಾಕರಣೆಯಿಂದಾಗಿ ಅವನು ಹಣವನ್ನು ಕಳೆದುಕೊಳ್ಳುವುದಿಲ್ಲ.

## ಅಧ್ಯಾಯ X

## ಅವಲಂಬಿತ ಮರಣಶಾಸನ ದಾನಗಳ ಬಗ್ಗೆ

124. ನಿರ್ದಿಷ್ಟ ಅನಿಶ್ಚಿತ ಘಟನೆಯು ಸಂಭವಿಸುವ ಬಗ್ಗೆ ಯಾವುದೇ ಕಾಲವನ್ನು ನಮೂದಿಸದಿರುವಾಗ ಅಂಥ ಘಟನೆಯ ಮೇಲೆ ಅವಲಂಬಿತವಾದ ಮರಣಶಾಸನ ದಾನ:- ನಿರ್ದಿಷ್ಟ ಅನಿಶ್ಚಿತ ಘಟನೆಯು ಸಂಭವಿಸುವ ಮತ್ತು ಆ ಘಟನೆಯು ಸಂಭವಿಸುವ ಬಗ್ಗೆ

ಉಯಿಲಿನಲ್ಲಿ ಯಾವುದೇ ಕಾಲವನ್ನು ನಮೂದಿಸದೆ ಇರುವ ಸಂದರ್ಭದಲ್ಲಿ ಒಂದು ಮರಣಶಾಸನ ಸ್ವತ್ತನ್ನು ಕೊಟ್ಟಿರುವಾಗ, ಮರಣಶಾಸನದ ಮೂಲಕ ಕೊಟ್ಟ ನಿಧಿಯು ಸಂದಾಯವಾಗಬೇಕಾದ ಅಥವಾ ಹಂಚಿಕೆಯಾಗಬೇಕಾದ ಅವಧಿಗೆ ಮುಂಚೆ ಅಂಥ ಘಟನೆಯು ಸಂಭವಿಸಿದ ಹೊರತು, ಆ ಮರಣಶಾಸನ ಸ್ವತ್ತು ಪರಿಣಾಮಕಾರಿಯಾಗುವುದಿಲ್ಲ.

ದೃಷ್ಟಾಂತಗಳು

(i) ಒಂದು ಮರಣಶಾಸನ ಸ್ವತ್ತನ್ನು 'ಎ' ನಿಗೆ ಮತ್ತು ಅವನು ಮರಣ ಹೊಂದಿದ ಸಂದರ್ಭದಲ್ಲಿ 'ಬಿ' ನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನು ಮರಣಶಾಸನ ಕರ್ತನು ಉತ್ತರ ಜೀವಿಯಾಗಿದ್ದರೆ 'ಬಿ' ನಿಗೆ ಕೊಟ್ಟ ಮರಣಶಾಸನ ಸ್ವತ್ತು ಪರಿಣಾಮಕಾರಿಯಾಗುವುದಿಲ್ಲ.

(ii) ಒಂದು ಮರಣಶಾಸನ ಸ್ವತ್ತನ್ನು 'ಎ' ನಿಗೆ ಮತ್ತು ಅವನು ಮಕ್ಕಳಿಲ್ಲದೆ ಮರಣ ಹೊಂದಿದ ಸಂದರ್ಭದಲ್ಲಿ 'ಬಿ' ನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ 'ಎ' ನು ಮರಣಶಾಸನ ಕರ್ತನ ಉತ್ತರ ಜೀವಿಯಾದರೆ ಅಥವಾ ಅವನ ಜೀವಿತ ಕಾಲದಲ್ಲಿ ಮಗುವನ್ನು ಬಿಟ್ಟು ಮರಣ ಹೊಂದಿದರೆ 'ಬಿ' ನಿಗೆ ಕೊಟ್ಟ ಮರಣಶಾಸನ ಸ್ವತ್ತು ಪರಿಣಾಮಕಾರಿಯಾಗುವುದಿಲ್ಲ.

(iii) ಒಂದು ಮರಣ ಶಾಸನ ಸ್ವತ್ತನ್ನು 'ಎ' ನಿಗೆ 18 ವರ್ಷ ತುಂಬಿದಾಗ ಮತ್ತು ತುಂಬಿದರೆ, ಹಾಗೂ ಅವನು ಮರಣ ಹೊಂದಿದ ಪಕ್ಷದಲ್ಲಿ 'ಬಿ' ನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನಿಗೆ 18 ವರ್ಷ ತುಂಬುತ್ತದೆ; 'ಬಿ' ನಿಗೆ ಕೊಟ್ಟ ಮರಣಶಾಸನ ಸ್ವತ್ತು ಪರಿಣಾಮಕಾರಿಯಾಗುವುದಿಲ್ಲ.

(iv) ಒಂದು ಮರಣಶಾಸನ ಸ್ವತ್ತನ್ನು 'ಎ' ನಿಗೆ ಜೀವನ ಪರ್ಯಂತ ಮತ್ತು ಅವನ ಮರಣಾನಂತರ 'ಬಿ' ನಿಗೆ ಮತ್ತು 'ಬಿ' ನು ಮಕ್ಕಳಿಲ್ಲದೇ ಮರಣ ಹೊಂದಿದ ಪಕ್ಷದಲ್ಲಿ 'ಸಿ' ನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ. "ಬಿ" ನು ಮಕ್ಕಳಿಲ್ಲದೆ ಮರಣ ಹೊಂದಿದ ಪಕ್ಷದಲ್ಲಿ" ಎಂಬ ಪದಗಳನ್ನು 'ಬಿ' ನು 'ಎ' ನ ಜೀವಿತ ಕಾಲದಲ್ಲಿ ಮಕ್ಕಳಿಲ್ಲದೇ ಮರಣ ಹೊಂದಿದ ಪಕ್ಷದಲ್ಲಿ ಎಂದು ಅರ್ಥವಾಗುವ ಹಾಗೆ ತಿಳಿದುಕೊಳ್ಳಬೇಕು.

(v) ಒಂದು ಮರಣ ಶಾಸನ ಸ್ವತ್ತನ್ನು 'ಎ' ನಿಗೆ ಜೀವನ ಪರ್ಯಂತ ಮತ್ತು ಅವನ ನಂತರ 'ಬಿ' ನಿಗೆ ಮತ್ತು 'ಬಿ' ನು ಮರಣ ಹೊಂದಿದ ಪಕ್ಷದಲ್ಲಿ 'ಸಿ' ನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ. "ಬಿ" ನು ಮರಣ ಹೊಂದಿದ ಪಕ್ಷದಲ್ಲಿ" ಎಂಬ ಪದಗಳನ್ನು 'ಎ' ನ ಜೀವಿತ ಕಾಲದಲ್ಲಿ 'ಬಿ' ನು ಮರಣ ಹೊಂದಿದ ಪಕ್ಷದಲ್ಲಿ ಎಂದು ಅರ್ಥವಾಗುವ ಹಾಗೆ ಪರಿಗಣಿಸಬೇಕು.

125. ನಿರ್ದಿಷ್ಟಪಡಿಸದ ಯಾವುದೇ ಅವಧಿಯಲ್ಲಿ ಉತ್ತರ ಜೀವಿಗಳಾಗತಕ್ಕಂಥ ಕೆಲವು ವ್ಯಕ್ತಿಗಳಿಗೆ ಮರಣಶಾಸನ ದಾನ:- ಒಂದು ಮರಣಶಾಸನ ದಾನವನ್ನು ಯಾವುದೇ ಅವಧಿಯಲ್ಲಿ ಉತ್ತರ ಜೀವಿಗಳಾಗತಕ್ಕಂಥ ಕೆಲವು ವ್ಯಕ್ತಿಗಳಿಗೆ ಮಾಡಿರುವಲ್ಲಿ, ಆದರೆ ಖಚಿತವಾದ ಅವಧಿಯನ್ನು ನಿರ್ದಿಷ್ಟಪಡಿಸದೇ ಇರುವಲ್ಲಿ, ಆ ಮರಣಶಾಸನ ಸ್ವತ್ತು ಉಯಿಲಿನಲ್ಲಿ ತದ್ವಿರುದ್ಧವಾದ ಉದ್ದೇಶವು ಕಂಡುಬಂದ ಹೊರತು ಸಂದಾಯದ ಅಥವಾ ಹಂಚಿಕೆಯ ಕಾಲದಲ್ಲಿ ಬದುಕಿರುವಂಥವರಿಗೆ ಹೋಗತಕ್ಕುದು.

ದೃಷ್ಟಾಂತಗಳು

(i) ಒಂದು ಸ್ವತ್ತನ್ನು 'ಎ' ಮತ್ತು 'ಬಿ' ಗಳಿಗೆ ಅವರಿಬ್ಬರ ನಡುವೆ ಸಮವಾಗಿ ಹಂಚಿಕೊಳ್ಳಬೇಕೆಂದು ಅಥವಾ ಅವರಲ್ಲಿ ಉತ್ತರ ಜೀವಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ಮತ್ತು 'ಬಿ' ಗಳಿಬ್ಬರೂ ಮರಣಶಾಸನ ಕರ್ತನ ಉತ್ತರ ಜೀವಿಗಳಾದರೆ ಮರಣಶಾಸನ ಸ್ವತ್ತನ್ನು ಅವರ ನಡುವೆ ಸಮವಾಗಿ ಹಂಚಲಾಗುವುದು. 'ಎ' ನು ಮರಣಶಾಸನ ಕರ್ತನಿಗಿಂತ ಮುಂಚೆ ಮರಣ ಹೊಂದಿದರೆ ಮತ್ತು 'ಎ' ನು ಮರಣಶಾಸನ ಕರ್ತನ ಉತ್ತರ ಜೀವಿಯಾದರೆ ಅದು 'ಬಿ' ನಿಗೆ ಹೋಗುತ್ತದೆ.

(ii) ಸ್ವತ್ತನ್ನು 'ಎ' ನಿಗೆ ಜೀವನ ಪರ್ಯಂತ ಮತ್ತು ಅವನ ಮರಣಾನಂತರ 'ಬಿ' ಮತ್ತು 'ಸಿ' ಗಳಿಗೆ ಅವರ ನಡುವೆ ಸಮವಾಗಿ ಹಂಚಿಕೊಳ್ಳಬೇಕೆಂದು ಅಥವಾ ಅವರಲ್ಲಿ ಉತ್ತರ ಜೀವಿಯಾದವನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಬಿ' ನು 'ಎ' ನ ಜೀವಿತ ಕಾಲದಲ್ಲಿ ಮರಣ ಹೊಂದುತ್ತಾನೆ. 'ಸಿ' ನು 'ಎ' ನ ಉತ್ತರ ಜೀವಿಯಾಗುತ್ತಾನೆ. 'ಎ' ನು ಮರಣ ಹೊಂದಿದ ಮೇಲೆ ಮರಣಶಾಸನ ಸ್ವತ್ತು 'ಸಿ' ನಿಗೆ ಹೋಗುತ್ತದೆ.

(iii) ಸ್ವತ್ತನ್ನು 'ಎ' ನಿಗೆ ಜೀವನ ಪರ್ಯಂತ ಮತ್ತು ಅವನ ಮರಣಾನಂತರ 'ಬಿ' ಮತ್ತು 'ಸಿ' ಗಳಿಗೆ ಅಥವಾ ಉತ್ತರ ಜೀವಿಗೆ 'ಬಿ' ನು ಮರಣಶಾಸನಕರ್ತನ ಉತ್ತರ ಜೀವಿಯಾಗದಿದ್ದರೆ 'ಬಿ' ನ ಮಕ್ಕಳಿಗೆ ಸೇರಬೇಕೆಂಬ ನಿರ್ದೇಶನದೊಂದಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಸಿ' ನು ಮರಣಶಾಸನ ಕರ್ತನ ಜೀವಿತ ಕಾಲದಲ್ಲಿ ಮರಣ ಹೊಂದುತ್ತಾನೆ. 'ಬಿ' ನು ಮರಣಶಾಸನ ಕರ್ತನ ಉತ್ತರಜೀವಿಯಾಗುತ್ತಾನೆ. ಆದರೆ 'ಎ' ನ ಜೀವಿತ ಕಾಲದಲ್ಲಿ ಮರಣ ಹೊಂದುತ್ತಾನೆ. ಮರಣಶಾಸನ ಸ್ವತ್ತು 'ಬಿ' ನ ಪ್ರತಿನಿಧಿಗೆ ಹೋಗುತ್ತದೆ.

(iv) ಸ್ವತ್ತನ್ನು 'ಎ' ನಿಗೆ ಜೀವನ ಪರ್ಯಂತ ಮತ್ತು ಅವನ ಮರಣಾನಂತರ 'ಬಿ' ಮತ್ತು 'ಸಿ' ಳಿಗೆ ಅವರಲ್ಲಿ ಯಾರಾದರೂ ಒಬ್ಬರು 'ಎ' ನ ಜೀವಿತ ಕಾಲದಲ್ಲಿ ಮರಣ ಹೊಂದಿದ ಪಕ್ಷದಲ್ಲಿ ಇಡೀ ಸ್ವತ್ತು ಉತ್ತರ ಜೀವಿಗೆ ಹೋಗತಕ್ಕುದೆಂಬ

ನಿರ್ದೇಶನದೊಂದಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಬಿ' ನು 'ಎ' ನ ಜೀವಿತ ಕಾಲದಲ್ಲಿ ಮರಣ ಹೊಂದುತ್ತಾನೆ. ಆ ತರುವಾಯ 'ಸಿ' ನು 'ಎ' ನ ಜೀವಿತಕಾಲದಲ್ಲಿ ಮರಣ ಹೊಂದುತ್ತಾನೆ. ಆ ಮರಣಶಾಸನ ಸ್ವತ್ತು 'ಸಿ' ನ ಪ್ರತಿನಿಧಿಗೆ ಹೋಗುತ್ತದೆ.

## ಅಧ್ಯಾಯ - XI

### ಷರತ್ತು ಪೂರ್ವಕ ಮರಣಶಾಸನ ದಾನಗಳ ಬಗ್ಗೆ

126. ಈಡೇರಿಸಲು ಸಾಧ್ಯವಾಗದ ಷರತ್ತಿನ ಮೇಲೆ ಮರಣಶಾಸನ ದಾನ:- **ಈಡೇರಿಸಲು ಸಾಧ್ಯವಾಗದ ಷರತ್ತಿನ ಮೇಲೆ ಕೊಟ್ಟ ಮರಣಶಾಸನ ದಾನವು ಶೂನ್ಯವಾಗುತ್ತದೆ.**

ದೃಷ್ಟಾಂತಗಳು

(i) ಒಂದು ಎಸ್ಟೇಟನ್ನು 'ಎ' ನಿಗೆ ಅವನು ಒಂದು ಗಂಟೆಯೊಳಗೆ 100 ಮೈಲಿಗಳನ್ನು ನಡೆಯತಕ್ಕುದು ಎಂಬ ಷರತ್ತಿನ ಮೇಲೆ ಮರಣಶಾಸನ ದಾನವಾಗಿ ಕೊಡಲಾಗಿದೆ. ಈ ಮರಣಶಾಸನ ದಾನವು ಶೂನ್ಯವಾಗುತ್ತದೆ.

(ii) 'ಎ' ನು 'ಬಿ' ನಿಗೆ 500 ರೂಪಾಯಿಗಳನ್ನು ಅವನು 'ಎ' ನ ಮಗಳನ್ನು ಮದುವೆಯಾಗತಕ್ಕುದು ಎಂಬ ಷರತ್ತಿನ ಮೇಲೆ ಮರಣಶಾಸನ ದಾನವಾಗಿ ಕೊಡುತ್ತಾನೆ. 'ಎ' ನ ಮಗಳು ಆ ಉಯಿಲಿನ ದಿನಾಂಕದಂದು ಮರಣ ಹೊಂದಿದ್ದಳು. ಆ ಮರಣಶಾಸನ ದಾನವು ಶೂನ್ಯವಾಗುತ್ತದೆ.

127. ಕಾನೂನು ಬಾಹಿರ ಅಥವಾ ಅನೈತಿಕ ಷರತ್ತಿನ ಮೇಲೆ ಕೊಟ್ಟ ಮರಣಶಾಸನ ದಾನ:- **ಯಾವ ಷರತ್ತಿನ ಈಡೇರಿಕೆಯು ಕಾನೂನಿಗೆ ಅಥವಾ ನೈತಿಕತೆಗೆ ತದ್ವಿರುದ್ಧವಾಗಿರುವುದೋ ಆ ಷರತ್ತಿನ ಮೇಲೆ ಕೊಟ್ಟ ಮರಣಶಾಸನ ದಾನವು ಶೂನ್ಯವಾಗುತ್ತದೆ.**

ದೃಷ್ಟಾಂತಗಳು

(i) 'ಎ' ನು 'ಬಿ' ನಿಗೆ 500 ರೂಪಾಯಿಗಳನ್ನು ಅವನು 'ಸಿ' ನನ್ನು ಕೊಲೆ ಮಾಡತಕ್ಕುದು ಎಂಬ ಷರತ್ತಿನ ಮೇಲೆ ಮರಣಶಾಸನದಾನದ ಮೂಲಕ ಕೊಡುತ್ತಾನೆ. ಆ ಮರಣಶಾಸನ ದಾನವು ಶೂನ್ಯವಾಗುತ್ತದೆ.

(ii) 'ಎ' ನು ತನ್ನ ಸೋದರ ಮಗಳಿಗೆ ಅವಳು ತನ್ನ ಗಂಡನನ್ನು ಬಿಟ್ಟುಬಿಡಬೇಕೆಂಬ ಷರತ್ತಿನ ಮೇಲೆ 5000 ರೂಪಾಯಿಗಳನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಆ ಮರಣಶಾಸನ ದಾನವು ಶೂನ್ಯವಾಗುತ್ತದೆ.

128. ಮರಣಶಾಸನ ಸ್ವತ್ತು ನಿಹಿತವಾಗಲು ಪೂರ್ವ ಷರತ್ತಿನ ಈಡೇರಿಕೆ:- **ಮರಣಶಾಸನದ ಮೂಲಕ ಕೊಟ್ಟ ವಸ್ತುವಿನಲ್ಲಿ ಲೆಗಟಿಯು ನಿಹಿತ ಹಿತಾಸಕ್ತಿಯನ್ನು ಪಡೆಯುವುದಕ್ಕೆ ಮುಂಚೆ ಈಡೇರಿಸಬೇಕಾದ ಷರತ್ತನ್ನು ಉಯಿಲು ವಿಧಿಸಿರುವಲ್ಲಿ, ಆ ಷರತ್ತನ್ನು ಬಹುಮಟ್ಟಿಗೆ ಪಾಲಿಸಲಾಗಿದ್ದರೆ ಅದನ್ನು ಈಡೇರಿಸಿರುವುದಾಗಿ ಪರಿಗಣಿಸತಕ್ಕುದು.**

ದೃಷ್ಟಾಂತಗಳು

(i) ಒಂದು ಮರಣ ಶಾಸನ ಸ್ವತ್ತನ್ನು 'ಎ' , 'ಬಿ', 'ಸಿ', 'ಡಿ' ಮತ್ತು 'ಇ' ಗಳ ಸಮ್ಮತಿಯೊಂದಿಗೆ ಮದುವೆಯಾಗತಕ್ಕುದೆಂಬ ಷರತ್ತಿನ ಮೇಲೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನು 'ಬಿ' ನ ಲಿಖಿತ ಸಮ್ಮತಿಯೊಂದಿಗೆ ಮದುವೆಯಾಗುತ್ತಾನೆ. 'ಸಿ' ನು ಆ ಮದುವೆಯಲ್ಲಿ ಹಾಜರಿರುತ್ತಾನೆ. 'ಡಿ' ನು ಮದುವೆಗೆ ಮುಂಚೆಯೇ 'ಎ' ನಿಗೆ ಉಡುಗೊರೆಯನ್ನು ಕಳುಹಿಸುತ್ತಾನೆ. 'ಇ' ನಿಗೆ 'ಎ' ನು ಖುದ್ದಾಗಿ ತನ್ನ ಉದ್ದೇಶಗಳನ್ನು ತಿಳಿಸಿದ್ದಾನೆ, ಮತ್ತು ಅವನು ಯಾವ ಆಕ್ಷೇಪಣೆಯನ್ನು ಮಾಡಿರುವುದಿಲ್ಲ. 'ಎ' ನು ಆ ಷರತ್ತನ್ನು ಈಡೇರಿಸಿದ್ದಾನೆ.

(ii) ಒಂದು ಮರಣಶಾಸನ ಸ್ವತ್ತನ್ನು 'ಎ' ನಿಗೆ 'ಬಿ', 'ಸಿ' ಮತ್ತು 'ಡಿ' ಗಳ ಸಮ್ಮತಿಯೊಂದಿಗೆ ಮದುವೆಯಾಗತಕ್ಕುದೆಂಬ ಷರತ್ತಿನ ಮೇಲೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಡಿ' ಮರಣ ಹೊಂದುತ್ತಾನೆ. 'ಎ' ನು 'ಬಿ' ಮತ್ತು 'ಸಿ' ಗಳ ಸಮ್ಮತಿಯೊಂದಿಗೆ ಮದುವೆಯಾಗುತ್ತಾನೆ. 'ಎ' ನು ಆ ಷರತ್ತನ್ನು ಈಡೇರಿಸಿದ್ದಾನೆ.

(iii) ಒಂದು ಮರಣಶಾಸನ ಸ್ವತ್ತನ್ನು 'ಎ' ನಿಗೆ ಅವನು 'ಬಿ' 'ಸಿ' ಮತ್ತು 'ಡಿ' ಗಳ ಸಮ್ಮತಿಯೊಂದಿಗೆ ಮದುವೆಯಾಗತಕ್ಕುದೆಂಬ ಷರತ್ತಿನ ಮೇಲೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನು 'ಬಿ', 'ಸಿ' ಮತ್ತು 'ಡಿ' ಗಳ ಜೀವಿತ ಕಾಲದಲ್ಲಿ 'ಬಿ' ಮತ್ತು 'ಸಿ' ರ ಸಮ್ಮತಿಯೊಂದಿಗೆ ಮಾತ್ರ ಮದುವೆಯಾಗುತ್ತಾನೆ. 'ಎ' ನು ಆ ಷರತ್ತನ್ನು ಈಡೇರಿಸಿಲ್ಲ.

(iv) ಒಂದು ಮರಣಶಾಸನದ ಸ್ವತ್ತನ್ನು 'ಎ' ನಿಗೆ 'ಬಿ', 'ಸಿ' ಮತ್ತು 'ಡಿ' ಗಳ ಸಮ್ಮತಿಯೊಂದಿಗೆ ಮದುವೆಯಾಗತಕ್ಕುದೆಂಬ ಷರತ್ತಿನ ಮೇಲೆ ಮರಣ ಶಾಸನದ ಮೂಲಕ ಕೊಡಲಾಗಿದೆ. 'ಎ' ನು 'ಇ' ಳೊಡನೆ ತನ್ನ ಮದುವೆಗೆ 'ಬಿ', 'ಸಿ', 'ಡಿ' ಗಳ ಬೇಷರತ್ತು ಸಮ್ಮತಿಯನ್ನು ಪಡೆಯುತ್ತಾನೆ. ಆ ತರುವಾಯ 'ಬಿ', 'ಸಿ' ಮತ್ತು 'ಡಿ' ಗಳು ಮನಸ್ಸಿಗೆ ಬಂದ ಹಾಗೆ ಅವರ ಸಮ್ಮತಿಯನ್ನು ಹಿಂತೆಗೆದುಕೊಳ್ಳುತ್ತಾರೆ. 'ಎ' ನು 'ಬಿ' ಳೊಂದಿಗೆ ಮದುವೆಯಾಗುತ್ತಾನೆ. 'ಎ' ನು ಆ ಷರತ್ತನ್ನು ಈಡೇರಿಸಿದ್ದಾನೆ.

(v) ಒಂದು ಮರಣಶಾಸನ ಸ್ವತ್ತನ್ನು 'ಎ' ನಿಗೆ ಅವನು 'ಬಿ', 'ಸಿ' ಮತ್ತು 'ಡಿ' ಗಳ ಸಮ್ಮತಿಯೊಂದಿಗೆ ಮದುವೆಯಾಗತಕ್ಕುದೆಂಬ ಷರತ್ತಿನ ಮೇಲೆ ಕೊಡಲಾಗಿದೆ. 'ಎ' ನು 'ಬಿ', 'ಸಿ' ಮತ್ತು 'ಡಿ' ಗಳ ಸಮ್ಮತಿಯಿಲ್ಲದೆ ಮದುವೆಯಾಗುತ್ತಾನೆ. ಆದರೆ ಅವರ ಸಮ್ಮತಿಯನ್ನು ಮದುವೆಯಾದ ತರುವಾಯ ಪಡೆದುಕೊಳ್ಳುತ್ತಾನೆ. 'ಎ' ನು ಆ ಷರತ್ತನ್ನು ಈಡೇರಿಸಿಲ್ಲ.

(vi) 'ಎ' ನು ತನ್ನ ಉಯಿಲನ್ನು ಮಾಡುತ್ತಾನೆ. ಅದರ ಮೂಲಕ ಹಣದ ಒಂದು ಮೊತ್ತವನ್ನು 'ಬಿ' ನಿಗೆ ಹಣವನ್ನು 'ಬಿ' ನು 'ಎ' ನ ನಿರ್ವಾಹಕ ಸಮ್ಮತಿಯೊಂದಿಗೆ ಮದುವೆಯಾದರೆ ಸೇರುವಂತೆ ಕೊಡುತ್ತಾನೆ. 'ಬಿ' ನು 'ಎ' ನ ಜೀವಿತ ಕಾಲದಲ್ಲಿ ಮದುವೆಯಾಗುತ್ತಾನೆ ಮತ್ತು 'ಎ' ನು ಆ ತರುವಾಯ ಆ ಮದುವೆಗೆ ತನ್ನ ಅನುಮೋದನೆಯನ್ನು ವ್ಯಕ್ತಪಡಿಸುತ್ತಾನೆ. 'ಎ' ನು ಮರಣ ಹೊಂದುತ್ತಾನೆ. 'ಬಿ' ನಿಗೆ ಕೊಟ್ಟ ಮರಣಶಾಸನ ದಾನವು ಪರಿಣಾಮಕಾರಿಯಾಗುತ್ತದೆ.

(vii) ಒಂದು ಮರಣಶಾಸನ ಸ್ವತ್ತನ್ನು 'ಎ' ನಿಗೆ, ಉಯಿಲಿನಲ್ಲಿ ನಿರ್ದಿಷ್ಟಪಡಿಸಿರುವ ಕಾಲದೊಳಗೆ ಒಂದು ನಿಶ್ಚಿತ ದಸ್ತಾವೇಜನ್ನು ಅವನು ಬರೆದುಕೊಟ್ಟರೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನು ಆ ದಸ್ತಾವೇಜನ್ನು ಒಂದು ಯುಕ್ತ ಕಾಲದೊಳಗೆ ಬರೆದುಕೊಡುತ್ತಾನೆ. ಆದರೆ ಉಯಿಲಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಅಲ್ಲ. 'ಎ' ನು ಷರತ್ತನ್ನು ನೆರವೇರಿಸಿಲ್ಲ. ಆದ್ದರಿಂದ ಆ ಮರಣಶಾಸನ ಸ್ವತ್ತನ್ನು ಸ್ವೀಕರಿಸಲು ಹಕ್ಕುಳ್ಳವನಾಗುವುದಿಲ್ಲ.

129. 'ಎ' ನಿಗೆ ಕೊಟ್ಟ ಮರಣಶಾಸನ ದಾನವು ವಿಫಲವಾದಾಗ ಅದು 'ಬಿ' ನಿಗೆ ಸೇರುವುದು:- ಒಂದು ಮರಣ ಶಾಸನ ದಾನವನ್ನು ಒಬ್ಬ ವ್ಯಕ್ತಿಗೆ ಕೊಟ್ಟಿದ್ದು ಅದೇ ವಸ್ತುವಿನ ಮರಣಶಾಸನ ದಾನವನ್ನು ಇನ್ನೊಬ್ಬನಿಗೂ ಕೊಟ್ಟಿರುವಲ್ಲಿ, ಹಿಂದಿನ ಮರಣಶಾಸನ ದಾನವು ವಿಫಲವಾದರೆ, ಎರಡನೆಯ ಮರಣಶಾಸನ ದಾನವು, ಮರಣಶಾಸನ ಕರ್ತನು ಯೋಜಿಸಿದ ರೀತಿಯಲ್ಲಿ ಆ ವಿಫಲತೆಯು ಸಂಭವಿಸದಿದ್ದಾಗ್ಯೂ, ಪರಿಣಾಮಕಾರಿಯಾಗತಕ್ಕುದು.

ದೃಷ್ಟಾಂತಗಳು

(i) 'ಎ' ನು ಹಣದ ಒಂದು ಮೊತ್ತವನ್ನು ತನ್ನ ಉತ್ತರ ಜೀವಿಗಳಾಗುವ ಅವನ ಮಕ್ಕಳಿಗೆ ಮತ್ತು ಅವರೆಲ್ಲರೂ 18 ವರ್ಷದೊಳಗೆ ಮರಣ ಹೊಂದಿದರೆ 'ಬಿ' ನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನು ಯಾವ ಮಗುವೂ ಇಲ್ಲದೆ ಮರಣ ಹೊಂದುತ್ತಾನೆ. 'ಬಿ' ನಿಗೆ ಕೊಟ್ಟ ಮರಣಶಾಸನ ದಾನವು ಪರಿಣಾಮಕಾರಿಯಾಗುತ್ತದೆ.

(ii) 'ಎ' ನು 'ಬಿ' ನಿಗೆ ಹಣದ ಒಂದು ಮೊತ್ತವನ್ನು 'ಎ' ನ ಮರಣದ ತರುವಾಯ ಮೂರು ತಿಂಗಳ ಒಳಗೆ ಒಂದು ನಿಶ್ಚಿತ ದಸ್ತಾವೇಜನ್ನು ಬರೆದುಕೊಡತಕ್ಕದೆಂಬ ಷರತ್ತಿನ ಮೇಲೆ ಮತ್ತು ಅವನು ಹಾಗೆ ಮಾಡಲು ಉಪೇಕ್ಷಿಸಿದರೆ 'ಸಿ' ನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡುತ್ತಾನೆ. 'ಬಿ' ನು ಮರಣಶಾಸನ ಕರ್ತನ ಜೀವಿತ ಕಾಲದಲ್ಲಿ ಮರಣ ಹೊಂದುತ್ತಾನೆ. 'ಸಿ' ನಿಗೆ ಮಾಡಿದ ಮರಣಶಾಸನ ದಾನವು ಪರಿಣಾಮಕಾರಿಯಾಗುತ್ತದೆ.

130. ಮೊದಲ ಮರಣಶಾಸನ ದಾನವು ವಿಫಲಗೊಂಡ ಮೇಲೆ ಎರಡನೆಯದು ಯಾವಾಗ ಪರಿಣಾಮಕಾರಿಯಾಗುವುದು:- ಒಂದು ನಿರ್ದಿಷ್ಟ ರೀತಿಯಲ್ಲಿ ಮೊದಲನೇ ಮರಣಶಾಸನ ದಾನವು ವಿಫಲಗೊಂಡ ಸಂದರ್ಭದಲ್ಲಿ ಮಾತ್ರ ಎರಡನೆಯ ಮರಣಶಾಸನ ದಾನವು ಪರಿಣಾಮಕಾರಿಯಾಗತಕ್ಕುದೆಂಬ ಉದ್ದೇಶವನ್ನು ಉಯಿಲಿನಲ್ಲಿ ತೋರಿಸಿರುವಲ್ಲಿ ಎರಡನೆಯ ಮರಣಶಾಸನ ದಾನವು, ಹಿಂದಿನ ಮರಣಶಾಸನ ದಾನವು ಆ ನಿರ್ದಿಷ್ಟ ರೀತಿಯಲ್ಲಿ ವಿಫಲಗೊಂಡ ಹೊರತು ಪರಿಣಾಮಕಾರಿಯಾಗತಕ್ಕುದಲ್ಲ.

ದೃಷ್ಟಾಂತ

'ಎ' ನು ತನ್ನ ಹೆಂಡತಿಗೆ ಒಂದು ಮರಣಶಾಸನ ದಾನವನ್ನು ಕೊಡುತ್ತಾನೆ. ಆದರೆ ಅವಳು ಅವನ ಜೀವಿತ ಕಾಲದಲ್ಲಿ ಮರಣ ಹೊಂದಿದರೆ ಅವಳಿಗೆ ಮರಣಶಾಸನದ ಮೂಲಕ ಕೊಟ್ಟಿದ್ದನ್ನು 'ಬಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ಮತ್ತು ಅವನ ಹೆಂಡತಿ ಇಬ್ಬರೂ ಒಟ್ಟಿಗೆ ಮರಣ ಹೊಂದುತ್ತಾರೆ. 'ಎ' ನ ಹೆಂಡತಿ ಅವನಿಗಿಂತ ಮುಂಚೆ ಮರಣ ಹೊಂದಿದಳು ಎಂಬುದನ್ನು ರುಜುವಾತುಪಡಿಸುವುದು ಅಸಾಧ್ಯವಾಗುವಂಥ ಸಂದರ್ಭಗಳಿವೆ. ಆಗ 'ಬಿ' ನಿಗೆ ಮಾಡಿದ ಮರಣಶಾಸನ ದಾನವು ಪರಿಣಾಮಕಾರಿಯಾಗುವುದಿಲ್ಲ.

131. ನಿರ್ದಿಷ್ಟ ಅನಿಶ್ಚಿತ ಘಟನೆಯು ಸಂಭವಿಸುವ ಅಥವಾ ಸಂಭವಿಸದಿರುವ ಷರತ್ತಿನ ಮರಣಶಾಸನ ದಾನವು ಇನ್ನೊಬ್ಬನಿಗೆ ಹೋಗುವುದು:- (1) ನಿರ್ದಿಷ್ಟ ಅನಿಶ್ಚಿತ ಘಟನೆ ಸಂಭವಿಸಿದ ಪಕ್ಷದಲ್ಲಿ ಮರಣಶಾಸನದ ಮೂಲಕ ಕೊಟ್ಟ ವಸ್ತುವು ಇನ್ನೊಬ್ಬ ವ್ಯಕ್ತಿಗೆ ಹೋಗತಕ್ಕುದೆಂಬ ಅಥವಾ ನಿರ್ದಿಷ್ಟ ಅನಿಶ್ಚಿತ ಘಟನೆಯು ಸಂಭವಿಸದಿರುವ ಪಕ್ಷದಲ್ಲಿ ಮರಣಶಾಸನದ ಮೂಲಕ ಕೊಟ್ಟ ವಸ್ತುವು ಇನ್ನೊಬ್ಬ ವ್ಯಕ್ತಿಗೆ ಹೋಗತಕ್ಕುದೆಂಬ ಹೆಚ್ಚಿನ ಷರತ್ತನ್ನು ಸೇರಿಸಿ ಯಾವನೇ ವ್ಯಕ್ತಿಗೆ ಮರಣಶಾಸನ ದಾನವನ್ನು ಮಾಡಬಹುದು.

(2) ಪ್ರತಿಯೊಂದು ಸಂದರ್ಭದಲ್ಲಿ ತರುವಾಯದ ಮರಣಶಾಸನ ದಾನವು, 120, 121, 122, 123, 124, 125, 126,127, 129 ಮತ್ತು 130ನೇ ಪ್ರಕರಣಗಳಲ್ಲಿ ಅಡಕಗೊಂಡ ನಿಯಮಗಳಿಗೆ ಒಳಪಟ್ಟಿದೆ.

ದೃಷ್ಟಾಂತಗಳು

(i) ಹಣದ ಒಂದು ಮೊತ್ತವನ್ನು 'ಎ' ನಿಗೆ ಅವನಿಗೆ 18 ವಯಸ್ಸು ತುಂಬಿದಾಗ ಸಂದಾಯ ಮಾಡಬೇಕೆಂದು ಮತ್ತು ಅವನು ಆ ವಯಸ್ಸು ತುಂಬುವ ಮೊದಲೇ ಮರಣ ಹೊಂದಿದರೆ, 'ಬಿ' ನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನು ಮರಣಶಾಸನ ಸ್ವತ್ತಿನಲ್ಲಿ ಒಂದು ನಿಹಿತ ಹಿತಾಸಕ್ತಿಯನ್ನು ಪಡೆಯುತ್ತಾನೆ. ಆ ಹಿತಾಸಕ್ತಿಯು 'ಎ' ನು 18 ವಯಸ್ಸು ತುಂಬುವ ಮೊದಲೇ ಮೃತನಾದ ಪಕ್ಷದಲ್ಲಿ ಆ ಮರಣಶಾಸನ ದಾನವು ಅವಧಿ ತಪ್ಪಿ 'ಬಿ' ನಿಗೆ ಸೇರತಕ್ಕದೆಂಬ ಷರತ್ತಿಗೆ ಒಳಪಟ್ಟಿರುತ್ತದೆ.

(ii) ಒಂದು ಎಸ್ಟೇಟನ್ನು 'ಎ' ನಿಗೆ, 'ಎ' ನು ಮರಣಶಾಸನ ಕರ್ತನು ಉಯಿಲು ಮಾಡುವ ಸಕ್ಷಮತೆಯನ್ನು ಪ್ರಶ್ನಿಸಿದರೆ ಎಸ್ಟೇಟು 'ಬಿ' ನಿಗೆ ಹೋಗತಕ್ಕುದೆಂಬ ಷರತ್ತಿನೊಂದಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನು ಉಯಿಲನ್ನು ಮಾಡಲು ಮರಣಶಾಸನ ಕರ್ತನ ಸಕ್ಷಮತೆಯನ್ನು ಪ್ರಶ್ನಿಸುತ್ತಾನೆ. ಹೀಗಾಗಿ ಆ ಎಸ್ಟೇಟು 'ಬಿ' ನಿಗೆ ಹೋಗುತ್ತದೆ.

(iii) ಒಂದು ಹಣದ ಮೊತ್ತವನ್ನು 'ಎ' ನಿಗೆ ಜೀವನ ಪರ್ಯಂತ ಮತ್ತು ಅವನ ಮರಣಾನಂತರ 'ಬಿ' ನಿಗೆ ಮತ್ತು 'ಬಿ' ನು ಒಬ್ಬ ಮಗನನ್ನು ಬಿಟ್ಟು ಮರಣ ಹೊಂದಿದ್ದರೆ ಅಂಥ ಮಗನು 'ಬಿ' ನ ಬದಲಾಗಿ ಪಡೆಯಬೇಕೆಂದು ಮರಣಶಾಸನದ ಮೂಲಕ ಕೊಡಲಾಗಿದೆ. 'ಬಿ' ನು ಮರಣಶಾಸನದ ಸ್ವತ್ತಿನಲ್ಲಿ ನಿಹಿತ ಹಿತಾಸಕ್ತಿಯನ್ನು 'ಎ' ನ ಜೀವಿತ ಕಾಲದಲ್ಲಿ ಅವನು ಒಬ್ಬ ಮಗನನ್ನು ಬಿಟ್ಟು ಮೃತನಾದರೆ ಕಳೆದುಕೊಳ್ಳಬೇಕೆಂಬ ಷರತ್ತಿಗೆ ಒಳಪಟ್ಟು ತೆಗೆದುಕೊಳ್ಳುತ್ತಾನೆ.

(iv) ಹಣದ ಒಂದು ಮೊತ್ತವನ್ನು 'ಎ' ಮತ್ತು 'ಬಿ' ರಿಗೆ ಮತ್ತು ಅವರಲ್ಲೊಬ್ಬರು 'ಸಿ' ನ ಜೀವಿತ ಕಾಲದಲ್ಲಿ ಮರಣ ಹೊಂದಿದರೆ 'ಸಿ' ನ ಮರಣದ ಕಾಲದಲ್ಲಿ ಉತ್ತರ ಜೀವಿಯಾಗಿರುವವನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ಮತ್ತು 'ಬಿ' ಇಬ್ಬರು 'ಸಿ' ನಿಗಿಂತ ಮೊದಲೇ ಮರಣ ಹೊಂದುತ್ತಾರೆ, ಇನ್ನೊಬ್ಬರಿಗೆ ಸೇರತಕ್ಕ ದಾನವು ಪರಿಣಾಮಕಾರಿಯಾಗದು. ಆದರೆ 'ಎ' ನ ಪ್ರತಿನಿಧಿಯು ಹಣದ ಒಂದು ಅರ್ಧವನ್ನು ತೆಗೆದುಕೊಳ್ಳುತ್ತಾನೆ ಮತ್ತು 'ಬಿ' ನ ಪ್ರತಿನಿಧಿಯು ಇನ್ನೊಂದು ಅರ್ಧವನ್ನು ತೆಗೆದುಕೊಳ್ಳುತ್ತಾನೆ.

(v) 'ಎ' ನು ಒಂದು ನಿಧಿಯ ಹಿತಾಸಕ್ತಿಯನ್ನು 'ಬಿ' ಳಿಗೆ ಜೀವನ ಪರ್ಯಂತ ಮರಣಶಾಸನದ ಮೂಲಕ ಕೊಡುತ್ತಾನೆ ಮತ್ತು ಅವಳು ಮರಣ ಹೊಂದಿದ ಮೇಲೆ ಆ ನಿಧಿಯನ್ನು ಅವಳ ಮೂರು ಮಕ್ಕಳ ನಡುವೆ ಅಥವಾ ಅವಳ ಮರಣದ ಕಾಲದಲ್ಲಿ ಅವರಲ್ಲಿ ಬದುಕಿರುವಂಥವರಲ್ಲಿ ಸಮನಾಗಿ ಹಂಚತಕ್ಕುದೆಂದು ನಿರ್ದೇಶಿಸುತ್ತಾನೆ. 'ಬಿ' ಳ ಎಲ್ಲ ಮಕ್ಕಳು ಅವಳ ಜೀವಿತ ಕಾಲದಲ್ಲಿ ಮರಣ ಹೊಂದುತ್ತಾರೆ. ಇನ್ನೊಬ್ಬರಿಗೆ ಸೇರತಕ್ಕ ಮರಣಶಾಸನ ದಾನವು ಪರಿಣಾಮಕಾರಿಯಾಗದು. ಆದರೆ ಆ ಮಕ್ಕಳ ಹಿತಾಸಕ್ತಿಗಳು ಅವರ ಪ್ರತಿನಿಧಿಗಳಿಗೆ ಹೋಗುತ್ತದೆ.

132. ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸುವುದು:- 131 ನೇ ಪ್ರಕರಣದ ಮೂಲಕ ಉದ್ದೇಶಿಸಿದ ಬಗೆಯ ತರುವಾಯದ ಮರಣಶಾಸನ ದಾನವು ಆ ಷರತ್ತನ್ನು ಕಟ್ಟುನಿಟ್ಟಾಗಿ ಈಡೇರಿಸಿದ ಹೊರತು ಪರಿಣಾಮಕಾರಿಯಾಗದು.

ದೃಷ್ಟಾಂತಗಳು

(i) ಒಂದು ಮರಣಶಾಸನವನ್ನು 'ಎ' ನಿಗೆ ಅವನು 'ಬಿ', 'ಸಿ' ಅಥವಾ 'ಡಿ' ಗಳ ಸಮ್ಮತಿಯಿಲ್ಲದೆ ಮದುವೆಯಾದರೆ ಮರಣಶಾಸನ ಸ್ವತ್ತು 'ಇ' ನಿಗೆ ಹೋಗತಕ್ಕುದೆಂಬ ಷರತ್ತಿನೊಂದಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಡಿ' ನು ಮರಣ ಹೊಂದುತ್ತಾನೆ. 'ಎ' ನು 'ಬಿ' ಮತ್ತು 'ಸಿ' ಇವರ ಸಮ್ಮತಿಯಿಲ್ಲದೆ ಮದುವೆಯಾದರೂ 'ಇ' ನಿಗೆ ಕೊಟ್ಟ ದಾನವು ಪರಿಣಾಮಕಾರಿಯಾಗುವುದಿಲ್ಲ.

(ii) ಒಂದು ಮರಣಶಾಸನ ಸ್ವತ್ತನ್ನು 'ಎ' ನಿಗೆ ಅವನು 'ಬಿ' ನ ಸಮ್ಮತಿಯಿಲ್ಲದೆ ಮದುವೆಯಾದರೆ ಆ ಮರಣಶಾಸನ ಸ್ವತ್ತು 'ಸಿ' ನಿಗೆ ಹೋಗತಕ್ಕುದು ಎಂಬ ಷರತ್ತಿನೊಂದಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನು 'ಬಿ' ನ ಸಮ್ಮತಿಯೊಂದಿಗೆ ಮದುವೆಯಾಗುತ್ತಾನೆ. ಅವನು ಆ ತರುವಾಯ ವಿಧುರನಾಗುತ್ತಾನೆ ಮತ್ತು 'ಬಿ' ನ ಸಮ್ಮತಿಯಿಲ್ಲದೆ ಪುನಃ ಮದುವೆಯಾಗುತ್ತಾನೆ. 'ಸಿ' ನಿಗೆ ಕೊಟ್ಟ ಮರಣಶಾಸನವು ಪರಿಣಾಮಕಾರಿಯಾಗುವುದಿಲ್ಲ.

(iii) ಒಂದು ಮರಣಶಾಸನ ಸ್ವತ್ತನ್ನು 'ಎ' ನಿಗೆ ಅವನಿಗೆ 18 ವರ್ಷ ವಯಸ್ಸಾದಾಗ ಅಥವಾ ಅವನು ಮದುವೆಯಾದಾಗ ಸೇರಬೇಕೆಂದು ಮರಣ ಶಾಸನದ ಮೂಲಕ ಕೊಡಲಾಗಿದೆ, 'ಎ' ನು 18 ವರ್ಷ ತುಂಬುವುದಕ್ಕೆ ಮುಂಚೆ ಮರಣ ಹೊಂದಿದರೆ ಅಥವಾ 'ಬಿ' ಸಮ್ಮತಿಯಿಲ್ಲದೆ ಮದುವೆಯಾದರೆ ಮರಣಶಾಸನ ಸ್ವತ್ತು 'ಸಿ' ನಿಗೆ ಹೋಗತಕ್ಕುದೆಂಬ ಷರತ್ತು ಅದಕ್ಕೆ ಇರುತ್ತದೆ. 'ಎ' ನು 18 ವರ್ಷ ತುಂಬುವ ಮುಂಚೆ 'ಬಿ' ನ ಸಮ್ಮತಿ ಇಲ್ಲದೆಯೆ ಮದುವೆಯಾಗುತ್ತಾನೆ. 'ಸಿ' ನಿಗೆ ಕೊಟ್ಟ ಮರಣಶಾಸನ ದಾನವು ಪರಿಣಾಮಕಾರಿಯಾಗುತ್ತದೆ.

133. ಮೂಲ ಮರಣಶಾಸನ ದಾನವು ಎರಡನೆಯದರ ಅಸಿಂಧುತ್ವದ ಕಾರಣದಿಂದಾಗಿ ಬಾಧಕಗೊಳ್ಳದಿರುವುದು:- ತರುವಾಯದ ಮರಣಶಾಸನ ದಾನವು ಸಿಂಧುವಾಗದಿದ್ದರೆ ಆ ಮೂಲಕ ಮೂಲ ಮರಣಶಾಸನ ದಾನವು ಬಾಧಕಗೊಳ್ಳುವುದಿಲ್ಲ.

ದೃಷ್ಟಾಂತಗಳು

(i) 'ಎ' ನು ಒಂದು ನಿರ್ದಿಷ್ಟ ದಿವಸ ಒಂದು ಗಂಟೆಯಲ್ಲಿ 100 ಮೈಲಿಗಳನ್ನು ನಡೆಯದಿದ್ದರೆ 'ಎಸ್ಟೇಟು' 'ಬಿ' ನಿಗೆ ಹೋಗತಕ್ಕುದು ಎಂಬ ಹೆಚ್ಚಿನ ಷರತ್ತು ಸೇರಿಸಿ 'ಎ' ನಿಗೆ ಅವನ ಜೀವನ ಪರ್ಯಂತ ಒಂದು ಎಸ್ಟೇಟನ್ನು ಮರಣ ಶಾಸನದ ಮೂಲಕ ಕೊಡಲಾಗಿದೆ. ಆ ಷರತ್ತು ಶೂನ್ಯವಾಗಿದ್ದು ಆ ಉಯಿಲಿನಲ್ಲಿ ಯಾವುದೇ ಷರತ್ತನ್ನು ಸೇರಿಸಿಲ್ಲದಿದ್ದರೆ ಹೇಗೋ ಹಾಗೆ 'ಎ' ನು ತನ್ನ ಎಸ್ಟೇಟನ್ನು ಉಳಿಸಿಕೊಳ್ಳುತ್ತಾನೆ.

(ii) 'ಎ' ಳು ತನ್ನ ಗಂಡನನ್ನು ತ್ಯಜಿಸದಿದ್ದರೆ 'ಬಿ' ನಿಗೆ ಸೇರುವಂತೆ ಒಂದು ಎಸ್ಟೇಟನ್ನು ಅವಳ ಜೀವನ ಪರ್ಯಂತ ಮರಣಶಾಸನದ ಮೂಲಕ ಕೊಡಲಾಗಿದೆ. ಉಯಿಲಿನಲ್ಲಿ ಯಾವುದೇ ಷರತ್ತನ್ನು ಸೇರಿಸಿಲ್ಲದಿದ್ದರೆ ಹೇಗೋ ಹಾಗೆ 'ಎ' ಳು ಅವಳ ಜೀವನ ಪರ್ಯಂತ ಆ ಎಸ್ಟೇಟಿಗೆ ಹಕ್ಕುಳ್ಳವಳಾಗುತ್ತಾಳೆ.

(iii) 'ಎ' ನು ಮದುವೆಯಾದರೆ 'ಬಿ' ನ ಹಿರಿಯ ಮಗನಿಗೆ ಜೀವನ ಪರ್ಯಂತ ಸೇರುವಂತೆ ಒಂದು ಎಸ್ಟೇಟನ್ನು 'ಎ' ನಿಗೆ ಅವನ ಜೀವನ ಪರ್ಯಂತ ಮರಣಶಾಸನದ ಮೂಲಕ ಕೊಡಲಾಗಿದೆ. ಮರಣಶಾಸನ ಕರ್ತನ ಮರಣ ದಿನಾಂಕದಂದು 'ಬಿ' ನಿಗೆ ಯಾವ ಮಗನೂ ಇರಲಿಲ್ಲ. ಇನ್ನೊಬ್ಬರಿಗೆ ಸೇರತಕ್ಕ ಮರಣಶಾಸನದಾನವು 105ನೇ ಪ್ರಕರಣದ ಮೇರೆಗೆ ಶೂನ್ಯವಾಗಿದೆ. ಆದ್ದರಿಂದ 'ಬಿ' ನು ಆ ಎಸ್ಟೇಟಿಗೆ ತನ್ನ ಜೀವನ ಪರ್ಯಂತ ಹಕ್ಕುಳ್ಳವನಾಗುತ್ತಾನೆ.

134. ನಿರ್ದಿಷ್ಟ ಅನಿಶ್ಚಿತ ಘಟನೆಯು ಸಂಭವಿಸುವ ಅಥವಾ ಸಂಭವಿಸದಿರುವ ಪಕ್ಷದಲ್ಲಿ ಮರಣಶಾಸನ ದಾನವು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕುದೆಂಬ ಷರತ್ತುಳ್ಳ ಮರಣಶಾಸನದಾನ:- ನಿರ್ದಿಷ್ಟ ಅನಿಶ್ಚಿತ ಘಟನೆಯು ಸಂಭವಿಸುವ ಅಥವಾ ನಿರ್ದಿಷ್ಟ ಅನಿಶ್ಚಿತ ಘಟನೆಯು ಸಂಭವಿಸದಿರುವ ಪಕ್ಷದಲ್ಲಿ ಮರಣಶಾಸನ ದಾನವು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕುದೆಂಬ ಹೆಚ್ಚಿನ ಷರತ್ತಿನೊಂದಿಗೆ ಅದನ್ನು ಮಾಡಬಹುದು.

ದೃಷ್ಟಾಂತಗಳು

(i) ಒಂದು ಎಸ್ಟೇಟನ್ನು 'ಎ' ನಿಗೆ ಅವನ ಜೀವನ ಪರ್ಯಂತ, ಅವನು ಒಂದು ನಿಶ್ಚಿತ ಕಾಡನ್ನು ಕಡಿದು ಹಾಕಿದ ಪಕ್ಷದಲ್ಲಿ ಮರಣಶಾಸನ ದಾನವು ಯಾವುದೇ ಪರಿಣಾಮ ಹೊಂದುವುದು ನಿಂತಹೋಗತಕ್ಕುದೆಂಬ ಷರತ್ತಿನೊಂದಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನು ಆ ಕಾಡನ್ನು ಕಡಿದು ಹಾಕುತ್ತಾನೆ. ಅವನು ಆ ಎಸ್ಟೇಟಿನಲ್ಲಿ ತನ್ನ ಆಜೀವ ಹಿತಾಸಕ್ತಿಯನ್ನು ಕಳೆದುಕೊಳ್ಳುತ್ತಾನೆ.

(ii) ಒಂದು ಎಸ್ಟೇಟನ್ನು 'ಎ' ನಿಗೆ ಮರಣಶಾಸನದಲ್ಲಿ ಹೆಸರಿಸಿದ ನಿರ್ವಾಹಕರ ಸಮ್ಮತಿಯಿಲ್ಲದೆ 25 ವರ್ಷ ವಯಸ್ಸಿನೊಳಗೆ ಅವನು ಮದುವೆಯಾದರೆ ಆ ಎಸ್ಟೇಟು ಅವನಿಗೆ ಸೇರಿರುವುದು ನಿಂತುಹೋಗತಕ್ಕುದು ಎಂಬ ಷರತ್ತಿನೊಂದಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನು 25 ವರ್ಷ ವಯಸ್ಸು ತುಂಬುವ ಮುಂಚೆ ನಿರ್ವಾಹಕರ ಸಮ್ಮತಿಯಿಲ್ಲದೆ ಮದುವೆಯಾಗುತ್ತಾನೆ. ಆ ಎಸ್ಟೇಟು ಅವನಿಗೆ ಸೇರಿರುವುದು ನಿಂತುಹೋಗುತ್ತದೆ.

(iii) ಒಂದು ಎಸ್ಟೇಟನ್ನು 'ಎ' ನಿಗೆ, ಮರಣಶಾಸನ ಕರ್ತನ ತರುವಾಯ ಮೂರು ವರ್ಷದ ಒಳಗಾಗಿ ಅವನು ಇಂಗ್ಲೆಂಡಿಗೆ ಹೋಗದಿದ್ದರೆ ಎಸ್ಟೇಟಿನಲ್ಲಿನ ಅವನ ಹಿತಾಸಕ್ತಿಯು ನಿಂತುಹೋಗತಕ್ಕುದು ಎಂಬ ಷರತ್ತಿನೊಂದಿಗೆ ಮರಣ ಶಾಸನದ ಮೂಲಕ ಕೊಡಲಾಗಿದೆ 'ಎ' ನು ನಿಯಮಿಸಿದ ಕಾಲದೊಳಗೆ ಇಂಗ್ಲೆಂಡಿಗೆ ಹೋಗುವುದಿಲ್ಲ. ಆದ್ದರಿಂದ ಎಸ್ಟೇಟಿನಲ್ಲಿನ ಅವನ ಹಿತಾಸಕ್ತಿಯು ನಿಂತುಹೋಗುತ್ತದೆ.

(iv) ಒಂದು ಎಸ್ಟೇಟನ್ನು 'ಎ' ಳಿಗೆ ಅವಳು ಸನ್ಯಾಸಿನಿಯಾದರೆ, ಅವಳು ಆ ಎಸ್ಟೇಟಿನಲ್ಲಿ ಯಾವುದೇ ಹಿತಾಸಕ್ತಿಯನ್ನು ಹೊಂದಿರುವುದು ನಿಂತುಹೋಗತಕ್ಕುದು ಎಂಬ ಷರತ್ತಿನೊಂದಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ಳು ಸನ್ಯಾಸಿನಿಯಾಗುತ್ತಾಳೆ, ಅವಳು ಉಯಿಲಿನಲ್ಲಿರುವ ತನ್ನ ಹಿತಾಸಕ್ತಿಯನ್ನು ಕಳೆದುಕೊಳ್ಳುತ್ತಾಳೆ.

(v) ಒಂದು ನಿಧಿಯನ್ನು 'ಎ' ನಿಗೆ ಅವನ ಜೀವನ ಪರ್ಯಂತ ಮತ್ತು ಅವನ ಮರಣಾನಂತರ 'ಬಿ' ಳು ಆಗ ಬದುಕಿದ್ದರೆ ಅವಳಿಗೆ ಸೇರುವಂತೆ, 'ಬಿ' ಳು ಸನ್ಯಾಸಿನಿಯಾದರೆ ಅವಳಿಗೆ ಕೊಟ್ಟ ಮರಣ ಶಾಸನದಾನವು ಯಾವುದೇ ಪರಿಣಾಮ ಹೊಂದಿರುವುದು ನಿಂತುಹೋಗತಕ್ಕುದು ಎಂಬ ಷರತ್ತಿನೊಂದಿಗೆ ಮರಣಶಾಸನದ ಮೂಲಕ ಕೊಡಲಾಗಿದೆ. 'ಬಿ' ಳು 'ಎ' ನ ಜೀವಿತ ಕಾಲದಲ್ಲಿ ಸನ್ಯಾಸಿನಿಯಾಗುತ್ತಾಳೆ. ಆ ಮೂಲಕ ಅವಳು ಆ ನಿಧಿಯಲ್ಲಿನ ತನ್ನ ಅವಲಂಬಿತ ಹಿತಾಸಕ್ತಿಯನ್ನು ಕಳೆದುಕೊಳ್ಳುತ್ತಾಳೆ.

135. ಅಂಥ ಷರತ್ತು 120ನೇ ಪ್ರಕರಣದ ಮೇರೆಗೆ ಅಸಿಂಧುವಾಗದಿರುವುದು:- ಒಂದು ಮರಣಶಾಸನ ದಾನವು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕುದು ಎಂಬ ಷರತ್ತು ಸಿಂಧುವಾಗಬೇಕಾದರೆ, ಆ ಷರತ್ತು ಯಾವ ಘಟನೆಗೆ ಸಂಬಂಧಿಸಿರುವುದೋ ಆ ಘಟನೆಯು 120ನೇ ಪ್ರಕರಣದಲ್ಲಿ ಉದ್ದೇಶಿಸಲಾದ ಕಾನೂನು ಸಮ್ಮತವಾಗಿ ಮರಣಶಾಸನದ ಷರತ್ತು ಆಗುವ ಘಟನೆಯಾಗಿರುವುದು ಅವಶ್ಯ.

136. ಯಾವ ಕಾರ್ಯಕ್ಕಾಗಿ ಯಾವುದೇ ಕಾಲವನ್ನು ನಿಗದಿಪಡಿಸಿಲ್ಲವೋ ಮತ್ತು ಯಾವ ಕಾರ್ಯವನ್ನು ನೆರವೇರಿಸದಿದ್ದರೆ ವಸ್ತು ವಿಷಯವು ಬೇರೊಬ್ಬರಿಗೆ ಹೋಗುವುದೋ ಆ ಯಾವುದೇ ಕಾರ್ಯವನ್ನು ಲೆಗಟಿಯು ಅಸಾಧ್ಯವನ್ನಾಗಿಸುವ ಅಥವಾ ಅನಿರ್ದಿಷ್ಟವಾಗಿ ಮುಂದೂಡುವುದರ ಪರಿಣಾಮ:- ಲೆಗಟಿಯು ಒಂದು ನಿಶ್ಚಿತ ಕಾರ್ಯವನ್ನು ನೆರವೇರಿಸಿದ ಹೊರತು ಮರಣಶಾಸನದ ದಾನದ ವಸ್ತು ವಿಷಯವು ಇನ್ನೊಬ್ಬ ವ್ಯಕ್ತಿಗೆ ಹೋಗತಕ್ಕುದೆಂಬ ಅಥವಾ ಮರಣಶಾಸನ ದಾನವು ಪರಿಣಾಮ ಹೊಂದಿರುವುದು ನಿಂತುಹೋಗತಕ್ಕುದೆಂಬ ಹೆಚ್ಚಿನ ಷರತ್ತಿನೊಂದಿಗೆ ಮರಣಶಾಸನದ ದಾನವನ್ನು ಮಾಡಿರುವಲ್ಲಿ, ಆದರೆ ಆ ಕಾರ್ಯವನ್ನು ನೆರವೇರಿಸುವುದಕ್ಕಾಗಿ ಯಾವುದೇ ಕಾಲವನ್ನು ನಿರ್ದಿಷ್ಟಪಡಿಸದಿರುವಲ್ಲಿ, ಆಗ ಅಗತ್ಯಪಡಿಸಿದ ಕಾರ್ಯದ ನೆರವೇರಿಕೆಯನ್ನು ಅಸಾಧ್ಯವನ್ನಾಗಿಸುವ ಅಥವಾ ಅದನ್ನು ಅನಿರ್ದಿಷ್ಟವಾಗಿ ಮುಂದೂಡುವಂಥ ಯಾವುದೇ ಕ್ರಮವನ್ನು ಲೆಗಟಿಯು ಕೈಗೊಂಡರೆ, ಮರಣಶಾಸನ ಸ್ವತ್ತು ಲೆಗಟಿಯು ಅಂಥ ಕಾರ್ಯವನ್ನು ನೆರವೇರಿಸದೆ ಮೃತನಾಗಿದ್ದರೆ ಹೇಗೋ ಹಾಗೆ ಬೇರೊಬ್ಬರಿಗೆ ಹೋಗತಕ್ಕುದು.

ದೃಷ್ಟಾಂತಗಳು

(i) ಒಂದು ಮರಣಶಾಸನ ದಾನವನ್ನು 'ಎ' ನಿಗೆ ಅವನು ಸೈನ್ಯಕ್ಕೆ ಸೇರದಿದ್ದರೆ, ಮರಣಶಾಸನ ದಾನವು 'ಬಿ' ನಿಗೆ ಹೋಗತಕ್ಕುದು ಎಂಬ ಷರತ್ತಿನೊಂದಿಗೆ ಮಾಡಲಾಗಿದೆ. 'ಎ' ನು ಧರ್ಮದೀಕ್ಷೆಯನ್ನು ತೆಗೆದುಕೊಳ್ಳುತ್ತಾನೆ ಮತ್ತು ಆ ಮೂಲಕ ಆ ಷರತ್ತನ್ನು ಅವನು ಈಡೇರಿಸುವುದು ಅಸಾಧ್ಯವಾಗುವಂತೆ ಮಾಡುತ್ತಾನೆ. ಆಗ 'ಬಿ' ನು ಮರಣಶಾಸನ ಸ್ವತ್ತನ್ನು ಸ್ವೀಕರಿಸಲು ಹಕ್ಕುಳ್ಳವನಾಗುತ್ತಾನೆ.

(ii) 'ಎ' ನು 'ಬಿ' ನ ಮಗಳನ್ನು ಮದುವೆಯಾಗದಿದ್ದರೆ ಮರಣಶಾಸನ ದಾನವು ಯಾವುದೇ ಪರಿಣಾಮವನ್ನು ಹೊಂದುವುದು ನಿಂತುಹೋಗತಕ್ಕುದು ಎಂಬ ಷರತ್ತಿನೊಂದಿಗೆ ಒಂದು ಮರಣಶಾಸನ ದಾನವನ್ನು 'ಎ' ನಿಗೆ ಕೊಡಲಾಗಿದೆ. 'ಎ' ನು

ಒಬ್ಬ ಅಪರಿಚಿತಳನ್ನು ಮದುವೆಯಾಗುತ್ತಾನೆ. ಮತ್ತು ಆ ಮೂಲಕ ಆ ಷರತ್ತುಗಳ ಈಡೇರಿಕೆಯನ್ನು ಅನಿರ್ದಿಷ್ಟವಾಗಿ ಮುಂದೂಡುತ್ತಾನೆ. ಮರಣಶಾಸನದ ದಾನವು ಪರಿಣಾಮಕಾರಿಯಾಗುವುದು ನಿಂತುಹೋಗತಕ್ಕುದು.

**137. ಮುಂಚಿನ ಅಥವಾ ತರುವಾಯದ ಷರತ್ತನ್ನು ನಿರ್ದಿಷ್ಟಪಡಿಸಿದ ಕಾಲದೊಳಗೆ ನೆರವೇರಿಸುವುದು ಮೋಸದ ಸಂದರ್ಭದಲ್ಲಿ ಇನ್ನೂ ಹೆಚ್ಚಿನ ಕಾಲ:-** ಮರಣಶಾಸನ ಸ್ವತ್ತನ್ನು ಉಪಯೋಗಿಸುವುದಕ್ಕೆ ಮುಂಚೆ ನೆರವೇರಿಸಬೇಕಾದ ಷರತ್ತಾಗಿ ಅಥವಾ ಯಾವ ಷರತ್ತನ್ನು ನೆರವೇರಿಸದಿದ್ದರೆ ಮರಣಶಾಸನ ಸ್ವತ್ತಿನ ವಸ್ತು ವಿಷಯವು ಬೇರೊಬ್ಬ ವ್ಯಕ್ತಿಗೆ ಹೋಗುವುದೋ ಅಥವಾ ಮರಣಶಾಸನ ದಾನವು ಪರಿಣಾಮಕಾರಿಯಾಗಿರುವುದು ನಿಂತು ಹೋಗುವುದೋ ಆ ಷರತ್ತಾಗಿ, ಲೆಗಟಿಯ ಒಂದು ಕಾರ್ಯವನ್ನು ನಿರ್ದಿಷ್ಟಪಡಿಸಿದ ಕಾಲದೊಳಗೆ ನೆರವೇರಿಸಬೇಕೆಂದು ಉಯಿಲು ಅಗತ್ಯಪಡಿಸಿರುವಲ್ಲಿ, ಆ ಕಾರ್ಯದ ನೆರವೇರಿಕೆಯನ್ನು ಮೋಸದಿಂದ ಪ್ರತಿಬಂಧಿಸಿದ್ದ ಹೊರತು, ಅದನ್ನು ನಿರ್ದಿಷ್ಟಪಡಿಸಿದ ಕಾಲದೊಳಗೆ ನೆರವೇರಿಸಬೇಕು ಮತ್ತು ಅಂಥ ಸಂದರ್ಭದಲ್ಲಿ ಅಂಥ ಮೋಸದಿಂದುಂಟಾದ ವಿಳಂಬವನ್ನು ತುಂಬಿಕೊಡಲು ಅಗತ್ಯವಾದ ಹೆಚ್ಚಿನ ಕಾಲಾವಕಾಶವನ್ನು ಕೊಡತಕ್ಕುದು.

## ಅಧ್ಯಾಯ - XII

## ವಿನಿಯೋಗ ಅಥವಾ ಉಪಭೋಗದ ಸಂಬಂಧದಲ್ಲಿ ನಿರ್ದೇಶನಗಳಿಂದ ಕೂಡಿದ ಮರಣಶಾಸನ ದಾನಗಳ ಬಗ್ಗೆ

138. ಯಾವನೇ ವ್ಯಕ್ತಿಗೆ ಅಥವಾ ಅವನ ಪ್ರಯೋಜನಕ್ಕಾಗಿ ಮಾಡಿದ ನಿಧಿಯ ನಿರುಪಾಧಿಕ ಮರಣಶಾಸನ ದಾನವನ್ನು ಅನುಸರಿಸಿ ಅದನ್ನು ವಿಶಿಷ್ಟ ರೀತಿಯಲ್ಲಿ ವಿನಿಯೋಗಿಸತಕ್ಕುದೆಂಬ ಬಗ್ಗೆ ನಿರ್ದೇಶನ:- ಒಂದು ನಿಧಿಯನ್ನು ನಿರುಪಾಧಿಕವಾಗಿ ಯಾವನೇ ವ್ಯಕ್ತಿಗೆ ಅಥವಾ ಅವನ ಪ್ರಯೋಜನಕ್ಕಾಗಿ ಮರಣಶಾಸನ ದಾನದ ಮೂಲಕ ಕೊಟ್ಟಿರುವಲ್ಲಿ ಮತ್ತು ಉಯಿಲು ಆ ನಿಧಿಯನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ವಿನಿಯೋಗಿಸತಕ್ಕುದು ಅಥವಾ ಉಪಭೋಗಿಸತಕ್ಕುದು ಎಂಬ ನಿರ್ದೇಶನವನ್ನು ಒಳಗೊಂಡಿರುವಲ್ಲಿ ಲೆಗಟಿಯು ಆ ಉಯಿಲು ಅಂತಹ ಯಾವುದೇ ನಿರ್ದೇಶನವನ್ನು ಒಳಗೊಂಡಿರದಿದ್ದರೆ ಹೇಗೋ ಹಾಗೆ ಅದನ್ನು ಸ್ವೀಕರಿಸಲು ಹಕ್ಕುಳ್ಳವನಾಗತಕ್ಕುದು.

### ದೃಷ್ಟಾಂತ

ಹಣದ ಒಂದು ಮೊತ್ತವನ್ನು 'ಎ' ನಿಗೆ ಒಂದು ಗ್ರಾಮಾಂತರ ನಿವಾಸವನ್ನು ಖರೀದಿಸುವುದಕ್ಕಾಗಿ ಅಥವಾ 'ಎ' ನಿಗಾಗಿ ಒಂದು ವರ್ಷಾಸನವನ್ನು ಖರೀದಿಸುವುದಕ್ಕಾಗಿ ಅಥವಾ 'ಎ' ನನ್ನು ಯಾವುದೇ ವ್ಯವಹಾರದಲ್ಲಿ ತೊಡಗಿಸುವುದಕ್ಕಾಗಿ ಮರಣಶಾಸನದ ಮೂಲಕ ಕೊಡಲಾಗಿದೆ. 'ಎ' ನು ಮರಣಶಾಸನ ಸ್ವತ್ತನ್ನು ಹಣದ ರೂಪದಲ್ಲಿ ಸ್ವೀಕರಿಸಲು ಬಯಸುತ್ತಾನೆ. ಅವನು ಹಾಗೆ ಆ ಹಣವನ್ನು ಸ್ವೀಕರಿಸಲು ಹಕ್ಕುಳ್ಳವನಾಗುತ್ತಾನೆ.

139. ನಿರುಪಾಧಿಕ ಮರಣಶಾಸನ ದಾನದ ಉಪಭೋಗದ ವಿಧಾನವನ್ನು ಲೆಗಟಿಗೆ ನಿರ್ದಿಷ್ಟ ಪ್ರಯೋಜನವನ್ನು ದೊರಕಿಸಿಕೊಡಲು ಮಿತಿಗೊಳಿಸಬೇಕೆಂಬ ನಿರ್ದೇಶನ:- ಒಬ್ಬ ಮರಣಶಾಸನ ಕರ್ತನು ಒಂದು ನಿಧಿಯನ್ನು ತನ್ನ ಸ್ವಂತ ಎಸ್ಟೇಟಿನಿಂದ ಬೇರ್ಪಡಿಸುವ ಹಾಗೆ ನಿರುಪಾಧಿಕವಾಗಿ ಮರಣಶಾಸನದ ಮೂಲಕ ಕೊಟ್ಟಿರುವಲ್ಲಿ ಮತ್ತು ಲೆಗಟಿಯು ಅದನ್ನು ಉಪಭೋಗಿಸುವ ವಿಧಾನವನ್ನು ಆ ಲೆಗಟಿಗೆ ನಿರ್ದಿಷ್ಟ ಪ್ರಯೋಜನವನ್ನು ದೊರಕಿಸಿಕೊಡುವ ಹಾಗೆ ಮಿತಿಗೊಳಿಸತಕ್ಕುದೆಂದು ನಿರ್ದೇಶಿಸಿರುವಲ್ಲಿ ಆ ಪ್ರಯೋಜನವನ್ನು ಲೆಗಟಿಯು ಪಡೆಯಲಾಗದಿದ್ದರೆ ಆ ಉಯಿಲು ಅಂಥ ಯಾವುದೇ ನಿರ್ದೇಶನವನ್ನು ಒಳಗೊಂಡಿಲ್ಲದಿದ್ದರೆ ಹೇಗೋ ಹಾಗೆ ಆ ನಿಧಿಯು ಅವನಿಗೆ ಸೇರುತ್ತದೆ.

### ದೃಷ್ಟಾಂತಗಳು

(i) 'ಎ' ನು ತನ್ನ ಸ್ವತ್ತಿನ ಶೇಷವನ್ನು ಅವನ ಹೆಣ್ಣು ಮಕ್ಕಳಲ್ಲಿ ಸಮನಾಗಿ ಹಂಚತಕ್ಕುದೆಂದು ಮರಣಶಾಸನದ ಮೂಲಕ ಕೊಟ್ಟಿದ್ದಾನೆ ಮತ್ತು ಹೆಣ್ಣು ಮಕ್ಕಳ ಪಾಲುಗಳು ಅವರ ಜೀವನ ಪರ್ಯಂತ ಕ್ರಮವಾಗಿ ಅವರಲ್ಲಿ ವಹಿಸಿಕೊಡತಕ್ಕುದೆಂದು ಮತ್ತು ಅವರ ಮರಣಾನಂತರ ಅವರ ಮಕ್ಕಳಿಗೆ ಸಂದಾಯವಾಗತಕ್ಕುದು ಎಂದು ನಿರ್ದೇಶಿಸುತ್ತಾನೆ. ಎಲ್ಲ ಹೆಣ್ಣು ಮಕ್ಕಳೂ ಮದುವೆಯಾಗದೆ ಮರಣ ಹೊಂದುತ್ತಾರೆ. ಪ್ರತಿಯೊಬ್ಬ ಹೆಣ್ಣು ಮಗಳ ಪ್ರತಿನಿಧಿಗಳು ಆ ಶೇಷದಲ್ಲಿನ ಅವಳ ಪಾಲಿಗೆ ಹಕ್ಕುಳ್ಳವರಾಗುತ್ತಾರೆ.

(ii) 'ಎ' ನು ತನ್ನ ಟ್ರಸ್ಟಿಗಳಿಗೆ ತನ್ನ ಮಗಳಿಗಾಗಿ ಒಂದು ಹಣದ ಮೊತ್ತವನ್ನು ಸಂಗ್ರಹಿಸಲು ನಿರ್ದೇಶಿಸುತ್ತಾನೆ ಮತ್ತು ಅವನು ಆ ತರುವಾಯ ಆ ನಿಧಿಯನ್ನು ತೊಡಗಿಸಿ ಅದರಿಂದ ಬರುವ ಆದಾಯವನ್ನು ಅವಳಿಗೆ ಅವಳ ಜೀವನ ಪರ್ಯಂತ ಸಂದಾಯ ಮಾಡತಕ್ಕುದೆಂದು ಮತ್ತು ಅವಳ ಮರಣಾನಂತರ ಮೂಲ ಧನವನ್ನು ಅವಳ ಮಕ್ಕಳಲ್ಲಿ ಹಂಚುತಕ್ಕದೆಂದು ನಿರ್ದೇಶಿಸುತ್ತಾನೆ. ಆ ಮಗಳು ಮಕ್ಕಳಿಲ್ಲದೆ ಮರಣ ಹೊಂದುತ್ತಾಳೆ. ಆಗ ಅವಳ ಪ್ರತಿನಿಧಿಗಳು ಆ ನಿಧಿಗೆ ಹಕ್ಕುಳ್ಳವರಾಗುತ್ತಾರೆ.

140. ಯಾವ ನಿರ್ದಿಷ್ಟ ಉದ್ದೇಶಗಳಲ್ಲಿ ಕೆಲವನ್ನು ಈಡೇರಿಸಲಾಗುವುದಿಲ್ಲವೋ ಆ ನಿರ್ದಿಷ್ಟ ಉದ್ದೇಶಗಳಿಗಾಗಿ ಮರಣಶಾಸನದ ಮೂಲಕ ನಿಧಿಯ ದಾನ:- ಮರಣಶಾಸನ ಕರ್ತನು ಒಂದು ನಿಧಿಯನ್ನು ತನ್ನ ಸ್ವಂತ ಎಸ್ಟೇಟಿನಿಂದ ಬೇರ್ಪಡಿಸುವ ಹಾಗೆ ನಿರುಪಾಧಿಕವಾಗಿ ಮರಣಶಾಸನದ ಮೂಲಕ ಕೊಡದಿರುವಲ್ಲಿ ಆದರೆ ಅದನ್ನು ಕೆಲವು ಉದ್ದೇಶಗಳಿಗಾಗಿ ಕೊಟ್ಟಿದ್ದು ಆ ಉದ್ದೇಶಗಳ ಭಾಗವನ್ನು ಈಡೇರಿಸಲಾಗದಿರುವಲ್ಲಿ ಆ ನಿಧಿಯು ಆ ಪೈಕಿ ಉಯಿಲಿನಲ್ಲಿ ಯೋಜಿಸಿದ ಉದ್ದೇಶಗಳಿಗಾಗಿ ವೆಚ್ಚ ಮಾಡದಿರುವಷ್ಟು ಭಾಗವು ಮರಣಶಾಸನ ಕರ್ತನ ಎಸ್ಟೇಟಿನ ಭಾಗವಾಗಿ ಉಳಿಯುತ್ತದೆ.

ದೃಷ್ಟಾಂತಗಳು

(i) 'ಎ' ನು ಅವನ ಟ್ರಸ್ಟಿಗಳು ಹಣದ ಒಂದು ಮೊತ್ತವನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಹೂಡತಕ್ಕುದೆಂದು ಮತ್ತು ಬಡ್ಡಿಯನ್ನು ತನ್ನ ಮಗನಿಗೆ ಜೀವನ ಪರ್ಯಂತ ಸಂದಾಯ ಮಾಡತಕ್ಕುದೆಂದು ಮತ್ತು ಅವನು ಮರಣ ಹೊಂದಿದ ಮೇಲೆ ಮೂಲ ಧನವನ್ನು ಅವನ ಮಕ್ಕಳಲ್ಲಿ ಹಂಚತಕ್ಕುದೆಂದು ನಿರ್ದೇಶಿಸುತ್ತಾನೆ. ಆ ಮಗನು ಮಕ್ಕಳಿಲ್ಲದೆ ಮರಣ ಹೊಂದುತ್ತಾನೆ. ಆ ನಿಧಿಯು ಮಗನ ಮರಣಾನಂತರ ಮರಣಶಾಸನಕರ್ತನ ಎಸ್ಟೇಟಿಗೆ ಸೇರುತ್ತದೆ.

(ii) 'ಎ' ನು ತನ್ನ ಎಸ್ಟೇಟಿನ ಶೇಷವನ್ನು ಅವನ ಹೆಣ್ಣು ಮಕ್ಕಳಲ್ಲಿ ಸಮನಾಗಿ ಹಂಚತಕ್ಕುದೆಂದು ಮರಣಶಾಸನದ ಮೂಲಕ ಕೊಡುತ್ತಾನೆ. ಮತ್ತು ಅವರ ಜೀವಿತ ಕಾಲದಲ್ಲಿ ಅವರು ಬಡ್ಡಿಯನ್ನು ಮಾತ್ರ ಪಡೆಯಬೇಕೆಂದು ಮತ್ತು ಅವರು ಮರಣ ಹೊಂದಿದ ಮೇಲೆ ಆ ನಿಧಿಯು ಅವರ ಮಕ್ಕಳಿಗೆ ಹೋಗತಕ್ಕುದೆಂದು ನಿರ್ದೇಶಿಸುತ್ತಾನೆ. ಆ ಹೆಣ್ಣು ಮಕ್ಕಳಿಗೆ ಮಕ್ಕಳಾಗಲಿಲ್ಲ. ಆದ್ದರಿಂದ ಆ ನಿಧಿಯು ಮರಣಶಾಸನ ಕರ್ತನ ಎಸ್ಟೇಟಿಗೆ ಸೇರುತ್ತದೆ.

## ಅಧ್ಯಾಯ - XIII

### ನಿರ್ವಾಹಕನಿಗೆ ಕೊಟ್ಟ ಮರಣಶಾಸನ ದಾನಗಳ ಬಗ್ಗೆ

141. ನಿರ್ವಾಹಕನಾಗಿ ಹೆಸರಿಸಲಾದ ಲೆಗಟಿಯು ನಿರ್ವಾಹಕನಾಗಿ ಕಾರ್ಯ ನಿರ್ವಹಿಸುವ ಆಶಯವನ್ನು ತೋರಿಸುವ ಹೊರತು ಮರಣಶಾಸನ ಸ್ವತ್ತನ್ನು ತೆಗೆದುಕೊಳ್ಳಲಾಗದು:- ಒಂದು ಮರಣಶಾಸನ ಸ್ವತ್ತನ್ನು ಉಯಿಲಿನಲ್ಲಿ, ನಿರ್ವಾಹಕನೆಂದು ಹೆಸರಿಸಿದ ವ್ಯಕ್ತಿಗೆ ಮರಣಶಾಸನದ ಮೂಲಕ ಕೊಟ್ಟಿದ್ದರೆ ಅವನು ಆ ಉಯಿಲನ್ನು ರುಜುವಾತುಪಡಿಸುವ ಅಥವಾ ನಿರ್ವಾಹಕನಾಗಿ ಕಾರ್ಯನಿರ್ವಹಿಸುವ ತನ್ನ ಆಶಯವನ್ನು ಅನ್ಯಥಾ ತೋರಿಸುವ ಹೊರತು ಆ ಮರಣಶಾಸನ ಸ್ವತ್ತನ್ನು ತೆಗೆದುಕೊಳ್ಳತಕ್ಕುದಲ್ಲ.

ದೃಷ್ಟಾಂತ

ಒಂದು ಮರಣಶಾಸನ ಸ್ವತ್ತನ್ನು ನಿರ್ವಾಹಕನೆಂದು ಹೆಸರಿಸಿದ 'ಎ' ನಿಗೆ ಕೊಡಲಾಗಿದೆ. 'ಎ' ನು ಉಯಿಲಿನಲ್ಲಿ ಒಳಗೊಂಡ ನಿರ್ದೇಶನಗಳಿಗೆ ಅನುಸಾರವಾಗಿ ಅಂತ್ಯ ಕ್ರಿಯೆಯನ್ನು ನಡೆಸಲು ಆದೇಶಿಸುತ್ತಾನೆ ಮತ್ತು ಮರಣಶಾಸನ ಕರ್ತನ ಮರಣಾನಂತರ ಕೆಲವು ದಿನಗಳಲ್ಲಿ ಉಯಿಲನ್ನು ರುಜುವಾತುಪಡಿಸದೆ ಮರಣ ಹೊಂದುತ್ತಾನೆ. 'ಎ' ನು ನಿರ್ವಾಹಕನಾಗಿ ಕಾರ್ಯನಿರ್ವಹಿಸುವ ಆಶಯವನ್ನು ತೋರಿಸಿದ್ದಾನೆ.

## ಅಧ್ಯಾಯ - XIV

### ನಿರ್ದಿಷ್ಟ ಮರಣಶಾಸನ ಸ್ವತ್ತುಗಳ ಬಗ್ಗೆ

142. ನಿರ್ದಿಷ್ಟ ಮರಣಶಾಸನ ಸ್ವತ್ತಿನ ಪರಿಭಾಷೆ:- ಮರಣಶಾಸನ ಕರ್ತನು ಯಾವನೇ ವ್ಯಕ್ತಿಗೆ ಅವನ ಸ್ವತ್ತಿನ ಇತರ ಎಲ್ಲಾ ಭಾಗಗಳಿಗಿಂತ ವಿಭಿನ್ನವಾದಂಥ ಅವನ ಸ್ವತ್ತಿನ ಒಂದು ನಿರ್ದಿಷ್ಟ ಭಾಗವನ್ನು ಮರಣಶಾಸನದ ಮೂಲಕ ಕೊಟ್ಟಿರುವಲ್ಲಿ ಆ ಮರಣಶಾಸನ ಸ್ವತ್ತು ನಿರ್ದಿಷ್ಟವಾದುದೆಂದು ಹೇಳಲಾಗುತ್ತದೆ.

ದೃಷ್ಟಾಂತಗಳು

(i) 'ಎ' ನು 'ಬಿ' ನಿಗೆ ಕೆಳಕಂಡವುಗಳನ್ನು ಮರಣಶಾಸನದ ಮೂಲಕ ಕೊಡುತ್ತಾನೆ, ಎಂದರೆ:-

" 'ಸಿ' ನು ನನಗೆ ಉಡುಗೊರೆಯಾಗಿ ಕೊಟ್ಟ ವಜ್ರದುಂಗುರ";

"ನನ್ನ ಚಿನ್ನದ ಸರ";

"ಒಂದು ನಿರ್ದಿಷ್ಟ ಉಣ್ಣೆಬೇಲು"

"ನಿರ್ದಿಷ್ಟ ಬಟ್ಟೆ ತುಂಡು"

"ನನ್ನ ಮರಣದ ಸಮಯದಲ್ಲಿ ಕಲ್ಕತ್ತಾದ ಎಮ್ ಬೀದಿಯಲ್ಲಿನ ನನ್ನ ವಾಸದ ಮನೆಯಲ್ಲಿ ಅಥವಾ ಅದರ ಸುತ್ತಮುತ್ತ ಇರುವ ನನ್ನ ಎಲ್ಲ ಮನೆಬಳಕೆಯ ಸರಕುಗಳು";

"ಒಂದು ನಿರ್ದಿಷ್ಟ ಪೆಟ್ಟಿಗೆಯಲ್ಲಿರುವ 1000 ರೂಪಾಯಿಗಳ ಮೊತ್ತ"

" 'ಬಿ' ನು ನನಗೆ ಕೊಡಲೇಬೇಕಾದಂಥ ಸಾಲದ ಮೊತ್ತ";

"ಕಲ್ಕತ್ತಾದಲ್ಲಿನ ನನ್ನ ವಸತಿ ಗೃಹದಲ್ಲಿರುವ ನನಗೆ ಸೇರಿದ ನನ್ನ ಎಲ್ಲಾ ಬಿಲ್ಲುಗಳು, ಬಂಧಪತ್ರಗಳು ಮತ್ತು ಭದ್ರತಾ ಪತ್ರಗಳು";

"ಕಲ್ಕತ್ತಾದಲ್ಲಿರುವ ನನ್ನ ಮನೆಯಲ್ಲಿರುವ ನನ್ನ ಎಲ್ಲಾ ಪೀಠೋಪಕರಣಗಳು";

"ಹೂಗ್ಲಿಯಲ್ಲಿ ಈಗ ಇರುವ ಒಂದು ನಿರ್ದಿಷ್ಟ ಹಡಗಿನಲ್ಲಿರುವ ನನ್ನ ಎಲ್ಲಾ ಸರಕುಗಳು" 'ಸಿ' ನ ಕೈಯಲ್ಲಿರುವಂಥ ನನ್ನ 2000 ರೂಪಾಯಿ";

"ಡಿ" ನ ಬಂಧಪತ್ರದ ಮೇಲೆ ನನಗೆ ಬರಬೇಕಾದ ಹಣ";

"ರಾಂಪುರ ಕಾರ್ಖಾನೆಯ ಮೇಲಿನ ನನ್ನ ಅಡಮಾನ";

"ರಾಂಪುರ ಕಾರ್ಖಾನೆಯ ನನ್ನ ಅಡಮಾನದ ಮೇಲೆ ನನಗೆ ಬರಬೇಕಾದ ಹಣದ ಅರ್ಧ ಭಾಗ";

"ಸಿ" ನಿಂದ ನನಗೆ ಬರಬೇಕಾದ ಸಾಲದ ಭಾಗವಾದ 1000 ರೂಪಾಯಿ";

"ಈಸ್ಟ್ ಇಂಡಿಯಾ ಸ್ಟಾಕ್‌ನಲ್ಲಿನ ನನ್ನ 1000 ಪೌಂಡುಗಳ ಬಂಡವಾಳ ಸ್ಟಾಕ್";

"ಕೇಂದ್ರ ಸರ್ಕಾರದ ಶೇಕಡಾ 4ರ ಸಾಲದಲ್ಲಿ 10,000 ರೂಪಾಯಿಗಳ ನನ್ನ ಪ್ರಾಮಿಸರಿ ನೋಟುಗಳು";

"ನನ್ನ ಮರಣಾನಂತರ ನನ್ನ ನಿರ್ವಾಹಕರು ದಿವಾಳಿ ಫರ್ಮಾದ 'ಡಿ' ಅಂಡ್ ಕಂಪನಿಯಿಂದ ನನಗೆ ಬರಬೇಕಾದ ಸಾಲಕ್ಕೆ ಸಂಬಂಧಿಸಿ ಸ್ವೀಕರಿಸಬಹುದಾದಂಥ ಹಣದ ಎಲ್ಲ ಮೊತ್ತಗಳು";

"ನನ್ನ ಮರಣದ ಸಮಯದಲ್ಲಿ ನನ್ನ ನೆಲಮಾಳಿಗೆಯಲ್ಲಿ ಇಟ್ಟಿರುವ ನನ್ನ ಎಲ್ಲ ವೈನು";

"ಬಿ' ನು ಆಯ್ಕೆ ಮಾಡಬಹುದಾದಂಥ ನನ್ನ ಕುದುರೆಗಳು";

"ಭಾರತದ ಇಂಪೀರಿಯಲ್ ಬ್ಯಾಂಕಿನಲ್ಲಿರುವ ನನ್ನ ಎಲ್ಲಾ ಷೇರುಗಳು";

"ನನ್ನ ಮರಣದ ಕಾಲದಲ್ಲಿ ನಾನು ಹೊಂದಿರಬಹುದಾದಂಥ ಭಾರತದ ಇಂಪೀರಿಯಲ್ ಬ್ಯಾಂಕಿನ ಎಲ್ಲಾ ನನ್ನ ಷೇರುಗಳು";

"ಕೇಂದ್ರ ಸರ್ಕಾರದ ಶೇಕಡಾ 51/2 ಯ ಸಾಲದಲ್ಲಿ ನಾನು ಹೊಂದಿರುವಂಥ ಹಣ";

"ನನ್ನ ಮರಣದ ಕಾಲದಲ್ಲಿ ನನಗೆ ಹಕ್ಕಿರತಕ್ಕಂಥ ಎಲ್ಲಾ ಸರ್ಕಾರೀ ಭದ್ರತಾ ಪತ್ರಗಳು";

ಈ ಮರಣಶಾಸನ ಸ್ವತ್ತುಗಳಲ್ಲಿ ಪ್ರತಿಯೊಂದು ನಿರ್ದಿಷ್ಟವಾದುದಾಗಿವೆ.

(ii) 'ಎ' ನು 10,000 ರೂಪಾಯಿಗಳು ಸರ್ಕಾರಿ ಪ್ರಾಮಿಸರಿ ನೋಟುಗಳನ್ನು ಹೊಂದಿದ್ದು 'ಬಿ' ನ ಪ್ರಯೋಜನಕ್ಕಾಗಿ "10,000 ರೂಪಾಯಿಗಳ ಸರ್ಕಾರಿ ಪ್ರಾಮಿಸರಿ ನೋಟುಗಳನ್ನು ನಂಬಿಕೆಯಿಂದ ಮಾರಾಟ ಮಾಡಲು" ಅವನ ಮರಣಶಾಸನದ ಮೂಲಕ ತನ್ನ ನಿರ್ವಾಹಕರಿಗೆ ಕೊಡುತ್ತಾನೆ. ಆ ಮರಣಶಾಸನ ಸ್ವತ್ತು ನಿರ್ದಿಷ್ಟವಾದುದಾಗಿದೆ.

(iii) 'ಎ' ನು ವಾರಣಾಸಿಯಲ್ಲಿ ಮತ್ತು ಇತರ ಸ್ಥಳಗಳಲ್ಲೂ ಸಹ ಸ್ವತ್ತನ್ನು ಹೊಂದಿದ್ದು 'ಬಿ' ನಿಗೆ ವಾರಣಾಸಿಯಲ್ಲಿನ ಅವನ ಎಲ್ಲಾ ಸ್ವತ್ತನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಆ ಮರಣಶಾಸನ ಸ್ವತ್ತು ನಿರ್ದಿಷ್ಟವಾದುದಾಗಿದೆ.

(iv) 'ಎ' ನು 'ಬಿ' ನಿಗೆ ಕೆಳಕಂಡವುಗಳನ್ನು ಮರಣಶಾಸನದ ಮೂಲಕ ಕೊಡುತ್ತಾನೆ, ಎಂದರೆ:-

ಕಲ್ಕತ್ತಾದಲ್ಲಿನ ಅವನ ಮನೆ;

ರಾಂಪುರದ ಅವನ ಜಮೀನ್ದಾರಿ;

ರಾಮನಗರದ ಅವನ ತಾಲೂಕು;

ಸಾಲ್ಕ್ಯದ ಅವನ ನೀಲಿ ಕಾರ್ಖಾನೆಯ ಅವನ ಗೇಣಿ;

ಅವನ 'ಡಬ್ಲ್ಯೂ' ಜಮೀನ್ದಾರಿಯ ಗೇಣಿಗಳಿಂದ 500 ರೂಪಾಯಿಗಳ ವರ್ಷಾಶನ;

'ಎ' ನು 'ಎಕ್ಸ್' ನಲ್ಲಿನ ಅವನ ಜಮೀನ್ದಾರಿಯನ್ನು ಮಾರಾಟ ಮಾಡಲು ಮತ್ತು ಆ ಉತ್ಪತ್ತಿಗಳನ್ನು 'ಬಿ' ನ ಪ್ರಯೋಜನಕ್ಕಾಗಿ ಹೂಡಲು ನಿರ್ದೇಶಿಸುತ್ತಾನೆ.

-ಈ ಎಲ್ಲಾ ಮರಣಶಾಸನ ದಾನಗಳು ನಿರ್ದಿಷ್ಟವಾದವು.

(v) 'ಎ' ನು ತನ್ನ ಉಯಿಲಿನ ಮೂಲಕ 'ವೈ' ನ ತನ್ನ ಜಮೀನ್ದಾರಿಯನ್ನು 'ಸಿ' ನಿಗೆ ಅವನ ಜೀವಿತ ಕಾಲದಲ್ಲಿ 1000 ರೂಪಾಯಿಗಳ ವರ್ಷಾಶನ ದೊರೆಯುವಂತೆ ಋಣಭಾರಕ್ಕೆ ಒಳಪಡಿಸುತ್ತಾನೆ. ಮತ್ತು ಈ ಋಣಭಾರಕ್ಕೆ ಒಳಪಟ್ಟು ಆ ಜಮೀನುದಾರಿಯನ್ನು 'ಡಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. ಈ ಮರಣಶಾಸನ ದಾನಗಳಲ್ಲಿ ಪ್ರತಿಯೊಂದು ನಿರ್ದಿಷ್ಟವಾದುದು.

(vi) ಹಣದ ಒಂದು ಮೊತ್ತವನ್ನು 'ಎ' ನು -

'ಬಿ' ನಿಗಾಗಿ ಕಲ್ಕತ್ತಾದಲ್ಲಿ ಒಂದು ಮನೆಯನ್ನು ಕೊಂಡುಕೊಳ್ಳಲು;

'ಬಿ' ನಿಗಾಗಿ ಫರೀದಾಪುರ ಜಿಲ್ಲೆಯಲ್ಲಿ ಎಸ್ಟೇಟನ್ನು ಕೊಂಡುಕೊಳ್ಳಲು;

'ಬಿ' ನಿಗಾಗಿ ಒಂದು ವಜ್ರದುಂಗುರವನ್ನು ಕೊಂಡುಕೊಳ್ಳಲು;

'ಬಿ' ನಿಗಾಗಿ ಒಂದು ಕುದುರೆಯನ್ನು ಕೊಂಡುಕೊಳ್ಳಲು;

'ಬಿ' ನಿಗಾಗಿ ಭಾರತದ ಇಂಪೀರಿಯಲ್ ಬ್ಯಾಂಕಿನಲ್ಲಿ ಷೇರುಗಳಲ್ಲಿ ಹೂಡುವುದಕ್ಕಾಗಿ;

'ಬಿ' ನಿಗಾಗಿ ಸರ್ಕಾರದ ಭದ್ರತೆಗಳಲ್ಲಿ ಹೂಡುವುದಕ್ಕಾಗಿ

- ಮರಣಶಾಸನದ ಮೂಲಕ ಕೊಡುತ್ತಾನೆ.

"ಎ" ನು 'ಬಿ' ನಿಗಾಗಿ ಒಂದು ವಜ್ರದುಂಗುರವನ್ನು";

"ಒಂದು ಕುದುರೆಯನ್ನು";

"10,000 ರೂಪಾಯಿಗಳ ಮೌಲ್ಯದ ಸರ್ಕಾರಿ ಭದ್ರತಾ ಪತ್ರಗಳನ್ನು";

"500 ರೂಪಾಯಿಗಳ ಒಂದು ವರ್ಷಾಶನವನ್ನು";

"ನಗದಾಗಿ ಸಂದಾಯ ಮಾಡಲು 2000 ರೂಪಾಯಿಗಳನ್ನು";

"ಶೇಕಡಾ ನಾಲ್ಕರ 5000 ರೂಪಾಯಿಗಳ ಸರ್ಕಾರಿ ಭದ್ರತಾಪತ್ರಗಳನ್ನು ಒದಗಿಸುವಷ್ಟು ಹಣವನ್ನು

-ಮರಣ ಶಾಸನದ ಮೂಲಕ ಕೊಡುತ್ತಾನೆ.

ಈ ಮರಣ ಶಾಸನ ದಾನಗಳು ನಿರ್ದಿಷ್ಟವಾದುವಲ್ಲ.

(vii) 'ಎ' ನು ಇಂಗ್ಲೆಂಡಿನಲ್ಲಿ ಸ್ವತ್ತನ್ನು ಹೊಂದಿದ್ದು ಮತ್ತು ಭಾರತದಲ್ಲಿ ಸ್ವತ್ತನ್ನು ಹೊಂದಿದ್ದು 'ಬಿ' ನಿಗೆ ಒಂದು ಮರಣಶಾಸನ ಸ್ವತ್ತನ್ನು ಮರಣಶಾಸನದ ಮೂಲಕ ಕೊಡುತ್ತಾನೆ ಮತ್ತು ಅದನ್ನು ಅವನು ಭಾರತದಲ್ಲಿ ಬಿಡಬಹುದಾದಂಥ ಸ್ವತ್ತಿನಿಂದ ಸಂದಾಯ ಮಾಡತಕ್ಕುದು ಎಂದು ನಿರ್ದೇಶಿಸುತ್ತಾನೆ. ಅವನು 'ಸಿ' ನಿಗೂ ಸಹ ಒಂದು ಮರಣಶಾಸನ ಸ್ವತ್ತನ್ನು ಮರಣಶಾಸನದ ಮೂಲಕ ಕೊಡುತ್ತಾನೆ ಮತ್ತು ಅದನ್ನು ಅವನು ಇಂಗ್ಲೆಂಡಿನಲ್ಲಿ ಬಿಡಬಹುದಾದಂಥ ಸ್ವತ್ತಿನಿಂದ ಸಂದಾಯ ಮಾಡತಕ್ಕುದು ಎಂದು ನಿರ್ದೇಶಿಸುತ್ತಾನೆ. ಈ ಮರಣ ಶಾಸನ ಸ್ವತ್ತುಗಳಲ್ಲಿ ಯಾವುದೂ ನಿರ್ದಿಷ್ಟವಾದುದಲ್ಲ.

143. ಉಯಿಲಿನಲ್ಲಿ ವಿವರಿಸಿದ ಸ್ಟಾಕು ಮುಂತಾದವುಗಳನ್ನು ಹೂಡಿದ ಅನಿಶ್ಚಿತ ಹಣದ ಮೊತ್ತದ ಮರಣಶಾಸನ ದಾನ:- ಒಂದು ಅನಿಶ್ಚಿತ ಹಣದ ಮೊತ್ತವನ್ನು ಮರಣಶಾಸನದ ಮೂಲಕ ಕೊಟ್ಟಿರುವಲ್ಲಿ ಆ ಹಣದ ಮೊತ್ತವನ್ನು ಹೂಡಿರುವ ಸ್ಟಾಕು, ನಿಧಿಗಳು ಅಥವಾ ಭದ್ರತಾ ಪತ್ರಗಳನ್ನು ಉಯಿಲಿನಲ್ಲಿ ವಿವರಿಸಿರುವ ಕಾರಣ ಮಾತ್ರದಿಂದ ಆ ಮರಣ ಸ್ವತ್ತು ನಿರ್ದಿಷ್ಟವಾದುದಾಗುವುದಿಲ್ಲ.

ದೃಷ್ಟಾಂತ

'ಎ' ನು 'ಬಿ' ನಿಗೆ,-

"ನನ್ನ ನಿಧಿ ಸ್ವತ್ತಿನ 10,000 ರೂಪಾಯಿಗಳನ್ನು";

"ಈಸ್ಟ್ ಇಂಡಿಯಾ ರೈಲ್ವೆ ಕಂಪನಿಯ ಷೇರುಗಳಲ್ಲಿ ಈಗ ಹೂಡಲಾಗಿರುವ ನನ್ನ ಸ್ವತ್ತಿನ 10,000 ರೂಪಾಯಿಗಳನ್ನು";

"ರಾಂಪುರ ಕಾರ್ಖಾನೆಯ ಅಡಮಾನದ ಮೂಲಕ ಈಗ ಭದ್ರಗೊಳಿಸಿರುವ 10,000 ರೂಪಾಯಿಗಳನ್ನು";

- ಮರಣಶಾಸನದ ಮೂಲಕ ಕೊಡುತ್ತಾನೆ.

ಇವುಗಳ ಪೈಕಿ ಯಾವುದೇ ಮರಣಶಾಸನ ಸ್ವತ್ತು ನಿರ್ದಿಷ್ಟವಾದುದಲ್ಲ.

144. ಮರಣಶಾಸನ ಕರ್ತನು ಉಯಿಲಿನ ದಿನಾಂಕದಂದು ಒಂದೇ ಬಗೆಯ ಸ್ಟಾಕಿನ ಸಮನಾದ ಅಥವಾ ಅದಕ್ಕೂ ಹೆಚ್ಚಿನ ಮೊತ್ತವನ್ನು ಹೊಂದಿದಲ್ಲಿ ಸ್ಟಾಕಿನ ಮರಣಶಾಸನ ದಾನ:- ಯಾವುದೇ ಬಗೆಯ ಸ್ಟಾಕಿನ ಅನಿಶ್ಚಿತ ಮೊತ್ತವನ್ನು ಸಾಮಾನ್ಯ ಪದಗಳಲ್ಲಿ ಮರಣಶಾಸನ ದಾನದ ಮೂಲಕ ಕೊಟ್ಟಿರುವಲ್ಲಿ, ಮರಣಶಾಸನ ಕರ್ತನು ಅವನ ಉಯಿಲಿನ ದಿನಾಂಕದಂದು ಮರಣಶಾಸನದಾನದ ಮೂಲಕ ಕೊಟ್ಟ ಮೊತ್ತಕ್ಕೆ ಸಮನಾದ ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತದ ನಿರ್ದಿಷ್ಟ ಬಗೆಯ ಸ್ಟಾಕನ್ನು ಹೊಂದಿದ್ದ ಕಾರಣ ಮಾತ್ರದಿಂದಲೇ ಆ ಮರಣಶಾಸನ ಸ್ವತ್ತು ನಿರ್ದಿಷ್ಟವಾದುದಾಗುವುದಿಲ್ಲ.

ದೃಷ್ಟಾಂತ

'ಎ' ನು 'ಬಿ' ನಿಗೆ ಶೇಕಡಾ 5ರ 5,000 ರೂಪಾಯಿಗಳ ಸರ್ಕಾರಿ ಭದ್ರತಾ ಪತ್ರಗಳನ್ನು ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನು ಉಯಿಲಿನ ದಿನಾಂಕದಂದು ಶೇಕಡಾ 5ರ 5,000 ರೂಪಾಯಿಗಳ ಸರ್ಕಾರಿ ಭದ್ರತಾ ಪತ್ರಗಳನ್ನು ಹೊಂದಿದ್ದನು. ಆ ಮರಣಶಾಸನ ಸ್ವತ್ತು ನಿರ್ದಿಷ್ಟವಾದುದಲ್ಲ.

145. ಮರಣಶಾಸನ ಕರ್ತನ ಸ್ವತ್ತಿನ ಒಂದು ಭಾಗವನ್ನು ನಿಶ್ಚಿತ ರೀತಿಯಲ್ಲಿ ವಿಲೆ ಮಾಡುವವರೆಗೆ ಸಂದಾಯ ಮಾಡಬೇಕಾಗಿಲ್ಲದ ಹಣದ ಮರಣಶಾಸನ ದಾನ:- ಮರಣಶಾಸನ ಸ್ವತ್ತಿನ ಹಣದ ಸಂದಾಯವನ್ನು ಮರಣಶಾಸನ ಕರ್ತನ ಸ್ವತ್ತಿನ ಯಾವುದೇ ಭಾಗವನ್ನು ನಿಶ್ಚಿತ ರೂಪಕ್ಕೆ ತರುವವರೆಗೆ ಅಥವಾ ಅದನ್ನು ನಿಶ್ಚಿತ ಸ್ಥಳಕ್ಕೆ ಕಳುಹಿಸುವವರೆಗೆ ಮುಂದೂಡಬೇಕೆಂದು ಉಯಿಲಿನಲ್ಲಿ ನಿರ್ದೇಶಿಸಿರುವುದರಿಂದ ಮಾತ್ರವೇ ಆ ಮರಣಶಾಸನ ಸ್ವತ್ತು ನಿರ್ದಿಷ್ಟವಾದುದಾಗುವುದಿಲ್ಲ.

ದೃಷ್ಟಾಂತ

'ಎ' ನು 'ಬಿ' ನಿಗೆ 10,000 ರೂಪಾಯಿಗಳನ್ನು ಮರಣಶಾಸನದ ಮೂಲಕ ಕೊಡುತ್ತಾನೆ ಮತ್ತು ಆ ಮರಣಶಾಸನ ಸ್ವತ್ತಿನ ಹಣವನ್ನು ಭಾರತದಲ್ಲಿನ 'ಎ' ನ ಸ್ವತ್ತಿನ ಹಣವು ಇಂಗ್ಲೆಂಡಿನಲ್ಲಿ ಪ್ರಾಪ್ತವಾದ ಮೇಲೆ ಆದಷ್ಟು ಬೇಗನೆ ಸಂದಾಯ ಮಾಡಬೇಕೆಂದು ನಿರ್ದೇಶಿಸುತ್ತಾನೆ. ಆದ್ದರಿಂದ ಆ ಮರಣಶಾಸನ ಸ್ವತ್ತು ನಿರ್ದಿಷ್ಟವಾದುದಲ್ಲ.

146. ನಮೂದು ಮಾಡಿದ ವಸ್ತುಗಳನ್ನು ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟಿಲ್ಲವೆಂದು ಯಾವಾಗ ಭಾವಿಸುವುದು:- ಉಯಿಲು ಮರಣಶಾಸನ ಕರ್ತನ ಸ್ವತ್ತಿನ ಶೇಷದ ಮರಣಶಾಸನ ದಾನವನ್ನು ಒಳಗೊಂಡಿರುವಲ್ಲಿ ಮತ್ತು ಈ ಮೊದಲು ಮರಣಶಾಸನದ ಮೂಲಕ ಕೊಟ್ಟಿಲ್ಲದ ಸ್ವತ್ತಿನ ಕೆಲವು ಬಾಬುಗಳ ನಮೂದನೆ ಅದರಲ್ಲಿ ಇರುವಲ್ಲಿ ನಮೂದು ಮಾಡಿದ ವಸ್ತುಗಳನ್ನು ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟಿರುವುದಾಗಿ ಭಾವಿಸತಕ್ಕುದಲ್ಲ.

147. ಹಲವಾರು ವ್ಯಕ್ತಿಗಳಿಗೆ ಒಬ್ಬರಾದ ಮೇಲೆ ಒಬ್ಬರಿಗೆ ಕೊಟ್ಟಿರುವ ನಿರ್ದಿಷ್ಟ ಮರಣ ಶಾಸನದಾನವನ್ನು ಹೇಳಿರುವ ನಮೂನೆಯಲ್ಲಿ ಉಳಿಸಿಕೊಳ್ಳುವುದು:- ಸ್ವತ್ತನ್ನು ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳಿಗೆ ಒಬ್ಬರ ನಂತರ ಇನ್ನೊಬ್ಬರಿಗೆ ಸೇರುವಂತೆ ನಿರ್ದಿಷ್ಟವಾಗಿ ಮರಣ ಶಾಸನದ ಮೂಲಕ ಕೊಟ್ಟಿರುವಲ್ಲಿ ಆ ಸ್ವತ್ತು, ಮೌಲ್ಯವು ಸತತವಾಗಿ ಕಡಿಮೆಯಾಗುವಂಥ ಸ್ವರೂಪದ್ದಾಗಿರಬಹುದಾಗಿದ್ದಾಗ್ಯೂ ಅದನ್ನು ಮರಣ ಶಾಸನ ಕರ್ತನು ಬಿಟ್ಟು ಹೋದ ನಮೂನೆಯಲ್ಲಿ ಉಳಿಸಿಕೊಳ್ಳತಕ್ಕುದು.

ದೃಷ್ಟಾಂತಗಳು

(i) 'ಎ' ನು ಕೆಲವು ವರ್ಷಗಳ ಅವಧಿಗಾಗಿ ಒಂದು ಮನೆಯನ್ನು ಬಾಡಿಗೆಗೆ ಪಡೆದಿದ್ದನ್ನು ಅವನ ಮರಣದ ಕಾಲದಲ್ಲಿ ಆ ಅವಧಿಯ ಪೈಕಿ ಇನ್ನು ಹದಿನೈದು ವರ್ಷಗಳು ಉಳಿದಿದ್ದವು; ಅವನು ಆ ಬಾಡಿಗೆಯನ್ನು 'ಬಿ' ನಿಗೆ ಜೀವನ ಪರ್ಯಂತ ಮತ್ತು 'ಬಿ' ನ ಮರಣಾನಂತರ 'ಸಿ' ನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಟ್ಟಿರುತ್ತಾನೆ. 'ಬಿ' ನು ಹದಿನೈದು ವರ್ಷಗಳು ಬದುಕಿದ್ದರೆ 'ಸಿ' ನು ಮರಣಶಾಸನ ದಾನದ ಮೇರೆಗೆ ಏನನ್ನೂ ಪಡೆಯುವುದಿಲ್ಲ. "ಬಿ" ಸ್ವತ್ತನ್ನು "ಎ" ನು ಬಿಟ್ಟುಹೋದ ರೀತಿಯಲ್ಲಿ ಅನುಭೋಗಿಸುತ್ತಾನೆ.

(ii) 'ಬಿ' ನ ಜೀವಿತ ಕಾಲದಲ್ಲಿ ಒಂದು ವರ್ಷಾಶನವನ್ನು ಹೊಂದಿರುವ 'ಎ' ನು ಅದನ್ನು 'ಸಿ' ನಿಗೆ ಅವನ ಜೀವನ ಪರ್ಯಂತ ಮತ್ತು 'ಸಿ' ನ ಮರಣಾನಂತರ 'ಡಿ' ನಿಗೆ ಸೇರುವಂತೆ ಮರಣ ಶಾಸನದ ಮೂಲಕ ಕೊಡುತ್ತಾನೆ. 'ಬಿ' ನು 'ಡಿ' ನಿಗಿಂತ ಮುಂಚೆ ಮರಣ ಹೊಂದಿದರೆ 'ಡಿ' ನು ಮರಣಶಾಸನದ ಮೇರೆಗೆ ಏನನ್ನೂ ಪಡೆಯುವುದಿಲ್ಲ. 'ಸಿ' ನು ಆ ವರ್ಷಾಶನವನ್ನು 'ಎ' ನು ಬಿಟ್ಟುಹೋದ ಹಾಗೆ ಉಪಭೋಗಿಸಬೇಕು.

148. ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳಿಗೆ ಒಬ್ಬರಾದ ಮೇಲೆ ಒಬ್ಬರಂತೆ ಮರಣಶಾಸನದ ಮೂಲಕ ಕೊಟ್ಟ ಸ್ವತ್ತಿನ ಮಾರಾಟ ಮತ್ತು ಅದರ ಉತ್ಪತ್ತಿಗಳ ಹೂಡಿಕೆ:- ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳಿಗೆ ಒಬ್ಬರಾದ ಮೇಲೆ ಒಬ್ಬರಂತೆ ಕೊಟ್ಟ ಮರಣಶಾಸನ ದಾನದಲ್ಲಿ ಅಡಕವಾದ ಸ್ವತ್ತನ್ನು ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟಿಲ್ಲದಿದ್ದರೆ ತದ್ವಿರುದ್ಧವಾದ ಯಾವುದೇ ನಿರ್ದೇಶನವು ಇಲ್ಲದೇ ಇರುವಲ್ಲಿ, ಮಾರಾಟ ಮಾಡತಕ್ಕುದು ಮತ್ತು ಮಾರಾಟದ ಉತ್ಪತ್ತಿಗಳನ್ನು ಉಚ್ಚ ನ್ಯಾಯಾಲಯವು ಯಾವುದೇ ಸಾಮಾನ್ಯ ನಿಯಮದ ಮೂಲಕ ಅಧಿಕೃತಗೊಳಿಸಬಹುದಾದ ಅಥವಾ ನಿರ್ದೇಶಿಸಬಹುದಾದಂಥ ಭದ್ರತಾ ಪತ್ರಗಳಲ್ಲಿ ಹೂಡತಕ್ಕದ್ದು ಮತ್ತು ಹೀಗೆ ರಚಿಸಿದ ನಿಧಿಯನ್ನು ಒಬ್ಬರಾದ ಮೇಲೆ ಒಬ್ಬರು ಲೆಗಟಿಗಳು ಉಯಿಲಿನ ನಿಬಂಧನೆಗಳಿಗೆ ಅನುಸಾರವಾಗಿ ಉಪಭೋಗಿಸತಕ್ಕುದು.

ದೃಷ್ಟಾಂತ

'ಎ' ನು ಕೆಲವಾರು ವರ್ಷಗಳಿಗಾಗಿ ಒಂದು ಗೇಣಿಯನ್ನು ಹೊಂದಿದ್ದು ಅವನ ಎಲ್ಲ ಸ್ವತ್ತನ್ನು 'ಬಿ' ನಿಗೆ ಜೀವನ ಪರ್ಯಂತ ಮತ್ತು 'ಬಿ' ನ ಮರಣಾನಂತರ 'ಸಿ' ನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡುತ್ತಾನೆ. ಆ ಗೇಣಿಯನ್ನು ಈ ಪ್ರಕರಣದಲ್ಲಿ ಹೇಳಿರುವಂತೆ ಮಾರಾಟ ಮಾಡತಕ್ಕುದು, ಆ ಉತ್ಪತ್ತಿಗಳನ್ನು ಹೂಡತಕ್ಕುದು ಮತ್ತು ಆ ನಿಧಿಯಿಂದ ಬರುವ ವಾರ್ಷಿಕ ಆದಾಯವನ್ನು 'ಬಿ' ನಿಗೆ ಜೀವನ ಪರ್ಯಂತ ಸಂದಾಯ ಮಾಡಬೇಕಾಗುತ್ತದೆ. 'ಬಿ' ನು ಮರಣ ಹೊಂದಿದಾಗ ನಿಧಿಯ ಮೂಲ ಧನವನ್ನು 'ಡಿ' ನಿಗೆ ಸಂದಾಯ ಮಾಡಬೇಕು.

149. ಮರಣಶಾಸನ ಸ್ವತ್ತುಗಳನ್ನು ಸಂದಾಯ ಮಾಡಲು ಆಸ್ತಿಗಳು ಸಾಲದೇ ಹೋದಲ್ಲಿ, ನಿರ್ದಿಷ್ಟ ಮರಣಶಾಸನ ಸ್ವತ್ತು ಸಾಮಾನ್ಯ ಮರಣಶಾಸನ ಸ್ವತ್ತುಗಳೊಂದಿಗೆ ಕೊನೆಗೊಳ್ಳತಕ್ಕುದಲ್ಲ:- ಮರಣಶಾಸನ ಸ್ವತ್ತುಗಳನ್ನು ಸಂದಾಯ ಮಾಡಲು ಆಸ್ತಿಗಳು ಸಾಲದೇ ಹೋದರೆ ಒಂದು ನಿರ್ದಿಷ್ಟ ಮರಣಶಾಸನ ಸ್ವತ್ತು ಸಾಮಾನ್ಯ ಮರಣಶಾಸನ ಸ್ವತ್ತುಗಳೊಂದಿಗೆ ಕೊನೆಗೊಳ್ಳಲು ಗುರಿಯಾಗುವುದಿಲ್ಲ.

## ಅಧ್ಯಾಯ - XV

### ನಿರ್ದೇಶನಾತ್ಮಕ ಮರಣಶಾಸನ ಸ್ವತ್ತುಗಳ ಬಗ್ಗೆ

150. ನಿರ್ದೇಶನಾತ್ಮಕ ಮರಣಶಾಸನ ಸ್ವತ್ತಿನ ಪರಿಭಾಷೆ:- ಮರಣಶಾಸನ ಕರ್ತನು ಒಂದು ನಿಶ್ಚಿತ ಹಣದ ಮೊತ್ತವನ್ನು ಅಥವಾ ಯಾವುದೇ ಇತರ ವಸ್ತುವಿನ ಒಂದು ನಿಶ್ಚಿತ ಪ್ರಮಾಣವನ್ನು ಮರಣ ಶಾಸನದ ಮೂಲಕ ಕೊಟ್ಟಿರುವಲ್ಲಿ, ಮತ್ತು ಯಾವ ಮೂಲ ನಿಧಿ ಅಥವಾ ಸ್ಟಾಕಿನಿಂದ ಸಂದಾಯವನ್ನು ಮಾಡಬೇಕಾಗಿದೆಯೋ ಆ ಮೂಲನಿಧಿ ಅಥವಾ ಸ್ಟಾಕ್ ಆಗುವ ಹಾಗೆ ಒಂದು ವಿಶಿಷ್ಟ ನಿಧಿ ಅಥವಾ ಸ್ಟಾಕಿಗೆ ಉಲ್ಲೇಖ ಮಾಡಿದಲ್ಲಿ, ಆ ಮರಣಶಾಸನ ಸ್ವತ್ತನ್ನು ನಿರ್ದೇಶನಾತ್ಮಕವಾದುದೆಂದು ಹೇಳಲಾಗುತ್ತದೆ.

ವಿವರಣೆ:- ನಿರ್ದಿಷ್ಟ ಮರಣಶಾಸನ ಸ್ವತ್ತು ಮತ್ತು ನಿರ್ದೇಶನಾತ್ಮಕ ಸ್ವತ್ತು ಇವುಗಳ ನಡುವಣ ವ್ಯತ್ಯಾಸ ಹೀಗಿದೆ, ಎಂದರೆ:-

ಒಂದು ನಿರ್ದಿಷ್ಟ ಸ್ವತ್ತನ್ನು ಲೆಗಟಿಗೆ ಕೊಟ್ಟಿರುವಲ್ಲಿ ಆ ಮರಣಶಾಸನ ಸ್ವತ್ತು ನಿರ್ದಿಷ್ಟವಾದುದು. ಒಂದು ಮರಣಶಾಸನ ಸ್ವತ್ತನ್ನು ನಿರ್ದಿಷ್ಟ ಸ್ವತ್ತಿನಿಂದ ಸಂದಾಯ ಮಾಡತಕ್ಕುದೆಂದು ನಿರ್ದೇಶಿಸಿರುವಲ್ಲಿ ಅದು ನಿರ್ದೇಶನಾತ್ಮಕವಾದುದು.

ದೃಷ್ಟಾಂತಗಳು

(i) 'ಎ' ನು 'ಬಿ' ನಿಂದ ತನಗೆ ಬರಬೇಕಾದ ಋಣದ ಒಂದು ಭಾಗವಾದ 1000 ರೂಪಾಯಿಗಳನ್ನು 'ಬಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. ಅವನು 'ಡಬ್ಲ್ಯೂ' ನಿಂದ ತನಗೆ ಬರಬೇಕಾದ ಋಣದಿಂದ ಸಂದಾಯವಾಗುವ ಹಾಗೆ 1000 ರೂಪಾಯಿಗಳನ್ನು 'ಸಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. 'ಬಿ' ನಿಗೆ ಕೊಟ್ಟ ಮರಣಶಾಸನ ಸ್ವತ್ತು ನಿರ್ದಿಷ್ಟವಾದುದು ಮತ್ತು 'ಸಿ' ನಿಗೆ ಕೊಟ್ಟ ಮರಣಶಾಸನ ಸ್ವತ್ತು ನಿರ್ದೇಶನಾತ್ಮಕವಾದುದು.

(ii) 'ಎ' ನು 'ಬಿ' ನಿಗೆ,-

"ನನ್ನ ಗ್ರೀನ್ ಏಕರ್ ಹೊಲದಲ್ಲಿ ಬೆಳೆಯತಕ್ಕ ಧಾನ್ಯದಲ್ಲಿ ಹತ್ತು ಬುಷಲ್‌ಗಳನ್ನು";

"ರಾಂಪುರದಲ್ಲಿನ ನನ್ನ ಕಾರ್ಖಾನೆಯಲ್ಲಿ ತಯಾರಿಸತಕ್ಕಂಥ ನೀಲಿಯ 80 ಪೆಟ್ಟಿಗೆಗಳನ್ನು";

"ಕೇಂದ್ರ ಸರ್ಕಾರದ ನನ್ನ 'ಶೇಕಡಾ 5ರ ಪ್ರಾಮಿಸರಿ ನೋಟುಗಳ ಪೈಕಿ 10,000 ರೂಪಾಯಿಗಳನ್ನು";

"ನನ್ನ ನಿಧಿ ರೂಪದ ಸ್ವತ್ತಿನಿಂದ 500 ರೂಪಾಯಿಗಳ ವರ್ಷಾಶನವನ್ನು" ;

"ಸಿ" ನಿಂದ ನನಗೆ ಬರಬೇಕಾದ 2,000 ರೂಪಾಯಿಗಳ ಮೊತ್ತದಿಂದ ಒಂದು ಸಾವಿರ ರೂಪಾಯಿಗಳನ್ನು";

ಒಂದು ವರ್ಷಾಶನವನ್ನು ಆ ವರ್ಷಾಶನವನ್ನು "ನನ್ನ ರಾಮನಗರ ತಾಲೂಕಿನಿಂದ ಬರುವ ಬಾಡಿಗೆಗಳಿಂದ" ಸಂದಾಯ ಮಾಡತಕ್ಕುದೆಂದು ನಿರ್ದೇಶಿಸಿ ಮರಣಶಾಸನದ ಮೂಲಕ ಕೊಡುತ್ತಾನೆ.

(iii) 'ಎ' ನು 'ಬಿ' ನಿಗೆ,

"ನನ್ನ ರಾಮನಗರದಲ್ಲಿರುವ ಎಸ್ಟೇಟ್‌ನಿಂದ 10,000 ರೂಪಾಯಿಗಳನ್ನು" ಅಥವಾ ಅದನ್ನು ರಾಮನಗರದ ಎಸ್ಟೇಟಿನ ಮೇಲೆ ಋಣಭಾರ ಹೊರಿಸಿ, "ಒಂದು ನಿಶ್ಚಿತ ವ್ಯವಹಾರದಲ್ಲಿ ತೊಡಗಿಸಿದ ಬಂಡವಾಳದ ನನ್ನ ಹಿಸ್ಸೆಯಾದ 10,000 ರೂಪಾಯಿಗಳನ್ನು" ಮರಣಶಾಸನದ ಮೂಲಕ ಕೊಡುತ್ತಾನೆ.

- ಈ ಪ್ರತಿಯೊಂದು ಮರಣಶಾಸನ ದಾನವು ನಿರ್ದೇಶನಾತ್ಮಕ ಮರಣಶಾಸನ ದಾನವಾಗಿದೆ.

151. ಮರಣಶಾಸನ ಸ್ವತ್ತನ್ನು ನಿರ್ದಿಷ್ಟ ಮರಣಶಾಸನ ಸ್ವತ್ತಿನ ವಸ್ತು ವಿಷಯವಾದ ನಿಧಿಯಿಂದ ಸಂದಾಯ ಮಾಡಬೇಕೆಂದು ನಿರ್ದೇಶಿಸಿರುವಾಗ ಸಂದಾಯದ ಕ್ರಮ:- ಒಂದು ನಿಧಿಯ ಒಂದು ಭಾಗವನ್ನು ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟಿರುವಲ್ಲಿ ಮತ್ತು ಒಂದು ಮರಣಶಾಸನ ಸ್ವತ್ತನ್ನು ಅದೇ ನಿಧಿಯಿಂದ ಸಂದಾಯ ಮಾಡಬೇಕೆಂದು ನಿರ್ದೇಶಿಸಿರುವಲ್ಲಿ ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟ ಭಾಗವನ್ನು ಮೊದಲು ಲೆಗಟಿಗೆ ಸಂದಾಯ ಮಾಡತಕ್ಕುದು ಮತ್ತು ನಿರ್ದೇಶನಾತ್ಮಕ ಮರಣಶಾಸನ ಸ್ವತ್ತನ್ನು ಆ ನಿಧಿಯ ಶೇಷದಿಂದ ಸಂದಾಯ ಮಾಡತಕ್ಕುದು ಮತ್ತು ಆ ಶೇಷವು ಕಡಿಮೆಯಾಗುವಷ್ಟರ ಮಟ್ಟಿಗೆ ಅಷ್ಟನ್ನು ಮರಣಶಾಸನ ಕರ್ತನ ಸಾಮಾನ್ಯ ಆಸ್ತಿಗಳಿಂದ ಸಂದಾಯ ಮಾಡತಕ್ಕುದು.

ದೃಷ್ಟಾಂತ

'ಎ' ನು 'ಡಬ್ಲ್ಯೂ' ನಿಂದ ತನಗೆ ಬರಬೇಕಾಗಿದ್ದ ಋಣದ ಭಾಗವಾದ 1,000 ರೂಪಾಯಿಗಳನ್ನು 'ಬಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. ಅಲ್ಲದೆ ಅವನು 'ಡಬ್ಲ್ಯೂ' ನಿಂದ ತನಗೆ ಬರಬೇಕಾದ ಋಣದಿಂದ ಸಂದಾಯವಾಗುವ ಹಾಗೆ 1,000 ರೂಪಾಯಿಗಳನ್ನು ಮರಣಶಾಸನದ ಮೂಲಕ ಕೊಡುತ್ತಾನೆ. 'ಡಬ್ಲ್ಯೂ' ನಿಂದ 'ಎ' ನಿಗೆ ಬರಬೇಕಾಗಿರುವ ಋಣವು 1,500 ರೂಪಾಯಿಗಳು ಮಾತ್ರವೇ ಆಗಿದೆ. ಈ 1,500 ರೂಪಾಯಿಗಳಲ್ಲಿ 1,000 ರೂಪಾಯಿಗಳು 'ಬಿ' ನಿಗೆ ಸೇರಿವೆ ಮತ್ತು 500 ರೂಪಾಯಿಗಳು 'ಆರ್' ನಿಗೆ ಸಂದಾಯ ಮಾಡಬೇಕು. 'ಸಿ' ನು ಮರಣಶಾಸನ ಕರ್ತನ ಸಾಮಾನ್ಯ ಆಸ್ತಿಗಳಿಂದ 500 ರೂಪಾಯಿಗಳನ್ನು ಸಹ ಸ್ವೀಕರಿಸಬೇಕಾಗಿದೆ.

## ಅಧ್ಯಾಯ - XVI

### ಮರಣಶಾಸನ ಸ್ವತ್ತುಗಳನ್ನು ಹಿಂತೆಗೆದುಕೊಳ್ಳುವುದರ ಬಗ್ಗೆ

152. ಹಿಂತೆಗೆದುಕೊಳ್ಳುವಿಕೆಯ ವಿವರಣೆ:- ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟಿರುವಂಥ ಯಾವುದೇ ವಸ್ತುವು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಅವನಿಗೆ ಸೇರಿಲ್ಲದಿದ್ದರೆ ಅಥವಾ ಅದನ್ನು ಇನ್ನೊಂದು ಬಗೆಯ ಸ್ವತ್ತಾಗಿ ಪರಿವರ್ತಿಸಲಾಗಿದ್ದರೆ, ಆ ಮರಣಶಾಸನ ಸ್ವತ್ತನ್ನು ಹಿಂತೆಗೆದುಕೊಂಡಂತಾಗುತ್ತದೆ. ಎಂದರೆ ಆ ವಸ್ತು ವಿಷಯವನ್ನು ಉಯಿಲಿನ ಪ್ರವರ್ತನೆಯಿಂದ ಹಿಂತೆಗೆದುಕೊಂಡಿರುವ ಕಾರಣದಿಂದಾಗಿ ಅದು ಪರಿಣಾಮಕಾರಿಯಾಗಲಾರದು.

ದೃಷ್ಟಾಂತಗಳು

(i) 'ಎ' ನು 'ಬಿ' ನಿಗೆ -

"'ಸಿ' ನು ನನಗೆ ಉಡುಗೊರೆಯಾಗಿ ಕೊಟ್ಟ ವಜ್ರದುಂಗುರವನ್ನು";

"ನನ್ನ ಚಿನ್ನದ ಸರವನ್ನು";

"ಒಂದು ನಿಶ್ಚಿತ ಉಣ್ಣೆ ಬೇಲನ್ನು";

"ಒಂದು ನಿಶ್ಚಿತ ಬಟ್ಟೆಯ ತುಂಡನ್ನು";

"ನನ್ನ ಮರಣದ ಕಾಲದಲ್ಲಿ ಕಲ್ಕತ್ತಾದಲ್ಲಿ 'ಎಂ' ಬೀದಿಯಲ್ಲಿನ ನನ್ನ ವಾಸದ ಮನೆಯಲ್ಲಿ ಅಥವಾ ಅದರ ಸುತ್ತಮುತ್ತ ಇರತಕ್ಕಂಥ ನನ್ನ ಎಲ್ಲ ಮನೆ ಬಳಕೆ ಸರಕುಗಳನ್ನು'

- ಮರಣಶಾಸನದ ಮೂಲಕ ಕೊಡುತ್ತಾನೆ.

'ಎ' ನು ತನ್ನ ಜೀವಿತ ಕಾಲದಲ್ಲಿ,-

ಆ ಉಂಗುರವನ್ನು ಮಾರುತ್ತಾನೆ ಅಥವಾ ಇನ್ನಾರಿಗೋ ಕೊಟ್ಟುಬಿಡುತ್ತಾನೆ;

ಚಿನ್ನದ ಸರವನ್ನು ಒಂದು ಲೋಟವನ್ನಾಗಿ ಪರಿವರ್ತಿಸುತ್ತಾನೆ;

ಉಣ್ಣೆಯನ್ನು ಬಟ್ಟೆಯನ್ನಾಗಿ ಪರಿವರ್ತಿಸುತ್ತಾನೆ;

ಬಟ್ಟೆಯನ್ನು ಉಡುಪನ್ನಾಗಿ ಮಾಡುತ್ತಾನೆ;

ಇನ್ನೊಂದು ಮನೆಯನ್ನು ತೆಗೆದುಕೊಂಡು ಅವನ ಎಲ್ಲಾ ಸರಕನ್ನು ಅಲ್ಲಿಗೆ ಸ್ಥಳಾಂತರಿಸುತ್ತಾನೆ

- ಆದ್ದರಿಂದ ಈ ಪ್ರತಿಯೊಂದು ಮರಣಶಾಸನ ಸ್ವತ್ತನ್ನು ಹಿಂತೆಗೆದುಕೊಂಡಂತಾಗುತ್ತದೆ.

(ii) 'ಎ' ನು 'ಬಿ' ನಿಗೆ,-

"ಒಂದು ನಿಶ್ಚಿತ ಪೆಠಾರಿಯಲ್ಲಿರುವ 1000 ರೂಪಾಯಿಗಳ ಮೊತ್ತವನ್ನು";

"ನನ್ನ ಲಾಯದಲ್ಲಿರುವ ಎಲ್ಲ ಕುದುರೆಗಳನ್ನು"

- ಮರಣಶಾಸನದ ಮೂಲಕ ಕೊಡುತ್ತಾನೆ.

'ಎ' ನ ಮರಣ ಕಾಲದಲ್ಲಿ ಪೆಠಾರಿಯಲ್ಲಿ ಯಾವುದೇ ಹಣವು ಇರುವುದಿಲ್ಲ ಮತ್ತು ಲಾಯದಲ್ಲಿ ಯಾವ ಕುದುರೆಯೂ ಇರುವುದಿಲ್ಲ. ಆದ್ದರಿಂದ ಈ ಮರಣಶಾಸನ ಸ್ವತ್ತುಗಳನ್ನು ಹಿಂತೆಗೆದುಕೊಂಡಂತಾಗಿದೆ.

(iii) 'ಎ' ನು 'ಬಿ' ನಿಗೆ ಕೆಲವು ಸರಕುಗಳ ಬೇಲುಗಳನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಆದರೆ 'ಎ' ನು ಆ ಸರಕುಗಳನ್ನು ತನ್ನೊಂದಿಗೆ ನೌಕಾಯಾನದಲ್ಲಿ ತೆಗೆದುಕೊಂಡು ಹೋಗುತ್ತಾನೆ. ಆ ಹಡಗು ಮತ್ತು ಸರಕುಗಳು ಸಮುದ್ರದಲ್ಲಿ ಕಳೆದುಹೋಗುತ್ತವೆ ಮತ್ತು 'ಎ' ನು ಮುಳುಗಿ ಹೋಗುತ್ತಾನೆ. ಆ ಮರಣಶಾಸನ ಸ್ವತ್ತನ್ನು ಹಿಂತೆಗೆದುಕೊಂಡಂತಾಗಿದೆ.

153. ನಿರ್ದೇಶನಾತ್ಮಕ ಮರಣಶಾಸನ ಸ್ವತ್ತನ್ನು ಹಿಂತೆಗೆದುಕೊಳ್ಳದೆ ಇರುವುದು:- ನಿರ್ದೇಶನಾತ್ಮಕ ಮರಣಶಾಸನ ಸ್ವತ್ತುಗಳನ್ನು ಮರಣಶಾಸನದ ಮೂಲಕ ಅದರ ಮೇಲೆ ಋಣಭಾರ ಹೊರಿಸಿರುವಂಥ ಸ್ವತ್ತು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಅಸ್ತಿತ್ವದಲ್ಲಿ ಇಲ್ಲದಿದ್ದ ಕಾರಣ ಅಥವಾ ಅದನ್ನು ಬೇರೊಂದು ಬಗೆಯ ಸ್ವತ್ತಾಗಿ ಪರಿವರ್ತಿಸಲಾಗಿರುವ ಕಾರಣದಿಂದಾಗಿ ಹಿಂತೆಗೆದುಕೊಂಡಂತಾಗುವುದಿಲ್ಲ. ಆದರೆ ಅಂಥ ಸಂದರ್ಭದಲ್ಲಿ ಅದನ್ನು ಮರಣಶಾಸನಕರ್ತನ ಸಾಮಾನ್ಯ ಆಸ್ತಿಗಳಿಂದ ಸಂದಾಯ ಮಾಡತಕ್ಕುದು.

154. ಮೂರನೆಯವನಿಂದ ಏನನ್ನಾದರೂ ಸ್ವೀಕರಿಸುವ ಹಕ್ಕಿನ ನಿರ್ದಿಷ್ಟ ಮರಣಶಾಸನ ದಾನವನ್ನು ಹಿಂತೆಗೆದುಕೊಳ್ಳುವುದು:- ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟಿರುವ ದಾನವು, ಮೂರನೆಯವನಿಂದ ಮೌಲ್ಯವುಳ್ಳ ಏನನ್ನಾದರೂ ಸ್ವೀಕರಿಸುವ ಹಕ್ಕು ಆಗಿರುವಲ್ಲಿ ಮತ್ತು ಮರಣಶಾಸನ ಕರ್ತನು ಅದನ್ನು ತಾನೇ ಸ್ವೀಕರಿಸಿದರೆ ಆ ಮರಣಶಾಸನ ದಾನವನ್ನು ಹಿಂತೆಗೆದುಕೊಂಡಂತಾಗುತ್ತದೆ.

ದೃಷ್ಟಾಂತಗಳು

(i) 'ಎ' ನು 'ಬಿ' ನಿಗೆ-

'ಸಿ' ನು ನನಗೆ ಕೊಡಬೇಕಾದ ಋಣವನ್ನು;

'ಡಿ'ನ ಬಳಿಯಲ್ಲಿ ನಾನು ಹೊಂದಿರುವಂಥ 2,000 ರೂಪಾಯಿಗಳನ್ನು';

'ಇ' ನ ಬಂಧಪತ್ರದ ಮೇಲೆ ನನಗೆ ಬರಬೇಕಾದ ಹಣವನ್ನು;

'ರಾಂಪುರ ಕಾರ್ಖಾನೆಯ ಮೇಲಿನ ನನ್ನ ಅಡಮಾನವನ್ನು'

- ಮರಣಶಾಸನದ ಮೂಲಕ ಕೊಡುತ್ತಾನೆ.

ಈ ಎಲ್ಲಾ ಋಣಗಳು 'ಎ'ನ ಜೀವಿತ ಕಾಲದಲ್ಲಿ ಕೆಲವು ಅವನ ಸಮ್ಮತಿಯೊಂದಿಗೆ ಮತ್ತು ಕೆಲವು ಅವನ ಸಮ್ಮತಿಯಿಲ್ಲದೆ ಅಂತ್ಯಗೊಂಡಿವೆ. ಆ ಎಲ್ಲ ಮರಣಶಾಸನ ಸ್ವತ್ತುಗಳನ್ನು ಹಿಂತೆಗೆದುಕೊಂಡಂತಾಗಿದೆ.

(ii) 'ಎ' ನು 'ಬಿ' ನಿಗೆ ಜೀವವಿಮೆಯ ಕೆಲವು ನಿಶ್ಚಿತ ಪಾಲಿಸಿಗಳಲ್ಲಿನ ತನ್ನ ಹಿತಾಸಕ್ತಿಯನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಆದರೆ 'ಎ' ನು ಅವನ ಜೀವಿತ ಕಾಲದಲ್ಲಿ ಪಾಲಿಸಿಗಳ ಮೊಬಲಗನ್ನು ಸ್ವೀಕರಿಸುತ್ತಾನೆ. ಮರಣಶಾಸನ ಹಿಂತೆಗೆದುಕೊಂಡಂತಾಗುತ್ತದೆ.

155. ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟಿರುವ ಒಟ್ಟು ವಸ್ತುವಿನ ಒಂದು ಭಾಗವನ್ನು ಮರಣಶಾಸನ ಕರ್ತನು ಸ್ವೀಕರಿಸುವಷ್ಟರ ಮಟ್ಟಿಗೆ ಹಿಂತೆಗೆದುಕೊಳ್ಳುವುದು:- ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟ ಒಟ್ಟು ವಸ್ತುವಿನ ಒಂದು ಭಾಗವನ್ನು ಮರಣಶಾಸನ ಕರ್ತನು ಸ್ವೀಕರಿಸುವುದು, ಹಾಗೆ ಸ್ವೀಕರಿಸಿದ ಮೊತ್ತದಷ್ಟರಮಟ್ಟಿಗೆ ಆ ಮರಣಶಾಸನ ಸ್ವತ್ತನ್ನು ಹಿಂತೆಗೆದುಕೊಂಡಂತೆ ಪ್ರವರ್ತಿಸತಕ್ಕುದು.

ದೃಷ್ಟಾಂತ

'ಎ' ನು " 'ಸಿ' ನಿಂದ ನನಗೆ ಬರಬೇಕಾದ ಋಣವನ್ನು" ಮರಣಶಾಸನದ ಮೂಲಕ 'ಬಿ' ನಿಗೆ ಕೊಡುತ್ತಾನೆ. ಆ ಋಣದ ಮೊಬಲಗು 10,000 ರೂಪಾಯಿಗಳು 'ಸಿ' ನು 'ಎ' ನಿಗೆ ಆ ಋಣದ ಅರ್ಧ ಭಾಗವಾದ 5,000 ರೂಪಾಯಿಗಳನ್ನು ಸಂದಾಯ ಮಾಡುತ್ತಾನೆ. ಆ ಮರಣಶಾಸನ ಸ್ವತ್ತು 'ಎ' ನು ಸ್ವೀಕರಿಸಿದ 5000 ರೂಪಾಯಿಗಳಷ್ಟರ ಮಟ್ಟಿಗೆ ಹಿಂತೆಗೆದುಕೊಳ್ಳುವುದರ ಮೂಲಕ ರದ್ದಾಗಿದೆ.

156. ಯಾವ ಒಟ್ಟು ನಿಧಿಯ ಭಾಗವನ್ನು ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಡಲಾಗಿದೆಯೋ ಆ ಯಾವುದೇ ಒಟ್ಟು ನಿಧಿಯ ಭಾಗವನ್ನು ಮರಣಶಾಸನ ಕರ್ತನು ಸ್ವೀಕರಿಸುವುದರ ಮೂಲಕ ಅಷ್ಟರಮಟ್ಟಿಗೆ ಹಿಂತೆಗೆದುಕೊಳ್ಳುವುದು:- ಒಂದು ಒಟ್ಟು ನಿಧಿಯ ಅಥವಾ ಸ್ಟಾಕಿನ ಒಂದು ಭಾಗವನ್ನು ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಡಲಾಗಿದ್ದರೆ ಆ ನಿಧಿ ಅಥವಾ ಸ್ಟಾಕಿನ ಒಂದು ಭಾಗವನ್ನು ಮರಣಶಾಸನ ಕರ್ತನು ಸ್ವೀಕರಿಸುವುದು, ಹಾಗೆ ಸ್ವೀಕರಿಸಿದ ಮೊಬಲಗಿನಷ್ಟರ ಮಟ್ಟಿಗೆ ಮಾತ್ರ ಹಿಂತೆಗೆದುಕೊಳ್ಳಲಾಗಿದೆ ಎಂಬಂತೆ ಪ್ರವರ್ತಿಸತಕ್ಕುದು ಮತ್ತು ಆ ನಿಧಿ ಅಥವಾ ಸ್ಟಾಕಿನ ಶೇಷ ಭಾಗವನ್ನು ನಿರ್ದಿಷ್ಟ ಮರಣಶಾಸನ ಸ್ವತ್ತನ್ನು ತೀರಿಸಲು ವಿನಿಯೋಗಿಸತಕ್ಕುದು.

ದೃಷ್ಟಾಂತ

'ಎ' ನು 'ಡಬ್ಲ್ಯೂ' ನಿಂದ ತನಗೆ ಬರಬೇಕಾದ 10,000 ರೂಪಾಯಿಗಳ ಮೊತ್ತದ ಅರ್ಧ ಭಾಗವನ್ನು 'ಬಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನು ತನ್ನ ಜೀವಿತ ಕಾಲದಲ್ಲಿ ಆ 10,000 ರೂಪಾಯಿಗಳ ಒಂದು ಭಾಗವಾದ 6,000 ರೂಪಾಯಿಗಳನ್ನು ಸ್ವೀಕರಿಸುತ್ತಾನೆ. ಅವನ ಮರಣ ಕಾಲದಲ್ಲಿ 'ಎ' ನಿಗೆ 'ಡಬ್ಲ್ಯೂ' ನಿಂದ ಬರಬೇಕಾಗಿದ್ದಂಥ 4,000 ರೂಪಾಯಿಗಳು ಆ ನಿರ್ದಿಷ್ಟ ಮರಣಶಾಸನದ ಮೇರೆಗೆ 'ಬಿ' ನಿಗೆ ಸೇರುತ್ತದೆ.

157. ಒಬ್ಬ ಲೇಗಟಿಗೆ ಮರಣಶಾಸನದ ಮೂಲಕ ನಿಧಿಯ ಒಂದು ಭಾಗವನ್ನು ನಿರ್ದಿಷ್ಟವಾಗಿ ಕೊಡಲಾಗಿರುವಲ್ಲಿ ಮತ್ತು ಮರಣಶಾಸನ ಸ್ವತ್ತನ್ನು ಇನ್ನೊಬ್ಬನಿಗೆ ಅದೇ ನಿಧಿಯ ಮೇಲೆ ಋಣಭಾರವನ್ನಾಗಿ ಹೊರಿಸಿರುವಲ್ಲಿ ಮತ್ತು ಮರಣ ಶಾಸನ ಕರ್ತನು ಆ ನಿಧಿಯ ಭಾಗವನ್ನು ಸ್ವೀಕರಿಸಿದ್ದು ಶೇಷವು ಎರಡು ಮರಣಶಾಸನ ಸ್ವತ್ತುಗಳ ಸಂದಾಯ ಮಾಡಲು ಸಾಕಷ್ಟಾಗದಿರುವಲ್ಲಿ ಸಂದಾಯದ ಕ್ರಮ:- ಒಂದು ನಿಧಿಯ ಭಾಗವನ್ನು ಒಬ್ಬ ಲೇಗಟಿಗೆ ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟಿರುವಲ್ಲಿ ಮತ್ತು ಅದೇ ನಿಧಿಯ ಮೇಲೆ ಋಣಭಾರವನ್ನಾಗಿ ಹೊರಿಸಿರುವ ಮರಣಶಾಸನ ಸ್ವತ್ತನ್ನು ಇನ್ನೊಬ್ಬ ಲೇಗಟಿಗೆ ಮರಣಶಾಸನದ ಮೂಲಕ ಕೊಟ್ಟಿರುವಲ್ಲಿ, ಆಗ ಆ ನಿಧಿಯ ಒಂದು ಭಾಗವನ್ನು ಮರಣಶಾಸನ ಕರ್ತನು ಸ್ವೀಕರಿಸಿದರೆ ಮತ್ತು ಆ ನಿಧಿಯ ಶೇಷವು ಆ ನಿರ್ದಿಷ್ಟ ಮತ್ತು ನಿರ್ದೇಶನಾತ್ಮಕ ಮರಣಶಾಸನ ಸ್ವತ್ತುಗಳೆರಡನ್ನೂ ಸಂದಾಯ ಮಾಡಲು ಸಾಕಷ್ಟಾಗಿಲ್ಲದಿದ್ದರೆ, ಮೊದಲು ನಿರ್ದಿಷ್ಟ ಮರಣಶಾಸನ ಸ್ವತ್ತನ್ನು ಸಂದಾಯ ಮಾಡತಕ್ಕುದು ಮತ್ತು ನಿಧಿಯ ಶೇಷವನ್ನು (ಯಾವುದಾದರೂ ಇದ್ದರೆ) ನಿರ್ದೇಶನಾತ್ಮಕ ಮರಣಶಾಸನ ಸ್ವತ್ತನ್ನು ಸಂದಾಯ ಮಾಡಬಹುದಾದಷ್ಟರ ಮಟ್ಟಿಗೆ ವಿನಿಯೋಗಿಸತಕ್ಕುದು ಮತ್ತು ನಿರ್ದೇಶನಾತ್ಮಕ ಮರಣಶಾಸನ ಸ್ವತ್ತಿನ ಉಳಿದ ಭಾಗವನ್ನು ಮರಣಶಾಸನ ಕರ್ತನ ಸಾಮಾನ್ಯ ಆಸ್ತಿಗಳಿಂದ ಸಂದಾಯ ಮಾಡತಕ್ಕುದು.

ದೃಷ್ಟಾಂತ

'ಎ' ನು 'ಡಬ್ಲ್ಯೂ' ನಿಂದ ತನಗೆ ಬರಬೇಕಾದ 2,000 ರೂಪಾಯಿಗಳ ಋಣದ ಭಾಗವಾದ 1,000 ರೂಪಾಯಿಗಳನ್ನು 'ಬಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. ಅವನು 'ಡಬ್ಲ್ಯೂ' ನಿಂದ ತನಗೆ ಬರಬೇಕಾದ ಋಣದಿಂದ 'ಸಿ' ನಿಗೆ ಸಂದಾಯ ಮಾಡಬೇಕೆಂದು 1,000 ರೂಪಾಯಿಗಳನ್ನು ಸಹ ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನು ಆ ತರುವಾಯ ಆ ಋಣದ ಭಾಗವಾದ 500 ರೂಪಾಯಿಗಳನ್ನು ಸ್ವೀಕರಿಸುತ್ತಾನೆ ಮತ್ತು 'ಡಬ್ಲ್ಯೂ' ನಿಂದ ತನಗೆ ಬರಬೇಕಾದ 1500 ರೂಪಾಯಿಗಳನ್ನು ಮಾತ್ರ ಬಿಟ್ಟು ಮರಣ ಹೊಂದುತ್ತಾನೆ. ಈ 1500 ರೂಪಾಯಿಗಳಲ್ಲಿ 1000 ರೂಪಾಯಿಗಳು 'ಬಿ' ನಿಗೆ ಸೇರುತ್ತದೆ ಮತ್ತು 500 ರೂಪಾಯಿಗಳನ್ನು 'ಸಿ' ನಿಗೆ ಸಂದಾಯ ಮಾಡಬೇಕಾಗುತ್ತದೆ. 'ಸಿ' ನು ಮರಣಶಾಸನ ಕರ್ತನ ಸಾಮಾನ್ಯ ಆಸ್ತಿಗಳಿಂದ 500 ರೂಪಾಯಿಗಳನ್ನು ಸಹ ಸ್ವೀಕರಿಸಬೇಕಾಗುತ್ತದೆ.

158. ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟ ಸ್ಟಾಕು, ಮರಣಶಾಸನಕರ್ತನ ಮರಣದ ಕಾಲದಲ್ಲಿ ಅಸ್ತಿತ್ವದಲ್ಲಿ ಇಲ್ಲದಿರುವಲ್ಲಿ ಅದನ್ನು ಹಿಂತೆಗೆದುಕೊಳ್ಳುವುದು:- ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟ ಸ್ಟಾಕು ಮರಣಶಾಸನ ಕರ್ತನ ಮರಣ ಕಾಲದಲ್ಲಿ ಅಸ್ತಿತ್ವದಲ್ಲಿ ಇಲ್ಲದಿರುವಲ್ಲಿ, ಆ ಮರಣಶಾಸನ ಸ್ವತ್ತನ್ನು ಹಿಂತೆಗೆದುಕೊಳ್ಳಲಾಗುವುದು.

ದೃಷ್ಟಾಂತ

'ಎ' ನು 'ಬಿ' ನಿಗೆ -

"ಈಸ್ಟ್ ಇಂಡಿಯಾ ಸ್ಟಾಕಿನಲ್ಲಿನ ನನ್ನ 1000 ಬಂಡವಾಳ ಸ್ಟಾಕನ್ನು";

"ಕೇಂದ್ರ ಸರ್ಕಾರದ ಶೇಕಡಾ 4ರ ಸಾಲದ 10,000 ರೂಪಾಯಿಗಳ ನನ್ನ ಪ್ರಾಮಿಸರಿ ನೋಟುಗಳನ್ನು"

ಮರಣಶಾಸನದ ಮೂಲಕ ಕೊಡುತ್ತಾನೆ. ನಂತರ 'ಎ' ನು ಸ್ಟಾಕು ಮತ್ತು ನೋಟುಗಳನ್ನು ಮಾರಾಟ ಮಾಡುತ್ತಾನೆ. ಆದ್ದರಿಂದ ಆ ಮರಣಶಾಸನ ಸ್ವತ್ತುಗಳನ್ನು ಹಿಂತೆದುಕೊಳ್ಳಲಾಗಿದೆ.

159. ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟ ಸ್ಟಾಕು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಭಾಗಶಃ ಮಾತ್ರ ಅಸ್ತಿತ್ವದಲ್ಲಿರುವಷ್ಟರ ಮಟ್ಟಿಗೆ ಅದನ್ನು ಹಿಂತೆಗೆದುಕೊಳ್ಳುವುದು:- ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟ ಸ್ಟಾಕು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಭಾಗಶಃ ಮಾತ್ರ ಅಸ್ತಿತ್ವದಲ್ಲಿ ಇರುವಲ್ಲಿ ಆ ಮರಣಶಾಸನ ಸ್ವತ್ತನ್ನು ಅಸ್ತಿತ್ವದಲ್ಲಿರುವುದು ನಿಂತುಹೋಗಿರುವಂಥ ಸ್ಟಾಕಿನ ಭಾಗದಷ್ಟರ ಮಟ್ಟಿಗೆ ಹಿಂತೆಗೆದುಕೊಳ್ಳಲಾಗುವುದು.

ದೃಷ್ಟಾಂತ

'ಎ' ನು 'ಬಿ' ನಿಗೆ ಕೇಂದ್ರ ಸರ್ಕಾರದ ಶೇ 5 1/2 ಯ ಸಾಲದಲ್ಲಿನ ಅವನ 10,000 ರೂಪಾಯಿಗಳನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ತರುವಾಯ 'ಎ' ನು ಸಂಬಂಧಪಟ್ಟ ಸಾಲದಲ್ಲಿನ ಅವನ 10,000 ರೂಪಾಯಿಗಳ ಅರ್ಧ ಭಾಗವನ್ನು ಮಾರಾಟ ಮಾಡುತ್ತಾನೆ. ಆದ್ದರಿಂದ ಮರಣಶಾಸನ ಸ್ವತ್ತಿನ ಅರ್ಧ ಭಾಗವನ್ನು ಹಿಂತೆಗೆದುಕೊಂಡಂತಾಗಿದೆ.

160. ನಿಶ್ಚಿತ ಸ್ಥಳಕ್ಕೆ ಸಂಬಂಧಿಸಿದಂತೆ ವಿವರಿಸಲಾದ ಸರಕುಗಳ ನಿರ್ದಿಷ್ಟ ಮರಣಶಾಸನ ದಾನವನ್ನು ಅವುಗಳನ್ನು ಸ್ಥಳಾಂತರಿಸುವ ಕಾರಣದಿಂದಾಗಿ ಹಿಂತೆಗೆದುಕೊಳ್ಳದೇ ಇರುವುದು:- ನಿಶ್ಚಿತ ಸ್ಥಳಕ್ಕೆ ಸಂಬಂಧಿಸಿದ ಹಾಗೆ ವಿವರಿಸಿರುವಂಥ ಸರಕುಗಳ ನಿರ್ದಿಷ್ಟ ಮರಣಶಾಸನ ದಾನವನ್ನು ಯಾವುದೇ ತಾತ್ಕಾಲಿಕ ಕಾರಣದಿಂದ ಅಥವಾ ಮೋಸದಿಂದ ಅಥವಾ ಮರಣಶಾಸನ ಕರ್ತನಿಗೆ ಗೊತ್ತಾಗದಂತೆ ಅಥವಾ ಅವನ ಅನುಮತಿಯಿಲ್ಲದೆ ಅಂಥ ಸ್ಥಳದಿಂದ ಆ ಸರಕುಗಳನ್ನು ಸ್ಥಳಾಂತರಿಸಿರುವ ಕಾರಣದಿಂದಾಗಿ ಹಿಂತೆಗೆದುಕೊಂಡಂತಾಗುವುದಿಲ್ಲ.

ದೃಷ್ಟಾಂತಗಳು

(i) 'ಎ' ನು 'ಬಿ' ನಿಗೆ "ನನ್ನ ಮರಣ ಕಾಲದಲ್ಲಿ ಕಲ್ಕತ್ತಾದಲ್ಲಿನ ನನ್ನ ವಾಸದ ಮನೆಯಲ್ಲಿ ಅಥವಾ ಅದರ ಸುತ್ತಮುತ್ತ ಇರತಕ್ಕಂಥ ಎಲ್ಲ ನನ್ನ ಮನೆ ಬಳಕೆ ಸರಕುಗಳನ್ನು" ಎಂದು ಬರೆದು ಮರಣಶಾಸನದ ಮೂಲಕ ಕೊಡುತ್ತಾನೆ. ಆ ಸರಕುಗಳನ್ನು ಬೆಂಕಿಯಿಂದ ರಕ್ಷಿಸಲು ಮನೆಯಿಂದ ಅವುಗಳನ್ನು ಸ್ಥಳಾಂತರಿಸಲಾಯಿತು. ಅವುಗಳನ್ನು ವಾಪಸ್ಸು ತರುವುದಕ್ಕೆ ಮುಂಚೆ 'ಎ' ನು ಮರಣ ಹೊಂದುತ್ತಾನೆ.

(ii) 'ಎ' ನು 'ಬಿ' ನಿಗೆ "ನನ್ನ ಮರಣದ ಕಾಲದಲ್ಲಿ ಕಲ್ಕತ್ತಾದಲ್ಲಿನ ನನ್ನ ವಾಸದ ಮನೆಯಲ್ಲಿ ಅಥವಾ ಅದರ ಸುತ್ತಮುತ್ತ ಇರತಕ್ಕಂಥ ಎಲ್ಲ ಮನೆ ಬಳಕೆ ಸರಕುಗಳನ್ನು" ಎಂದು ಬರೆದು ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನು ಪ್ರಯಾಣ ಹೋದಾಗಿನ ಅವನ ಗೈರು ಹಾಜರಿಯಲ್ಲಿ ಆ ಎಲ್ಲ ಸರಕುಗಳನ್ನು ಆ ಮನೆಯಿಂದ ಸ್ಥಳಾಂತರಿಸಲಾಗಿದೆ. 'ಎ' ನು ಅವುಗಳ ಸ್ಥಳಾಂತರಣೆಗೆ ತನ್ನ ಅನುಮತಿಯನ್ನು ನೀಡದೆ ಮರಣ ಹೊಂದುತ್ತಾನೆ.

ಈ ಎರಡು ಮರಣಶಾಸನದ ಸ್ವತ್ತುಗಳ ಪೈಕಿ ಯಾವುದನ್ನೂ ಹಿಂತೆಗೆದುಕೊಂಡಂತಾಗುವುದಿಲ್ಲ.

161. ಮರಣಶಾಸನದ ಮೂಲಕ ಕೊಟ್ಟ ವಸ್ತುವನ್ನು ಸ್ಥಳಾಂತರಿಸುವುದು ಯಾವಾಗ ಹಿಂತೆಗೆದುಕೊಂಡಂತಾಗದು:- ಮರಣಶಾಸನದ ಮೂಲಕ ಕೊಟ್ಟ ವಸ್ತುವು ಯಾವ ಸ್ಥಳದಲ್ಲಿ ಇದೆಯೆಂದು ಉಯಿಲಿನಲ್ಲಿ ಹೇಳಲಾಗಿದೆಯೋ ಆ ಸ್ಥಳವನ್ನು ಮರಣಶಾಸನ ಕರ್ತನು ಮರಣಶಾಸದ ಮೂಲಕ ಕೊಡಲು ಉದ್ದೇಶಿಸಿದ ವಸ್ತುವಿನ ವಿವರಣೆಯನ್ನು ಪೂರ್ತಿಗೊಳಿಸುವ ಉದ್ದೇಶದಿಂದ ಮಾತ್ರ ಉಲ್ಲೇಖಿಸಿರುವಾಗ ಆ ಸ್ಥಳದಿಂದ ಆ ವಸ್ತುವನ್ನು ಸ್ಥಳಾಂತರಿಸುವುದು, ಮರಣಶಾಸನ ದಾನವನ್ನು ಹಿಂತೆಗೆದುಕೊಂಡಂತಾಗುವುದಿಲ್ಲ.

ದೃಷ್ಟಾಂತಗಳು

(i) 'ಎ' ನು 'ಬಿ' ನಿಗೆ "ಕಲ್ಕತ್ತಾದಲ್ಲಿ ನನ್ನ ವಸತಿ ಗೃಹದಲ್ಲಿ ಈಗಿರುವ ನನಗೆ ಸೇರಿದ ಹಣದ ಎಲ್ಲ ಬಿಲ್ಲುಗಳು, ಬಂಧಪತ್ರಗಳು ಮತ್ತು ಇತರ ಭದ್ರತಾ ಪತ್ರಗಳನ್ನು" ಎಂದು ಬರೆದು ಮರಣಶಾಸನದ ಮೂಲಕ ಕೊಡುತ್ತಾನೆ. ಆದರೆ ಅವನ ಮರಣ ಕಾಲದಲ್ಲಿ ಆ ವಸ್ತುವನ್ನು ಕಲ್ಕತ್ತಾದಲ್ಲಿನ ಅವನ ವಸತಿ ಗೃಹದಿಂದ ಸ್ಥಳಾಂತರಿಸಲಾಗಿತ್ತು.

(ii) 'ಎ' ನು 'ಬಿ' ನಿಗೆ ಕಲ್ಕತ್ತಾದಲ್ಲಿನ ಅವನ ಮನೆಯಲ್ಲಿನ ಎಲ್ಲ ಪೀಠೋಪಕರಣಗಳನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಅವನಿಗೆ ಕಲ್ಕತ್ತಾದಲ್ಲಿ ಒಂದು ಮನೆ ಮತ್ತು ಚಿನ್‌ಸುರಾದಲ್ಲಿ ಇನ್ನೊಂದು ಮನೆ ಇದೆ. ಅವನು ಆ ಮನೆಯಲ್ಲೊಮ್ಮೆ, ಇನ್ನೊಂದು ಮನೆಯಲ್ಲೊಮ್ಮೆ ವಾಸಿಸುತ್ತಾನೆ. ಅವನ ಬಳಿ ಪೀಠೋಪಕರಣಗಳ ಒಂದು ಸೆಟ್ ಮಾತ್ರ ಇದ್ದು ಅದನ್ನು ನಾನು ವಾಸಿಸುವ ಮನೆಗೆ ತನ್ನೊಂದಿಗೆ ಸ್ಥಳಾಂತರಿಸುತ್ತಿರುತ್ತಾನೆ. ಅವನ ಮರಣ ಕಾಲದಲ್ಲಿ ಆ ಪೀಠೋಪಕರಣಗಳು ಚಿನ್‌ಸುರಾದಲ್ಲಿನ ಮನೆಯಲ್ಲಿರುತ್ತವೆ.

(iii) 'ಎ' ನು 'ಬಿ' ನಿಗೆ ಹೂಗ್ಲಿ ನದಿಯಲ್ಲಿ ಆಗ ಲಂಗರಿನಲ್ಲಿರುವ ನಿಶ್ಚಿತ ಹಡಗಿನಲ್ಲಿ ಇರುವ ಅವನ ಎಲ್ಲ ಸರಕುಗಳನ್ನು ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನ ನಿರ್ದೇಶನಗಳ ಮೂಲಕ ಆ ಸರಕುಗಳನ್ನು ಒಂದು ಉಗ್ರಾಣಕ್ಕೆ ಸ್ಥಳಾಂತರಿಸಲಾಗಿದೆ. ಅವು 'ಎ' ನ ಮರಣದ ಕಾಲದಲ್ಲಿ ಅಲ್ಲೇ ಉಳಿದಿರುತ್ತವೆ.

- ಈ ಮರಣಶಾಸನ ಸ್ವತ್ತುಗಳ ಪೈಕಿ ಯಾವುದನ್ನೂ ಹಿಂತೆಗೆದುಕೊಳ್ಳುವ ಮೂಲಕ ರದ್ದುಪಡಿಸಿದಂತಾಗುವುದಿಲ್ಲ.

162. ಮರಣಶಾಸನದ ಮೂಲಕ ಕೊಟ್ಟ ವಸ್ತುವು, ಮರಣಶಾಸನ ಕರ್ತನು ಮೂರನೇ ವ್ಯಕ್ತಿಯಿಂದ ಸ್ವೀಕರಿಸಬೇಕಾದ ಬೆಲೆಯುಳ್ಳ ವಸ್ತುವಾಗಿದ್ದು ಅದನ್ನು ಮರಣಶಾಸನ ಕರ್ತನು ತಾನೇ ಸ್ವತಃ ಅಥವಾ ತನ್ನ ಪ್ರತಿನಿಧಿಯ ಮೂಲಕ ಸ್ವೀಕರಿಸಿದಾಗ:- ಮರಣಶಾಸನದ ಮೂಲಕ ಕೊಟ್ಟ ವಸ್ತುವು, ಮೂರನೇ ವ್ಯಕ್ತಿಯಿಂದ ಬೆಲೆ ಬಾಳುವ ಏನನ್ನಾದರೂ ಸ್ವೀಕರಿಸುವ ಹಕ್ಕು ಆಗಿಲ್ಲದೆ ಮೂರನೇ ವ್ಯಕ್ತಿಯಿಂದ ಮರಣಶಾಸನ ಕರ್ತನು ತಾನೇ ಸ್ವತಃ ಅಥವಾ ತನ್ನ ಪ್ರತಿನಿಧಿಗಳ ಮೂಲಕ ಸ್ವೀಕರಿಸಬಹುದಾದಂಥ ಹಣ ಅಥವಾ ಇತರ ವಸ್ತು ಆಗಿರುವಲ್ಲಿ, ಮರಣಶಾಸನ ಕರ್ತನು ಅಂಥ ಹಣದ ಮೊತ್ತವನ್ನು ಅಥವಾ ಇತರ ವಸ್ತುವನ್ನು ಸ್ವೀಕರಿಸುವುದು ಆ ಮರಣಶಾಸನ ದಾನವನ್ನು ಹಿಂತೆಗೆದುಕೊಂಡಂತಾಗುವುದಿಲ್ಲ. ಆದರೆ ಅವನ ಸ್ವತ್ತಿನ ಸಾಮಾನ್ಯ ರಾಶಿಯಲ್ಲಿ ಅದನ್ನು ಬೆರೆಸಿದರೆ ಆ ಮರಣಶಾಸನ ಸ್ವತ್ತನ್ನು ಹಿಂತೆಗೆದುಕೊಂಡಂತಾಗುತ್ತದೆ.

ದೃಷ್ಟಾಂತಗಳು

'ಎ' ನು 'ಸಿ' ನ ಮೇಲಿನ ತನ್ನ ಕ್ಲೇಮಿನಿಂದ ಸ್ವೀಕರಿಸಬಹುದಾದ ಯಾವುದೇ ಮೊತ್ತವನ್ನು 'ಬಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನು 'ಸಿ' ನ ಮೇಲಿನ ತನ್ನ ಸಂಪೂರ್ಣ ಕ್ಲೇಮನ್ನು ಸ್ವೀಕರಿಸುತ್ತಾನೆ ಮತ್ತು ಅದನ್ನು ತನ್ನ ಸ್ವತ್ತಿನ ಸಾಮಾನ್ಯ ರಾಶಿಯಿಂದ ಪ್ರತ್ಯೇಕವಾಗಿ ಇಡುತ್ತಾನೆ. ಆ ಮರಣಶಾಸನ ಸ್ವತ್ತನ್ನು ಹಿಂತೆಗೆದುಕೊಂಡಂತಾಗಿಲ್ಲ.

163. ಉಯಿಲಿನ ದಿನಾಂಕ ಮತ್ತು ಮರಣಶಾಸನ ಕರ್ತನ ಮರಣದ ದಿನಾಂಕ ಇವುಗಳ ನಡುವೆ ನಿರ್ದಿಷ್ಟ ಮರಣಶಾಸನದ ವಸ್ತು ವಿಷಯವು ಕಾನೂನಿನ ಪ್ರವರ್ತನೆಯ ಮೂಲಕ ಬದಲಾಗುವುದು:- ನಿರ್ದಿಷ್ಟವಾಗಿ ಮರಣ ಶಾಸನದ ಮೂಲಕ ಕೊಟ್ಟ ವಸ್ತುವು, ಉಯಿಲಿನ ಮತ್ತು ಮರಣಶಾಸನ ಕರ್ತನ ಮರಣದ ದಿನಾಂಕದ ನಡುವೆ ಬದಲಾವಣೆ ಹೊಂದುವಲ್ಲಿ ಮತ್ತು ಆ ಬದಲಾವಣೆಯು, ಕಾನೂನಿನ ಪ್ರವರ್ತನೆಯ ಮೂಲಕ ಅಥವಾ ಮರಣಶಾಸನದ ಮೂಲಕ ಕೊಟ್ಟಿರುವ ವಸ್ತುವನ್ನು ಯಾವ ಕಾನೂನು ಸಮ್ಮತ ಲಿಖಿತ ಉಪಬಂಧದ ಮೇರೆಗೆ ಹೊಂದಲಾಗಿತ್ತೋ ಆ ಯಾವುದೇ ಕಾನೂನು ಸಮ್ಮತ ಲಿಖಿತದ ಉಪಬಂಧಗಳನ್ನು ಜಾರಿಗೊಳಿಸುವ ಕ್ರಮದಲ್ಲಿ ಉಂಟಾಗುವಲ್ಲಿ ಆ ಮರಣಶಾಸನ ಸ್ವತ್ತನ್ನು ಅಂತಹ ಬದಲಾವಣೆಯ ಕಾರಣದಿಂದಾಗಿ ಹಿಂತೆಗೆದುಕೊಂಡಂತಾಗುವುದಿಲ್ಲ.

ದೃಷ್ಟಾಂತಗಳು

(i) 'ಎ' ನು 'ಬಿ' ನಿಗೆ "ಕೇಂದ್ರ ಸರ್ಕಾರದ ಶೇ $5^1/_2$ ಬಡ್ಡಿಯ ಸಾಲದಲ್ಲಿ ನಾನು ಹೊಂದಿರುವಂಥ ಎಲ್ಲ ಹಣವನ್ನು" ಎಂದು ಬರೆದು ಮರಣಶಾಸನದ ಮೂಲಕ ಕೊಡುತ್ತಾನೆ. ಆ ಶೇಕಡಾ $5^1/_2$ ಸಾಲದ ಭದ್ರತಾ ಪತ್ರಗಳನ್ನು 'ಎ' ನ ಜೀವಿತ ಕಾಲದಲ್ಲಿ ಶೇ 5 ರ ಸ್ಟಾಕಿಗೆ ಪರಿವರ್ತಿಸಲಾಗಿದೆ.

(ii) 'ಎ' ನು 'ಬಿ' ನಿಗೆ ಕನ್ ಸೋಲಿನಲ್ಲಿ 'ಎ' ನ ಟ್ರಸ್ಟಿಗಳ ಹೆಸರಿನಲ್ಲಿ ಹೂಡಲಾದ 2000 ದ ಮೊತ್ತವನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಆ 2,000ದ ಮೊತ್ತವನ್ನು ಆ ಟ್ರಸ್ಟಿಗಳು 'ಎ' ನ ಸ್ವಂತ ಹೆಸರಿಗೆ ವರ್ಗಾಯಿಸಿದ್ದಾರೆ.

(iii) 'ಎ' ನು 'ಬಿ' ನಿಗೆ ಕೇಂದ್ರ ಸರ್ಕಾರದ ಪ್ರಾಮಿಸರಿ ನೋಟುಗಳಲ್ಲಿನ 10,000 ರೂಪಾಯಿಗಳ ಮೊತ್ತವನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಅದನ್ನು ಅವನ ಮದುವೆಯ ವ್ಯವಸ್ಥೆಯ ಮೇರೆಗೆ ಮರಣಶಾಸನದ ಮೂಲಕ ವಿಲೆ ಮಾಡಲು ಅಧಿಕಾರ ಹೊಂದಿದ್ದಾನೆ. ಆ ತರುವಾಯ 'ಎ' ನ ಜೀವಿತ ಕಾಲದಲ್ಲಿ ಆ ನಿಧಿಯನ್ನು ಕನ್‌ಸೋಲುಗಳಿಗೆ, ಆ ವ್ಯವಸ್ಥೆಯಲ್ಲಿ ಒಳಗೊಂಡ ಅಧಿಕಾರದಿಂದಾಗಿ ಪರಿವರ್ತಿಸಲಾಗಿದೆ. ಆ ಮರಣ ಶಾಸನ ಸ್ವತ್ತುಗಳಲ್ಲಿ ಯಾವುದನ್ನೂ ಹಿಂತೆಗೆದುಕೊಂಡಂತಾಗುವುದಿಲ್ಲ.

164. ಮರಣ ಶಾಸನ ಕರ್ತನಿಗೆ ತಿಳಿಯದೆ ವಸ್ತುವಿನ ಬದಲಾವಣೆ:- ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟ ವಸ್ತುವು ಉಯಿಲಿನ ದಿನಾಂಕ ಮತ್ತು ಮರಣಶಾಸನ ಕರ್ತನ ಮರಣದ ದಿನಾಂಕದ ನಡುವೆ ಬದಲಾವಣೆಯನ್ನು ಹೊಂದುವಲ್ಲಿ ಮತ್ತು ಮರಣಶಾಸನ ಕರ್ತನಿಗೆ ತಿಳಿಯದೆ ಅಥವಾ ಅವನ ಅನುಮತಿ ಇಲ್ಲದೆ ಆ ಬದಲಾವಣೆಯನ್ನು ಮಾಡಿರುವಲ್ಲಿ ಆ ಮರಣಶಾಸನ ಸ್ವತ್ತನ್ನು ಹಿಂತೆಗೆದುಕೊಂಡಂತಾಗುವುದಿಲ್ಲ.

ದೃಷ್ಟಾಂತ

'ಎ' ನು 'ಬಿ' ನಿಗೆ "ನನ್ನ ಎಲ್ಲ ಶೇಕಡಾ ಮೂರರ ಕನ್‌ಸೋಲ್‌ಗಳನ್ನು" ಎಂದು ಬರೆದು ಮರಣಶಾಸನದ ಮೂಲಕ ಕೊಡುತ್ತಾನೆ. ಸಾಲಗಳನ್ನು 'ಎ' ನಿಗೆ ತಿಳಿಯದೇ ಅವನ ಏಜೆಂಟನು ಮಾರಾಟ ಮಾಡುತ್ತಾನೆ ಮತ್ತು ಉತ್ಪತ್ತಿಗಳನ್ನು ಈಸ್ಟ್ ಇಂಡಿಯಾ ಸ್ಟಾಕಿಗೆ ಪರಿವರ್ತಿಸುತ್ತಾನೆ. ಈ ಮರಣಶಾಸನ ಸ್ವತ್ತನ್ನು ಹಿಂತೆಗೆದುಕೊಂಡಂತಾಗಿಲ್ಲ.

165. ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟ ಸ್ಟಾಕನ್ನು, ಬದಲಿ ಸ್ಟಾಕನ್ನು ಕೊಡಬೇಕೆಂಬ ಷರತ್ತಿನ ಮೇಲೆ ಮೂರನೇ ವ್ಯಕ್ತಿಗೆ ಎರವಲು ನೀಡುವುದು:- ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಡಲಾದಂಥ ಸ್ಟಾಕನ್ನು, ಬದಲಿ ಸ್ಟಾಕನ್ನು ಕೊಡಬೇಕೆಂಬ ಷರತ್ತಿನ ಮೇಲೆ ಮೂರನೇ ವ್ಯಕ್ತಿಗೆ ಎರವಲು ಕೊಟ್ಟಿದ್ದು, ತದನುಸಾರವಾಗಿ ಬದಲಿ ಸ್ಟಾಕನ್ನು ಒದಗಿಸಿರುವಲ್ಲಿ, ಆ ಮರಣಶಾಸನ ಸ್ವತ್ತನ್ನು ಹಿಂತೆಗೆದುಕೊಂಡಂತಾಗುವುದಿಲ್ಲ.

166. ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟ ಸ್ಟಾಕನ್ನು ಮಾರಾಟ ಮಾಡಿದ ತರುವಾಯ ಅದಕ್ಕೆ ಬದಲಿಯಾಗಿ ಒದಗಿಸಿದ ಮತ್ತು ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಅವನಿಗೆ ಸೇರಿದ್ದ ಸ್ಟಾಕು:- ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟ ಸ್ಟಾಕನ್ನು ಮಾರಾಟ ಮಾಡಿರುವಲ್ಲಿ ಮತ್ತು ಅದೇ ಸ್ಟಾಕಿನ ಸಮ ಪ್ರಮಾಣವನ್ನು ಆ ತರುವಾಯ ಖರೀದಿ ಮಾಡಿರುವಲ್ಲಿ ಮತ್ತು ಅದು ಮರಣಶಾಸನ ಕರ್ತನಿಗೆ, ಅವನ ಮರಣದ ಸಮಯದಲ್ಲಿ ಸೇರಿದ್ದರೆ ಆ ಮರಣಶಾಸನ ಸ್ವತ್ತನ್ನು ಹಿಂತೆಗೆದುಕೊಂಡಂತಾಗುವುದಿಲ್ಲ.

## ಅಧ್ಯಾಯ - XVII

### ಮರಣಶಾಸನ ದಾನದ ವಸ್ತುವಿನ ಸಂಬಂಧದಲ್ಲಿನ ಹೊಣೆಗಾರಿಕೆಗಳ ಸಂದಾಯದ ಬಗ್ಗೆ

167. ನಿರ್ದಿಷ್ಟ ಲೆಗಟಿಗಳನ್ನು ವಿಮೋಚನೆ ಮಾಡಲು ನಿರ್ವಾಹಕನಿಗೆ ಹೊಣೆಗಾರಿಕೆ ಇಲ್ಲದಿರುವುದು:- (1) ನಿರ್ದಿಷ್ಟವಾಗಿ ಮರಣಶಾಸನದ ಮೂಲಕ ಕೊಟ್ಟ ಸ್ವತ್ತು, ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಮರಣ ಶಾಸನಕರ್ತನು ತಾನಾಗಿಯೇ ಅಥವಾ ಅವನು ಯಾರ ಅಧೀನದಲ್ಲಿ ಕ್ಲೇಮು ಮಾಡುವನೋ ಆ ಯಾವನೇ ವ್ಯಕ್ತಿಯು ಸೃಜಿಸಿದ ಯಾವುದೇ ಗಿರವಿ, ಧಾರಣಾಧಿಕಾರ ಅಥವಾ ಪೂರ್ವಾಧಿಗೆ ಒಳಪಟ್ಟಿರುವಲ್ಲಿ, ಆಗ, ಉಯಿಲಿನಲ್ಲಿ ತದ್ವಿರುದ್ಧವಾದ ಉದ್ದೇಶವು ಕಂಡುಬಂದ ಹೊರತು, ಆ ಲೆಗಟಿಯು ಮರಣಶಾಸನ ದಾನವನ್ನು ಸ್ವೀಕರಿಸಿದರೆ ಅದನ್ನು ಅಂಥ ಗಿರವಿ ಅಥವಾ ಪೂರ್ವಾಧಿಗೆ ಒಳಪಟ್ಟು ಅಂಗೀಕರಿಸತಕ್ಕುದು ಮತ್ತು ( ಅವನಿಗೆ ಮತ್ತು ಮರಣಶಾಸನಕರ್ತನ ಎಸ್ಟೇಟಿಗೆ ಸಂಬಂಧಪಡುವ ಮಟ್ಟಿಗೆ) ಅಂಥ ಗಿರವಿ ಅಥವಾ ಪೂರ್ವಾಧಿಯ ಮೊಬಲಗನ್ನು ತುಂಬಿಕೊಡಲು ಹೊಣೆಯಾಗಿರತಕ್ಕುದು.

(2) ಮರಣಶಾಸನ ಕರ್ತನ ಋಣಗಳನ್ನು ಸಾಮಾನ್ಯವಾಗಿ ಸಂದಾಯ ಮಾಡುವುದಕ್ಕಾಗಿ, ಉಯಿಲು ಒಳಗೊಂಡಿರಬಹುದಾದಂಥ ಯಾವುದೇ ನಿರ್ದೇಶನದಿಂದ ತದ್ವಿರುದ್ಧವಾದ ಉದ್ದೇಶವನ್ನು ಊಹಿಸತಕ್ಕುದಲ್ಲ.

ವಿವರಣೆ:- ಭೂ ಕಂದಾಯದ ಸ್ವರೂಪದ ಅಥವಾ ಬಾಡಿಗೆಯ ಸ್ವರೂಪದ ನಿಯತಕಾಲಿಕ ಸಂದಾಯವು ಈ ಪ್ರಕರಣದ ಮೂಲಕ ಯೋಚಿಸಲಾದಂಥ ಪೂರ್ವಾಧಿಯಾಗುವುದಿಲ್ಲ.

ದೃಷ್ಟಾಂತಗಳು

(i) 'ಎ' ನು ಅವನಿಗೆ 'ಸಿ' ನು ಕೊಟ್ಟಿದ್ದ ವಜ್ರದುಂಗುರವನ್ನು ಮರಣಶಾಸನದ ಮೂಲಕ 'ಬಿ' ನಿಗೆ ಕೊಡುತ್ತಾನೆ. 'ಎ' ನ ಮರಣದ ಕಾಲದಲ್ಲಿ ಆ ಉಂಗುರವು 'ಡಿ' ನ ಬಳಿ ಗಿರವಿಯಲ್ಲಿ ಇರುತ್ತದೆ. ಅದನ್ನು 'ಎ' ನು 'ಡಿ' ನಲ್ಲಿ ಗಿರವಿ ಇಟ್ಟಿದ್ದನು. ಮರಣಶಾಸನ ಕರ್ತನ ಆಸ್ತಿಗಳು ಸಾಕಷ್ಟಿದ್ದರೆ ಉಂಗುರವನ್ನು ಬಿಡಿಸಿಕೊಳ್ಳಲು 'ಬಿ' ನಿಗೆ ಅವಕಾಶ ಮಾಡಿಕೊಡುವುದು 'ಎ' ನ ನಿರ್ವಾಹಕರ ಕರ್ತವ್ಯವಾಗಿರತಕ್ಕುದು.

(ii) 'ಎ' ನು 'ಬಿ' ನಿಗೆ ಒಂದು ಜಮೀನುದಾರಿಯನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಅದು 'ಎ' ನ ಮರಣದ ಕಾಲದಲ್ಲಿ 10,000 ರೂಪಾಯಿಗಳ ಅಡಮಾನಕ್ಕೆ ಒಳಪಟ್ಟಿದೆ. ಮತ್ತು 'ಎ' ನ ಮರಣದ ಕಾಲದಲ್ಲಿ 10,000 ರೂಪಾಯಿಗಳ ಅಸಲು ಮತ್ತು 1000 ರೂ.ಗಳ ಬಡ್ಡಿ ಬಾಕಿ ಉಳಿದಿದೆ. 'ಬಿ' ನು ಮರಣಶಾಸನ ದಾನವನ್ನು ಅಂಗೀಕರಿಸುವುದಾದರೆ ಮರಣಶಾಸನ ಕರ್ತನ ಋಣ ಭಾರಕ್ಕೆ ಒಳಪಟ್ಟು ಅಂಗೀಕರಿಸಬೇಕಾಗುತ್ತದೆ. ಆದ್ದರಿಂದ ಅವನಿಗೆ ಮತ್ತು 'ಎ' ನ ಎಸ್ಟೇಟಿಗೆ ಸಂಬಂಧಪಟ್ಟ ಹಾಗೆ ಬಾಕಿ ಇರುವ 11,000 ರೂಪಾಯಿಗಳ ಮೊತ್ತವನ್ನು ಸಂದಾಯ ಮಾಡಲು ಹೊಣೆಗಾರನಾಗಬೇಕಾಗುತ್ತದೆ.

168. ಮರಣಶಾಸನದ ಮೂಲಕ ಕೊಟ್ಟ ವಸ್ತುಗಳಿಗೆ ಮರಣಶಾಸನ ಕರ್ತನ ಸ್ವಾಮ್ಯವನ್ನು, ಅವನ ಎಸ್ಟೇಟಿನ ಖರ್ಚಿನಲ್ಲಿ ಪೂರ್ಣಗೊಳಿಸುವುದು:- ಮರಣಶಾಸನದ ಮೂಲಕ ಕೊಟ್ಟ ವಸ್ತುವಿಗೆ ಮರಣಶಾಸನ ಕರ್ತನ ಸ್ವಾಮ್ಯವನ್ನು ಪೂರ್ಣಗೊಳಿಸಲು ಏನನ್ನಾದರೂ ಮಾಡಬೇಕಾಗಿರುವಲ್ಲಿ ಅದನ್ನು ಮರಣಶಾಸನಕರ್ತನ ಎಸ್ಟೇಟಿನ ಖರ್ಚಿನಲ್ಲಿ ಮಾಡಬೇಕು.

ದೃಷ್ಟಾಂತಗಳು

(i) 'ಎ' ನು ಭೂಮಿಯ ಒಂದು ತುಂಡನ್ನು ಒಂದು ನಿಶ್ಚಿತ ಬೆಲೆಗೆ ಖರೀದಿ ಮಾಡುವುದಕ್ಕಾಗಿ ಸಾಮಾನ್ಯ ನಿಬಂಧನೆಗಳಲ್ಲಿ ಕರಾರು ಮಾಡಿಕೊಂಡಿದ್ದು, 'ಬಿ' ನಿಗೆ ಮರಣಶಾಸನದ ಮೂಲಕ ಅದನ್ನು ಕೊಡುತ್ತಾನೆ ಮತ್ತು ಸಂದಾಯ ಮಾಡುವುದಕ್ಕೆ ಮುಂಚೆ ಮರಣ ಹೊಂದುತ್ತಾನೆ. ಖರೀದಿ ಹಣವನ್ನು 'ಎ' ನ ಆಸ್ತಿಗಳ ಖರ್ಚಿನಲ್ಲಿ ತುಂಬಿ ಕೊಡಬೇಕು.

(ii) 'ಎ' ನು ಭೂಮಿಯ ಒಂದು ತುಂಡನ್ನು ಒಂದು ನಿಶ್ಚಿತ ಹಣದ ಮೊತ್ತಕ್ಕೆ ಖರೀದಿಸುವುದಕ್ಕಾಗಿ ಕರಾರು ಮಾಡಿಕೊಂಡಿದ್ದು ಅದರ ಅರ್ಧವನ್ನು ಆಗಲೇ ಸಂದಾಯ ಮಾಡಬೇಕಿತ್ತು ಮತ್ತು ಉಳಿದ ಅರ್ಧವನ್ನು ಆ ಭೂಮಿಯ ಅಡಮಾನದ ಮೂಲಕ ಭದ್ರಗೊಳಿಸಲಾಗಿದ್ದು ಅದನ್ನು 'ಬಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ ಮತ್ತು ಖರೀದಿ ಹಣದ ಯಾವುದೇ ಭಾಗವನ್ನು ಸಂದಾಯ ಮಾಡುವುದಕ್ಕೆ ಅಥವಾ ಭದ್ರತೆಗೊಳಿಸುವುದಕ್ಕೆ ಮುಂಚೆ ಮರಣ ಹೊಂದುತ್ತಾನೆ ಖರೀದಿ ಹಣದ ಅರ್ಧ ಭಾಗವನ್ನು 'ಎ' ನ ಆಸ್ತಿಗಳಿಂದ ಸಂದಾಯ ಮಾಡಬೇಕು.

169. ಭೂ ಕಂದಾಯ ಅಥವಾ ಬಾಡಿಗೆಯನ್ನು ನಿಯತಕಾಲಿಕವಾಗಿ ಸಂದಾಯ ಮಾಡಬೇಕಾದ ಲೆಗಟಿಯ ಸ್ಥಿರ ಸ್ವತ್ತಿನ ವಿಮೋಚನೆ :- ಯಾವ ಸ್ಥಿರ ಸ್ವತ್ತಿನ ಬಗ್ಗೆ ಭೂ ಕಂದಾಯದ ಸ್ವರೂಪದ ಅಥವಾ ಬಾಡಿಗೆ ಸ್ವರೂಪದ ಸಂದಾಯವನ್ನು ನಿಯತಕಾಲಿಕವಾಗಿ ಮಾಡಬೇಕಾಗಿದೆಯೋ ಆ ಸ್ಥಿರ ಸ್ವತ್ತಿನಲ್ಲಿನ ಯಾವುದೇ ಹಿತಾಸಕ್ತಿಯನ್ನು ಮರಣಶಾಸನದ ಮೂಲಕ ಕೊಟ್ಟಿರುವಲ್ಲಿ, ಅಂಥ ಎಸ್ಟೇಟು ಮತ್ತು ಲೆಗಟಿಗೆ ಸಂಬಂಧಪಟ್ಟ ಹಾಗೆ ಮರಣಶಾಸನ ಕರ್ತನ ಎಸ್ಟೇಟಿನಿಂದ ಅವನ ಮರಣದ ದಿವಸದವರೆಗಿನ, ಸಂದರ್ಭಾನುಸಾರ ಅಂಥ ಸಂದಾಯಗಳನ್ನು ಅಥವಾ ಅವುಗಳ ಒಂದು ಪ್ರಮಾಣವನ್ನು ತುಂಬಿಕೊಡತಕ್ಕುದು.

ದೃಷ್ಟಾಂತ

'ಎ' ನು 'ಬಿ' ನಿಗೆ ಒಂದು ಮನೆಯನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಆ ಮನೆಗೆ ವರ್ಷಕ್ಕೆ 365 ರೂ.ಗಳ ಬಾಡಿಗೆ ಕೊಡಬೇಕಾಗುತ್ತದೆ. 'ಎ' ನು ನಿಗದಿತ ಸಮಯದಲ್ಲಿ ಬಾಡಿಗೆ ಸಂದಾಯ ಮಾಡುತ್ತಾನೆ. ಮತ್ತು ಆ ಮೇಲೆ 25 ದಿನಗಳ ತರುವಾಯ ಮರಣ ಹೊಂದುತ್ತಾನೆ. ಬಾಡಿಗೆಗೆ ಸಂಬಂಧಿಸಿದಂತೆ 'ಎ' ನ ಎಸ್ಟೇಟಿನಿಂದ 25 ರೂಪಾಯಿಗಳನ್ನು ತುಂಬಿಕೊಡಬೇಕಾಗುತ್ತದೆ.

170. ನಿರ್ದಿಷ್ಟ ಲೆಗಟಿಯ ಜಾಯಿಂಟ್ ಸ್ಟಾಕ್ ಕಂಪನಿಯಲ್ಲಿನ ಸ್ಟಾಕಿನ ವಿಮೋಚನೆ:- ಉಯಿಲಿನಲ್ಲಿ ಯಾವುದೇ ನಿರ್ದೇಶನವೂ ಇಲ್ಲದಿರುವಲ್ಲಿ ಜಾಯಿಂಟ್ ಸ್ಟಾಕ್ ಕಂಪನಿಯಲ್ಲಿನ ಸ್ಟಾಕನ್ನು ನಿರ್ದಿಷ್ಟ ಮರಣಶಾಸನ ದಾನವಾಗಿ ಕೊಟ್ಟಿರುವಲ್ಲಿ ಸ್ಟಾಕಿಗೆ ಸಂಬಂಧಿಸಿದಂತೆ ಮರಣಶಾಸನ ಕರ್ತನ ಮರಣದ ಕಾಲದಲ್ಲಿ ಅವನಿಂದ ಯಾವುದೇ ಕಂತು ಹಣ ಅಥವಾ ಇತರ ಸಂದಾಯವು ಬಾಕಿ ಇದ್ದರೆ, ಅಂಥ ಕಂತು ಹಣ ಅಥವಾ ಸಂದಾಯವನ್ನು, ಮರಣಶಾಸನ ಕರ್ತನ ಎಸ್ಟೇಟು ಮತ್ತು ಲೆಗಟಿಗೆ ಸಂಬಂಧಪಟ್ಟ ಹಾಗೆ ಎಸ್ಟೇಟಿನಿಂದ ಭರಿಸತಕ್ಕದ್ದು; ಆದರೆ ಅಂಥ ಸ್ಟಾಕಿಗೆ ಸಂಬಂಧಿಸಿದಂತೆ ಮರಣಶಾಸನ ಕರ್ತನ ಮರಣಾನಂತರ ಯಾವುದೇ ಕಂತು ಹಣ ಅಥವಾ ಇತರ ಸಂದಾಯವು ಬಾಕಿಯಾದರೆ ಅದನ್ನು ಮರಣ ಶಾಸನಕರ್ತನ ಎಸ್ಟೇಟು ಮತ್ತು ಲೆಗಟಿಗೆ ಸಂಬಂಧಪಟ್ಟ ಹಾಗೆ ಲೆಗಟಿಯು ಆ ಮರಣಶಾಸನ ದಾನವನ್ನು ಅಂಗೀಕರಿಸಿದರೆ ಅವನು ಭರಿಸತಕ್ಕುದು.

ದೃಷ್ಟಾಂತಗಳು

(i) 'ಎ' ನು ಒಂದು ನಿಶ್ಚಿತ ರೈಲ್ವೆಯಲ್ಲಿನ ಅವನ ಷೇರುಗಳನ್ನು ಮರಣಶಾಸನದ ಮೂಲಕ 'ಎ' ನಿಗೆ ಕೊಡುತ್ತಾನೆ. 'ಎ' ನ ಮರಣ ಕಾಲದಲ್ಲಿ ಪ್ರತಿಯೊಂದು ಷೇರಿಗೆ ಸಂಬಂಧಿಸಿದಂತೆ ನೂರು ರೂಪಾಯಿಗಳ ಮೊತ್ತವು ಅವನಿಂದ ಬಾಕಿಯಾಗಿತ್ತು. ಆ ಮೊತ್ತವು ಕ್ರಮಬದ್ಧವಾಗಿ ಮಾಡಿದಂಥ ಕಂತು ಹಣದ ಮೊತ್ತವಾಗಿತ್ತು ಮತ್ತು ಪ್ರತಿ ಷೇರಿಗೆ ಸಂಬಂಧಿಸಿದ ಐದು ರೂಪಾಯಿ ಮೊತ್ತವು ಕಂತು ಹಣಕ್ಕೆ ಸಂಬಂಧಿಸಿ ಬಾಕಿ ನಿಂತ ಬಡ್ಡಿಯ ಮೊಬಲಗು ಆಗಿತ್ತು. ಈ ಸಂದಾಯಗಳನ್ನು 'ಎ' ನ ಎಸ್ಟೇಟಿನಿಂದ ಭರಿಸತಕ್ಕುದು.

(ii) 'ಎ' ನು ಒಂದು ಉದ್ದೇಶಿತ ಜಾಯಿಂಟ್ ಸ್ಟಾಕ್ ಕಂಪನಿಯಲ್ಲಿ 50 ಷೇರುಗಳನ್ನು ತೆಗೆದುಕೊಳ್ಳಲು ಒಪ್ಪಿಕೊಂಡಿದ್ದಾನೆ ಮತ್ತು ಪ್ರತಿಯೊಂದು ಷೇರಿಗೆ ಸಂಬಂಧಿಸಿದಂತೆ ನೂರು ರೂಪಾಯಿಗಳನ್ನು ಸಂದಾಯ ಮಾಡಲು ಕರಾರು ಮಾಡಿಕೊಂಡಿದ್ದಾನೆ. ಈ ಮೊತ್ತವನ್ನು ಅವನ ಷೇರುಗಳಿಗೆ ಅವನ ಸ್ವಾಮ್ಯವನ್ನು ಪಕ್ಕಾ ಮಾಡುವುದಕ್ಕೆ ಮುಂಚೆ ಸಂದಾಯ ಮಾಡಬೇಕು. 'ಎ' ನು ಈ ಷೇರುಗಳನ್ನು 'ಬಿ' ನಿಗೆ ಮರಣ ಶಾಸನದ ಮೂಲಕ ಕೊಡುತ್ತಾನೆ. 'ಎ' ನ ಎಸ್ಟೇಟಿನಿಂದ 'ಎ' ನ ಸ್ವಾಮ್ಯವನ್ನು ಪಕ್ಕಾ ಮಾಡಲು ಅವಶ್ಯವಾದಂಥ ಸಂದಾಯಗಳನ್ನು ತುಂಬಿ ಕೊಡಬೇಕು.

(iii) 'ಎ' ನು 'ಬಿ' ನಿಗೊಂದು ನಿಶ್ಚಿತ ರೈಲ್ವೆಯಲ್ಲಿನ ತನ್ನ ಷೇರುಗಳನ್ನು ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನು ಆ ಮರಣಶಾಸನ ಸ್ವತ್ತನ್ನು ಅಂಗೀಕರಿಸುತ್ತಾನೆ. 'ಎ' ನು ಮರಣಾನಂತರ ಆ ಷೇರುಗಳಿಗೆ ಸಂಬಂಧಿಸಿದಂತೆ ಕಂತು ಹಣಕ್ಕಾಗಿ ಕೋರಲಾಗಿದೆ. 'ಬಿ' ನು ಆ ಕಂತು ಹಣವನ್ನು ಸಂದಾಯ ಮಾಡಬೇಕು.

(iv) 'ಎ' ನು 'ಬಿ' ನಿಗೆ ಒಂದು ಜಾಯಿಂಟ್ ಸ್ಟಾಕು ಕಂಪನಿಯಲ್ಲಿನ ತನ್ನ ಷೇರುಗಳನ್ನು ಮರಣಶಾಸನದ ಮೂಲಕ ಕೊಡುತ್ತಾನೆ. 'ಬಿ' ನು ಮರಣಶಾಸನ ದಾನವನ್ನು ಅಂಗೀಕರಿಸುತ್ತಾನೆ. ಆ ತರುವಾಯ ಆ ಕಂಪನಿ ವ್ಯವಹಾರಗಳು ಸಮಾಪನಗೊಂಡಿವೆ. ಮತ್ತು ಪ್ರತಿಯೊಬ್ಬ ಷೇರುದಾರರನ್ನು ವಂತಿಗೆಯನ್ನು ಕೊಡಬೇಕೆಂದು ಕೋರಲಾಗಿದೆ. ವಂತಿಗೆಯ ಮೊಬಲಗನ್ನು ಲೆಗಟಿಯು ಭರಿಸಬೇಕಾಗುತ್ತದೆ.

(v) 'ಎ' ನು ಒಂದು ರೈಲ್ವೆ ಕಂಪನಿಯಲ್ಲಿ ಹತ್ತು ಷೇರುಗಳ ಒಡೆಯನಾಗಿದ್ದಾನೆ. ಅವನ ಜೀವಿತ ಕಾಲದಲ್ಲಿ ನಡೆದ ಸಭೆಯಲ್ಲಿ ಮೂರು ಕಂತುಗಳ ಮೂಲಕ ಸಂದಾಯ ಮಾಡಬೇಕಾದ, ಪ್ರತಿಯೊಂದು ಷೇರಿಗೆ ಐವತ್ತು ರೂಪಾಯಿಗಳ ಕಂತು ಹಣಕ್ಕಾಗಿ ಕೋರಿಕೆ ಮಾಡಲಾಗಿದೆ. 'ಎ' ನು ಅವನ ಷೇರುಗಳನ್ನು 'ಬಿ' ನಿಗೆ ಮರಣ ಶಾಸನದ ಮೂಲಕ ಕೊಡುತ್ತಾನೆ ಮತ್ತು ಅವನು ಮೊದಲನೆಯ ಸಂದಾಯಕ್ಕಾಗಿ ನಿಗದಿಪಡಿಸಿದ ದಿವಸ ಮತ್ತು ಎರಡನೆಯ ಕಂತಿನ ಸಂದಾಯಕ್ಕಾಗಿ ನಿಗದಿಪಡಿಸಿದ ದಿವಸದ ನಡುವೆ ಮತ್ತು ಮೊದಲನೇ ಕಂತನ್ನು ಸಂದಾಯ ಮಾಡದೇ ಮರಣ ಹೊಂದುತ್ತಾನೆ. 'ಎ' ನ ಎಸ್ಟೇಟು ಮೊದಲನೇ ಕಂತನ್ನು ಸಂದಾಯ ಮಾಡಬೇಕು. ಮತ್ತು 'ಬಿ' ನು ಆ ಮರಣಶಾಸನ ಸ್ವತ್ತನ್ನು ಅಂಗೀಕರಿಸಿದರೆ ಉಳಿದ ಕಂತುಗಳನ್ನು ಸಂದಾಯ ಮಾಡಬೇಕು.

## ಅಧ್ಯಾಯ - XVIII

### ಸಾಮಾನ್ಯ ಪದಗಳಲ್ಲಿ ವಿವರಿಸಿದ ವಸ್ತುಗಳ ಮರಣಶಾಸನ ದಾನಗಳ ಬಗ್ಗೆ

171. ಸಾಮಾನ್ಯ ಪದಗಳಲ್ಲಿ ವಿವರಿಸಿದ ವಸ್ತುಗಳ ಮರಣಶಾಸನ ದಾನ:- ಸಾಮಾನ್ಯ ಪದಗಳಲ್ಲಿ ವಿವರಿಸಿದ ಯಾವುದೇ ವಸ್ತುವಿನ ಮರಣಶಾಸನ ದಾನವನ್ನು ಕೊಟ್ಟಿದ್ದರೆ, ನಿರ್ವಾಹಕನು ಆ ವಿವರಣೆ ಅನುರೂಪವಾಗಿರುವುದೆಂದು ಯುಕ್ತವಾಗಿ ಪರಿಗಣಿಸಬಹುದಾದಂಥ ವಸ್ತುವನ್ನು ಲೆಗಟಿಗೋಸ್ಕರ ಖರೀದಿಸತಕ್ಕುದು.

ದೃಷ್ಟಾಂತಗಳು

(i) 'ಎ' ನು 'ಬಿ' ನಿಗೆ ಒಂದು ಜೋಡಿ ಗಾಡಿ ಕುದುರೆಗಳನ್ನು ಅಥವಾ ಒಂದು ವಜ್ರದುಂಗುರವನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಆಸ್ತಿಗಳು ಸಾಕಷ್ಟಿದ್ದರೆ ನಿರ್ವಾಹಕನು ಅಂಥ ವಸ್ತುಗಳನ್ನು ಲೆಗಟಿಗೆ ಒದಗಿಸತಕ್ಕುದು.

(ii) 'ಎ' ನು 'ಬಿ' ನಿಗೆ "ನನ್ನ ಜೋಡಿ ಗಾಡಿ ಕುದುರೆಗಳನ್ನು" ಎಂದು ಬರೆದು ಒಂದು ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನಿಗೆ ಅವನ ಮರಣದ ಕಾಲದಲ್ಲಿ ಗಾಡಿ ಕುದುರೆಗಳು ಇರಲಿಲ್ಲ. ಆದ್ದರಿಂದ ಆ ಮರಣಶಾಸನ ಸ್ವತ್ತು ವಿಫಲವಾಗುತ್ತದೆ.

## ಅಧ್ಯಾಯ - XIX

### ನಿಧಿಯ ಬಡ್ಡಿ ಅಥವಾ ಉತ್ಪನ್ನದ ಮರಣಶಾಸನ ದಾನದ ಬಗ್ಗೆ

172. ನಿಧಿಯ ಬಡ್ಡಿ ಅಥವಾ ಉತ್ಪನ್ನದ ಮರಣಶಾಸನ ದಾನ:- ಒಂದು ನಿಧಿಯ ಬಡ್ಡಿ ಅಥವಾ ಉತ್ಪನ್ನವನ್ನು ಯಾವನೇ ವ್ಯಕ್ತಿಗೆ ಮರಣಶಾಸನದ ಮೂಲಕ ಕೊಟ್ಟಿರುವಲ್ಲಿ ಮತ್ತು ಆ ಮರಣಶಾಸನ ದಾನದ ಉಪಭೋಗವು ಸೀಮಿತ ಕಾಲಕ್ಕಾಗಿ ಇರತಕ್ಕುದು ಎಂಬ ಉದ್ದೇಶವನ್ನು ಉಯಿಲಿನಲ್ಲಿ ಸೂಚಿಸದೇ ಇದ್ದಲ್ಲಿ, ಸದರಿ ಅಸಲು ಹಾಗೂ ಬಡ್ಡಿಯು ಲೆಗಟಿಗೆ ಸೇರತಕ್ಕುದು.

ದೃಷ್ಟಾಂತಗಳು

(i) 'ಎ' ನು 'ಬಿ' ನಿಗೆ ಕೇಂದ್ರ ಸರ್ಕಾರದ ತನ್ನ ಶೇಕಡಾ ಐದರ ಪ್ರಾಮಿಸರಿ ನೋಟುಗಳ ಮೇಲಣ ಬಡ್ಡಿಯನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಆ ಭದ್ರತಾ ಪತ್ರಗಳ ಮೇಲೆ ಪರಿಣಾಮ ಬೀರುವ ಬೇರೆ ಯಾವ ಖಂಡವೂ ಉಯಿಲಿನಲ್ಲಿ ಇರುವುದಿಲ್ಲ. 'ಬಿ' ನು 'ಎ' ನ ಕೇಂದ್ರ ಸರ್ಕಾರದ ಶೇಕಡಾ ಐದರ ಪ್ರಾಮಿಸರಿ ನೋಟುಗಳಿಗೆ ಹಕ್ಕುಳ್ಳವನಾಗಿದ್ದಾನೆ.

(ii) 'ಎ' ನು ಕೇಂದ್ರ ಸರ್ಕಾರದ ತನ್ನ ಶೇ 5 1/2 ಪ್ರಾಮಿಸರಿ ನೋಟುಗಳ ಬಡ್ಡಿಯನ್ನು 'ಬಿ' ನಿಗೆ ಅವನ ಜೀವನ ಪರ್ಯಂತ ಮತ್ತು ಅವನ ಮರಣಾನಂತರ 'ಸಿ' ನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡುತ್ತಾನೆ. 'ಬಿ' ನು ಅವನ ಜೀವಿತ ಕಾಲದಲ್ಲಿ ಪ್ರಾಮಿಸರಿ ನೋಟುಗಳ ಮೇಲಣ ಬಡ್ಡಿಗೆ ಹಕ್ಕುಳ್ಳವನಾಗಿದ್ದಾನೆ. ಮತ್ತು 'ಸಿ' ನು ಆ ಪ್ರಾಮಿಸರಿ ನೋಟುಗಳಿಗೆ 'ಬಿ' ನ ಮರಣಾನಂತರ ಹಕ್ಕುಳ್ಳವನಾಗುತ್ತಾನೆ.

(iii) 'ಎ' ನು, 'ಡಿ'ನಲ್ಲಿನ ತನ್ನ ಭೂಮಿಗಳ ಬಾಡಿಗೆಗಳನ್ನು ಮರಣಶಾಸನದ ಮೂಲಕ 'ಬಿ' ನಿಗೆ ಕೊಡುತ್ತಾನೆ; 'ಬಿ' ನು ಆ ಭೂಮಿಗಳಿಗೆ ಹಕ್ಕುಳ್ಳವನಾಗಿದ್ದಾನೆ.

## ಅಧ್ಯಾಯ - XX

### ವರ್ಷಾಶನಗಳ ಮರಣ ಶಾಸನ ದಾನಗಳ ಬಗ್ಗೆ

173. ಉಯಿಲಿನಲ್ಲಿ ತದ್ವಿರುದ್ಧ ಉದ್ದೇಶವು ಕಂಡುಬಂದ ಹೊರತು ಆ ಉಯಿಲಿನಲ್ಲಿ ಸೂಚಿಸಲಾದ ವರ್ಷಾಶನವನ್ನು ಜೀವಿತ ಕಾಲದವರೆಗೆ ಮಾತ್ರ ಸಂದಾಯ ಮಾಡುವುದು:- ಉಯಿಲಿನಲ್ಲಿ ವರ್ಷಾಶನವನ್ನು ಸೃಜಿಸಿದ್ದು ಆ ವರ್ಷಾಶನವನ್ನು ಸಾಮಾನ್ಯವಾಗಿ

ಸ್ವತ್ತಿನಿಂದ ಸಂದಾಯ ಮಾಡಬೇಕೆಂದು ನಿರ್ದೇಶಿಸಿದ್ದಾಗ್ಯೂ ಅಥವಾ ಅದರ ಖರೀದಿಗಾಗಿ ಹೂಡಬೇಕೆಂದು ಮರಣಶಾಸನದ ಮೂಲಕ ಹಣದ ಒಂದು ಮೊತ್ತವನ್ನು ಕೊಟ್ಟಿದ್ದಾಗ್ಯೂ, ಉಯಿಲಿನಲ್ಲಿ ತದ್ವಿರುದ್ಧ ಉದ್ದೇಶವು ಕಂಡುಬಂದ ಹೊರತು, ಅವನ ಜೀವನ ಪರ್ಯಂತ ಮಾತ್ರ ಆ ವರ್ಷಾಶನವನ್ನು ಸ್ವೀಕರಿಸಲು ಲೆಗಟಿಯು ಹಕ್ಕುಳ್ಳವನಾಗುತ್ತಾನೆ.

ದೃಷ್ಟಾಂತಗಳು

(i) 'ಎ' ನು ವರ್ಷಕ್ಕೆ 500 ರೂಪಾಯಿಗಳನ್ನು ಮರಣಶಾಸನದ ಮೂಲಕ 'ಬಿ' ನಿಗೆ ಕೊಡುತ್ತಾನೆ 'ಎ' ನು ಅವನ ಜೀವಿತ ಕಾಲದಲ್ಲಿ 500 ರೂಪಾಯಿಗಳ ವಾರ್ಷಿಕ ಮೊತ್ತವನ್ನು ಸ್ವೀಕರಿಸಲು ಹಕ್ಕುಳ್ಳವನಾಗಿದ್ದಾನೆ.

(ii) 'ಎ' ನು ತಿಂಗಳಿಗೆ ಐನೂರು ರೂಪಾಯಿಗಳ ಮೊತ್ತವನ್ನು ಮರಣಶಾಸನ ಮೂಲಕ 'ಬಿ' ನಿಗೆ ಕೊಡುತ್ತಾನೆ. 'ಬಿ' ನು ಅವನ ಜೀವಿತದ ಕಾಲದಲ್ಲಿ ಪ್ರತಿಯೊಂದು ತಿಂಗಳೂ ಐದು ನೂರು ರೂಪಾಯಿಗಳ ಮೊತ್ತವನ್ನು ಸ್ವೀಕರಿಸಲು ಹಕ್ಕುಳ್ಳವನಾಗಿದ್ದಾನೆ.

(iii) 'ಎ' ನು 'ಬಿ' ನಿಗೆ ಜೀವನ ಪರ್ಯಂತ 500 ರೂಪಾಯಿಗಳ ವರ್ಷಾಶನವನ್ನು ಮತ್ತು 'ಬಿ' ನು ಮರಣ ಹೊಂದಿದ ಮೇಲೆ 'ಸಿ' ನಿಗೆ ಅದು ಸೇರುವಂತೆ ಮರಣ ಶಾಸನದ ಮೂಲಕ ಕೊಡುತ್ತಾನೆ. 'ಬಿ' ನು ತನ್ನ ಜೀವಿತ ಕಾಲದಲ್ಲಿ 500 ರೂಪಾಯಿಗಳ ವರ್ಷಾಶನಕ್ಕೆ ಹಕ್ಕುಳ್ಳವನಾಗಿದ್ದಾನೆ. 'ಸಿ' ನು 'ಬಿ' ನ ಉತ್ತರ ಜೀವಿಯಾದರೆ 'ಬಿ' ನು ಮರಣ ಹೊಂದಿದಂದಿನಿಂದ ತನ್ನ ಮರಣದವರೆಗೆ 500 ರೂಪಾಯಿಗಳ ವರ್ಷಾಶನಕ್ಕೆ ಹಕ್ಕುಳ್ಳವನಾಗುತ್ತಾನೆ.

174. ಸ್ವತ್ತಿನ ಉತ್ಪತ್ತಿಗಳಿಂದ ಅಥವಾ ಸಾಮಾನ್ಯವಾಗಿ ಸ್ವತ್ತಿನಿಂದ ವರ್ಷಾಶನವನ್ನು ಒದಗಿಸಬೇಕೆಂದು ಅಥವಾ ಮರಣಶಾಸನದ ಮೂಲಕ ಕೊಟ್ಟ ಹಣವನ್ನು ವರ್ಷಾಶನವನ್ನು ಖರೀದಿಸಲು ಹೂಡಬೇಕೆಂದು ಉಯಿಲು ನಿರ್ದೇಶಿಸಿರುವಲ್ಲಿ, ನಿಹಿತವಾಗುವ ಅವಧಿ:- ಮರಣಶಾಸನವು ಯಾವನೇ ವ್ಯಕ್ತಿಗೆ ಸ್ವತ್ತಿನ ಉತ್ಪತ್ತಿಗಳಿಂದ ಅಥವಾ ಸಾಮಾನ್ಯವಾಗಿ ಸ್ವತ್ತಿನಿಂದ ವರ್ಷಾಶನವನ್ನು ಒದಗಿಸತಕ್ಕುದೆಂದು ಉಯಿಲು ನಿರ್ದೇಶಿಸಿರುವಲ್ಲಿ ಅಥವಾ ಮರಣಶಾಸನ ಕರ್ತನು ಮರಣ ಹೊಂದಿದ ಮೇಲೆ ಯಾವನೇ ವ್ಯಕ್ತಿಗೆ ಯಾವುದೇ ವರ್ಷಾಶನವನ್ನು ಖರೀದಿಸುವುದಕ್ಕಾಗಿ ಹೂಡಬೇಕೆಂದು ಮರಣ ಶಾಸನದ ಮೂಲಕ ಹಣವನ್ನು ಕೊಟ್ಟಿರುವಲ್ಲಿ, ಆ ಮರಣಶಾಸನ ಸ್ವತ್ತು ಲೆಗಟಿಯ ಹಿತಾಸಕ್ತಿಯಲ್ಲಿ ನಿಹಿತವಾಗುತ್ತದೆ ಮತ್ತು ಅವನ ಆಯ್ಕೆಯಂತೆ ಅವನಿಗಾಗಿ ಒಂದು ವರ್ಷಾಶನವನ್ನು ಖರೀದಿಸಿಕೊಳ್ಳಲು ಅಥವಾ ಉಯಿಲಿನಲ್ಲಿ ಆ ಉದ್ದೇಶಕ್ಕಾಗಿ ತೆಗೆದಿಟ್ಟ ಹಣವನ್ನು ಸ್ವೀಕರಿಸಲು ಅವನು ಹಕ್ಕುಳ್ಳವನಾಗುತ್ತಾನೆ.

ದೃಷ್ಟಾಂತಗಳು

(i) 'ಎ' ನು ತನ್ನ ಉಯಿಲಿನಲ್ಲಿ ತನ್ನ ನಿರ್ವಾಹಕರು ತನ್ನ ಸ್ವತ್ತಿನಿಂದ 1000 ರೂಪಾಯಿಗಳ ವರ್ಷಾಶನವನ್ನು 'ಬಿ' ನಿಗಾಗಿ ಖರೀದಿಸಬೇಕೆಂದು ನಿರ್ದೇಶಿಸುತ್ತಾನೆ. 'ಬಿ' ನು ತನ್ನ ಆಯ್ಕೆಯ ಮೇರೆಗೆ ತನ್ನ ಜೀವನ ಪರ್ಯಂತ ತನಗಾಗಿ ಖರೀದಿಸಿದ 1000 ರೂಪಾಯಿಗಳ ವರ್ಷಾಶನವನ್ನು ಹೊಂದಲು ಅಥವಾ ಅಂಥ ವರ್ಷಾಶನವನ್ನು ಖರೀದಿಸುವುದಕ್ಕಾಗಿ ಸಾಕಷ್ಟಾಗಬಹುದಾದಂಥ ಮೊತ್ತವನ್ನು ಸ್ವೀಕರಿಸಲು ಹಕ್ಕುಳ್ಳವನಾಗುತ್ತಾನೆ.

(ii) 'ಎ' ನು 'ಬಿ' ನಿಗೆ ಅವನ ಜೀವನ ಪರ್ಯಂತ ಒಂದು ನಿಧಿಯನ್ನು ಮರಣಶಾಸನದ ಮೂಲಕ ಕೊಡುತ್ತಾನೆ ಮತ್ತು 'ಎ' ನ ಮರಣಾನಂತರ 'ಸಿ' ನಿಗಾಗಿ ಒಂದು ವರ್ಷಾಶನವನ್ನು ಖರೀದಿಸುವುದಕ್ಕಾಗಿ ಅದನ್ನು ಹೂಡತಕ್ಕುದೆಂದು ನಿರ್ದೇಶಿಸುತ್ತಾನೆ. 'ಬಿ' ಮತ್ತು 'ಸಿ' ಗಳು ಮರಣಶಾಸನ ಕರ್ತನ ಉತ್ತರ ಜೀವಿಗಳಾಗುತ್ತಾರೆ. 'ಸಿ' ನು 'ಬಿ' ನ ಜೀವಿತ ಕಾಲದಲ್ಲಿ ಮರಣ ಹೊಂದುತ್ತಾನೆ. 'ಎ' ನ ಮರಣಾನಂತರ ನಿಧಿಯು 'ಸಿ' ನ ಪ್ರತಿನಿಧಿಗಳಿಗೆ ಸೇರುತ್ತದೆ.

175. ವರ್ಷಾಶನವು ಕಡಿಮೆಯಾಗುವುದು:- ಮರಣ ಶಾಸನದ ಮೂಲಕ ಒಂದು ವರ್ಷಾಶನವನ್ನು ಕೊಟ್ಟಿದ್ದು, ಉಯಿಲು ಮೂಲಕ ಕೊಟ್ಟ ಎಲ್ಲ ಮರಣಶಾಸನ ದಾನಗಳನ್ನು ಸಂದಾಯ ಮಾಡಲು ಮರಣಶಾಸನ ಕರ್ತನ ಆಸ್ತಿಗಳು ಸಾಕಷ್ಟು ಆಗಿಲ್ಲದಿರುವಲ್ಲಿ, ಆ ವರ್ಷಾಶನವು ಉಯಿಲು ಮೂಲಕ ಕೊಟ್ಟ ಇತರ ಹಣಕಾಸಿನ ರೂಪದ ಮರಣಶಾಸನ ದಾನಗಳಂತೆಯೇ ಅದೇ ಪ್ರಮಾಣದಲ್ಲಿ ಕಡಿಮೆಯಾಗತಕ್ಕುದು.

176. ವರ್ಷಾಶನದ ದಾನ ಮತ್ತು ಶೇಷ ದಾನದ ಸಂದರ್ಭದಲ್ಲಿ ಇಡೀ ವರ್ಷಾಶನವನ್ನು ಮೊದಲು ಪೂರೈಸತಕ್ಕುದು:- ಒಂದು ವರ್ಷಾಶನ ದಾನ ಮತ್ತು ಒಂದು ಶೇಷ ದಾನವು ಇರುವಲ್ಲಿ, ಶೇಷ ಲೆಗಟಿಗೆ ಯಾವುದೇ ಶೇಷ ಭಾಗವನ್ನು ಸಂದಾಯ ಮಾಡುವುದಕ್ಕೆ ಮುಂಚೆ ಇಡೀ ವರ್ಷಾಶನವನ್ನು ಸಂದಾಯ ಮಾಡತಕ್ಕುದು ಮತ್ತು ಅವಶ್ಯವಾದರೆ, ಮರಣಶಾಸನ ಕರ್ತನ ಎಸ್ಟೇಟಿನ ಬಂಡವಾಳವನ್ನು ಆ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕುದು.

## ಅಧ್ಯಾಯ - XXI

### ಸಾಲಿಗರಿಗೆ ಮತ್ತು ಹಿಸ್ಸೇದಾರರಿಗೆ ಮರಣ ಶಾಸನ ಸ್ವತ್ತುಗಳನ್ನು ಕೊಡುವುದರ ಬಗ್ಗೆ

177. ಮೊದಲ ನೋಟಕ್ಕೆ ಸಾಲಿಗನು ಮರಣಶಾಸನ ಸ್ವತ್ತು ಹಾಗೂ ಋಣಕ್ಕೆ ಹಕ್ಕುಳ್ಳವನಾಗುವುದು:-ಋಣಿಯು ತನ್ನ ಸಾಲಿಗನಿಗೆ ಮರಣಶಾಸನ ಸ್ವತ್ತನ್ನು ಮರಣ ಶಾಸನದ ಮೂಲಕ ಕೊಟ್ಟಿರುವಲ್ಲಿ ಮತ್ತು ಆ ಮರಣಶಾಸನ ಸ್ವತ್ತಿನಿಂದ ಋಣವನ್ನು ತೀರಿಸುವ ಉದ್ದೇಶವಿತ್ತೆಂದು ಉಯಿಲಿನಲ್ಲಿ ಕಂಡುಬರದಿದ್ದಲ್ಲಿ ಆ ಸಾಲಿಗನು ಆ ಮರಣಶಾಸನ ಸ್ವತ್ತಿಗೆ ಹಾಗೂ ಆ ಋಣದ ಮೂಲಕ ಬರತಕ್ಕ ಮೊಬಲಗಿಗೆ ಹಕ್ಕುಳ್ಳವನಾಗತಕ್ಕುದು.

178. ಮೊದಲ ನೋಟಕ್ಕೆ ಮಗುವು ಮರಣಶಾಸನ ಸ್ವತ್ತು ಹಾಗೂ ಭಾಗಕ್ಕೆ ಹಕ್ಕುಳ್ಳದ್ದಾಗಿರುವುದು:- ಮಗುವಿಗಾಗಿ ಒಂದು ಭಾಗವನ್ನು ಒದಗಿಸಲು ಕರಾರಿನ ಮೂಲಕ ಹೊಣೆ ಹೊತ್ತ ತಾಯಿ/ತಂದೆಯು ಹಾಗೆ ಮಾಡಲು ವಿಫಲರಾದರೆ, ಮತ್ತು ಆ ತರುವಾಯ ಮರಣ ಶಾಸನ ಸ್ವತ್ತನ್ನು ಮಗುವಿಗೆ ಮರಣ ಶಾಸನದ ಮೂಲಕ ಕೊಟ್ಟರೆ ಮತ್ತು ಅವನ ಮರಣ ಶಾಸನದ ಮೂಲಕ ಆ ಮರಣ ಶಾಸನ ಸ್ವತ್ತು ಆ ಭಾಗದ ಸಂದಾಯಕ್ಕೆ ಉದ್ದೇಶಿಸಲಾಗಿದೆಯೆಂದು ತಿಳಿಸದಿರುವಲ್ಲಿ, ಆ ಮಗುವು ಮರಣಶಾಸನ ಸ್ವತ್ತು ಹಾಗೂ ಆ ಭಾಗವನ್ನು ಸ್ವೀಕರಿಸಲು ಹಕ್ಕುಳ್ಳದ್ದಾಗಿರತಕ್ಕುದು.

ದೃಷ್ಟಾಂತ

'ಎ' ನು 'ಬಿ' ಳೊಂದಿಗೆ ತನ್ನ ಮದುವೆಯ ಆಲೋಚನೆಯಲ್ಲಿ ಮಾಡಿಕೊಂಡ ಕಟ್ಟಳೆಗಳ ಮೂಲಕ ಉದ್ದೇಶಿತ ವಿವಾಹದಿಂದ ಹುಟ್ಟುವ ಪ್ರತಿಯೊಬ್ಬ ಮಗಳಿಗೆ ಅವಳ ಮದುವೆಯ ಕಾಲದಲ್ಲಿ 20,000 ರೂಪಾಯಿಗಳ ಭಾಗವನ್ನು ಕೊಡುತ್ತೇನೆ. ಎಂದು ಒಡಂಬಡಿಕೆ ಮಾಡಿಕೊಂಡಿರುತ್ತಾನೆ. ಈ ಒಡಂಬಡಿಕೆಯು ಮುಗಿದು ಹೋಗಿದ್ದು, 'ಎ' ನು ತನ್ನ ಮತ್ತು 'ಬಿ' ಳ ಪ್ರತಿಯೊಬ್ಬ ವಿವಾಹಿತ ಮಗಳಿಗೆ 20,000 ರೂಪಾಯಿಗಳನ್ನು ಮರಣ ಶಾಸನದ ಮೂಲಕ ಕೊಡುತ್ತಾನೆ. ಲೆಗಟಿಗಳು ಅವರ ಭಾಗಗಳ ಜೊತೆಗೆ ಈ ಮರಣ ಶಾಸನದ ಪ್ರಯೋಜನಕ್ಕೂ ಹಕ್ಕುಳ್ಳವರಾಗುತ್ತಾರೆ.

179. ಲೆಗಟಿಗಾಗಿ ಮಾಡಿದ ತರುವಾಯದ ಏರ್ಪಾಟಿನ ಮೂಲಕ ಯಾವುದೇ ಮರಣಶಾಸನ ದಾನವನ್ನು ಹಿಂತೆಗೆದುಕೊಂಡಂತಾಗದಿರುವುದು:- ಯಾವುದೇ ಮರಣ ಶಾಸನ ದಾನವನ್ನು ಲೆಗಟಿಗಾಗಿ ವ್ಯವಸ್ಥೆಯ ಮೂಲಕ ಅಥವಾ ಅನ್ಯಥಾ ಮಾಡಿದ ತರುವಾಯದ ಏರ್ಪಾಟಿನ ಮೂಲಕ ಇಡಿಯಾಗಿ ಅಥವಾ ಭಾಗಶಃ ಹಿಂತೆಗೆದುಕೊಂಡಂತಾಗತಕ್ಕುದಲ್ಲ.

ದೃಷ್ಟಾಂತಗಳು

(i) 'ಎ' ನು ತನ್ನ ಮಗ 'ಬಿ' ನಿಗೆ 20,000 ರೂಪಾಯಿಗಳನ್ನು ಮರಣ ಶಾಸನದ ಮೂಲಕ ಕೊಡುತ್ತಾನೆ. ಅವನು, ಆ ತರುವಾಯ 'ಬಿ' ನಿಗೆ 20,000 ರೂಪಾಯಿಗಳ ಮೊತ್ತವನ್ನು ಕೊಡುತ್ತಾನೆ. ಅದರಿಂದಾಗಿ ಈ ಮುಂಚೆ ಮರಣಶಾಸನ ದಾನವಾಗಿ ಕೊಟ್ಟದ್ದನ್ನು ಹಿಂತೆಗೆದುಕೊಂಡಂತಾಗುವುದಿಲ್ಲ.

(ii) 'ಎ' ನು ಶೈಶವಾವಸ್ಥೆಯಿಂದ ಬೆಳೆಸಿದ್ದ ತನ್ನ ಅನಾಥ ಸೋದರ ಮಗಳಾದ 'ಬಿ' ಳಿಗೆ 40,000 ರೂಪಾಯಿಗಳನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಆ ತರುವಾಯ 'ಬಿ' ಳ ವಿವಾಹದ ಸಂದರ್ಭದಲ್ಲಿ ಅವಳಿಗಾಗಿ 30,000 ರೂಪಾಯಿಗಳ ಮೊತ್ತವನ್ನು ವ್ಯವಸ್ಥೆ ಮಾಡುತ್ತಾನೆ. ಅದರಿಂದಾಗಿ ಮುಂಚಿನ ಮರಣಶಾಸನ ಸ್ವತ್ತು ಕಡಿಮೆಯಾದಂತಾಗುವುದಿಲ್ಲ.

## ಅಧ್ಯಾಯ - XXII

## ಆಯ್ಕೆಯ ಬಗ್ಗೆ

180. ಆಯ್ಕೆಯು ನಡೆಯುವಂಥ ಸಂದರ್ಭಗಳು:- ಒಬ್ಬ ವ್ಯಕ್ತಿಯು ವಿಲೆ ಮಾಡಲು ಹಕ್ಕಿಲ್ಲದಂಥ ಯಾವುದನ್ನಾದರೂ ವಿಲೆ ಮಾಡುವುದಾಗಿ ತನ್ನ ಉಯಿಲಿನಲ್ಲಿ ಹೇಳುವಲ್ಲಿ, ಆ ವಸ್ತುವು ಯಾರಿಗೆ ಸೇರಿದ್ದೋ ಆ ವ್ಯಕ್ತಿಯು ಅಂಥ ವಿಲೆಯನ್ನು ಸ್ಥಿರೀಕರಿಸುವುದು ಅಥವಾ ಆ ವಿಲೆಗೆ ಅಸಮ್ಮತಿ ಸೂಚಿಸುವುದು ಈ ಎರಡರಲ್ಲಿ ಒಂದನ್ನು ಆಯ್ಕೆ ಮಾಡತಕ್ಕುದು ಮತ್ತು ಅಸಮ್ಮತಿ ಸೂಚಿಸುವ ಸಂದರ್ಭದಲ್ಲಿ ಅವನಿಗೆ ಉಯಿಲು ಮೂಲಕ ಒದಗಿಸಿರಬಹುದಾದಂಥ ಯಾವುದೇ ಪ್ರಯೋಜನಗಳನ್ನು ತ್ಯಜಿಸತಕ್ಕುದು.

181. ಒಡೆಯನು ಬಿಟ್ಟುಕೊಟ್ಟ ಹಿತಾಸಕ್ತಿಯ ಪ್ರಾಪ್ತಿ:- 180ನೇ ಪ್ರಕರಣದಲ್ಲಿ ಹೇಳಿದ ಸಂದರ್ಭಗಳಲ್ಲಿ ಬಿಟ್ಟುಕೊಟ್ಟ ಹಿತಾಸಕ್ತಿಯು, ಅದನ್ನು ಲೆಗಟಿಯ ಪರವಾಗಿ ಉಯಿಲಿನ ಮೂಲಕ ವಿಲೇ ಮಾಡದೇ ಇದ್ದಿದ್ದರೆ ಹೇಗೋ ಹಾಗೆ ಪ್ರಾಪ್ತವಾಗತಕ್ಕುದು. ಆದಾಗ್ಯೂ ನಿರಾಸೆ ಹೊಂದಿದ ಲೆಗಟಿಗೆ ಉಯಿಲು ಮೂಲಕ ಕೊಡಲು ಪ್ರಯತ್ನಿಸಿದ ದಾನದ ಮೊಬಲಗು ಅಥವಾ ಮೌಲ್ಯವನ್ನು ತುಂಬಿಕೊಡುವ ಋಣಭಾರಕ್ಕೆ ಅದು ಒಳಪಟ್ಟಿರತಕ್ಕುದು.

182. ಒಡೆತನದ ಬಗ್ಗೆ ಮರಣ ಶಾಸನ ಕರ್ತನ ನಂಬುಗೆಯು ಗೌಣವಾಗಿರುವುದು:- ಮರಣ ಶಾಸನ ಕರ್ತನು ಉಯಿಲು ಮೂಲಕ ವಿಲೆ ಮಾಡಲು, ಹೇಳುವಂಥ ವಸ್ತುವು ತನ್ನದೇ ಆಗಿದೆಯೆಂದು ಅವನು ನಂಬಿರಲಿ ಅಥವಾ ನಂಬದಿರಲಿ, 180 ಮತ್ತು 181 ನೇ ಪ್ರಕರಣಗಳ ಉಪಬಂಧಗಳು ಅನ್ವಯವಾಗುತ್ತವೆ.

ದೃಷ್ಟಾಂತಗಳು

(i) ಸುಲ್ತಾನಪುರದ ಫಾರ್ಮ್ 'ಸಿ' ನ ಸ್ವತ್ತಾಗಿತ್ತು. 'ಎ' ನು 'ಸಿ' ನಿಗೆ 1,000 ರೂಪಾಯಿಗಳ ಮರಣ ಶಾಸನ ಸ್ವತ್ತನ್ನು ಕೊಟ್ಟು ಅದನ್ನು 'ಬಿ' ನಿಗೆ ಮರಣ ಶಾಸನದ ಮೂಲಕ ಕೊಡುತ್ತಾನೆ. 'ಸಿ' ನು 800 ರೂಪಾಯಿ ಬೆಲೆ ಬಾಳುವಂಥ ಸುಲ್ತಾನಪುರದ ಅವನ ಫಾರ್ಮನ್ನು ಉಳಿಸಿಕೊಳ್ಳಲು ಆಯ್ಕೆ ಮಾಡಿದ್ದಾನೆ. 'ಸಿ' ನು 1000 ರೂಪಾಯಿಗಳ ಅವನ ಮರಣ ಶಾಸನ ಸ್ವತ್ತನ್ನು ಕಳೆದುಕೊಳ್ಳುತ್ತಾನೆ. ಅದರಲ್ಲಿ 800 ರೂಪಾಯಿಗಳು 'ಬಿ' ನಿಗೆ ಹೋಗುತ್ತವೆ. ಮತ್ತು ಉಳಿದ 200 ರೂಪಾಯಿಗಳು ಸಂದರ್ಭಾನುಸಾರ ಶೇಷ ಮರಣ ಶಾಸನ ದಾನಕ್ಕೆ ಸೇರುತ್ತದೆ ಅಥವಾ ಮರಣ ಶಾಸನ ರಹಿತ ಉತ್ತರಾಧಿಕಾರದ ನಿಯಮಗಳಿಗನುಸಾರವಾಗಿ ಪ್ರಾಪ್ತವಾಗುತ್ತದೆ.

(ii) 'ಎ' ನು 'ಬಿ' ನಿಗೆ ಒಂದು ಎಸ್ಟೇಟನ್ನು 'ಬಿ' ನ ಅಣ್ಣನು (ಅವನಿಗೆ ಮದುವೆಯಾಗಿದ್ದು ಮಕ್ಕಳಿವೆ) ಅವನ ಮರಣದ ಕಾಲದಲ್ಲಿ ಜೀವಿಸಿರುವ ಯಾವುದೇ ಸಂತತಿಯನ್ನು ಬಿಟ್ಟಿರದೆ ಇದ್ದ ಸಂದರ್ಭದಲ್ಲಿ ಅವನಿಗೆ ಸೇರುವಂತೆ ಮರಣ ಶಾಸನದ ಮೂಲಕ ಕೊಡುತ್ತಾನೆ. 'ಎ' ನು 'ಸಿ' ನಿಗೆ ಸೇರಿದಂಥ ಒಂದು ಒಡವೆಯನ್ನು ಸಹ 'ಬಿ' ನಿಗೆ ಮರಣ ಶಾಸನದ ಮೂಲಕ ಕೊಡುತ್ತಾನೆ. 'ಎ' ನು ಒಡವೆಯನ್ನು ಬಿಟ್ಟುಕೊಡುವ ಅಥವಾ ಎಸ್ಟೇಟನ್ನು ಕಳೆದುಕೊಳ್ಳುವ ಬಗ್ಗೆ ಆಯ್ಕೆ ಮಾಡತಕ್ಕುದು.

(iii) 'ಎ' ನು 'ಬಿ' ನಿಗೆ 1000 ರೂಪಾಯಿ ಮತ್ತು 'ಸಿ' ನಿಗೆ ಅವನ ಅಣ್ಣನು (ಅವನಿಗೆ ಮದುವೆಯಾಗಿದ್ದು ಮಕ್ಕಳಿವೆ) ಅವನ ಮರಣ ಕಾಲದಲ್ಲಿ ಜೀವಿಸಿರುವ ಯಾವುದೇ ಸಂತತಿಯನ್ನು ಬಿಟ್ಟಿರದೆ ಇದ್ದರೆ 'ಬಿ' ನಿಗೆ ಒಂದು ವ್ಯವಸ್ಥೆಯ ಮೇರೆಗೆ ಸೇರುವಂಥ ಒಂದು ಎಸ್ಟೇಟನ್ನು ಮರಣ ಶಾಸನದ ಮೂಲಕ ಕೊಡುತ್ತಾನೆ. 'ಬಿ' ನು ಎಸ್ಟೇಟನ್ನು ಬಿಟ್ಟುಕೊಡುವ ಅಥವಾ ಮರಣಶಾಸನ ಸ್ವತ್ತನ್ನು ಕಳೆದುಕೊಳ್ಳುವ ಬಗ್ಗೆ ಆಯ್ಕೆ ಮಾಡತಕ್ಕುದು.

(iv) ಭಾರತದಲ್ಲಿ ಅಧಿವಾಸಿಯಾದ ಆದರೆ 'ಸಿ' ನು ಕಾನೂನು ರೀತ್ಯಾ ವಾರಸುದಾರನಾಗಿರುವಂಥ ಇಂಗ್ಲೆಂಡಿನಲ್ಲಿನ ಸ್ಥಿರ ಸ್ವತ್ತಿಗೆ ಒಡೆಯನಾಗಿರುವ 18 ವರ್ಷ ವಯಸ್ಸಿನ ವ್ಯಕ್ತಿಯಾದ 'ಎ' ನು 'ಸಿ' ನಿಗೆ ಮರಣ ಶಾಸನ ಸ್ವತ್ತನ್ನು ಮರಣ ಶಾಸನದ ಮೂಲಕ ಕೊಡುತ್ತಾನೆ ಮತ್ತು ಅದಕ್ಕೊಳಪಟ್ಟು 'ಬಿ' ನಿಗೆ "ನನ್ನ ಯಾವುದೇ ಬಗೆಯ ಮತ್ತು ಎಲ್ಲಾದರೂ ಇರುವ ಎಲ್ಲ ಸ್ವತ್ತನ್ನು" ಎಂದು ಹೇಳಿ ಮರಣ ಶಾಸನದ ಮೂಲಕ ಕೊಡುತ್ತಾನೆ ಮತ್ತು 21 ವರ್ಷದ ಒಳಗೆ ಮರಣ ಹೊಂದುತ್ತಾನೆ. ಇಂಗ್ಲೆಂಡಿನಲ್ಲಿರುವ ಸ್ಥಿರ ಸ್ವತ್ತು ಉಯಿಲು ಮೂಲಕ ಹೋಗುವುದಿಲ್ಲ. 'ಸಿ' ನು ಇಂಗ್ಲೆಂಡಿನಲ್ಲಿನ ಸ್ಥಿರ ಸ್ವತ್ತನ್ನು ಬಿಟ್ಟುಕೊಡದೆಯೇ ಅವನ ಮರಣ ಶಾಸನ ಸ್ವತ್ತನ್ನು ಕ್ಲೇಮು ಮಾಡಬಹುದು.

183. ಆಯ್ಕೆಯ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯ ಪ್ರಯೋಜನಕ್ಕಾಗಿ ಕೊಟ್ಟ ಮರಣ ಶಾಸನ ದಾನವನ್ನು ಹೇಗೆ ಪರಿಗಣಿಸುವುದು:- ಒಬ್ಬ ವ್ಯಕ್ತಿಯ ಪ್ರಯೋಜನಕ್ಕಾಗಿ ಕೊಟ್ಟ ಮರಣ ಶಾಸನ ದಾನವು, ಆಯ್ಕೆಯ ಉದ್ದೇಶಕ್ಕಾಗಿ ಅವನಿಗಾಗಿಯೇ ಮಾಡಿದ ಮರಣ ಶಾಸನದಂಥದೇ ಆಗಿರುತ್ತದೆ.

ದೃಷ್ಟಾಂತ

ಸುಲ್ತಾನಪುರ ಖುರ್ದ್‌ನ ಫಾರ್ಮ್ 'ಬಿ' ನ ಸ್ವತ್ತಾಗಿದ್ದು ಅದನ್ನು 'ಎ' ನು 'ಸಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ ಮತ್ತು ಸುಲ್ತಾನಪುರ ಬುಜರ್ಗ್ ಎಂದು ಕರೆಯಲಾದ ಇನ್ನೊಂದು ಫಾರ್ಮನ್ನು ಮಾರತಕ್ಕದ್ದು ಮತ್ತು ಉತ್ಪತ್ತಿಗಳನ್ನು 'ಬಿ' ನ ಋಣಗಳನ್ನು ಸಂದಾಯ ಮಾಡಲು ವಿನಿಯೋಗಿಸತಕ್ಕುದೆಂಬ ನಿರ್ದೇಶನದೊಂದಿಗೆ ತನ್ನ ನಿರ್ವಾಹಕರಿಗೆ ಮರಣ ಶಾಸನದ ಮೂಲಕ ಕೊಡುತ್ತಾನೆ. 'ಬಿ' ನು, ಅವನು ಆ ಉಯಿಲನ್ನು ಅನುಸರಿಸಬೇಕೋ ಅಥವಾ ಅದಕ್ಕೆ ಬದಲಾಗಿ ತನ್ನ ಸುಲ್ತಾನಪುರ ಖುರ್ದ್‌ನ ಫಾರ್ಮನ್ನು ಇಟ್ಟುಕೊಳ್ಳಬೇಕೋ - ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡತಕ್ಕುದು.

184. ಪರೋಕ್ಷವಾಗಿ ಪ್ರಯೋಜನ ಪಡೆಯುವ ವ್ಯಕ್ತಿಗೆ ಆಯ್ಕೆಯ ಅವಕಾಶವಿಲ್ಲದಿರುವುದು:- ಉಯಿಲಿನ ಅಡಿಯಲ್ಲಿ ನೇರವಾಗಿ ಯಾವುದೇ ಪ್ರಯೋಜನವನ್ನು ಪಡೆಯದೆ ಇರುವ ಆದರೆ ಪರೋಕ್ಷವಾಗಿ ಅದರ ಅಡಿಯಲ್ಲಿ ಪ್ರಯೋಜನವನ್ನು ಪಡೆಯುವ ವ್ಯಕ್ತಿಗೆ ತನ್ನ ಆಯ್ಕೆಯ ಅವಕಾಶವಿರುವುದಿಲ್ಲ.

ದೃಷ್ಟಾಂತ

ಸುಲ್ತಾನಪುರ ಭೂಮಿಗಳನ್ನು 'ಸಿ' ನಿಗೆ ಜೀವನ ಪರ್ಯಂತ ಮತ್ತು ಅವನ ಮರಣಾನಂತರ ಅವನ ಒಂದೇ ಮಗುವಾದ 'ಡಿ' ನಿಗೆ ಸೇರುವಂತೆ ವ್ಯವಸ್ಥೆ ಮಾಡಲಾಗಿದೆ. 'ಎ' ನು ಸುಲ್ತಾನಪುರದ ಭೂಮಿಗಳನ್ನು 'ಬಿ' ನಿಗೆ ಮತ್ತು 1,000 ರೂಪಾಯಿಗಳನ್ನು 'ಸಿ' ನಿಗೆ ಮರಣ ಶಾಸನದ ಮೂಲಕ ಕೊಡುತ್ತಾನೆ. 'ಸಿ' ನು ಮರಣ ಶಾಸನ ರಹಿತನಾಗಿ ಮರಣ ಶಾಸನ ಕರ್ತನ ತರುವಾಯ ಸ್ವಲ್ಪ ಕಾಲದಲ್ಲಿ ಮತ್ತು ಯಾವುದೇ ಆಯ್ಕೆಯನ್ನು ಮಾಡಿಕೊಳ್ಳದೆ ಮರಣ ಹೊಂದುತ್ತಾನೆ. 'ಡಿ' ನು 'ಸಿ' ನ ಪರವಾಗಿ ಆಡಳಿತವನ್ನು ವಹಿಸಿಕೊಳ್ಳುತ್ತಾನೆ, ಮತ್ತು ಆಡಳಿತಗಾರನಾಗಿ 'ಸಿ' ನ ಎಸ್ಟೇಟಿನ ಪರವಾಗಿ ಆ ಉಯಿಲಿನ ಅಡಿಯಲ್ಲಿ ತೆಗೆದುಕೊಳ್ಳಲು ಆಯ್ಕೆ ಮಾಡುತ್ತಾನೆ. ಆ ಸಾಮರ್ಥ್ಯದಿಂದ ಅವನು 1,000 ರೂಪಾಯಿಗಳ ಮರಣ ಶಾಸನ ಸ್ವತ್ತನ್ನು ಸ್ವೀಕರಿಸುತ್ತಾನೆ. ಮರಣಶಾಸನ ಕರ್ತನ ಮರಣದ ತರುವಾಯ ಮತ್ತು 'ಸಿ' ನ ಮರಣಕ್ಕೆ ಮುಂಚೆ ಅವನಿಗೆ ಒದಗಿಬಂದಂಥ ಸುಲ್ತಾನಪುರದ ಭೂಮಿಗಳ ಬಾಡಿಗೆಗಳ ಬಗ್ಗೆ 'ಬಿ' ನಿಗೆ ಲೆಕ್ಕ ಕೊಡುತ್ತಾನೆ. ಅವನ ವೈಯಕ್ತಿಕ ಸಾಮರ್ಥ್ಯದಲ್ಲಿ ಉಯಿಲಿಗೆ ವ್ಯತಿರಿಕ್ತವಾಗಿ ಸುಲ್ತಾನಪುರದ ಭೂಮಿಗಳನ್ನು ಅವನು ಇಟ್ಟುಕೊಳ್ಳುತ್ತಾನೆ.

185. ಉಯಿಲಿನ ಮೇರೆಗೆ ವೈಯಕ್ತಿಕ ಸಾಮರ್ಥ್ಯದಲ್ಲಿ ತೆಗೆದುಕೊಳ್ಳುವ ವ್ಯಕ್ತಿಯು ಇತರ ಸಾಮರ್ಥ್ಯದಲ್ಲಿ ಉಯಿಲಿಗೆ ವ್ಯತಿರಿಕ್ತವಾಗಿ ತೆಗೆದುಕೊಳ್ಳಲು ಆಯ್ಕೆ ಮಾಡಬಹುದು:- ಒಂದು ಉಯಿಲಿನ ಮೇರೆಗಿನ ಪ್ರಯೋಜನವನ್ನು ತನ್ನ ವೈಯಕ್ತಿಕ ಸಾಮರ್ಥ್ಯದಲ್ಲಿ ತೆಗೆದುಕೊಳ್ಳುವ ವ್ಯಕ್ತಿಯು ಇನ್ನೊಂದು ಸಾಮರ್ಥ್ಯದಲ್ಲಿ ಉಯಿಲಿಗೆ ವ್ಯತಿರಿಕ್ತವಾಗಿ ತೆಗೆದುಕೊಳ್ಳಲು ಆಯ್ಕೆ ಮಾಡಬಹುದು.

ದೃಷ್ಟಾಂತ

ಸುಲ್ತಾನಪುರದ ಎಸ್ಟೇಟನ್ನು 'ಎ' ನಿಗೆ ಜೀವನ ಪರ್ಯಂತ ಮತ್ತು ಅವನ ಮರಣಾನಂತರ 'ಬಿ' ನಿಗೆ ಸೇರುವಂತೆ ವ್ಯವಸ್ಥೆ ಮಾಡಲಾಗಿದೆ. 'ಎ' ನು ಸುಲ್ತಾನಪುರದ ಎಸ್ಟೇಟನ್ನು 'ಡಿ' ನಿಗೆ ಮತ್ತು 2000 ರೂಪಾಯಿಗಳನ್ನು 'ಬಿ' ನಿಗೆ ಮತ್ತು 1000 ರೂಪಾಯಿಗಳನ್ನು 'ಬಿ' ನ ಒಂದೇ ಮಗುವಾದ 'ಸಿ' ನಿಗೆ ಕೊಡುತ್ತಾನೆ. 'ಬಿ' ನು ಮರಣ ಶಾಸನ ರಹಿತನಾಗಿ ಮರಣ ಶಾಸನ ಕರ್ತನ ತರುವಾಯ ಸ್ವಲ್ಪ ಕಾಲದಲ್ಲಿ ಯಾವ ಆಯ್ಕೆಯನ್ನು ಮಾಡಿಕೊಳ್ಳದೆ ಮರಣ ಹೊಂದುತ್ತಾನೆ. 'ಸಿ' ನು 'ಬಿ' ನಿಗಾಗಿ ಆಡಳಿತವನ್ನು ವಹಿಸಿಕೊಳ್ಳುತ್ತಾನೆ. ಮತ್ತು ಆಡಳಿತಗಾರನಾಗಿ ಉಯಿಲಿಗೆ ವ್ಯತಿರಿಕ್ತವಾಗಿ ಸುಲ್ತಾನಪುರದ ಎಸ್ಟೇಟನ್ನು ಇಟ್ಟುಕೊಳ್ಳಲು ಮತ್ತು 2000 ರೂಪಾಯಿಗಳ ಮರಣ ಶಾಸನ ಸ್ವತ್ತನ್ನು ಬಿಟ್ಟುಕೊಡಲು ಆಯ್ಕೆ ಮಾಡುತ್ತಾನೆ. 'ಸಿ' ನು ಹಾಗೆ ಮಾಡಬಹುದು ಅಷ್ಟೇ ಅಲ್ಲದೆ ಆ ಉಯಿಲಿನ ಮೇರೆಗೆ ಮರಣ ಶಾಸನ ಸ್ವತ್ತಾದ ಅವನ 1000 ರೂಪಾಯಿಗಳನ್ನು ಸಹ ಕ್ಲೇಮು ಮಾಡಬಹುದು.

186. ಈ ಹಿಂದಿನ ಆರು ಪ್ರಕರಣಗಳ ಉಪಬಂಧಗಳಿಗೆ ಅಪವಾದ:- 180 ರಿಂದ 185 ರ ವರೆಗಿನ ಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ಲೆಗಟಿಗೆ ಸೇರಿದ, ಯಾವುದೇ ವಸ್ತುವನ್ನು ಉಯಿಲಿನ ಮೂಲಕ ವಿಲೆ ಮಾಡಲಾಗಿದೆಯೋ ಆ ವಸ್ತುವಿಗೆ ಬದಲಾಗಿ ಆ ಉಯಿಲಿನಲ್ಲಿ ಒಂದು ನಿರ್ದಿಷ್ಟ ದಾನವನ್ನು ವ್ಯಕ್ತಪಡಿಸಿರುವಲ್ಲಿ ಆಗ ಲೆಗಟಿಯು ಆ ವಸ್ತುವನ್ನು ಕ್ಲೇಮು ಮಾಡಿದರೆ ಅವನು ಆ ನಿರ್ದಿಷ್ಟ ದಾನವನ್ನು ಬಿಟ್ಟುಬಿಡತಕ್ಕುದು. ಆದರೆ ಉಯಿಲಿನ ಮೂಲಕ ಅವನಿಗೆ ಕೊಟ್ಟ ಯಾವುದೇ ಇತರ ಪ್ರಯೋಜನವನ್ನು ಬಿಟ್ಟುಕೊಡಲು ಅವನು ಬದ್ಧನಾಗಿರುವುದಿಲ್ಲ.

ದೃಷ್ಟಾಂತ

'ಎ' ನ ಮದುವೆಯ ವ್ಯವಸ್ಥೆಯ ಅಡಿಯಲ್ಲಿ ಅವನ ಹೆಂಡತಿಯು ಅವನ ಉತ್ತರ ಜೀವಿಯಾದರೆ ಅವಳ ಜೀವಿತ ಕಾಲದಲ್ಲಿ ಸುಲ್ತಾನಪುರದ ಎಸ್ಟೇಟನ್ನು ಉಪಭೋಗಿಸಲು ಹಕ್ಕುಳ್ಳವಳಾಗಿರುತ್ತಾಳೆ. 'ಎ' ನು ತನ್ನ ಉಯಿಲಿನ ಮೂಲಕ ತನ್ನ ಹೆಂಡತಿಗೆ ಅವಳ ಜೀವಿತ ಕಾಲದಲ್ಲಿ ಸುಲ್ತಾನಪುರದ ಎಸ್ಟೇಟಿನಲ್ಲಿರುವ ಅವಳ ಹಿತಾಸಕ್ತಿಗೆ ಬದಲಾಗಿ 200 ರೂಪಾಯಿಗಳ ವರ್ಷಾಶನವನ್ನು ಮರಣ ಶಾಸನ ದಾನವಾಗಿ ಕೊಡುತ್ತಾನೆ ಮತ್ತು ಆ ಎಸ್ಟೇಟನ್ನು ತನ್ನ ಮಗನಿಗೆ ಮರಣ ಶಾಸನದ ಮೂಲಕ ಕೊಡುತ್ತಾನೆ. ಅವನು ತನ್ನ ಹೆಂಡತಿಗೆ 1000 ರೂಪಾಯಿಗಳ ಮರಣ ಶಾಸನ ದಾನವನ್ನು ಸಹ ಕೊಡುತ್ತಾನೆ. ಆ ವಿಧವೆಯು ಆ ವ್ಯವಸ್ಥೆಯ ಅಡಿಯಲ್ಲಿ ಅವಳು ಯಾವುದಕ್ಕೆ ಹಕ್ಕುಳ್ಳವಳಾಗಿರುವಳೋ ಅದನ್ನು ತೆಗೆದುಕೊಳ್ಳಲು ಆಯ್ಕೆ ಮಾಡುತ್ತಾಳೆ. ಅವಳು ವರ್ಷಾಶನವನ್ನು ಬಿಟ್ಟುಕೊಡಲು ಬದ್ಧಳಾಗಿರುತ್ತಾಳೆ. ಆದರೆ 1000 ರೂಪಾಯಿಗಳ ಮರಣ ಶಾಸನ ದಾನವನ್ನು ಅಲ್ಲ.

187. ಉಯಿಲು ಮೂಲಕ ಕೊಟ್ಟ ಪ್ರಯೋಜನದ ಅಂಗೀಕಾರವು ಯಾವಾಗ ಉಯಿಲಿನ ಮೇರೆಗೆ ಅದನ್ನು ತೆಗೆದುಕೊಳ್ಳಲು ಆಯ್ಕೆ ಮಾಡಿದಂತಾಗುವುದು:- ಉಯಿಲು ಮೂಲಕ ಕೊಟ್ಟ ಪ್ರಯೋಜನದ ಅಂಗೀಕಾರವು, ಲೆಗಟಿಯು ಆಯ್ಕೆ ಮಾಡಲು ಅವನ ಹಕ್ಕಿನ ಬಗ್ಗೆ ಮತ್ತು ಆಯ್ಕೆ ಮಾಡುವಲ್ಲಿ ವಿವೇಕಶಾಲಿ ವ್ಯಕ್ತಿಯ ತೀರ್ಮಾನದ ಮೇಲೆ ಪ್ರಭಾವವನ್ನು ಬೀರಬಹುದಾದಂಥ ಸಂದರ್ಭಗಳ ಬಗ್ಗೆ ಅವನು ತಿಳಿವಳಿಕೆ ಹೊಂದಿದ್ದರೆ, ಅಥವಾ ಆ ಸಂದರ್ಭಗಳ ಬಗ್ಗೆ ವಿಚಾರಣೆ ನಡೆಸುವುದನ್ನು ಅವನು ಬಿಟ್ಟುಕೊಟ್ಟರೆ ಉಯಿಲಿನ ಅಡಿಯಲ್ಲಿ ಅದನ್ನು ತೆಗೆದುಕೊಳ್ಳಲು ಅವನು ಮಾಡಿದ ಆಯ್ಕೆಯಾಗುತ್ತದೆ.

ದೃಷ್ಟಾಂತಗಳು

(i) 'ಎ' ನು ಸುಲ್ತಾನಪುರ ಖುರ್ದ್ ಎಂದು ಕರೆಯಲಾಗುವ ಎಸ್ಟೇಟಿನ ಒಡೆಯನಾಗಿದ್ದಾನೆ ಮತ್ತು ಸುಲ್ತಾನಪುರ ಬುಜರ್ಗ್ ಎಂದು ಕರೆಯಲಾಗುವ ಇನ್ನೊಂದು ಎಸ್ಟೇಟಿನಲ್ಲಿ ಆಜೀವ ಹಿತಾಸಕ್ತಿಯನ್ನು ಹೊಂದಿದ್ದಾನೆ. ಅದಕ್ಕೆ ಅವನು ಮರಣ ಹೊಂದಿದ ಮೇಲೆ ಅವನ ಮಗ 'ಬಿ' ನು ನಿರುಪಾಧಿಕವಾಗಿ ಹಕ್ಕುಳ್ಳವನಾಗುತ್ತಾನೆ. 'ಎ' ನ ಉಯಿಲು 'ಬಿ' ನಿಗೆ ಸುಲ್ತಾನಪುರ ಖುರ್ದ್ ಎಸ್ಟೇಟನ್ನು ಮತ್ತು 'ಸಿ' ನಿಗೆ ಸುಲ್ತಾನಪುರ ಬುಜರ್ಗ್ ಎಸ್ಟೇಟನ್ನು ಕೊಡುತ್ತಾನೆ. 'ಬಿ' ನು ಸುಲ್ತಾನಪುರ ಬುಜರ್ಗ್ ಎಸ್ಟೇಟಿಗೆ ತನಗಿರುವ ಹಕ್ಕಿನ ಅರಿವಿಲ್ಲದೆಯೇ ಅದರ ಸ್ವಾಧೀನವನ್ನು ತೆಗೆದುಕೊಳ್ಳಲು 'ಸಿ' ನಿಗೆ ಅವಕಾಶ ಮಾಡಿಕೊಡುತ್ತಾನೆ ಮತ್ತು ಸುಲ್ತಾನಪುರ ಖುರ್ದ್‌ನ ಎಸ್ಟೇಟಿನ ಸ್ವಾಧೀನವನ್ನು ಹೊಂದುತ್ತಾನೆ. 'ಬಿ' ನು ಸುಲ್ತಾನಪುರ ಬುಜರ್ಗ್ ಎಸ್ಟೇಟಿನ ಮರಣ ಶಾಸನ ದಾನವನ್ನು 'ಸಿ' ನಿಗೆ ಸ್ಥಿರೀಕರಿಸಿದಂತಾಗುವುದಿಲ್ಲ.

(ii) 'ಎ' ನ ಹಿರಿಯ ಮಗನಾದ 'ಬಿ' ನು ಸುಲ್ತಾನಪುರ ಎಂದು ಕರೆಯಲಾಗುವ ಎಸ್ಟೇಟಿನ ಸ್ವಾಧೀನದಲ್ಲಿದ್ದಾನೆ. 'ಎ' ನು ಸುಲ್ತಾನಪುರವನ್ನು 'ಸಿ' ನಿಗೆ ಮತ್ತು 'ಎ' ನ ಸ್ವತ್ತಿನ ಶೇಷವನ್ನು 'ಬಿ' ನಿಗೆ ಮರಣ ಶಾಸನದ ಮೂಲಕ ಕೊಡುತ್ತಾನೆ. ಶೇಷವು 5000 ರೂಪಾಯಿ ಮೊಬಲಗು ಆಗುವುದೆಂದು 'ಎ' ನಿರ್ವಾಹಕರು 'ಬಿ' ನಿಗೆ ತಿಳಿಸಿದ್ದು ಅವನು ಸುಲ್ತಾನಪುರದ ಸ್ವಾಧೀನವನ್ನು ತೆಗೆದುಕೊಳ್ಳಲು 'ಸಿ' ನಿಗೆ ಅವಕಾಶ ಮಾಡಿಕೊಡುತ್ತಾನೆ. ಅವನು ಆ ತರುವಾಯ ಆ ಶೇಷವು 500 ರೂಪಾಯಿಗಳಿಗಿಂತ ಹೆಚ್ಚಾಗುವುದಿಲ್ಲವೆಂದು ಕಂಡುಕೊಳ್ಳುತ್ತಾನೆ. 'ಬಿ' ನು ಸುಲ್ತಾನಪುರ ಎಸ್ಟೇಟಿನ ಮರಣ ಶಾಸನ ದಾನವನ್ನು 'ಸಿ' ನಿಗೆ ಸ್ಥಿರೀಕರಿಸಿದಂತಾಗುವುದಿಲ್ಲ.

188. ತಿಳಿವಳಿಕೆಯನ್ನು ಅಥವಾ ವಿಚಾರಣೆಯನ್ನು ಬಿಟ್ಟುಕೊಡುವುದನ್ನು ಪೂರ್ವಭಾವನೆ ಮಾಡಬಹುದಾದ ಅಥವಾ ಊಹಿಸಬಹುದಾದ ಸಂದರ್ಭಗಳು:- (1) ಯಾವನೇ ಲೆಗಟಿಯು ಉಯಿಲು ಮೂಲಕ ಅವನಿಗೆ ಒದಗಿಸಿದ ಪ್ರಯೋಜನಗಳನ್ನು ಆ ಕುರಿತು ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸುವ ಯಾವುದೇ ಕಾರ್ಯವನ್ನು ಮಾಡದೆಯೇ ಎರಡು ವರ್ಷಗಳವರೆಗೆ ಉಪಭೋಗಿಸಿದ್ದರೆ, ಆ ಬಗ್ಗೆ ತದ್ವಿರುದ್ಧವಾದ ಸಾಕ್ಷ್ಯವು ಇಲ್ಲದಿರುವಲ್ಲಿ ಅಂಥ ತಿಳಿವಳಿಕೆಯಿತ್ತು ಎಂಬುದಾಗಿ ಅಥವಾ ವಿಚಾರಣೆಯನ್ನು ಬಿಟ್ಟುಕೊಟ್ಟಿರುವುದಾಗಿ ಪೂರ್ವ ಭಾವನೆ ಮಾಡತಕ್ಕುದು.

(2) ಲೆಗಟಿಯು ಯಾವ ಕಾರ್ಯವನ್ನು ಮಾಡಿರದಿದ್ದರೆ, ಮರಣ ಶಾಸನ ದಾನದ ವಸ್ತು ವಿಷಯದಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಗಳು ಯಾವ ಸ್ಥಿತಿಯಲ್ಲಿ ಇರುತ್ತಿದ್ದರೋ ಅದೇ ಸ್ಥಿತಿಯಲ್ಲಿ ಅವರನ್ನು ಇಡಲು ಅಸಾಧ್ಯವಾಗಬಹುದಾದಂಥ ಅವನ ಯಾವುದೇ ಕಾರ್ಯದಿಂದ, ಅಂಥ ತಿಳಿವಳಿಕೆಯಿತ್ತು ಎಂಬುದಾಗಿ ಅಥವಾ ವಿಚಾರಣೆಯನ್ನು ಬಿಟ್ಟುಕೊಟ್ಟಿರುವುದಾಗಿ ಊಹಿಸಬಹುದು.

ದೃಷ್ಟಾಂತ

'ಎ' ನು 'ಬಿ' ನಿಗೆ 'ಸಿ' ನು ಹಕ್ಕುಳ್ಳವನಾಗಿರುವಂಥ ಎಸ್ಟೇಟನ್ನು ಮತ್ತು 'ಸಿ' ನಿಗೆ ಒಂದು ಕಲ್ಲಿದ್ದಲು ಗಣಿಯನ್ನು ಮರಣಶಾಸನದ ಮೂಲಕ ಕೊಡುತ್ತಾನೆ. 'ಸಿ' ನು ಗಣಿಯ ಸ್ವಾಧೀನ ಪಡೆದು ಅದನ್ನು ಬರಿದು ಮಾಡುತ್ತಾನೆ. ಅವನು ಆ ಮೂಲಕ 'ಬಿ' ನಿಗೆ ಕೊಟ್ಟ ಎಸ್ಟೇಟಿನ ಮರಣಶಾಸನ ದಾನವನ್ನು ಸ್ಥಿರೀಕರಿಸಿದ್ದಾನೆ.

189. ಮರಣಶಾಸನ ಕರ್ತನ ಪ್ರತಿನಿಧಿಗಳು ಯಾವಾಗ ಲೆಗಟಿಯನ್ನು ಆಯ್ಕೆ ಮಾಡಲು ಕೋರಬಹುದು:- ಮರಣಶಾಸನ ಕರ್ತನ ಮರಣದ ತರುವಾಯ ಒಂದು ವರ್ಷದ ಒಳಗೆ ಲೆಗಟಿಯು ಉಯಿಲನ್ನು ಸ್ಥಿರೀಕರಿಸುವ ಅಥವಾ ಅದಕ್ಕೆ ಅಸಮ್ಮತಿಸುವ ತನ್ನ ಉದ್ದೇಶವನ್ನು ಮರಣ ಶಾಸನ ಕರ್ತನ ಪ್ರತಿನಿಧಿಗಳಿಗೆ ತಿಳಿಸದಿದ್ದರೆ ಆ ಪ್ರತಿನಿಧಿಗಳು ಆ ಅವಧಿಯು ಮುಕ್ತಾಯವಾದ ಮೇಲೆ, ಅವನಿಗೆ ಆ ಸಂಬಂಧದಲ್ಲಿ ಆಯ್ಕೆ ಮಾಡುವಂತೆ ಅಗತ್ಯಪಡಿಸಬಹುದು ಮತ್ತು ಅವನು ಆ ಕೋರಿಕೆಯನ್ನು ಸ್ವೀಕರಿಸಿದ ತರುವಾಯ ಯುಕ್ತ ಕಾಲದೊಳಗಾಗಿ ಅದನ್ನು ಪಾಲಿಸದಿದ್ದರೆ ಅವನು ಉಯಿಲನ್ನು ಸ್ಥಿರೀಕರಿಸಲು ಆಯ್ಕೆ ಮಾಡಿರುವುದಾಗಿ ಭಾವಿಸತಕ್ಕುದು.

190. ಅಸಮರ್ಥತೆಯ ಸಂದರ್ಭದಲ್ಲಿ ಆಯ್ಕೆಯ ಮುಂದೂಡಿಕೆ:- ಅಸಮರ್ಥತೆಯ ಸಂದರ್ಭದಲ್ಲಿ ಆ ಅಸಮರ್ಥತೆಯು ಕೊನೆಗೊಳ್ಳುವ ತನಕ ಅಥವಾ ಯಾವನೇ ಸಕ್ಷಮ ಪ್ರಾಧಿಕಾರಿಯು ಆಯ್ಕೆಯನ್ನು ಮಾಡುವವರೆಗೆ ಆಯ್ಕೆಯನ್ನು ಮುಂದೂಡತಕ್ಕುದು.

## ಅಧ್ಯಾಯ - XXIII

### ಮರಣದ ನಿರೀಕ್ಷೆಯಲ್ಲಿ ಮಾಡಿದ ದಾನಗಳ ಬಗ್ಗೆ

191. ಮರಣದ ನಿರೀಕ್ಷೆಯಲ್ಲಿ ಮಾಡಿದ ದಾನದ ಮೂಲಕ ವರ್ಗಾಯಿಸಬಹುದಾದ ಸ್ವತ್ತು:- (1) ಉಯಿಲು ಮೂಲಕ ವ್ಯಕ್ತಿಯು ವಿಲೆ ಮಾಡಬಹುದಾದಂಥ ಯಾವುದೇ ಚರ ಸ್ವತ್ತನ್ನು ತನ್ನ ಮರಣದ ನಿರೀಕ್ಷೆಯಲ್ಲಿ ಮಾಡಿದ ದಾನದ ಮೂಲಕ ವಿಲೇ ಮಾಡಬಹುದು.

(2) ಒಬ್ಬ ವ್ಯಕ್ತಿಯು ಕಾಯಿಲೆಯಿಂದ ಬಳಲುತ್ತಿದ್ದು ಆ ಕಾಯಿಲೆಯಿಂದ ಸ್ವಲ್ಪ ಕಾಲದಲ್ಲಿ ಮರಣವನ್ನು ನಿರೀಕ್ಷಿಸಿ, ಆ ಕಾಯಿಲೆಯಿಂದಾಗಿ ದಾನಿಯು ಮರಣ ಹೊಂದಿದ ಸಂದರ್ಭದಲ್ಲಿ ದಾನವಾಗಿ ಇಟ್ಟುಕೊಳ್ಳಲು ಇನ್ನೊಬ್ಬನಿಗೆ ಯಾವುದೇ ಚರ ಸ್ವತ್ತಿನ ಸ್ವಾಧೀನವನ್ನು ವಶಾವಣೆ ಮಾಡಿದ್ದಲ್ಲಿ, ಆ ದಾನವನ್ನು ಮರಣದ ನಿರೀಕ್ಷೆಯಲ್ಲಿ ಮಾಡಿದ ದಾನವೆನ್ನಲಾಗುತ್ತದೆ.

(3) ಅಂಥ ದಾನವನ್ನು ಕೊಟ್ಟವನು ಮತ್ತೆ ಅದನ್ನು ಹಿಂದಕ್ಕೆ ಪಡೆಯಬಹುದು; ಮತ್ತು ತನ್ನ ಯಾವ ಕಾಯಿಲೆಯ ಅವಧಿಯಲ್ಲಿ ಅಂಥ ದಾನವನ್ನು ಕೊಟ್ಟಿದ್ದನೋ ಆ ಕಾಯಿಲೆಯಿಂದ ಅವನು ಗುಣಮುಖನಾದರೆ; ಅಥವಾ ದಾನವನ್ನು ಯಾರಿಗೆ ಕೊಟ್ಟಿದ್ದನೋ ಆ ವ್ಯಕ್ತಿಯು ಮೃತನಾಗಿ ದಾನಿಯು ಉತ್ತರ ಜೀವಿಯಾದರೆ ಆ ದಾನವು ಪರಿಣಾಮಕಾರಿಯಾಗತಕ್ಕುದಲ್ಲ.

ದೃಷ್ಟಾಂತಗಳು

(i) 'ಎ' ನು ಕಾಯಿಲೆಯಿಂದಿದ್ದು ತನ್ನ ಮರಣದ ನಿರೀಕ್ಷಣೆಯಲ್ಲಿ, ತಾನು ಮರಣ ಹೊಂದಿದ ಸಂದರ್ಭದಲ್ಲಿ 'ಬಿ' ನಿಗೆ ಅವನು ಇಟ್ಟುಕೊಳ್ಳುವುದಕ್ಕಾಗಿ,-

ಒಂದು ಗಡಿಯಾರ;

'ಎ' ನಿಗೆ 'ಸಿ' ನು ಕೊಟ್ಟ ಒಂದು ಬಂಧಪತ್ರ;

ಒಂದು ಬ್ಯಾಂಕ್ ನೋಟು;

ಖಾಲಿ ಹಿಂಬರಹವುಳ್ಳ ಕೇಂದ್ರ ಸರ್ಕಾರದ ಒಂದು ಪ್ರಾಮಿಸರಿ ನೋಟು;

ಖಾಲಿ ಹಿಂಬರಹವುಳ್ಳ ಒಂದು ವಿನಿಮಯ ಪತ್ರ;

ಕೆಲವು ಅಡಮಾನ ಪತ್ರಗಳು,

- ಇವುಗಳನ್ನು ವಶಾವಣೆ ಮಾಡುತ್ತಾನೆ, ಯಾವ ಕಾಯಿಲೆಯ ಅವಧಿಯಲ್ಲಿ ಈ ವಸ್ತುಗಳನ್ನು 'ಎ' ನು ವಶಾವಣೆ ಮಾಡಿದ್ದನೋ ಆ ಕಾಯಿಲೆಯಿಂದ ಅವನು ಮರಣ ಹೊಂದುತ್ತಾನೆ. 'ಸಿ' ನು ಮೇಲ್ಕಂಡ-

ಗಡಿಯಾರ;

'ಸಿ' ನ ಬಂಧಪತ್ರದ ಮೂಲಕ ಭದ್ರತೆಗೊಳಿಸಿದ ಋಣ;

ಬ್ಯಾಂಕು ನೋಟು;

ಕೇಂದ್ರ ಸರ್ಕಾರದ ಆ ಪ್ರಾಮಿಸರಿ ನೋಟು;

ವಿನಿಮಯ ಪತ್ರ;

ಅಡಮಾನ ಪತ್ರಗಳ ಮೂಲಕ ಭದ್ರತೆಗೊಳಿಸಿದ ಹಣ

- ಇವುಗಳಿಗೆ ಹಕ್ಕುದಾರನಾಗುತ್ತಾನೆ.

(ii) 'ಎ' ನು ಕಾಯಿಲೆಯಿಂದ ಬಳಲುತ್ತಿದ್ದು ತನ್ನ ಮರಣದ ನಿರೀಕ್ಷೆಯಲ್ಲಿ 'ಬಿ' ನಿಗೆ ಒಂದು ಟ್ರಂಕಿನ ಬೀಗದ ಕೈಯನ್ನು ಅಥವಾ 'ಎ' ನಿಗೆ ಸೇರಿದ ರಾಶಿ ಸರಕುಗಳನ್ನು ಇಟ್ಟಿರುವಂಥ ಉಗ್ರಾಣದ ಬೀಗದ ಕೈಯನ್ನು ಟ್ರಂಕಿನಲ್ಲಿರುವ ವಸ್ತುಗಳ ಮೇಲೆ ಅಥವಾ ದಾಸ್ತಾನಿಟ್ಟಿರುವಂಥ ಸರಕುಗಳ ಮೇಲೆ ನಿಯಂತ್ರಣವನ್ನು ಅವನಿಗೆ ಕೊಡುವ ಉದ್ದೇಶದಿಂದ ವಶಾವಣೆ ಮಾಡುತ್ತಾನೆ ಮತ್ತು 'ಎ' ನು ಮರಣ ಹೊಂದಿದ ಸಂದರ್ಭದಲ್ಲಿ ಅವುಗಳನ್ನು ಅವನು ಇಟ್ಟುಕೊಳ್ಳಬೇಕೆಂದು ಇಚ್ಛಿಸುತ್ತಾನೆ. ಯಾವ ಕಾಯಿಲೆಯ ಅವಧಿಯಲ್ಲಿ ಈ ವಸ್ತುಗಳನ್ನು ಅವನು ವಶಾವಣೆ ಮಾಡಿದನೋ ಆ ಕಾಯಿಲೆಯಿಂದ 'ಎ' ನು ಮರಣ ಹೊಂದುತ್ತಾನೆ. 'ಬಿ' ನು ಟ್ರಂಕಿಗೆ ಮತ್ತು ಅದರಲ್ಲಿರುವ ವಸ್ತುಗಳಿಗೆ ಅಥವಾ ಉಗ್ರಾಣದಲ್ಲಿನ 'ಎ' ನ ರಾಶಿ ಸರಕುಗಳಿಗೆ ಹಕ್ಕುಳ್ಳವನಾಗಿದ್ದಾನೆ.

(iii) 'ಎ' ನು ಕಾಯಿಲೆಯಿಂದ ಬಳಲುತ್ತಿದ್ದು ತನ್ನ ಮರಣದ ನಿರೀಕ್ಷೆಯಲ್ಲಿ ಕೆಲವು ವಸ್ತುಗಳನ್ನು ಪ್ರತ್ಯೇಕ ಭಾಂಗಿಗಳಲ್ಲಿ ತೆಗೆದಿರಿಸುತ್ತಾನೆ ಮತ್ತು ಆ ಭಾಂಗಿಗಳ ಮೇಲೆ ಕ್ರಮವಾಗಿ 'ಬಿ' ಮತ್ತು 'ಸಿ' ರ ಹೆಸರನ್ನು ಗುರುತು ಮಾಡುತ್ತಾನೆ. ಆ ಭಾಂಗಿಗಳನ್ನು 'ಎ' ನ ಜೀವಿತ ಕಾಲದಲ್ಲಿ ವಶಾವಣೆ ಮಾಡಿಲ್ಲ. 'ಎ' ನು ಯಾವ ಕಾಯಿಲೆಯ ಅವಧಿಯಲ್ಲಿ ಭಾಂಗಿಗಳನ್ನು ತೆಗೆದಿರಿಸಿದನೋ ಆ ಕಾಯಿಲೆಯಿಂದ ಮರಣ ಹೊಂದುತ್ತಾನೆ. 'ಬಿ' ಮತ್ತು 'ಸಿ' ಗಳು ಭಾಂಗಿಯೊಳಗಿನ ವಸ್ತುಗಳಿಗೆ ಹಕ್ಕುಳ್ಳವರಾಗುವುದಿಲ್ಲ.

## ಭಾಗ - VII

## ಮೃತನ ಸ್ವತ್ತಿನ ಸಂರಕ್ಷಣೆ

192. ಮೃತನ ಸ್ವತ್ತಿಗೆ ಉತ್ತರಾಧಿಕಾರದ ಮೂಲಕ ಹಕ್ಕನ್ನು ಕ್ಲೇಮು ಮಾಡುವ ವ್ಯಕ್ತಿಯು, ಅಕ್ರಮ ಸ್ವಾಧೀನದ ವಿರುದ್ಧ ಪರಿಹಾರಕ್ಕಾಗಿ ಅರ್ಜಿ ಹಾಕಿಕೊಳ್ಳಬಹುದು:- (1) ಯಾವನೇ ವ್ಯಕ್ತಿಯು ಸ್ಥಿರ ಅಥವಾ ಚರ ಸ್ವತ್ತನ್ನು ಬಿಟ್ಟು ಮರಣ ಹೊಂದಿದರೆ ಅದಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಉತ್ತರಾಧಿಕಾರದ ಮೂಲಕ ಹಕ್ಕನ್ನು ಕ್ಲೇಮು ಮಾಡುವ ಯಾವನೇ ವ್ಯಕ್ತಿಯು, ಯಾವ ಜಿಲ್ಲೆಯಲ್ಲಿ ಆ ಸ್ವತ್ತಿನ ಯಾವುದೇ ಭಾಗವು ಕಂಡುಬರುವುದೋ ಅಥವಾ ಇದೆಯೋ ಆ ಜಿಲ್ಲೆಯ ಜಿಲ್ಲಾ ನ್ಯಾಯಾಧೀಶನಿಗೆ ಬೇರೊಬ್ಬ ವ್ಯಕ್ತಿಯು ಆ ಸ್ವತ್ತಿನ ವಾಸ್ತವಿಕ ಸ್ವಾಧೀನವನ್ನು ತೆಗೆದುಕೊಂಡ ತರುವಾಯವೇ ಆಗಲಿ ಅಥವಾ ಅಂಥ ಸ್ವಾಧೀನವನ್ನು ಬಲಾತ್ಕಾರದಿಂದ ತೆಗೆದುಕೊಳ್ಳುವ ಶಂಕೆಯಿರುವಾಗ ಆಗಲಿ ಪರಿಹಾರ ಕೋರಿ ಅರ್ಜಿ ಸಲ್ಲಿಸಬಹುದು.

(2) ಯಾವನೇ ಏಜೆಂಟ್, ಸಂಬಂಧಿ ಅಥವಾ ನಿಕಟ ಸ್ನೇಹಿತನು ಅಥವಾ ತಮ್ಮ ಸಂಜ್ಞಾನಕ್ಕೆ ಬರುವ ಪ್ರಕರಣಗಳಲ್ಲಿ ಪ್ರತಿಪಾಲಿತರ ನ್ಯಾಯಾಲಯವು, ಯಾವನೇ ಅಪ್ರಾಪ್ತ ವಯಸ್ಕ ಅಥವಾ ಅನರ್ಹಗೊಳಿಸಲಾದ ಅಥವಾ ಗೈರುಹಾಜರಿಯಾಗಿರುವ ವ್ಯಕ್ತಿಯು ಹಿಂದೆ ಹೇಳಿದಂತೆ ಅಂಥ ಸ್ವತ್ತಿಗೆ ಉತ್ತರಾಧಿಕಾರದ ಮೂಲಕ ಹಕ್ಕುಳ್ಳವನಾಗಿರುವ ಸಂದರ್ಭದಲ್ಲಿ ಯಾವುದೇ ಪರಿಹಾರಕ್ಕಾಗಿ ಅದೇ ಬಗೆಯ ಅರ್ಜಿಯನ್ನು ಸಲ್ಲಿಸಬಹುದು.

193. ನ್ಯಾಯಾಧೀಶನು ಮಾಡಬೇಕಾದ ವಿಚಾರಣೆ:- ಅಂಥ ಅರ್ಜಿಯನ್ನು ಯಾವ ಜಿಲ್ಲಾ ನ್ಯಾಯಾಧೀಶನಿಗೆ ಸಲ್ಲಿಸಲಾಗಿದೆಯೋ ಆ ಜಿಲ್ಲಾ ನ್ಯಾಯಾಧೀಶನು ಮೊದಲು ಅರ್ಜಿದಾರನನ್ನು ಪ್ರಮಾಣದ ಮೇಲೆ ಪರೀಕ್ಷಿಸತಕ್ಕುದು ಮತ್ತು ಸ್ವತ್ತಿನ ಸ್ವಾಧೀನದಲ್ಲಿರುವ ಅಥವಾ ಸ್ವಾಧೀನವನ್ನು ಬಲಾತ್ಕಾರವಾಗಿ ತೆಗೆದುಕೊಳ್ಳುವ ಪಕ್ಷಕಾರನಿಗೆ ಕಾನೂನು ಸಮ್ಮತ ಸ್ವಾಮ್ಯವಿಲ್ಲವೆಂದು ಮತ್ತು ಅರ್ಜಿದಾರನು ಅಥವಾ ಯಾರ ಪರವಾಗಿ ಅವನು ಅರ್ಜಿ ಸಲ್ಲಿಸುತ್ತಾನೋ ಆ ವ್ಯಕ್ತಿಯು ನಿಜವಾಗಿಯೂ ಹಕ್ಕುಳ್ಳವನಾಗಿದ್ದಾನೆಂದು ಮತ್ತು ದಾವೆಯ ಸಾಮಾನ್ಯ ಪರಿಹಾರೋಪಾಯಕ್ಕೆ ಬಿಟ್ಟರೆ ಅದರ ಮೇಲೆ ಗಣನೀಯವಾಗಿ ಪ್ರತಿಕೂಲ ಉಂಟು ಮಾಡುವ ಸಂಭವವಿದೆಯೆಂದು ಮತ್ತು ಅರ್ಜಿಯನ್ನು ಸದ್ಭಾವನೆಯಿಂದ ಸಲ್ಲಿಸಲಾಗಿದೆಯೆಂದು ನಂಬಲು ಸಾಕಷ್ಟು ಆಧಾರವಿದೆಯೇ ಹೇಗೆ ಎಂಬ ಬಗ್ಗೆ ಅವನು ಅವಶ್ಯವೆಂದು ಯೋಚಿಸುವಂಥ ಹೆಚ್ಚಿನ ವಿಚಾರಣೆ, ಯಾವುದಾದರೂ ಇದ್ದರೆ, ಅದನ್ನು ಮಾಡಬಹುದು.

194. ಪ್ರಕ್ರಿಯೆ:- ಹಿಂದೆ ಹೇಳಿದಂತೆ ನಂಬಲು ಸಾಕಷ್ಟು ಕಾರಣವಿದೆಯೆಂದು ಆದರೆ ಅನ್ಯಥಾ ಅಲ್ಲ ಎಂದು ಜಿಲ್ಲಾನ್ಯಾಯಾಧೀಶನಿಗೆ ಮನದಟ್ಟಾದರೆ ಅವನು, ಯಾವ ಪಕ್ಷಕಾರನ ಮೇಲೆ ದೂರು ಕೊಡಲಾಗಿದೆಯೋ ಆ ಪಕ್ಷಕಾರನನ್ನು ಕರೆಸತಕ್ಕುದು ಮತ್ತು ಸ್ವಾಧೀನವು ಖಾಲಿಯಿರುವುದಾಗಿ ಅಥವಾ ಆ ಸ್ವಾಧೀನಕ್ಕೆ ಅಡ್ಡಿಪಡಿಸಿರುವುದಾಗಿ ಪ್ರಕಟಿಸಿ ನೋಟೀಸನ್ನು ಕೊಡತಕ್ಕುದು ಮತ್ತು ಯುಕ್ತ ಕಾಲವು ಮುಕ್ತಾಯವಾದ ತರುವಾಯ ಸ್ವಾಧೀನದ ಹಕ್ಕನ್ನು (ಇಲ್ಲಿ ಇನ್ನು ಮುಂದೆ ಉಪಬಂಧಿಸಿದ ದಾವೆಗೆ ಒಳಪಟ್ಟು ಕ್ಷಿಪ್ರವಾಗಿ ನಿರ್ಧರಿಸತಕ್ಕುದು ಮತ್ತು ತದನುಸಾರವಾಗಿ ಸ್ವಾಧೀನವನ್ನು ವಶಾವಣೆ ಮಾಡತಕ್ಕುದು:

ಪರಂತು, ಆ ನ್ಯಾಯಾಧೀಶನು, ಒಬ್ಬ ಅಧಿಕಾರಿಯನ್ನು ನೇಮಕ ಮಾಡಲು ಅಧಿಕಾರವನ್ನು ಹೊಂದಿರತಕ್ಕುದು; ಆ ಅಧಿಕಾರಿಯು ಯಾರ ವಿರುದ್ಧ ದೂರು ಬಂದಿದೆಯೋ ಆ ಪಕ್ಷಕಾರನನ್ನು ಕರೆಸುವುದಕ್ಕಾಗಿ, ಅವಶ್ಯ ವಿಚಾರಣೆಯನ್ನು ಅವನು ಮುಕ್ತಾಯಗೊಳಿಸಿರಲಿ ಅಥವಾ ಇಲ್ಲದಿರಲಿ, ಆ ಉದ್ದೇಶಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ಮೇಲೆ ವಿಳಂಬವಿಲ್ಲದೆಯೇ ಸಾಮಾನುಗಳ ವಿವರಣ ಪಟ್ಟಿಯನ್ನು ತಯಾರಿಸತಕ್ಕುದು ಮತ್ತು ಅದಕ್ಕೆ ಮೊಹರು ಹಾಕತಕ್ಕುದು ಅಥವಾ ಅನ್ಯಥಾ ಅದನ್ನು ಭದ್ರಪಡಿಸತಕ್ಕುದು.

195. ವ್ಯವಹರಣೆಯು ಇತ್ಯರ್ಥದಲ್ಲಿರುವಾಗ ಕ್ಯುರೇಟರನ ನೇಮಕ:- ಹಿಂದೆ ಹೇಳಿದಂತಹ ವಿಚಾರಣೆಯನ್ನು ಮಾಡಿದ ಮೇಲೆ, ಕ್ಷಿಪ್ರ ವ್ಯವಹರಣೆಯ ನಿರ್ಧಾರವಾಗುವುದಕ್ಕೆ ಮುಂಚೆ ಸ್ವತ್ತು ದುರುಪಯೋಗವಾಗುವ ಅಥವಾ ಪೋಲಾಗುವುದರ ಬಗ್ಗೆ ಅಪಾಯವನ್ನು ಶಂಕಿಸಬಹುದೆಂದು ಮತ್ತು ಸ್ವಾಧೀನದಲ್ಲಿರುವ ಪಕ್ಷಕಾರನಿಂದ ಭದ್ರತೆಯನ್ನು ಪಡೆಯುವಲ್ಲಿನ ವಿಳಂಬದಿಂದ ಅಥವಾ ಭದ್ರತೆಯು ಸಾಕಷ್ಟು ಇಲ್ಲದಿರುವುದರಿಂದ, ಸ್ವಾಧೀನದಲ್ಲಿಲ್ಲದೇ ಇರುವ ಪಕ್ಷಕಾರನನ್ನು (ಪರಂತು ಅವನು ಕಾನೂನು ಸಮ್ಮತ ಒಡೆಯನಾಗಿರಬೇಕು) ಗಣನೀಯವಾದ ಅಪಾಯಕ್ಕೆ ಈಡು ಮಾಡುವ ಸಂಭವವಿರುವುದಾಗಿ ಕಂಡುಬಂದರೆ, ಜಿಲ್ಲಾ ನ್ಯಾಯಾಧೀಶನು ಒಬ್ಬ ಅಥವಾ ಹೆಚ್ಚು ಕ್ಯುರೇಟರುಗಳನ್ನು ನೇಮಿಸಬಹುದು, ಅವನ ಅಥವಾ ಅವರ ಅಧಿಕಾರವು ಅವರ ಅನುಕ್ರಮ ನೇಮಕಾತಿಗಳ ನಿಬಂಧನೆಗಳಿಗೆ ಅನುಸಾರವಾಗಿ ಮುಂದುವರೆಯತಕ್ಕುದು ಮತ್ತು ಯಾವುದೇ ಸಂದರ್ಭದಲ್ಲಿಯೂ ಕ್ಷಿಪ್ರ ವ್ಯವಹರಣೆಯ ನಿರ್ಧರಣೆ ಮತ್ತು ಆ ನಿರ್ಧರಣೆಯ ಪರಿಣಾಮವಾಗಿ ಆದರೆ ಸ್ವಾಧೀನದ ಸ್ಥಿರೀಕರಣ ಅಥವಾ ವಶಾವಣೆಯನ್ನು ಮೀರಿ ಅದು ಮುಂದುವರೆಯತಕ್ಕುದಲ್ಲ:

ಪರಂತು, ಭೂಮಿಯ ಸಂದರ್ಭದಲ್ಲಿ ನ್ಯಾಯಾಧೀಶನು ಕ್ಯುರೇಟರನ ಅಧಿಕಾರಗಳನ್ನು ಕಲೆಕ್ಟರನಿಗೆ ಅಥವಾ ಕಲೆಕ್ಟರನ ಅಧೀನನಾಗಿರುವ ಯಾವನೇ ಅಧಿಕಾರಿಗೆ ವಹಿಸಿಕೊಡಬಹುದು:

ಮತ್ತೂ ಪರಂತು, ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ, ಪ್ರತಿಯೊಬ್ಬ ಕ್ಯುರೇಟರನ ನೇಮಕಾತಿಯನ್ನು ಕ್ರಮಬದ್ಧವಾಗಿ ಪ್ರಕಟಿಸತಕ್ಕುದು.

196. ಕ್ಯುರೇಟರನಿಗೆ ಪ್ರದಾನ ಮಾಡಬಹುದಾದ ಅಧಿಕಾರಗಳು:- ಜಿಲ್ಲಾ ನ್ಯಾಯಾಧೀಶನು, ಕ್ಯುರೇಟರ್‌ನನ್ನು, ಸ್ವತ್ತಿನ ಸ್ವಾಧೀನವನ್ನು ಸಾಮಾನ್ಯವಾಗಿ ಆಗಲಿ ಅಥವಾ ಸ್ವಾಧೀನದಲ್ಲಿರುವ ಪಕ್ಷಕಾರನು ಭದ್ರತೆಯನ್ನು ಕೊಡುವವರೆಗೆ ಆಗಲಿ ಅಥವಾ ಸ್ವತ್ತಿನ ವಿವರಣೆ ಪಟ್ಟಿಗಳನ್ನು ತಯಾರಿಸುವವರೆಗೆ ಆಗಲಿ ಅಥವಾ ಸ್ವಾಧೀನದಲ್ಲಿರುವ ಪಕ್ಷಕಾರನಿಂದ ಸ್ವತ್ತು ದುರುಪಯೋಗವಾಗದಂತೆ ಅಥವಾ ಪೋಲಾಗದಂತೆ ಭದ್ರತೆಗೊಳಿಸಲು ಅವಶ್ಯವಾದ ಯಾವುದೇ ಇತರ ಉದ್ದೇಶಕ್ಕಾಗಿ ಆಗಲಿ ಅಂಥ ಸ್ವಾಧೀನವನ್ನು ತೆಗೆದುಕೊಳ್ಳಲು ಅಧಿಕೃತಗೊಳಿಸಬಹುದು:

ಪರಂತು, ಭದ್ರತೆಯನ್ನು ಕೊಟ್ಟ ಮೇಲೆ ಅಥವಾ ಭದ್ರತೆಯಿಲ್ಲದೆಯೇ ಅಂಥ ಸ್ವಾಧೀನದಲ್ಲಿ ಮುಂದುವರೆಯಲು ಸ್ವಾಧೀನದಲ್ಲಿರುವ ಪಕ್ಷಕಾರನಿಗೆ ಅವಕಾಶ ಕೊಡುವುದು ಆ ನ್ಯಾಯಾಧೀಶನ ವಿವೇಚನೆಗೆ ಬಿಟ್ಟಿರತಕ್ಕುದು ಮತ್ತು ಸ್ವಾಧೀನದ ಯಾವುದೇ ಮುಂದುವರಿಕೆಯು ವಿವರಣ ಪಟ್ಟಿಗಳಿಗೆ ಅಥವಾ ಪತ್ರಗಳನ್ನು ಅಥವಾ ಇತರ ಸಾಮಾನುಗಳನ್ನು ಭದ್ರಪಡಿಸುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಧೀಶನು ಹೊರಡಿಸಬಹುದಾದಂಥ ಆದೇಶಗಳಿಗೆ ಒಳಪಟ್ಟಿರತಕ್ಕುದು.

197. ಕ್ಯುರೇಟರುಗಳು ಕೆಲವು ಅಧಿಕಾರಗಳನ್ನು ಚಲಾಯಿಸುವುದಕ್ಕೆ ನಿಷೇಧ:- (1) X ನೇ ಭಾಗದ ಮೇರೆಗೆ ಅಥವಾ ಉತ್ತರಾಧಿಕಾರದ ಪ್ರಮಾಣಪತ್ರ ಅಧಿನಿಯಮ, 1889ರ (1889ರ 7) ಮೇರೆಗೆ ಪ್ರಮಾಣ ಪತ್ರವನ್ನು ಕೊಟ್ಟಿರುವಲ್ಲಿ ಅಥವಾ ಪ್ರೊಬೇಟು ಅಥವಾ ಆಡಳಿತಾಧಿಕಾರ ಪತ್ರವನ್ನು ಕೊಟ್ಟಿರುವಲ್ಲಿ ಈ ಭಾಗದ ಮೇರೆಗೆ ನೇಮಕಗೊಂಡ ಕ್ಯುರೇಟರನು, ಆ ಪ್ರಮಾಣಪತ್ರದ ಧಾರಕನ ಅಥವಾ ನಿರ್ವಾಹಕ ಅಥವಾ ಆಡಳಿತಗಾರನ ಕಾನೂನು ಸಮ್ಮತ ಯಾವುದೇ ಅಧಿಕಾರವನ್ನು ಚಲಾಯಿಸತಕ್ಕುದಲ್ಲ.

(2) ಕ್ಯುರೇಟರನಿಗೆ ಋಣ ಇತ್ಯಾದಿಗಳ ಸಂದಾಯ:- ಋಣಗಳನ್ನು ಅಥವಾ ಬಾಡಿಗೆಗಳನ್ನು ಸ್ವೀಕರಿಸಲು ಕ್ಯುರೇಟರನು ನ್ಯಾಯಾಲಯದಿಂದ ಅಧಿಕೃತನಾಗಿದ್ದು, ಅವುಗಳನ್ನು ಅವನಿಗೆ ಸಂದಾಯ ಮಾಡಿದ ಎಲ್ಲ ವ್ಯಕ್ತಿಗಳಿಗೆ ನಷ್ಟ ಭರ್ತಿ ಮಾಡಿಕೊಡತಕ್ಕುದು; ಮತ್ತು ಕ್ಯುರೇಟರನು, ಸಂದರ್ಭಾನುಸಾರ ಪ್ರಮಾಣಪತ್ರ, ಪ್ರೊಬೇಟು ಅಥವಾ ಆಡಳಿತಾಧಿಕಾರ ಪತ್ರವನ್ನು ಪಡೆದ ವ್ಯಕ್ತಿಗೆ ಅವುಗಳನ್ನು ಸಂದಾಯ ಮಾಡುವುದಕ್ಕೆ ಜವಾಬ್ದಾರನಾಗಿರತಕ್ಕುದು.

198. ಕ್ಯುರೇಟರನು ಭದ್ರತೆಯನ್ನು ಕೊಡುವುದು ಮತ್ತು ಪರಿಶ್ರಮ ಧನವನ್ನು ಸ್ವೀಕರಿಸುವುದು:- (1) ಕ್ಯುರೇಟರನು ತನ್ನ ನ್ಯಾಸವನ್ನು ನಿಷ್ಠಾಪೂರ್ವಕವಾಗಿ ನಿರ್ವಹಿಸುವುದಕ್ಕಾಗಿ ಮತ್ತು ಇನ್ನು ಮುಂದೆ ಉಪಬಂಧಿಸಿರುವಂತೆ ಆ ನ್ಯಾಸದ ತೃಪ್ತಿಕರ ಲೆಕ್ಕಗಳನ್ನು ಸಲ್ಲಿಸುವುದಕ್ಕಾಗಿ ಜಿಲ್ಲಾ ನ್ಯಾಯಾಧೀಶನು ಅವನಿಂದ ಭದ್ರತೆಯನ್ನು ಪಡೆಯತಕ್ಕುದು, ಮತ್ತು ಜಿಲ್ಲಾ ನ್ಯಾಯಾಧೀಶನು ಯುಕ್ತವೆಂದು ಯೋಚಿಸುವಂತಹ ಚರ ಸ್ವತ್ತಿನ ಮೇಲೆ ಮತ್ತು ಸ್ಥಿರ ಸ್ವತ್ತಿನ ವಾರ್ಷಿಕ ಲಾಭಗಳ ಮೇಲೆ ಯಾವುದೇ ಸಂದರ್ಭದಲ್ಲಿ ಶೇಕಡಾ ಐದನ್ನು ಮೀರದಂತಹ ಪರಿಶ್ರಮ ಧನವನ್ನು ಆ ಸ್ವತ್ತಿನಿಂದ ಸ್ವೀಕರಿಸಲು ಅವನನ್ನು ಅಧಿಕೃತಗೊಳಿಸಬಹುದು.

(2) ಕ್ಯುರೇಟರನು ವಸೂಲ್ಮಾಡಿದ ಎಲ್ಲಾ ಹೆಚ್ಚಿನ ಹಣವನ್ನು ನ್ಯಾಯಾಲಯಕ್ಕೆ ಸಂದಾಯ ಮಾಡತಕ್ಕುದು ಮತ್ತು ಕ್ಷಿಪ್ರ ವ್ಯವಹರಣೆಯ ನ್ಯಾಯ ನಿರ್ಣಯವಾದ ಮೇಲೆ ಆ ಹಣಕ್ಕೆ ಹಕ್ಕುಳ್ಳವರಾದ ವ್ಯಕ್ತಿಗಳ ಪ್ರಯೋಜನಕ್ಕಾಗಿ ಅದನ್ನು ಸಾರ್ವಜನಿಕ ಭದ್ರತೆಗಳಲ್ಲಿ ಹೂಡತಕ್ಕುದು.

(3) ಸಾಧ್ಯವಾದಷ್ಟು ಬೇಗನೆ ಕ್ಯುರೇಟರನಿಂದ ಭದ್ರತೆಯನ್ನು ಅಗತ್ಯಪಡಿಸತಕ್ಕುದು ಮತ್ತು ಕಾರ್ಯ ಸಾಧ್ಯವಿರುವಲ್ಲೆಲ್ಲಾ ಅಂಥ ಆ ಭದ್ರತೆಯನ್ನು ಅವನು ಆ ತರುವಾಯ ಕ್ಯುರೇಟರನಾಗಿ ನೇಮಕವಾಗಬಹುದಾದಂಥ ಎಲ್ಲ ಪ್ರಕರಣಗಳ ಸಂಬಂಧದಲ್ಲಿ ಸಾಮಾನ್ಯವಾಗಿ ತೆಗೆದುಕೊಳ್ಳತಕ್ಕುದು. ಆದರೆ ಭದ್ರತೆಯನ್ನು ತೆಗೆದುಕೊಳ್ಳುವಲ್ಲಿನ ಯಾವುದೇ ವಿಳಂಬವು ಕ್ಯುರೇಟರನ ಪದದ ಅಧಿಕಾರಗಳನ್ನು ಅವನಲ್ಲಿ ಕೂಡಲೇ ನಿಹಿತಗೊಳಿಸಲು ನ್ಯಾಯಾಧೀಶನನ್ನು ಪ್ರತಿಬಂಧಿಸತಕ್ಕುದಲ್ಲ.

199. ಕಂದಾಯವು ಸಂದಾಯವಾಗತಕ್ಕ ಭೂಮಿಯನ್ನು ಎಸ್ಟೇಟು ಒಳಗೊಂಡಿರುವಲ್ಲಿ ಕಲೆಕ್ಟರನಿಂದ ವರದಿ:- (1) ಮರಣ ಹೊಂದಿದ ವ್ಯಕ್ತಿಯ ಎಸ್ಟೇಟು ಸರ್ಕಾರಕ್ಕೆ ಕಂದಾಯವನ್ನು ಸಂದಾಯ ಮಾಡುವ ಭೂಮಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ

ಒಳಗೊಂಡಿರುವಲ್ಲಿ, ಸ್ವಾಧೀನದಲ್ಲಿರುವ ಪಕ್ಷಕಾರರನ್ನು ಕರೆಯುವ, ಕ್ಯುರೇಟರನನ್ನು ನೇಮಕ ಮಾಡುವ ಅಥವಾ ಆ ನೇಮಕಾತಿಗೆ ವ್ಯಕ್ತಿಗಳನ್ನು ನಾಮನಿರ್ದೇಶಿಸುವ ಔಚಿತ್ಯದ ಬಗೆಗಿನ ಎಲ್ಲ ವಿಷಯಗಳಲ್ಲಿ ಜಿಲ್ಲಾ ನ್ಯಾಯಾಧೀಶನು ಕಲೆಕ್ಟರನಿಂದ ವರದಿಯನ್ನು ಕೇಳತಕ್ಕುದು ಮತ್ತು ಕಲೆಕ್ಟರನು ಅದನ್ನು ಆ ತರುವಾಯ ಒದಗಿಸತಕ್ಕುದು:

ಪರಂತು, ಜರೂರು ಸಂದರ್ಭಗಳಲ್ಲಿ ನ್ಯಾಯಾಧೀಶನು ಮೊದಲು ಅಂಥ ವರದಿಯಿಲ್ಲದೆಯೇ ಮುಂದುವರೆಯಬಹುದು.

(2) ನ್ಯಾಯಾಧೀಶನು ಅಂಥ ಯಾವುದೇ ವರದಿಗೆ ಅನುಗುಣವಾಗಿಯೇ ಕಾರ್ಯನಿರ್ವಹಿಸಲು ಬದ್ಧನಾಗಿರತಕ್ಕುದಲ್ಲ. ಆದರೆ ಅಂಥ ವರದಿಗೆ ಅನುಗುಣವಾಗಿ ಅಲ್ಲದೆ ಅನ್ಯಥಾ ಅವನು ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಅವನು ತನ್ನ ಕಾರಣಗಳ ನಿರೂಪಣೆಯನ್ನು ಉಚ್ಚ ನ್ಯಾಯಾಲಯಕ್ಕೆ ಕೂಡಲೇ ಕಳುಹಿಸತಕ್ಕುದು ಮತ್ತು ಉಚ್ಚ ನ್ಯಾಯಾಲಯವು, ಅಂಥ ಕಾರಣಗಳ ಬಗ್ಗೆ ಅಸಮಾಧಾನಗೊಂಡರೆ ಕಲೆಕ್ಟರನ ವರದಿಗೆ ಅನುಗುಣವಾಗಿ ಮುಂದುವರಿಯಲು ನ್ಯಾಯಾಧೀಶನಿಗೆ ನಿರ್ದೇಶಿಸತಕ್ಕುದು.

200. ದಾವೆಗಳನ್ನು ಹೂಡುವುದು ಮತ್ತು ಅವುಗಳ ಪ್ರತಿರಕ್ಷೆ:- ಕ್ಯುರೇಟರನು ದಾವೆಗಳನ್ನು ಹೂಡುವುದಕ್ಕೆ ಅಥವಾ ಅವುಗಳ ಪ್ರತಿರಕ್ಷೆ ಬಗ್ಗೆ ಜಿಲ್ಲಾ ನ್ಯಾಯಾಧೀಶರ ಎಲ್ಲಾ ಆದೇಶಗಳಿಗೆ ಒಳಪಟ್ಟಿರತಕ್ಕುದು, ಮತ್ತು ಎಲ್ಲ ದಾವೆಗಳನ್ನು ಎಸ್ಟೇಟಿನ ಪರವಾಗಿ ಕ್ಯುರೇಟರನ ಹೆಸರಿನಲ್ಲಿ ಹೂಡಬಹುದು, ಅಥವಾ ಪ್ರತಿರಕ್ಷೆ ಮಾಡಿಕೊಳ್ಳಬಹುದು:

ಪರಂತು, ಋಣಗಳು ಮತ್ತು ಬಾಡಿಗೆಗಳ ವಸೂಲಿಯ ಬಗ್ಗೆ ಕ್ಯುರೇಟರನ ನೇಮಕಾತಿಯ ಆದೇಶದಲ್ಲಿ ಸ್ಪಷ್ಟ ಅಧಿಕಾರವನ್ನು ನಮೂದಿಸುವುದು ಅಗತ್ಯವಾಗಿರತಕ್ಕುದು, ಮತ್ತು ಅಂಥ ಸ್ಪಷ್ಟ ಅಧಿಕಾರವು, ಆ ಅಧಿಕಾರದಿಂದಾಗಿ ಸ್ವೀಕರಿಸಿದ ಹಣದ ಯಾವುದೇ ಮೊತ್ತಗಳಿಗೆ ಪೂರ್ಣ ತೀರ್ವಳಿಯನ್ನು ಕೊಡಲು ಕ್ಯುರೇಟರನನ್ನು ಶಕ್ತಗೊಳಿಸತಕ್ಕುದು.

201. ಕ್ಯುರೇಟರನ ಅಭಿರಕ್ಷೆಯಲ್ಲಿರುವವರೆಗೆ ಒಡೆಯರೆಂದು ಕಂಡುಬರುವವರಿಗೆ ಭತ್ಯೆಗಳು:- ಕ್ಯುರೇಟರನ ಅಭಿರಕ್ಷೆಯಲ್ಲಿ ಸ್ವತ್ತು ಇರುವವರೆಗೆ, ಜಿಲ್ಲಾ ನ್ಯಾಯಾಧೀಶನು, ಹಿತಾಸಕ್ತಿಯುಳ್ಳ ಪಕ್ಷಕಾರರ ಹಕ್ಕುಗಳು ಮತ್ತು ಸಂದರ್ಭಗಳ ಬಗ್ಗೆ ಕ್ಷಿಪ್ರ ತನಿಖೆಯನ್ನು ನಡೆಸಿದ ಮೇಲೆ ಆ ಸ್ವತ್ತಿಗೆ ಮೇಲ್ನೋಟದ ಹಕ್ಕು ಹೊಂದಿರುವ ಪಕ್ಷಕಾರರಿಗೆ ತಾನು ಅವಶ್ಯವೆಂದು ಪರ್ಯಾಲೋಚಿಸುವಂತಹ ಭತ್ಯಗಳನ್ನು ಕೊಡಬಹುದು ಮತ್ತು ಅವನ ವಿವೇಚನಾನುಸಾರ, ಕ್ಷಿಪ್ರ ವ್ಯವಹರಣೆಯ ನ್ಯಾಯ ನಿರ್ಣಯದ ತರುವಾಯ ಪಕ್ಷಕಾರನು ಭತ್ಯೆಗೆ ಹಕ್ಕುಳ್ಳವನಲ್ಲವೆಂದು ಕಂಡುಬಂದ ಪಕ್ಷದಲ್ಲಿ, ಬಡ್ಡಿ ಸಮೇತ ಅದರ ಮರು ಸಂದಾಯಕ್ಕಾಗಿ ಅವನಿಂದ ಭದ್ರತೆಯನ್ನು ತೆಗೆದುಕೊಳ್ಳಬಹುದು.

202. ಕ್ಯುರೇಟರನು ಲೆಕ್ಕಪತ್ರಗಳನ್ನು ದಾಖಲು ಮಾಡುವುದು:- ಕ್ಯುರೇಟರನು ಮಾಸಿಕ ಲೆಕ್ಕಪತ್ರಗಳನ್ನು ಸಂಕ್ಷಿಪ್ತವಾಗಿ ದಾಖಲು ಮಾಡತಕ್ಕುದು ಮತ್ತು ಮೂರು ತಿಂಗಳುಗಳ ಪ್ರತಿಯೊಂದು ಅವಧಿಯು ಮುಕ್ತಾಯವಾದ ಮೇಲೆ ಅಲ್ಲಿಯವರೆಗೆ ಅವನ ಆಡಳಿತ ಇದ್ದರೆ ಮತ್ತು ಸ್ವತ್ತಿನ ಸ್ವಾಧೀನವನ್ನು ಬಿಟ್ಟುಕೊಟ್ಟ ಮೇಲೆ, ಜಿಲ್ಲಾ ನ್ಯಾಯಾಧೀಶನಿಗೆ ಸಮಾಧಾನವಾಗುವಂತೆ ಅವನ ಆಡಳಿತದ ವಿವರವಾದ ಲೆಕ್ಕವನ್ನು ದಾಖಲ್ಮಾಡತಕ್ಕುದು.

203. ಲೆಕ್ಕಪತ್ರಗಳ ಪರಿಶೀಲನೆ ಮತ್ತು ಹಿತಾಸಕ್ತಿಯನ್ನು ಹೊಂದಿದ ಪಕ್ಷಕಾರನು ದ್ವಿಪ್ರತಿಯನ್ನು ಇಟ್ಟುಕೊಳ್ಳುವ ಹಕ್ಕು:- (1) ಕ್ಯುರೇಟರನ ಲೆಕ್ಕಪತ್ರಗಳನ್ನು ಪರಿಶೀಲಿಸಲು ಹಿತಾಸಕ್ತಿಯುಳ್ಳ ಎಲ್ಲ ಪಕ್ಷಕಾರರಿಗೆ ಅವಕಾಶವಿರತಕ್ಕುದು; ಮತ್ತು ಕ್ಯುರೇಟರನ ಎಲ್ಲ ಜಮೆಗಳು ಮತ್ತು ಸಂದಾಯಗಳ ದ್ವಿಪ್ರತಿ ಲೆಕ್ಕವನ್ನಿಡಲು ಪ್ರತ್ಯೇಕ ವ್ಯಕ್ತಿಯನ್ನು ನೇಮಕ ಮಾಡುವುದು ಅಂಥ ಯಾವನೇ ಹಿತಾಸಕ್ತಿಯುಳ್ಳ ಪಕ್ಷಕಾರನು ಸಕ್ಷಮವಾಗಿರತಕ್ಕುದು.

(2) ಕ್ಯುರೇಟರ್‌ನ ಲೆಕ್ಕಪತ್ರಗಳು ಬಾಕಿ ಇವೆ ಅಥವಾ ಅವು ತಪ್ಪಾಗಿವೆ ಅಥವಾ ಅಪೂರ್ಣವಾಗಿವೆ ಎಂದು ಕಂಡುಬಂದರೆ ಅಥವಾ ಜಿಲ್ಲಾ ನ್ಯಾಯಾಧೀಶನು ಅವುಗಳನ್ನು ಹಾಜರುಪಡಿಸಬೇಕೆಂದು, ಆದೇಶಿಸಿದಾಗಲೆಲ್ಲಾ ಕ್ಯುರೇಟರನು ಹಾಗೆ ಹಾಜರುಪಡಿಸದಿದ್ದರೆ, ಅಂಥ ಪ್ರತಿಯೊಂದು ತಪ್ಪಿತಕ್ಕಾಗಿ ಒಂದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ಅವನು ದಂಡನೀಯನಾಗತಕ್ಕುದು.

204. ಒಂದೇ ಸ್ವತ್ತಿಗೆ ಎರಡನೇ ಕ್ಯುರೇಟರನ ನೇಮಕಾತಿಗೆ ಪ್ರತಿಷೇಧ:- ಮರಣ ಹೊಂದಿದ ವ್ಯಕ್ತಿಯ ಇಡೀ ಸ್ವತ್ತಿಗೆ ಸಂಬಂಧಿಸಿದಂತೆ, ಯಾವುದೇ ಜಿಲ್ಲೆಯ ನ್ಯಾಯಾಧೀಶನು ಒಬ್ಬ ಕ್ಯುರೇಟರನನ್ನು ನೇಮಿಸಿದ್ದರೆ, ಅಂಥ ನೇಮಕಾತಿಯು, ಅದೇ ರಾಜ್ಯದಲ್ಲಿನ ಬೇರೆ ಯಾವುದೇ ಜಿಲ್ಲೆಯ ನ್ಯಾಯಾಧೀಶನು ಇತರ ಯಾವನೇ ಕ್ಯುರೇಟರ್‌ನನ್ನು ನೇಮಿಸುವುದಕ್ಕೆ ಪ್ರತಿಬಂಧಕವಾಗತಕ್ಕುದು, ಆದರೆ ಮರಣ ಹೊಂದಿದ ವ್ಯಕ್ತಿಯ ಸ್ವತ್ತಿನ ಒಂದು ಭಾಗಕ್ಕೆ ಸಂಬಂಧಿಸಿದಂತೆ ಒಬ್ಬ ಕ್ಯುರೇಟರನ ನೇಮಕಾತಿಯು, ಅದರ ಶೇಷ ಅಥವಾ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ, ಇನ್ನೊಬ್ಬ ಕ್ಯುರೇಟರ್‌ನನ್ನು ಅದೇ ರಾಜ್ಯದಲ್ಲಿ ನೇಮಿಸುವುದಕ್ಕೆ ಪ್ರತಿಬಂಧಿಸತಕ್ಕುದಲ್ಲ:

ಪರಂತು, ಈ ಭಾಗದ ಮೇರೆಗೆ ಮತ್ತೊಬ್ಬ ನ್ಯಾಯಾಧೀಶನ ಮುಂದೆ ಈ ಹಿಂದೆ ಹೂಡಿದ ಕ್ಷಿಪ್ರ ವ್ಯವಹರಣೆಯ ವಸ್ತುವಾಗಿರುವಂಥ ಸ್ವತ್ತಿಗೆ ಸಂಬಂಧಿಸಿದಂತೆ ಯಾವನೇ ನ್ಯಾಯಾಧೀಶನು, ಕ್ಯುರೇಟರನನ್ನು ನೇಮಿಸತಕ್ಕುದಲ್ಲ ಅಥವಾ ಕ್ಷಿಪ್ರ ವ್ಯವಹರಣೆಗೆ ಅವಕಾಶ ಕೊಡತಕ್ಕುದಲ್ಲ:

ಮತ್ತೂ ಪರಂತು, ಒಂದು ಎಸ್ಟೇಟಿನ ಹಲವು ಭಾಗಗಳಿಗಾಗಿ ಬೇರೆ ಬೇರೆ ನ್ಯಾಯಾಧೀಶರು ಇಬ್ಬರು ಅಥವಾ ಹೆಚ್ಚು ಕ್ಯುರೇಟರ್‌ಗಳನ್ನು ನೇಮಕ ಮಾಡಿದ್ದರೆ, ಉಚ್ಚ ನ್ಯಾಯಾಲಯವು, ಇಡೀ ಸ್ವತ್ತಿಗೆ ಒಬ್ಬನೇ ಕ್ಯುರೇಟರನ ನೇಮಕ ಮಾಡುವುದಕ್ಕಾಗಿ ಯುಕ್ತವೆಂದು ಯೋಚಿಸುವಂಥ ಆದೇಶವನ್ನು ಮಾಡಬಹುದು.

205. ಕ್ಯುರೇಟರನ ನೇಮಕಾತಿ ಕೋರಿ ಅರ್ಜಿ ಹಾಕಿಕೊಳ್ಳಲು ಕಾಲದ ಪರಿಮಿತಿ:- ಈ ಭಾಗದ ಮೇರೆಗೆ ಜಿಲ್ಲಾ ನ್ಯಾಯಾಧೀಶನಿಗೆ ಸಲ್ಲಿಸುವ ಅರ್ಜಿಯನ್ನು, ಯಾವ ಮಾಲೀಕನ ಸ್ವತ್ತನ್ನು ಉತ್ತರಾಧಿಕಾರದ ಹಕ್ಕಿನ ಮೂಲಕ ಕ್ಲೇಮು ಮಾಡಲಾಗಿದೆಯೋ ಆ ಮಾಲೀಕನ ಮರಣದ ತರುವಾಯ ಆರು ತಿಂಗಳ ಒಳಗೆ ಸಲ್ಲಿಸತಕ್ಕುದು.

206. ಮೃತನು ಮಾಡಿದ ಸಾರ್ವಜನಿಕ ವ್ಯವಸ್ಥೆ ಅಥವಾ ಕಾನೂನು ಸಮ್ಮತ ನಿರ್ದೇಶನಗಳಿಗೆ ವಿರುದ್ಧವಾಗಿ ಈ ಭಾಗವನ್ನು ಜಾರಿಗೊಳಿಸುವುದಕ್ಕೆ ಪ್ರತಿಷೇಧ:- ಈ ಭಾಗದಲ್ಲಿರುವುದು ಯಾವುದೂ, ಅಪ್ರಾಪ್ತ ವಯಸ್ಕನ ಸಂದರ್ಭದಲ್ಲಿ ಅಥವಾ ಅನ್ಯಥಾ ಯಾವುದೇ ಸಂದರ್ಭದಲ್ಲಿ ಯಾವುದೇ ಸ್ವತ್ತಿನ ಮೃತ ಮಾಲೀಕನು, ಅವನ ಮರಣದ ತರುವಾಯ ತನ್ನ ಸ್ವತ್ತಿನ ಸ್ವಾಧೀನಕ್ಕಾಗಿ ಮಾಡಿದ ವ್ಯವಸ್ಥೆಯ ಯಾವುದೇ ಸಾರ್ವಜನಿಕ ಕಾರ್ಯವನ್ನು ಅಥವಾ ಕೊಟ್ಟ ಯಾವುವೇ ಕಾನೂನು ಸಮ್ಮತ ನಿರ್ದೇಶನಗಳನ್ನು ಉಲ್ಲಂಘಿಸಲು ಅಧಿಕೃತಗೊಳಿಸುವುದೆಂದು ಭಾವಿಸತಕ್ಕುದಲ್ಲ ಮತ್ತು ಅಂಥ ಪ್ರತಿಯೊಂದು ಪ್ರಕರಣದಲ್ಲಿ , ಮೃತ ವ್ಯಕ್ತಿಯ ಸ್ವತ್ತಿನ ಬಗ್ಗೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಧೀಶನು ಅಂತಹ ನಿರ್ದೇಶನಗಳಿವೆ ಎಂದು ಮನದಟ್ಟು ಮಾಡಿಕೊಂಡ ಕೂಡಲೇ ಅವನು ಆ ನಿರ್ದೇಶನಗಳನ್ನು ಜಾರಿಗೊಳಿಸತಕ್ಕುದು.

207. ಅಪ್ರಾಪ್ತ ವಯಸ್ಕರು, ಪ್ರತಿಪಾಲಿತರ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಒಳಪಟ್ಟು ಸ್ವತ್ತನ್ನು ಹೊಂದಿರುವ ಸಂದರ್ಭದಲ್ಲಿ ಆ ನ್ಯಾಯಾಲಯವನ್ನೇ ಕ್ಯುರೇಟರನನ್ನಾಗಿ ಮಾಡತಕ್ಕುದು:- ಈ ಭಾಗದಲ್ಲಿರುವುದು ಯಾವುದೂ ಪ್ರತಿಪಾಲಿತರ ನ್ಯಾಯಾಲಯವು ಹೊಂದಿರುವ ಯಾವುದೇ ಸ್ವತ್ತಿನ ಸ್ವಾಧೀನಕ್ಕೆ ಯಾವುದೇ ತೊಂದರೆ ಉಂಟು ಮಾಡುವುದನ್ನು ಅಧಿಕೃತಗೊಳಿಸುವುದೆಂದು ಭಾವಿಸತಕ್ಕುದಲ್ಲ; ಮತ್ತು ಯಾವ ಅಪ್ರಾಪ್ತ ವಯಸ್ಕ ಅಥವಾ ಅನರ್ಹ ವ್ಯಕ್ತಿಯ ಸ್ವತ್ತು ಪ್ರತಿಪಾಲಿತರ ನ್ಯಾಯಾಲಯಕ್ಕೆ ಒಳಪಟ್ಟಿದೆಯೋ ಆ ಅಪ್ರಾಪ್ತ ವಯಸ್ಕನು ಅಥವಾ ಇತರ ಅನರ್ಹಗೊಂಡ ವ್ಯಕ್ತಿಯು, ಈ ಭಾಗದ ಮೇರೆಗೆ ಯಾರ ಪರವಾಗಿ ಅರ್ಜಿಯನ್ನು ಸಲ್ಲಿಸಲಾಗಿದೆಯೋ, ಆ ಪಕ್ಷಕಾರನಾಗಿರುವ ಸಂದರ್ಭದಲ್ಲಿ, ಜಿಲ್ಲಾ ನ್ಯಾಯಾಧೀಶನು ಸ್ವಾಧೀನ ಹೊಂದಿರುವ ಪಕ್ಷಕಾರನನ್ನು ಕರೆಯಲು, ಮತ್ತು ಕ್ಯುರೇಟರ್‌ನನ್ನು ನೇಮಕ ಮಾಡಲು ನಿರ್ಧರಿಸಿದರೆ, ಅವನು ಹಿಂದೆ ಹೇಳಿದಂತೆ ಭದ್ರತೆಯನ್ನು ತೆಗೆದುಕೊಳ್ಳದೆ ವ್ಯವಹರಣೆಯು ಇತ್ಯರ್ಥವಾಗುವವರೆಗೆ ಎಸ್ಟೇಟಿನ ಕ್ಯುರೇಟರ್‌ನ ಕೆಲಸವನ್ನು ಪ್ರತಿಪಾಲಿತರ ನ್ಯಾಯಾಲಯಕ್ಕೆ ವಹಿಸಿಕೊಡತಕ್ಕುದು, ಮತ್ತು ಆ ಅಪ್ರಾಪ್ತ ವಯಸ್ಕ ಅಥವಾ ಅನರ್ಹಗೊಂಡ ವ್ಯಕ್ತಿಯು ಕ್ಷಿಪ್ರ ವ್ಯವಹರಣೆಯ ನ್ಯಾಯ ನಿರ್ಣಯವಾದ ಮೇಲೆ ಆ ಸ್ವತ್ತಿಗೆ ಹಕ್ಕುಳ್ಳವನೆಂದು ಕಂಡುಬಂದರೆ, ಸ್ವಾಧೀನವನ್ನು ಪ್ರತಿಪಾಲಿತರ ನ್ಯಾಯಾಲಯಕ್ಕೆ ವಶಾವಣೆ ಮಾಡತಕ್ಕುದು.

208. ದಾವೆಯನ್ನು ಹೂಡುವ ಹಕ್ಕನ್ನು ಉಳಿಸುವುದು:- ಈ ಭಾಗದಲ್ಲಿ ಅಡಕವಾಗಿರುವುದು ಯಾವುದೂ, ಸ್ವಾಧೀನ ಹೊಂದಿರುವ ಪಕ್ಷಕಾರನನ್ನು ಕರೆಯುವುದಕ್ಕೆ ಮುಂಚೆ ಅಥವಾ ಆ ತರುವಾಯ ಯಾರ ಅರ್ಜಿಯು ತಿರಸ್ಕೃತವಾಗಿರಬಹುದಾಗಿದೆಯೋ ಆ ಪಕ್ಷಕಾರನಾಗಲಿ ಅಥವಾ ಈ ಭಾಗದ ಮೇರೆಗೆ ಸ್ವಾಧೀನದಿಂದ ಹೊರದೂಡಿರಬಹುದಾದ ಪಕ್ಷಕಾರನಾಗಲಿ ದಾವೆಯನ್ನು ಹೂಡುವುದಕ್ಕೆ ಯಾವುದೇ ಅಡ್ಡಿಯಾಗಿರತಕ್ಕುದಲ್ಲ.

209. ಕ್ಷಿಪ್ರ ವ್ಯವಹರಣೆಯ ತೀರ್ಮಾನದ ಪರಿಣಾಮ:- ಈ ಭಾಗದ ಮೇರೆಗಿನ ಕ್ಷಿಪ್ರ ವ್ಯವಹರಣೆಯಲ್ಲಿ ಜಿಲ್ಲಾ ನ್ಯಾಯಾಧೀಶನ ತೀರ್ಮಾನವು, ವಾಸ್ತವ ಸ್ವಾಧೀನವನ್ನು ಇತ್ಯರ್ಥಪಡಿಸುವುದಕ್ಕಿಂತ ಬೇರೆ ಯಾವುದೇ ಇತರ ಪರಿಣಾಮವನ್ನು ಹೊಂದಿರತಕ್ಕುದಲ್ಲ; ಆದರೆ, ಈ ಉದ್ದೇಶಕ್ಕಾಗಿ ಅದು ಅಂತಿಮವಾಗಿರತಕ್ಕುದು ಮತ್ತು ಯಾವುದೇ ಅಪೀಲು ಅಥವಾ ಪುನರವಲೋಕನಕ್ಕೆ ಒಳಪಡತಕ್ಕುದಲ್ಲ.

210. ಸರ್ಕಾರೀ ಕ್ಯುರೇಟರ್‌ಗಳ ನೇಮಕಾತಿ:- ರಾಜ್ಯ ಸರ್ಕಾರವು ಯಾವುದೇ ಜಿಲ್ಲೆಗೆ ಅಥವಾ ಹಲವಾರು ಜಿಲ್ಲೆಗಳಿಗೆ ಸಾರ್ವಜನಿಕ ಕ್ಯುರೇಟರ್‌ಗಳನ್ನು ನೇಮಕ ಮಾಡಬಹುದು; ಮತ್ತು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಧೀಶನು, ಈ ಭಾಗದ ಮೇರೆಗೆ ಕ್ಯುರೇಟರನ ಆಯ್ಕೆಯನ್ನು ಅವನ ವಿವೇಚನೆಗೆ ಬಿಟ್ಟಿರುವ ಎಲ್ಲಾ ಸಂದರ್ಭಗಳಲ್ಲಿ , ಅಂಥ ಸಾರ್ವಜನಿಕ ಕ್ಯುರೇಟರ್‌ಗಳನ್ನು ನಾಮನಿರ್ದೇಶಿಸತಕ್ಕುದು.

## ಭಾಗ - **VIII**

### ಉತ್ತರಾಧಿಕಾರದ ತರುವಾಯ ಮೃತನ ಸ್ವತ್ತಿಗೆ ಪ್ರಾತಿನಿಧಿಕ ಸ್ವಾಮ್ಯ

211. ನಿರ್ವಾಹಕ ಅಥವಾ ಆಡಳಿತಗಾರನಾಗಿರತಕ್ಕವನ ಸ್ಥಾನ ಮತ್ತು ಸ್ವತ್ತು:- (1) ಸಂದರ್ಭಾನುಸಾರ ಮೃತನ ನಿರ್ವಾಹಕ ಅಥವಾ ಆಡಳಿತಗಾರನು ಎಲ್ಲ ಉದ್ದೇಶಗಳಿಗಾಗಿ ಅವನ ಕಾನೂನು ಸಮ್ಮತ ಪ್ರತಿನಿಧಿ ಆಗಿರುತ್ತಾನೆ ಮತ್ತು ಮೃತನ ಎಲ್ಲ ಸ್ವತ್ತು ಹಾಗೆಂದು ಅವನಲ್ಲಿ ನಿಹಿತವಾಗುತ್ತದೆ.

(2) ಮೃತನು ಹಿಂದು, ಮಹಮದೀಯ, ಬೌದ್ಧ , ಸಿಖ್, ಜೈನ್ ಅಥವಾ ಪಾರ್ಸಿ ಅಥವಾ ವಿನಾಯಿತಿ ಪಡೆದ ವ್ಯಕ್ತಿ ಆಗಿದ್ದಾಗ, ಇಲ್ಲಿ ಅಡಕವಾಗಿರುವುದಾವುದೂ, ಮೃತನ ಯಾವ ಸ್ವತ್ತು ಇನ್ನೊಬ್ಬ ವ್ಯಕ್ತಿಗೆ ಉತ್ತರ ಜೀವಿತಾಧಿಕಾರದ ಮೂಲಕ ಅನ್ಯಥಾ ಹೋಗುತ್ತಿತ್ತೋ ಆ ಯಾವುದೇ ಸ್ವತ್ತಿನ ನಿರ್ವಾಹಕ ಅಥವಾ ಆಡಳಿತಗಾರನಲ್ಲಿ ನಿಹಿತಗೊಳಿಸತಕ್ಕುದಲ್ಲ.

212. ಮರಣ ಶಾಸನ ರಹಿತನ ಸ್ವತ್ತಿಗೆ ಹಕ್ಕು:- (1) ಮರಣ ಶಾಸನ ರಹಿತನ ಸ್ವತ್ತಿನ ಯಾವುದೇ ಭಾಗಕ್ಕೆ, ಸಕ್ಷಮ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯವು ಆಡಳಿತ ಅಧಿಕಾರ ಪತ್ರವನ್ನು ಮೊದಲು ಕೊಟ್ಟಿದ್ದ ಹೊರತು ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಹಕ್ಕನ್ನು ಸ್ಥಾಪಿಸಲು ಆಗುವುದಿಲ್ಲ.

(2) ಹಿಂದು, ಮಹಮದೀಯ, ಬೌದ್ಧ, ಸಿಖ್, ಜೈನ, ಭಾರತೀಯ ಕ್ರೈಸ್ತ ಅಥವಾ ಪಾರ್ಸಿಯು ಮರಣಶಾಸನ ರಹಿತನಾಗಿ ಮರಣ ಹೊಂದಿದ ಸಂದರ್ಭದಲ್ಲಿ , ಈ ಪ್ರಕರಣವು ಅನ್ವಯವಾಗತಕ್ಕುದಲ್ಲ.

213. ನಿರ್ವಾಹಕ ಅಥವಾ ಲೆಗಟಿಯಾಗಿ ಯಾವಾಗ ಹಕ್ಕು ಸ್ಥಾಪಿತವಾಗುತ್ತದೆ:- (1) ನಿರ್ವಾಹಕ ಅಥವಾ ಲೆಗಟಿಯಾಗಿ ಯಾವುದೇ ಹಕ್ಕನ್ನು, ಭಾರತದಲ್ಲಿ ಸಕ್ಷಮ ಅಧಿಕಾರ ವ್ಯಾಪ್ತಿ ಹೊಂದಿರುವ ನ್ಯಾಯಾಲಯವು ಯಾವ ಉಯಿಲಿನ ಪ್ರೊಬೇಟಿನ ಹಕ್ಕನ್ನು ಕ್ಲೇಮು ಮಾಡಲಾಗಿದೆಯೋ ಆ ಉಯಿಲಿನ ಪ್ರೊಬೇಟನ್ನು ನೀಡಿದ್ದ ಹೊರತು ಅಥವಾ ಉಯಿಲು ಅಥವಾ ಉಯಿಲಿನ ಅಧಿಪ್ರಮಾಣಿತ ಪ್ರತಿಯನ್ನು ಲಗತ್ತಿಸಿ ಆಡಳಿತ ಅಧಿಕಾರ ಪತ್ರವನ್ನು ನೀಡಿದ್ದ ಹೊರತು, ಸ್ಥಾಪಿಸಲು ಆಗುವುದಿಲ್ಲ.

(2) ಈ ಪ್ರಕರಣವು ಮಹಮದೀಯರು ಅಥವಾ ಭಾರತೀಯ ಕ್ರೈಸ್ತರು ಮಾಡಿದ ಉಯಿಲುಗಳ ಸಂದರ್ಭದಲ್ಲಿ ಅನ್ವಯವಾಗತಕ್ಕುದಲ್ಲ, ಮತ್ತು -

(i) ಹಿಂದು, ಬೌದ್ಧ , ಸಿಖ್ ಅಥವಾ ಜೈನನು ಮಾಡಿದ ಉಯಿಲುಗಳ ಸಂದರ್ಭದಲ್ಲಿ ಅಂಥ ಉಯಿಲುಗಳು 57ನೇ ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವರ್ಗಗಳಿಗೆ, ಮತ್ತು

(ii) ಭಾರತ ಉತ್ತರಾಧಿಕಾರ (ತಿದ್ದುಪಡಿ) ಅಧಿನಿಯಮ, 1962ರ (1962 ರ 16) ಪ್ರಾರಂಭದ ತರುವಾಯ ಮರಣ ಹೊಂದಿದ ಯಾವನೇ ಪಾರ್ಸಿಯು ಮಾಡಿದ ಉಯಿಲುಗಳ ಸಂದರ್ಭಗಳಲ್ಲಿ , ಅಂಥ ಉಯಿಲುಗಳನ್ನು, ಕಲ್ಕತ್ತ, ಮದ್ರಾಸು ಮತ್ತು ಮುಂಬಯಿ ಉಚ್ಚ ನ್ಯಾಯಾಲಯಗಳ ಸಾಮಾನ್ಯ ಅಸಲು ಸಿವಿಲ್ ಅಧಿಕಾರ ವ್ಯಾಪ್ತಿಯ ಸ್ಥಳೀಯ ಮಿತಿಗಳಲ್ಲಿ ಮಾಡಿರುವಲ್ಲಿ ಅನ್ವಯವಾಗತಕ್ಕುದು ಮತ್ತು ಅಂಥ ಉಯಿಲುಗಳನ್ನು ಆ ಪರಿಮಿತಿಗಳ ಹೊರಗೆ ಮಾಡಿದ್ದರೆ, ಆ ಪರಿಮಿತಿಯೊಳಗೆ ಇರುವ ಸ್ಥಿರ ಸ್ವತ್ತಿಗೆ ಅವು ಸಂಬಂಧಪಡುವಷ್ಟರ ಮಟ್ಟಿಗೆ ಮಾತ್ರ ಅನ್ವಯವಾಗತಕ್ಕುದು.

214. ಮೃತರ ಋಣಿಗಳಿಂದ ಋಣಗಳನ್ನು ನ್ಯಾಯಾಲಯಗಳ ಮೂಲಕ ವಸೂಲಿ ಮಾಡಲು ಪ್ರಾತಿನಿಧಿಕ ಸ್ವಾಮ್ಯದ ರುಜುವಾತು ಪೂರ್ವ ಷರತ್ತಾಗಿರುವುದು:- (1) ಯಾವುದೇ ನ್ಯಾಯಾಲಯವು, ಮೃತನ ಸ್ವತ್ತಿಗೆ ಅಥವಾ ಅದರ ಯಾವುದೇ ಭಾಗಕ್ಕೆ ಉತ್ತರಾಧಿಕಾರದ ಮೇಲೆ ಹಕ್ಕುಳ್ಳವನಾಗಿರುವುದಾಗಿ ಕ್ಲೇಮು ಮಾಡುವ ವ್ಯಕ್ತಿಯು,-

(i) ಮೃತನ ಎಸ್ಟೇಟಿನ ಆಡಳಿತವನ್ನು ಆ ವ್ಯಕ್ತಿಗೆ ಕೊಟ್ಟಿರುವುದನ್ನು ಸಾಕ್ಷೀಕರಿಸುವ ಪ್ರೊಬೇಟು ಅಥವಾ ಆಡಳಿತಾಧಿಕಾರ ಪತ್ರವನ್ನು; ಅಥವಾ

(ii) ಅಡ್ಮಿನಿಸ್ಟ್ರೇಟರ್ ಜನರಲ್ ಅಧಿನಿಯಮ, 1913ರ (1913ರ 3) ಇದರ 31 ಮತ್ತು 32ನೇ ಪ್ರಕರಣದ ಮೇರೆಗೆ ಋಣವನ್ನು ನಮೂದಿಸಿ ನೀಡಿರುವ ಪ್ರಮಾಣ ಪತ್ರವನ್ನು; ಅಥವಾ

(iii) X ನೇ ಭಾಗದ ಮೇರೆಗೆ ಆ ಋಣವನ್ನು ನಿರ್ದಿಷ್ಟಪಡಿಸಿ ನೀಡಿದ ಉತ್ತರಾಧಿಕಾರ ಪ್ರಮಾಣಪತ್ರವನ್ನು; ಅಥವಾ

(iv) ಉತ್ತರಾಧಿಕಾರ ಪ್ರಮಾಣಪತ್ರ ಅಧಿನಿಯಮ, 1889 ರ (1889ರ 7) ಮೇರೆಗೆ ನೀಡಿದ ಪ್ರಮಾಣಪತ್ರವನ್ನು ; ಅಥವಾ

(v) ಮುಂಬೈ ರೆಗ್ಯುಲೇಷನ್ ಸಂಖ್ಯೆ 1827 ರ VIII ರ ಮೇರೆಗೆ ನೀಡಿದ ಪ್ರಮಾಣ ಪತ್ರವನ್ನು, ಮತ್ತು ಋಣವನ್ನು ನಿರ್ದಿಷ್ಟಪಡಿಸಿ ಅದನ್ನು 1889 ರ ಮೇ ಮೊದಲನೇ ದಿವಸದ ತರುವಾಯ ನೀಡಿದ್ದರೆ, ಅಂಥ ಪ್ರಮಾಣಪತ್ರವನ್ನು ಹಾಜರುಪಡಿಸಿದ ಮೇಲಲ್ಲದೆ,

(ಎ) ಮೃತನ ಋಣಿಯ ವಿರುದ್ಧ ಹಾಗೆ ಕ್ಲೇಮು ಮಾಡುವ ವ್ಯಕ್ತಿಗೆ ಅವನ ಋಣ ಸಂದಾಯಕ್ಕಾಗಿ ಡಿಕ್ರಿಯನ್ನು ಮಾಡತಕ್ಕುದಲ್ಲ; ಅಥವಾ

(ಬಿ) ಹಾಗೆ ಹಕ್ಕುಳ್ಳವನಾಗಿ ಕ್ಲೇಮು ಮಾಡುವ ವ್ಯಕ್ತಿಯು ಮಾಡಿದ ಅರ್ಜಿಯ ಮೇಲೆ ಅವನ ಋಣದ ಸಂದಾಯಕ್ಕಾಗಿನ ಡಿಕ್ರಿ ಅಥವಾ ಆದೇಶವನ್ನು ಅಂಥ ಋಣಿಯ ವಿರುದ್ಧ ಜಾರಿಗೊಳಿಸಲು ಕ್ರಮಕೈಗೊಳ್ಳತಕ್ಕುದಲ್ಲ.

(2) (1) ನೇ ಉಪಪ್ರಕರಣದಲ್ಲಿನ ಋಣ ಎಂಬ ಪದವು, ಕೃಷಿ ಉದ್ದೇಶಗಳಿಗಾಗಿ ಉಪಯೋಗಿಸಿದ ಭೂಮಿಗೆ ಸಂಬಂಧಿಸಿದಂತೆ ಸಂದಾಯ ಮಾಡಲಾದ ಬಾಡಿಗೆ, ಕಂದಾಯ ಅಥವಾ ಲಾಭಗಳನ್ನು ಹೊರತುಪಡಿಸಿ, ಯಾವುದೇ ಋಣವನ್ನು ಒಳಗೊಳ್ಳುತ್ತದೆ.

215. ಪ್ರಮಾಣ ಪತ್ರದ ಮೇಲೆ, ತರುವಾಯದ ಪ್ರೊಬೇಟು ಅಥವಾ ಆಡಳಿತ ಪತ್ರದ ಪರಿಣಾಮ:-(1) ಎಸ್ಟೇಟಿಗೆ ಸಂಬಂಧಿಸಿದಂತೆ ಪ್ರೊಬೇಟು ಅಥವಾ ಆಡಳಿತ ಪತ್ರದ ನೀಡಿಕೆಯು ಎಸ್ಟೇಟಿನಲ್ಲಿ ಒಳಗೊಂಡ ಯಾವುವೇ ಋಣಗಳು ಅಥವಾ ಭದ್ರತಾ ಪತ್ರಗಳಿಗೆ ಸಂಬಂಧಿಸಿದಂತೆ X ನೇ ಭಾಗದ ಮೇರೆಗೆ ಅಥವಾ ಉತ್ತರಾಧಿಕಾರ ಪ್ರಮಾಣಪತ್ರ ಅಧಿನಿಯಮ, 1889 (1889ರ 7) ರ ಮೇರೆಗೆ ಅಥವಾ 1827ರ ಮುಂಬೈ ರೆಗ್ಯುಲೇಷನ್ ಅಧಿನಿಯಮ ಸಂಖ್ಯೆ VIII ರ ಮೇರೆಗೆ ಈ ಹಿಂದೆಯೇ ನೀಡಿದ್ದ ಯಾವುದೇ ಪ್ರಮಾಣ ಪತ್ರವನ್ನು ರದ್ದುಗೊಳಿಸುವುದಕ್ಕಾಗಿ ಭಾವಿಸತಕ್ಕುದು.

(2) ಪ್ರೊಬೇಟ್ ಅಥವಾ ಆಡಳಿತ ಪತ್ರವನ್ನು ನೀಡಿದ ಕಾಲದಲ್ಲಿ ಅಂಥ ಯಾವುದೇ ಋಣ ಅಥವಾ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಯಾವುದೇ ಅಂಥ ಪ್ರಮಾಣಪತ್ರದ ಧಾರಕನು ಹೂಡಿದ ಯಾವುದೇ ದಾವೆ ಅಥವಾ ಇತರ ವ್ಯವಹರಣೆಯು ಇತ್ಯರ್ಥದಲ್ಲಿರುವಾಗ, ಯಾವ ವ್ಯಕ್ತಿಗೆ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ನೀಡಲಾಗಿದೆಯೋ ಆ ವ್ಯಕ್ತಿಯು ದಾವೆ ಅಥವಾ ವ್ಯವಹರಣೆಯ ಇತ್ಯರ್ಥದಲ್ಲಿರುವಂಥ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ ಮೇಲೆ ಆ ದಾವೆ ಅಥವಾ ವ್ಯವಹರಣೆಯಲ್ಲಿ ಪ್ರಮಾಣಪತ್ರದ ಧಾರಕನ ಸ್ಥಾನವನ್ನು ಹೊಂದಲು ಹಕ್ಕುಳ್ಳವನಾಗಿರತಕ್ಕುದು:

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಪ್ರಮಾಣ ಪತ್ರವನ್ನು ರದ್ದುಪಡಿಸಿದಾಗ, ಅಂಥ ರದ್ದಿಯಾತಿಯ ಅರಿವಿಲ್ಲದೆ ಅಂಥ ಪ್ರಮಾಣ ಪತ್ರಧಾರಕನಿಗೆ ಮಾಡಿದ ಎಲ್ಲ ಸಂದಾಯಗಳು, ಪ್ರೊಬೇಟ್ ಅಥವಾ ಆಡಳಿತ ಪತ್ರದ ಮೇರೆಗಿನ ಕ್ಲೇಮುಗಳ ಸಂಬಂಧದಲ್ಲಿ ಮಾನ್ಯವಾಗಿರತಕ್ಕುದು.

216. ಪ್ರೊಬೇಟು ಅಥವಾ ಆಡಳಿತ ಪತ್ರವು ರದ್ದಾಗುವವರೆಗೆ ಅದನ್ನು ಪಡೆದವನು ಮಾತ್ರ ದಾವೆ, ಇತ್ಯಾದಿಗಳನ್ನು ಹೂಡುವುದು:- ಯಾವುದೇ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ನೀಡಿದ ತರುವಾಯ, ಅಂಥ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ಹಿಂತೆಗೆದುಕೊಳ್ಳುವವರೆಗೆ ಅಥವಾ ರದ್ದುಪಡಿಸುವವರೆಗೆ ಅದನ್ನು ನೀಡಿರಬಹುದಾದಂಥ ವ್ಯಕ್ತಿಯನ್ನು ಹೊರತುಪಡಿಸಿ ಯಾವನೇ ಇತರ ವ್ಯಕ್ತಿಯು ಅದನ್ನು ಯಾವ ರಾಜ್ಯದಲ್ಲಿ ನೀಡಲಾಗಿದೆಯೋ, ಆ ರಾಜ್ಯದಾದ್ಯಂತ, ಮೃತನ ಪ್ರತಿನಿಧಿಯಾಗಿ ಯಾವುದೇ ದಾವೆಯನ್ನು ಹೂಡಲು ಅಥವಾ ಯಾವುದೇ ದಾವೆಯನ್ನು ನಡೆಸಲು ಅಥವಾ ಅನ್ಯಥಾ ಕಾರ್ಯನಿರ್ವಹಿಸಲು ಅಧಿಕಾರ ಹೊಂದಿರತಕ್ಕುದಲ್ಲ.

## ಭಾಗ - IX

### ಪ್ರೊಬೇಟು, ಆಡಳಿತ ಪತ್ರ ಮತ್ತು ಮೃತನ ಆಸ್ತಿಗಳ ಬಗ್ಗೆ ಆಡಳಿತ

217. ಈ ಭಾಗದ ಅನ್ವಯ:- ಈ ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಈ ಭಾಗದ ಉಪಬಂಧಗಳಿಗನುಸಾರವಾಗಿ ಸಂದರ್ಭಾನುಸಾರ ಉಯಿಲನ್ನು ಲಗತ್ತಿಸಿದ ಎಲ್ಲ ಪ್ರೊಬೇಟ್ ಮತ್ತು ಆಡಳಿತ ಪತ್ರಗಳನ್ನು ನೀಡತಕ್ಕುದು ಅಥವಾ ಮರಣ ಶಾಸನ ರಹಿತ ಉತ್ತರಾಧಿಕಾರದ ಸಂದರ್ಭದಲ್ಲಿ ಮೃತನ ಆಸ್ತಿಗಳ ಆಡಳಿತವನ್ನು ನೆರವೇರಿಸತಕ್ಕುದು.

## ಅಧ್ಯಾಯ - I

### ಪ್ರೊಬೇಟು ಮತ್ತು ಆಡಳಿತ ಪತ್ರದ ನೀಡಿಕೆ ಬಗ್ಗೆ

218. ಮೃತನು ಒಬ್ಬ ಹಿಂದು, ಮಹಮದೀಯ, ಬೌದ್ಧ, ಸಿಖ್, ಜೈನ್ ಅಥವಾ ವಿನಾಯಿತಿ ಪಡೆದ ವ್ಯಕ್ತಿಯಾಗಿರುವಲ್ಲಿ ಆಡಳಿತ ಪತ್ರವನ್ನು ಯಾರಿಗೆ ಕೊಡಬಹುದು:- (1) ಮೃತನು ಮರಣ ಶಾಸನರಹಿತನಾಗಿ ಮರಣ ಹೊಂದಿದ್ದರೆ ಮತ್ತು ಅವನು ಹಿಂದು, ಮಹಮದೀಯ, ಬೌದ್ಧ , ಸಿಖ್ ಅಥವಾ ಜೈನ್ ಅಥವಾ ಒಬ್ಬ ವಿನಾಯಿತಿ ಪಡೆದ ವ್ಯಕ್ತಿಯಾಗಿದ್ದರೆ, ಅವನ ಎಸ್ಟೇಟಿನ ಆಡಳಿತವನ್ನು ಅಂಥ ಮೃತನ ಸಂದರ್ಭದಲ್ಲಿ ಅನ್ವಯಿಸಬಹುದಾದ ಎಸ್ಟೇಟಿನ ಹಂಚಿಕೆ ನಿಯಮಗಳಿಗನುಸಾರವಾಗಿ, ಅಂಥ ಮೃತನ ಇಡೀ ಎಸ್ಟೇಟಿಗೆ ಅಥವಾ ಅದರ ಯಾವುದೇ ಭಾಗಕ್ಕೆ ಹಕ್ಕುಳ್ಳವನಾಗುವ ಯಾವನೇ ವ್ಯಕ್ತಿಗೆ ಕೊಡಬಹುದು.

(2) ಅಂಥ ಆಡಳಿತಕ್ಕಾಗಿ ಹಲವಾರು ವ್ಯಕ್ತಿಗಳು ಅರ್ಜಿ ಸಲ್ಲಿಸಿದಾಗ, ಅವರಲ್ಲಿ ಯಾರಾದರೂ ಒಬ್ಬನಿಗೆ ಅಥವಾ ಹೆಚ್ಚು ಮಂದಿಗೆ ಕೊಡುವುದು ನ್ಯಾಯಾಲಯದ ವಿವೇಚನೆಗೆ ಸೇರಿರತಕ್ಕುದು.

(3) ಅಂಥ ಯಾವ ವ್ಯಕ್ತಿಯೂ ಅರ್ಜಿ ಸಲ್ಲಿಸದಿದ್ದಾಗ, ಅದನ್ನು ಮೃತನ ಒಬ್ಬ ಸಾಲಿಗನಿಗೆ ಕೊಡಬಹುದು.

219. ಮೃತನು ಹಿಂದು, ಮಹಮದೀಯ, ಬೌದ್ಧ, ಸಿಖ್, ಜೈನ ಅಥವಾ ವಿನಾಯಿತಿ ಪಡೆದ ವ್ಯಕ್ತಿಯಾಗಿಲ್ಲದಿರುವಲ್ಲಿ:- ಮೃತನು ಮರಣ ಶಾಸನ ರಹಿತನಾಗಿ ಮರಣ ಹೊಂದಿದ್ದರೆ, ಮತ್ತು 218 ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ವರ್ಗಕ್ಕೆ ಸೇರಿರದಿದ್ದರೆ, ಅವನಿಗೆ ವಿವಾಹ ಅಥವಾ ರಕ್ತ ಸಂಬಂಧದ ಮೂಲಕ ಸಂಬಂಧ ಹೊಂದಿದವರು ಇಲ್ಲಿ ಇನ್ನು ಮುಂದೆ ಹೇಳಿದ ಕ್ರಮದಲ್ಲಿ ಮತ್ತು ನಿಯಮಗಳಿಗೆ ಅನುಸಾರವಾಗಿ ಆಡಳಿತ ಪತ್ರವನ್ನು ಅವನ ಎಸ್ಟೇಟಿಗೆ ಮತ್ತು ಸ್ವತ್ತಿಗೆ ಪಡೆಯಲು ಹಕ್ಕುದಾರರಾಗಿರತಕ್ಕುದು, ಎಂದರೆ-

(ಎ) ಮೃತನು ಒಬ್ಬ ವಿಧವೆಯನ್ನು ಬಿಟ್ಟುಹೋಗಿದ್ದರೆ ಆಡಳಿತ ಪತ್ರವನ್ನು ಆ ವಿಧವೆಗೆ,ಯಾವುದೇ ವೈಯಕ್ತಿಕ ಅನರ್ಹತೆ ಕಾರಣದ ಮೇಲೆ ಅಥವಾ ಮೃತನ ಎಸ್ಟೇಟಿನಲ್ಲಿ ಹಿತಾಸಕ್ತಿಯನ್ನು ಅವಳು ಹೊಂದಿರದ ಕಾರಣದ ಮೇಲೆ ನ್ಯಾಯಾಲಯವು ಅವಳನ್ನು ಹೊರತುಪಡಿಸಲು ಕಾರಣವನ್ನು ಕಂಡ ಹೊರತು, ಕೊಡತಕ್ಕುದು.

ದೃಷ್ಟಾಂತಗಳು

(i) ವಿಧವೆಯು ಮನೋವಿಕಲಳಾಗಿದ್ದಾಳೆ ಅಥವಾ ಪರಪುರುಷನ ಸಂಗವನ್ನು ಮಾಡಿದ್ದಾಳೆ ಅಥವಾ ಅವಳ ವಿವಾಹ ವ್ಯವಸ್ಥೆಯ ಮೂಲಕ ಅವಳ ಗಂಡನ ಎಸ್ಟೇಟಿನ ಎಲ್ಲ ಹಿತಾಸಕ್ತಿಗಳಿಂದ ನಿಷೇಧಿತಳಾಗಿದ್ದಾಳೆ, ಆಡಳಿತದಿಂದ ಅವಳನ್ನು ಹೊರತುಪಡಿಸಲು ಕಾರಣ ಇದೆ.

(ii) ವಿಧವೆಯು ತನ್ನ ಗಂಡನ ಮರಣದ ತರುವಾಯ ಪುನಃ ಮದುವೆಯಾಗಿರುತ್ತಾಳೆ, ಇದು ಅವಳನ್ನು ಹೊರತುಪಡಿಸಲು ಒಳ್ಳೆಯ ಕಾರಣವಾಗುವುದಿಲ್ಲ.

(ಬಿ) ಯಾವ ವಿಧವೆಯೂ ಇದ್ದಿರದಿದ್ದರೆ, ಆ ಆಡಳಿತಕ್ಕೆ ಪೂರ್ಣವಾಗಿ ಹಕ್ಕುಳ್ಳವನಾಗುತ್ತಿದ್ದ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ವಿಧವೆಯೊಂದಿಗೆ ಆಡಳಿತದಲ್ಲಿ ಸೇರಿಸುವುದು ನ್ಯಾಯಾಧೀಶನು ಯುಕ್ತವೆಂದು ಯೋಚಿಸಿದರೆ, ಹಾಗೆ ಸೇರಿಸಬಹುದು.

(ಸಿ) ಯಾವ ವಿಧವೆಯೂ ಇರದಿದ್ದರೆ ಅಥವಾ ವಿಧವೆಯನ್ನು ಹೊರತುಪಡಿಸಲು ಕಾರಣವು ನ್ಯಾಯಾಲಯಕ್ಕೆ ಕಂಡುಬಂದರೆ, ಅದು ಮರಣ ಶಾಸನ ರಹಿತನ ಎಸ್ಟೇಟಿನ ಹಂಚಿಕೆ ನಿಯಮಗಳಿಗೆ ಅನುಸಾರವಾಗಿ ಆ ಎಸ್ಟೇಟಿಗೆ ಪ್ರಯೋಜನಕಾರಿ ಹಕ್ಕುಳ್ಳವನಾಗಬಹುದಾದ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಆಡಳಿತವನ್ನು ವಹಿಸಿಕೊಡತಕ್ಕುದು:

ಪರಂತು, ಹಾಗೆ ಹಕ್ಕುಳ್ಳ ವ್ಯಕ್ತಿಗಳ ವರ್ಗದಲ್ಲಿ ಮೃತನ ತಾಯಿಯೂ ಒಬ್ಬಳಾಗಿರುವಾಗ, ಆಕೆಯೊಬ್ಬಳೇ ಆಡಳಿತಕ್ಕೆ ಹಕ್ಕುಳ್ಳವಳಾಗಿರತಕ್ಕುದು.

(ಡಿ) ಮೃತನ ರಕ್ತ ಸಂಬಂಧದ ಸಮಾನ ಶ್ರೇಣಿಯಲ್ಲಿರುವವರು ಆಡಳಿತಕ್ಕೆ ಸಮಾನವಾಗಿ ಹಕ್ಕುಳ್ಳವರಾಗಿರುತ್ತಾರೆ.

(ಇ) ತನ್ನ ಹೆಂಡತಿಯ ಉತ್ತರ ಜೀವಿಯಾದ ಗಂಡನು ಅವಳ ಎಸ್ಟೇಟಿಗೆ, ಒಬ್ಬ ವಿಧವೆಯು ತನ್ನ ಗಂಡನ ಎಸ್ಟೇಟಿಗೆ ಸಂಬಂಧಪಟ್ಟಂತೆ ಹೊಂದಿರುವಂಥದೇ ಆಡಳಿತಾಧಿಕಾರದ ಹಕ್ಕನ್ನು ಹೊಂದಿರುತ್ತಾನೆ.

(ಎಫ್) ಮೃತನಿಗೆ ವಿವಾಹದ ಮೂಲಕ ಅಥವಾ ರಕ್ತ ಸಂಬಂಧದ ಮೂಲಕ ಸಂಬಂಧ ಹೊಂದಿದ್ದು ಆಡಳಿತ ಪತ್ರಕ್ಕೆ ಹಕ್ಕುಳ್ಳವನಾಗಿರುವ ಮತ್ತು ಹಾಗೆ ಕಾರ್ಯ ನಿರ್ವಹಿಸಲು ಇಚ್ಛಿಸುವ ಯಾವನೇ ವ್ಯಕ್ತಿಯೂ ಇಲ್ಲದಿರುವಲ್ಲಿ ಆ ಆಡಳಿತ ಪತ್ರವನ್ನು ಒಬ್ಬ ಸಾಲಿಗನಿಗೆ ಕೊಡಬಹುದು.

(ಜಿ) ಮೃತನು ಭಾರತದಲ್ಲಿ ಸ್ವತ್ತನ್ನು ಬಿಟ್ಟುಹೋಗಿರುವಲ್ಲಿ ಆಡಳಿತ ಪತ್ರವನ್ನು, ಯಾವ ದೇಶದಲ್ಲಿ ಅವನು ತನ್ನ ಅಧಿವಾಸವನ್ನು ಹೊಂದಿದ್ದನೋ ಆ ದೇಶದಲ್ಲಿ ಮರಣ ಶಾಸನ ಸಹಿತ ಅಥವಾ ಮರಣ ಶಾಸನ ರಹಿತ ಉತ್ತರಾಧಿಕಾರಕ್ಕೆ ಸಂಬಂಧಪಟ್ಟ ಕಾನೂನು ಭಾರತದ ಕಾನೂನಿನಿಂದ ಭಿನ್ನವಾಗಿದ್ದಾಗ್ಯೂ, ಹಿಂದೆ ಹೇಳಿದ ನಿಯಮಗಳಿಗನುಸಾರವಾಗಿ ಆಡಳಿತ ಪತ್ರವನ್ನು ಕೊಡತಕ್ಕುದು.

220. ಆಡಳಿತ ಪತ್ರದ ಪರಿಣಾಮ:- ಆಡಳಿತ ಪತ್ರವು, ಮರಣ ಶಾಸನ ರಹಿತನಾಗಿ ಮರಣ ಹೊಂದಿದವನಿಗೆ ಸೇರಿದ ಎಲ್ಲ ಹಕ್ಕುಗಳಿಗೆ ಅವನ ಮರಣದ ತರುವಾಯ ಕೂಡಲೇ ಆಡಳಿತವನ್ನು ಕೊಟ್ಟಿದ್ದಿದ್ದರೆ ಹೇಗೋ ಹಾಗೆ ಅಷ್ಟೇ ಪರಿಣಾಮಕಾರಿಯಾಗಿ ಆಡಳಿತಗಾರರನ್ನು ಹಕ್ಕುಳ್ಳವನನ್ನಾಗಿಸುತ್ತದೆ.

221. ಆಡಳಿತದಿಂದಾಗಿ ಕಾರ್ಯಗಳು ಸಿಂಧುವಾಗದಿರುವುದು:- ಮರಣ ಶಾಸನ ರಹಿತನ ಎಸ್ಟೇಟನ್ನು ಕಡಿಮೆ ಮಾಡುವ ಅಥವಾ ಹಾನಿಗೊಳಿಸುವ ಪ್ರವೃತ್ತಿಯುಳ್ಳ ಯಾವುವೇ ಮಧ್ಯವರ್ತಿ ಕಾರ್ಯಗಳನ್ನು ಆಡಳಿತ ಪತ್ರವು ಸಿಂಧುಗೊಳಿಸುವುದಿಲ್ಲ.

222. ನೇಮಕಗೊಂಡ ನಿರ್ವಾಹಕನಿಗೆ ಮಾತ್ರ ಪ್ರೊಬೇಟು:- (1) ಪ್ರೊಬೇಟನ್ನು ಉಯಿಲು ಮೂಲಕ ನೇಮಕಗೊಂಡ ನಿರ್ವಾಹಕನಿಗೆ ಮಾತ್ರ ನೀಡತಕ್ಕುದು.

(2) ನೇಮಕಾತಿಯು ವ್ಯಕ್ತವಾಗಿರಬಹುದು ಅಥವಾ ಅವಶ್ಯಕ ಇಂಗಿತದ್ದಾಗಿರಬಹುದು.

ದೃಷ್ಟಾಂತಗಳು

(i) 'ಎ' ನು ತನ್ನ ನಿರ್ವಾಹಕನಾಗಿ 'ಬಿ' ನು ಆಗದಿದ್ದರೆ 'ಸಿ' ನು ಆಗತಕ್ಕದ್ದೆಂದು ಉಯಿಲು ಮಾಡುತ್ತಾನೆ. ಇಂಗಿತದಿಂದ 'ಬಿ' ನನ್ನು ನಿರ್ವಾಹಕನನ್ನಾಗಿ ನೇಮಕ ಮಾಡಲಾಗಿದೆ.

(ii) 'ಎ' ನು 'ಬಿ' ಳಿಗೆ ಮರಣ ಶಾಸನ ಸ್ವತ್ತನ್ನು ಮತ್ತು ಇತರ ವ್ಯಕ್ತಿಗಳಿಗೆ ಹಲವಾರು ಮರಣಶಾಸನ ಸ್ವತ್ತುಗಳನ್ನು, ಉಳಿದವುಗಳಲ್ಲಿ ಕೆಲವನ್ನು ತನ್ನ ಸೊಸೆ 'ಸಿ' ಳಿಗೂ ಕೊಡುತ್ತಾನೆ ಮತ್ತು "ಇಲ್ಲಿ ಹೆಸರಿಸಿದ" 'ಸಿ' ಳು ಬದುಕಿರದಿದ್ದರೆ ನಾನು 'ಬಿ' ನನ್ನು ನನ್ನ ಪೂರ್ಣ ಹಾಗೂ ಏಕಮಾತ್ರ ನಿರ್ವಾಹಕಳನ್ನಾಗಿ ನೇಮಕ ಮಾಡುತ್ತೇನೆ ಎಂಬುದಾಗಿ ಸಹ ಹೇಳಿದ್ದಾನೆ. 'ಸಿ' ಳನ್ನು ಇಂಗಿತದಿಂದ ನಿರ್ವಾಹಕಳನ್ನಾಗಿ ನೇಮಕ ಮಾಡಲಾಗಿದೆ.

(iii) 'ಎ' ನು ತನ್ನ ಉಯಿಲು ಮತ್ತು ಮರಣ ಶಾಸನದ ಅನುಬಂಧಗಳ ನಿರ್ವಾಹಕರನ್ನಾಗಿ ಹಲವಾರು ವ್ಯಕ್ತಿಗಳನ್ನು ನೇಮಕ ಮಾಡುತ್ತಾನೆ. ಇನ್ನೊಂದು ಮರಣ ಶಾಸನ ಅನುಬಂಧದಲ್ಲಿ " ನಾನು ನನ್ನ ಸೋದರ ಮಗನನ್ನು ಬೇರೆ ಬೇರೆ ದಿನಾಂಕಗಳಂದು ರುಜು ಮಾಡಿದ ನನ್ನ ಉಯಿಲು ಮತ್ತು ಮರಣಶಾಸನ ಅನುಬಂಧಗಳ ಬಗ್ಗೆ ಎಲ್ಲ ಕಾನೂನು ಸಮ್ಮತ ತಗಾದೆಗಳನ್ನು ತೀರಿಸಲು ನನ್ನ ಶೇಷ ಲೆಗಟಿಯನ್ನಾಗಿ ನೇಮಕ ಮಾಡಿದ್ದೇನೆ" ಎಂಬ ಪದಗಳು ಇವೆ. ಆ ಸೋದರ ಮಗನನ್ನು ಇಂಗಿತದಿಂದ ಒಬ್ಬ ನಿರ್ವಾಹಕನನ್ನಾಗಿ ನೇಮಕ ಮಾಡಲಾಗಿದೆ.

223. ಯಾವ ವ್ಯಕ್ತಿಗಳಿಗೆ ಪ್ರೊಬೇಟನ್ನು ನೀಡಲಾಗದು:- ಅಪ್ರಾಪ್ತ ವಯಸ್ಕನಾಗಿರುವ ಅಥವಾ ಅಸ್ವಸ್ಥಚಿತ್ತನಾಗಿರುವ ಯಾವನೇ ವ್ಯಕ್ತಿಗೆ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮಾಡಬಹುದಾದ ನಿಯಮಗಳ ಮೂಲಕ ನಿಯಮಿಸಿದ ಷರತ್ತುಗಳನ್ನು ಪೂರೈಸುವಂಥ ಕಂಪನಿಯಾಗಿದ್ದ ಹೊರತು ವ್ಯಕ್ತಿಗಳ ಯಾವುದೇ ಸಂಘಕ್ಕೆ ಪ್ರೊಬೇಟನ್ನು ನೀಡಲಾಗದು.

224. ಒಂದೇ ಕಾಲದಲ್ಲಿ ಅಥವಾ ಬೇರೆ ಬೇರೆ ಕಾಲಗಳಲ್ಲಿ ಹಲವಾರು ನಿರ್ವಾಹಕರಿಗೆ ಪ್ರೊಬೇಟಿನ ನೀಡಿಕೆ:- ಹಲವಾರು ನಿರ್ವಾಹಕರನ್ನು ನೇಮಕ ಮಾಡಿದಾಗ, ಪ್ರೊಬೇಟನ್ನು ಅವರೆಲ್ಲರಿಗೂ ಏಕಕಾಲದಲ್ಲಿ ಅಥವಾ ಬೇರೆ ಬೇರೆ ಕಾಲದಲ್ಲಿ ನೀಡಬಹುದು.

ದೃಷ್ಟಾಂತ

ಎ' ನು ವ್ಯಕ್ತ ನೇಮಕಾತಿಯ ಮೂಲಕ 'ಬಿ' ನ ಉಯಿಲಿನ ನಿರ್ವಾಹಕನಾಗಿದ್ದಾನೆ. 'ಸಿ' ನು ಇಂಗಿತದಿಂದ ಅದರ ನಿರ್ವಾಹಕನಾಗಿದ್ದಾನೆ. 'ಎ' ಮತ್ತು 'ಸಿ' ರಿಗೆ ಏಕಕಾಲದಲ್ಲಿ ಪ್ರೊಬೇಟನ್ನು ಅಥವಾ 'ಎ' ನಿಗೆ ಮೊದಲು ಮತ್ತು ಆ ತರುವಾಯ 'ಸಿ' ನಿಗೆ ಅಥವಾ 'ಸಿ' ನಿಗೆ ಮೊದಲು 'ಎ' ನಿಗೆ ಆ ತರುವಾಯ ನೀಡಬಹುದು.

225. ಪ್ರೊಬೇಟನ್ನು ನೀಡಿದ ತರುವಾಯ ಕಂಡುಬಂದ ಮರಣ ಶಾಸನ ಅನುಬಂಧದ ಬಗ್ಗೆ ಪ್ರತ್ಯೇಕ ಪ್ರೊಬೇಟು:- (1) ಪ್ರೊಬೇಟನ್ನು ನೀಡಿದ ತರುವಾಯ ಒಂದು ಮರಣ ಶಾಸನದ ಅನುಬಂಧವು ಕಂಡುಬಂದರೆ, ಉಯಿಲು ಮಾಡಿದ ನಿರ್ವಾಹಕರ ನೇಮಕಾತಿಯನ್ನು ಅದು ಯಾವುದೇ ರೀತಿಯಲ್ಲಿ ನಿರಸನಗೊಳಿಸದಿದ್ದರೆ, ನಿರ್ವಾಹಕನಿಗೆ ಆ ಮರಣಶಾಸನ ಅನುಬಂಧದ ಪ್ರತ್ಯೇಕ ಪ್ರೊಬೇಟನ್ನು ನೀಡಬಹುದು.

(2) ಮರಣ ಶಾಸನದ ಅನುಬಂಧದ ಮೂಲಕ ಬೇರೆ ಬೇರೆ ನಿರ್ವಾಹಕರನ್ನು ನೇಮಕ ಮಾಡಿದ್ದರೆ, ಉಯಿಲಿನ ಪ್ರೊಬೇಟನ್ನು ರದ್ದುಪಡಿಸತಕ್ಕುದು ಮತ್ತು ಆ ಉಯಿಲು ಹಾಗೂ ಮರಣ ಶಾಸನ ಅನುಬಂಧವೂ ಸೇರಿದಂತೆ ಹೊಸ ಪ್ರೊಬೇಟನ್ನು ನೀಡತಕ್ಕುದು.

226. ಉತ್ತರ ಜೀವಿಯಾದ ನಿರ್ವಾಹಕನಿಗೆ ಪ್ರಾತಿನಿಧ್ಯದ ಪ್ರಾಪ್ತಿ:- ಪ್ರೊಬೇಟನ್ನು ಹಲವಾರು ನಿರ್ವಾಹಕರಿಗೆ ನೀಡಿದ್ದು ಅವರ ಪೈಕಿ ಒಬ್ಬನು ಮರಣ ಹೊಂದಿದರೆ, ಮರಣ ಶಾಸನ ಕರ್ತನ ಇಡೀ ಪ್ರಾತಿನಿಧ್ಯವು ಉತ್ತರ ಜೀವಿಯಾಗುವ ನಿರ್ವಾಹಕ ಅಥವಾ ನಿರ್ವಾಹಕರಿಗೆ ಪ್ರಾಪ್ತವಾಗುತ್ತದೆ.

227. ಪ್ರೊಬೇಟಿನ ಪರಿಣಾಮ:- ಉಯಿಲಿನ ಪ್ರೊಬೇಟನ್ನು ನೀಡಿದಾಗ ಆ ಪ್ರೊಬೇಟು, ಮರಣ ಶಾಸನ ಕರ್ತನ ಮರಣದ ಕಾಲದಿಂದ ಉಯಿಲನ್ನು ಸ್ಥಾಪಿಸುತ್ತದೆ; ಮತ್ತು ನಿರ್ವಾಹಕರು ಮಾಡಿದಂಥ ಎಲ್ಲಾ ಮಧ್ಯವರ್ತಿ ಕಾರ್ಯಗಳನ್ನು ಅದು ಸಿಂಧುಗೊಳಿಸುತ್ತದೆ.

228. ವಿದೇಶದಲ್ಲಿ ರುಜುವಾತಾದ ಉಯಿಲಿನ ಅಧಿಪ್ರಮಾಣಿತ ಪ್ರತಿಯ ಪ್ರತಿಯನ್ನು ಲಗತ್ತಿಸಿ ಆಡಳಿತ ಪತ್ರ ನೀಡುವುದು:-ಉಯಿಲನ್ನು ಭಾರತದ ಪರಿಮಿತಿಗಳ ಒಳಗೆ ಅಥವಾ ಹೊರಗೆ ರಾಜ್ಯದ ಪರಿಮಿತಿಗಳಾಚೆಯಿರುವ ಸಕ್ಷಮ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯದಲ್ಲಿ ರುಜುವಾತುಪಡಿಸಿ, ಅಲ್ಲಿ ಇಟ್ಟಿರುವಾಗ, ಮತ್ತು ಆ ಉಯಿಲಿನ ಯುಕ್ತ ಅಧಿಪ್ರಮಾಣಿತ ಪ್ರತಿಯನ್ನು ಹಾಜರುಪಡಿಸಿದಾಗ, ಅಂಥ ಪ್ರತಿಯ ಒಂದು ಪ್ರತಿಯನ್ನು ಲಗತ್ತಿಸಿ ಆಡಳಿತ ಪತ್ರವನ್ನು ನೀಡಬಹುದು.

229. ನಿರ್ವಾಹಕನು ಪರಿತ್ಯಜಿಸದಿರುವಲ್ಲಿ ಆಡಳಿತ ಮಂಜೂರಾತಿ:- ನಿರ್ವಾಹಕನಾಗಿ ನೇಮಕಗೊಂಡ ವ್ಯಕ್ತಿಯು ನಿರ್ವಾಹಕತ್ವವನ್ನು ಪರಿತ್ಯಜಿಸದಿರುವಾಗ ನಿರ್ವಾಹಕನು ತನ್ನ ನಿರ್ವಾಹಕತ್ವವನ್ನು ಅಂಗೀಕರಿಸುವಂತೆ ಅಥವಾ ಪರಿತ್ಯಜಿಸುವಂತೆ ಕೋರಿ ಕರೆಯಾಜ್ಞೆಯನ್ನು ಹೊರಡಿಸುವವರೆಗೆ ಯಾವನೇ ಇತರ ವ್ಯಕ್ತಿಗೆ ಆಡಳಿತ ಪತ್ರವನ್ನು ನೀಡತಕ್ಕುದಲ್ಲ :

ಪರಂತು, ಹಲವಾರು ನಿರ್ವಾಹಕರ ಪೈಕಿ ಒಬ್ಬ ಅಥವಾ ಹೆಚ್ಚು ಮಂದಿ ಉಯಿಲನ್ನು ರುಜುವಾತುಪಡಿಸಿರುವಾಗ, ನ್ಯಾಯಾಲಯವು ಹಾಗೆ ರುಜುವಾತುಪಡಿಸಿದವರ ಉತ್ತರಜೀವಿಯಾದವನು ಮರಣ ಹೊಂದಿದ ಮೇಲೆ ಕರೆಯಾಜ್ಞೆಯನ್ನು ಕೊಡದೆ ಆಡಳಿತ ಪತ್ರವನ್ನು ನೀಡಬಹುದು.

230. ನಿರ್ವಾಹಕತ್ವದ ಪರಿತ್ಯಜನದ ನಮೂನೆ ಮತ್ತು ಪರಿಣಾಮ:- ಪರಿತ್ಯಜನವನ್ನು ನ್ಯಾಯಾಧೀಶನ ಸಮ್ಮುಖದಲ್ಲಿ ಬಾಯಿ ಮಾತಿನಿಂದ ಅಥವಾ ಪರಿತ್ಯಜಿಸುವ ವ್ಯಕ್ತಿಯು ರುಜು ಹಾಕಿದ ಲಿಖಿತದ ಮೂಲಕ ಮಾಡಬಹುದು ಮತ್ತು ಹಾಗೆ ಮಾಡಿದಾಗ ಆ ಪರಿತ್ಯಜನವು ಅವನನ್ನು ನಿರ್ವಾಹಕನನ್ನಾಗಿ ನೇಮಕಗೊಳಿಸುವ ಉಯಿಲಿನ ಪ್ರೊಬೇಟಿಗಾಗಿ ಆ ತರುವಾಯ ಯಾವಾಗಲೂ ಅವನು ಅರ್ಜಿ ಹಾಕುವುದನ್ನು ಪ್ರತಿವಾದಿಸತಕ್ಕುದು.

231. ನಿರ್ವಾಹಕನು ಪರಿತ್ಯಜಿಸುವಲ್ಲಿ ಅಥವಾ ಪರಿಮಿತ ಕಾಲದೊಳಗೆ ಅಂಗೀಕರಿಸಲು ತಪ್ಪಿದಲ್ಲಿ ಪ್ರಕ್ರಿಯೆ:- ನಿರ್ವಾಹಕನು ನಿರ್ವಾಹಕತ್ವವನ್ನು ಪರಿತ್ಯಜಿಸಿದರೆ ಅಥವಾ ಅದರ ಅಂಗೀಕಾರಕ್ಕೆ ಅಥವಾ ನಿರಾಕರಣೆಗಾಗಿ ಪರಿಮಿತಗೊಳಿಸಿದ ಕಾಲದೊಳಗೆ ಅದನ್ನು ಅಂಗೀಕರಿಸಲು ತಪ್ಪಿದರೆ, ಉಯಿಲನ್ನು ರುಜುವಾತುಪಡಿಸಬಹುದು ಮತ್ತು ಲಗತ್ತಿಸಿದ ಉಯಿಲಿನ ಪ್ರತಿಯೊಂದಿಗೆ ಆಡಳಿತ ಪತ್ರವನ್ನು, ಮರಣ ಶಾಸನವಿಲ್ಲದಿರುವ ಸಂದರ್ಭದಲ್ಲಿ ಆಡಳಿತಕ್ಕೆ ಹಕ್ಕುಳ್ಳವನಾಗಿರಬಹುದಾದ ವ್ಯಕ್ತಿಗೆ ನೀಡಬಹುದು.

232. ಸರ್ವಸ್ವ ಅಥವಾ ಶೇಷ ಲೆಗಟಿಗಳಿಗೆ ಆಡಳಿತ ಪತ್ರದ ನೀಡಿಕೆ:- (ಎ) ಮೃತನು ಉಯಿಲನ್ನು ಮಾಡಿದ್ದು, ಒಬ್ಬ ನಿರ್ವಾಹಕನನ್ನು ನೇಮಕ ಮಾಡದಿರುವಾಗ; ಅಥವಾ

(ಬಿ) ಮೃತನು ಕಾನೂನು ಸಮ್ಮತವಾಗಿ ಅಸಮರ್ಥನಾಗಿರುವ ಅಥವಾ ಕಾರ್ಯನಿರ್ವಹಿಸಲು ನಿರಾಕರಿಸುವ ಅಥವಾ ಮರಣ ಶಾಸನಕರ್ತನಿಗಿಂತ ಮುಂಚೆ ಅಥವಾ ಉಯಿಲನ್ನು ಅವನು ರುಜುವಾತುಪಡಿಸುವ ಮುಂಚೆ ಮರಣ ಹೊಂದಿರುವ ಒಬ್ಬ ನಿರ್ವಾಹಕನನ್ನು ನೇಮಕ ಮಾಡಿರುವಾಗ; ಅಥವಾ

(ಸಿ) ನಿರ್ವಾಹಕನು ಉಯಿಲನ್ನು ರುಜುವಾತುಪಡಿಸಿದ ತರುವಾಯ ಆದರೆ ಮೃತನ ಎಲ್ಲ ಎಸ್ಟೇಟಿನ ಆಡಳಿತವನ್ನು ನಿರ್ವಹಿಸುವ ಮುಂಚೆ ಮರಣ ಹೊಂದಿದಾಗ - ಶೇಷ ಲೆಗಟಿಗೆ, ಮರಣ ಶಾಸನವನ್ನು ರುಜುವಾತುಪಡಿಸಲು ಅವಕಾಶ ಕೊಡಬಹುದು ಮತ್ತು ಲಗತ್ತಿಸಿದ ಉಯಿಲಿನೊಂದಿಗಿನ ಆಡಳಿತ ಪತ್ರವನ್ನು ಇಡೀ ಎಸ್ಟೇಟಿಗೆ ಸಂಬಂಧಪಟ್ಟಂತೆ ಅಥವಾ ಅದರ ಆಡಳಿತವನ್ನು ನಿರ್ವಹಿಸದಿರಬಹುದಾದಷ್ಟರ ಮಟ್ಟಿಗೆ ಅವನಿಗೆ ನೀಡಬಹುದು.

233. ಮೃತ ಶೇಷ ಲೆಗಟಿಯ ಪ್ರತಿನಿಧಿಗಿರುವ ಆಡಳಿತದ ಹಕ್ಕು:- ಪ್ರಯೋಜನಕಾರಿ ಹಿತಾಸಕ್ತಿ ಹೊಂದಿರುವ ಶೇಷ ಲೆಗಟಿಯು ಮರಣ ಶಾಸನಕರ್ತನ ಉತ್ತರಜೀವಿಯಾಗಿದ್ದು, ಆ ಎಸ್ಟೇಟಿನ ಪೂರ್ಣ ಆಡಳಿತವನ್ನು ನಿರ್ವಹಿಸುವುದಕ್ಕೆ ಮುಂಚೆ ಮರಣ ಹೊಂದಿದಾಗ, ಅಂಥ ಶೇಷ ಲೆಗಟಿಯು ಲಗತ್ತಿಸಿದ ಉಯಿಲಿನೊಂದಿಗೆ ಆಡಳಿತಕ್ಕೆ ಹೊಂದಿದ್ದಂಥದೇ ಹಕ್ಕನ್ನು ಅವನ ಪ್ರತಿನಿಧಿಯು ಹೊಂದಿರುತ್ತಾನೆ.

234. ಯಾವನೇ ನಿರ್ವಾಹಕ, ಶೇಷ ಲೆಗಟಿ ಅಥವಾ ಅಂಥ ಲೆಗಟಿಯ ಪ್ರತಿನಿಧಿಯು ಇಲ್ಲದಿರುವಲ್ಲಿ ಆಡಳಿತ ಪತ್ರದ ನೀಡಿಕೆ:- ಯಾವನೇ ನಿರ್ವಾಹಕನು ಮತ್ತು ಯಾವನೇ ಲೆಗಟಿಯು ಅಥವಾ ಶೇಷ ಲೆಗಟಿಯ ಪ್ರತಿನಿಧಿಯು ಇಲ್ಲದಿರುವಾಗ ಅಥವಾ ಅವನು ಕಾರ್ಯನಿರ್ವಹಿಸಲು ನಿರಾಕರಿಸಿದಾಗ ಅಥವಾ ಅದಕ್ಕೆ ಅಸಮರ್ಥನಾಗಿರುವಾಗ ಅಥವಾ ಅವನು ಸಿಕ್ಕದೆ ಇರುವಾಗ, ಮೃತನು ಮರಣ ಶಾಸನವಿಲ್ಲದೆ ಮರಣ ಹೊಂದಿದ್ದರೆ ಅವನ ಎಸ್ಟೇಟಿನ ಆಡಳಿತಕ್ಕೆ ಹಕ್ಕುಳ್ಳವನಾಗಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಅಥವಾ ಪ್ರಯೋಜನಕಾರಿ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಇತರ ಲೆಗಟಿಗೆ ಅಥವಾ ಸಾಲಿಗನಿಗೆ ಆ ಉಯಿಲನ್ನು ರುಜುವಾತುಪಡಿಸಲು ಅವಕಾಶ ಮಾಡಿಕೊಡಬಹುದು ಮತ್ತು ತದನುಸಾರವಾಗಿ ಅವನಿಗೆ ಅಥವಾ ಅವರಿಗೆ ಆಡಳಿತ ಪತ್ರವನ್ನು ನೀಡಬಹುದು.

235. ಸರ್ವಸ್ವ ಅಥವಾ ಶೇಷ ಲೆಗಟಿಯನ್ನು ಹೊರತುಪಡಿಸಿ, ಲೆಗಟಿಗೆ ಆಡಳಿತ ಪತ್ರವನ್ನು ನೀಡುವ ಮುಂಚೆ ಕರೆಯಾಜ್ಞೆ:- ಆಡಳಿತ ಪತ್ರವನ್ನು ಅಂಗೀಕರಿಸಲು ಅಥವಾ ನಿರಾಕರಿಸಲು ನಿಕಟ ಬಂಧುವನ್ನು ಕೋರಿ ಇಲ್ಲಿ ಇನ್ನು ಮುಂದೆ ನಮೂದಿಸಿದ ರೀತಿಯಲ್ಲಿ ಕರೆಯಾಜ್ಞೆಯನ್ನು ಹೊರಡಿಸಿ ಪ್ರಕಟಿಸುವವರೆಗೆ, ಲಗತ್ತಿಸಿದ ಉಯಿಲಿನೊಂದಿಗೆ ಆಡಳಿತ ಪತ್ರವನ್ನು ಸರ್ವಸ್ವ ಅಥವಾ ಶೇಷ ಲೆಗಟಿಯನ್ನು ಹೊರತುಪಡಿಸಿ ಇತರ ಯಾವನೇ ಲೆಗಟಿಗೆ ನೀಡತಕ್ಕುದಲ್ಲ.

236. ಆಡಳಿತಪತ್ರವನ್ನು ಯಾರಿಗೆ ನೀಡಬಾರದು:- ಆಡಳಿತ ಪತ್ರವನ್ನು ಅಪ್ರಾಪ್ತ ವಯಸ್ಕನಾಗಿರುವ ಅಥವಾ ಅಸ್ವಸ್ಥಚಿತ್ತನಾಗಿರುವ ಯಾವನೇ ವ್ಯಕ್ತಿಗೆ ಅಥವಾ ವ್ಯಕ್ತಿಗಳ ಸಂಘವು ಈ ಬಗ್ಗೆ ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಮಾಡತಕ್ಕ ನಿಯಮಗಳ ಮೂಲಕ ನಿಯಮಿಸಿದ ಷರತ್ತುಗಳನ್ನು ಪೂರೈಸುವಂಥ ಕಂಪನಿಯಾಗಿದ್ದ ಹೊರತು ಆ ಯಾವುದೇ ವ್ಯಕ್ತಿಗಳ ಸಂಘಕ್ಕೆ ನೀಡಲಾಗದು.

236ಎ. ನಿಯಮಗಳನ್ನು ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸುವುದು:- 223ನೇ ಪ್ರಕರಣ ಮತ್ತು 236ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸತಕ್ಕದು.

## ಅಧ್ಯಾಯ - II

### ಪರಿಮಿತ ನೀಡಿಕೆಗಳ ಬಗ್ಗೆ

### ಕಾಲಪರಿಮಿತ ನೀಡಿಕೆಗಳು

237. ಕಳೆದುಹೋದ ಉಯಿಲಿನ ಪ್ರತಿಯ ಅಥವಾ ಕರಡಿನ ಪ್ರೊಬೇಟು:- ಮರಣಶಾಸನ ಕರ್ತನು ಮರಣ ಹೊಂದಿದ ಮೇಲೆ ಉಯಿಲು ಕಳೆದು ಹೋಗಿರುವಾಗ ಅಥವಾ ಅದನ್ನು ಎಲ್ಲಿಯೋ ಇಟ್ಟಿರುವಾಗ ಅಥವಾ ಮರಣಶಾಸನ ಕರ್ತನ ಯಾವುದೇ ಕಾರ್ಯದಿಂದಲ್ಲದೆ ಆದರೆ ಯಾವುದೇ ತಪ್ಪಿನಿಂದಾಗಿ ಅಥವಾ ಆಕಸ್ಮಿಕದಿಂದಾಗಿ ನಾಶವಾಗಿರುವಾಗ ಮತ್ತು ಆ ಉಯಿಲಿನ ಪ್ರತಿಯನ್ನು ಅಥವಾ ಕರಡನ್ನು ಪರೀಕ್ಷಿಸಿ ಇಟ್ಟಿರುವಾಗ ಅಂಥ ಪ್ರತಿಯ ಅಥವಾ ಕರಡಿನ ಪ್ರೊಬೇಟನ್ನು, ಅದರ ಮೂಲ ಅಥವಾ ಸರಿಯಾಗಿ ಅಧಿಪ್ರಮಾಣಿತವಾದ ಪ್ರತಿಯನ್ನು ಹಾಜರುಪಡಿಸುವವರೆಗೆ, ಪರಿಮಿತಗೊಳಿಸಿ ನೀಡಬಹುದು.

238. ಕಳೆದುಹೋದ ಅಥವಾ ನಾಶವಾದ ಉಯಿಲಿನ ಒಳಾಂಶಗಳ ಪ್ರೊಬೇಟು:- ಉಯಿಲು ಕಳೆದು ಹೋಗಿರುವಾಗ ಅಥವಾ ನಾಶವಾಗಿರುವಾಗ ಮತ್ತು ಅದರ ಯಾವುದೇ ಪ್ರತಿಯನ್ನು ಮಾಡದಿರುವಾಗ ಅಥವಾ ಅದರ ಕರಡನ್ನು ಪರೀಕ್ಷಿಸಿಲ್ಲದಿರುವಾಗ, ಉಯಿಲಿನ ಒಳಾಂಶಗಳನ್ನು ಸಾಕ್ಷ್ಯದ ಮೂಲಕ ಸ್ಥಾಪಿಸಲು ಸಾಧ್ಯವಿದ್ದರೆ, ಆ ಒಳಾಂಶಗಳ ಪ್ರೊಬೇಟನ್ನು ನೀಡಬಹುದು.

239. ಮೂಲ ಪ್ರತಿಯು ಇರುವಲ್ಲಿ ಪ್ರತಿಯ ಪ್ರೊಬೇಟು:- ಯಾವ ರಾಜ್ಯದಲ್ಲಿ ಪ್ರೊಬೇಟಿಗಾಗಿ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ರಾಜ್ಯದ ಹೊರಗೆ ವಾಸಿಸುವ ವ್ಯಕ್ತಿಯ ಸ್ವಾಧೀನದಲ್ಲಿ ಉಯಿಲು ಇರುವಾಗ ಮತ್ತು ಅವನು ಅದನ್ನು ವಶಾವಣೆ ಮಾಡಲು ನಿರಾಕರಿಸಿದಾಗ ಅಥವಾ ಉಪೇಕ್ಷಿಸಿದಾಗ, ಆದರೆ ಅದರ ಪ್ರತಿಯನ್ನು ನಿರ್ವಾಹಕನಿಗೆ ರವಾನಿಸಿರುವಾಗ ಮತ್ತು ಮೂಲ ಪ್ರತಿಯು ತಲುಪುವವರೆಗೆ ಕಾಯಿದೆ ಎಸ್ಟೇಟಿನ ಹಿತಾಸಕ್ತಿಯಲ್ಲಿ ಪ್ರೊಬೇಟನ್ನು ನೀಡುವುದು ಅವಶ್ಯವಿರುವಾಗ, ಉಯಿಲನ್ನು ಅಥವಾ ಅದರ ಅಧಿಪ್ರಮಾಣಿತ ಪ್ರತಿಯನ್ನು ಹಾಜರುಪಡಿಸುವವರೆಗೆ ಪರಿಮಿತಗೊಳಿಸಿ ಹಾಗೆ ರವಾನಿಸಿದ ಪ್ರತಿಯ ಪ್ರೊಬೇಟನ್ನು ನೀಡಬಹುದು.

240. ಉಯಿಲನ್ನು ಹಾಜರುಪಡಿಸುವವರೆಗೆ ಆಡಳಿತ:- ಮೃತನ ಯಾವುದೇ ಉಯಿಲು ಲಭ್ಯವಿಲ್ಲದಿರುವಲ್ಲಿ ಮತ್ತು ಉಯಿಲು ಇದೆ ಎಂದು ನಂಬಲು ಕಾರಣವಿರುವಲ್ಲಿ, ಆ ಉಯಿಲನ್ನು ಅಥವಾ ಅದರ ಅಧಿಪ್ರಮಾಣಿತ ಪ್ರತಿಯನ್ನು ಹಾಜರುಪಡಿಸುವವರೆಗೆ ಪರಿಮಿತಗೊಳಿಸಿ ಆಡಳಿತ ಪತ್ರವನ್ನು ನೀಡಬಹುದು.

### ಹಕ್ಕನ್ನು ಹೊಂದಿರುವ ಇತರರ ಉಪಯೋಗ ಮತ್ತು ಪ್ರಯೋಜನಕ್ಕಾಗಿ ನೀಡಿಕೆಗಳು

241. ಗೈರು ಹಾಜರಿರುವ ನಿರ್ವಾಹಕನ ಅಟಾರ್ನಿಗೆ ಉಯಿಲು ಲಗತ್ತಿಸಿದ ಆಡಳಿತ ಪತ್ರ:- ಯಾವನೇ ನಿರ್ವಾಹಕನು ಅರ್ಜಿಯನ್ನು ಸಲ್ಲಿಸಿದಂಥ ರಾಜ್ಯದಿಂದ ಗೈರು ಹಾಜರಾದಾಗ ಮತ್ತು ಆ ರಾಜ್ಯದೊಳಗೆ ಕಾರ್ಯ ನಿರ್ವಹಿಸಲು ಇಚ್ಛಿಸುವ ಯಾವನೇ ನಿರ್ವಾಹಕನು ಇಲ್ಲದಿರುವಾಗ, ಉಯಿಲು ಲಗತ್ತಿಸಿದ ಆಡಳಿತ ಪತ್ರವನ್ನು, ಗೈರುಹಾಜರಾದ ನಿರ್ವಾಹಕನ ಅಟಾರ್ನಿಗೆ ಅಥವಾ ಏಜೆಂಟನಿಗೆ, ಅವನ ಯಜಮಾನನ ಉಪಯೋಗ ಮತ್ತು ಪ್ರಯೋಜನಕ್ಕಾಗಿ ಅವನು ಪ್ರೊಬೇಟನ್ನು ಪಡೆದುಕೊಳ್ಳುವವರೆಗೆ ಅಥವಾ ಅವನಿಗೆ ಆಡಳಿತ ಪತ್ರವನ್ನು ನೀಡುವವರೆಗೆ ಪರಿಮಿತಗೊಳಿಸಿ ನೀಡಬಹುದು.

242. ಗೈರುಹಾಜರಿರುವ ಯಾವ ವ್ಯಕ್ತಿಯು ಹಾಜರಿದ್ದರೆ ಆಡಳಿತ ನಡೆಸಲು ಹಕ್ಕುಳ್ಳವನಾಗುತ್ತಿದ್ದನೋ ಅವನ ಅಟಾರ್ನಿಗೆ ಉಯಿಲು ಲಗತ್ತಿಸಿದ ಆಡಳಿತ ಪತ್ರ:- ಯಾವ ವ್ಯಕ್ತಿಯು ಹಾಜರಿದ್ದರೆ ಅವನಿಗೆ ಉಯಿಲಿನೊಂದಿಗೆ ಆಡಳಿತ ಪತ್ರವನ್ನು ನೀಡಬಹುದಾಗಿತ್ತೋ ಆ ಯಾವನೇ ವ್ಯಕ್ತಿಯು ರಾಜ್ಯದಿಂದ ಗೈರುಹಾಜರಾದಾಗ, ಉಯಿಲನ್ನು ಲಗತ್ತಿಸಿ ಆಡಳಿತ ಪತ್ರವನ್ನು ಅವನ ಅಟಾರ್ನಿಗೆ ಅಥವಾ ಏಜೆಂಟನಿಗೆ 241 ನೇ ಪ್ರಕರಣದಲ್ಲಿ ನಮೂದಿಸಿದಂತೆ ಪರಿಮಿತಿಗೊಳಿಸಿ ನೀಡಬಹುದು.

243. ಮರಣಶಾಸನವಿಲ್ಲದಿರುವ ಸಂದರ್ಭದಲ್ಲಿ ಆಡಳಿತ ನಿರ್ವಹಿಸಲು ಹಕ್ಕುಳ್ಳವನಾದ ಗೈರುಹಾಜರಾದ ವ್ಯಕ್ತಿಯ ಅಟಾರ್ನಿಗೆ ಆಡಳಿತ ಪತ್ರ:- ಮರಣಶಾಸನವಿಲ್ಲದ ಸಂದರ್ಭದಲ್ಲಿ ಆಡಳಿತಾಧಿಕಾರಕ್ಕೆ ಹಕ್ಕುಳ್ಳ ವ್ಯಕ್ತಿಯು ರಾಜ್ಯದಿಂದ ಗೈರುಹಾಜರಾದಾಗ ಮತ್ತು ಸಮನಾಗಿ ಹಕ್ಕುಳ್ಳ ಯಾವನೇ ವ್ಯಕ್ತಿಯು ಕಾರ್ಯನಿರ್ವಹಿಸಲು ಸಮ್ಮತಿಸದಿರುವಾಗ, ಆಡಳಿತ ಪತ್ರವನ್ನು ಗೈರುಹಾಜರಾದ ವ್ಯಕ್ತಿಯ ಅಟಾರ್ನಿಗೆ ಅಥವಾ ಏಜೆಂಟನಿಗೆ 241ನೇ ಪ್ರಕರಣದಲ್ಲಿ ನಮೂದಿಸಿರುವಂತೆ ಪರಿಮಿತಗೊಳಿಸಿ ನೀಡಬಹುದು.

244. ಏಕೈಕ ನಿರ್ವಾಹಕನ ಅಥವಾ ಶೇಷ ಲೆಗಟಿಯ ಅಪ್ರಾಪ್ತ ವಯಸ್ಕತೆಯ ಕಾಲದಲ್ಲಿ ಆಡಳಿತ:-ಅಪ್ರಾಪ್ತ ವಯಸ್ಕನು ಏಕೈಕ ನಿರ್ವಾಹಕ ಅಥವಾ ಏಕೈಕ ಶೇಷ ಲೆಗಟಿಯಾಗಿರುವಾಗ, ಉಯಿಲು ಲಗತ್ತಿಸಿದ ಆಡಳಿತ ಪತ್ರವನ್ನು ಅಂಥ ಅಪ್ರಾಪ್ತ ವಯಸ್ಕನ ಕಾನೂನು ಸಮ್ಮತ ಪಾಲಕನಿಗೆ ಅಥವಾ ನ್ಯಾಯಾಲಯವು ಸೂಕ್ತವೆಂದು ಯೋಚಿಸಬಹುದಾದಂತಹ ಇತರ ವ್ಯಕ್ತಿಗೆ, ಅಪ್ರಾಪ್ತ ವಯಸ್ಕನು ಪ್ರಾಪ್ತ

ವಯಸ್ಕನಾಗುವವರೆಗೆ ನೀಡಬಹುದು ಮತ್ತು ಹಾಗೆ ವಯಸ್ಕನಾದಾಗ ಮತ್ತು ಅದಕ್ಕೆ ಮುಂಚಿತವಾಗಿ ಅಲ್ಲದಂತೆ ಉಯಿಲಿನ ಪ್ರೊಬೇಟನ್ನು ಅವನಿಗೆ ನೀಡತಕ್ಕುದು.

245. ಹಲವಾರು ನಿರ್ವಾಹಕರು ಅಥವಾ ಶೇಷ ಲೆಗಟಿಗಳ ಅಪ್ರಾಪ್ತ ವಯಸ್ಕತೆಯ ಕಾಲದಲ್ಲಿ ಆಡಳಿತ:- ಇಬ್ಬರು ಅಥವಾ ಹೆಚ್ಚು ಅಪ್ರಾಪ್ತ ವಯಸ್ಕರಿರುವಾಗ ಮತ್ತು ಪ್ರಾಪ್ತ ವಯಸ್ಕನಾದ ಯಾವನೇ ನಿರ್ವಾಹಕನಿಲ್ಲದಿರುವಾಗ ಅಥವಾ ಇಬ್ಬರು ಅಥವಾ ಹೆಚ್ಚು ಶೇಷ ಲೆಗಟಿಗಳು ಇದ್ದು ಮತ್ತು ಪ್ರಾಪ್ತ ವಯಸ್ಕನಾದ ಯಾವನೇ ಶೇಷ ಲೆಗಟಿಯು ಇಲ್ಲದಿರುವಾಗ, ನೀಡಿಕೆಯನ್ನು, ಅವರಲ್ಲಿ ಒಬ್ಬರು ಪ್ರಾಪ್ತ ವಯಸ್ಕನಾಗುವವರೆಗೆ, ಪರಿಮಿತಿಗೊಳಿಸತಕ್ಕುದು.

246. ಮನೋವಿಕಲ ಅಥವಾ ಅಪ್ರಾಪ್ತ ವಯಸ್ಕನ ಉಪಯೋಗ ಅಥವಾ ಪ್ರಯೋಜನಕ್ಕಾಗಿ ಆಡಳಿತ:- ಏಕೈಕ ನಿರ್ವಾಹಕ ಅಥವಾ ಏಕೈಕ ಸರ್ವಸ್ವ ಲೆಗಟಿಯು ಅಥವಾ ಶೇಷ ಲೆಗಟಿಯು ಅಥವಾ ಮೃತನ ಸಂದರ್ಭದಲ್ಲಿ ಮರಣಶಾಸನ ರಹಿತನ ಎಸ್ಟೇಟುಗಳ ಹಂಚಿಕೆಗೆ ಅನ್ವಯವಾಗಬಹುದಾದ ನಿಯಮಕ್ಕನುಸಾರ ಮರಣಶಾಸನ ರಹಿತನ ಎಸ್ಟೇಟಿಗೆ ಏಕಮಾತ್ರವಾಗಿ ಹಕ್ಕುಳ್ಳವನಾಗಬಹುದಾದ ವ್ಯಕ್ತಿಯು ಅಪ್ರಾಪ್ತ ವಯಸ್ಕ ಅಥವಾ ಮನೋವಿಕಲನಾಗಿರುವಾಗ, ಸಂದರ್ಭಾನುಸಾರ ಉಯಿಲು ಲಗತ್ತಿಸಿದ ಅಥವಾ ಅದಿಲ್ಲದೆ ಆಡಳಿತ ಪತ್ರವನ್ನು, ಅವನ ಎಸ್ಟೇಟಿನ ರಕ್ಷಣೆಯನ್ನು ಸಕ್ಷಮ ಪ್ರಾಧಿಕಾರವು ಯಾರಿಗೆ ಒಪ್ಪಿಸಿದೆಯೋ ಆ ವ್ಯಕ್ತಿಗೆ ಅಥವಾ ಅಂಥ ಯಾವನೇ ವ್ಯಕ್ತಿಯೂ ಇಲ್ಲದಿದ್ದರೆ ನ್ಯಾಯಾಲಯವು ನೇಮಕ ಮಾಡಲು ಸೂಕ್ತವೆಂದು ಯೋಚಿಸುವಂಥ ಇತರ ವ್ಯಕ್ತಿಗೆ ಅಪ್ರಾಪ್ತ ವಯಸ್ಕ ಅಥವಾ ಮನೋವಿಕಲನ ಉಪಯೋಗ ಮತ್ತು ಪ್ರಯೋಜನಕ್ಕಾಗಿ ಸಂದರ್ಭಾನುಸಾರ ಅವನು ಪ್ರಾಪ್ತ ವಯಸ್ಕ ಅಥವಾ ಸ್ವಸ್ಥಚಿತ್ತನಾಗುವವರೆಗೆ ನೀಡತಕ್ಕುದು.

247. ದಾವೆಯು ನಡೆಯುತ್ತಿರುವಾಗ ಆಡಳಿತ:- ಮೃತ ವ್ಯಕ್ತಿಯ ಉಯಿಲಿನ ಸಿಂಧುತ್ವಕ್ಕೆ ಸಂಬಂಧಿಸಿದಂತೆ ಅಥವಾ ಯಾವುದೇ ಪ್ರೊಬೇಟು ಅಥವಾ ಆಡಳಿತ ಪತ್ರದ ಯಾವುದೇ ನೀಡಿಕೆಯನ್ನು ಪಡೆಯಲು ಅಥವಾ ರದ್ದುಗೊಳಿಸಲು ಹೂಡಿದ ಯಾವುದೇ ದಾವೆಯು ಇತ್ಯರ್ಥದಲ್ಲಿರುವಾಗ ನ್ಯಾಯಾಲಯವು ಅಂಥ ಮೃತ ವ್ಯಕ್ತಿಯ ಎಸ್ಟೇಟಿಗೆ ಒಬ್ಬ ಆಡಳಿತಗಾರನನ್ನು ನೇಮಕ ಮಾಡಬಹುದು; ಮತ್ತು ಅವನು ಅಂಥ ಎಸ್ಟೇಟನ್ನು ಹಂಚುವ ಹಕ್ಕನ್ನು ಹೊರತುಪಡಿಸಿ ಸಾಮಾನ್ಯ ಆಡಳಿತಗಾರನ ಎಲ್ಲ ಹಕ್ಕುಗಳನ್ನು ಮತ್ತು ಅಧಿಕಾರಗಳನ್ನು ಹೊಂದಿರತಕ್ಕುದು ಮತ್ತು ಅಂಥ ಪ್ರತಿಯೊಬ್ಬ ಆಡಳಿತಗಾರನು ನ್ಯಾಯಾಲಯದ ನಿಕಟ ನಿಯಂತ್ರಣಕ್ಕೆ ಒಳಪಟ್ಟಿರತಕ್ಕುದು ಮತ್ತು ಅದರ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸತಕ್ಕುದು.

ವಿಶೇಷ ಉದ್ದೇಶಗಳಿಗಾಗಿ ನೀಡಿಕೆಗಳು

248. ಉಯಿಲಿನಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಕ್ಕೆ ಪರಿಮಿತವಾದ ಪ್ರೊಬೇಟು:- ಉಯಿಲಿನಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪರಿಮಿತ ಉದ್ದೇಶಕ್ಕಾಗಿ ನಿರ್ವಾಹಕನನ್ನು ನೇಮಕ ಮಾಡಿದ್ದರೆ, ಪ್ರೊಬೇಟನ್ನು ಆ ಉದ್ದೇಶಕ್ಕಾಗಿ ಪರಿಮಿತಿಗೊಳಿಸತಕ್ಕುದು ಮತ್ತು ಅವನ ಪರವಾಗಿ ಆಡಳಿತವನ್ನು ವಹಿಸಿಕೊಳ್ಳಲು ಅಟಾರ್ನಿ ಅಥವಾ ಏಜೆಂಟನನ್ನು ನೇಮಕ ಮಾಡಿದರೆ, ಉಯಿಲು ಲಗತ್ತಿಸಿದ ಆಡಳಿತ ಪತ್ರವನ್ನು ತದನುಸಾರವಾಗಿ ಪರಿಮಿತಿಗೊಳಿಸತಕ್ಕುದು.

249. ನಿರ್ದಿಷ್ಟ ಉದ್ದೇಶಕ್ಕೆ ಪರಿಮಿತಗೊಳಿಸಿ ಉಯಿಲು ಲಗತ್ತಿಸಿದ ಆಡಳಿತ ಪತ್ರ:- ಸಾಮಾನ್ಯವಾಗಿ ನೇಮಕಗೊಂಡ ನಿರ್ವಾಹಕನು ತನ್ನ ಪರವಾಗಿ ಉಯಿಲನ್ನು ರುಜುವಾತುಪಡಿಸಲು ಅಟಾರ್ನಿಗೆ ಅಥವಾ ಏಜೆಂಟನಿಗೆ ಅಧಿಕಾರವನ್ನು ಕೊಟ್ಟರೆ ಮತ್ತು ಆ ಅಧಿಕಾರವನ್ನು ಒಂದು ನಿರ್ದಿಷ್ಟ ಉದ್ದೇಶಕ್ಕೆ ಪರಿಮಿತಗೊಳಿಸಿದ್ದರೆ, ಉಯಿಲು ಲಗತ್ತಿಸಿದ ಆಡಳಿತ ಪತ್ರವನ್ನು ತದನುಸಾರವಾಗಿ ಪರಿಮಿತಿಗೊಳಿಸತಕ್ಕುದು.

250. ವ್ಯಕ್ತಿಯು ಪ್ರಯೋಜನಕಾರಿ ಹಿತಾಸಕ್ತಿಯನ್ನು ಹೊಂದಿರುವಂಥ ಸ್ವತ್ತಿಗೆ ಪರಿಮಿತಿಗೊಳಿಸಿದ ಆಡಳಿತ:-ವ್ಯಕ್ತಿಯು ತಾನು ಏಕೈಕ ಅಥವಾ ಉತ್ತರಜೀವಿ ಟ್ರಸ್ಟಿಯಾಗಿದ್ದಂಥ ಅಥವಾ ತನ್ನದೇ ಆದ ಯಾವುದೇ ಪ್ರಯೋಜನಕಾರಿ ಹಿತಾಸಕ್ತಿಯನ್ನು ಹೊಂದಿರದೆ ಇದ್ದಂಥ ಸ್ವತ್ತನ್ನು ಬಿಟ್ಟು ಮರಣ ಹೊಂದಿರುವಲ್ಲಿ, ಮತ್ತು ಯಾವನೇ ಸಾಮಾನ್ಯ ಪ್ರತಿನಿಧಿಯನ್ನು ಬಿಟ್ಟು ಹೋಗಿಲ್ಲದಿರುವಲ್ಲಿ ಅಥವಾ ಹಾಗೆಂದು ಕಾರ್ಯ ನಿರ್ವಹಿಸಲು ಅಸಮರ್ಥನಾಗಿರುವ ಅಥವಾ ಇಚ್ಛೆಯಿಲ್ಲದಿರುವವನನ್ನು ಬಿಟ್ಟು ಹೋಗಿರುವಲ್ಲಿ ಅಂಥ ಸ್ವತ್ತಿಗೆ ಪರಿಮಿತಿಗೊಳಿಸಿ ಆಡಳಿತ ಪತ್ರವನ್ನು ಫಲಾನುಭವಿಗೆ ಅಥವಾ ಅವನ ಪರವಾಗಿ ಇತರ ಬೇರೆ ವ್ಯಕ್ತಿಗೆ ನೀಡಬಹುದು.

251. ದಾವೆಗೆ ಪರಿಮಿತಿಗೊಳಿಸಿದ ಆಡಳಿತ:- ಇತ್ಯರ್ಥದಲ್ಲಿರುವ ದಾವೆಗೆ ಮೃತ ವ್ಯಕ್ತಿಯ ಪ್ರತಿನಿಧಿಯನ್ನು ಪಕ್ಷಕಾರನನ್ನಾಗಿ ಮಾಡುವುದು ಅವಶ್ಯವಾಗಿರುವಾಗ, ಮತ್ತು ನಿರ್ವಾಹಕ ಅಥವಾ ಆಡಳಿತಕ್ಕೆ ಹಕ್ಕುಳ್ಳವನಾದ ವ್ಯಕ್ತಿಯು ಕಾರ್ಯನಿರ್ವಹಿಸಲು ಅಸಮರ್ಥನಾಗಿರುವಾಗ ಅಥವಾ ಅಸಮ್ಮತಿಸಿದಾಗ, ಆಡಳಿತ ಪತ್ರವನ್ನು ಅಂಥ ದಾವೆಯಲ್ಲಿ ಪಕ್ಷಕಾರನ ನಾಮನಿರ್ದೇಶಿತನಿಗೆ ಸದರಿ ದಾವೆಯಲ್ಲಿ ಅಥವಾ ಸದರಿ ವ್ಯಾಜ್ಯ ಅಥವಾ ದಾವೆಯಲ್ಲಿ, ವಿವಾದಾಂಶದ ವಿಷಯಗಳಿಗೆ ಸಂಬಂಧಿಸಿದಂತೆ ಆ ಪಕ್ಷಕಾರರು ಅಥವಾ ಯಾವುದೇ ಇತರ ಪಕ್ಷಕಾರರ ನಡುವೆ ಅದೇ ಅಥವಾ ಇತರ ಯಾವುದೇ ನ್ಯಾಯಾಲಯದಲ್ಲಿ ಪ್ರಾರಂಭಿಸಬಹುದಾದಂಥ ಯಾವುದೇ ಇತರ ವ್ಯಾಜ್ಯ ಅಥವಾ ದಾವೆಯಲ್ಲಿ ಮೃತನನ್ನು ಪ್ರತಿನಿಧಿಸುವ ಉದ್ದೇಶಕ್ಕೆ ಮತ್ತು ಅದರಲ್ಲಿ ಅಂತಿಮ ಡಿಕ್ರಿಯನ್ನು ಮಾಡುವವರೆಗೆ ಮತ್ತು ಅದನ್ನು ಪೂರ್ಣವಾಗಿ ಜಾರಿಗೊಳಿಸುವವರೆಗೆ ಪರಿಮಿತಿಗೊಳಿಸಿ ನೀಡಬಹುದು.

252. ಆಡಳಿತಗಾರನ ವಿರುದ್ಧ ಹೂಡಬೇಕಾದ ದಾವೆಗೆ ಪಕ್ಷಕಾರನಾಗುವ ಉದ್ದೇಶಕ್ಕೆ ಪರಿಮಿತಿಗೊಳಿಸಿದ ಆಡಳಿತ:- ಯಾವುದೇ ಪ್ರೊಬೇಟು ಅಥವಾ ಆಡಳಿತ ಪತ್ರದ ದಿನಾಂಕದಿಂದ ಹನ್ನೆರಡು ತಿಂಗಳು ಮುಕ್ತಾಯವಾದ ಮೇಲೆ, ಅದನ್ನು ಯಾರಿಗೆ ನೀಡಲಾಗಿದೆಯೋ ಆ ನಿರ್ವಾಹಕ ಅಥವಾ ಆಡಳಿತಗಾರನು ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ನೀಡಿದಂಥ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯನ್ನು ಯಾವ ರಾಜ್ಯದೊಳಗೆ ಚಲಾಯಿಸುವುದೋ ಆ ರಾಜ್ಯದಿಂದ ಗೈರು ಹಾಜರಾಗಿದ್ದರೆ, ನ್ಯಾಯಾಲಯವು ತಾನು ಸೂಕ್ತವೆಂದು ಯೋಚಿಸಬಹುದಾದಂಥ ಯಾವನೇ ವ್ಯಕ್ತಿಗೆ, ನಿರ್ವಾಹಕ ಅಥವಾ ಆಡಳಿತಗಾರನ ವಿರುದ್ಧ ಹೂಡಬೇಕಾದ ದಾವೆಗೆ ಪಕ್ಷಕಾರನಾಗುವ ಅಥವಾ ಪಕ್ಷಕಾರನನ್ನಾಗಿ ಮಾಡುವ ಮತ್ತು ಅದರಲ್ಲಿ ಮಾಡಬಹುದಾದಂಥ ಡಿಕ್ರಿಯನ್ನು ಜಾರಿಗೊಳಿಸುವ ಉದ್ದೇಶಕ್ಕೆ ಪರಿಮಿತಿಗೊಳಿಸಿ ಆಡಳಿತ ಪತ್ರವನ್ನು ನೀಡಬಹುದು.

253. ಮೃತನ ಸ್ವತ್ತಿನ ಸಂಗ್ರಹಣೆ ಹಾಗೂ ಪರಿರಕ್ಷಣೆಗೆ ಪರಿಮಿತಿಗೊಳಿಸಿದ ಆಡಳಿತ:- ಮೃತ ವ್ಯಕ್ತಿಯ ಸ್ವತ್ತನ್ನು ಪರಿರಕ್ಷಿಸಲು ಅವಶ್ಯವಿದೆ ಎಂದು ಕಂಡುಬರುವ ಯಾವುದೇ ಸಂದರ್ಭದಲ್ಲಿ, ಯಾವ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಆ ಯಾವುದೇ ಸ್ವತ್ತು ಇರುವುದೋ ಆ ನ್ಯಾಯಾಲಯವು, ತಾನು ಯುಕ್ತವೆಂದು ಯೋಚಿಸಬಹುದಾದಂಥ ಯಾವನೇ ವ್ಯಕ್ತಿಗೆ, ಮೃತನ ಸ್ವತ್ತನ್ನು ಸಂಗ್ರಹಿಸುವುದಕ್ಕೆ ಮತ್ತು ಪರಿರಕ್ಷಿಸುವುದಕ್ಕೆ ಮತ್ತು ನ್ಯಾಯಾಲಯದ ನಿರ್ದೇಶನಗಳಿಗೆ ಒಳಪಟ್ಟು ಅವನ ಎಸ್ಟೇಟಿಗೆ ಬರಬೇಕಾದ ಋಣಗಳಿಗೆ, ತೀರುವಳಿ ಕೊಡುವುದಕ್ಕೆ ಪರಿಮಿತಿಗೊಳಿಸಿ ಆಡಳಿತ ಪತ್ರವನ್ನು ನೀಡಬಹುದು.

254. ಸಾಮಾನ್ಯ ಸನ್ನಿವೇಶಗಳಲ್ಲಿ ಆಡಳಿತಕ್ಕೆ ಹಕ್ಕುಳ್ಳವನಾಗಬಹುದಾಗಿದ್ದ ವ್ಯಕ್ತಿಯನ್ನು ಹೊರತುಪಡಿಸಿ ಇತರ ವ್ಯಕ್ತಿಯನ್ನು ಆಡಳಿತಗಾರನನ್ನಾಗಿ ನೇಮಕ ಮಾಡುವುದು:- (1) ವ್ಯಕ್ತಿಯು ಮರಣಶಾಸನ ರಹಿತನಾಗಿ ಮರಣ ಹೊಂದಿರುವಾಗ ಅಥವಾ ಕಾರ್ಯನಿರ್ವಹಿಸಲು ಸಮ್ಮತಿಸುವ ಅಥವಾ ಸಕ್ಷಮನಾದ ಯಾವನೇ ನಿರ್ವಾಹಕನು ಇಲ್ಲದಿರುವ ಉಯಿಲನ್ನು ಬಿಟ್ಟು ಮರಣ ಹೊಂದಿರುವಾಗ ಅಥವಾ ನಿರ್ವಾಹಕನು, ಅಂಥ ವ್ಯಕ್ತಿಯ ಮರಣ ಕಾಲದಲ್ಲಿ ರಾಜ್ಯದ ಹೊರಗೆ ನಿವಾಸಿಯಾಗಿರುವಲ್ಲಿ ಮತ್ತು ಸಾಮಾನ್ಯ ಸಂದರ್ಭದಲ್ಲಿ ಆಡಳಿತ ಪತ್ರವನ್ನು ಪಡೆಯಲು ಹಕ್ಕುಳ್ಳವನಾಗಬಹುದಾಗಿದ್ದ ವ್ಯಕ್ತಿಯನ್ನು ಹೊರತುಪಡಿಸಿ ಎಸ್ಟೇಟಿನ ಅಥವಾ ಅದರ ಯಾವುದೇ ಭಾಗದ ಆಡಳಿತವನ್ನು ನಿರ್ವಹಿಸಲು ಬೇರೊಬ್ಬ ವ್ಯಕ್ತಿಯನ್ನು ನೇಮಿಸುವುದು ಅವಶ್ಯ ಅಥವಾ ಅನುಕೂಲಕರವೆಂದು ನ್ಯಾಯಾಲಯಕ್ಕೆ ಕಂಡುಬಂದರೆ, ನ್ಯಾಯಾಲಯವು ತನ್ನ ವಿವೇಚನಾನುಸಾರ ರಕ್ತ ಸಂಬಂಧ, ಹಿತಾಸಕ್ತಿಯ ಪರಿಮಾಣ, ಎಸ್ಟೇಟಿನ ಸುರಕ್ಷತೆ ಮತ್ತು ಅದನ್ನು ಸರಿಯಾಗಿ ನಿರ್ವಹಿಸಲಾಗುವುದೆಂಬ ಸಂಭಾವ್ಯತೆ- ಇವುಗಳನ್ನು ಗಮನದಲ್ಲಿರಿಸಿಕೊಂಡು ಆಡಳಿತಗಾರನಾಗಿರಲು ಯೋಗ್ಯನೆಂದು ತಾನು ಯೋಚಿಸುವಂಥ ವ್ಯಕ್ತಿಯನ್ನು ನೇಮಕ ಮಾಡಬಹುದು.

(2) ಅಂಥ ಪ್ರತಿಯೊಂದು ಸಂದರ್ಭದಲ್ಲಿ ಆಡಳಿತ ಪತ್ರವನ್ನು ನ್ಯಾಯಾಲಯವು ಸೂಕ್ತವೆಂದು ಯೋಚಿಸುವಂತೆ ಪರಿಮಿತಿಗೊಳಿಸಬಹುದು ಅಥವಾ ಪರಿಮಿತಿಗೊಳಿಸದಿರಬಹುದು.

### ವಿನಾಯಿತಿಗಳೊಂದಿಗೆ ನೀಡಿಕೆಗಳು

255. ವಿನಾಯಿತಿಗೆ ಒಳಪಟ್ಟು ಉಯಿಲನ್ನು ಲಗತ್ತಿಸಿ ಪ್ರೊಬೇಟು ಅಥವಾ ಆಡಳಿತ ಪತ್ರ ನೀಡಿಕೆ:- ಪ್ರಕರಣದ ಸ್ವರೂಪವು ವಿನಾಯಿತಿಯನ್ನು ಕೊಡಬೇಕೆಂದು ಅಗತ್ಯಪಡಿಸಿದಾಗಲೆಲ್ಲಾ ಉಯಿಲಿನ ಪ್ರೊಬೇಟು ಅಥವಾ ಉಯಿಲನ್ನು ಲಗತ್ತಿಸಿದ ಆಡಳಿತ ಪತ್ರವನ್ನು ಅಂಥ ವಿನಾಯಿತಿಗೆ ಒಳಪಟ್ಟು ನೀಡತಕ್ಕುದು.

256. ವಿನಾಯಿತಿಯೊಂದಿಗೆ ಆಡಳಿತ ಪತ್ರ:- ಪ್ರಕರಣದ ಸ್ವರೂಪವು ವಿನಾಯಿತಿಯನ್ನು ಕೊಡಬೇಕೆಂದು ಅಗತ್ಯಪಡಿಸಿದಾಗಲೆಲ್ಲ ಆಡಳಿತ ಪತ್ರವನ್ನು ಅಂಥ ವಿನಾಯಿತಿಗೆ ಒಳಪಟ್ಟು ನೀಡತಕ್ಕುದು.

### ಉಳಿದ ಭಾಗಗಳ ಬಗ್ಗೆ ನೀಡಿಕೆಗಳು

257. ಉಳಿದ ಭಾಗಗಳ ಬಗ್ಗೆ ಪ್ರೊಬೇಟು ಅಥವಾ ಆಡಳಿತ ಪತ್ರ:- ಪ್ರೊಬೇಟನ್ನು ಅಥವಾ ಉಯಿಲನ್ನು ಲಗತ್ತಿಸಿ ಅಥವಾ ಅದಿಲ್ಲದೆ ಆಡಳಿತ ಪತ್ರವನ್ನು ವಿನಾಯಿತಿಯೊಂದಿಗೆ ನೀಡಿರುವಾಗಲೆಲ್ಲಾ, ಮೃತನ ಎಸ್ಟೇಟಿನ ಉಳಿದ ಭಾಗಗಳ ಬಗ್ಗೆ ಪ್ರೊಬೇಟು ಅಥವಾ ಆಡಳಿತ ಪತ್ರಕ್ಕೆ ಹಕ್ಕುಳ್ಳವನಾದ ವ್ಯಕ್ತಿಯು ಸಂದರ್ಭಾನುಸಾರ ಮೃತನ ಎಸ್ಟೇಟಿನ ಉಳಿದ ಭಾಗಕ್ಕೆ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ಪಡೆದುಕೊಳ್ಳಬಹುದು.

### ಆಡಳಿತ ನಿರ್ವಹಣೆಯಾಗಿಲ್ಲದ ಸ್ವತ್ತುಗಳ ಬಗ್ಗೆ ನೀಡಿಕೆಗಳು

258. ಆಡಳಿತ ನಿರ್ವಹಣೆಯಾಗದೆ ಇರುವ ಸ್ವತ್ತುಗಳ ಬಗ್ಗೆ ನೀಡಿಕೆ:- ಪ್ರೊಬೇಟನ್ನು ಯಾರಿಗೆ ನೀಡಲಾಗಿದೆಯೋ ಆ ನಿರ್ವಾಹಕನು, ಮರಣ ಶಾಸನ ಕರ್ತನ ಎಸ್ಟೇಟಿನ ಒಂದು ಭಾಗದ ಆಡಳಿತವನ್ನು ನಿರ್ವಹಿಸದೇ ಬಿಟ್ಟು ಮರಣ ಹೊಂದಿದ್ದರೆ ಎಸ್ಟೇಟಿನ ಅಂಥ ಭಾಗದ ಆಡಳಿತವನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಹೊಸ ಪ್ರತಿನಿಧಿಯನ್ನು ನೇಮಕ ಮಾಡಬಹುದು.

259. ಆಡಳಿತ ನಿರ್ವಹಣೆಯಾಗದೆ ಇರುವ ಸ್ವತ್ತುಗಳ ನೀಡಿಕೆ ನಿಯಮಗಳು:- ಆಡಳಿತವನ್ನು ಪೂರ್ತಿಯಾಗಿ ನಿರ್ವಹಿಸದೇ ಇರುವ ಎಸ್ಟೇಟಿನ ಬಗ್ಗೆ ಆಡಳಿತ ಪತ್ರವನ್ನು ನೀಡಿರುವಲ್ಲಿ, ನ್ಯಾಯಾಲಯವು ಮೂಲ ನೀಡಿಕೆಗಳಿಗೆ ಅನ್ವಯಿಸುವ ನಿಯಮಗಳಿಂದ ಮಾರ್ಗದರ್ಶನವನ್ನು ಪಡೆಯತಕ್ಕುದು, ಮತ್ತು ಯಾವ ವ್ಯಕ್ತಿಗಳಿಗೆ ಮೂಲ ನೀಡಿಕೆಗಳನ್ನು ಮಾಡಬಹುದಾಗಿತ್ತೋ ಆ ವ್ಯಕ್ತಿಗಳಿಗೆ ಮಾತ್ರ ಆಡಳಿತಾಧಿಕಾರ ಪತ್ರವನ್ನು ನೀಡತಕ್ಕುದು.

260. ಪರಿಮಿತ ನೀಡಿಕೆಯು ಮುಕ್ತಾಯವಾಗಿದ್ದು ಎಸ್ಟೇಟಿನ ಕೆಲವು ಭಾಗದ ಆಡಳಿತವು ಇನ್ನೂ ನಿರ್ವಹಣೆಯಾಗದೆ ಇರುವಾಗ ಆಡಳಿತ ಪತ್ರದ ನೀಡಿಕೆ:- ಪರಿಮಿತ ನೀಡಿಕೆಯು, ಕಾಲವು ಕಳೆದು ಹೋಗಿರುವ ಕಾರಣದಿಂದ ಅಥವಾ ಅದನ್ನು ಪರಿಮಿತಗೊಳಿಸಿದಂಥ ಘಟನೆ ಅಥವಾ ಆಕಸ್ಮಿಕವು ಸಂಭವಿಸಿರುವ ಕಾರಣದಿಂದ ಮುಕ್ತಾಯವಾಗಿರುವಾಗ, ಮತ್ತು ಮೃತನ ಎಸ್ಟೇಟಿನ ಕೆಲವು ಭಾಗಗಳ ಆಡಳಿತವನ್ನು ಇನ್ನೂ ನಿರ್ವಹಿಸದೇ ಇರುವಾಗ, ಯಾರಿಗೆ ಮೂಲ ನೀಡಿಕೆಗಳನ್ನು ಮಾಡಬಹುದಾಗಿತ್ತೋ ಆ ವ್ಯಕ್ತಿಗಳಿಗೆ ಆಡಳಿತ ಪತ್ರವನ್ನು ನೀಡತಕ್ಕುದು.

## ಅಧ್ಯಾಯ - III

### ನೀಡಿಕೆಗಳ ಬದಲಾವಣೆ ಮತ್ತು ರದ್ದಿಯಾತಿ

261. ನ್ಯಾಯಾಲಯವು ಯಾವ ತಪ್ಪುಗಳನ್ನು ಸರಿಪಡಿಸಬಹುದು:- ಹೆಸರುಗಳು ಮತ್ತು ವಿವರಗಳಲ್ಲಿನ ಅಥವಾ ಮೃತನ ಮರಣದ ಕಾಲ ಮತ್ತು ಸ್ಥಳಗಳನ್ನು ನಮೂದಿಸುವಲ್ಲಿನ ಅಥವಾ ಪರಿಮಿತ ನೀಡಿಕೆಯ ಉದ್ದೇಶದಲ್ಲಿನ ತಪ್ಪುಗಳನ್ನು ನ್ಯಾಯಾಲಯವು ಸರಿಪಡಿಸಬಹುದು ಮತ್ತು ಪ್ರೊಬೇಟು ಅಥವಾ ಆಡಳಿತ ಪತ್ರದ ನೀಡಿಕೆಯನ್ನು ತದನುಸಾರವಾಗಿ ಬದಲಾಯಿಸಬಹುದು ಮತ್ತು ತಿದ್ದುಪಡಿ ಮಾಡಬಹುದು.

262. ಉಯಿಲನ್ನು ಲಗತ್ತಿಸಿ ಆಡಳಿತ ಪತ್ರವನ್ನು ನೀಡಿದ ತರುವಾಯ ಮರಣ ಶಾಸನದ ಅನುಬಂಧವು ಕಂಡುಬಂದಲ್ಲಿ ಪ್ರಕ್ರಿಯೆ:-ಉಯಿಲನ್ನು ಲಗತ್ತಿಸಿ ಆಡಳಿತ ಪತ್ರವನ್ನು ನೀಡಿದ ತರುವಾಯ ಮರಣಶಾಸನದ ಅನುಬಂಧವು ಕಂಡುಬಂದರೆ, ಅದನ್ನು ಕ್ರಮಬದ್ಧವಾಗಿ ರುಜುವಾತು ಮಾಡಿ ಗುರುತಿಸಿದ ಮೇಲೆ ಆ ನೀಡಿಕೆಗೆ ಸೇರಿಸಬಹುದು, ಮತ್ತು ಆ ನೀಡಿಕೆಯನ್ನು ತದನುಸಾರವಾಗಿ ಬದಲಾಯಿಸಬಹುದು ಮತ್ತು ತಿದ್ದುಪಡಿ ಮಾಡಬಹುದು.

263. ನ್ಯಾಯಸಮ್ಮತ ಕಾರಣಕ್ಕಾಗಿ ರದ್ದಿಯಾತಿ ಅಥವಾ ಶೂನ್ಯಗೊಳಿಸುವಿಕೆ:- ಪ್ರೊಬೇಟು ಅಥವಾ ಆಡಳಿತಾಧಿಕಾರ ಪತ್ರದ ನೀಡಿಕೆಯನ್ನು ನ್ಯಾಯಸಮ್ಮತ ಕಾರಣಕ್ಕಾಗಿ ರದ್ದುಗೊಳಿಸಬಹುದು ಅಥವಾ ಶೂನ್ಯಗೊಳಿಸಬಹುದು.

ವಿವರಣೆ:- ಕೆಳಕಂಡ ಸಂದರ್ಭಗಳಲ್ಲಿ ನ್ಯಾಯ ಸಮ್ಮತ ಕಾರಣವಿದೆಯೆಂದು ಭಾವಿಸತಕ್ಕದ್ದು, ಎಂದರೆ,-

(ಎ) ಮಂಜೂರಾತಿಯನ್ನು ಪಡೆಯಲು ನಡೆಸಿದ ವ್ಯವಹರಣೆ ನ್ಯಾಯ ಸಮ್ಮತವಾಗಿ ದೋಷಪೂರ್ಣವಾಗಿದ್ದಲ್ಲಿ ; ಅಥವಾ

(ಬಿ) ಸುಳ್ಳು ಸೂಚನೆಯನ್ನು ಮಾಡುವ ಮೂಲಕ ಅಥವಾ ಆ ಪ್ರಕರಣಕ್ಕೆ ಮುಖ್ಯವಾದ ಯಾವುದೇ ವಿಷಯವನ್ನು ನ್ಯಾಯಾಲಯದಿಂದ ಮರೆಮಾಚುವ ಮೂಲಕ ಮೋಸದಿಂದ ನೀಡಿಕೆಯನ್ನು ಪಡೆದುಕೊಂಡಿರುವಲ್ಲಿ ; ಅಥವಾ

(ಸಿ) ಆ ನೀಡಿಕೆಯನ್ನು ಸಮರ್ಥಿಸಿಕೊಳ್ಳಲು ಕಾನೂನಿನ ಅಂಶದಲ್ಲಿ ಅತ್ಯಾವಶ್ಯಕವಾದ ಸಂಗತಿಯನ್ನು ಅಸತ್ಯವಾದ ಹೇಳಿಕೆಯ ಮೂಲಕ, ಅಂಥ ಹೇಳಿಕೆಯನ್ನು ತಿಳಿಯದೇ ಅಥವಾ ಅಜಾಗರೂಕತೆಯಿಂದ ಮಾಡಿದ್ದಾಗ್ಯೂ, ಪಡೆಯಲಾಗಿರುವಲ್ಲಿ ; ಅಥವಾ

(ಡಿ) ಸನ್ನಿವೇಶಗಳಿಂದಾಗಿ ಆ ನೀಡಿಕೆಯು ನಿರುಪಯುಕ್ತ ಮತ್ತು ಅಪ್ರವರ್ತನೀಯವಾಗಿರುವಲ್ಲಿ ; ಅಥವಾ

(ಇ) ಯಾವ ವ್ಯಕ್ತಿಗೆ ಆ ನೀಡಿಕೆಯನ್ನು ಮಾಡಲಾಗಿತ್ತೋ ಆ ವ್ಯಕ್ತಿಯು ಉದ್ದೇಶಪೂರ್ವಕವಾಗಿ ಮತ್ತು ಯುಕ್ತ ಕಾರಣವಿಲ್ಲದೆ ಈ ಭಾಗದ VII ನೇ ಅಧ್ಯಾಯದ ಉಪಬಂಧಗಳಿಗೆ ಅನುಸಾರವಾಗಿ ವಿವರಣ ಪಟ್ಟಿ ಅಥವಾ ಲೆಕ್ಕವನ್ನು ಪ್ರದರ್ಶಿಸಲು ತಪ್ಪಿರುವಲ್ಲಿ ಅಥವಾ ಮುಖ್ಯ ವಿಷಯದಲ್ಲಿ ಅಸತ್ಯವಾಗಿರುವಂಥ ವಿವರಣ ಪಟ್ಟಿಯನ್ನು ಅಥವಾ ಲೆಕ್ಕವನ್ನು ಆ ಅಧ್ಯಾಯದ ಮೇರೆಗೆ ಪ್ರದರ್ಶಿಸಿರುವಲ್ಲಿ.

### ದೃಷ್ಟಾಂತಗಳು

(i) ಪ್ರೊಬೇಟ್ ಅಥವಾ ಆಡಳಿತ ಪತ್ರವನ್ನು ನೀಡಿದ್ದ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇರಲಿಲ್ಲ.

(ii) ಕರೆಯಬೇಕಾಗಿದ್ದ ಪಕ್ಷಕಾರರನ್ನು ಕರೆಯದೆಯೇ ಅದನ್ನು ನೀಡಲಾಗಿತ್ತು.

(iii) ಯಾವ ಉಯಿಲಿನ ಪ್ರೊಬೇಟನ್ನು ಪಡೆಯಲಾಗಿದ್ದಿತೋ ಅದು ಸೃಷ್ಟನೆಯಾದ ಅಥವಾ ರದ್ದುಪಡಿಸಲಾದ ಉಯಿಲಾಗಿತ್ತು.

(iv) "ಎ" ಳು 'ಬಿ' ನ ಎಸ್ಟೇಟಿಗೆ ಅವನ ವಿಧವೆ ಎಂದು ಆಡಳಿತ ಪತ್ರವನ್ನು ಪಡೆದುಕೊಂಡಳು, ಆದರೆ ಅವಳು ಅವನನ್ನು ಮದುವೆಯೇ ಆಗಿರಲಿಲ್ಲವೆಂದು ಈಚೆಗೆ ಗೊತ್ತಾಯಿತು.

(v) 'ಎ' ನು 'ಬಿ' ನ ಎಸ್ಟೇಟಿಗೆ ಅವನು ಮರಣ ಶಾಸನ ರಹಿತನಾಗಿ ಮರಣ ಹೊಂದಿದ್ದಿದ್ದರೆ ಹೇಗೋ ಹಾಗೆ ಆಡಳಿತ ಪತ್ರವನ್ನು ಪಡೆದುಕೊಂಡಿದ್ದಾನೆ. ಆದರೆ ಈಚೆಗೆ ಉಯಿಲು ಕಂಡು ಬಂದಿದೆ.

(vi) ಪ್ರೊಬೇಟನ್ನು ನೀಡಿದ ಮೇಲೆ, ತರುವಾಯದ ಒಂದು ಉಯಿಲು ಕಂಡುಬಂದಿದೆ.

(vii) ಪ್ರೊಬೇಟನ್ನು ನೀಡಿದ ಮೇಲೆ ಉಯಿಲಿನ ಅನುಬಂಧವು ಕಂಡುಬಂದಿದ್ದು, ಅದು ಉಯಿಲಿನ ಮೇರೆಗಿನ ನಿರ್ವಾಹಕನ ನೇಮಕವನ್ನು ರದ್ದುಪಡಿಸುತ್ತದೆ ಅಥವಾ ಜೊತೆಗೆ ಸೇರಿಸುತ್ತದೆ.

(viii) ಯಾವ ವ್ಯಕ್ತಿಗೆ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ನೀಡಲಾಗಿದೆಯೋ ಆ ವ್ಯಕ್ತಿಯು ತರುವಾಯ ಅಸ್ವಸ್ಥಚಿತ್ತನಾಗಿದ್ದಾನೆ.

## ಅಧ್ಯಾಯ - IV

### ಪ್ರೊಬೇಟುಗಳು ಮತ್ತು ಆಡಳಿತ ಪತ್ರವನ್ನು ನೀಡುವ ಮತ್ತು ರದ್ದುಗೊಳಿಸುವ ಪದ್ಧತಿಯ ಬಗ್ಗೆ

264. ಪ್ರೊಬೇಟುಗಳು ಇತ್ಯಾದಿಗಳನ್ನು ನೀಡುವುದು ಮತ್ತು ರದ್ದುಪಡಿಸುವಲ್ಲಿ ಜಿಲ್ಲಾ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿ:- (1) ಜಿಲ್ಲಾ ನ್ಯಾಯಾಧೀಶನು ತನ್ನ ಜಿಲ್ಲೆಯೊಳಗಿನ ಎಲ್ಲ ಪ್ರಕರಣಗಳಲ್ಲಿ ಪ್ರೊಬೇಟುಗಳು ಮತ್ತು ಆಡಳಿತ ಪತ್ರವನ್ನು ನೀಡಲು ಮತ್ತು ಅವುಗಳನ್ನು ರದ್ದುಗೊಳಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು.

(2) 57ನೇ ಪ್ರಕರಣವು ಅನ್ವಯಿಸುವಂಥ ಪ್ರಕರಣಗಳನ್ನು ಹೊರತುಪಡಿಸಿ, ಕಲ್ಕತ್ತ, ಮದ್ರಾಸು ಮತ್ತು ಮುಂಬೈ ಪಟ್ಟಣಗಳ ಪರಿಮಿತಿಗಳಾಚೆಗಿನ ಯಾವುದೇ ಸ್ಥಳೀಯ ಪ್ರದೇಶದಲ್ಲಿನ ಯಾವುದೇ ನ್ಯಾಯಾಲಯವು, ಮೃತನು ಹಿಂದು, ಮಹಮದೀಯ, ಬೌದ್ಧ, ಸಿಖ್ ಅಥವಾ ಜೈನ್ ಅಥವಾ ವಿನಾಯಿತಿ ಪಡೆದ ವ್ಯಕ್ತಿಯಾಗಿರುವಲ್ಲಿ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಪ್ರೊಬೇಟು ಅಥವಾ ಆಡಳಿತ ಪತ್ರಕ್ಕಾಗಿ ಅರ್ಜಿಗಳನ್ನು ಸ್ವೀಕರಿಸಲು ಅದನ್ನು ಅಧಿಕೃತಗೊಳಿಸುವವರೆಗೆ ಹಾಗೆ ಸ್ವೀಕರಿಸತಕ್ಕುದಲ್ಲ.

265. ವಿವಾದವಿಲ್ಲದ ಪ್ರಕರಣಗಳಲ್ಲಿ ವ್ಯವಹರಿಸಲು ಜಿಲ್ಲಾ ನ್ಯಾಯಾಧೀಶನ ಪ್ರತಿನಿಧಿಯನ್ನು ನೇಮಕ ಮಾಡುವ ಅಧಿಕಾರ:- (1) ಉಚ್ಚ ನ್ಯಾಯಾಲಯವು ತಾನು ಯುಕ್ತವೆಂದು ಯೋಚಿಸುವಂಥ ಯಾವುದೇ ಜಿಲ್ಲೆಯೊಳಗಿನ ನ್ಯಾಯಿಕ ಅಧಿಕಾರಿಗಳನ್ನು ವಿವಾದವಿಲ್ಲದ ಪ್ರಕರಣಗಳಲ್ಲಿ ಪ್ರೊಬೇಟು ಮತ್ತು ಆಡಳಿತ ಪತ್ರವನ್ನು ನೀಡಲು, ತಾನು ನಿಯಮಿಸಬಹುದಾದಂಥ ಸ್ಥಳೀಯ ಪರಿಮಿತಿಗಳೊಳಗೆ ಜಿಲ್ಲಾ ನ್ಯಾಯಾಧೀಶನ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಲು ನೇಮಕ ಮಾಡಬಹುದು :

ಪರಂತು, ರಾಯಲ್ ಚಾರ್ಟರಿನ ಮೂಲಕ ಸ್ಥಾಪಿತವಾಗಿಲ್ಲದ ಉಚ್ಚ ನ್ಯಾಯಾಲಯಗಳ ಸಂದರ್ಭದಲ್ಲಿ ಅಂಥ ನೇಮಕಾತಿಯನ್ನು ಆ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೆ ಮಾಡತಕ್ಕುದಲ್ಲ.

(2) ಹಾಗೆ ನೇಮಕಗೊಂಡ ವ್ಯಕ್ತಿಗಳನ್ನು "ಜಿಲ್ಲಾ ಪ್ರತಿನಿಧಿಗಳು" ಎಂದು ಕರೆಯತಕ್ಕುದು.

266. ಪ್ರೊಬೇಟು ಮತ್ತು ಆಡಳಿತ ಪತ್ರವನ್ನು ನೀಡುವ ಬಗ್ಗೆ ಜಿಲ್ಲಾ ನ್ಯಾಯಾಧೀಶನ ಅಧಿಕಾರಗಳು:- ಜಿಲ್ಲಾ ನ್ಯಾಯಾಧೀಶನು, ಪ್ರೊಬೇಟು ಮತ್ತು ಆಡಳಿತ ಪತ್ರವನ್ನು ನೀಡುವುದಕ್ಕೆ ಸಂಬಂಧಪಟ್ಟಂತೆ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿ ತನ್ನ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ಯಾವುದೇ ಸಿವಿಲ್ ದಾವೆ ಅಥವಾ ವ್ಯವಹರಣೆಗಳಿಗೆ ಸಂಬಂಧಪಟ್ಟಂತೆ ಕಾನೂನು ಮೂಲಕ ಅವನಲ್ಲಿ ನಿಹಿತಗೊಂಡಿರುವಂಥವೇ ಆದ ಅಧಿಕಾರಗಳು ಮತ್ತು ಪ್ರಾಧಿಕಾರವನ್ನು ಹೊಂದಿರತಕ್ಕುದು.

267. ಮರಣಶಾಸನಿಕ ಕಾಗದ ಪತ್ರಗಳನ್ನು ಹಾಜರುಪಡಿಸಲು ಜಿಲ್ಲಾ ನ್ಯಾಯಾಧೀಶನು ವ್ಯಕ್ತಿಗೆ ಆದೇಶಿಸಬಹುದು:- (1) ಜಿಲ್ಲಾ ನ್ಯಾಯಾಧೀಶನು, ಯಾವನೇ ವ್ಯಕ್ತಿಯ ಸ್ವಾಧೀನದಲ್ಲಿದೆ ಅಥವಾ ನಿಯಂತ್ರಣದಲ್ಲಿವೆ ಎಂದು ಕಂಡುಬರಬಹುದಾದಂಥ ಮರಣಶಾಸನಿಕ ಅಥವಾ ಹಾಗೆಂದು ತಾತ್ಪರ್ಯವಾಗುವ ಯಾವುದೇ ಕಾಗದ ಪತ್ರ ಅಥವಾ ಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಮತ್ತು ಅಲ್ಲಿಗೆ ತರುವಂತೆ ಅಂಥ ವ್ಯಕ್ತಿಗೆ ಆದೇಶಿಸಬಹುದು.

(2) ಅಂಥ ವ್ಯಕ್ತಿಯ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಯಾವುದೇ ಅಂಥ ಕಾಗದ ಪತ್ರ ಅಥವಾ ಬರಹವು ಇದೆ ಎಂದು ಕಂಡುಬರದಿದ್ದು, ಅಂಥ ಕಾಗದ ಪತ್ರ ಅಥವಾ ಬರಹದ ಬಗ್ಗೆ ಅವನಿಗೆ ತಿಳಿವಳಿಕೆ ಇದೆ ಎಂದು ನಂಬಲು ಕಾರಣವಿದ್ದರೆ, ನ್ಯಾಯಾಲಯವು ಅದಕ್ಕೆ ಸಂಬಂಧಿಸಿದಂತೆ ಪರೀಕ್ಷೆಗೆ ಒಳಗಾಗುವ ಉದ್ದೇಶಕ್ಕಾಗಿ ಹಾಜರಾಗಲು ಅಂತಹ ವ್ಯಕ್ತಿಗೆ ನಿರ್ದೇಶಿಸಬಹುದು.

(3) ಅಂಥ ವ್ಯಕ್ತಿಯು, ನ್ಯಾಯಾಲಯವು ಅವನಿಗೆ ಕೇಳಬಹುದಾದಂಥ ಪ್ರಶ್ನೆಗಳಿಗೆ ನಿಜವಾದ ಉತ್ತರವನ್ನು ಕೊಡಲು ಮತ್ತು ಅಂಥ ಕಾಗದ ಪತ್ರ ಅಥವಾ ಬರಹವನ್ನು ಹಾಜರುಪಡಿಸಲು ಮತ್ತು ತರಲು ಆದೇಶಿಸಿದರೆ ಹಾಗೆ ಮಾಡಲು ಬದ್ಧವಾಗಿರತಕ್ಕದ್ದು ಮತ್ತು ಹಾಜರಾಗಲು, ಅಂಥ ಪ್ರಶ್ನೆಗಳಿಗೆ ಉತ್ತರ ಕೊಡಲು ಅಥವಾ ಅಂಥ ಕಾಗದ ಪತ್ರ ಅಥವಾ ಬರಹವನ್ನು ತರಲು ತಪ್ಪಿದ ಸಂದರ್ಭದಲ್ಲಿ ಅವನು ದಾವೆಗೆ ಪಕ್ಷಕಾರನಾಗಿದ್ದಿದ್ದರೆ ಮತ್ತು ಅಂಥ ತಪ್ಪಿತವನ್ನು ಮಾಡಿದ್ದಿದ್ದರೆ ಅವನು ಭಾರತ ದಂಡ ಸಂಹಿತೆಯ ಮೇರೆಗೆ ಒಳಗಾಗಬಹುದಾಗಿದ್ದಂಥದೇ (1860ರ 45) ಶಿಕ್ಷೆಗೆ ಒಳಗಾಗತಕ್ಕುದು.

(4) ವ್ಯವಹರಣೆಯ ಖರ್ಚುಗಳು ನ್ಯಾಯಾಧೀಶನ ವಿವೇಚನೆಗನುಸಾರವಾಗಿರತಕ್ಕುದು.

268. ಪ್ರೊಬೇಟು ಮತ್ತು ಆಡಳಿತ ಪತ್ರಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ನ್ಯಾಯಾಧೀಶನ ನ್ಯಾಯಾಲಯದ ವ್ಯವಹರಣೆಗಳು:- ಪ್ರೊಬೇಟು ಮತ್ತು ಆಡಳಿತ ಪತ್ರವನ್ನು ನೀಡುವುದಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ನ್ಯಾಯಾಧೀಶನ ನ್ಯಾಯಾಲಯದ ವ್ಯವಹರಣೆಗಳು ಇಲ್ಲಿ ಇನ್ನು ಮುಂದೆ ಅನ್ಯಥಾ ಉಪಬಂಧಿಸಿದ್ದಂತೆ ಹೊರತು ಪ್ರಕರಣದ ಸನ್ನಿವೇಶಗಳು ಅವಕಾಶ ಕೊಡುವಷ್ಟರ ಮಟ್ಟಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ರ ಮೂಲಕ ವಿನಿಯಮಿತವಾಗತಕ್ಕುದು.

269. ಸ್ವತ್ತಿನ ಸಂರಕ್ಷಣೆಗಾಗಿ ಯಾವಾಗ ಮತ್ತು ಹೇಗೆ ಜಿಲ್ಲಾ ನ್ಯಾಯಾಧೀಶನು ಮಧ್ಯ ಪ್ರವೇಶಿಸಬಹುದು:- (1) ಮೃತನ ಉಯಿಲಿನ ಪ್ರೊಬೇಟನ್ನು ನೀಡುವ ಅಥವಾ ಅವನ ಎಸ್ಟೇಟಿಗೆ ಒಬ್ಬ ಆಡಳಿತಗಾರನನ್ನು ನೇಮಿಸುವವರೆಗೆ, ಯಾವ ಜಿಲ್ಲಾ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿಯಲ್ಲಿ ಮೃತನ ಸ್ವತ್ತಿನ ಯಾವುದೇ ಭಾಗವು ಇದೆಯೋ ಆ ಜಿಲ್ಲಾ ನ್ಯಾಯಾಧೀಶನನ್ನು, ಆ ಸ್ವತ್ತಿನಲ್ಲಿ ಹಿತಾಸಕ್ತಿಯು ಇರುವುದಾಗಿ ಕ್ಲೇಮು ಮಾಡುವ ಯಾವನೇ ವ್ಯಕ್ತಿಯ ಕೋರಿಕೆಯ ಮೇಲೆ ಮತ್ತು ಆ ಸ್ವತ್ತು ನಷ್ಟ ಅಥವಾ ಹಾನಿಯ ಯಾವುದೇ ಅಪಾಯಕ್ಕೆ ಒಳಗಾಗುವುದೆಂದು ನ್ಯಾಯಾಧೀಶನು ಪರ್ಯಾಲೋಚಿಸುವ ಎಲ್ಲ ಇತರ ಪ್ರಕರಣಗಳಲ್ಲಿ ಅಂಥ ಸ್ವತ್ತಿನ ಸಂರಕ್ಷಣೆಗಾಗಿ ಮಧ್ಯ ಪ್ರವೇಶಿಸಲು, ಮತ್ತು ಆ ಉದ್ದೇಶಕ್ಕಾಗಿ ಅವನು ಸೂಕ್ತವೆಂದು ಯೋಚಿಸಿದರೆ, ಆ ಸ್ವತ್ತಿನ ಸ್ವಾಧೀನವನ್ನು ತೆಗೆದುಕೊಳ್ಳುವುದಕ್ಕಾಗಿ ಮತ್ತು ಅದನ್ನು ಇಟ್ಟುಕೊಳ್ಳುವುದಕ್ಕಾಗಿ ಒಬ್ಬ ಅಧಿಕಾರಿಯನ್ನು ನೇಮಿಸಲು ಅಧಿಕೃತಗೊಳಿಸಲಾಗಿದೆ ಮತ್ತು ಅಗತ್ಯಪಡಿಸಲಾಗಿದೆ.

(2) ಮೃತನು ಹಿಂದು, ಮಹಮದೀಯ, ಬೌದ್ಧ , ಸಿಖ್ ಅಥವಾ ಜೈನ ಅಥವಾ ವಿನಾಯಿತಿ ಪಡೆದ ವ್ಯಕ್ತಿಯಾಗಿರುವಾಗ, ಈ ಪ್ರಕರಣವು ಅನ್ವಯವಾಗತಕ್ಕುದಲ್ಲ, ಮತ್ತು ಮರಣಶಾಸನ ರಹಿತನಾಗಿ ಮರಣ ಹೊಂದಿದ ಭಾರತೀಯ ಕ್ರೈಸ್ತನ ಸ್ವತ್ತಿನ ಯಾವುದೇ ಭಾಗಕ್ಕೆ ಅನ್ವಯವಾಗತಕ್ಕುದಲ್ಲ.

270. ಜಿಲ್ಲಾ ನ್ಯಾಯಾಧೀಶನು ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ಯಾವಾಗ ನೀಡಬಹುದು:- ಜಿಲ್ಲಾ ನ್ಯಾಯಾಧೀಶನು ಉಯಿಲಿನ ಪ್ರೊಬೇಟನ್ನು ಅಥವಾ ಮೃತನ ಎಸ್ಟೇಟಿಗೆ ಆಡಳಿತ ಪತ್ರವನ್ನು ತನ್ನ ನ್ಯಾಯಾಲಯದ ಮೊಹರಿನೊಂದಿಗೆ, ಸಂದರ್ಭಾನುಸಾರ

ಮರಣಶಾಸನ ಕರ್ತನಿಗೆ ಅಥವಾ ಮರಣಶಾಸನ ರಹಿತನಿಗೆ ಅವನ ಮರಣದ ಕಾಲದಲ್ಲಿ ಆ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿಯೊಳಗೆ ಒಂದು ನಿಗದಿಯಾದ ವಾಸಸ್ಥಳ ಅಥವಾ ಯಾವುದೇ ಚರ ಅಥವಾ ಸ್ಥಿರ ಸ್ವತ್ತು ಇದ್ದಿತೆಂದು ಇನ್ನು ಮುಂದೆ ಉಪಬಂಧಿಸಿದಂತೆ ಸತ್ಯಾಪಿತವಾದಂಥ, ಅದಕ್ಕಾಗಿ ಅರ್ಜಿ ಹಾಕಿಕೊಂಡಿರುವ ವ್ಯಕ್ತಿಯ ಅರ್ಜಿಯ ಮೂಲಕ ಕಂಡುಬಂದರೆ ಅಂಥ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ನೀಡಬಹುದು.

271. ಯಾವ ಜಿಲ್ಲೆಯೊಳಗೆ ಮೃತನಿಗೆ ನಿಗದಿತ ವಾಸಸ್ಥಳವಿದ್ದಿಲ್ಲವೋ ಆ ಜಿಲ್ಲೆಯ ನ್ಯಾಯಾಧೀಶನಿಗೆ ಹಾಕಿಕೊಂಡ ಅರ್ಜಿಯ ವಿಲೇವಾರಿ:- ಯಾವ ಜಿಲ್ಲೆಯೊಳಗೆ ಮೃತನಿಗೆ ನಿಗದಿತ ವಾಸಸ್ಥಳವಿದ್ದಿಲ್ಲವೋ ಆ ಜಿಲ್ಲೆಯ ನ್ಯಾಯಾಧೀಶನಿಗೆ ಅರ್ಜಿಯನ್ನು ಹಾಕಿಕೊಂಡಾಗ, ಆ ಅರ್ಜಿಯನ್ನು ತನ್ನ ವಿವೇಚನಾನುಸಾರ, ಬೇರೆ ಜಿಲ್ಲೆಯಲ್ಲಿ ಆ ಅರ್ಜಿಯನ್ನು ಹೆಚ್ಚು ನ್ಯಾಯಸಮ್ಮತವಾಗಿ ಅಥವಾ ಅನುಕೂಲಕರವಾಗಿ ವಿಲೆ ಮಾಡಬಹುದೆಂದು ಅವನು ತೀರ್ಮಾನಿಸಿದ್ದರೆ, ಅವನು ತಿರಸ್ಕರಿಸತಕ್ಕುದು ಅಥವಾ ಆ ಅರ್ಜಿಯು ಆಡಳಿತ ಪತ್ರಕ್ಕಾಗಿರುವಲ್ಲಿ ಅದನ್ನು ನಿರುಪಾಧಿಕವಾಗಿ ಅಥವಾ ತನ್ನ ಅಧಿಕಾರ ವ್ಯಾಪ್ತಿಯೊಳಗಿರುವ ಸ್ವತ್ತಿಗೆ ಪರಿಮಿತಿಗೊಳಿಸಿ ನೀಡತಕ್ಕುದು.

272. ಪ್ರತಿನಿಧಿಯು ಪ್ರೊಬೇಟು ಮತ್ತು ಆಡಳಿತ ಪತ್ರವನ್ನು ನೀಡಬಹುದು:- ಪ್ರೊಬೇಟು ಮತ್ತು ಆಡಳಿತ ಪತ್ರದ ಉದ್ದೇಶಕ್ಕಾಗಿ ಯಾವನೇ ಜಿಲ್ಲಾ ಪ್ರತಿನಿಧಿಗೆ ಅರ್ಜಿಯನ್ನು ಸಲ್ಲಿಸಿದ ಮೇಲೆ, ವಿವಾದವಿಲ್ಲದಿರುವ ಯಾವುದೇ ಪ್ರಕರಣದಲ್ಲಿ, ಸಂದರ್ಭಾನುಸಾರ ಮರಣ ಶಾಸನಕರ್ತನಿಗೆ ಅಥವಾ ಮರಣಶಾಸನ ರಹಿತನಿಗೆ, ಅವನ ಮರಣದ ಕಾಲದಲ್ಲಿ ಅಂಥ ಪ್ರತಿನಿಧಿಯ ಅಧಿಕಾರ ವ್ಯಾಪ್ತಿಯೊಳಗೆ ನಿಗದಿಯಾದ ವಾಸಸ್ಥಳವಿದ್ದಿತೆಂದು ಇನ್ನು ಮುಂದೆ ಉಪಬಂಧಿಸಿದಂತೆ ಸತ್ಯಾಪಿತವಾದಂಥ ಅರ್ಜಿಯ ಮೂಲಕ ಕಂಡುಬಂದರೆ, ಆ ಪ್ರತಿನಿಧಿಯು ಪ್ರೊಬೇಟು ಮತ್ತು ಆಡಳಿತ ಪತ್ರವನ್ನು ನೀಡಬಹುದು.

273. ಪ್ರೊಬೇಟು ಅಥವಾ ಆಡಳಿತ ಪತ್ರವು ನಿರ್ಣಾಯಕವಾಗಿರುವುದು:- ಪ್ರೊಬೇಟು ಅಥವಾ ಆಡಳಿತ ಪತ್ರವು ಅದನ್ನು ಯಾವ ರಾಜ್ಯದಲ್ಲಿ ನೀಡಲಾಗಿದೆಯೋ ಆ ರಾಜ್ಯದಾದ್ಯಂತ ಇರುವ ಮೃತನ ಚರ ಅಥವಾ ಸ್ಥಿರ ಸ್ವತ್ತು ಮತ್ತು ಎಸ್ಟೇಟಿನ ಸಂಬಂಧದಲ್ಲಿ ಪರಿಣಾಮಕಾರಿಯಾಗಿರತಕ್ಕುದು ಮತ್ತು ಮೃತನ ಎಲ್ಲ ಋಣಿಗಳ ಮತ್ತು ಅವನಿಗೆ ಸೇರಿದ ಸ್ವತ್ತನ್ನು ಹೊಂದಿರುವ ಎಲ್ಲ ವ್ಯಕ್ತಿಗಳ ಸಂಬಂಧದಲ್ಲಿ ಪ್ರಾತಿನಿಧಿಕ ಹಕ್ಕಿನ ಬಗ್ಗೆ ನಿರ್ಣಾಯಕವಾಗಿರತಕ್ಕುದು ಮತ್ತು ಅವರ ಸಾಲಗಳನ್ನು ಸಂದಾಯ ಮಾಡುವ ಎಲ್ಲ ಋಣಿಗಳಿಗೆ ಮತ್ತು ಅಂಥ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ಯಾವ ವ್ಯಕ್ತಿಗೆ ನೀಡಲಾಗಿದೆಯೋ ಆ ವ್ಯಕ್ತಿಗೆ ಅಂಥ ಸ್ವತ್ತನ್ನು ವಶಾವಣೆ ಮಾಡುವ ಎಲ್ಲ ವ್ಯಕ್ತಿಗಳಿಗೆ ಪೂರ್ತಿ ನಷ್ಟ ಭರ್ತಿಯನ್ನು ಒದಗಿಸತಕ್ಕುದು:

ಪರಂತು,

(ಎ) ಉಚ್ಚ ನ್ಯಾಯಾಲಯವು ; ಅಥವಾ

(ಬಿ) ಜಿಲ್ಲಾ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿಯೊಳಗೆ ಮೃತನು ತನ್ನ ಮರಣದ ಕಾಲದಲ್ಲಿ ನಿಗದಿಯಾದ ವಾಸಸ್ಥಳವಿದ್ದು, ಅಂಥ ನ್ಯಾಯಾಧೀಶನು ಆ ರಾಜ್ಯದ ಪರಿಮಿತಿಗಳಾಚೆಗೆ ಇರುವ ಬಾಧಿತ ಸ್ವತ್ತಿನ ಮತ್ತು ಎಸ್ಟೇಟಿನ ಮೌಲ್ಯವು ಹತ್ತು ಸಾವಿರ ರೂಪಾಯಿಗಳಿಗೆ ಮೀರುವುದಿಲ್ಲ ಎಂಬುದಾಗಿ ಪ್ರಮಾಣೀಕರಿಸಿರುವಲ್ಲಿ , ಜಿಲ್ಲಾ ನ್ಯಾಯಾಧೀಶನು ನೀಡಿರುವ ಪ್ರೊಬೇಟುಗಳು ಮತ್ತು ಆಡಳಿತ ಪತ್ರಗಳು, ಆ ನೀಡಿಕೆಯಿಂದ ಅನ್ಯಥಾ ನಿರ್ದೇಶಿತವಾಗಿರುವ ಹೊರತು, ಆ ಇತರ ರಾಜ್ಯಗಳಾದ್ಯಂತ ಅದೇ ಬಗೆಯ ಪರಿಣಾಮವನ್ನು ಹೊಂದಿರತಕ್ಕುದು.

ಈ ಪ್ರಕರಣದ ಪರಂತುಕವು ಭಾರತದಲ್ಲಿ, ಭಾರತದಿಂದ ಬರ್ಮ ಮತ್ತು ಎಡನ್‌ಗಳು ಪ್ರತ್ಯೇಕಗೊಂಡ ತರುವಾಯ, ಆ ಪ್ರತ್ಯೇಕತೆಯ ದಿನಾಂಕಕ್ಕಿಂತ ಮುಂಚೆ ಬರ್ಮ ಮತ್ತು ಎಡನ್‌ಗಳಲ್ಲಿ ಅಥವಾ ಆ ದಿನಾಂಕದ ತರುವಾಯ, ಆ ದಿನಾಂಕದಂದು ಇತ್ಯರ್ಥದಲ್ಲಿದ್ದಂಥ ವ್ಯವಹರಣೆಗಳಲ್ಲಿ ನೀಡಲಾದ ಪ್ರೊಬೇಟುಗಳು ಮತ್ತು ಆಡಳಿತ ಪತ್ರಕ್ಕೆ ಅನ್ವಯವಾಗತಕ್ಕುದು.

ಈ ಪರಂತುಕವು ಭಾರತದಲ್ಲಿ, ಪಾಕಿಸ್ತಾನವು ಭಾರತದಿಂದ ಪ್ರತ್ಯೇಕಗೊಂಡ ತರುವಾಯ, ಆ ಪ್ರತ್ಯೇಕತೆಯ ದಿನಾಂಕಕ್ಕಿಂತ ಮುಂಚೆ ಅಥವಾ ಆ ದಿನಾಂಕದ ತರುವಾಯ ಪಾಕಿಸ್ತಾನವಾಗಿ ರಚಿತವಾದ ಯಾವುದೇ ರಾಜ್ಯ ಕ್ಷೇತ್ರದಲ್ಲಿ ಆ ದಿನಾಂಕದಂದು ಇತ್ಯರ್ಥದಲ್ಲಿದ್ದ ವ್ಯವಹರಣೆಗಳಲ್ಲಿ ನೀಡಿದ ಪ್ರೊಬೇಟುಗಳಿಗೆ ಮತ್ತು ಆಡಳಿತ ಪತ್ರಗಳಿಗೂ ಸಹ ಅನ್ವಯವಾಗತಕ್ಕುದು.

274. 273ನೇ ಪ್ರಕರಣದ ಪರಂತುಕದ ಮೇರೆಗೆ ನೀಡಿದ ಪ್ರಮಾಣಪತ್ರವನ್ನು ಉಚ್ಚ ನ್ಯಾಯಾಲಯಕ್ಕೆ ರವಾನಿಸುವುದು:- (1) 273ನೇ ಪ್ರಕರಣದ ಪರಂತುಕದಲ್ಲಿ ಉಲ್ಲೇಖಿಸಲಾದ ಪರಿಣಾಮದೊಂದಿಗೆ, ಉಚ್ಚ ನ್ಯಾಯಾಲಯವು ಅಥವಾ ಜಿಲ್ಲಾ ನ್ಯಾಯಾಧೀಶನು ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ನೀಡಿರುವಲ್ಲಿ ಆ ಉಚ್ಚ ನ್ಯಾಯಾಲಯವು ಅಥವಾ ಜಿಲ್ಲಾ ನ್ಯಾಯಾಧೀಶನು ಅದರ ಪ್ರಮಾಣ ಪತ್ರವನ್ನು ಕೆಳಕಂಡ ನ್ಯಾಯಾಲಯಗಳಿಗೆ ಕಳಿಸತಕ್ಕುದು, ಎಂದರೆ:-

(ಎ) ಒಂದು ಉಚ್ಚ ನ್ಯಾಯಾಲಯವು ನೀಡಿರುವಾಗ ಇತರ ಪ್ರತಿಯೊಂದು ಉಚ್ಚ ನ್ಯಾಯಾಲಯಕ್ಕೆ;

(ಬಿ) ಜಿಲ್ಲಾ ನ್ಯಾಯಾಧೀಶನು ನೀಡಿರುವಾಗ, ಯಾವ ಉಚ್ಚ ನ್ಯಾಯಾಲಯಕ್ಕೆ ಅಂಥ ನ್ಯಾಯಾಧೀಶನು ಅಧೀನವಾಗಿರುವನೋ ಆ ಉಚ್ಚ ನ್ಯಾಯಾಲಯಕ್ಕೆ ಮತ್ತು ಇತರ ಪ್ರತಿಯೊಂದು ಉಚ್ಚ ನ್ಯಾಯಾಲಯಕ್ಕೆ;

(2) (1) ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಪ್ರಮಾಣ ಪತ್ರವನ್ನು IV ನೇ ಅನುಸೂಚಿಯಲ್ಲಿ ವಿವರಿಸಿದ ನಮೂನೆಯಲ್ಲಿ, ವಿದ್ಯಮಾನಗಳು ಅವಕಾಶ ಕೊಡುವಷ್ಟರ ಮಟ್ಟಿಗೆ ತಯಾರಿಸತಕ್ಕುದು ಮತ್ತು ಅಂಥ ಪ್ರಮಾಣಪತ್ರವನ್ನು ಸ್ವೀಕರಿಸುವ ಉಚ್ಚ ನ್ಯಾಯಾಲಯವು ಅದನ್ನು ದಾಖಲಾಮ್ಡತಕ್ಕುದು.

(3) ಇಲ್ಲಿ ಇನ್ನು ಮುಂದೆ 276 ಮತ್ತು 278ನೇ ಪ್ರಕರಣಗಳಲ್ಲಿ ಉಪಬಂಧಿಸಿದಂತೆ ಬೇರೊಂದು ರಾಜ್ಯದಲ್ಲಿನ ಜಿಲ್ಲಾ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿಯೊಳಗೆ ಆಸ್ತಿಗಳ ಯಾವುದೇ ಭಾಗವು ಇರುವುದಾಗಿ ಅರ್ಜಿದಾರನು ನಿರೂಪಿಸಿರುವಲ್ಲಿ (1) ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪ್ರಮಾಣ ಪತ್ರವನ್ನು ಕಳಿಸಬೇಕಾದ ನ್ಯಾಯಾಲಯವು ಅದರ ಒಂದು ಪ್ರತಿಯನ್ನು ಅಂಥ ಜಿಲ್ಲಾ ನ್ಯಾಯಾಧೀಶನಿಗೆ ಕಳಿಸಿಕೊಡತಕ್ಕುದು ಮತ್ತು ಅಂಥ ಪ್ರತಿಯನ್ನು ಸ್ವೀಕರಿಸುವ ಜಿಲ್ಲಾ ನ್ಯಾಯಾಧೀಶನು ಅದನ್ನು ದಾಖಲು ಮಾಡತಕ್ಕುದು.

275. ಪ್ರೊಬೇಟು ಅಥವಾ ಆಡಳಿತ ಪತ್ರದ ಬಗ್ಗೆ ಅರ್ಜಿಯನ್ನು ಸರಿಯಾಗಿ ಹಾಕಿಕೊಳ್ಳಲಾಗಿದ್ದರೆ ಮತ್ತು ಅದರ ಸತ್ಯಾಪನೆ ಮಾಡಲಾಗಿದ್ದರೆ ಅದು ನಿರ್ಣಾಯಕವಾಗಿರುವುದು:- ಪ್ರೊಬೇಟು ಅಥವಾ ಆಡಳಿತ ಪತ್ರಕ್ಕಾಗಿನ ಅರ್ಜಿಯನ್ನು ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ ಹಾಕಿಕೊಳ್ಳಲಾಗಿದ್ದರೆ ಮತ್ತು ಅದರ ಸತ್ಯಾಪನೆ ಮಾಡಲಾಗಿದ್ದರೆ ಪ್ರೊಬೇಟು ಅಥವಾ ಆಡಳಿತ ಪತ್ರದ ನೀಡಿಕೆಯನ್ನು ಅಧಿಕೃತಗೊಳಿಸುವ ಉದ್ದೇಶಕ್ಕಾಗಿ, ಅದು ನಿರ್ಣಾಯಕವಾಗಿರತಕ್ಕುದು ; ಮತ್ತು ಅಂಥ ಯಾವುದೇ ನೀಡಿಕೆಯನ್ನು ಮರಣಶಾಸನ ಕರ್ತನಿಗೆ ಅಥವಾ ಮರಣ ಶಾಸನ ರಹಿತನಿಗೆ ಅವನ ಮರಣದ ಕಾಲದಲ್ಲಿ ಯಾವುದೇ ನಿಗದಿತ ವಾಸಸ್ಥಳ ಅಥವಾ ಯಾವುದೇ ಸ್ವತ್ತು ಆ ಜಿಲ್ಲೆಯೊಳಗೆ ಇದ್ದಿರಲಿಲ್ಲವೆಂಬ ಕಾರಣ ಮಾತ್ರದಿಂದಲೇ ನ್ಯಾಯಾಲಯಕ್ಕೆ ಮೋಸ ಮಾಡಿ ನೀಡಿಕೆ ಪಡೆದುಕೊಂಡಿದ್ದರೆ, ಅಂಥ ನೀಡಿಕೆಯನ್ನು ರದ್ದುಗೊಳಿಸುವ ವ್ಯವಹರಣೆಯ ಮೂಲಕವಲ್ಲದೆ ಅನ್ಯಥಾ ಪ್ರಶ್ನಿಸತಕ್ಕುದಲ್ಲ.

276. ಪ್ರೊಬೇಟಿಗಾಗಿ ಅರ್ಜಿ:- (1) ಉಯಿಲನ್ನು ಲಗತ್ತಿಸಿ, ಪ್ರೊಬೇಟಿಗಾಗಿ ಅಥವಾ ಆಡಳಿತ ಪತ್ರಕ್ಕಾಗಿ ಸಲ್ಲಿಸುವ ಅರ್ಜಿಯನ್ನು ಇಂಗ್ಲೀಷಿನಲ್ಲಾಗಲೀ ಅಥವಾ ಯಾವ ನ್ಯಾಯಾಲಯದ ಮುಂದೆ ಉಯಿಲಿನೊಂದಿಗೆ ಅರ್ಜಿಯನ್ನು ಸಲ್ಲಿಸಲಾಗುವುದೋ ಆ ನ್ಯಾಯಾಲಯದ ವ್ಯವಹರಣೆಗಳಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ ಭಾಷೆಯಲ್ಲಾಗಲೀ ಸುಸ್ಪಷ್ಟವಾಗಿ ಬರೆದ ಮನವಿ ಪತ್ರದ ಮೂಲಕ ಅಥವಾ 237, 238 ಮತ್ತು 239 ನೇ ಪ್ರಕರಣಗಳಲ್ಲಿ ನಮೂದಿಸಿದ ಸಂದರ್ಭಗಳಲ್ಲಿ ಅದರ ಒಳಾಂಶಗಳ ಪ್ರತಿ ಕರಡು ಅಥವಾ ಹೇಳಿಕೆಯನ್ನು ಲಗತ್ತಿಸಿ ಮತ್ತು-

(ಎ) ಮರಣಶಾಸನ ಕರ್ತನ ಮರಣದ ಕಾಲವನ್ನು;

(ಬಿ) ಲಗತ್ತಿಸಿದ ಬರಹವು ಅವನ ಅಂತಿಮ ಉಯಿಲು ಮತ್ತು ಮೃತ್ಯು ಪತ್ರವೆಂದು ;

(ಸಿ) ಅದನ್ನು ಕ್ರಮಬದ್ಧವಾಗಿ ಬರೆದುಕೊಡಲಾಗಿತ್ತೆಂದು ;

(ಡಿ) ಅರ್ಜಿದಾರರ ಕೈಗೆ ಬರುವ ಸಂಭವವಿರುವಂಥ ಆಸ್ತಿಗಳ ಮೊಬಲಗನ್ನು ;

(ಇ) ಅರ್ಜಿಯನ್ನು ಪ್ರೊಬೇಟಿಗಾಗಿ ಮಾಡಿಕೊಂಡಾಗ, ಅರ್ಜಿದಾರನು ಉಯಿಲಿನಲ್ಲಿ ಹೆಸರಿಸಿದ ನಿರ್ವಾಹಕನೆಂದು

-ನಿ ರೂಪಿಸಿ ಸಲ್ಲಿಸತಕ್ಕುದು.

(2) ಈ ವಿವರಗಳ ಜೊತೆಗೆ, ಅರ್ಜಿಯು -

(ಎ) ಅರ್ಜಿಯನ್ನು ಜಿಲ್ಲಾ ನ್ಯಾಯಾಧೀಶನಿಗೆ ಹಾಕಿಕೊಂಡಾಗ, ಮೃತನು ಅವನ ಮರಣದ ಕಾಲದಲ್ಲಿ ನಿಗದಿಯಾದ ವಾಸಸ್ಥಳವನ್ನು ಹೊಂದಿದ್ದನೆಂದು ಅಥವಾ ಆ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿಯೊಳಗೆ ಅವನಿಗೆ ಸ್ವತ್ತು ಇದ್ದಿತೆಂದು, ಮತ್ತು

(ಬಿ) ಅರ್ಜಿಯನ್ನು ಜಿಲ್ಲಾ ಪ್ರತಿನಿಧಿಗೆ ಮಾಡಿಕೊಂಡಾಗ, ಮೃತನು ಅವನ ಮರಣದ ಕಾಲದಲ್ಲಿ ಅಂಥ ಪ್ರತಿನಿಧಿಯ ಅಧಿಕಾರ ವ್ಯಾಪ್ತಿಯೊಳಗೆ ನಿಗದಿತ ವಾಸಸ್ಥಳವನ್ನು ಹೊಂದಿದ್ದನೆಂದು ಸಹ ನಿರೂಪಿಸತಕ್ಕುದು.

(3) ಅರ್ಜಿಯನ್ನು ಜಿಲ್ಲಾ ನ್ಯಾಯಾಧೀಶನಿಗೆ ಮಾಡಿಕೊಂಡಿರುವಲ್ಲಿ ಮತ್ತು ಅರ್ಜಿದಾರನ ಕೈಗೆ ಬರುವ ಸಂಭವವಿರುವ ಆಸ್ತಿಗಳ ಯಾವುದೇ ಭಾಗವು ಇನ್ನೊಂದು ರಾಜ್ಯದಲ್ಲಿ ಇರುವಲ್ಲಿ ಅರ್ಜಿದಾರನು ಅಂಥ ಪ್ರತಿಯೊಂದು ರಾಜ್ಯದಲ್ಲಿ ಇರುವ ಅಂಥ ಆಸ್ತಿಗಳ ಮೊಬಲಗನ್ನು ಮತ್ತು ಯಾವ ಜಿಲ್ಲಾ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಯೊಳಗೆ ಅಂಥ ಆಸ್ತಿಗಳು ಇರುತ್ತವೆಯೋ ಆ ಜಿಲ್ಲಾ ನ್ಯಾಯಾಧೀಶರನ್ನು ಸಹ ನಮೂದಿಸತಕ್ಕುದು.

277. ಯಾವ ಸಂದರ್ಭಗಳಲ್ಲಿ ಉಯಿಲಿನ ಭಾಷಾಂತರವನ್ನು ಅರ್ಜಿಗೆ ಲಗತ್ತಿಸುವುದು ಮತ್ತು ನ್ಯಾಯಾಲಯದ ಭಾಷಾಂತರಕಾರನನ್ನು ಹೊರತುಪಡಿಸಿ ಬೇರೊಬ್ಬ ವ್ಯಕ್ತಿಯು ಭಾಷಾಂತರವನ್ನು ಸತ್ಯಾಪಿಸುವುದು:- ಇಂಗ್ಲೀಷ್ ಅಲ್ಲದ ಅಥವಾ ನ್ಯಾಯಾಲಯದ ಮುಂದಿರುವ ವ್ಯವಹರಣೆಯಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ ಭಾಷೆಯಲ್ಲಿಲ್ಲದ ಯಾವುದೇ ಭಾಷೆಯಲ್ಲಿ ಉಯಿಲು, ಪ್ರತಿ ಅಥವಾ ಕರಡನ್ನು ಬರೆದಿರುವ ಸಂದರ್ಭಗಳಲ್ಲಿ , ಯಾವ ಭಾಷೆಗಾಗಿ ಭಾಷಾಂತರಕಾರನನ್ನು ನೇಮಕ ಮಾಡಿಕೊಳ್ಳಲಾಗಿದೆಯೋ ಆ ಭಾಷೆಯಾಗಿದ್ದರೆ, ನ್ಯಾಯಾಲಯದ ಆ ಭಾಷಾಂತರಕಾರರಿಂದ ಅಥವಾ ಉಯಿಲು ಪ್ರತಿ ಅಥವಾ ಕರಡು ಇತರ ಯಾವುದೇ ಭಾಷೆಯಲ್ಲಿದ್ದರೆ ಆಗ ಅದನ್ನು ಭಾಷಾಂತರಿಸಲು ಸಕ್ರಮವಾದ ಯಾವನೇ ವ್ಯಕ್ತಿಯಿಂದ ಅದರ ಭಾಷಾಂತರವನ್ನು ಮಾಡಿಸಿ ಅರ್ಜಿಗೆ ಲಗತ್ತಿಸತಕ್ಕುದು. ಆ ಸಂದರ್ಭದಲ್ಲಿ, ಅಂಥ ಭಾಷಾಂತರವನ್ನು, ಈ ಕೆಳಕಂಡ ರೀತಿಯಲ್ಲಿ ಆ ವ್ಯಕ್ತಿಯು ಸತ್ಯಾಪನೆ ಮಾಡತಕ್ಕುದು, ಎಂದರೆ :-

"(ಎ.ಬಿ) ಆದ ನಾನು ಮೂಲದ ಭಾಷೆ ಹಾಗೂ ಲಿಪಿಯನ್ನು ಓದಬಲ್ಲೆ ಮತ್ತು ಚೆನ್ನಾಗಿ ತಿಳಿದುಕೊಳ್ಳಬಲ್ಲೆ ಎಂದು ಮತ್ತು ಮೇಲಿನದು ಅದರ ನಿಜವಾದ ಮತ್ತು ಸರಿಯಾದ ಭಾಷಾಂತರವೆಂದು ಘೋಷಿಸುತ್ತೇನೆ."

278. ಆಡಳಿತ ಪತ್ರಕ್ಕಾಗಿ ಅರ್ಜಿ:- (1) ಆಡಳಿತ ಪತ್ರಕ್ಕಾಗಿ ಅರ್ಜಿಯನ್ನು ಈ ಹಿಂದೆ ಹೇಳಿದಂತೆ ಸುಸ್ಪಷ್ಟವಾಗಿ ಬರೆದು ಮತ್ತು -

(ಎ) ಮೃತನ ಮರಣದ ಕಾಲ ಮತ್ತು ಸ್ಥಳವನ್ನು ;

(ಬಿ) ಮೃತನ ಕುಟುಂಬ ಅಥವಾ ಇತರ ಸಂಬಂಧಿಗಳು ಮತ್ತು ಅವರವರ ವಾಸಸ್ಥಳಗಳನ್ನು ;

(ಸಿ) ಅರ್ಜಿದಾರನು ಕ್ಲೇಮು ಮಾಡುವಂಥ ಹಕ್ಕನ್ನು;

(ಡಿ) ಅರ್ಜಿದಾರನ ಕೈಗೆ ಬರುವ ಸಂಭವವಿರುವಂಥ ಆಸ್ತಿಗಳ ಮೂಲಗಳನ್ನು ;

(ಇ) ಅರ್ಜಿಯನ್ನು ಜಿಲ್ಲಾ ನ್ಯಾಯಾಧೀಶನಿಗೆ ಮಾಡಿಕೊಂಡಾಗ, ಮೃತನು ಅವನ ಮರಣದ ಕಾಲದಲ್ಲಿ ಆ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿಯೊಳಗೆ ನಿಗದಿಯಾದ ವಾಸಸ್ಥಳವನ್ನು ಹೊಂದಿದ್ದನೆಂದು ಅಥವಾ ಅವನು ಸ್ವತ್ತನ್ನು ಹೊಂದಿದ್ದನೆಂದು; ಮತ್ತು

(ಎಫ್) ಅರ್ಜಿಯನ್ನು ಜಿಲ್ಲಾ ಪ್ರತಿನಿಧಿಗೆ ಮಾಡಿಕೊಂಡಾಗ ಮೃತನ, ಅವನ ಮರಣ ಕಾಲದಲ್ಲಿ ಅಂಥ ಪ್ರತಿನಿಧಿಯ ಅಧಿಕಾರ ವ್ಯಾಪ್ತಿಯೊಳಗೆ ನಿಗದಿತ ವಾಸಸ್ಥಳವನ್ನು ಹೊಂದಿದ್ದನೆಂದು ನಿರೂಪಿಸಿ

- ಮಾಡಿಕೊಳ್ಳತಕ್ಕುದು.

(2) ಅರ್ಜಿಯನ್ನು ಜಿಲ್ಲಾ ನ್ಯಾಯಾಧೀಶನಿಗೆ ಮಾಡಿಕೊಂಡಿರುವಲ್ಲಿ ಮತ್ತು ಅರ್ಜಿದಾರನ ಕೈಗೆ ಬರುವ ಸಂಭವವಿರುವ ಆಸ್ತಿಗಳ ಯಾವುದೇ ಭಾಗವು ಇನ್ನೊಂದು ರಾಜ್ಯದಲ್ಲಿ ಇರುವಲ್ಲಿ ಅರ್ಜಿಯಲ್ಲಿ ಪ್ರತಿಯೊಂದು ರಾಜ್ಯದಲ್ಲಿ ಇರುವ ಅಂಥ ಆಸ್ತಿಗಳ ಮೊಬಲಗನ್ನು ಮತ್ತು ಯಾವ ಜಿಲ್ಲಾ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಯೊಳಗೆ ಅಂಥ ಆಸ್ತಿಗಳು ಇವೆಯೋ ಆ ಜಿಲ್ಲಾ ನ್ಯಾಯಾಧೀಶರನ್ನು ಸಹ ನಿರೂಪಿಸತಕ್ಕುದು.

279. ಕೆಲವು ಪ್ರಕರಣಗಳಲ್ಲಿ ಪ್ರೊಬೇಟು ಅಥವಾ ಆಡಳಿತ ಪತ್ರಕ್ಕಾಗಿ ಅರ್ಜಿ ಇತ್ಯಾದಿಯಲ್ಲಿ ಹೇಳಿಕೆಗೆ ಸೇರ್ಪಡೆ:- (1) ಭಾರತದಾದ್ಯಂತ ಪರಿಣಾಮವನ್ನು ಹೊಂದಲು ಉದ್ದೇಶಿಸಿದ ಉಯಿಲಿನ ಪ್ರೊಬೇಟು ಅಥವಾ ಎಸ್ಟೇಟಿನ ಆಡಳಿತ ಪತ್ರಕ್ಕಾಗಿ 273ನೇ ಪ್ರಕರಣದ ಪರಂತುಕದಲ್ಲಿ ನಮೂದಿಸಿರುವ ಯಾವುದೇ ನ್ಯಾಯಾಲಯಕ್ಕೆ ಅರ್ಜಿಯನ್ನು ಮಾಡಿಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಯು, ತನ್ನ ಅರ್ಜಿಯಲ್ಲಿ 276ನೇ ಪ್ರಕರಣ ಮತ್ತು 278 ನೇ ಪ್ರಕರಣದ ಮೂಲಕ ಅನುಕ್ರಮವಾಗಿ ಅಗತ್ಯಪಡಿಸಿದ ವಿಷಯಗಳ ಜೊತೆಗೆ, ತಾನು ನಂಬುವಷ್ಟರ ಮಟ್ಟಿಗೆ, ಹಿಂದೆ ಹೇಳಿದಂತೆ ಪರಿಣಾಮವನ್ನು ಹೊಂದಲು ಉದ್ದೇಶಿಸಿದ ಅದೇ ಉಯಿಲಿನ ಪ್ರೊಬೇಟಿಗಾಗಿ ಅಥವಾ ಅದೇ ಎಸ್ಟೇಟಿನ ಆಡಳಿತ ಪತ್ರಕ್ಕಾಗಿ ಇತರ ಯಾವುದೇ ನ್ಯಾಯಾಲಯಕ್ಕೆ ಯಾವುದೇ ಅರ್ಜಿಯನ್ನು ಮಾಡಿಕೊಂಡಿಲ್ಲವೆಂದು,

ಅಥವಾ ಅಂಥ ಯಾವುದೇ ಅರ್ಜಿಯನ್ನು ಮಾಡಿಕೊಂಡಿರುವಲ್ಲಿ, ಯಾವ ನ್ಯಾಯಾಲಯಕ್ಕೆ ಅದನ್ನು ಮಾಡಿಕೊಳ್ಳಲಾಗಿತ್ತೋ ಆ ನ್ಯಾಯಾಲಯವನ್ನು, ಯಾವ ವ್ಯಕ್ತಿ ಅಥವಾ ವ್ಯಕ್ತಿಗಳು ಆ ಅರ್ಜಿಯನ್ನು ಮಾಡಿಕೊಂಡಿದ್ದಾರೋ ಅಥವಾ ವ್ಯಕ್ತಿಗಳು ಮತ್ತು ಅರ್ಜಿಯ ಮೇಲೆ ತೆಗೆದುಕೊಂಡ ವ್ಯವಹರಣೆಗಳು (ಯಾವುದಾದರೂ ಇದ್ದರೆ) ಇವುಗಳನ್ನು ನಿರೂಪಿಸತಕ್ಕುದು.

(2) 273ನೇ ಪ್ರಕರಣದ ಪರಂತುಕದ ಮೇರೆಗೆ ಅಂಥ ಯಾವುದೇ ಅರ್ಜಿಯನ್ನು ಯಾವ ನ್ಯಾಯಾಲಯಕ್ಕೆ ಮಾಡಿಕೊಳ್ಳಲಾಗಿದೆಯೋ ಆ ನ್ಯಾಯಾಲಯವು, ಅದು ಸೂಕ್ತವೆಂದು ಯೋಚಿಸಿದರೆ, ಆ ಅರ್ಜಿಯನ್ನು ತಿರಸ್ಕರಿಸಬಹುದು.

280. ಪ್ರೊಬೇಟು ಇತ್ಯಾದಿಗಳಿಗೆ ಸಲ್ಲಿಸಿದ ಅರ್ಜಿಗೆ ರುಜು ಮಾಡುವುದು ಮತ್ತು ಅದನ್ನು ಸತ್ಯಾಪನೆ ಮಾಡುವುದು:- ಪ್ರೊಬೇಟು ಮತ್ತು ಆಡಳಿತಾಧಿಕಾರ ಪತ್ರಕ್ಕಾಗಿ ಸಲ್ಲಿಸಿದ ಅರ್ಜಿಗೆ ಎಲ್ಲ ಪ್ರಕರಣಗಳಲ್ಲಿ ಅರ್ಜಿದಾರ ಮತ್ತು ಅವನ ನ್ಯಾಯವಾದಿ ಯಾರಾದರೂ ಇದ್ದರೆ ಅವರು ರುಜು ಮಾಡತಕ್ಕುದು ಮತ್ತು ಅರ್ಜಿದಾರನು ಕೆಳಕಂಡ ರೀತಿಯಲ್ಲಿ ಅದನ್ನು ಸತ್ಯಾಪನೆ ಮಾಡತಕ್ಕುದು, ಎಂದರೆ:-

> "ಮೇಲ್ಕಂಡ ಅರ್ಜಿಯಲ್ಲಿ ಅರ್ಜಿದಾರನಾದ (ಎ. ಬಿ) ಎಂಬ ನಾನು ಅದರಲ್ಲಿ ನಿರೂಪಿಸಿರುವುದೆಲ್ಲಾ ನನಗೆ ತಿಳಿದಿರುವಷ್ಟರ ಮಟ್ಟಿಗೆ ಮತ್ತು ನನಗೆ ಸಂಪೂರ್ಣ ನಂಬಿಕೆ ಇರುವಷ್ಟರ ಮಟ್ಟಿಗೆ ಸತ್ಯವಾಗಿದೆಯೆಂದು ಘೋಷಿಸುತ್ತೇನೆ."

281. ಪ್ರೊಬೇಟಿಗಾಗಿ ಸಲ್ಲಿಸಿದ ಅರ್ಜಿಯನ್ನು ಉಯಿಲಿನ ಒಬ್ಬ ಸಾಕ್ಷಿಯು ಸತ್ಯಾಪನೆ ಮಾಡುವುದು:- ಪ್ರೊಬೇಟಿಗಾಗಿ ಅರ್ಜಿಯನ್ನು ಸಲ್ಲಿಸಿರುವಲ್ಲಿ , ಉಯಿಲಿನ ಕಡೆ ಪಕ್ಷ ಒಬ್ಬ ಸಾಕ್ಷಿಯು (ದೊರಕಿಸಿಕೊಳ್ಳಬಹುದಾಗಿದ್ದಾಗ) ಕೆಳಕಂಡ ರೀತಿಯಲ್ಲಿ ಅಥವಾ ಅದರಂತೆ ಸತ್ಯಾಪನೆ ಮಾಡತಕ್ಕುದು, ಎಂದರೆ:-

ಮೇಲ್ಕಂಡ ಅರ್ಜಿಯಲ್ಲಿ ನಮೂದಿಸಿದ ಮರಣಶಾಸನ ಕರ್ತನ ಕೊನೆಯ ಉಯಿಲು ಮತ್ತು ಮರಣ ಶಾಸನದ ಸಾಕ್ಷಿಗಳಲ್ಲಿ ಒಬ್ಬನಾದ (ಸಿ.ಡಿ) ಎಂಬ ನಾನು ಸದರಿ ಮರಣಶಾಸನ ಕರ್ತನು ತನ್ನ ರುಜುವನ್ನು (ಅಥವಾ ಗುರುತನ್ನು) ಅದಕ್ಕೆ ಹಾಕುವಾಗ ನಾನು ಅಲ್ಲಿ ಹಾಜರಿದ್ದೆನೆಂದು ಮತ್ತು ಅದನ್ನು ನೋಡಿದೆನೆಂದು (ಅಥವಾ ಸದರಿ ಮರಣಶಾಸನ ಕರ್ತನು ಮೇಲ್ಕಂಡ ಅರ್ಜಿಗೆ ಲಗತ್ತಿಸಿದ ಬರಹವನ್ನು ತನ್ನ ಅಂತಿಮ ಉಯಿಲು ಮತ್ತು ಮರಣ ಶಾಸನವೆಂಬುದಾಗಿ ನನ್ನ ಸಮ್ಮುಖದಲ್ಲಿ ಸತ್ಯವೆಂದು ಒಪ್ಪಿಕೊಂಡನೆಂದು) ಘೋಷಿಸುತ್ತೇನೆ.

282. ಅರ್ಜಿ ಅಥವಾ ಘೋಷಣೆಯಲ್ಲಿ ಮಾಡಿದ ಸುಳ್ಳು ದೃಢೋಕ್ತಿಗಾಗಿ ದಂಡನೆ:- ಈ ಮೂಲಕ ಸತ್ಯಾಪನೆ ಮಾಡಬೇಕೆಂದು ಅಗತ್ಯಪಡಿಸಲಾದಂಥ ಯಾವುದೇ ಅರ್ಜಿ ಅಥವಾ ಘೋಷಣೆಯು, ಸತ್ಯಾಪನೆಯನ್ನು ಮಾಡಿದಂಥ ವ್ಯಕ್ತಿಯು ಸುಳ್ಳೆಂದು ತಿಳಿದಿರುವ ಅಥವಾ ನಂಬಿರುವ ಯಾವುದೇ ದೃಢೋಕ್ತಿಯನ್ನು ಒಳಗೊಂಡಿದ್ದರೆ, ಅಂಥ ವ್ಯಕ್ತಿಯು ಭಾರತ ದಂಡ ಸಂಹಿತೆಯ (1860ರ 45) 193ನೇ ಪ್ರಕರಣದ ಮೇರೆಗೆ ಅಪರಾಧವನ್ನು ಮಾಡಿದ್ದಾನೆ ಎಂದು ಭಾವಿಸತಕ್ಕುದು.

283. ಜಿಲ್ಲಾ ನ್ಯಾಯಾಧೀಶನ ಅಧಿಕಾರಗಳು:- (1) ಜಿಲ್ಲಾ ನ್ಯಾಯಾಧೀಶನು ಅಥವಾ ಜಿಲ್ಲಾ ಪ್ರತಿನಿಧಿಯು ಎಲ್ಲಾ ಪ್ರಕರಣಗಳಲ್ಲಿ ತಾನು ಯುಕ್ತವೆಂದು ಯೋಚಿಸಿದರೆ,-

(ಎ) ಅರ್ಜಿದಾರನನ್ನು ಖುದ್ದಾಗಿ ಪ್ರಮಾಣದ ಮೇಲೆ ಪರೀಕ್ಷಿಸಬಹುದು;

(ಬಿ) ಸಂದರ್ಭಾನುಸಾರ ಉಯಿಲನ್ನು ಕ್ರಮಬದ್ಧವಾಗಿ ಬರೆದುಕೊಟ್ಟಿರುವ ಬಗ್ಗೆ ಅಥವಾ ಆಡಳಿತ ಪತ್ರಕ್ಕೆ ಅರ್ಜಿದಾರನು ಹೊಂದಿರುವ ಹಕ್ಕಿನ ಬಗ್ಗೆ ಇನ್ನೂ ಹೆಚ್ಚಿನ ಸಾಕ್ಷ್ಯವನ್ನು ಒದಗಿಸಲು ಅಗತ್ಯಪಡಿಸಬಹುದು;

(ಸಿ) ಮೃತನ ಎಸ್ಟೇಟಿನಲ್ಲಿ ಯಾವುದೇ ಹಿತಾಸಕ್ತಿಯನ್ನು ಹೊಂದಿರುವುದಾಗಿ ಕ್ಲೇಮು ಮಾಡುತ್ತಿರುವ ಎಲ್ಲ ವ್ಯಕ್ತಿಗಳನ್ನು, ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ನೀಡುವುದಕ್ಕೆ ಮುಂಚೆ ಬಂದು ವ್ಯವಹರಣೆಗಳನ್ನು ನೋಡಲು ಕರೆಯಾಜ್ಞೆಗಳನ್ನು ಹೊರಡಿಸಬಹುದು.

(2) ಕರೆಯಾಜ್ಞೆಯನ್ನು ನ್ಯಾಯಾಲಯದ ಎದ್ದು ಕಾಣುವ ಭಾಗದಲ್ಲಿ ಮತ್ತು ಜಿಲ್ಲಾ ಕಲೆಕ್ಟರನ ಕಛೇರಿಯಲ್ಲಿ ಸಹ ಅಂಟಿಸತಕ್ಕುದು ಮತ್ತು ಅದನ್ನು ಹೊರಡಿಸುವ ನ್ಯಾಯಾಧೀಶ ಅಥವಾ ಜಿಲ್ಲಾ ಪ್ರತಿನಿಧಿಯು ನಿರ್ದೇಶಿಸಬಹುದಾದಂತಹ ರೀತಿಯಲ್ಲಿ ಪ್ರಕಟಿಸತಕ್ಕುದು ಅಥವಾ ತಿಳಿಯಪಡಿಸತಕ್ಕುದು.

(3) ಆಸ್ತಿಗಳ ಯಾವುದೇ ಭಾಗವು ಮತ್ತೊಂದು ರಾಜ್ಯದಲ್ಲಿನ ಜಿಲ್ಲಾ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿಯೊಳಗೆ ಇದೆ ಎಂದು ಅರ್ಜಿದಾರನು ನಿರೂಪಿಸಿರುವಲ್ಲಿ, ಕರೆಯಾಜ್ಞೆಯನ್ನು ಹೊರಡಿಸುವ ಜಿಲ್ಲಾ ನ್ಯಾಯಾಧೀಶನು, ಆ ಆಜ್ಞೆಯ ಒಂದು ಪ್ರತಿಯನ್ನು ಅಂಥ ಇತರ ಜಿಲ್ಲಾ ನ್ಯಾಯಾಧೀಶನಿಗೆ ಕಳಿಸುವಂತೆ ಮಾಡತಕ್ಕುದು. ಆ ಇತರ ಜಿಲ್ಲಾ ನ್ಯಾಯಾಧೀಶನು ಅದನ್ನು ತಾನೇ ಹೊರಡಿಸಿದ ಕರೆಯಾಜ್ಞೆಯಾಗಿದ್ದಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಪ್ರಕಟಿಸತಕ್ಕುದು ಮತ್ತು ಅಂಥ ಪ್ರಕಟಣೆಯನ್ನು ಪ್ರಮಾಣೀಕರಿಸಿ ಅದನ್ನು ಕರೆಯಾಜ್ಞೆಯನ್ನು ಹೊರಡಿಸಿದ ಜಿಲ್ಲಾ ನ್ಯಾಯಾಧೀಶನಿಗೆ ತಿಳಿಸತಕ್ಕುದು.

284. ಪ್ರೊಬೇಟು ಅಥವಾ ಆಡಳಿತ ಪತ್ರದ ನೀಡಿಕೆ ವಿರುದ್ಧ ಎಚ್ಚರಿಕೆ ಪತ್ರಗಳು:-(1) ಪ್ರೊಬೇಟು ಅಥವಾ ಆಡಳಿತ ಪತ್ರದ ವಿರುದ್ಧದ ಎಚ್ಚರಿಕೆ ಪತ್ರಗಳನ್ನು ಜಿಲ್ಲಾ ನ್ಯಾಯಾಧೀಶ ಅಥವಾ ಜಿಲ್ಲಾ ಪ್ರತಿನಿಧಿಯಲ್ಲಿ ದಾಖಲ್ಮಾಡಬಹುದು.

(2) ಯಾವನೇ ಜಿಲ್ಲಾ ಪ್ರತಿನಿಧಿಯಲ್ಲಿ ಯಾವುದೇ ಎಚ್ಚರಿಕೆ ಪತ್ರವನ್ನು ದಾಖಲು ಮಾಡಿದ ಕೂಡಲೇ, ಅವನು ಅದರ ಪ್ರತಿಯನ್ನು ಜಿಲ್ಲಾ ನ್ಯಾಯಾಧೀಶನಿಗೆ ಕಳುಹಿಸತಕ್ಕುದು.

(3) ಜಿಲ್ಲಾ ನ್ಯಾಯಾಧೀಶನಲ್ಲಿ ಎಚ್ಚರಿಕೆ ಪತ್ರವನ್ನು ದಾಖಲು ಮಾಡಿದ ಕೂಡಲೇ, ಮೃತನು, ಅವನ ಮರಣದ ಕಾಲದಲ್ಲಿ ಯಾವ ಜಿಲ್ಲಾ ಪ್ರತಿನಿಧಿಯ ಅಧಿಕಾರ ವ್ಯಾಪ್ತಿಯೊಳಗೆ ನಿಗದಿತ ವಾಸಸ್ಥಳವನ್ನು ಹೊಂದಿದ್ದನೆಂದು ಹೇಳಲಾಗಿದೆಯೋ ಆ ಜಿಲ್ಲಾ ಪ್ರತಿನಿಧಿಗೆ (ಯಾರಾದರೂ ಇದ್ದರೆ) ಮತ್ತು ಅದನ್ನು ಯಾರಿಗೆ ಕಳುಹಿಸುವುದು ವಿಹಿತ ಎಂದು ಜಿಲ್ಲಾ ನ್ಯಾಯಾಧೀಶನಿಗೆ ತೋರಬಹುದೋ ಆ ಯಾವನೇ ಇತರ ನ್ಯಾಯಾಧೀಶ ಅಥವಾ ಜಿಲ್ಲಾ ಪ್ರತಿನಿಧಿಗೆ ಅದರ ಒಂದು ಪ್ರತಿಯನ್ನು ಕೊಡತಕ್ಕುದು.

(4) ಎಚ್ಚರಿಕೆ ಪತ್ರದ ನಮೂನೆ:- ಎಚ್ಚರಿಕೆ ಪತ್ರವನ್ನು ಸನ್ನಿವೇಶಗಳು ಅವಕಾಶ ಮಾಡಿಕೊಡುವಷ್ಟರ ಮಟ್ಟಿಗೆ V ನೇ ಅನುಸೂಚಿಯಲ್ಲಿ ಹೇಳಿದ ನಮೂನೆಯಲ್ಲಿ ಮಾಡತಕ್ಕುದು.

285. ಎಚ್ಚರಿಕೆ ಪತ್ರವನ್ನು ದಾಖಲು ಮಾಡಿದ ತರುವಾಯ, ಅದನ್ನು ಸಲ್ಲಿಸಿದವನಿಗೆ ನೋಟೀಸನ್ನು ಕೊಡುವವರೆಗೆ ಅರ್ಜಿಯ ಮೇಲೆ ಯಾವುದೇ ವ್ಯವಹರಣೆಯನ್ನು ಕೈಗೊಳ್ಳದಿರುವುದು:- ಪ್ರೊಬೇಟು ಅಥವಾ ಆಡಳಿತ ಪತ್ರಕ್ಕಾಗಿ ಸಲ್ಲಿಸಿದ ಅರ್ಜಿಯ ಮೇಲೆ ಅಂಥ ಪ್ರೊಬೇಟು ಅಥವಾ ಆಡಳಿತ ಪತ್ರದ ನೀಡಿಕೆಯ ವಿರುದ್ಧ ಯಾವ ನ್ಯಾಯಾಧೀಶ ಅಥವಾ ಜಿಲ್ಲಾ ಪ್ರತಿನಿಧಿಗೆ ಅರ್ಜಿಯನ್ನು ಮಾಡಿಕೊಳ್ಳಲಾಗಿದೆಯೋ ಆ ನ್ಯಾಯಾಧೀಶ ಅಥವಾ ಜಿಲ್ಲಾ ಪ್ರತಿನಿಧಿಯಲ್ಲಿ ಎಚ್ಚರಿಕೆ ಪತ್ರವನ್ನು ದಾಖಲು ಮಾಡಿದ ತರುವಾಯ ಅಥವಾ ಬೇರೊಬ್ಬ ಇತರ ಪ್ರತಿನಿಧಿಯಲ್ಲಿ ಅದನ್ನು ದಾಖಲು ಮಾಡುವುದರ ಬಗ್ಗೆ ನೋಟೀಸನ್ನು ಕೊಟ್ಟ ತರುವಾಯ, ಯಾವ ವ್ಯಕ್ತಿಯು ಅದನ್ನು ದಾಖಲು ಮಾಡಿರುವನೋ ಆ ವ್ಯಕ್ತಿಗೆ, ನ್ಯಾಯಾಲಯವು ಸೂಕ್ತವೆಂದು ಯೋಚಿಸಬಹುದಾದಂಥ ನೋಟೀಸನ್ನು ಕೊಡುವವರೆಗೆ ಯಾವುದೇ ವ್ಯವಹರಣೆಯನ್ನು ಕೈಗೊಳ್ಳತಕ್ಕುದಲ್ಲ.

286. ಜಿಲ್ಲಾ ಪ್ರತಿನಿಧಿಯ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ಯಾವಾಗ ನೀಡದಿರುವುದು:- ಜಿಲ್ಲಾ ಪ್ರತಿನಿಧಿಯು, ಪ್ರೊಬೇಟು ಅಥವಾ ಆಡಳಿತ ಪತ್ರದ ನೀಡಿಕೆಯ ಬಗ್ಗೆ ವಿವಾದವಿರುವಂಥ ಅಥವಾ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ತನ್ನ ನ್ಯಾಯಾಲಯದಲ್ಲಿ ನೀಡಬಾರದೆಂದು ತನಗೆ ಅನ್ಯಥಾ ಕಂಡುಬರುವಂಥ ಯಾವುದೇ ಪ್ರಕರಣದಲ್ಲಿ ಅಂಥ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ನೀಡತಕ್ಕುದಲ್ಲ.

ವಿವರಣೆ:- "ವಿವಾದ" ಎಂದರೆ ವ್ಯವಹರಣೆಯನ್ನು ವಿರೋಧಿಸಲು ಯಾವುದೇ ವ್ಯಕ್ತಿಯು ಖುದ್ದಾಗಿ ಅಥವಾ ಮನ್ನಣೆ ಪಡೆದ ತನ್ನ ಏಜೆಂಟಿನ ಮೂಲಕ ಅಥವಾ ತನ್ನ ಪರವಾಗಿ ಕಾರ್ಯ ನಿರ್ವಹಿಸಲು ಕ್ರಮಬದ್ಧವಾಗಿ ನೇಮಕಗೊಂಡ ನ್ಯಾಯವಾದಿಯ ಮೂಲಕ ಹಾಜರಾಗುವುದು.

287. ವಿವಾದವಿಲ್ಲದಿರುವ ಸಂದೇಹಾಸ್ಪದ ಪ್ರಕರಣಗಳಲ್ಲಿ ಜಿಲ್ಲಾ ನ್ಯಾಯಾಧೀಶನಿಗೆ ಹೇಳಿಕೆಯನ್ನು ರವಾನಿಸಲು ಅಧಿಕಾರ:- ವಿವಾದವಿಲ್ಲದಿರುವಂಥ ಆದರೆ ಪ್ರೊಬೇಟ್ ಅಥವಾ ಆಡಳಿತ ಪತ್ರವನ್ನು ನೀಡಬೇಕೇ ಅಥವಾ ನೀಡಬಾರದೇ ಹೇಗೆ ಎಂಬ ಬಗ್ಗೆ ಜಿಲ್ಲಾ ಪ್ರತಿನಿಧಿಗೆ ಸಂದೇಹಾಸ್ಪದವಾಗಿ ಕಂಡುಬರುವ ಪ್ರತಿಯೊಂದು ಪ್ರಕರಣದಲ್ಲಿ ಅಥವಾ ಯಾವುದೇ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ನೀಡುವುದಕ್ಕೆ ಅಥವಾ ನೀಡಿಕೆಗಾಗಿನ ಅರ್ಜಿಗೆ ಸಂಬಂಧಪಟ್ಟಂತೆ ಯಾವುದೇ ಪ್ರಶ್ನೆಯು ಉದ್ಭವಿಸಿದಾಗ, ಜಿಲ್ಲಾ ಪ್ರತಿನಿಧಿಯು, ತಾನು ಯುಕ್ತವೆಂದು ಯೋಚಿಸಿದರೆ, ಪ್ರಶ್ನಿತ ವಿಷಯದ ಬಗೆಗಿನ ಹೇಳಿಕೆಯನ್ನು ಜಿಲ್ಲಾ ನ್ಯಾಯಾಧೀಶನಿಗೆ ರವಾನಿಸಬಹುದು. ಮತ್ತು ಆ ಜಿಲ್ಲಾ ನ್ಯಾಯಾಧೀಶನು ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ಅನುದೇಶಗಳಿಗನುಸಾರವಾಗಿ ಆ ಅರ್ಜಿಯ ವಿಷಯದಲ್ಲಿ ಮುಂದುವರಿಯಲು ಜಿಲ್ಲಾ ಪ್ರತಿನಿಧಿಗೆ ನಿರ್ದೇಶಿಸಬಹುದು ಅಥವಾ ನ್ಯಾಯಾಧೀಶನಿಗೆ ಅರ್ಜಿ ಮಾಡಿಕೊಳ್ಳಲು ಪ್ರಶ್ನಿತ ನೀಡಿಕೆಗಾಗಿ ಸಲ್ಲಿಸಿದ ಪಕ್ಷಕಾರನಿಗೆ, ಅವಕಾಶ ಮಾಡಿಕೊಟ್ಟು ಅಂಥ ಅರ್ಜಿಯ ವಿಷಯಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಪ್ರತಿನಿಧಿಯು ಯಾವುದೇ ಹೆಚ್ಚಿನ ವ್ಯವಹರಣೆಯನ್ನು ನಡೆಸುವುದನ್ನು ನಿಷೇಧಿಸಬಹುದು.

288. ವಿವಾದವಿರುವಲ್ಲಿ ಅಥವಾ ಜಿಲ್ಲಾ ಪ್ರತಿನಿಧಿಯು ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ತನ್ನ ನ್ಯಾಯಾಲಯದಲ್ಲಿ ನಿರಾಕರಿಸಬೇಕೆಂದು ಯೋಚಿಸುವಲ್ಲಿ ಪ್ರಕ್ರಿಯೆ:- ವಿವಾದವಿರುವಂಥ ಅಥವಾ ಜಿಲ್ಲಾ ಪ್ರತಿನಿಧಿಯು ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ತನ್ನ ನ್ಯಾಯಾಲಯದಲ್ಲಿ ನೀಡಬಾರದೆಂದು ಅಭಿಪ್ರಾಯಪಡುವಂಥ ಪ್ರತಿಯೊಂದು ಪ್ರಕರಣದಲ್ಲಿ ನ್ಯಾಯೋದ್ದೇಶಗಳಿಗಾಗಿ ಅರ್ಜಿಯನ್ನು ವಶಪಡಿಸಿಕೊಳ್ಳಲು ಜಿಲ್ಲಾ ಪ್ರತಿನಿಧಿಯನ್ನು ಅಧಿಕೃತಗೊಳಿಸಲಾಗಿದ್ದು , ಹಾಗೆ ವಶಪಡಿಸಿಕೊಳ್ಳುವುದು ಅಗತ್ಯವೆಂದು ಅವನು ಯೋಚಿಸಿದ ಹೊರತು, ಜಿಲ್ಲಾ ನ್ಯಾಯಾಧೀಶನಿಗೆ ಸಲ್ಲಿಸುವ ಉದ್ದೇಶಕ್ಕಾಗಿ ಆ ಅರ್ಜಿಯನ್ನು ಅದರೊಂದಿಗೆ ಸಲ್ಲಿಸಿದ್ದ ದಸ್ತಾವೇಜುಗಳೊಂದಿಗೆ ಅರ್ಜಿಯನ್ನು ಸಲ್ಲಿಸಿದ್ದಂಥ ವ್ಯಕ್ತಿಗೆ ವಾಪಸ್ಸು ಮಾಡತಕ್ಕುದು; ಮತ್ತು ಜಿಲ್ಲಾ ಪ್ರತಿನಿಧಿಯು ವಶಪಡಿಸಿಕೊಂಡಂಥ ಸಂದರ್ಭದಲ್ಲಿ ಅವನು ಅದನ್ನು ಜಿಲ್ಲಾ ನ್ಯಾಯಾಧೀಶನಿಗೆ ಕಳುಹಿಸಿಕೊಡತಕ್ಕುದು.

289. ಪ್ರೊಬೇಟನ್ನು ನ್ಯಾಯಾಲಯದ ಮೊಹರು ಹಾಕಿ ನೀಡುವುದು:- ಉಯಿಲಿನ ಪ್ರೊಬೇಟನ್ನು ನೀಡಬೇಕೆಂದು ಜಿಲ್ಲಾ ನ್ಯಾಯಾಧೀಶ ಅಥವಾ ಜಿಲ್ಲಾ ಪ್ರತಿನಿಧಿಗೆ ಕಂಡುಬಂದಾಗ, ಅವನು ಅದನ್ನು 6ನೇ ಅನುಸೂಚಿಯಲ್ಲಿ ಹೇಳಿರುವ ನಮೂನೆಯಲ್ಲಿ ತನ್ನ ನ್ಯಾಯಾಲಯದ ಮೊಹರು ಹಾಕಿ ನೀಡತಕ್ಕುದು.

290. ಆಡಳಿತ ಪತ್ರವನ್ನು ನ್ಯಾಯಾಲಯದ ಮೊಹರು ಹಾಕಿ ನೀಡುವುದು:- ಮೃತ ವ್ಯಕ್ತಿಯ ಆಡಳಿತ ಪತ್ರವನ್ನು ಉಯಿಲಿನ ಪ್ರತಿಯನ್ನು ಲಗತ್ತಿಸಿ ಅಥವಾ ಲಗತ್ತಿಸದೆಯೇ ನೀಡಬೇಕೆಂದು ಜಿಲ್ಲಾ ನ್ಯಾಯಾಧೀಶನಿಗೆ ಅಥವಾ ಜಿಲ್ಲಾ ಪ್ರತಿನಿಧಿಗೆ ಕಂಡುಬಂದರೆ, ಅವನು ಅದನ್ನು VII ನೇ ಅನುಸೂಚಿಯಲ್ಲಿ ಹೇಳಿರುವ ನಮೂನೆಯಲ್ಲಿ ತನ್ನ ನ್ಯಾಯಾಲಯದ ಮೊಹರು ಹಾಕಿ ನೀಡತಕ್ಕುದು.

291. ಆಡಳಿತ ಬಂಧಪತ್ರ:- (1) 241ನೇ ಪ್ರಕರಣದ ಮೇರೆಗೆ ನೀಡಿದ ಆಡಳಿತ ಪತ್ರವನ್ನು ಹೊರತುಪಡಿಸಿ, ಯಾವುದೇ ಇತರ ಆಡಳಿತ ಪತ್ರವನ್ನು ಯಾರಿಗೆ ನೀಡಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು, ಜಿಲ್ಲಾ ನ್ಯಾಯಾಧೀಶನಿಗೆ ಮೃತನ ಎಸ್ಟೇಟಿನ ಯುಕ್ತ ಸಂಗ್ರಹಣೆ ಅದನ್ನು ವಹಿಸಿಕೊಳ್ಳುವ ಮತ್ತು ಅದರ ಆಡಳಿತ ನಿರ್ವಹಣೆಗಾಗಿ ವಚನಬದ್ಧಗೊಳಿಸುವ, ಒಬ್ಬ ಅಥವಾ ಹೆಚ್ಚು ಜಾಮೀನುದಾರ ಅಥವಾ ಜಾಮೀನುದಾರರ ಸಹಿತ ಬಂಧಪತ್ರವನ್ನು ಕೊಡತಕ್ಕುದು. ಅಂಥ ಬಂಧಪತ್ರವು ನ್ಯಾಯಾಧೀಶನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶಿಸಬಹುದಾದಂಥ ನಮೂನೆಯಲ್ಲಿ ಇರತಕ್ಕುದು.

(2) ಮೃತನು ಹಿಂದೂ, ಮಹಮದೀಯ, ಬೌದ್ಧ, ಸಿಖ್ ಅಥವಾ ಜೈನ ಅಥವಾ ವಿನಾಯಿತಿ ಪಡೆದ ವ್ಯಕ್ತಿಯಾಗಿದ್ದಾಗ:-

(ಎ) 241ನೇ ಪ್ರಕರಣದ ಮೇರೆಗಿನ ನೀಡಿಕೆಯ ಸಂಬಂಧದಲ್ಲಿ (1)ನೇ ಉಪ-ಪ್ರಕರಣದಲ್ಲಿ ಮಾಡಿದ ವಿನಾಯಿತಿಯು ಪ್ರವರ್ತನೆಗೊಳ್ಳತಕ್ಕುದಲ್ಲ ;

(ಬಿ) ಜಿಲ್ಲಾ ನ್ಯಾಯಾಧೀಶನು ಇದೇ ತರದ ಒಂದು ಬಂಧಪತ್ರವನ್ನು ಕೊಡುವಂತೆ ಪ್ರೊಬೇಟನ್ನು ಯಾರಿಗೆ ಮಂಜೂರು ಮಾಡಲಾಗಿದೆಯೋ ಆ ವ್ಯಕ್ತಿಯಿಂದ ತಗಾದೆ ಮಾಡಬಹುದು.

292. ಆಡಳಿತ ಬಂಧಪತ್ರವನ್ನು ವಹಿಸಿಕೊಡುವುದು:- ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಮನವಿ ಮಾಡಿಕೊಂಡ ಮೇಲೆ ನ್ಯಾಯಾಲಯವು ಅಂಥ ಯಾವುದೇ ಬಂಧಪತ್ರದ ವಚನಬದ್ಧತೆಯನ್ನು ಪಾಲಿಸಲಾಗಿಲ್ಲ ಎಂದು ಮನಗಂಡ ಮೇಲೆ ಮತ್ತು ಭದ್ರತೆಯ ಬಗ್ಗೆ ಅಥವಾ ಸ್ವೀಕರಿಸಿದ ಹಣವನ್ನು ನ್ಯಾಯಾಲಯದಲ್ಲಿ ಅಥವಾ ಅನ್ಯಥಾ ಸಂದಾಯ ಮಾಡತಕ್ಕದ್ದೆಂದು ಉಪಬಂಧಿಸುವ ಬಗ್ಗೆ ನ್ಯಾಯಾಲಯವು ಸೂಕ್ತವೆಂದು ಯೋಚಿಸಬಹುದಾದಂಥ ನಿಬಂಧನೆಗಳ ಮೇಲೆ ಆ ಬಂಧಪತ್ರವನ್ನು ಯಾವನೇ ವ್ಯಕ್ತಿಗೆ, ಅವನ ನಿರ್ವಾಹಕರಿಗೆ ಅಥವಾ ಆಡಳಿತಗಾರರಿಗೆ ವಹಿಸತಕ್ಕುದು. ಮತ್ತು ಆ ತರುವಾಯ ನ್ಯಾಯಾಲಯದ ನ್ಯಾಯಾಧೀಶನಿಗೆ ಬದಲಾಗಿ ಆ ಯಾವನೇ ವ್ಯಕ್ತಿಗೆ, ಅವನ ನಿರ್ವಾಹಕನಿಗೆ ಅಥವಾ ಆಡಳಿತಗಾರರಿಗೆ ಆ ಬಂಧಪತ್ರವನ್ನು ಮೂಲತಃ ಕೊಟ್ಟಿದ್ದಿದ್ದರೆ ಹೇಗೋ ಹಾಗೆ, ಅವನು ಅಥವಾ ಅವರು ತನ್ನ ಅಥವಾ ತಮ್ಮ ಹೆಸರಿನಲ್ಲಿ ಅಥವಾ ಹೆಸರುಗಳಲ್ಲಿ ಸದರಿ ಬಂಧಪತ್ರದ ಮೇಲೆ ದಾವೆ ಹೂಡಲು ಹಕ್ಕುಳ್ಳವನಾಗತಕ್ಕುದು ಅಥವಾ ಹಕ್ಕುಳ್ಳವರಾಗತಕ್ಕುದು ಮತ್ತು ಆ ತರುವಾಯ ಆ ಬಂಧಪತ್ರದ ಯಾವುದೇ ಉಲ್ಲಂಘನೆಯ ಸಂಬಂಧದಲ್ಲಿ ವಸೂಲಾಗತಕ್ಕ ಪೂರ್ಣ ಮೊಬಲಗನ್ನು ಹಿತಾಸಕ್ತರಾದ ಎಲ್ಲ ವ್ಯಕ್ತಿಗಳ ನ್ಯಾಸಧಾರಿಗಳೆಂದು ವಸೂಲು ಮಾಡಲು ಹಕ್ಕುಳ್ಳವರಾಗತಕ್ಕುದು.

293. ಪ್ರೊಬೇಟು ಮತ್ತು ಆಡಳಿತ ಪತ್ರವನ್ನು ನೀಡುವ ಕಾಲ:- ಮರಣ ಶಾಸನ ಕರ್ತನ ಅಥವಾ ಮರಣಶಾಸನ ರಹಿತನ ಮರಣದ ದಿವಸದಿಂದ ಪೂರ್ಣ ಏಳು ದಿವಸಗಳು ಮುಕ್ತಾಯವಾಗುವವರೆಗೆ ಉಯಿಲಿನ ಯಾವುದೇ ಪ್ರೊಬೇಟನ್ನು ಮತ್ತು ಹದಿನಾಲ್ಕು ಪೂರ್ಣ ದಿವಸಗಳು ಮುಕ್ತಾಯವಾಗುವವರೆಗೆ ಯಾವುದೇ ಆಡಳಿತ ಪತ್ರವನ್ನು ನೀಡತಕ್ಕುದಲ್ಲ.

294. ಪ್ರೊಬೇಟು ಅಥವಾ ಉಯಿಲು ಲಗತ್ತಿಸಿದ ಆಡಳಿತ ಪತ್ರವನ್ನು ನೀಡಲಾಗಿರುವಂಥ ಮೂಲ ಉಯಿಲುಗಳನ್ನು ದಾಖಲು ಮಾಡುವುದು:- (1) ಪ್ರತಿಯೊಬ್ಬ ಜಿಲ್ಲಾ ನ್ಯಾಯಾಧೀಶ ಅಥವಾ ಜಿಲ್ಲಾ ಪ್ರತಿನಿಧಿಯು ಪ್ರೊಬೇಟನ್ನು ಅಥವಾ ಯಾವ ಉಯಿಲನ್ನು ಲಗತ್ತಿಸಿ ಅವನು ಆಡಳಿತ ಪತ್ರವನ್ನು ನೀಡಬಹುದೋ ಆ ಎಲ್ಲ ಮೂಲ ಉಯಿಲುಗಳನ್ನು, ಉಯಿಲುಗಳಿಗಾಗಿ ಯಾವುದೇ ಸಾರ್ವಜನಿಕ ನೋಂದಣಿ ಕಛೇರಿಯನ್ನು ಸ್ಥಾಪಿಸುವವರೆಗೆ, ತನ್ನ ನ್ಯಾಯಾಲಯದ ದಾಖಲೆಗಳಲ್ಲಿ ಸೇರಿಸಿ ಸಂರಕ್ಷಿಸಿಡತಕ್ಕುದು.

(2) ಹಾಗೆ ದಾಖಲಾದ ಉಯಿಲುಗಳ ಸಂರಕ್ಷಣೆ ಮತ್ತು ಪರಿಶೀಲನೆಗಾಗಿ ರಾಜ್ಯ ಸರ್ಕಾರವು ವಿನಿಯಮಗಳನ್ನು ರಚಿಸತಕ್ಕುದು.

295. ವಿವಾದಗ್ರಸ್ತ ಪ್ರಕರಣಗಳಲ್ಲಿ ಪ್ರಕ್ರಿಯೆ:- ಜಿಲ್ಲಾ ನ್ಯಾಯಾಧೀಶನ ಮುಂದೆ ವಿವಾದದಲ್ಲಿರುವಂಥ ಯಾವುದೇ ಪ್ರಕರಣದಲ್ಲಿ, ವ್ಯವಹರಣೆಗಳು ಸಾಧ್ಯವಾದಷ್ಟು ಮಟ್ಟಿಗೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) ರ ಉಪ- ಬಂಧಗಳಿಗೆ ಅನುಸಾರವಾಗಿ ಕ್ರಮಬದ್ಧ ದಾವೆ ಸ್ವರೂಪವನ್ನು ಹೊಂದಿರತಕ್ಕುದು ; ಮತ್ತು ಅದರಲ್ಲಿ , ಸಂದರ್ಭಾನುಸಾರ ಪ್ರೊಬೇಟು ಅಥವಾ ಆಡಳಿತ ಪತ್ರದ ಅರ್ಜಿದಾರನು ವಾದಿಯಾಗಿರತಕ್ಕುದು ಮತ್ತು ನೀಡಿಕೆಯನ್ನು ವಿರೋಧಿಸಲು ಹಾಜರಾಗುವ ವ್ಯಕ್ತಿಯು ಪ್ರತಿವಾದಿಯಾಗಿರತಕ್ಕುದು.

296. ರದ್ದಾದ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ಬಿಟ್ಟುಕೊಡುವುದು:- (1) ಈ ಅಧಿನಿಯಮದ ಮೇರೆಗೆ ಪ್ರೊಬೇಟು ಅಥವಾ ಆಡಳಿತ ಪತ್ರದ ನೀಡಿಕೆಯನ್ನು ರದ್ದುಗೊಳಿಸಿದಾಗ ಅಥವಾ ಶೂನ್ಯಗೊಳಿಸಿದಾಗ, ಯಾರಿಗೆ ಅದನ್ನು ನೀಡಲಾಗಿತ್ತೋ ಆ ವ್ಯಕ್ತಿಯು, ತತ್‌ಕ್ಷಣವೇ ಅದನ್ನು ನೀಡಿದ ನ್ಯಾಯಾಲಯಕ್ಕೆ ಆ ಪ್ರೊಬೇಟನ್ನು ಅಥವಾ ಆಡಳಿತ ಪತ್ರವನ್ನು ವಶಾವಣೆ ಮಾಡತಕ್ಕುದು.

(2) ಅಂಥ ವ್ಯಕ್ತಿಯು ಉದ್ದೇಶ ಪೂರ್ವಕವಾಗಿ ಮತ್ತು ಯುಕ್ತ ಕಾರಣವಿಲ್ಲದೆ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ಹಾಗೆ ವಶಾವಣೆ ಮಾಡಲು ತಪ್ಪಿದರೆ, ಅವನು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಮೂರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

297. ಪ್ರೊಬೇಟು ಅಥವಾ ಆಡಳಿತ ಪತ್ರ ರದ್ದುಪಡಿಸುವುದಕ್ಕೆ ಮುಂಚೆ ನಿರ್ವಾಹಕನಿಗೆ ಅಥವಾ ಆಡಳಿತಗಾರನಿಗೆ ಸಂದಾಯ ಮಾಡುವುದು:- ಪ್ರೊಬೇಟು ಅಥವಾ ಆಡಳಿತ ಪತ್ರದ ನೀಡಿಕೆಯನ್ನು ರದ್ದುಗೊಳಿಸಿದಾಗ, ಅದನ್ನು ರದ್ದುಪಡಿಸುವುದಕ್ಕೆ ಮುಂಚೆ, ಅಂಥ ನೀಡಿಕೆಯ ಮೇರೆಗೆ ಯಾವನೇ ನಿರ್ವಾಹಕ ಅಥವಾ ಆಡಳಿತಗಾರನಿಗೆ ಪ್ರಾಮಾಣಿಕವಾಗಿ ಮಾಡಿದ ಎಲ್ಲ ಸಂದಾಯಗಳು ರದ್ದಾಗಿದ್ದಾಗ್ಯೂ, ಅದನ್ನು ಸಂದಾಯ ಮಾಡಿದ ವ್ಯಕ್ತಿಗೆ ಕಾನೂನು ಸಮ್ಮತ ತೀರುವಳಿ ಆಗಿರತಕ್ಕುದು ಮತ್ತು ರದ್ದುಗೊಳಿಸಲಾದಂಥ ಅಂಥ ಯಾವುದೇ ನೀಡಿಕೆಯ ಮೇರೆಗೆ ಕಾರ್ಯನಿರ್ವಹಿಸಿದ ನಿರ್ವಾಹಕ ಅಥವಾ ಆಡಳಿತಗಾರನು, ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ಆ ತರುವಾಯ ಯಾವ ವ್ಯಕ್ತಿಗೆ ನೀಡಬಹುದೋ ಆ ವ್ಯಕ್ತಿಯು ಕಾನೂನು ಸಮ್ಮತವಾಗಿ ಮಾಡಿದ್ದಿರಬಹುದಾದಂಥ ಸಂದಾಯಗಳನ್ನು ಅವನು ಉಳಿಸಿಕೊಳ್ಳಬಹುದು ಮತ್ತು ತಾನು ಮಾಡಿದ ಯಾವುದೇ ಸಂದಾಯಗಳಿಗೆ ಸಂಬಂಧಿಸಿದಂತೆ ಅಂಥ ಸಂದಾಯಗಳನ್ನು ತುಂಬಿಕೊಳ್ಳಬಹುದು.

298. ಆಡಳಿತ ಪತ್ರವನ್ನು ನಿರಾಕರಿಸಲು ಅಧಿಕಾರ:- ಇದರಲ್ಲಿ ಈ ಹಿಂದೆ ಏನೇ ಅಡಕವಾಗಿದ್ದಾಗ್ಯೂ, ಮೃತನು ಮಹಮದೀಯ, ಬೌದ್ಧ ಅಥವಾ ವಿನಾಯಿತಿ ಪಡೆದ ವ್ಯಕ್ತಿಯಾಗಿದ್ದಲ್ಲಿ 57ನೇ ಪ್ರಕರಣವು ಅನ್ವಯಿಸದೇ ಇರುವ ಹಿಂದೂ, ಸಿಖ್ ಅಥವಾ ಜೈನನಾಗಿದ್ದಲ್ಲಿ ಈ ಅಧಿನಿಯಮದ ಮೇರೆಗೆ ಆಡಳಿತ ಪತ್ರಕ್ಕಾಗಿ ಸಲ್ಲಿಸಿದ ಯಾವುದೇ ಅರ್ಜಿಯ ಮಂಜೂರಾತಿಯನ್ನು, ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ನಿರಾಕರಿಸುವ ಆದೇಶವನ್ನು ಮಾಡುವುದು ನ್ಯಾಯಾಲಯದ ವಿವೇಚನೆಗೆ ಸೇರಿರತಕ್ಕುದು.

299. ಜಿಲ್ಲಾ ನ್ಯಾಯಾಧೀಶನ ಆದೇಶಗಳ ವಿರುದ್ಧ ಅಪೀಲುಗಳು:-ಈ ಮೂಲಕ ಜಿಲ್ಲಾ ನ್ಯಾಯಾಧೀಶನಿಗೆ ಪ್ರದತ್ತವಾದ ಅಧಿಕಾರಗಳಿಂದಾಗಿ ಅವನು ಮಾಡಿದ ಪ್ರತಿಯೊಂದು ಆದೇಶವು ಅಪೀಲುಗಳಿಗೆ ಅನ್ವಯವಾಗಬಹುದಾದ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5) ಉಪಬಂಧಗಳಿಗೆ ಅನುಸಾರವಾಗಿ ಉಚ್ಚ ನ್ಯಾಯಾಲಯಕ್ಕೆ ಮಾಡಿಕೊಳ್ಳಲು ಒಳಪಟ್ಟಿರತಕ್ಕುದು.

300. ಉಚ್ಚ ನ್ಯಾಯಾಲಯದ ಸಮವರ್ತಿ ಅಧಿಕಾರ ವ್ಯಾಪ್ತಿ:- (1) ಈ ಮೂಲಕ ಜಿಲ್ಲಾ ನ್ಯಾಯಾಧೀಶನಿಗೆ ಪ್ರದತ್ತವಾದ ಎಲ್ಲ ಅಧಿಕಾರಗಳನ್ನು ಚಲಾಯಿಸುವಲ್ಲಿ ಉಚ್ಚ ನ್ಯಾಯಾಲಯವು ಜಿಲ್ಲಾ ನ್ಯಾಯಾಧೀಶನೊಂದಿಗೆ ಸಮವರ್ತಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕುದು.

(2) 57ನೇ ಪ್ರಕರಣವು ಅನ್ವಯವಾಗುವಂಥ ಪ್ರಕರಣಗಳನ್ನು ಹೊರತುಪಡಿಸಿ, ಯಾವುದೇ ಉಚ್ಚ ನ್ಯಾಯಾಲಯವು, ಕಲ್ಕತ್ತ, ಮದ್ರಾಸು ಮತ್ತು ಮುಂಬಯಿ ಪಟ್ಟಣದ ಪರಿಮಿತಿಗಳಿಂದಾಚೆ ಇರುವ ಯಾವುದೇ ಸ್ಥಳೀಯ ಪ್ರದೇಶದ ಮೇಲೆ, ಈ ಮೂಲಕ ಪ್ರದಾನ ಮಾಡಿದ ಸಮವರ್ತಿ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಲ್ಲಿ, ಮೃತನು ಹಿಂದು, ಮಹಮದೀಯ, ಬೌದ್ಧ, ಸಿಖ್ ಅಥವಾ ಜೈನ ಅಥವಾ ವಿನಾಯಿತಿ ಪಡೆದ ವ್ಯಕ್ತಿಯಾಗಿರುವಲ್ಲಿ, ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಪ್ರೊಬೇಟು ಅಥವಾ ಆಡಳಿತ ಪತ್ರಕ್ಕಾಗಿ ಅರ್ಜಿಗಳನ್ನು ಸ್ವೀಕರಿಸಲು ಆ ಉಚ್ಚ ನ್ಯಾಯಾಲಯವನ್ನು ಅಧಿಕೃತಗೊಳಿಸುವವರೆಗೆ ಅದು ಸ್ವೀಕರಿಸತಕ್ಕುದಲ್ಲ.

301. ನಿರ್ವಾಹಕ ಅಥವಾ ಆಡಳಿತಗಾರನನ್ನು ತೆಗೆದು ಹಾಕುವುದು ಮತ್ತು ಉತ್ತರಾಧಿಕಾರಿಗಾಗಿ ವ್ಯವಸ್ಥೆ ಮಾಡುವುದು:-ಉಚ್ಚ ನ್ಯಾಯಾಲಯವು ಅದಕ್ಕೆ ಮಾಡಿಕೊಂಡ ಅರ್ಜಿಯ ಮೇಲೆ ಯಾವನೇ ಖಾಸಗಿ ನಿರ್ವಾಹಕ ಅಥವಾ ಆಡಳಿತಗಾರರನ್ನು ಅಮಾನತುಗೊಳಿಸಬಹುದು, ತೆಗೆದು ಹಾಕಬಹುದು ಅಥವಾ ಸೇವೆಯಿಂದ ಬಿಡುಗಡೆ ಮಾಡಬಹುದು ಮತ್ತು ಪದದಲ್ಲಿರುವುದು ಮುಕ್ತಾಯವಾಗುವ ಯಾವನೇ ಅಂತಹ ನಿರ್ವಾಹಕ ಅಥವಾ ಆಡಳಿತಗಾರನ ಪದಕ್ಕೆ ಇನ್ನೊಬ್ಬ ವ್ಯಕ್ತಿಯು ಉತ್ತರಾಧಿಕಾರಿಯಾಗಲು ಮತ್ತು ಅಂಥ ಉತ್ತರಾಧಿಕಾರಿಯಲ್ಲಿ ಆ ಎಸ್ಟೇಟಿಗೆ ಸೇರಿದ ಯಾವುದೇ ಸ್ವತ್ತು ನಿಹಿತವಾಗಲು ವ್ಯವಸ್ಥೆ ಮಾಡಬಹುದು.

302. ನಿರ್ವಾಹಕ ಅಥವಾ ಆಡಳಿತಗಾರನಿಗೆ ನಿರ್ದೇಶನಗಳು:- ಈ ಅಧಿನಿಯಮದ ಮೇರೆಗೆ ಯಾವುದೇ ಎಸ್ಟೇಟಿಗೆ ಸಂಬಂಧಿಸಿದಂತೆ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ನೀಡುವಲ್ಲಿ, ಉಚ್ಚ ನ್ಯಾಯಾಲಯವು, ಅದಕ್ಕೆ ಮಾಡಿಕೊಂಡ ಅರ್ಜಿಯ ಮೇಲೆ, ಆ ಎಸ್ಟೇಟಿನ ಬಗ್ಗೆ ಅಥವಾ ಅದರ ಆಡಳಿತದ ಬಗ್ಗೆ ನಿರ್ವಾಹಕನಿಗೆ ಅಥವಾ ಆಡಳಿತಗಾರನಿಗೆ ಯಾವುವೇ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳನ್ನು ಕೊಡಬಹುದು.

## ಅಧ್ಯಾಯ - V

## ಅನಧಿಕೃತ ನಿರ್ವಾಹಕರ ಬಗ್ಗೆ

303. ಅನಧಿಕೃತ ನಿರ್ವಾಹಕ:- ಹಕ್ಕುಳ್ಳ ಯಾವನೇ ನಿರ್ವಾಹಕ ಅಥವಾ ಆಡಳಿತಗಾರನು ಇಲ್ಲದಿರುವಾಗ ಮೃತನ ಎಸ್ಟೇಟಿನಲ್ಲಿ ಮಧ್ಯಪ್ರವೇಶಿಸುವ ಅಥವಾ ನಿರ್ವಾಹಕನ ಪದದ ಯಾವುದೇ ಇತರ ಕಾರ್ಯವನ್ನು ಮಾಡುವ ವ್ಯಕ್ತಿಯು ಅನಧಿಕೃತ ನಿರ್ವಾಹಕನೆನಿಸಿಕೊಳ್ಳುತ್ತಾನೆ.

*ಅಪವಾದಗಳು:-* ಮೃತನ ಸರಕುಗಳನ್ನು ಸಂರಕ್ಷಿಸುವ ಉದ್ದೇಶಕ್ಕಾಗಿ ಮಧ್ಯಪ್ರವೇಶಿಸುವ ಅಥವಾ ಅವನ ಅಂತ್ಯ ಕ್ರಿಯೆಗಾಗಿ ಅಥವಾ ಅವನ ಕುಟುಂಬ ಅಥವಾ ಸ್ವತ್ತಿನ ಜರೂರು ಅವಶ್ಯಕತೆಗಳಿಗಾಗಿ ವ್ಯವಸ್ಥೆ ಮಾಡುವ ವ್ಯಕ್ತಿಯನ್ನು ಅನಧಿಕೃತ ನಿರ್ವಾಹಕನನ್ನಾಗಿಸುವುದಿಲ್ಲ.

(2) ಬೇರೊಬ್ಬನಿಂದ ಸ್ವೀಕರಿಸಿದ ಮೃತನ ಸರಕುಗಳ ಬಗ್ಗೆ ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ವ್ಯವಹರಿಸುವುದು ಅವನನ್ನು ಅನಧಿಕೃತ ನಿರ್ವಾಹಕನನ್ನಾಗಿಸುವುದಿಲ್ಲ.

ದೃಷ್ಟಾಂತಗಳು

(i) 'ಎ' ನು ಮೃತನ ಕೆಲವು ಸರಕುಗಳನ್ನು ಉಪಯೋಗಿಸುತ್ತಾನೆ ಅಥವಾ ಕೊಟ್ಟುಬಿಡುತ್ತಾನೆ ಅಥವಾ ಮಾರಾಟ ಮಾಡುತ್ತಾನೆ ಅಥವಾ ತನ್ನ ಋಣ ಅಥವಾ ಮರಣ ಶಾಸನ ಸ್ವತ್ತಿನ ತೀರಿಕೆಗಾಗಿ ಅವುಗಳನ್ನು ತೆಗೆದುಕೊಳ್ಳುತ್ತಾನೆ ಅಥವಾ ಮೃತನ ಋಣಗಳ ಸಂದಾಯವನ್ನು ಸ್ವೀಕರಿಸುತ್ತಾನೆ ಅವನು ಅನಧಿಕೃತ ನಿರ್ವಾಹಕನಾಗಿದ್ದಾನೆ.

(ii) 'ಎ' ನು, ಮೃತನ ಜೀವಿತ ಕಾಲದಲ್ಲಿ ಋಣಗಳನ್ನು ವಸೂಲ್ಮಾಡಲು ಮತ್ತು ಅವನ ಸರಕುಗಳನ್ನು ಮಾರಾಟ ಮಾಡಲು ಮೃತನಿಂದ ಏಜೆಂಟನಾಗಿ ನೇಮಕಗೊಂಡಿದ್ದು ಅವನ ಮರಣದ ವಿಚಾರವು ಅವನಿಗೆ ಗೊತ್ತಾದ ತರುವಾಯವೂ ಹಾಗೆ ಮಾಡುವುದನ್ನು ಮುಂದುವರಿಸುತ್ತಾನೆ. ಮೃತನ ಮರಣದ ವಿಚಾರವು ಅವನಿಗೆ ಗೊತ್ತಾದ ತರುವಾಯ ಅವನು ಮಾಡಿದ ಕಾರ್ಯಗಳಿಗೆ ಸಂಬಂಧಿಸಿದಂತೆ ಅವನ ಅನಧಿಕೃತ ನಿರ್ವಾಹಕನಾಗಿದ್ದಾನೆ.

(iii) 'ಎ' ನು, ಮೃತನ ನಿರ್ವಾಹಕನಾಗಿಲ್ಲದಿದ್ದಾಗ್ಯೂ, ನಿರ್ವಾಹಕನೆಂಬುದಾಗಿ ದಾವೆ ಹೂಡುತ್ತಾನೆ ಅವನು ಅನಧಿಕೃತ ನಿರ್ವಾಹಕನಾಗಿದ್ದಾನೆ.

304. ಅನಧಿಕೃತ ನಿರ್ವಾಹಕನ ಹೊಣೆಗಾರಿಕೆ:- ಒಬ್ಬ ವ್ಯಕ್ತಿಯು, ಅನಧಿಕೃತ ನಿರ್ವಾಹಕನಾಗುವ ಹಾಗೆ ಕಾರ್ಯ ನಿರ್ವಹಿಸಿರುವಾಗ, ಮೃತನ ಹಕ್ಕುಳ್ಳ ನಿರ್ವಾಹಕ ಅಥವಾ ಆಡಳಿತಗಾರ ಅಥವಾ ಯಾವನೇ ಸಾಲ ಕೊಟ್ಟವನು ಅಥವಾ ಲೆಗಟಿ- ಇವರಿಗೆ, ಹಕ್ಕುಳ್ಳ ನಿರ್ವಾಹಕ ಅಥವಾ ಆಡಳಿತಗಾರನಿಗೆ ಮಾಡಿದ ಸಂದಾಯಗಳನ್ನು ಮತ್ತು ಆಡಳಿತದ ಯಥಾ ಕ್ರಮದಲ್ಲಿ ಮಾಡಿದ ಸಂದಾಯಗಳನ್ನು ಕಳೆದ ತರುವಾಯ ಅವನ ಕೈಗೆ ಬಂದಿರಬಹುದಾದಂಥ ಆಸ್ತಿಗಳಷ್ಟರ ಮಟ್ಟಿಗೆ ಜವಾಬ್ದಾರನಾಗಿರುತ್ತಾನೆ.

## ಅಧ್ಯಾಯ - VI

## ನಿರ್ವಾಹಕ ಅಥವಾ ಆಡಳಿತಗಾರನ ಅಧಿಕಾರಗಳ ಬಗ್ಗೆ

305. ಮೃತನ ನಂತರ ಉಳಿದಿರುವ ವ್ಯಾಜ್ಯ ಕಾರಣಗಳು ಮತ್ತು ಮರಣದ ಕಾಲದಲ್ಲಿ ಬಾಕಿ ಬರಬೇಕಾದ ಋಣಗಳು:- ನಿರ್ವಾಹಕನು ಅಥವಾ ಆಡಳಿತಗಾರನು, ಮೃತನ ನಂತರ ಉಳಿದಿರುವ ಎಲ್ಲಾ ವ್ಯಾಜ್ಯ ಕಾರಣಗಳಿಗೆ ಸಂಬಂಧಿಸಿದಂತೆ ಮೃತನು ಬದುಕಿದ್ದಾಗ ಅವನು ಹೊಂದಿದ್ದಂಥದೇ ಅಧಿಕಾರವನ್ನು ನಿರ್ವಾಹಕ ಅಥವಾ ಆಡಳಿತಗಾರನು ಹೊಂದಿರುತ್ತಾನೆ. ಮತ್ತು ಋಣಗಳನ್ನು ವಸೂಲ್ಮಾಡುವುದಕ್ಕಾಗಿ ಅಂಥದೇ ಅಧಿಕಾರವನ್ನು ಚಲಾಯಿಸಬಹುದು.

306. ಮೃತನ ಅಥವಾ ಅವನ ವಿರುದ್ಧದ ತಗಾದೆಗಳು ಮತ್ತು ಕ್ರಮ ಕೈಗೊಳ್ಳುವ ಹಕ್ಕುಗಳು ನಿರ್ವಾಹಕ ಅಥವಾ ಆಡಳಿತಗಾರನಿಗೆ ಮತ್ತು ಅವನ ವಿರುದ್ಧ ಉಳಿಯುವುದು:- ಒಬ್ಬ ವ್ಯಕ್ತಿಗೆ ಅವನ ಮರಣದ ಕಾಲದಲ್ಲಿ, ಅವನ ಪರವಾಗಿ ಅಥವಾ ಅವನ ವಿರುದ್ಧ ಇರುವ ಯಾವುವೇ ತಗಾದೆಗಳು ಮತ್ತು ಯಾವುದೇ ಕ್ರಮ ಅಥವಾ ವಿಶೇಷ ವ್ಯವಹರಣೆಯನ್ನು ಪ್ರಾಸಿಕ್ಯೂಟ್ ಮಾಡಲು ಅಥವಾ ಪ್ರತಿ ರಕ್ಷಿಸಿಕೊಳ್ಳಲು ಇರುವ ಎಲ್ಲ ಹಕ್ಕುಗಳು, ಭಾರತ ದಂಡ ಸಂಹಿತೆಯಲ್ಲಿ (1860ರ 45) ಪರಿಭಾಷಿಸಿದಂತೆ ಮಾನ ಹಾನಿ, ಹಲ್ಲೆ ಅಥವಾ ಪಕ್ಷಕಾರನ ಮರಣವನ್ನುಂಟು ಮಾಡದಂಥ ಇತರ ದೈಹಿಕ ಕ್ಷತಿಗಳ ಬಗೆಗಿನ ವ್ಯಾಜ್ಯ ಕಾರಣಗಳನ್ನು ಹೊರತುಪಡಿಸಿ, ಮತ್ತು ಆ ಪಕ್ಷಕಾರನ ಮರಣಾನಂತರ ಕೋರಲಾದ ಪರಿಹಾರವನ್ನು ಅನುಭೋಗಿಸಲಾಗದ ಅಥವಾ ಅದನ್ನು ಮಂಜೂರ್ಮಾಡುವುದು ನಿಷ್ಪ್ರಯೋಜಕವಾಗುವ ಪ್ರಕರಣಗಳನ್ನು ಹೊರತುಪಡಿಸಿ, ಅವನ ನಿರ್ವಾಹಕರು ಅಥವಾ ಆಡಳಿತಗಾರರಿಗೆ ಅಥವಾ ಅವರ ವಿರುದ್ಧ ಉಳಿಯುತ್ತದೆ.

ದೃಷ್ಟಾಂತಗಳು

(i) ಒಬ್ಬ ಅಧಿಕಾರಿಯ ಯಾವುದೇ ನಿರ್ಲಕ್ಷ್ಯತೆ ಅಥವಾ ತಪ್ಪಿತದ ಪರಿಣಾಮವಾಗಿ ರೈಲು ಮಾರ್ಗದಲ್ಲಿ ಡಿಕ್ಕಿ ಸಂಭವಿಸುತ್ತದೆ ಮತ್ತು ಒಬ್ಬ ಪ್ರಯಾಣಿಕನು ತೀವ್ರವಾಗಿ, ಆದರೆ ಮರಣವುಂಟಾಗದ ಹಾಗೆ ಗಾಯಗೊಳ್ಳುತ್ತಾನೆ. ಅವನು ಆ ತರುವಾಯ ಯಾವುದೇ ಕ್ರಮವನ್ನು ಕೈಗೊಳ್ಳದೆಯೆ ಮರಣ ಹೊಂದುತ್ತಾನೆ. ವ್ಯಾಜ್ಯ ಕಾರಣವು ಉಳಿಯುವುದಿಲ್ಲ.

(ii) 'ಎ' ನು ವಿವಾಹ ವಿಚ್ಛೇದನಕ್ಕೆ ದಾವೆ ಹೂಡುತ್ತಾನೆ, 'ಎ' ನು ಮರಣ ಹೊಂದುತ್ತಾನೆ. ವ್ಯಾಜ್ಯ ಕಾರಣವು ಅವನ ಪ್ರತಿನಿಧಿಗಳಿಗೆ ಉಳಿಯುವುದಿಲ್ಲ.

307. ಸ್ವತ್ತನ್ನು ವಿಲೆ ಮಾಡಲು ನಿರ್ವಾಹಕನ ಅಥವಾ ಆಡಳಿತಗಾರನ ಅಧಿಕಾರ:- (1) (2) ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ನಿರ್ವಾಹಕನು ಅಥವಾ ಆಡಳಿತಗಾರನು 211 ನೇ ಪ್ರಕರಣದ ಮೇರೆಗೆ ಅವನಲ್ಲಿ ನಿಹಿತವಾಗಿರುವ ಮೃತನ ಸ್ವತ್ತನ್ನು ಸಂಪೂರ್ಣವಾಗಿ ಅಥವಾ ಭಾಗಶಃ ತಾನು ಸೂಕ್ತವೆಂದು ಯೋಚಿಸುವಂಥ ರೀತಿಯಲ್ಲಿ ವಿಲೇ ಮಾಡಲು ಅಧಿಕಾರವನ್ನು ಹೊಂದಿರುತ್ತಾನೆ.

ದೃಷ್ಟಾಂತಗಳು

(i) ಮೃತನು ತನ್ನ ಸ್ವತ್ತಿನ ಒಂದು ಭಾಗವನ್ನು ನಿರ್ದಿಷ್ಟ ಮರಣ ಶಾಸನ ದಾನವಾಗಿ ಕೊಟ್ಟಿದ್ದಾನೆ. ನಿರ್ವಾಹಕನು ಮರಣ ಶಾಸನ ದಾನಕ್ಕೆ ಸಮ್ಮತಿಸದೆ ಇದ್ದು ಅದರ ವಸ್ತು ವಿಷಯವನ್ನು ಮಾರಾಟ ಮಾಡುತ್ತಾನೆ. ಆ ಮಾರಾಟವು ಸಿಂಧುವಾಗಿರುತ್ತದೆ.

(ii) ನಿರ್ವಾಹಕನು ತನ್ನ ವಿವೇಚನಾಧಿಕಾರವನ್ನು ಚಲಾಯಿಸಿ ಮೃತನ ಸ್ಥಿರ ಎಸ್ಟೇಟಿನ ಒಂದು ಭಾಗವನ್ನು ಅಡಮಾನ ಮಾಡುತ್ತಾನೆ. ಅಡಮಾನವು ಸಿಂಧುವಾಗಿರುತ್ತದೆ.

(2) ಮೃತನು ಹಿಂದು, ಮಹಮದೀಯ, ಬೌದ್ಧ, ಸಿಖ್ ಅಥವಾ ಜೈನ ಅಥವಾ ಒಬ್ಬ ವಿನಾಯಿತಿ ಪಡೆದ ವ್ಯಕ್ತಿಯಾಗಿದ್ದರೆ, (1) ನೇ ಉಪಪ್ರಕರಣದಿಂದ ಪ್ರದತ್ತವಾದ ಸಾಮಾನ್ಯ ಅಧಿಕಾರವು, ಕೆಳಕಂಡ ಪರಿಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರತಕ್ಕುದು, ಎಂದರೆ:-

(i) ನಿರ್ವಾಹಕನಲ್ಲಿ ಹಾಗೆ ನಿಹಿತವಾದ ಸ್ಥಿರ ಸ್ವತ್ತನ್ನು ವಿಲೇ ಮಾಡುವ ಅವನ ಅಧಿಕಾರವು ಅವನಿಗೆ ಪ್ರೊಬೇಟನ್ನು ನೀಡಿದ್ದು ಮತ್ತು ಆ ಪ್ರೊಬೇಟನ್ನು ನೀಡಿದ್ದಂತಹ ನ್ಯಾಯಾಲಯವು, ಪರಿಬಂಧವಿದ್ದಾಗ್ಯೂ, ಆದೇಶದ ಮೂಲಕ ಅನುಮತಿಸಿದ ರೀತಿಯಲ್ಲಿ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಸ್ಥಿರ ಸ್ವತ್ತನ್ನು ವಿಲೇ ಮಾಡಲು ಬರಹದಲ್ಲಿನ ಆದೇಶದ ಮೂಲಕ ಅವನಿಗೆ ಅನುಮತಿ ಕೊಟ್ಟಿರುವ ಹೊರತು ಅವನನ್ನು ನೇಮಕ ಮಾಡಿದ ಉಯಿಲಿನ ಮೂಲಕ ಈ ಬಗ್ಗೆ ವಿಧಿಸಬಹುದಾದಂಥ ಯಾವುದೇ ಪರಿಬಂಧಕ್ಕೆ ಒಳಪಟ್ಟಿರುತ್ತದೆ.

(ii) ಆಡಳಿತಗಾರನು, ಆಡಳಿತ ಪತ್ರವನ್ನು ನೀಡಿದ್ದಂಥ ನ್ಯಾಯಾಲಯದ ಪೂರ್ವಾನುಮತಿ ಇಲ್ಲದೆ,-

(ಎ) 211ನೇ ಪ್ರಕರಣದ ಮೇರೆಗೆ ತನ್ನಲ್ಲಿ ತತ್ಕಾಲದಲ್ಲಿ ನಿಹಿತವಾಗಿರುವ ಯಾವುದೇ ಸ್ಥಿರ ಸ್ವತ್ತನ್ನು ಅಡಮಾನ, ಋಣಭಾರ ಅಥವಾ ಮಾರಾಟ, ದಾನ, ವಿನಿಮಯದ ಮೂಲಕ ಅಥವಾ ಅನ್ಯಥಾ ವರ್ಗಾವಣೆಯನ್ನು ಮಾಡುವಂತಿಲ್ಲ; ಅಥವಾ

(ಬಿ) ಅಂಥ ಯಾವುದೇ ಸ್ವತ್ತನ್ನು ಐದು ವರ್ಷಗಳಿಗೆ ಮೀರಿದ ಅವಧಿಗೆ ಗೇಣಿಗೆ ಕೊಡುವಂತಿಲ್ಲ.

(iii) ಸಂದರ್ಭಾನುಸಾರ (1) ನೇ ಖಂಡ ಅಥವಾ (2)ನೇ ಖಂಡವನ್ನು ಉಲ್ಲಂಘಿಸಿ ನಿರ್ವಾಹಕನು ಅಥವಾ ಆಡಳಿತಗಾರನು ಮಾಡಿದ ಸ್ವತ್ತಿನ ವಿಲೆಯು ಆ ಸ್ವತ್ತಿನಲ್ಲಿ ಹಿತಾಸಕ್ತಿಯನ್ನು ಹೊಂದಿದ ಯಾವನೇ ಇತರ ವ್ಯಕ್ತಿಯ ಕೋರಿಕೆಯ ಮೇರೆಗೆ ಶೂನ್ಯಕರಣೀಯವಾಗುತ್ತದೆ.

(3) ಅಂಥ ಪ್ರಕರಣದಲ್ಲಿ ಯಾವುದೇ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ನೀಡುವುದಕ್ಕೆ ಮುಂಚೆ, ಸಂದರ್ಭಾನುಸಾರ (1)ನೇ ಉಪಪ್ರಕರಣ ಮತ್ತು (2)ನೇ ಉಪಪ್ರಕರಣದ (i) ನೇ ಮತ್ತು (iii) ನೇ ಖಂಡಗಳ ಅಥವಾ (1) ನೇ ಉಪಪ್ರಕರಣ ಮತ್ತು (2)ನೇ ಉಪಪ್ರಕರಣದ (ii) ನೇ ಮತ್ತು (iii) ನೇ ಖಂಡಗಳನ್ನು ಅದರ ಮೇಲೆ ಹಿಂಬರಹ ಮಾಡತಕ್ಕುದು ಅಥವಾ ಆ ಖಂಡಗಳ ಪ್ರತಿಯನ್ನು ಅದಕ್ಕೆ ಲಗತ್ತಿಸತಕ್ಕುದು.

(4) (3)ನೇ ಉಪಪ್ರಕರಣವು ಅಗತ್ಯಪಡಿಸಲಾದ ಹಿಂಬರಹವನ್ನು ಮಾಡದೆ ಇರುವ ಅಥವಾ ಅನುಬಂಧವನ್ನು ಅದಕ್ಕೆ ಲಗತ್ತಿಸದೆ ಇರುವ ಕಾರಣದಿಂದಾಗಿ ಪ್ರೊಬೇಟು ಅಥವಾ ಆಡಳಿತ ಪತ್ರವು ಅಸಿಂಧುಗೊಳ್ಳತಕ್ಕುದಲ್ಲ, ಅಥವಾ ಅಂಥ ಹಿಂಬರಹ ಅಥವಾ ಅನುಬಂಧದ ಇಲ್ಲದಿರುವಿಕೆಯು ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ ಅಲ್ಲದೆ ಅನ್ಯಥಾ ಕಾರ್ಯನಿರ್ವಹಿಸಲು ನಿರ್ವಾಹಕ ಅಥವಾ ಆಡಳಿತಗಾರನನ್ನು ಅಧಿಕೃತಗೊಳಿಸತಕ್ಕುದಲ್ಲ.

308. ಆಡಳಿತದ ಸಾಮಾನ್ಯಾಧಿಕಾರಗಳು:- ನಿರ್ವಾಹಕನು ಅಥವಾ ಆಡಳಿತಗಾರನು ಯಾವುದೇ ವೆಚ್ಚಕ್ಕೆ ಸಂಬಂಧಿಸಿದಂತೆ ತಾನು ಕಾನೂನು ಸಮ್ಮತವಾಗಿ ಚಲಾಯಿಸಬಹುದಾದ ಇತರ ಯಾವುವೇ ಅಧಿಕಾರಗಳ ಜೊತೆಗೆ, ಆದರೆ ಅವುಗಳನ್ನು ಅಲ್ಪೀಕರಿಸದೆ,-

(ಎ) ತಾನು ಆಡಳಿತ ನಡೆಸುತ್ತಿರುವ ಯಾವುದೇ ಎಸ್ಟೇಟಿಗೆ ಸೇರಿದ ಯಾವುದೇ ಸ್ವತ್ತಿನ ಸರಿಯಾದ ರಕ್ಷಣೆ ಅಥವಾ ವ್ಯವಸ್ಥಾಪನೆಗಾಗಿ ಅವಶ್ಯವಾಗಬಹುದಾದಂತಹ ಕಾರ್ಯಗಳ ಬಗ್ಗೆ; ಮತ್ತು

(ಬಿ) ಉಚ್ಚ ನ್ಯಾಯಾಲಯದ ಮಂಜೂರಾತಿ ಪಡೆದು ಅಂಥ ಸ್ವತ್ತಿನ ಸಂಬಂಧದಲ್ಲಿ ಯುಕ್ತ ಮತ್ತು ಸೂಕ್ತವಾಗಬಹುದಾದಂತಹ ಧಾರ್ಮಿಕ, ಧರ್ಮಾರ್ಥ ಮತ್ತಿತರ ಉದ್ದೇಶಗಳ ಬಗ್ಗೆ ಮತ್ತು ಮೇಲ್ಪಾಟುಗಳ ಬಗ್ಗೆ

- ವೆಚ್ಚವನ್ನು ವಹಿಸಬಹುದು.

309. ದಲ್ಲಾಳಿ ಅಥವಾ ಏಜೆನ್ಸಿ ವೆಚ್ಚಗಳು:- ನಿರ್ವಾಹಕ ಅಥವಾ ಆಡಳಿತಗಾರನು ಅಡ್ಮಿನಿಸ್ಟ್ರೇಟರ್ ಜನರಲ್ ಅಧಿನಿಯಮ, 1913ರ (1913ರ 3) ಮೂಲಕ ಅಥವಾ ಅದರ ಮೇರೆಗೆ ಅಡ್‌ಮಿನಿಸ್ಟ್ರೇಟರ್ ಜನರಲ್‌ನಿಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ದರದಲ್ಲಿ ಯಾವುದೇ ದಲ್ಲಾಳಿ ಅಥವಾ ಏಜೆನ್ಸಿ ವೆಚ್ಚಗಳನ್ನು ಸ್ವೀಕರಿಸಲು ಅಥವಾ ಉಳಿಸಿಕೊಳ್ಳಲು ಹಕ್ಕುದಾರನಾಗತಕ್ಕುದಲ್ಲ.

310. ಮೃತನ ಸ್ವತ್ತನ್ನು ನಿರ್ವಾಹಕ ಅಥವಾ ಆಡಳಿತಗಾರನು ಖರೀದಿ ಮಾಡುವುದು:- ಯಾವನೇ ನಿರ್ವಾಹಕ ಅಥವಾ ಆಡಳಿತಗಾರನು ಮೃತನ ಸ್ವತ್ತಿನ ಯಾವುದೇ ಭಾಗವನ್ನು ನೇರವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲೀ ಖರೀದಿ ಮಾಡಿದರೆ, ಮಾರಾಟವಾದ ಸ್ವತ್ತಿನಲ್ಲಿ ಹಿತಾಸಕ್ತಿಯನ್ನು ಹೊಂದಿದ ಯಾವನೇ ಇತರ ವ್ಯಕ್ತಿಯ ಕೋರಿಕೆಯ ಮೇಲೆ ಮಾರಾಟವು ಶೂನ್ಯಕರಣೀಯವಾಗಿರುತ್ತದೆ.

311. ಹಲವಾರು ನಿರ್ವಾಹಕರು ಅಥವಾ ಆಡಳಿತಗಾರರ ಅಧಿಕಾರಗಳನ್ನು ಒಬ್ಬನೇ ಚಲಾಯಿಸಬಹುದು:- ಹಲವಾರು ನಿರ್ವಾಹಕರು ಅಥವಾ ಆಡಳಿತಗಾರರು ಇರುವಾಗ, ಎಲ್ಲರ ಅಧಿಕಾರಗಳನ್ನು, ತದ್ವಿರುದ್ಧವಾದ ಯಾವುದೇ ನಿರ್ದೇಶನವು ಇರದಿರುವಲ್ಲಿ, ಅವರ ಪೈಕಿ ಉಯಿಲನ್ನು ರುಜುವಾತುಪಡಿಸಿರುವವನು ಅಥವಾ ಆಡಳಿತ ಪತ್ರವನ್ನು ಪಡೆದುಕೊಂಡವನು ಚಲಾಯಿಸಬಹುದು.

ದೃಷ್ಟಾಂತಗಳು

(i) ಹಲವಾರು ನಿರ್ವಾಹಕರಲ್ಲಿ ಒಬ್ಬನು, ಮೃತನಿಗೆ ಬರಬೇಕಾದ ಋಣವನ್ನು ಬಿಟ್ಟುಬಿಡುವ ಅಧಿಕಾರವನ್ನು ಹೊಂದಿದ್ದಾನೆ.

(ii) ಗೇಣಿಯನ್ನು ಬಿಟ್ಟುಕೊಡಲು ಒಬ್ಬನು ಅಧಿಕಾರವನ್ನು ಹೊಂದಿದ್ದಾನೆ.

(iii) ಮೃತನ ಸ್ವತ್ತನ್ನು ಅದು ಚರ ಸ್ವತ್ತಾಗಿರಲಿ ಅಥವಾ ಸ್ಥಿರ ಸ್ವತ್ತಾಗಿರಲಿ, ಮಾರಾಟ ಮಾಡಲು ಒಬ್ಬನು ಅಧಿಕಾರವನ್ನು ಹೊಂದಿದ್ದಾನೆ.

(iv) ಮರಣ ಶಾಸನ ಸ್ವತ್ತಿಗೆ ಸಮ್ಮತಿ ನೀಡಲು ಒಬ್ಬನು ಅಧಿಕಾರವನ್ನು ಹೊಂದಿದ್ದಾನೆ.

(v) ಮೃತನಿಗೆ ಸಂದಾಯವಾಗಬೇಕಾದ ಪ್ರಾಮಿಸರಿ ನೋಟಿನ ಮೇಲೆ ಹಿಂಬರಹ ಮಾಡಲು ಒಬ್ಬನು ಅಧಿಕಾರವನ್ನು ಹೊಂದಿರುತ್ತಾನೆ.

(vi) ಉಯಿಲಿನಲ್ಲಿ 'ಎ' 'ಬಿ' 'ಸಿ' ಮತ್ತು 'ಡಿ' ಗಳನ್ನು ನಿರ್ವಾಹಕರಾಗಿರಲು ನೇಮಕ ಮಾಡಲಾಗಿದೆ. ಮತ್ತು ಅವರಲ್ಲಿ ಆಗಲೂ ಇಬ್ಬರಾದರೂ ಇರಬೇಕೆಂದು ನಿರ್ದೇಶಿಸಲಾಗಿದೆ. ಯಾವುದೇ ಕಾರ್ಯವನ್ನು ಒಬ್ಬನೇ ನಿರ್ವಾಹಕನು ಮಾಡುವಂತಿಲ್ಲ.

312. ಹಲವಾರು ನಿರ್ವಾಹಕರು ಅಥವಾ ಆಡಳಿತಗಾರರಲ್ಲಿ ಒಬ್ಬನು ಮೃತನಾದ ಮೇಲೆ ಅಧಿಕಾರಗಳು ನಿಹಿತಗೊಳ್ಳುವುದು:- ಹಲವಾರು ನಿರ್ವಾಹಕರು ಅಥವಾ ಆಡಳಿತಗಾರರಲ್ಲಿ ಒಬ್ಬನು ಅಥವಾ ಹೆಚ್ಚಿನವರು ಮೃತರಾದ ಮೇಲೆ ಉಯಿಲಿನಲ್ಲಿ ಅಥವಾ ಆಡಳಿತ ಪತ್ರದ ನೀಡಿಕೆಯಲ್ಲಿ ಅದಕ್ಕೆ ತದ್ವಿರುದ್ಧವಾದ ಯಾವುದೇ ನಿರ್ದೇಶನವು ಇಲ್ಲದಿರುವಲ್ಲಿ, ಆ ಪದದ ಎಲ್ಲ ಅಧಿಕಾರಗಳೂ, ಉತ್ತರ ಜೀವಿಯಲ್ಲಿ ಅಥವಾ ಉತ್ತರ ಜೀವಿಗಳಲ್ಲಿ ನಿಹಿತಗೊಳ್ಳುತ್ತವೆ.

313. ಆಡಳಿತ ನಿರ್ವಹಣೆಯಾಗದೆ ಇರುವ ಸ್ವತ್ತುಗಳ ಬಗ್ಗೆ ಆಡಳಿತಗಾರನ ಅಧಿಕಾರ:- ಆಡಳಿತ ನಿರ್ವಹಣೆಯಾಗದೆ ಇರುವ ಸ್ವತ್ತುಗಳ ಆಡಳಿತಗಾರನು, ಅಂಥ ಸ್ವತ್ತುಗಳ ಬಗ್ಗೆ ಮೂಲ ನಿರ್ವಾಹಕ ಅಥವಾ ಆಡಳಿತಗಾರನಿಗಿರುವಂಥವೇ ಅಧಿಕಾರಗಳನ್ನು ಹೊಂದಿರುತ್ತಾನೆ.

314. ಅಪ್ರಾಪ್ತ ವಯಸ್ಕನಾಗಿರುವ ಅವಧಿಯಲ್ಲಿ ಆಡಳಿತಗಾರನ ಅಧಿಕಾರಗಳು:- ಅಪ್ರಾಪ್ತ ವಯಸ್ಕನಾಗಿರುವ ಅವಧಿಯಲ್ಲಿ, ಆಡಳಿತಗಾರನೂ ಸಾಮಾನ್ಯ ಆಡಳಿತಗಾರನ ಎಲ್ಲ ಅಧಿಕಾರಗಳನ್ನು ಹೊಂದಿರುತ್ತಾನೆ.

315. ವಿವಾಹಿತ ನಿರ್ವಾಹಕಿ ಅಥವಾ ಆಡಳಿತಗಾರ್ತಿಯ ಅಧಿಕಾರಗಳು:- ಪ್ರೊಬೇಟು ಅಥವಾ ಆಡಳಿತ ಪತ್ರದ ನೀಡಿಕೆಯನ್ನು ಒಬ್ಬ ವಿವಾಹಿತ ಮಹಿಳೆಗೆ ಕೊಟ್ಟಿರುವಾಗ, ಅವಳು ಒಬ್ಬ ಸಾಮಾನ್ಯ ನಿರ್ವಾಹಕ ಅಥವಾ ಆಡಳಿತಗಾರನ ಎಲ್ಲ ಅಧಿಕಾರಗಳನ್ನು ಹೊಂದಿರುತ್ತಾಳೆ.

## ಅಧ್ಯಾಯ - VII

### ನಿರ್ವಾಹಕ ಅಥವಾ ಆಡಳಿತಗಾರನ ಕರ್ತವ್ಯಗಳ ಬಗ್ಗೆ

316. ಮೃತನ ಶವ ಸಂಸ್ಕಾರದ ಬಗ್ಗೆ:- ಮೃತನ ಅವಶ್ಯ ಶವ ಸಂಸ್ಕಾರ ಕರ್ಮಗಳನ್ನು ಅವನ ಸ್ಥಿತಿಗತಿಗಳಿಗೆ ಯೋಗ್ಯವಾದ ರೀತಿಯಲ್ಲಿ ನೆರವೇರಿಸಲು, ಅವನು ಆ ಉದ್ದೇಶಕ್ಕಾಗಿ ಸಾಕಷ್ಟು ಸ್ವತ್ತನ್ನು ಬಿಟ್ಟುಹೋಗಿದ್ದರೆ ಹಣಕಾಸು ಒದಗಿಸುವುದು ನಿರ್ವಾಹಕನ ಕರ್ತವ್ಯವಾಗಿರುತ್ತದೆ.

317. ವಿವರಣಪಟ್ಟಿ ಮತ್ತು ಲೆಕ್ಕ:- (1) ನಿರ್ವಾಹಕನು ಅಥವಾ ಆಡಳಿತಗಾರನು, ಪ್ರೊಬೇಟು ಅಥವಾ ಆಡಳಿತಪತ್ರವನ್ನು ನೀಡಿದಂದಿನಿಂದ ಆರು ತಿಂಗಳುಗಳ ಒಳಗೆ ಅಥವಾ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ನೀಡಿದಂಥ ನ್ಯಾಯಾಲಯವು ನೇಮಿಸಬಹುದಾದಂಥ ಇನ್ನು ಹೆಚ್ಚಿನ ಕಾಲದೊಳಗೆ, ತನ್ನ ಸ್ವಾಧೀನದಲ್ಲಿರುವ ಎಲ್ಲ ಸ್ವತ್ತುಗಳ ಬಗ್ಗೆ ಮತ್ತು ಎಲ್ಲ ಜಮೆಗಳು ಹಾಗೂ ನಿರ್ವಾಹಕ ಅಥವಾ ಆಡಳಿತಗಾರನ ಸಾಮರ್ಥ್ಯದಿಂದ ಅವನಿಗೆ ಹಕ್ಕುಳ್ಳ ಯಾವನೇ ವ್ಯಕ್ತಿಯಿಂದ ಬರಬೇಕಾದ ಎಲ್ಲ ಋಣಗಳ ಪೂರ್ಣ ಮತ್ತು ಸರಿಯಾದ ಅಂದಾಜನ್ನು ಒಳಗೊಂಡ ವಿವರಣ ಪಟ್ಟಿಯನ್ನು ಆ ನ್ಯಾಯಾಲಯದಲ್ಲಿ ಪ್ರದರ್ಶಿಸತಕ್ಕುದು ಮತ್ತು ಅದೇ ರೀತಿಯಲ್ಲಿ ನೀಡಿಕೆ ದಿನಾಂಕದಿಂದ ಒಂದು ವರ್ಷದ ಒಳಗೆ ಅಥವಾ ಸದರಿ ನ್ಯಾಯಾಲಯವು ನೇಮಿಸಬಹುದಾದಂಥ ಇನ್ನು ಹೆಚ್ಚಿನ ಕಾಲದೊಳಗೆ ಅವನ ಕೈಗೆ ಬಂದಿರುವಂಥ ಆಸ್ತಿಗಳನ್ನು ಮತ್ತು ಯಾವ ರೀತಿಯಲ್ಲಿ ಅವುಗಳನ್ನು ವಿನಿಯೋಗಿಸಲಾಗಿದೆ ಅಥವಾ ವಿಲೆ ಮಾಡಲಾಗಿದೆ ಎಂಬುದನ್ನು ತೋರಿಸುವ, ಎಸ್ಟೇಟಿನ ಲೆಕ್ಕವನ್ನು ಪ್ರದರ್ಶಿಸತಕ್ಕುದು.

(2) ಉಚ್ಚ ನ್ಯಾಯಾಲಯವು ಈ ಪ್ರಕರಣದ ಮೇರೆಗೆ ವಿವರಣ ಪಟ್ಟಿ ಅಥವಾ ಲೆಕ್ಕವನ್ನು ಯಾವ ನಮೂನೆಯಲ್ಲಿ ಪ್ರದರ್ಶಿಸಬೇಕಾಗಿದೆ ಎಂಬುದನ್ನು ನಿಯಮಿಸಬಹುದು.

(3) ಈ ಪ್ರಕರಣದ ಮೇರೆಗೆ ವಿವರಣ ಪಟ್ಟಿ ಅಥವಾ ಲೆಕ್ಕವನ್ನು ಪ್ರದರ್ಶಿಸಬೇಕೆಂದು ನಿರ್ವಾಹಕನು ಅಥವಾ ಆಡಳಿತಗಾರನನ್ನು ನ್ಯಾಯಾಲಯವು ಅಗತ್ಯಪಡಿಸಿದ್ದು ಆ ಕೋರಿಕೆಯನ್ನು ಪಾಲಿಸಲು ಅವನು ಉದ್ದೇಶಪೂರ್ವಕವಾಗಿ ತಪ್ಪಿದರೆ, ಭಾರತ ದಂಡ ಸಂಹಿತೆ, 1860ರ (1860ರ 45) 176ನೇ ಪ್ರಕರಣದ ಮೇರೆಗೆ ಅಪರಾಧವನ್ನು ಮಾಡಿದ್ದಾನೆ ಎಂದು ಭಾವಿಸತಕ್ಕುದು.

(4) ಈ ಪ್ರಕರಣದ ಮೇರೆಗೆ ಉದ್ದೇಶಪೂರ್ವಕವಾದ ಸುಳ್ಳು ವಿವರಣ ಪಟ್ಟಿ ಅಥವಾ ಲೆಕ್ಕವನ್ನು ಪ್ರದರ್ಶಿಸುವುದು ಆ ಸಂಹಿತೆಯ 193ನೇ ಪ್ರಕರಣದ ಮೇರೆಗಿನ ಒಂದು ಅಪರಾಧವಾಗುತ್ತದೆ ಎಂದು ಭಾವಿಸತಕ್ಕುದು.

318. ಕೆಲವು ಪ್ರಕರಣಗಳಲ್ಲಿ ವಿವರಣ ಪಟ್ಟಿಯ ಭಾರತದ ಯಾವುದೇ ಭಾಗದಲ್ಲಿರುವ ಸ್ವತ್ತನ್ನು ಒಳಗೊಳ್ಳುವುದು:- ಭಾರತದಾದ್ಯಂತ ಪರಿಣಾಮಕಾರಿಯಾಗಿರಲು ಉದ್ದೇಶಿಸಿದ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ನೀಡಲಾಗಿರುವ ಎಲ್ಲ ಪ್ರಕರಣಗಳಲ್ಲಿ ನಿರ್ವಾಹಕ ಅಥವಾ ಆಡಳಿತಗಾರನು ಮೃತನ ಸ್ವತ್ತುಗಳ ವಿವರಣ ಪಟ್ಟಿಯಲ್ಲಿ ಭಾರತದಲ್ಲಿರುವ ಆ ಮೃತನ ಎಲ್ಲ ಚರ ಮತ್ತು ಸ್ಥಿರ ಸ್ವತ್ತನ್ನು ಸೇರಿಸತಕ್ಕುದು ಮತ್ತು ಪ್ರತಿಯೊಂದು ರಾಜ್ಯದಲ್ಲಿರುವ ಅಂಥ ಸ್ವತ್ತಿನ ಮೌಲ್ಯವನ್ನು ಅಂಥ ವಿವರಣ ಪಟ್ಟಿಯಲ್ಲಿ ಪ್ರತ್ಯೇಕವಾಗಿ ನಿರೂಪಿಸತಕ್ಕುದು ಮತ್ತು ಪ್ರೊಬೇಟು ಅಥವಾ ಆಡಳಿತ ಪತ್ರಕ್ಕಾಗಿ ಭಾರತದ ಒಳಗೆ ಎಲ್ಲಿಯೇ ಇರುವ ಸಂಬಂಧಪಟ್ಟ ಸ್ವತ್ತಿನ ಇಡೀ ಮೊಬಲಗು ಅಥವಾ ಮೌಲ್ಯಕ್ಕೆ ಸಂವಾದಿಯಾದ ಫೀಜು ವಿಧಿಸಲ್ಪಡತಕ್ಕುದು.

319. ಮೃತನ ಸ್ವತ್ತು ಮತ್ತು ಅವನಿಗೆ ಬರಬೇಕಾದ ಋಣಗಳ ಬಗ್ಗೆ:- ನಿರ್ವಾಹಕ ಅಥವಾ ಆಡಳಿತಗಾರನು ಯುಕ್ತ ಶ್ರದ್ಧೆವಹಿಸಿ ಮೃತನ ಸ್ವತ್ತನ್ನು ಮತ್ತು ಅವನ ಮರಣದ ಕಾಲದಲ್ಲಿ ಅವನಿಗೆ ಬರಬೇಕಾದ ಋಣಗಳನ್ನು ವಸೂಲ್ಮಾಡತಕ್ಕುದು.

320. ಎಲ್ಲ ಋಣಗಳಿಗಿಂತ ಮುಂಚೆ ವೆಚ್ಚಗಳನ್ನು ಸಂದಾಯಮಾಡುವುದು:- ಮೃತನ ಸ್ಥಾನಮಾನಕ್ಕನುಗುಣವಾಗಿ ಯುಕ್ತ ಮೊಬಲಗನ್ನು ಶವಸಂಸ್ಕಾರದ ವೆಚ್ಚಗಳಿಗೆ ಮತ್ತು ವೈದ್ಯಕೀಯ ಚಿಕಿತ್ಸೆಯ ಫೀಜುಗಳು ಮತ್ತು ಅವನ ಮರಣಕ್ಕಿಂತ ಮುಂಚಿನ ಒಂದು ತಿಂಗಳ ಊಟ ಮತ್ತು ವಸತಿಯ ಫೀಜುಗಳನ್ನು ಒಳಗೊಂಡು ಮರಣ ಕಾಲದ ವೆಚ್ಚಗಳನ್ನು ಎಲ್ಲಾ ಋಣಗಳನ್ನು ಸಂದಾಯಮಾಡುವುದಕ್ಕೆ ಮುಂಚೆ ಸಂದಾಯ ಮಾಡತಕ್ಕುದು.

321. ಅಂಥ ವೆಚ್ಚಗಳ ಸಂದಾಯದ ತರುವಾಯ ಸಂದಾಯ ಮಾಡಬೇಕಾದ ಇತರ ವೆಚ್ಚಗಳು:- ಎಸ್ಟೇಟಿನ ಆಡಳಿತವನ್ನು ನಿರ್ವಹಿಸಲು ಅವಶ್ಯವಾಗಬಹುದಾದ ಯಾವುದೇ ನ್ಯಾಯಿಕ ವ್ಯವಹರಣೆಗಳ ಅಥವಾ ಅವುಗಳಿಗೆ ಸಂಬಂಧಿಸಿದ ವೆಚ್ಚಗಳನ್ನು ಒಳಗೊಂಡು, ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ಪಡೆಯಲು ಆದ ವೆಚ್ಚಗಳನ್ನು ಶವ ಸಂಸ್ಕಾರ ವೆಚ್ಚಗಳು ಮತ್ತು ಮರಣಕಾಲದ ವೆಚ್ಚಗಳ ಸಂದಾಯದ ತರುವಾಯದಲ್ಲಿ ಸಂದಾಯ ಮಾಡತಕ್ಕುದು.

322. ಕೆಲವು ಸೇವೆಗಳ ಮಜೂರಿಯನ್ನು ತರುವಾಯ ಸಂದಾಯ ಮಾಡುವುದು ಮತ್ತು ಆ ಬಳಿಕ ಇತರ ಋಣಗಳನ್ನು ಸಂದಾಯ ಮಾಡುವುದು:- ಮೃತನ ಮರಣದ ನಿಕಟಪೂರ್ವದ ಮೂರು ತಿಂಗಳುಗಳ ಒಳಗೆ ಅವನಿಗೆ ಯಾವನೇ ಕಾರ್ಮಿಕ, ಕುಶಲಕರ್ಮಿ ಅಥವಾ ಮನೆಕೆಲಸದವನು ಸಲ್ಲಿಸಿದ ಸೇವೆಗಳಿಗಾಗಿ ಕೊಡಬೇಕಾದ ಮಜೂರಿಯನ್ನು ತರುವಾಯ ಸಂದಾಯ ಮಾಡತಕ್ಕುದು ಮತ್ತು ಅನಂತರ ಮೃತನ ಇತರ ಋಣಗಳನ್ನು ಅವುಗಳ ಅನುಕ್ರಮ ಆದ್ಯತೆಗಳು (ಯಾವುದಾದರೂ ಇದ್ದರೆ), ಅವುಗಳಿಗೆ ಅನುಸಾರವಾಗಿ ಸಂದಾಯ ಮಾಡತಕ್ಕುದು.

323. ಹಿಂದೆ ಹೇಳಿದಂತೆ ಹೊರತು, ಎಲ್ಲಾ ಋಣಗಳನ್ನು ಸಮವಾಗಿ ಮತ್ತು ದಾಮಾಷಾ ಪ್ರಕಾರ ಸಂದಾಯ ಮಾಡುವುದು:- ಹಿಂದೆ ಹೇಳಿರುವಂತೆ ಹೊರತು, ಸಾಲಕೊಟ್ಟ ಯಾವನೂ, ಸಾಲಕೊಟ್ಟ ಇನ್ನೊಬ್ಬನ ಮೇಲೆ ಆದ್ಯತೆಯ ಹಕ್ಕನ್ನು ಹೊಂದಿರತಕ್ಕುದಲ್ಲ. ಆದರೆ, ನಿರ್ವಾಹಕ ಅಥವಾ ಆಡಳಿತಗಾರನು, ತನ್ನ ಋಣವನ್ನು ಒಳಗೊಂಡು ಅವನಿಗೆ ತಿಳಿದಿರುವ ಎಲ್ಲಾ ಅಂಥ ಋಣಗಳನ್ನು, ಮೃತನ ಆಸ್ತಿಗಳು ಅವಕಾಶ ಮಾಡಿಕೊಡುವಷ್ಟರಮಟ್ಟಿಗೆ ಸಮನಾಗಿ ಮತ್ತು ದಾಮಾಷಾ ಪ್ರಕಾರ ಸಂದಾಯ ಮಾಡತಕ್ಕುದು.

324. ಅಧಿವಾಸವು ಭಾರತದಲ್ಲಿ ಇಲ್ಲದೇ ಇರುವಲ್ಲಿ ಋಣಗಳ ಸಂದಾಯಕ್ಕೆ ಚರ ಸ್ವತ್ತಿನ ವಿನಿಯೋಗ:- (1) ಮೃತನ ಅಧಿವಾಸವು ಭಾರತದಲ್ಲಿ ಇಲ್ಲದಿದ್ದರೆ ಅವನ ಋಣಗಳ ಸಂದಾಯಕ್ಕೆ ಅವನ ಚರಸ್ವತ್ತಿನ ವಿನಿಯೋಗವು ಭಾರತದ ಕಾನೂನಿನ ಮೂಲಕ ವಿನಿಯಮಿತವಾಗತಕ್ಕುದು.

(2) (1)ನೇ ಉಪಪ್ರಕರಣದ ಕಾರಣದಿಂದಾಗಿ ಅವನ ಋಣದ ಒಂದು ಭಾಗದ ಸಂದಾಯವನ್ನು ಸ್ವೀಕರಿಸಿದ ಸಾಲಕೊಟ್ಟ ಯಾವನೂ ತಾನು ಸ್ವೀಕರಿಸಿದ ಸಂದಾಯವನ್ನು ಸಾಲಕೊಟ್ಟ ಇತರರ ಪ್ರಯೋಜನಕ್ಕಾಗಿ, ಲೆಕ್ಕದಲ್ಲಿ ತೋರಿಸಿದ ಹೊರತು ಮೃತನ ಸ್ಥಿರ ಎಸ್ಟೇಟಿನ ಉತ್ಪತ್ತಿಗಳನ್ನು ಹಂಚಿಕೊಳ್ಳಲು ಹಕ್ಕುಳ್ಳವನಾಗತಕ್ಕುದಲ್ಲ.

(3) ಈ ಪ್ರಕರಣವು ಮೃತನು ಹಿಂದೂ, ಮಹಮ್ಮದೀಯ, ಬೌದ್ಧ, ಸಿಖ್ ಅಥವಾ ಜೈನ ಅಥವಾ ವಿನಾಯತಿ ಪಡೆದ ವ್ಯಕ್ತಿಯಾಗಿದ್ದಲ್ಲಿ ಅವನಿಗೆ ಅನ್ವಯವಾಗತಕ್ಕುದಲ್ಲ.

ದೃಷ್ಟಾಂತ

'ಎ' ನು ಮೊಹರು ರಹಿತ ಪತ್ರಗಳ ಮೇಲೆ ಮೊಹರು ಸಹಿತ ಪತ್ರಗಳು ಆದ್ಯತೆ ಹೊಂದಿರುವ ದೇಶದಲ್ಲಿ ಅವನ ಅಧಿವಾಸವನ್ನು ಹೊಂದಿದ್ದು 5000 ರೂಪಾಯಿಗಳ ಮೌಲ್ಯದ ಚರ ಸ್ವತ್ತನ್ನು, ಮತ್ತು 10,000 ರೂಪಾಯಿಗಳ ಮೌಲ್ಯದ ಸ್ಥಿರ ಸ್ವತ್ತನ್ನು 10,000 ರೂಪಾಯಿಗಳವರೆಗಿನ ಮೊಬಲಗಿನ ಮೊಹರು ಸಹಿತ ಪತ್ರಗಳ ಮೇಲಿನ ಋಣಗಳನ್ನು ಮತ್ತು ಅದೇ ಮೊಬಲಗಿನ ಮೊಹರು ರಹಿತ ಪತ್ರಗಳ ಮೇಲಿನ ಋಣಗಳನ್ನು ಬಿಟ್ಟು ಮರಣ ಹೊಂದುತ್ತಾನೆ. ಮೊಹರು ಸಹಿತ ಪತ್ರಗಳನ್ನು ಹೊಂದಿರುವ ಸಾಲಕೊಟ್ಟವರು ಅವರ ಋಣಗಳ ಅರ್ಧವನ್ನು ಚರ ಎಸ್ಟೇಟಿನ ಉತ್ಪತ್ತಿಗಳಿಂದ ಸ್ವೀಕರಿಸುತ್ತಾರೆ. ಸ್ಥಿರ ಎಸ್ಟೇಟಿನ ಉತ್ಪತ್ತಿಗಳನ್ನು ಅಂಥ ಋಣಗಳ ಅರ್ಧವನ್ನು ತೀರಿಸುವವರೆಗೆ ಮೊಹರು ರಹಿತ ಪತ್ರಗಳ ಮೇಲಿನ ಋಣಗಳ ಸಂದಾಯಕ್ಕೆ ವಿನಿಯೋಗಿಸತಕ್ಕುದು. ಇದರಿಂದ ಉಳಿಯುವ 5,000 ರೂಪಾಯಿಗಳನ್ನು ಎಲ್ಲ ಸಾಲಕೊಟ್ಟವರಲ್ಲಿ ತಾರತಮ್ಯವಿಲ್ಲದೆ ಅವರಿಗೆ ಬಾಕಿಯಾಗಿ ಉಳಿಯಬಹುದಾದಂಥ ಮೊಬಲಗನ್ನು ದಾಮಾಷಾ ಪ್ರಕಾರ ಹಂಚಬೇಕಾಗುತ್ತದೆ.

325. ಮರಣ ಶಾಸನ ಸ್ವತ್ತುಗಳನ್ನು ಸಂದಾಯ ಮಾಡುವುದಕ್ಕೆ ಮುಂಚೆ ಋಣಗಳನ್ನು ಸಂದಾಯ ಮಾಡುವುದು:- ಯಾವುದೇ ಮರಣ ಶಾಸನ ಸ್ವತ್ತುಗಳನ್ನು ಸಂದಾಯ ಮಾಡುವುದಕ್ಕೆ ಮುಂಚೆ ಎಲ್ಲಾ ಬಗೆಯ ಋಣಗಳು ಸಂದಾಯವಾಗತಕ್ಕುದು.

326. ನಿರ್ವಾಹಕ ಅಥವಾ ಆಡಳಿತಗಾರನು ನಷ್ಟಭರ್ತಿ ಇಲ್ಲದೆ ಮರಣ ಶಾಸನ ಸ್ವತ್ತುಗಳನ್ನು ಸಂದಾಯ ಮಾಡಲು ಬದ್ಧನಾಗದಿರುವುದು:- ಮೃತನ ಎಸ್ಟೇಟು ಯಾವುದೇ ಅವಲಂಬಿತ ಹೊಣೆಗಾರಿಕೆಗಳಿಗೆ ಒಳಪಟ್ಟಿದ್ದರೆ ನಿರ್ವಾಹಕನು ಅಥವಾ ಆಡಳಿತಗಾರನು ಹೊಣೆಗಾರಿಕೆಗಳು ಬಾಕಿಯಾಗಬಹುದಾದ ಸಮಯದಲ್ಲೆಲ್ಲ ಅವುಗಳನ್ನು ತೀರಿಸಲು ಸಾಕಷ್ಟು ನಷ್ಟ ಭರ್ತಿ ಇಲ್ಲದೆ ಯಾವುದೇ ಮರಣ ಶಾಸನ ಸ್ವತ್ತನ್ನು ಸಂದಾಯಮಾಡಲು ಬದ್ಧನಾಗಿರುವುದಿಲ್ಲ.

327. ಸಾಮಾನ್ಯ ಮರಣಶಾಸನ ಸ್ವತ್ತುಗಳ ಕೊನೆಗೊಳ್ಳುವಿಕೆ:- ಋಣಗಳು, ಅವಶ್ಯ ವೆಚ್ಚಗಳು ಮತ್ತು ನಿರ್ದಿಷ್ಟ ಮರಣ ಶಾಸನ ಸ್ವತ್ತುಗಳನ್ನು ಸಂದಾಯ ಮಾಡಿದ ತರುವಾಯ ಎಲ್ಲಾ ಸಾಮಾನ್ಯ ಮರಣಶಾಸನ ಸ್ವತ್ತುಗಳನ್ನು ಪೂರ್ಣವಾಗಿ ಸಂದಾಯ ಮಾಡಲು ಆಸ್ತಿಗಳು ಸಾಕಷ್ಟಿಲ್ಲದಿದ್ದರೆ, ಸಾಮಾನ್ಯ ಮರಣ ಶಾಸನ ಸ್ವತ್ತು ಕೊನೆಯಾಗತಕ್ಕುದು ಅಥವಾ ಸಮ ಪ್ರಮಾಣಗಳಲ್ಲಿ ಕಡಿಮೆ ಆಗತಕ್ಕುದು ಮತ್ತು ಉಯಿಲಿನಲ್ಲಿ ತದ್ವಿರುದ್ಧವಾಗಿ ಯಾವುದೇ ನಿರ್ದೇಶನವೂ ಇಲ್ಲದಿರುವಲ್ಲಿ, ಒಬ್ಬ ಲೆಗಟಿಗೆ ಇನ್ನೊಬ್ಬನಿಗಿಂತ ಪ್ರಾಶಸ್ತ್ಯ ಕೊಟ್ಟು ಸಂದಾಯ ಮಾಡಲು ಅಥವಾ ತನಗಾಗಿ ಅಥವಾ ಅವನು ನ್ಯಾಸಧಾರಿಯಾಗಿರುವ ಬೇರೊಬ್ಬ ಯಾವನೇ ವ್ಯಕ್ತಿಗೆ ಕೊಟ್ಟ ಮರಣಶಾಸನ ಸ್ವತ್ತಿನ ಬಗ್ಗೆ ಯಾವುದೇ ಹಣವನ್ನು ಉಳಿಸಿಕೊಳ್ಳಲು ನಿರ್ವಾಹಕನಿಗೆ ಯಾವುದೇ ಹಕ್ಕೂ ಇರುವುದಿಲ್ಲ.

328. ಋಣಗಳನ್ನು ಸಂದಾಯ ಮಾಡಲು ಸಾಕಷ್ಟು ಆಸ್ತಿಗಳಿರುವಾಗ ನಿರ್ದಿಷ್ಟ ಮರಣಶಾಸನ ಸ್ವತ್ತಿನ ಕೊನೆಯಾಗದಿರುವುದು:- ನಿರ್ದಿಷ್ಟ ಮರಣಶಾಸನ ಸ್ವತ್ತು ಇರುವಲ್ಲಿ ಮತ್ತು ಋಣಗಳನ್ನು ಮತ್ತು ಅವಶ್ಯ ವೆಚ್ಚಗಳನ್ನು ಸಂದಾಯ ಮಾಡುವುದಕ್ಕಾಗಿ ಸಾಕಷ್ಟು ಆಸ್ತಿಗಳು ಇರುವಲ್ಲಿ, ನಿರ್ದಿಷ್ಟಪಡಿಸಿದ ವಸ್ತುವನ್ನು ಯಾವುದೇ ರೀತಿಯಲ್ಲಿ ಕಡಿಮೆಗೊಳಿಸದೆ ವಶಾವಣೆ ಮಾಡತಕ್ಕುದು.

329. ಋಣಗಳನ್ನು ಮತ್ತು ಅವಶ್ಯ ವೆಚ್ಚಗಳನ್ನು ಸಂದಾಯಮಾಡಲು ಆಸ್ತಿಗಳು ಸಾಕಷ್ಟಿರುವಾಗ ನಿರ್ದೇಶಿತ ಮರಣ ಶಾಸನ ಸ್ವತ್ತಿನ ಮೇರೆಗಿನ ಹಕ್ಕು:- ನಿರ್ದೇಶಿತ ಮರಣ ಶಾಸನ ಸ್ವತ್ತು ಇರುವಲ್ಲಿ ಮತ್ತು ಋಣಗಳು ಮತ್ತು ಅವಶ್ಯ ವೆಚ್ಚಗಳ ಸಂದಾಯಕ್ಕಾಗಿ ಆಸ್ತಿಗಳು ಸಾಕಷ್ಟು ಇರುವಲ್ಲಿ, ಲೆಗಟಿಯು ಯಾವ ನಿಧಿಯಿಂದ ಮರಣಶಾಸನ ಸ್ವತ್ತನ್ನು , ಸಂದಾಯ ಮಾಡಲು ನಿರ್ದೇಶಿಸಲಾಗಿದೆಯೋ ಆ ನಿಧಿಯಿಂದ, ಅಂಥ ನಿಧಿಯು ಮುಗಿದುಹೋಗುವವರೆಗೆ ತನ್ನ ಮರಣಶಾಸನ ಸ್ವತ್ತಿನ ಸಂದಾಯಕ್ಕಾಗಿ ಆದ್ಯತೆಯ ಕ್ಲೇಮನ್ನು ಪಡೆದಿರುತ್ತಾನೆ ಮತ್ತು ಆ ನಿಧಿಯು ಮುಗಿದುಹೋದ ತರುವಾಯ ಆ ಮರಣ ಶಾಸನ ಸ್ವತ್ತಿನ ಭಾಗವು ಸಂದಾಯವಾಗದೇ ಇನ್ನೂ ಉಳಿದಿದ್ದರೆ ಹಾಗೆ ಸಂದಾಯವಾಗದೆ ಉಳಿದಿರುವ ಮೊಬಲಗಿನ ಮರಣ ಶಾಸನ ಸ್ವತ್ತಿಗೆ ಹೇಗೆ ಹಕ್ಕುದಾರನಾಗುತ್ತಿದ್ದನೋ ಹಾಗೆಯೇ ಸಾಮಾನ್ಯ ಆಸ್ತಿಗಳೊಳಗಿಂದ ಉಳಿದಿರುವುದನ್ನು ಪಡೆಯಲು ಹಕ್ಕುಳ್ಳವನಾಗಿರುತ್ತಾನೆ.

330. ನಿರ್ದಿಷ್ಟ ಮರಣ ಶಾಸನ ಸ್ವತ್ತುಗಳು ದಾಮಾಷ ಪ್ರಕಾರ ಕಡಿಮೆಯಾಗುವುದು:- ಋಣಗಳ ಮತ್ತು ನಿರ್ದಿಷ್ಟ ಮರಣ ಶಾಸನ ಸ್ವತ್ತುಗಳನ್ನು ಪೂರೈಸಲು ಆಸ್ತಿಗಳು ಸಾಕಷ್ಟು ಇಲ್ಲದಿದ್ದರೆ ನಿರ್ದಿಷ್ಟ ಮರಣ ಶಾಸನ ಸ್ವತ್ತುಗಳ ಸಂಬಂಧಪಟ್ಟ ಮೊಬಲಗುಗಳ ಪ್ರಮಾಣಾನುಸಾರ ಮೊಬಲಗನ್ನು ಕಡಿಮೆಮಾಡತಕ್ಕುದು.

ದೃಷ್ಟಾಂತ

> 'ಎ' ನು 'ಬಿ' ನಿಗೆ 500 ರೂಪಾಯಿಗಳ ಮೌಲ್ಯದ ಒಂದು ವಜ್ರದುಂಗುರವನ್ನು ಮತ್ತು 'ಸಿ' ನಿಗೆ 1000 ರೂಪಾಯಿಗಳ ಮೌಲ್ಯದ ಒಂದು ಕುದುರೆಯನ್ನು ಮರಣ ಶಾಸನದ ಮೂಲಕ ಕೊಟ್ಟಿರುತ್ತಾನೆ. ಮರಣ ಶಾಸನ ಕರ್ತನ ಸ್ವತ್ತುಗಳನ್ನು ಮಾರುವುದು ಅವಶ್ಯಕವೆಂದು ಕಂಡುಬಂದಿದೆ. ಮತ್ತು ಋಣಗಳನ್ನು ಸಂದಾಯ ಮಾಡಿದ ತರುವಾಯ ಅವನ ಆಸ್ತಿಗಳು 1,000 ರೂಪಾಯಿಗಳು ಮಾತ್ರ ಇವೆ. ಈ ಮೊತ್ತದಿಂದ 333 ರೂ 5 ಆ 4 ಕಾಸನ್ನು 'ಬಿ' ನಿಗೆ ಮತ್ತು 666 ರೂ. 10 ಆ 8 ಕಾಸನ್ನು 'ಸಿ' ನಿಗೆ ಸಂದಾಯ ಮಾಡಬೇಕು.

331. ಕಡಿಮೆಗೊಳಿಸುವ ಉದ್ದೇಶಕ್ಕಾಗಿ ಮರಣ ಶಾಸನ ಸ್ವತ್ತುಗಳನ್ನು ಸಾಮಾನ್ಯ ಮರಣ ಶಾಸನ ಸ್ವತ್ತುಗಳೆಂದು ಪರಿಗಣಿಸುವುದು:- ಕಡಿಮೆಗೊಳಿಸುವ ಉದ್ದೇಶಕ್ಕಾಗಿ, ಜೀವನಪರ್ಯಂತದ ಮರಣ ಶಾಸನ ಸ್ವತ್ತನ್ನು, ವರ್ಷಾಶನವು ದೊರೆಯಲು ಉಯಿಲು ಮೂಲಕ ವಿನಿಯೋಗಿಸಲಾದ ಮೊತ್ತವನ್ನು ಮತ್ತು ವರ್ಷಾಶನವು ದೊರೆಯುವ ಹಾಗೆ ಯಾವುದೇ ಮೊತ್ತವನ್ನು ವಿನಿಯೋಗಿಸದಿರುವಾಗ, ಆ ವರ್ಷಾಶನದ ಮೌಲ್ಯವನ್ನು ಸಾಮಾನ್ಯ ಮರಣ ಶಾಸನ ಸ್ವತ್ತುಗಳೆಂದು ಪರಿಗಣಿಸತಕ್ಕುದು.

## ಅಧ್ಯಾಯ - VIII

### ಮರಣಶಾಸನ ಸ್ವತ್ತಿಗೆ ನಿರ್ವಾಹಕನ ಅಥವಾ ಆಡಳಿತಗಾರನ ಅನುಮತಿಯ ಬಗ್ಗೆ

332. ಲೆಗಟಿಯ ಸ್ವಾಮ್ಯವನ್ನು ಪೂರ್ಣಗೊಳಿಸಲು ಅನುಮತಿ ಅವಶ್ಯ:- ಲೆಗಟಿಯ ಮರಣ ಶಾಸನ ಸ್ವತ್ತಿಗೆ ಅವನ ಸ್ವಾಮ್ಯವನ್ನು ಪೂರ್ಣಗೊಳಿಸಲು ನಿರ್ವಾಹಕ ಅಥವಾ ಆಡಳಿತಗಾರನ ಅನುಮತಿ ಅವಶ್ಯವಾಗಿರುತ್ತದೆ.

ದೃಷ್ಟಾಂತಗಳು

(i) 'ಎ' ನು ತನ್ನ ಉಯಿಲು ಮೂಲಕ 'ಬಿ' ನಿಗೆ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಠೇವಣಿ ಇರುವಂಥ ತನ್ನ ಸರ್ಕಾರಿ ಪತ್ರವನ್ನು ಮರಣ ಶಾಸನದ ಮೂಲಕ ಕೊಡುತ್ತಾನೆ. ನಿರ್ವಾಹಕನ ಅನುಮತಿ ಇಲ್ಲದೆ ಆ ಭದ್ರತೆಗಳನ್ನು ವಶಾವಣೆ ಮಾಡಲು ಬ್ಯಾಂಕಿಗೆ ಅಧಿಕಾರವಿಲ್ಲ ಅಥವಾ ಅವುಗಳ ಸ್ವಾಧೀನವನ್ನು ತೆಗೆದುಕೊಳ್ಳಲು 'ಬಿ' ನಿಗೆ ಹಕ್ಕಿಲ್ಲ.

(ii) 'ಎ' ನು ತನ್ನ ಉಯಿಲು ಮೂಲಕ 'ಸಿ' ನಿಗೆ 'ಬಿ' ಬಾಡಿಗೆದಾರನಾಗಿರುವ ಕಲ್ಕತ್ತಾದಲ್ಲಿನ ತನ್ನ ಮನೆಯನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ನಿರ್ವಾಹಕ ಅಥವಾ ಆಡಳಿತಗಾರನ ಅನುಮತಿಯಿಲ್ಲದೆ ಬಾಡಿಗೆಗಳನ್ನು ಸ್ವೀಕರಿಸಲು 'ಸಿ' ನಿಗೆ ಹಕ್ಕಿರುವುದಿಲ್ಲ.

333. ನಿರ್ದಿಷ್ಟ ಮರಣ ಶಾಸನ ಸ್ವತ್ತಿಗೆ ನಿರ್ವಾಹಕನ ಅನುಮತಿಯ ಪರಿಣಾಮ:- (1) ಸ್ವತ್ತಿನ ಸ್ವರೂಪ ಅಥವಾ ಸನ್ನಿವೇಶಗಳು ಆ ಸ್ವತ್ತನ್ನು ವಿಶಿಷ್ಟ ರೀತಿಯಲ್ಲಿ ವರ್ಗಾಯಿಸತಕ್ಕುದೆಂದು ಅಗತ್ಯಪಡಿಸಿದ ಹೊರತು, ನಿರ್ವಾಹಕ ಅಥವಾ ಆಡಳಿತಗಾರನಿಗೆ ಅದರಲ್ಲಿರುವ ಹಿತಾಸಕ್ತಿಯನ್ನು ತಪ್ಪಿಸಲು ಮತ್ತು ಲೆಗಟಿಯ ಮರಣಶಾಸನದಾನದ ವಸ್ತು ವಿಷಯವನ್ನು ವರ್ಗಾಯಿಸಲು, ನಿರ್ದಿಷ್ಟ ಮರಣ ಶಾಸನ ದಾನದ ನಿರ್ವಾಹಕ ಅಥವಾ ಆಡಳಿತಗಾರನ ಅನುಮತಿಯು ಸಾಕು.

(2) ಈ ಅನುಮತಿಯು ಬಾಯಿ ಮಾತಿನದಾಗಿರಬಹುದು ಮತ್ತು ಅದು ವ್ಯಕ್ತವಾದುದಾಗಲಿ ಅಥವಾ ನಿರ್ವಾಹಕ ಅಥವಾ ಆಡಳಿತಗಾರನ ವರ್ತನೆಯಿಂದ ಇಂಗಿತವಾದುದಾಗಲೀ ಆಗಿರಬಹುದು.

ದೃಷ್ಟಾಂತಗಳು

(i) ಒಂದು ಕುದುರೆಯನ್ನು ಮರಣ ಶಾಸನದ ಮೂಲಕ ಕೊಡಲಾಗಿದೆ. ನಿರ್ವಾಹಕನು ಅದನ್ನು ವಿಲೆ ಮಾಡಲು ಲೆಗಟಿಯನ್ನು ಕೋರುತ್ತಾನೆ; ಮೂರನೇ ವ್ಯಕ್ತಿಯು ನಿರ್ವಾಹಕನಿಂದ ಅದನ್ನು ಖರೀದಿಸಲು ಉದ್ದೇಶಿಸುತ್ತಾನೆ. ಆಗ ನಿರ್ವಾಹಕನು ಲೆಗಟಿಯನ್ನು ಕೇಳುವಂತೆ ಅವನಿಗೆ ತಿಳಿಸುತ್ತಾನೆ. ಈ ಸಂದರ್ಭದಲ್ಲಿ ಮರಣಶಾಸನ ಸ್ವತ್ತಿಗೆ ಅನುಮತಿಯು ಇಂಗಿತವಾದಂತಾಗಿದೆ.

(ii) ನಿಧಿಯ ಬಡ್ಡಿಯನ್ನು ಲೆಗಟಿಯು ಅಪ್ರಾಪ್ತ ವಯಸ್ಕನಾಗಿರುವಾಗ ಅವನ ಪೋಷಣೆಗಾಗಿ ವಿನಿಯೋಗಿಸಬೇಕೆಂದು ಮರಣಶಾಸನದ ಮೂಲಕ ನಿರ್ದೇಶಿಸಲಾಗಿದೆ. ನಿರ್ವಾಹಕನು ಹಾಗೆ ಅದನ್ನು ವಿನಿಯೋಗಿಸಲು ಪ್ರಾರಂಭಿಸುತ್ತಾನೆ. ಇದು ಇಡೀ ಮರಣ ಶಾಸನದಾನಕ್ಕೆ ಅನುಮತಿಯಾಗಿರುತ್ತದೆ.

(iii) ನಿಧಿಯನ್ನು 'ಎ' ನಿಗೆ ಮತ್ತು ಅವನ ತರುವಾಯ 'ಬಿ' ನಿಗೆ ಮರಣ ಶಾಸನದಾನವಾಗಿ ಕೊಡಲಾಗಿದೆ. ನಿರ್ವಾಹಕನು ಆ ನಿಧಿಯ ಬಡ್ಡಿಯನ್ನು 'ಎ' ನಿಗೆ ಸಂದಾಯಮಾಡುತ್ತಾನೆ. ಇದು 'ಬಿ' ನಿಗೆ ಕೊಟ್ಟ ಮರಣಶಾಸನದಾನಕ್ಕೆ ಇಂಗಿತ ಅನುಮತಿಯಾಗಿದೆ.

(iv) ಮರಣಶಾಸನ ಕರ್ತನ ಎಲ್ಲಾ ಋಣಗಳನ್ನು ಸಂದಾಯ ಮಾಡಿದ ಮೇಲೆ ಆದರೆ ನಿರ್ದಿಷ್ಟ ಮರಣಶಾಸನ ಸ್ವತ್ತುಗಳನ್ನು ಪೂರೈಸುವುದಕ್ಕೆ ಮುಂಚೆ ನಿರ್ವಾಹಕರು ಮರಣ ಹೊಂದಿರುತ್ತಾರೆ. ಮರಣಶಾಸನ ಸ್ವತ್ತುಗಳಿಗೆ ಅನುಮತಿಯನ್ನು ಪೂರ್ವಭಾವನೆ ಮಾಡಬಹುದು.

(v) ಯಾವ ವ್ಯಕ್ತಿಗೆ ಒಂದು ನಿರ್ದಿಷ್ಟ ವಸ್ತುವನ್ನು ಮರಣಶಾಸನದ ಮೂಲಕ ಕೊಡಲಾಗಿದೆಯೋ ಆ ವ್ಯಕ್ತಿಯು, ಅದರ ಸ್ವಾಧೀನವನ್ನು ಪಡೆದುಕೊಳ್ಳುತ್ತಾನೆ ಮತ್ತು ನಿರ್ವಾಹಕನಿಂದ ಯಾವುದೇ ಆಕ್ಷೇಪಣೆ ಇಲ್ಲದೆ ಅದನ್ನು ಇಟ್ಟುಕೊಳ್ಳುತ್ತಾನೆ. ಅವನ ಅನುಮತಿಯನ್ನು ಪೂರ್ವಭಾವನೆ ಮಾಡಬಹುದು.

334. ಷರತ್ತುಪೂರ್ವಕ ಅನುಮತಿ:- ಮರಣಶಾಸನ ಸ್ವತ್ತಿಗೆ ನಿರ್ವಾಹಕ ಅಥವಾ ಆಡಳಿತಗಾರನ ಅನುಮತಿಯು, ಷರತ್ತು ಪೂರ್ವಕವಾಗಿರಬಹುದು ಮತ್ತು ಆ ಷರತ್ತನ್ನು ವಿಧಿಸಲು ಅವನಿಗೆ ಹಕ್ಕಿದ್ದು, ಅದನ್ನು ನೆರವೇರಿಸದಿರುವಾಗ, ಆ ಮರಣಶಾಸನ ಸ್ವತ್ತಿಗೆ ಅನುಮತಿ ನೀಡಿದಂತಾಗುವುದಿಲ್ಲ.

ದೃಷ್ಟಾಂತಗಳು

(i) 'ಎ' ನು 'ಬಿ' ನಿಗೆ ಸುಲ್ತಾನಪುರದಲ್ಲಿರುವ ತನ್ನ ಭೂಮಿಗಳನ್ನು ಮರಣ ಶಾಸನದ ಮೂಲಕ ಕೊಡುತ್ತಾನೆ. ಅವು ಮರಣ ಶಾಸನದ ದಿನಾಂಕದಂದು ಮತ್ತು 'ಎ' ನ ಮರಣದ ಕಾಲದಲ್ಲಿ 10,000 ರೂಪಾಯಿಯ ಅಡಮಾನಕ್ಕೆ ಒಳಪಟ್ಟಿದ್ದವು. 'ಬಿ' ನು ಒಂದು ಸೀಮಿತ ಕಾಲದೊಳಗೆ ಮರಣ ಶಾಸನ ಕರ್ತನ ಮರಣ ಕಾಲದಲ್ಲಿ ಅಡಮಾನದ ಮೇಲೆ ಬಾಕಿಯಿರುವ ಮೊಬಲಗನ್ನು ಸಂದಾಯ ಮಾಡತಕ್ಕುದೆಂಬ ಷರತ್ತಿನ ಮೇಲೆ ನಿರ್ವಾಹಕನು ಮರಣ ಶಾಸನದಾನಕ್ಕೆ ಅನುಮತಿಸುತ್ತಾನೆ. ಆ ಮೊಬಲಗನ್ನು ಸಂದಾಯಮಾಡಿಲ್ಲ. ಆದ್ದರಿಂದ ಅದಕ್ಕೆ ಅನುಮತಿ ನೀಡಿದಂತಾಗಿಲ್ಲ.

(ii) ನಿರ್ವಾಹಕನು, ಲೆಗಟಿಯು ತನಗೆ ಒಂದಷ್ಟು ಹಣದ ಮೊತ್ತವನ್ನು ಸಂದಾಯಮಾಡತಕ್ಕುದೆಂಬ ಷರತ್ತಿನ ಮೇಲೆ ಮರಣ ಶಾಸನದಾನಕ್ಕೆ ಅನುಮತಿಸುತ್ತಾನೆ. ಆದರೆ ಆ ಮೊಬಲಗು ಸಂದಾಯವಾಗಿಲ್ಲ. ಆದಾಗ್ಯೂ ಅನುಮತಿಯು ಸಿಂಧುವಾಗಿದೆ.

335. ತನಗೇ ಸೇರಿದ ಮರಣ ಶಾಸನ ಸ್ವತ್ತಿಗೆ ನಿರ್ವಾಹಕನ ಅನುಮತಿ:- (1) ನಿರ್ವಾಹಕ ಅಥವಾ ಆಡಳಿತಗಾರನು ಲೆಗಟಿಯಾಗಿದ್ದು, ಮರಣ ಶಾಸನ ಸ್ವತ್ತಿಗೆ ತನ್ನ ಸ್ವಾಮ್ಯವನ್ನು ಪೂರ್ಣಗೊಳಿಸಲು ಅವನ ಅನುಮತಿಯು, ಆ ಮರಣ ಶಾಸನದಾನವನ್ನು ಬೇರೊಬ್ಬ ವ್ಯಕ್ತಿಗೆ ಮಾಡಿರುವಾಗ ಯಾವ ರೀತಿಯಲ್ಲಿ ಅವನ ಅನುಮತಿಯು ಅಗತ್ಯವಾಗಿರುವುದೋ ಅದೇ ರೀತಿಯಲ್ಲಿ ಅದು ಅವಶ್ಯವಾಗಿರುತ್ತದೆ ಮತ್ತು ಅವನ ಅನುಮತಿಯು ವ್ಯಕ್ತ ಅಥವಾ ಇಂಗಿತವಾಗಿರಬಹುದು.

(2) ಆ ಸ್ವತ್ತಿನ ಆಡಳಿತವನ್ನು ನಿರ್ವಹಿಸುವಾಗ ಅವನು ಲೆಗಟಿಯ ಸ್ವರೂಪದ ಆದರೆ ನಿರ್ವಾಹಕನ ಅಥವಾ ಆಡಳಿತಗಾರನ ಸ್ವರೂಪದ್ದಾಗಿರದ ಯಾವುದೇ ಕಾರ್ಯವನ್ನು ಮಾಡಿದರೆ ಆಗ ಅನುಮತಿಯು ಇಂಗಿತವಾದುದಾಗಿರತಕ್ಕುದು.

ದೃಷ್ಟಾಂತ

ನಿರ್ವಾಹಕನು ತನಗೆ ಮರಣ ಶಾಸನದ ಮೂಲಕ ಕೊಟ್ಟ ಮನೆಯ ಬಾಡಿಗೆಯನ್ನು ಅಥವಾ ಸರ್ಕಾರದ ಭದ್ರತೆಗಳ ಬಡ್ಡಿಯನ್ನು ತೆಗೆದುಕೊಳ್ಳುತ್ತಾನೆ ಮತ್ತು ಅದನ್ನು ತನ್ನ ಸ್ವಂತ ಉಪಯೋಗಕ್ಕೆ ವಿನಿಯೋಗಿಸುತ್ತಾನೆ. ಇದು ಅನುಮತಿಯಾಗಿರುತ್ತದೆ.

336. ನಿರ್ವಾಹಕನ ಅನುಮತಿಯ ಪರಿಣಾಮ:- ಮರಣ ಶಾಸನ ಸ್ವತ್ತಿಗೆ ನಿರ್ವಾಹಕನ ಅಥವಾ ಆಡಳಿತಗಾರನ ಅನುಮತಿಯು, ಮರಣ ಶಾಸನ ಕರ್ತನ ಮರಣದಂದಿನಿಂದ ಪರಿಣಾಮಕಾರಿಯಾಗುತ್ತದೆ.

ದೃಷ್ಟಾಂತಗಳು

(i) ನಿರ್ವಾಹಕನು ಅನುಮತಿ ನೀಡುವುದಕ್ಕೆ ಮುಂಚೆ ಒಬ್ಬ ಲೆಗಟಿಯು, ತನ್ನ ಮರಣ ಶಾಸನ ಸ್ವತ್ತನ್ನು ಮಾರಾಟ ಮಾಡುತ್ತಾನೆ. ನಿರ್ವಾಹಕನ ತರುವಾಯದ ಅನುಮತಿಯು ಖರೀದಿದಾರನಿಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ಮರಣ ಶಾಸನ ಸ್ವತ್ತಿಗೆ ಅವನ ಸ್ವಾಮ್ಯವನ್ನು ಪೂರ್ಣಗೊಳಿಸುತ್ತದೆ.

(ii) 'ಎ' ನು 'ಬಿ' ನಿಗೆ 1000 ರೂಪಾಯಿಗಳನ್ನು ತನ್ನ ಮರಣದಂದಿನಿಂದ ಬಡ್ಡಿ ಸಮೇತ ಮರಣಶಾಸನದ ಮೂಲಕ ಕೊಡುತ್ತಾನೆ. ನಿರ್ವಾಹಕನು 'ಎ' ನ ಮರಣದಂದಿನಿಂದ ಒಂದು ವರ್ಷ ಮುಕ್ತಾಯವಾಗುವವರೆಗೆ ಅವನ ಮರಣ ಶಾಸನ ಸ್ವತ್ತಿಗೆ ಅನುಮತಿಸುವುದಿಲ್ಲ. 'ಬಿ' ನು 'ಎ' ನ ಮರಣದಂದಿನಿಂದ ಬಡ್ಡಿಗೆ ಹಕ್ಕುಳ್ಳವನಾಗಿರುತ್ತಾನೆ.

337. ನಿರ್ವಾಹಕನು ಮರಣ ಶಾಸನ ಸ್ವತ್ತುಗಳನ್ನು ಯಾವಾಗ ವಶಾವಣೆ ಮಾಡುವುದು:- ನಿರ್ವಾಹಕ ಅಥವಾ ಆಡಳಿತಗಾರನು, ಮರಣ ಶಾಸನ ಕರ್ತನ ಮರಣದಂದಿನಿಂದ ಒಂದು ವರ್ಷ ಮುಕ್ತಾಯವಾಗುವವರೆಗೆ, ಮರಣ ಶಾಸನ ಸ್ವತ್ತನ್ನು ಸಂದಾಯ ಮಾಡಲು ಅಥವಾ ವಶಾವಣೆ ಮಾಡಲು ಬದ್ಧನಾಗಿರುವುದಿಲ್ಲ.

ದೃಷ್ಟಾಂತ

'ಎ' ನು ತನ್ನ ಉಯಿಲು ಮೂಲಕ, ತನ್ನ ಮರಣಾನಂತರ ಆರು ತಿಂಗಳುಗಳ ಒಳಗೆ ತನ್ನ ಮರಣ ಶಾಸನ ಸ್ವತ್ತುಗಳನ್ನು ಸಂದಾಯಮಾಡಬೇಕೆಂದು ನಿರ್ದೇಶಿಸುತ್ತಾನೆ. ಒಂದು ವರ್ಷವು ಮುಕ್ತಾಯವಾಗುವುದಕ್ಕೆ ಮುಂಚೆ ಅವುಗಳನ್ನು ಸಂದಾಯ ಮಾಡಲು ನಿರ್ವಾಹಕನು ಬದ್ಧನಲ್ಲ.

## ಅಧ್ಯಾಯ - IX

### ವರ್ಷಾಶನಗಳ ಸಂದಾಯ ಮತ್ತು ಹಂಚಿಕೆ

338. ಉಯಿಲಿನಲ್ಲಿ ಯಾವುದೇ ಕಾಲವನ್ನು ನಿಗದಿಪಡಿಸಿರದಿರುವಾಗ ವರ್ಷಾಶನದ ಆರಂಭ:- ಉಯಿಲು ಮೂಲಕ ಒಂದು ವರ್ಷಾಶನವನ್ನು ಕೊಟ್ಟಿದ್ದು, ಅದರ ಪ್ರಾರಂಭಕ್ಕೆ ಯಾವುದೇ ಕಾಲವನ್ನು ನಿಗದಿಪಡಿಸದೆ ಇರುವಲ್ಲಿ ಅದು ಮರಣಶಾಸನ ಕರ್ತನ ಮರಣದಂದಿನಿಂದ ಪ್ರಾರಂಭವಾಗತಕ್ಕುದು ಮತ್ತು ಮೊದಲ ಸಂದಾಯವನ್ನು, ಆ ಘಟನೆಯ ತರುವಾಯ ಒಂದು ವರ್ಷವು ಮುಕ್ತಾಯವಾದ ಮೇಲೆ ಮಾಡತಕ್ಕುದು.

339. ತ್ರೈಮಾಸಿಕವಾಗಿ ಅಥವಾ ಮಾಸಿಕವಾಗಿ ಸಂದಾಯ ಮಾಡಬೇಕಾದ ವರ್ಷಾಶನವು ಯಾವಾಗ ಮೊದಲು ಬಾಕಿಯಾಗುವುದು:- ವರ್ಷಾಶನವನ್ನು ತ್ರೈಮಾಸಿಕವಾಗಿ ಅಥವಾ ಮಾಸಿಕವಾಗಿ ಸಂದಾಯ ಮಾಡತಕ್ಕುದೆಂಬ ನಿರ್ದೇಶನವಿರುವಲ್ಲಿ, ಮೊದಲ ಸಂದಾಯವು ಮರಣ ಶಾಸನ ಕರ್ತನ ಮರಣಾನಂತರ, ಸಂದರ್ಭಾನುಸಾರ ತ್ರೈಮಾಸಿಕದ ಕೊನೆಯಲ್ಲಿ ಅಥವಾ ಮೊದಲ ತಿಂಗಳ ಕೊನೆಯಲ್ಲಿ ಬಾಕಿಯಾಗತಕ್ಕುದು ಮತ್ತು ನಿರ್ವಾಹಕ ಅಥವಾ ಆಡಳಿತಗಾರನು ಯುಕ್ತವೆಂದು ಯೋಚಿಸಿದರೆ, ಬಾಕಿಯಾದಂದು ಅದನ್ನು ಸಂದಾಯ ಮಾಡತಕ್ಕುದು, ಆದರೆ ನಿರ್ವಾಹಕನು ಅಥವಾ ಆಡಳಿತಗಾರನು ಆ ವರ್ಷದ ಕೊನೆಯವರೆಗೆ ಅದನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕುದಲ್ಲ.

340. ಮೊದಲ ಸಂದಾಯವನ್ನು ಒಂದು ಗೊತ್ತಾದ ಕಾಲದೊಳಗೆ ಅಥವಾ ನಿರ್ದಿಷ್ಟ ಮಾಡಬೇಕೆಂದು ನಿರ್ದೇಶಿಸಿದಾಗ ಅನುಕ್ರಮ ಸಂದಾಯದ ದಿನಾಂಕಗಳು - ಸಂದಾಯಕ್ಕೆ ಮುಂಚೆ ವರ್ಷಾಶನದಾರನು ಮೃತನಾದಾಗ:- ವರ್ಷಾಶನದ ಮೊದಲ ಸಂದಾಯವನ್ನು, ಮರಣ ಶಾಸನ ಕರ್ತನ ಮರಣದಂದಿನಿಂದ ಒಂದು ತಿಂಗಳ ಒಳಗೆ ಅಥವಾ ಇನ್ನಾವುದೇ ಕಾಲದೊಳಗೆ ಅಥವಾ ಒಂದು

ನಿಶ್ಚಿತ ದಿವಸದಂದು ಮಾಡತಕ್ಕುದೆಂದು ನಿರ್ದೇಶನವಿರುವಲ್ಲಿ ಆ ಅನುಕ್ರಮ ಸಂದಾಯಗಳನ್ನು ಯಾವ ಅತಿ ಮುಂಚಿನ ದಿವಸದಂದು ಮೊದಲು ಸಂದಾಯವನ್ನು ಮಾಡಬೇಕೆಂದು ಉಯಿಲು ಅಧಿಕೃತಗೊಳಿಸುವುದೋ ಆ ಅತಿ ಮುಂಚಿನ ದಿವಸದಿಂದ ಒಂದು ವರ್ಷವು ಪೂರ್ಣವಾದಂದು ಮಾಡತಕ್ಕುದು.

(2) ಸಂದಾಯದ ಕಾಲಗಳ ಮಧ್ಯಂತರದಲ್ಲಿ ವರ್ಷಾಶನದಾರನು ಮರಣ ಹೊಂದಿದರೆ, ವರ್ಷಾಶನದ ಹಂಚಿದ ಪಾಲನ್ನು ಅವನ ಪ್ರತಿನಿಧಿಗೆ ಸಂದಾಯ ಮಾಡತಕ್ಕುದು.

## ಅಧ್ಯಾಯ - X

### ಮರಣಶಾಸನ ಸ್ವತ್ತುಗಳಿಗಾಗಿ ವ್ಯವಸ್ಥೆ ಮಾಡಲು ನಿಧಿಗಳ ಹೂಡಿಕೆಯ ಬಗ್ಗೆ

341. ಆಜೀವ ಪರ್ಯಂತ ಕೊಟ್ಟ ಮರಣ ಶಾಸನದ ಸ್ವತ್ತು ಅನಿರ್ದಿಷ್ಟವಾಗಿರುವಲ್ಲಿ, ಮರಣ ಶಾಸನದ ಮೂಲಕ ಕೊಟ್ಟ ಮೊತ್ತದ ಹೂಡಿಕೆ:- ನಿರ್ದಿಷ್ಟವಲ್ಲದ ಮರಣ ಶಾಸನ ಸ್ವತ್ತನ್ನು ಆಜೀವ ಪರ್ಯಂತ ಕೊಟ್ಟಿರುವಲ್ಲಿ , ಮರಣ ಶಾಸನದ ಮೂಲಕ ಕೊಟ್ಟ ಮೊತ್ತವನ್ನು ಆ ವರ್ಷದ ಕೊನೆಯಲ್ಲಿ , ಉಚ್ಚ ನ್ಯಾಯಾಲಯವು ಯಾವುದೇ ಸಾಮಾನ್ಯ ನಿಯಮದ ಮೂಲಕ ಅಧಿಕೃತಗೊಳಿಸಬಹುದಾದ ಅಥವಾ ನಿರ್ದೇಶಿಸಬಹುದಾದಂಥ ಭದ್ರತೆಗಳಲ್ಲಿ ಹೂಡತಕ್ಕುದು ಮತ್ತು ಅದರ ಉತ್ಪತ್ತಿಗಳನ್ನು ಅವು ಬಾಕಿಯಾದಂತೆ ಲೆಗಟಿಗೆ ಸಂದಾಯ ಮಾಡತಕ್ಕುದು.

342. ಭವಿಷ್ಯ ಕಾಲದಲ್ಲಿ ಸಂದಾಯ ಮಾಡಬೇಕಾದ ಸಾಮಾನ್ಯ ಮರಣ ಶಾಸನ ಸ್ವತ್ತಿನ ಹೂಡಿಕೆ, ಮಧ್ಯಕಾಲೀನ ಬಡ್ಡಿಯ ವಿಲೆ:- (1) ಸಾಮಾನ್ಯ ಮರಣಶಾಸನ ಸ್ವತ್ತನ್ನು ಭವಿಷ್ಯತ್ ಕಾಲದಲ್ಲಿ ಸಂದಾಯ ಮಾಡಬೇಕೆಂದು ಕೊಟ್ಟಿರುವಲ್ಲಿ, ನಿರ್ವಾಹಕ ಅಥವಾ ಆಡಳಿತಗಾರನು ಅದನ್ನು ಪೂರೈಸಲು ಸಾಕಾಗುವಷ್ಟು ಮೊತ್ತವನ್ನು 341ನೇ ಪ್ರಕರಣದಲ್ಲಿ ಹೇಳಲಾದ ಸ್ವರೂಪದ ಭದ್ರತೆಗಳಲ್ಲಿ ಹೂಡತಕ್ಕುದು.

(2) ಮಧ್ಯಕಾಲೀನ ಬಡ್ಡಿಯ ಮರಣ ಶಾಸನ ಕರ್ತನ ಎಸ್ಟೇಟಿನ ಉಳಿದುದರ ಭಾಗವಾಗಿರತಕ್ಕುದು.

343. ವರ್ಷಾಶನಕ್ಕಾಗಿ ಯಾವುದೇ ನಿಧಿಯ ಮೇಲೆ ಋಣಭಾರ ಹೊರಿಸದಿರುವಾಗ ಅಥವಾ ಅದಕ್ಕೆ ವಿನಿಯೋಗಿಸದಿರುವಾಗ ಪ್ರಕ್ರಿಯೆ:- ವರ್ಷಾಶನವನ್ನು ಕೊಟ್ಟಿದ್ದು ಅದರ ಸಂದಾಯಕ್ಕಾಗಿ ಯಾವುದೇ ನಿಧಿಯ ಮೇಲೆ ಋಣ ಭಾರ ಹೊರಿಸದಿರುವಲ್ಲಿ ಅಥವಾ ಅದನ್ನು ಪೂರೈಸಲು ಉಯಿಲು ಯಾವುದೇ ನಿಧಿಯನ್ನು ವಿನಿಯೋಗಿಸದೆ ಇರುವಲ್ಲಿ, ನಿರ್ದಿಷ್ಟ ಮೊಬಲಗಿನ ಸರ್ಕಾರಿ ವರ್ಷಾಶನವನ್ನು ಖರೀದಿ ಮಾಡತಕ್ಕುದು ಅಥವಾ ಅಂಥ ಯಾವುದೇ ವರ್ಷಾಶನವನ್ನು ಪಡೆಯಲಾಗದಿದ್ದರೆ ಆಗ ಆ ವರ್ಷಾಶನವನ್ನು ಪಡೆಯಲು ಸಾಕಾಗುವಷ್ಟು ಮೊತ್ತವನ್ನು, 341 ನೇ ಪ್ರಕರಣದಲ್ಲಿ ಹೇಳಿರುವ ಸ್ವರೂಪದ ಭದ್ರತೆಗಳಲ್ಲಿ ಆ ಉದ್ದೇಶಕ್ಕಾಗಿ ಹೂಡತಕ್ಕುದು.

344. ಅವಲಂಬಿತ ಮರಣಶಾಸನ ದಾನವನ್ನು ಶೇಷ ಲೆಗಟಿಗೆ ವರ್ಗಾಯಿಸುವುದು:- ಮರಣಶಾಸನದಾನವು ಅವಲಂಬಿತವಾಗಿರುವಲ್ಲಿ, ನಿರ್ವಾಹಕ ಅಥವಾ ಆಡಳಿತಗಾರನು ಮರಣಶಾಸನ ಸ್ವತ್ತಿನ ಮೊಬಲಗುಗಳನ್ನು ಹೂಡಲು ಬದ್ಧನಾಗಿರುವುದಿಲ್ಲ, ಆದರೆ ಎಸ್ಟೇಟಿನ ಇಡೀ ಶೇಷವನ್ನು ಶೇಷ ಲೆಗಟಿ, ಯಾರಾದರೂ ಇದ್ದರೆ, ಅವನಿಗೆ, ಮರಣಶಾಸನದ ಸ್ವತ್ತು ಬಾಕಿಯಾದರೆ ಅದರ ಸಂದಾಯಕ್ಕಾಗಿ ಸಾಕಷ್ಟು ಭದ್ರತೆಯನ್ನು ಅವನು ಕೊಟ್ಟ ಮೇಲೆ ವರ್ಗಾವಣೆ ಮಾಡಬಹುದು.

345. ನಿರ್ದಿಷ್ಟ ಭದ್ರತೆಗಳಲ್ಲಿ ಹೂಡಬೇಕೆಂಬ ನಿರ್ದೇಶನವಿಲ್ಲದೆ ಜೀವನಪರ್ಯಂತ ಮರಣಶಾಸನ ದಾನದ ಮೂಲಕ ಕೊಟ್ಟ ಶೇಷದ ಹೂಡಿಕೆ:- (1) ಮರಣಶಾಸನ ಕರ್ತನು ತನ್ನ ಎಸ್ಟೇಟಿನ ಶೇಷವನ್ನು ಒಬ್ಬ ವ್ಯಕ್ತಿಗೆ ಜೀವನಪರ್ಯಂತವಾಗಿ ಯಾವುದೇ ನಿರ್ದಿಷ್ಟ ಭದ್ರತೆಗಳಲ್ಲಿ ಅದನ್ನು ಹೂಡಿಸಬೇಕೆಂಬ ಯಾವುದೇ ನಿರ್ದೇಶನವಿಲ್ಲದೆ ಮರಣ ಶಾಸನ ದಾನದ ಮೂಲಕ ಕೊಟ್ಟಿರುವಲ್ಲಿ, 341 ನೇ ಪ್ರಕರಣದಲ್ಲಿ ಹೇಳಿರುವ ಸ್ವರೂಪದ ಭದ್ರತೆಗಳಲ್ಲಿ ಮರಣಶಾಸನ ಕರ್ತನ ಮರಣ ಕಾಲದಲ್ಲಿ ಹೂಡಿಲ್ಲದಿರುವಷ್ಟನ್ನು ಹಣಕ್ಕೆ ಪರಿವರ್ತಿಸತಕ್ಕುದು ಮತ್ತು ಅಂಥ ಭದ್ರತೆಗಳಲ್ಲಿ ಹೂಡತಕ್ಕುದು.

(2) ಮೃತನು ಹಿಂದೂ, ಮಹಮದೀಯ, ಬೌದ್ಧ, ಸಿಖ್ ಅಥವಾ ಜೈನ ಅಥವಾ ವಿನಾಯಿತಿ ಪಡೆದ ವ್ಯಕ್ತಿಯಾಗಿದ್ದರೆ ಈ ಪ್ರಕರಣವು ಅನ್ವಯವಾಗತಕ್ಕುದಲ್ಲ.

346. ನಿರ್ದಿಷ್ಟ ಭದ್ರತೆಗಳಲ್ಲಿ ಹೂಡಬೇಕೆಂಬ ನಿರ್ದೇಶನದೊಂದಿಗೆ ಜೀವನ ಪರ್ಯಂತ ಮರಣಶಾಸನದ ಮೂಲಕ ಕೊಟ್ಟ ಶೇಷದ ಹೂಡಿಕೆ:- ಮರಣಶಾಸನ ಕರ್ತನು ಅವನ ಎಸ್ಟೇಟಿನ ಶೇಷವನ್ನು ಒಬ್ಬ ವ್ಯಕ್ತಿಗೆ ಜೀವನ ಪರ್ಯಂತ, ಅದನ್ನು ಕೆಲವು ನಿರ್ದಿಷ್ಟ ಭದ್ರತೆಗಳಲ್ಲಿ ಹೂಡತಕ್ಕುದೆಂಬ ನಿರ್ದೇಶನದೊಂದಿಗೆ ಮರಣಶಾಸನದ ಮೂಲಕ ಕೊಟ್ಟಿರುವಲ್ಲಿ, ಅವನ ಮರಣದ ಕಾಲದಲ್ಲಿ ನಿರ್ದಿಷ್ಟ ಸ್ವರೂಪದ ಭದ್ರತೆಗಳಲ್ಲಿ ಹೂಡಿಲ್ಲದಿರುವಷ್ಟು ಎಸ್ಟೇಟನ್ನು, ಹಣಕ್ಕೆ ಪರಿವರ್ತಿಸತಕ್ಕುದು ಮತ್ತು ಅಂಥ ಭದ್ರತೆಗಳಲ್ಲಿ ಹೂಡತಕ್ಕುದು.

347. ಪರಿವರ್ತನೆ ಮತ್ತು ಹೂಡಿಕೆಯ ಕಾಲ ಮತ್ತು ರೀತಿ:- 345 ಮತ್ತು 346 ನೇ ಪ್ರಕರಣಗಳ ಮೂಲಕ ಉದ್ದೇಶಿಸಲಾದಂಥ ಪರಿವರ್ತನೆ ಮತ್ತು ಹೂಡಿಕೆಯನ್ನು, ನಿರ್ವಾಹಕ ಅಥವಾ ಆಡಳಿತಗಾರನು ಸೂಕ್ತವೆಂದು ಆಲೋಚಿಸುವಂತಹ ಕಾಲಗಳಲ್ಲಿ ಮತ್ತು ರೀತಿಯಲ್ಲಿ ಮಾಡತಕ್ಕುದು; ಮತ್ತು ಅಂತಹ ಪರಿವರ್ತನೆ ಮತ್ತು ಹೂಡಿಕೆಯು ಪೂರ್ಣವಾಗುವವರೆಗೆ, ಆ ನಿಧಿಯನ್ನು ಹಾಗೆ ಹೂಡಿದಾಗ ಅದರ ಆದಾಯಕ್ಕೆ ತತ್ಕಾಲದಲ್ಲಿ ಹಕ್ಕುಳ್ಳವನಾಗಬಹುದಾದ ವ್ಯಕ್ತಿಯು, ಹಾಗೆ ಹೂಡಲಾಗಿರದ ನಿಧಿಯ ಅಂತಹ ಭಾಗದ ಮಾರುಕಟ್ಟೆ ಮೌಲ್ಯದ ಮೇಲೆ (ಮರಣಶಾಸನ ಕರ್ತನ ಮರಣದ ದಿನಾಂಕದಲ್ಲಿದ್ದಂತೆ ಅದನ್ನು ಲೆಕ್ಕ ಹಾಕಬೇಕು) ವರ್ಷಕ್ಕೆ ಶೇಕಡಾ ನಾಲ್ಕರ ದರದಲ್ಲಿ ಬಡ್ಡಿಯನ್ನು ಸ್ವೀಕರಿಸತಕ್ಕುದು:

ಪರಂತು, ಮರಣಶಾಸನ ಕರ್ತನು ಹಿಂದೂ, ಮಹಮದೀಯ, ಬೌದ್ಧ, ಸಿಖ್, ಜೈನ ಅಥವಾ ವಿನಾಯಿತಿ ಪಡೆದ ವ್ಯಕ್ತಿಯಾಗಿದ್ದಾಗ ಹೂಡಿಕೆಯನ್ನು ಪೂರ್ಣಗೊಳಿಸುವುದಕ್ಕೆ ಮುಂಚಿನ ಬಡ್ಡಿಯ ದರವು ವರ್ಷಕ್ಕೆ ಶೇಕಡಾ ಆರು ಆಗಿರತಕ್ಕುದು.

348. ಅಪ್ರಾಪ್ತ ವಯಸ್ಕನು ಮರಣಶಾಸನ ಸ್ವತ್ತಿನ ತ್ವರಿತ ಸಂದಾಯಕ್ಕೆ ಅಥವಾ ಸ್ವಾಧೀನಕ್ಕೆ ಹಕ್ಕುಳ್ಳವನಾಗಿರುವಲ್ಲಿ ಮತ್ತು ಅವನ ಪರವಾಗಿ ಯಾವನೇ ವ್ಯಕ್ತಿಗೆ ಸಂದಾಯ ಮಾಡಬೇಕೆಂಬ ಯಾವುದೇ ನಿರ್ದೇಶನವು ಇರದಿರುವಲ್ಲಿ ಪ್ರಕ್ರಿಯೆ:- (1) ಮರಣಶಾಸನ ಸ್ವತ್ತಿನ ನಿಬಂಧನೆಗಳ ಮೂಲಕ ಲೆಗಟಿಯು ಮರಣಶಾಸನ ಸ್ವತ್ತಿನ ಮೂಲಕ ಕೊಟ್ಟ ಹಣ ಅಥವಾ ವಸ್ತುವಿನ ತ್ವರಿತ ಸಂದಾಯಕ್ಕೆ ಅಥವಾ ಸ್ವಾಧೀನಕ್ಕೆ ಹಕ್ಕುಳ್ಳವನಾಗಿದ್ದು, ಅಪ್ರಾಪ್ತ ವಯಸ್ಕನಾಗಿರುವಲ್ಲಿ ಮತ್ತು ಅವನ ಪರವಾಗಿ ಯಾವನೇ ವ್ಯಕ್ತಿಗೆ ಸಂದಾಯ ಮಾಡಲು ಉಯಿಲಿನಲ್ಲಿ ಯಾವ ನಿರ್ದೇಶನವೂ ಇಲ್ಲದಿರುವಲ್ಲಿ, ಯಾವ ಆ ಪ್ರೊಬೇಟನ್ನು ಅಥವಾ ಮರಣಶಾಸನದೊಂದಿಗೆ ಲಗತ್ತಿಸಿದ ಆಡಳಿತ ಪತ್ರವನ್ನು ನೀಡಿದ್ದ ಜಿಲ್ಲಾನ್ಯಾಯಾಧೀಶ ಅಥವಾ ಜಿಲ್ಲಾನ್ಯಾಯಾಧೀಶನ ಜಿಲ್ಲಾ ಪ್ರತಿನಿಧಿಯ ನ್ಯಾಯಾಲಯದಲ್ಲಿ ನಿರ್ವಾಹಕ ಅಥವಾ ಆಡಳಿತಗಾರನು ಲೆಗಟಿಯ ಲೆಕ್ಕಕ್ಕೆ, ಲೆಗಟಿಯ ಪ್ರತಿಪಾಲಿತರ ನ್ಯಾಯಾಲಯದ ಪ್ರತಿಪಾಲಿತನಾಗಿದ್ದ ಹೊರತು, ಆ ಸ್ವತ್ತನ್ನು ಸಂದಾಯಮಾಡತಕ್ಕುದು ಅಥವಾ ವಶಾವಣೆ ಮಾಡತಕ್ಕುದು.

(2) ಲೆಗಟಿಯು ಪ್ರತಿಪಾಲಿತರ ನ್ಯಾಯಾಲಯದ ಪ್ರತಿಪಾಲಿತನಾಗಿದ್ದರೆ ಆ ಮರಣಶಾಸನ ಸ್ವತ್ತನ್ನು ಪ್ರತಿಪಾಲಿತರ ನ್ಯಾಯಾಲಯದಲ್ಲಿ ಅವನ ಲೆಕ್ಕಕ್ಕೆ ಸಂದಾಯ ಮಾಡತಕ್ಕುದು.

(3) ಸಂದರ್ಭಾನುಸಾರ ಜಿಲ್ಲಾ ನ್ಯಾಯಾಧೀಶನ ನ್ಯಾಯಾಲಯದಲ್ಲಿ ಅಥವಾ ಪ್ರತಿಪಾಲಿತರ ನ್ಯಾಯಾಲಯದಲ್ಲಿ ಮಾಡಿದ ಅಂಥ ಸಂದಾಯವು ಹಾಗೆ ಸಂದಾಯ ಮಾಡಿದ ಹಣಕ್ಕೆ ಸಾಕಷ್ಟು ತೀರುವಳಿಯಾಗಿರತಕ್ಕುದು.

(4) ಈ ಪ್ರಕರಣದ ಮೇರೆಗೆ ಹಣವನ್ನು ಸಂದಾಯ ಮಾಡಿರುವಾಗ ಅದನ್ನು ಸರ್ಕಾರದ ಭದ್ರತೆಗಳನ್ನು ಖರೀದಿಸುವಲ್ಲಿ ಹೂಡತಕ್ಕುದು; ಅವುಗಳನ್ನು ಅವುಗಳ ಮೇಲಿನ ಬಡ್ಡಿಯೊಂದಿಗೆ ಅವುಗಳಿಗೆ ಹಕ್ಕುಳ್ಳವನಾದ ವ್ಯಕ್ತಿಗೆ ವರ್ಗಾಯಿಸತಕ್ಕುದು ಅಥವಾ ಸಂದಾಯಮಾಡತಕ್ಕುದು ಅಥವಾ ಸಂದರ್ಭಾನುಸಾರ ನ್ಯಾಯಾಧೀಶ ಅಥವಾ ಪ್ರತಿಪಾಲಿತರ ನ್ಯಾಯಾಲಯವು ನಿರ್ದೇಶಿಸಬಹುದಾದಂತೆ, ಅವನ ಪ್ರಯೋಜನಕ್ಕೆ ಅನ್ಯಥಾ ವಿನಿಯೋಗಿಸತಕ್ಕುದು.

## ಅಧ್ಯಾಯ - XI

## ಮರಣಶಾಸನ ಸ್ವತ್ತುಗಳ ಉತ್ಪತ್ತಿ ಮತ್ತು ಬಡ್ಡಿಯ ಬಗ್ಗೆ

349. ನಿರ್ದಿಷ್ಟ ಮರಣಶಾಸನ ಸ್ವತ್ತಿನ ಉತ್ಪತ್ತಿಗೆ ಲೆಗಟಿಯ ಸ್ವಾಮ್ಯ:- ನಿರ್ದಿಷ್ಟ ಮರಣಶಾಸನ ಸ್ವತ್ತಿನ ಲೆಗಟಿಯು ಅದರ ಸ್ಪಷ್ಟ ಉತ್ಪತ್ತಿ ಯಾವುದಾದರೂ ಇದ್ದರೆ, ಅದಕ್ಕೆ ಮರಣಶಾಸನ ಕರ್ತನ ಮರಣದಂದಿನಿಂದ ಹಕ್ಕುಳ್ಳವನಾಗಿರುತ್ತಾನೆ.

ಅಪವಾದ:- ಒಂದು ನಿರ್ದಿಷ್ಟ ಮರಣಶಾಸನ ಸ್ವತ್ತು ಅದರ ನಿಬಂಧನೆಗಳ ಪ್ರಕಾರ ಅವಲಂಬಿತವಾಗಿರುವಾಗ ಅದು ಮರಣಶಾಸನ ಕರ್ತನ ಮರಣ ಮತ್ತು ಮರಣಶಾಸನ ಸ್ವತ್ತು ನಿಹಿತಗೊಳ್ಳುವ ಅವಧಿಯ ನಡುವಿನ ಮರಣಶಾಸನ ಸ್ವತ್ತಿನ ಉತ್ಪತ್ತಿಯನ್ನು ಒಳಗೊಳ್ಳುವುದಿಲ್ಲ ಮತ್ತು ಅದರ ಸ್ಪಷ್ಟ ಉತ್ಪನ್ನವು ಮರಣಶಾಸನ ಕರ್ತನ ಎಸ್ಟೇಟಿನ ಶೇಷದ ಭಾಗವಾಗುತ್ತದೆ.

ದೃಷ್ಟಾಂತಗಳು

(i) ಎ' ನು ತನ್ನ ಕುರಿಮಂದೆಯನ್ನು 'ಬಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನ ಮರಣ ಮತ್ತು ಅವನ ನಿರ್ವಾಹಕನು ವಶಾವಣೆ ಮಾಡುವ ಅವಧಿಯ ನಡುವೆ ಕುರಿಗಳ ತುಪ್ಪಟವನ್ನು ಕತ್ತರಿಸಲಾಗುತ್ತದೆ ಅಥವಾ ಕೆಲವು ಹೆಣ್ಣು ಕುರಿಗಳು ಮರಿ ಹಾಕುತ್ತವೆ. ಆ ಉಣ್ಣೆ ಮತ್ತು ಕುರಿಮರಿಗಳು 'ಬಿ' ನ ಸ್ವತ್ತುಗಳಾಗಿರುತ್ತವೆ.

(ii) 'ಎ' ನು ತನ್ನ ಸರ್ಕಾರಿ ಭದ್ರತೆಗಳನ್ನು 'ಬಿ' ನಿಗೆ ಮರಣಶಾಸನದ ಮೂಲಕ ಕೊಡುತ್ತಾನೆ, ಆದರೆ ಅವುಗಳ ವಶಾವಣೆಯನ್ನು 'ಸಿ' ನು ಮರಣ ಹೊಂದುವವರೆಗೆ ಮುಂದೂಡುತ್ತಾನೆ. 'ಎ' ನ ಮರಣ ಮತ್ತು 'ಸಿ' ನ ಮರಣದ ನಡುವಿನ ಅವಧಿಯಲ್ಲಿ ಬಾಕಿಯಾಗುವಂಥ ಬಡ್ಡಿಯು 'ಬಿ' ನಿಗೆ ಸೇರುತ್ತದೆ ಮತ್ತು ಅವನು ಅಪ್ರಾಪ್ತ ವಯಸ್ಕನಾಗಿದ್ದ ಹೊರತು ಅದನ್ನು ಸ್ವೀಕರಿಸಿದ ಹಾಗೆ ಅವನಿಗೆ ಸಂದಾಯ ಮಾಡತಕ್ಕುದು.

(iii) ಮರಣಶಾಸನ ಕರ್ತನು ತನ್ನ ಎಲ್ಲಾ ಶೇಕಡಾ ನಾಲ್ಕರ ಸರ್ಕಾರಿ ಪ್ರಾಮಿಸರಿ ನೋಟುಗಳನ್ನು 'ಎ' ನಿಗೆ 18 ವರ್ಷ ವಯಸ್ಸು ತುಂಬಿದಾಗ ಅವನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನಿಗೆ ಆ ವಯಸ್ಸು ತುಂಬಿದಾಗ, ಆ ನೋಟುಗಳನ್ನು ಸ್ವೀಕರಿಸಲು ಅವನು ಹಕ್ಕುಳ್ಳವನಾಗುತ್ತಾನೆ. ಆದರೆ ಮರಣಶಾಸನ ಕರ್ತನ ಮರಣ ಮತ್ತು 'ಎ' ನಿಗೆ 18 ವರ್ಷ ತುಂಬುವುದರ ನಡುವಿನ ಅವಧಿಯಲ್ಲಿ ಆ ನೋಟುಗಳಿಗೆ ಸಂಬಂಧಿಸಿದಂತೆ ಒದಗಿಬರುವಂಥ ಬಡ್ಡಿಯು ಶೇಷದ ಭಾಗವಾಗಿರುತ್ತದೆ.

350. ಶೇಷನಿಧಿಯ ಉತ್ಪತ್ತಿಗೆ ಶೇಷ ಲೆಗಟಿಯ ಸ್ವಾಮ್ಯ:- ಸಾಮಾನ್ಯ ಶೇಷ ಮರಣಶಾಸನ ದಾನದ ಮೇರೆಗೆ ಲೆಗಟಿಯು ಮರಣ ಶಾಸನ ಕರ್ತನ ಮರಣದಂದಿನಿಂದ ಶೇಷ ನಿಧಿಯ ಉತ್ಪತ್ತಿಗೆ ಹಕ್ಕುಳ್ಳವನಾಗಿರುತ್ತಾನೆ.

ಅಪವಾದ:- ಅವಲಂಬಿತ ಸಾಮಾನ್ಯ ಶೇಷ ಮರಣಶಾಸನದಾನವು, ಅದರ ನಿಬಂಧನೆಗಳ ಪ್ರಕಾರ ಅವಲಂಬಿತವಾಗಿರುವಾಗ ಮರಣಶಾಸನ ಕರ್ತನ ಮರಣದ ಮತ್ತು ಮರಣಶಾಸನ ಸ್ವತ್ತು ನಿಹಿತಗೊಳ್ಳುವುದರ ನಡುವಿನ ಅವಧಿಯಲ್ಲಿ ಮರಣಶಾಸನ ದಾನವಾಗಿ ಕೊಟ್ಟ ನಿಧಿಯ ಮೇಲೆ ಪ್ರಾಪ್ತವಾಗಬಹುದಾದ ಆದಾಯವನ್ನು ಅದು ಒಳಗೊಳ್ಳುವುದಿಲ್ಲ. ಅಂಥ ಆದಾಯವು ವಿಲೇ ಆಗದೆ ಉಳಿಯುವುದು.

ದೃಷ್ಟಾಂತಗಳು

(i) ಮರಣಶಾಸನ ಕರ್ತನು ತನ್ನ ಸ್ವತ್ತಿನ ಶೇಷ ಭಾಗವನ್ನು ಅಪ್ರಾಪ್ತ ವಯಸ್ಕನಾದ 'ಎ' ನಿಗೆ 18 ವರ್ಷ ವಯಸ್ಸು ತುಂಬಿದಾಗ ಅವನಿಗೆ ಸಂದಾಯ ಮಾಡಬೇಕೆಂದು ಮರಣಶಾಸನದ ಮೂಲಕ ಕೊಡುತ್ತಾನೆ. ಮರಣಶಾಸನ ಕರ್ತನ ಮರಣದಂದಿನಿಂದ ಆದಾಯವು 'ಎ' ನಿಗೆ ಸೇರುತ್ತದೆ.

(ii) ಮರಣಶಾಸನ ಕರ್ತನು ತನ್ನ ಸ್ವತ್ತಿನ ಶೇಷ ಭಾಗವನ್ನು 'ಎ' ನಿಗೆ 18 ವರ್ಷ ವಯಸ್ಸು ತುಂಬಿದಾಗ ಅವನಿಗೆ ಸೇರುವಂತೆ ಮರಣಶಾಸನದ ಮೂಲಕ ಕೊಡುತ್ತಾನೆ. 'ಎ' ನು ಆ ವಯಸ್ಸು ತುಂಬಿದಾಗ ಅವನು ಶೇಷವನ್ನು ಸ್ವೀಕರಿಸಲು ಹಕ್ಕುಳ್ಳವನಾಗುತ್ತಾನೆ. ಮರಣಶಾಸನ ಕರ್ತನ ಮರಣದಂದಿನಿಂದ ಅದಕ್ಕೆ ಸಂಬಂಧಿಸಿದಂತೆ ಪ್ರಾಪ್ತವಾದ ಆದಾಯವು ವಿಲೆಯಾಗದೆ ಉಳಿಯುವುದು.

351. ಸಾಮಾನ್ಯ ಮರಣಶಾಸನ ಸ್ವತ್ತನ್ನು ಸಂದಾಯ ಮಾಡುವುದಕ್ಕೆ ಯಾವುದೇ ಕಾಲವನ್ನು ನಿಗದಿಪಡಿಸಿರದಿರುವಾಗ ಬಡ್ಡಿ ಪ್ರಾರಂಭವಾಗುವ ಕಾಲ:- ಸಾಮಾನ್ಯ ಮರಣಶಾಸನ ಸ್ವತ್ತನ್ನು ಸಂದಾಯ ಮಾಡುವುದಕ್ಕಾಗಿ ಯಾವುದೇ ಕಾಲವನ್ನು ನಿಗದಿಪಡಿಸಿರದಿರುವಲ್ಲಿ ಮರಣಶಾಸನ ಕರ್ತನ ಮರಣದಂದಿನಿಂದ ಒಂದು ವರ್ಷವು ಮುಕ್ತಾಯವಾದ ದಿನದಿಂದ ಬಡ್ಡಿಯು ಪ್ರಾರಂಭವಾಗುತ್ತದೆ.

*ಅಪವಾದ:-* (1) ಋಣವನ್ನು ತೀರಿಸುವುದಕ್ಕೆ ಮರಣಶಾಸನದ ಮೂಲಕ ಯಾವುದೇ ಸ್ವತ್ತನ್ನು ಕೊಟ್ಟಿರುವಲ್ಲಿ ಬಡ್ಡಿಯು ಮರಣಶಾಸನ ಕರ್ತನ ಮರಣದ ದಿನದಿಂದ ಪ್ರಾರಂಭವಾಗುತ್ತದೆ.

(2) ಮರಣಶಾಸನ ಕರ್ತನು ಲೆಗಟಿಯ ತಂದೆ / ತಾಯಿ ಅಥವಾ ಇನ್ನೂ ದೂರದ ಪೂರ್ವಜನಾಗಿದ್ದಲ್ಲಿ ಅಥವಾ ಅವನು ಲೆಗಟಿಯ ತಂದೆ ತಾಯಿಯ ಸ್ಥಾನದಲ್ಲಿದ್ದಲ್ಲಿ ಮರಣಶಾಸನ ಸ್ವತ್ತಿಗೆ ಮರಣಶಾಸನ ಕರ್ತನ ಮರಣದ ದಿನದಿಂದ ಬಡ್ಡಿಯು ಬರತಕ್ಕುದು.

(3) ಒಂದು ಮೊತ್ತವನ್ನು ಅಪ್ರಾಪ್ತ ವಯಸ್ಕನಿಗೆ ಅವನ ಪೋಷಣೆಗಾಗಿ ಅದರಿಂದ ಸಂದಾಯ ಮಾಡಬೇಕೆಂಬ ನಿರ್ದೇಶನದೊಂದಿಗೆ ಮರಣಶಾಸನದ ಮೂಲಕ ಕೊಟ್ಟಿರುವಲ್ಲಿ, ಬಡ್ಡಿಯು ಮರಣಶಾಸನ ಕರ್ತನ ಮರಣದ ದಿನದಿಂದ ಸಂದಾಯವಾಗಬೇಕು.

352. ಕಾಲವನ್ನು ನಿಗದಿಪಡಿಸಿರುವಾಗ ಬಡ್ಡಿಯ ಪ್ರಾರಂಭ:- ಒಂದು ಸಾಮಾನ್ಯ ಮರಣಶಾಸನ ಸ್ವತ್ತಿನ ಸಂದಾಯಕ್ಕಾಗಿ ಒಂದು ಕಾಲವನ್ನು ನಿಗದಿಪಡಿಸಿರುವಲ್ಲಿ, ಹಾಗೆ ನಿಗದಿಪಡಿಸಿದ ಕಾಲದಿಂದ ಬಡ್ಡಿಯು ಪ್ರಾರಂಭವಾಗುತ್ತದೆ. ಅಂಥ ಕಾಲದವರೆಗಿನ ಬಡ್ಡಿಯು ಮರಣಶಾಸನ ಕರ್ತನ ಎಸ್ಟೇಟಿನ ಶೇಷದ ಭಾಗವಾಗುತ್ತದೆ.

ಅಪವಾದ:- ಮರಣಶಾಸನ ಕರ್ತನು ಲೆಗಟಿಯ ತಂದೆ / ತಾಯಿ ಅಥವಾ ಇನ್ನೂ ದೂರದ ಪೂರ್ವಜನಾಗಿದ್ದಲ್ಲಿ ಅಥವಾ ಅವನು ಲೆಗಟಿಯ ತಂದೆ / ತಾಯಿಯ ಸ್ಥಾನದಲ್ಲಿರುವಲ್ಲಿ ಮತ್ತು ಲೆಗಟಿಯು ಅಪ್ರಾಪ್ತ ವಯಸ್ಕನಾಗಿರುವಲ್ಲಿ, ಉಯಿಲು ಮೂಲಕ ಪೋಷಣೆಗಾಗಿ ನಿರ್ದಿಷ್ಟ ಮೊತ್ತವನ್ನು ಕೊಟ್ಟಿದ್ದ ಹೊರತು ಅಥವಾ ಉಯಿಲಿನಲ್ಲಿ ತದ್ವಿರುದ್ಧವಾದ ನಿರ್ದೇಶನವು ಇದ್ದ ಹೊರತು, ಆ ಮರಣಶಾಸನ ಸ್ವತ್ತಿಗೆ ಮರಣಶಾಸನ ಕರ್ತನ ಮರಣದಂದಿನಿಂದ ಬಡ್ಡಿಯು ಪ್ರಾಪ್ತವಾಗತಕ್ಕುದು.

353. ಬಡ್ಡಿಯ ದರ:- ಮರಣಶಾಸನ ಕರ್ತನು ಹಿಂದೂ, ಮಹಮದೀಯ, ಬೌದ್ಧ, ಸಿಖ್ ಅಥವಾ ಜೈನ ಅಥವಾ ವಿನಾಯಿತಿ ಪಡೆದ ವ್ಯಕ್ತಿಯಾಗಿದ್ದಾಗ ಬಡ್ಡಿಯ ದರವು ವರ್ಷಕ್ಕೆ ಶೇಕಡಾ ಆರು ಆಗಿರತಕ್ಕುದು ಮತ್ತು ಇತರ ಎಲ್ಲಾ ಸಂದರ್ಭಗಳಲ್ಲೂ ಶೇಕಡ ನಾಲ್ಕು ಆಗಿರತಕ್ಕುದು.

354. ಮರಣಶಾಸನ ಕರ್ತನ ಮರಣದ ತರುವಾಯ ಮೊದಲನೆಯ ವರ್ಷದ ಒಳಗೆ ವರ್ಷಾಶನದ ಬಾಕಿಯ ಮೇಲೆ ಯಾವುದೇ ಬಡ್ಡಿ ಇಲ್ಲದಿರುವುದು:- ವರ್ಷಾಶನದ ಮೊದಲನೇ ಸಂದಾಯವನ್ನು ಮಾಡುವುದಕ್ಕಾಗಿ ಉಯಿಲಿನಲ್ಲಿ ಆ ಮೊದಲ ವರ್ಷದ ಮುಕ್ತಾಯಕ್ಕಿಂತ ಮುಂಚಿನ ಒಂದು ಅವಧಿಯನ್ನು ನಿಗದಿಪಡಿಸಿರಬಹುದಾಗಿದ್ದಾಗ್ಯೂ ಮರಣಶಾಸನ ಕರ್ತನ ಮರಣದಂದಿನಿಂದ ಮೊದಲನೆಯ ವರ್ಷದ ಒಳಗೆ ವರ್ಷಾಶನದ ಬಾಕಿಗಳ ಮೇಲೆ ಯಾವುದೇ ಬಡ್ಡಿಯನ್ನು ಸಂದಾಯಮಾಡಬೇಕಾಗಿಲ್ಲ.

355. ವರ್ಷಾಶನವನ್ನು ದೊರಕಿಸಲು ಮೊತ್ತದ ಮೇಲಿನ ಬಡ್ಡಿಯನ್ನು ಹೂಡುವುದು:- ವರ್ಷಾಶನವನ್ನು ದೊರಕಿಸಲು ಹಣದ ಮೊತ್ತವನ್ನು ಹೂಡಬೇಕೆಂದು ನಿರ್ದೇಶಿಸಿರುವಲ್ಲಿ , ಮರಣಶಾಸನ ಕರ್ತನ ಮರಣದಂದಿನಿಂದ ಅದರ ಮೇಲೆ ಬಡ್ಡಿಯನ್ನು ಸಂದಾಯ ಮಾಡಬೇಕು.

## ಅಧ್ಯಾಯ - XII

### ಮರಣಶಾಸನ ಸ್ವತ್ತುಗಳ ಮರುಪಾವತಿಯ ಬಗ್ಗೆ

356. ನ್ಯಾಯಾಲಯದ ಆದೇಶಗಳ ಮೇರೆಗೆ ಸಂದಾಯ ಮಾಡಿದ ಮರಣಶಾಸನ ಸ್ವತ್ತಿನ ಮರುಪಾವತಿ:-ನಿರ್ವಾಹಕ ಅಥವಾ ಆಡಳಿತಗಾರನು ನ್ಯಾಯಾಲಯದ ಆದೇಶದ ಮೇರೆಗೆ ಮರಣಶಾಸನ ಸ್ವತ್ತನ್ನು ಸಂದಾಯ ಮಾಡಿರುವಾಗ ಎಲ್ಲಾ ಮರಣಶಾಸನ ಸ್ವತ್ತುಗಳನ್ನು ಸಂದಾಯ ಮಾಡಲು ಆಸ್ತಿಗಳು ಸಾಕಾಗದಿರುವ ಸಂದರ್ಭದಲ್ಲಿ ಅವನು ಮರುಪಾವತಿ ಮಾಡುವಂತೆ ಲೆಗಟಿಯನ್ನು ಕೋರಲು ಹಕ್ಕುಳ್ಳವನಾಗಿರುತ್ತಾನೆ.

357. ಸ್ವಯಿಚ್ಛೆಯಿಂದ ಸಂದಾಯ ಮಾಡಿದ್ದರೆ ಮರುಪಾವತಿ ಇಲ್ಲದಿರುವುದು:- ನಿರ್ವಾಹಕ ಅಥವಾ ಆಡಳಿತಗಾರನು ಮರಣಶಾಸನ ಸ್ವತ್ತನ್ನು ಸ್ವಯಿಚ್ಛೆಯಿಂದ ಸಂದಾಯಮಾಡಿರುವಾಗ ಎಲ್ಲಾ ಮರಣಶಾಸನ ಸ್ವತ್ತುಗಳನ್ನು ಸಂದಾಯ ಮಾಡಲು ಆಸ್ತಿಗಳು ಸಾಕಾಗದಿರುವ ಸಂದರ್ಭದಲ್ಲಿ ಅವನು ಲೆಗಟಿಯನ್ನು ಮರುಪಾವತಿ ಮಾಡುವಂತೆ ಕೋರುವಂತಿಲ್ಲ.

358. 137ನೇ ಪ್ರಕರಣದ ಮೇರೆಗೆ ಅನುಮತಿಸಲಾದ ಹೆಚ್ಚಿನ ಕಾಲದೊಳಗೆ, ಷರತ್ತಿನ ನೆರವೇರಿಕೆಯ ಮೇಲೆ ಮರಣಶಾಸನ ಸ್ವತ್ತು ಬಾಕಿಯಾಗಿರುವಾಗ ಮರುಪಾವತಿ:- ಷರತ್ತನ್ನು ನೆರವೇರಿಸುವುದಕ್ಕಾಗಿ ಉಯಿಲಿನಲ್ಲಿ ನಿಯಮಿಸಿದ ಕಾಲವು ಆ ಷರತ್ತನ್ನು ನೆರವೇರಿಸದೆಯೇ ಗತಿಸಿರುವಾಗ ಮತ್ತು ಅನಂತರ ನಿರ್ವಾಹಕ ಅಥವಾ ಆಡಳಿತಗಾರನು ಮೋಸವಿಲ್ಲದೆ ಆಸ್ತಿಗಳನ್ನು ಹಂಚಿರುವಾಗ, ಅಂಥ ಸಂದರ್ಭದಲ್ಲಿ ಆ ಷರತ್ತಿನ ನೆರವೇರಿಕೆಗಾಗಿ 137ನೇ ಪ್ರಕರಣದ ಮೇರೆಗೆ ಹೆಚ್ಚಿನ ಕಾಲವನ್ನು ಕೊಟ್ಟಿದ್ದರೆ, ಮತ್ತು ಷರತ್ತನ್ನು ತದನುಸಾರವಾಗಿ ನೆರವೇರಿಸಿದ್ದರೆ ಆ ಮರಣಶಾಸನ ಸ್ವತ್ತನ್ನು ನಿರ್ವಾಹಕ ಅಥವಾ ಆಡಳಿತಗಾರನಿಂದ ಕ್ಲೇಮು ಮಾಡಲಾಗದು, ಆದರೆ ಅದನ್ನು ಅವನು ಯಾರಿಗೆ ಸಂದಾಯ ಮಾಡಿರುವನೋ ಅವರು ಆ ಮೊಬಲಗನ್ನು ಮರುಪಾವತಿ ಮಾಡಲು ಹೊಣೆಗಾರರಾಗಿರುತ್ತಾರೆ.

359. ಪ್ರಮಾಣಾನುಸಾರ ಮರುಪಾವತಿ ಮಾಡಲು ಪ್ರತಿಯೊಬ್ಬ ಲೆಗಟಿಯನ್ನು ಯಾವಾಗ ಒತ್ತಾಯಿಸಬಹುದು:- ನಿರ್ವಾಹಕ ಅಥವಾ ಆಡಳಿತಗಾರನು ಮರಣಶಾಸನ ಸ್ವತ್ತುಗಳಲ್ಲಿನ ಆಸ್ತಿಗಳನ್ನು ಸಂದಾಯ ಮಾಡಿರುವಾಗ ಮತ್ತು ಆ ತರುವಾಯ ತನಗೆ ಮುಂಚೆ ತಿಳಿಯದೆ ಇದ್ದಂಥ ಋಣವನ್ನು ತೀರಿಸಲು ಬದ್ಧನಾಗಿರುವಾಗ, ಅವನು ಪ್ರತಿಯೊಬ್ಬ ಲೆಗಟಿಯನ್ನು ಪ್ರಮಾಣಾನುಸಾರ ಮರುಪಾವತಿ ಮಾಡಲು ಕೋರುವುದಕ್ಕೆ ಹಕ್ಕುಳ್ಳವನಾಗಿರುತ್ತಾನೆ.

360. ಆಸ್ತಿಗಳ ಹಂಚಿಕೆ:- ನಿರ್ವಾಹಕ ಅಥವಾ ಆಡಳಿತಗಾರನು, ಉಚ್ಚ ನ್ಯಾಯಾಲಯವು ಯಾವುದೇ ಸಾಮಾನ್ಯ ನಿಯಮದ ಮೂಲಕ ನಿಯಮಿಸಬಹುದಾದಂಥ, ಅಥವಾ ಅಂಥ ಯಾವುದೇ ನಿಯಮವನ್ನು ರಚಿಸಿಲ್ಲದಿದ್ದರೆ, ಉಚ್ಚ ನ್ಯಾಯಾಲಯವು ಆಡಳಿತ-ದಾವೆಯಲ್ಲಿ ಕೊಡಬಹುದಾದಂಥ ನೋಟೀಸುಗಳನ್ನು ಸಾಲಿಗರು ಮತ್ತು ಇತರರಿಗೆ ಮೃತನ ಎಸ್ಟೇಟಿಗೆ ಸಂಬಂಧಿಸಿದ ಅವರ ಕ್ಲೇಮುಗಳನ್ನು ತನಗೆ ಕಳುಹಿಸಲು ಕೊಟ್ಟಿರುವಲ್ಲಿ, ಅವನು, ಕ್ಲೇಮುಗಳನ್ನು ಕಳುಹಿಸಿಕೊಡಲು ನೋಟೀಸಿನಲ್ಲಿ ತಿಳಿಸಿದ ಕಾಲವು ಮುಕ್ತಾಯವಾದ ಮೇಲೆ ತನಗೆ ತಿಳಿದಿರುವಂಥ ಕಾನೂನು ಸಮ್ಮತ ಕ್ಲೇಮುಗಳನ್ನು ತೀರಿಸಲು ಆಸ್ತಿಗಳು ಅಥವಾ ಅವುಗಳ ಯಾವುದೇ ಭಾಗವನ್ನು ಹಂಚಲು ಸ್ವತಂತ್ರನಾಗಿರತಕ್ಕುದು ಮತ್ತು ಅಂಥ ಹಂಚಿಕೆಯ ಕಾಲದಲ್ಲಿ ಯಾವ ಕ್ಲೇಮಿನ ಬಗ್ಗೆ ತನಗೆ ಗೊತ್ತಿದ್ದಿಲ್ಲವೋ ಆ ಯಾವನೇ ವ್ಯಕ್ತಿಗೆ ಹಾಗೆ ಹಂಚಲಾದ ಆಸ್ತಿಗಳ ಸಂಬಂಧದಲ್ಲಿ ಹೊಣೆಗಾರನಾಗಿರತಕ್ಕುದಲ್ಲ:

ಪರಂತು, ಇಲ್ಲಿ ಅಡಕವಾಗಿರುವುದಾವುದೂ, ಅನುಕ್ರಮವಾಗಿ ಸ್ವೀಕರಿಸಿರಬಹುದಾದ ವ್ಯಕ್ತಿಗಳ ಕೈಯಲ್ಲಿನ ಸ್ವತ್ತುಗಳು ಅಥವಾ ಅವುಗಳ ಯಾವುದೇ ಭಾಗಕ್ಕೆ ಕ್ಲೇಮು ಮಾಡಲು ಯಾವನೇ ಸಾಲ ಕೊಟ್ಟವನ ಅಥವಾ ಕ್ಲೇಮುದಾರನ ಹಕ್ಕಿಗೆ ಬಾಧಕವನ್ನುಂಟುಮಾಡತಕ್ಕುದಲ್ಲ.

361. ಸಾಲ ಕೊಟ್ಟವನು ಲೆಗಟಿಯನ್ನು ಮರುಪಾವತಿ ಮಾಡಲು ಕೋರಬಹುದು:- ಮರಣಶಾಸನ ಕರ್ತನ ಮರಣ ಕಾಲದಲ್ಲಿ ಅವನ ಋಣಗಳು ಮತ್ತು ಮರಣ ಶಾಸನ ದಾನಗಳೆರಡನ್ನೂ ಸಂದಾಯ ಮಾಡಲು ಆಸ್ತಿಗಳು ಸಾಕಷ್ಟಿದ್ದಿರಲಿ ಅಥವಾ ಇದ್ದಿಲ್ಲದಿರಲಿ; ಮತ್ತು ನಿರ್ವಾಹಕನು ಅಥವಾ ಆಡಳಿತಗಾರನು ಮರಣ ಶಾಸನ ದಾನವನ್ನು ಸ್ವಯಿಚ್ಛೆಯಿಂದ ಮಾಡಿದ್ದಿರಲಿ ಅಥವಾ ಇಲ್ಲದಿರಲಿ, ತನ್ನ ಋಣಗಳ ಸಂದಾಯವನ್ನು ಸ್ವೀಕರಿಸದೇ ಇರುವ ಸಾಲಕೊಟ್ಟವನು, ಯಾವ ಲೆಗಟಿಯು ಅವನ ಮರಣಶಾಸನದಾನದ ಸಂದಾಯವನ್ನು ಸ್ವೀಕರಿಸಿರುವನೋ ಆ ಲೆಗಟಿಯನ್ನು ಅವನು ಪಡೆದಿರುವ ಸಂದಾಯವನ್ನು ಹಿಂತಿರುಗಿಸುವಂತೆ ಕೋರಬಹುದು.

362. ತೃಪ್ತನಾಗದ ಅಥವಾ 361ನೇ ಪ್ರಕರಣದ ಮೇರೆಗೆ ಮರುಪಾವತಿ ಮಾಡಲು ಒತ್ತಾಯಕ್ಕೆ ಒಳಗಾಗಿರುವ ಲೆಗಟಿಯು ಪೂರ್ಣ ಸಂದಾಯವನ್ನು ಪಡೆದ ವ್ಯಕ್ತಿಯನ್ನು ಮರುಪಾವತಿ ಮಾಡುವಂತೆ ಯಾವಾಗ ಒತ್ತಾಯಿಸದಿರುವುದು:- ಮರಣಶಾಸನ ಕರ್ತನ ಮರಣ ಕಾಲದಲ್ಲಿ ಎಲ್ಲ ಮರಣ ಶಾಸನ ದಾನಗಳನ್ನು ಪೂರೈಸಲು ಆಸ್ತಿಗಳು ಸಾಕಷ್ಟಿದ್ದರೆ, ತನ್ನ ಮರಣಶಾಸನ ಸ್ವತ್ತಿನ ಸಂದಾಯವನ್ನು ಸ್ವೀಕರಿಸದೆ ಇರುವ ಅಥವಾ 361ನೇ ಪ್ರಕರಣದ ಮೇರೆಗೆ ಮರುಪಾವತಿ ಮಾಡಲು ಒತ್ತಾಯಕ್ಕೆ ಒಳಗಾಗಿರುವ ಲೆಗಟಿಯು, ನಿರ್ವಾಹಕನ ಪೋಲಿನಿಂದ ಆಸ್ತಿಗಳು ತರುವಾಯ ಕಡಿಮೆಯಾಗಿದ್ದಾಗ್ಯೂ, ಮರಣಶಾಸನ ಸ್ವತ್ತು ಪೂರ್ಣ ಸಂದಾಯವನ್ನು ದಾವೆಯ ಮೂಲಕ ಅಥವಾ ಅದಿಲ್ಲದೆ ಸಂದಾಯವಾಗಿದ್ದಲ್ಲಿ ಸಂದಾಯವನ್ನು ಮರುಪಾವತಿ ಮಾಡುವಂತೆ, ಹಾಗೆ ಪೂರ್ಣವಾಗಿ ಸ್ವೀಕರಿಸಿರುವವನನ್ನು ಒತ್ತಾಯಿಸಲಾಗದು.

363. ನಿರ್ವಾಹಕನು ಧನಾನುಕೂಲವುಳ್ಳವನಾಗಿದ್ದರೆ ಅವನ ವಿರುದ್ಧ ತೃಪ್ತನಾಗದ ಲೆಗಟಿಯು ಯಾವಾಗ ಮೊದಲು ಕ್ರಮ ಜರುಗಿಸಬೇಕು:- ಮರಣಶಾಸನ ಕರ್ತನ ಮರಣ ಕಾಲದಲ್ಲಿ ಆಸ್ತಿಗಳು ಎಲ್ಲ ಮರಣ ಶಾಸನ ದಾನಗಳನ್ನು ಪೂರೈಸಲು ಸಾಕಷ್ಟಿರದಿದ್ದರೆ, ಮರಣಶಾಸನ ಸ್ವತ್ತಿನ ಸಂದಾಯವನ್ನು ಸ್ವೀಕರಿಸದೇ ಇರುವ ಲೆಗಟಿಯು, ತೃಪ್ತ ಲೆಗಟಿಯನ್ನು ಮರುಪಾವತಿ ಮಾಡಲು ಕೋರುವುದಕ್ಕೆ ಮುಂಚೆ ನಿರ್ವಾಹಕ ಅಥವಾ ಆಡಳಿತಗಾರನು, ಧನಾನುಕೂಲವುಳ್ಳವನಾಗಿದ್ದರೆ ಅವನ ವಿರುದ್ಧ ಕ್ರಮ ಜರುಗಿಸತಕ್ಕುದು. ಆದರೆ ನಿರ್ವಾಹಕ ಅಥವಾ ಆಡಳಿತಗಾರನು ದಿವಾಳಿಯಾಗಿದ್ದರೆ ಅಥವಾ ಸಂದಾಯ ಮಾಡಲು ಹೊಣೆಗಾರನಾಗಿಲ್ಲದಿದ್ದರೆ, ತೃಪ್ತನಾಗದ ಲೆಗಟಿಯು ಪ್ರತಿಯೊಬ್ಬ ತೃಪ್ತ ಲೆಗಟಿಯನ್ನು, ಪ್ರಮಾಣಾನುಸಾರವಾಗಿ ಮರುಪಾವತಿ ಮಾಡಲು ಒತ್ತಾಯಿಸಬಹುದು.

364. ಒಬ್ಬ ಲೆಗಟಿಯು ಇನ್ನೊಬ್ಬ ಲೆಗಟಿಗೆ ಮರುಪಾವತಿ ಮಾಡುವ ಬಗ್ಗೆ ಮಿತಿ:- ಒಬ್ಬ ಲೆಗಟಿಯು ಇನ್ನೊಬ್ಬ ಲೆಗಟಿಗೆ ಮಾಡುವ ಹಣದ ಮರುಪಾವತಿಯ ಮಿತಿಯು, ಎಸ್ಟೇಟಿನ ಆಡಳಿತವನ್ನು ಸರಿಯಾಗಿ ನಿರ್ವಹಿಸದಿದ್ದರೆ, ಮರಣ ಶಾಸನ ಸ್ವತ್ತಿನ ಹಂಚಿಕೆಯಲ್ಲಿ ಒಬ್ಬ ಲೆಗಟಿಗೆ ಎಷ್ಟು ಕಡಿಮೆಯಾಗಲೇಬೇಕಾಗಿತ್ತೋ ಆ ಮೊತ್ತವನ್ನು ಮೀರತಕ್ಕುದಲ್ಲ.

ದೃಷ್ಟಾಂತ

'ಎ' ನು 'ಬಿ' ನಿಗೆ 240 ರೂಪಾಯಿಗಳನ್ನು, 'ಸಿ' ನಿಗೆ 480 ರೂ. ಗಳನ್ನು ಮತ್ತು 'ಡಿ' ನಿಗೆ 720 ರೂಪಾಯಿಗಳನ್ನು ಮರಣಶಾಸನದ ಮೂಲಕ ಕೊಟ್ಟಿದ್ದಾನೆ. ಆಸ್ತಿಗಳು ಕೇವಲ 1200 ರೂಪಾಯಿಗಳು ಆಗಿವೆ. ಅವುಗಳನ್ನು ಸರಿಯಾಗಿ ನಿರ್ವಹಿಸಿದ್ದರೆ 'ಬಿ' ನಿಗೆ 200 ರೂಪಾಯಿಗಳು 'ಸಿ' ನಿಗೆ 400 ರೂಪಾಯಿಗಳ ಮತ್ತು 'ಡಿ' ನಿಗೆ 600 ರೂ. ಗಳು ದೊರೆಯುತ್ತಿದ್ದವು. 'ಬಿ' ನಿಗೆ ಏನನ್ನೂ ಉಳಿಸದೆಯೇ 'ಸಿ ಮತ್ತು 'ಡಿ' ನಿಗೆ ಅವರ ಮರಣಶಾಸನ ಸ್ವತ್ತುಗಳನ್ನು ಪೂರ್ಣವಾಗಿ ಸಂದಾಯ ಮಾಡಲಾಗಿದೆ. 'ಬಿ' ನು 'ಸಿ' ನನ್ನು 80 ರೂಪಾಯಿಗಳನ್ನು ಮರುಪಾವತಿ ಮಾಡಲು ಮತ್ತು 'ಡಿ' ನನ್ನು 120 ರೂಪಾಯಿಗಳನ್ನು ಮರುಪಾವತಿ ಮಾಡಲು ಒತ್ತಾಯಿಸಬಹುದು.

365. ಮಾರುಪಾವತಿಯು ಬಡ್ಡಿ ರಹಿತವಾಗಿರತಕ್ಕುದು:- ಹಣದ ಮರುಪಾವತಿಯು ಎಲ್ಲ ಸಂದರ್ಭಗಳಲ್ಲಿ ಬಡ್ಡಿರಹಿತವಾಗಿರತಕ್ಕುದು.

366. ಮಮೂಲು ಸಂದಾಯಗಳ ತರುವಾಯದ ಶೇಷವನ್ನು ಶೇಷ ಲೆಗಟಿಗೆ ಸಂದಾಯ ಮಾಡುವುದು:- ಋಣಗಳು ಮತ್ತು ಮರಣಶಾಸನ ಸ್ವತ್ತುಗಳನ್ನು ಸಂದಾಯ ಮಾಡಿದ ತರುವಾಯ, ಮೃತನ ಸ್ವತ್ತಿನ ಹೆಚ್ಚಳ ಅಥವಾ ಶೇಷವನ್ನು, ಉಯಿಲು ಮೂಲಕ ಯಾವನೇ ಶೇಷ ಲೆಗಟಿಯನ್ನು ನೇಮಕ ಮಾಡಿರುವಾಗ ಅವನಿಗೆ ಸಂದಾಯ ಮಾಡತಕ್ಕುದು.

367. ಅಧಿವಾಸದ ದೇಶದಲ್ಲಿರುವ ನಿರ್ವಾಹಕ ಅಥವಾ ಆಡಳಿತಗಾರನಿಗೆ ಹಂಚಿಕೆಗಾಗಿ ಭಾರತದಿಂದ ಆಸ್ತಿಗಳ ವರ್ಗಾವಣೆ:- ಭಾರತದಲ್ಲಿ ತನ್ನ ಅಧಿವಾಸವನ್ನು ಹೊಂದಿಲ್ಲದೇ ಇರುವ ವ್ಯಕ್ತಿಯು, ಭಾರತದಲ್ಲಿ ಹಾಗೂ ಮರಣದ ಕಾಲದಲ್ಲಿ ತನ್ನ ಅಧಿವಾಸವನ್ನು ಅವನು ಹೊಂದಿದ್ದಂಥ ದೇಶ ಇವೆರಡರಲ್ಲೂ ಆಸ್ತಿಗಳನ್ನು ಬಿಟ್ಟು ಮರಣ ಹೊಂದಿರುವಲ್ಲಿ, ಮತ್ತು ಭಾರತದಲ್ಲಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಭಾರತದಲ್ಲಿ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ಹಾಗೂ ಅಧಿವಾಸದ ದೇಶದಲ್ಲಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಆ ದೇಶದಲ್ಲಿ ಆಡಳಿತ ಪತ್ರವನ್ನು ನೀಡಲಾಗಿರುವಲ್ಲಿ, ಭಾರತದಲ್ಲಿನ ಸಂದರ್ಭಾನುಸಾರ ನಿರ್ವಾಹಕ ಅಥವಾ ಆಡಳಿತಗಾರನು, 360ನೇ ಪ್ರಕರಣದಲ್ಲಿ ನಮೂದು ಮಾಡಿದಂಥ ನೋಟೀಸುಗಳನ್ನು ಕೊಟ್ಟ ತರುವಾಯ, ಮತ್ತು ಆ ನೋಟೀಸುಗಳಲ್ಲಿ ಹೇಳಿದ ಕಾಲವು ಮುಕ್ತಾಯವಾದ ಮೇಲೆ ತನಗೆ ತಿಳಿದಿರುವಂಥ ಕಾನೂನು ಸಮ್ಮತ ಕ್ಲೇಮುಗಳನ್ನು ತೀರಿಸಿದ ತರುವಾಯ, ಮೃತನ ಸ್ವತ್ತಿನ ಯಾವುದೇ ಹೆಚ್ಚಳ ಅಥವಾ ಶೇಷವನ್ನು ಅದಕ್ಕೆ ಹಕ್ಕುಳ್ಳ, ಭಾರತದ ಹೊರಗೆ ವಾಸಿಸುತ್ತಿರುವ ವ್ಯಕ್ತಿಗಳಿಗೆ ತಾನೇ ಹಂಚುವುದಕ್ಕೆ ಬದಲು, ಅಧಿವಾಸದ ದೇಶದಲ್ಲಿರುವ ಸಂದರ್ಭಾನುಸಾರ ನಿರ್ವಾಹಕ ಅಥವಾ ಆಡಳಿತಗಾರನ ಸಮ್ಮತಿಯೊಂದಿಗೆ, ಆ ವ್ಯಕ್ತಿಗಳಿಗೆ ಹಂಚುವುದಕ್ಕಾಗಿ ಆ ಹೆಚ್ಚಳ ಅಥವಾ ಶೇಷವನ್ನು ಅವನಿಗೆ ವರ್ಗಾಯಿಸಬಹುದು.

## ಅಧ್ಯಾಯ - XIII

### ಹಾಳಾಗುವಿಕೆಗೆ ನಿರ್ವಾಹಕ ಅಥವಾ ಆಡಳಿತಗಾರನ ಹೊಣೆಗಾರಿಕೆ

368. ಹಾಳಾಗುವಿಕೆಗೆ ನಿರ್ವಾಹಕ ಅಥವಾ ಆಡಳಿತಗಾರನ ಹೊಣೆಗಾರಿಕೆ:- ನಿರ್ವಾಹಕ ಅಥವಾ ಆಡಳಿತಗಾರನು ಮೃತನ ಎಸ್ಟೇಟನ್ನು ದುರ್ವಿನಿಯೋಗಿಸಿದಾಗ ಅಥವಾ ನಷ್ಟ ಅಥವಾ ಹಾನಿಗೆ ಅದನ್ನು ಒಳಪಡಿಸಿದಾಗ ಹಾಗೆ ಉಂಟುಮಾಡಿದ ನಷ್ಟ ಅಥವಾ ಹಾನಿಯನ್ನು ತುಂಬಿಕೊಡಲು ಅವನು ಹೊಣೆಗಾರನಾಗಿರುತ್ತಾನೆ.

ದೃಷ್ಟಾಂತಗಳು

(i) ನಿರ್ವಾಹಕನು ಎಸ್ಟೇಟಿನಿಂದ ಆಧಾರರಹಿತವಾದ ಕ್ಲೇಮನ್ನು ಸಂದಾಯ ಮಾಡುತ್ತಾನೆ. ಆದ್ದರಿಂದ ಅವನು ಆ ನಷ್ಟವನ್ನು ತುಂಬಿಕೊಡಲು ಹೊಣೆಗಾರನಾಗಿರುತ್ತಾನೆ.

(ii) ಮೃತನು ನೋಟೀಸಿನ ಮೂಲಕ ನವೀಕರಿಸಬಹುದಾದ ಮೌಲ್ಯವುಳ್ಳ ಗೇಣಿಯನ್ನು ಹೊಂದಿದ್ದನು. ಆ ನೋಟೀಸನ್ನು ಸರಿಯಾದ ಕಾಲದಲ್ಲಿ ಕೊಡಲು ನಿರ್ವಾಹಕನು ಉಪೇಕ್ಷಿಸುತ್ತಾನೆ. ಆದ್ದರಿಂದ ಆ ನಷ್ಟವನ್ನು ತುಂಬಿಕೊಡಲು ನಿರ್ವಾಹಕನು ಹೊಣೆಗಾರನಾಗಿರುತ್ತಾನೆ.

(iii) ಮೃತನು ಗೇಣಿಗಾಗಿ ಸಂದಾಯ ಮಾಡಬಹುದಾದ ಬಾಡಿಗೆಗಿಂತ ಕಡಿಮೆ ಮೌಲ್ಯದ, ಆದರೆ ನಿರ್ದಿಷ್ಟ ಕಾಲದಲ್ಲಿ ನೋಟೀಸಿನ ಮೂಲಕ ಕೊನೆಗೊಳಿಸಬಹುದಾದ ಗೇಣಿಯನ್ನು ಹೊಂದಿದ್ದನು. ನಿರ್ವಾಹಕನು ಆ ನೋಟೀಸನ್ನು ಕೊಡಲು ಉಪೇಕ್ಷಿಸುತ್ತಾನೆ. ಆದ್ದರಿಂದ ಅವನು ಆ ನಷ್ಟವನ್ನು ತುಂಬಿಕೊಡಲು ಹೊಣೆಗಾರನಾಗಿರುತ್ತಾನೆ.

369. ಸ್ವತ್ತಿನ ಯಾವುದೇ ಭಾಗವನ್ನು ಪಡೆಯಲು ನಿರ್ವಾಹಕನು ಅಥವಾ ಆಡಳಿತಗಾರನು ಉಪೇಕ್ಷಿಸಿದಾಗ ಅವನ ಹೊಣೆಗಾರಿಕೆ:- ನಿರ್ವಾಹಕ ಅಥವಾ ಆಡಳಿತಗಾರನು ಮೃತನ ಸ್ವತ್ತಿನ ಯಾವುದೇ ಭಾಗವನ್ನು ಪಡೆಯಲು ಉಪೇಕ್ಷಿಸುವ ಮೂಲಕ ಎಸ್ಟೇಟಿಗೆ ನಷ್ಟವನ್ನುಂಟು ಮಾಡಿದಾಗ ಅವನು ಆ ಮೊಬಲಗನ್ನು ತುಂಬಿಕೊಡಲು ಹೊಣೆಗಾರನಾಗಿರುತ್ತಾನೆ.

ದೃಷ್ಟಾಂತಗಳು

(i) ನಿರ್ವಾಹಕನು ಧನಾನುಕೂಲವಿರುವ ವ್ಯಕ್ತಿಯಿಂದ ಮೃತನಿಗೆ ಬರಬೇಕಾದ ಋಣವನ್ನು ಸಂಪೂರ್ಣವಾಗಿ ಬಿಟ್ಟು ಕೊಡುತ್ತಾನೆ ಅಥವಾ ಪೂರ್ಣವಾಗಿ ಸಂದಾಯಮಾಡಲು ಸಾಮರ್ಥ್ಯವಿರುವ ಋಣಿಯೊಡನೆ ರಾಜಿ ಮಾಡಿಕೊಳ್ಳುತ್ತಾನೆ. ಆದ್ದರಿಂದ ನಿರ್ವಾಹಕನು ಆ ಮೊಬಲಗನ್ನು ತುಂಬಿಕೊಡಲು ಹೊಣೆಗಾರನಾಗಿರುತ್ತಾನೆ.

(ii) ಋಣಿಯ ಕ್ಲೇಮು ಕಾಲಪರಿಮಿತಿಯಿಂದ ಪ್ರತಿಷೇಧಿತವಾಗಿದೆ ಎಂದು ವಾದಿಸಲು ಸಮರ್ಥನಾಗುವವರೆಗೂ ನಿರ್ವಾಹಕನು ಆ ಋಣಕ್ಕಾಗಿ ದಾವೆ ಹೂಡಲು ಉಪೇಕ್ಷಿಸುತ್ತಾನೆ. ಅದರಿಂದಾಗಿ ಆ ಋಣವು ಎಸ್ಟೇಟಿಗೆ ತಪ್ಪಿಹೋಗುತ್ತದೆ. ಆ ಮೊಬಲಗನ್ನು ತುಂಬಿಕೊಡಲು ನಿರ್ವಾಹಕನು ಹೊಣೆಗಾರನಾಗಿರುತ್ತಾನೆ.

## ಭಾಗ - X

## ಉತ್ತರಾಧಿಕಾರ ಪ್ರಮಾಣ ಪತ್ರಗಳು

370. ಈ ಭಾಗದ ಮೇರೆಗೆ ಪ್ರಮಾಣ ಪತ್ರಗಳ ನೀಡಿಕೆಯ ಮೇಲೆ ಪರಿಬಂಧ:- (1) ಉತ್ತರಾಧಿಕಾರ ಪ್ರಮಾಣ ಪತ್ರವನ್ನು (ಇಲ್ಲಿ ಇನ್ನು ಮುಂದೆ ಈ ಭಾಗದಲ್ಲಿ ಪ್ರಮಾಣ ಪತ್ರವೆಂದು ಉಲ್ಲೇಖಿಸಲಾಗಿದೆ) ಆಡಳಿತ ಪತ್ರ ಅಥವಾ ಪ್ರೊಬೇಟಿನ ಮೂಲಕ 212 ನೇ ಪ್ರಕರಣ ಅಥವಾ 213ನೇ ಪ್ರಕರಣದ ಮೂಲಕ ಹಕ್ಕನ್ನು ಸ್ಥಾಪಿಸಲು ಅಗತ್ಯಪಡಿಸಿರುವಂಥ ಯಾವುದೇ ಋಣ ಅಥವಾ ಭದ್ರತೆಗೆ ಸಂಬಂಧಿಸಿದಂತೆ ಈ ಭಾಗದ ಮೇರೆಗೆ ನೀಡತಕ್ಕುದಲ್ಲ:

ಪರಂತು, ಈ ಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ ಯಾವುದೇ ಋಣ ಅಥವಾ ಭದ್ರತೆಗೆ ಸಂಬಂಧಿಸಿದಂತೆ, ಮೃತ ಭಾರತೀಯ ಕ್ರೈಸ್ತನ ಸ್ವತ್ತುಗಳಿಗೆ ಅಥವಾ ಅವುಗಳ ಯಾವುದೇ ಭಾಗಕ್ಕೆ ಹಕ್ಕುಳ್ಳವನೆಂದು ಕ್ಲೇಮು ಮಾಡುತ್ತಿರುವ ಯಾವನೇ ವ್ಯಕ್ತಿಗೆ, ಆ ಸ್ವತ್ತು ಅಥವಾ ಅದರ ಭಾಗಕ್ಕೆ ಹಕ್ಕನ್ನು ಈ ಅಧಿನಿಯಮದ ಮೇರೆಗಿನ ಆಡಳಿತ ಪತ್ರದ ಮೂಲಕ ಸ್ಥಾಪಿಸಬಹುದು ಎಂಬ ಕಾರಣದಿಂದ ಪ್ರಮಾಣ ಪತ್ರ ನೀಡುವುದನ್ನು ತಡೆಗಟ್ಟುವುದೆಂದು ಭಾವಿಸತಕ್ಕುದಲ್ಲ.

(2) ಈ ಭಾಗದ ಉದ್ದೇಶಗಳಿಗಾಗಿ, 'ಭದ್ರತೆ' ಎಂದರೆ,-

(ಎ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾವುದೇ ಪ್ರಾಮಿಸರಿ ನೋಟು, ಡಿಬೆಂಚರ್, ಸ್ಟಾಕು ಅಥವಾ ಇತರ ಭದ್ರತೆ;

(ಬಿ) ಭಾರತದ ರಾಜಸ್ವಗಳ ಮೇಲೆ ಯುನೈಟೆಡ್ ಕಿಂಗ್‌ಡಮ್ಮಿನ ಸಂಸತ್ತಿನ ಅಧಿನಿಯಮದ ಮೂಲಕ ಋಣ ಭಾರ ಹೊರಿಸಿದ ಯಾವುದೇ ಬಂಧಪತ್ರ, ಡಿಬೆಂಚರ್ ಅಥವಾ ವರ್ಷಾಶನ;

(ಸಿ) ಕಂಪನಿ ಅಥವಾ ಇತರ ನಿಗಮಿತ ಸಂಸ್ಥೆಯ ಯಾವುದೇ ಸ್ಟಾಕು, ಅಥವಾ ಡಿಬೆಂಚರು ಅಥವಾ ಅದರಲ್ಲಿನ ಷೇರು;

(ಡಿ) ಸ್ಥಳೀಯ ಪ್ರಾಧಿಕಾರವು ಅಥವಾ ಅದರ ಪರವಾಗಿ ಹೊರಡಿಸಿದ ಹಣದ ಬಗೆಗಿನ ಯಾವುದೇ ಡಿಬೆಂಚರ್ ಅಥವಾ ಇತರ ಭದ್ರತೆಗಳು;

(ಇ) ಈ ಭಾಗದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಭದ್ರತೆ ಎಂದು ಘೋಷಿಸಬಹುದಾದ ಯಾವುದೇ ಇತರ ಭದ್ರತೆ.

371. ಪ್ರಮಾಣ ಪತ್ರವನ್ನು ನೀಡಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯ:- ಮೃತನು ತನ್ನ ಮರಣದ ಕಾಲದಲ್ಲಿ ಯಾವ ಜಿಲ್ಲಾ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿಯೊಳಗೆ ಸಾಮಾನ್ಯವಾಗಿ ವಾಸಿಸುತ್ತಿದ್ದನೋ ಆ ಜಿಲ್ಲಾ ನ್ಯಾಯಾಧೀಶನು ಅಥವಾ ಆ ಕಾಲದಲ್ಲಿ ಮೃತನಿಗೆ ಯಾವುದೇ ನಿಗದಿತ ವಾಸದ ಸ್ಥಳವು ಇಲ್ಲದಿದ್ದರೆ, ಮೃತನ ಸ್ವತ್ತಿನ ಯಾವುದೇ ಭಾಗವು ಯಾವ ಜಿಲ್ಲಾ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿಯೊಳಗೆ ಇರಬಹುದೋ ಆ ಜಿಲ್ಲಾ ನ್ಯಾಯಾಧೀಶನು ಈ ಭಾಗದ ಮೇರೆಗೆ ಪ್ರಮಾಣ ಪತ್ರವನ್ನು ನೀಡಬಹುದು.

372. ಪ್ರಮಾಣ ಪತ್ರಕ್ಕಾಗಿ ಅರ್ಜಿ:- (1) ಅಂಥ ಪ್ರಮಾಣ ಪತ್ರಕ್ಕಾಗಿ ಅರ್ಜಿಯನ್ನು, ವಾದಿಯು ಅಥವಾ ಅವನ ಪರವಾಗಿ ಜಿಲ್ಲಾ ನ್ಯಾಯಾಧೀಶನಿಗೆ, ವಾದಪತ್ರಕ್ಕೆ ರುಜು ಮಾಡುವುದಕ್ಕಾಗಿ ಮತ್ತು ಸತ್ಯಾಪನೆ ಮಾಡುವುದಕ್ಕಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ಮೂಲಕ ನಿಯಮಿಸಿದ ರೀತಿಯಲ್ಲಿ ಅರ್ಜಿದಾರನು ಅಥವಾ ಅವನ ಪರವಾಗಿ ರುಜು ಮಾಡಿದ ಮತ್ತು ಸತ್ಯಾಪನೆ ಮಾಡಿದ ಮತ್ತು ಈ ಕೆಳಕಂಡ ವಿವರಗಳನ್ನು ಕೊಟ್ಟಿರುವ ಮನವಿಯ ಮೂಲಕ ಸಲ್ಲಿಸತಕ್ಕುದು, ಎಂದರೆ:-

(ಎ) ಮೃತನ ಮರಣದ ಕಾಲ;

(ಬಿ) ಮರಣದ ಕಾಲದಲ್ಲಿ ಮೃತನ ಸಾಮಾನ್ಯ ವಾಸಸ್ಥಳ ಮತ್ತು, ಯಾವ ಜಿಲ್ಲಾ ನ್ಯಾಯಾಧೀಶನಿಗೆ ಆ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ಜಿಲ್ಲಾ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಲ್ಲಿ ಅಂಥ ವಾಸಸ್ಥಳವು ಇಲ್ಲದಿದ್ದರೆ, ಆಗ ಆ ಪರಿಮಿತಿಗಳೊಳಗೆ ಇರುವ ಮೃತನ ಸ್ವತ್ತು ;

(ಸಿ) ಮೃತನ ಕುಟುಂಬ ಅಥವಾ ಇತರ ಹತ್ತಿರದ ಬಂಧುಗಳು ಮತ್ತು ಅವರ ಅನುಕ್ರಮ ವಾಸ ಸ್ಥಳಗಳು ;

(ಡಿ) ಅರ್ಜಿದಾರನು ಕ್ಲೇಮು ಮಾಡುವಂಥ ಹಕ್ಕು ;

(ಇ) 370ನೇ ಪ್ರಕರಣದ ಮೇರೆಗೆ ಅಥವಾ ಈ ಅಧಿನಿಯಮದ ಯಾವುದೇ ಇತರ ಅಧಿನಿಯಮಿತಿಯ ಉಪಬಂಧಗಳ ಮೇರೆಗೆ ಪ್ರಮಾಣ ಪತ್ರವನ್ನು ನೀಡುವುದಕ್ಕೆ, ಅದನ್ನು ನೀಡಿದ್ದರೆ ಅದರ ಸಿಂಧುತ್ವಕ್ಕೆ ಯಾವುದೇ ಅಡ್ಡಿ ಇಲ್ಲದಿರುವುದು; ಮತ್ತು

(ಎಫ್) ಯಾವ ಋಣಗಳು ಮತ್ತು ಭದ್ರತೆಗಳಿಗೆ ಸಂಬಂಧಿಸಿದಂತೆ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ಋಣಗಳು ಮತ್ತು ಭದ್ರತೆಗಳು.

(2) ಮನವಿಯು, ಅದನ್ನು ಸತ್ಯಾಪನೆ ಮಾಡುವ ವ್ಯಕ್ತಿಯು ಸುಳ್ಳೆಂದು ತಿಳಿದಿರುವ ಅಥವಾ ನಂಬಿರುವ ಅಥವಾ ನಿಜವೆಂದು ನಂಬದೆ ಇರುವ ಯಾವುದೇ ದೃಢೋಕ್ತಿಯನ್ನು ಒಳಗೊಂಡಿದ್ದರೆ, ಆ ವ್ಯಕ್ತಿಯು ಭಾರತ ದಂಡ ಸಂಹಿತೆಯ (1860ರ 45) 198ನೇ ಪ್ರಕರಣದ ಮೇರೆಗೆ ಅಪರಾಧವನ್ನು ಮಾಡಿರುವುದಾಗಿ ಭಾವಿಸತಕ್ಕುದು.

(3) ಅಂಥ ಪ್ರಮಾಣ ಪತ್ರಕ್ಕಾಗಿ ಅರ್ಜಿಯನ್ನು, ಮೃತನ ಸಾಲಿಗನಿಗೆ ಬರಬೇಕಾದ ಯಾವುದೇ ಋಣಕ್ಕೆ ಅಥವಾ ಋಣಗಳಿಗೆ ಸಂಬಂಧಿಸಿದಂತೆ ಅಥವಾ ಅವುಗಳ ಭಾಗಗಳಿಗೆ ಸಂಬಂಧಿಸಿದಂತೆ ಸಲ್ಲಿಸಬಹುದು.

373. ಅರ್ಜಿಯನ್ನು ಸಲ್ಲಿಸಿದ ಮೇಲೆ ಪ್ರಕ್ರಿಯೆ:- (1) ಜಿಲ್ಲಾ ನ್ಯಾಯಾಧೀಶನಿಗೆ ಅರ್ಜಿಯನ್ನು ಪುರಸ್ಕರಿಸುವುದಕ್ಕಾಗಿ ಕಾರಣವಿದೆ ಎಂದು ಮನವರಿಕೆಯಾದರೆ ಅವನು ಅದರ ಸುನಾವಣೆಗಾಗಿ ಒಂದು ದಿವಸವನ್ನು ನಿಗದಿಪಡಿಸತಕ್ಕುದು ಮತ್ತು ಅರ್ಜಿಯ ಹಾಗೂ ಸುನಾವಣೆಗಾಗಿ ನಿಗದಿಪಡಿಸಿದ ದಿವಸದ ಬಗ್ಗೆ ನೋಟೀಸನ್ನು -

(ಎ) ನ್ಯಾಯಾಧೀಶನ ಅಭಿಪ್ರಾಯದಲ್ಲಿ ಯಾರಿಗೆ ಅರ್ಜಿಯ ಬಗ್ಗೆ ವಿಶೇಷ ನೋಟೀಸನ್ನು ಕೊಡತಕ್ಕುದೋ ಆ ಯಾವನೇ ವ್ಯಕ್ತಿಗೆ ಜಾರಿ ಮಾಡುವಂತೆ ;

(ಬಿ) ನ್ಯಾಯಾಲಯದ ಯಾವುದೇ ಎದ್ದು ಕಾಣುವ ಭಾಗದ ಮೇಲೆ ಅಂಟಿಸುವಂತೆ ಮತ್ತು ಉಚ್ಚ ನ್ಯಾಯಾಲಯವು ರಚಿಸಿದ ಯಾವುವೇ ನಿಯಮಗಳಿಗೆ ಒಳಪಟ್ಟು ನ್ಯಾಯಾಧೀಶನು ಯುಕ್ತವೆಂದು ಯೋಚಿಸುವಂಥ ಇತರ ಯಾವುದೇ ರೀತಿಯಲ್ಲಿ ಪ್ರಕಟಿಸುವಂತೆ

- ಮಾಡತಕ್ಕುದು ಮತ್ತು ನಿಗದಿಪಡಿಸಿದ ದಿವಸದಂದು ಅಥವಾ ತರುವಾಯ ಸಾಧ್ಯವಾದಷ್ಟು ಬೇಗನೆ, ಸಂಕ್ಷಿಪ್ತ ರೀತಿಯಲ್ಲಿ ಆ ಪ್ರಮಾಣಪತ್ರದ ಹಕ್ಕನ್ನು ತೀರ್ಮಾನಿಸುವ ಬಗ್ಗೆ ಕ್ರಮ ಕೈಗೊಳ್ಳತಕ್ಕುದು.

(2) ಅರ್ಜಿದಾರನಿಗೆ ಆ ಬಗ್ಗೆ ಹಕ್ಕು ಇದೆ ಎಂದು ನ್ಯಾಯಾಧೀಶನು ತೀರ್ಮಾನಿಸಿದಾಗ, ಅವನು ಅರ್ಜಿದಾರನಿಗೆ ಪ್ರಮಾಣಪತ್ರವನ್ನು ನೀಡಲು ಆದೇಶ ಮಾಡತಕ್ಕುದು.

(3) ಸಂಕ್ಷಿಪ್ತ ವ್ಯವಹರಣೆಯಲ್ಲಿ, ನಿರ್ಧರಿಸಲು ಅತ್ಯಂತ ಜಟಿಲ ಮತ್ತು ಕಠಿಣವೆಂದು ತೋರುವಂಥ ಕಾನೂನಿನ ಅಥವಾ ಸಂಗತಿಯ ಪ್ರಶ್ನೆಗಳನ್ನು ನಿರ್ಧರಿಸದೇ ಪ್ರಮಾಣ ಪತ್ರದ ಬಗ್ಗೆ ಹಕ್ಕನ್ನು ತೀರ್ಮಾನಿಸುವುದಕ್ಕೆ ನ್ಯಾಯಾಧೀಶನಿಗೆ ಆಗದೆ ಇದ್ದಾಗ್ಯೂ, ಅವನು ಅರ್ಜಿದಾರನು ಮೊದಲ ನೋಟಕ್ಕೆ ಅದಕ್ಕೆ ಉತ್ತಮ ಹಕ್ಕನ್ನು ಹೊಂದಿರುವ ವ್ಯಕ್ತಿ ಎಂದು ಕಂಡುಬಂದರೆ, ಪ್ರಮಾಣ ಪತ್ರವನ್ನು ನೀಡಬಹುದು.

(4) ಪ್ರಮಾಣ ಪತ್ರಕ್ಕಾಗಿ ಒಬ್ಬನಿಗಿಂತ ಹೆಚ್ಚು ಅರ್ಜಿದಾರರು ಇರುವಾಗ ಮತ್ತು ನ್ಯಾಯಾಧೀಶನಿಗೆ ಅಂಥ ಅರ್ಜಿದಾರರಲ್ಲಿ ಒಬ್ಬನಿಗಿಂತ ಹೆಚ್ಚು ಅರ್ಜಿದಾರರು ಮೃತನ ಎಸ್ಟೇಟಿನಲ್ಲಿ ಹಿತಾಸಕ್ತಿಯನ್ನು ಹೊಂದಿರುವವರೆಂದು ಕಂಡುಬಂದರೆ, ನ್ಯಾಯಾಧೀಶನು ಯಾರಿಗೆ ಪ್ರಮಾಣಪತ್ರವನ್ನು ನೀಡಬೇಕು ಎಂಬುದನ್ನು ತೀರ್ಮಾನಿಸುವಲ್ಲಿ ಅರ್ಜಿದಾರನ ಹಿತಾಸಕ್ತಿಯು ಎಷ್ಟರಮಟ್ಟಿಗೆ ಇದೆ ಎಂಬ ಬಗ್ಗೆ ಮತ್ತು ಇತರ ವಿಷಯಗಳಲ್ಲಿ ಅದರ ಅರ್ಹತೆಯ ಬಗ್ಗೆ ಗಮನ ಕೊಡಬಹುದು.

374. ಪ್ರಮಾಣ ಪತ್ರದ ಒಳಾಂಶಗಳು:- ಜಿಲ್ಲಾ ನ್ಯಾಯಾಧೀಶನು ಪ್ರಮಾಣಪತ್ರವನ್ನು ನೀಡುವಾಗ, ಅವನು ಆ ಪ್ರಮಾಣ ಪತ್ರಕ್ಕಾಗಿ ಸಲ್ಲಿಸಿರುವ ಅರ್ಜಿಯಲ್ಲಿ ವಿವರಿಸಿರುವ ಋಣಗಳು ಮತ್ತು ಭದ್ರತೆಗಳನ್ನು ಆ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸತಕ್ಕುದು ಮತ್ತು ಆ ಮೂಲಕ ಯಾರಿಗೆ ಪ್ರಮಾಣ ಪತ್ರವನ್ನು ನೀಡಲಾಗಿದೆಯೋ ಆ ವ್ಯಕ್ತಿಯು ಭದ್ರತೆಗಳು ಅಥವಾ ಅವುಗಳಲ್ಲಿ ಯಾವುದಾದರೂ ಒಂದರ ಮೇಲೆ,-

(ಎ) ಬಡ್ಡಿ ಅಥವಾ ಲಾಭಾಂಶಗಳನ್ನು ಸ್ವೀಕರಿಸಲು ; ಅಥವಾ

(ಬಿ) ವ್ಯವಹರಿಸಲು ಅಥವಾ ವರ್ಗಾವಣೆ ಮಾಡಲು ; ಅಥವಾ

(ಸಿ) ಅವುಗಳ ಮೇಲಣ ಬಡ್ಡಿ ಅಥವಾ ಲಾಭಾಂಶಗಳನ್ನು ಸ್ವೀಕರಿಸಲು ಮತ್ತು ವ್ಯವಹರಿಸಲು ಅಥವಾ ವರ್ಗಾವಣೆ ಮಾಡಲು ಸಹ

- ಅವನನ್ನು ಶಕ್ತಗೊಳಿಸಬಹುದು

375. ಪ್ರಮಾಣ ಪತ್ರ ಪಡೆದವನಿಂದ ಭದ್ರತೆಯನ್ನು ಕಡ್ಡಾಯ ಕೋರುವುದು:- (1) ಜಿಲ್ಲಾ ನ್ಯಾಯಾಧೀಶನು 373ನೇ ಪ್ರಕರಣದ (3) ನೇ ಉಪಪ್ರಕರಣದ ಅಥವಾ (4)ನೇ ಉಪಪ್ರಕರಣದ ಮೇರೆಗೆ ಕ್ರಮ ಕೈಗೊಳ್ಳಲು ತಾನು ಉದ್ದೇಶಿಸಿದಂಥ ಯಾವುದೇ ಪ್ರಕರಣದಲ್ಲಿ ಕಡ್ಡಾಯವಾಗಿ, ಪ್ರಮಾಣ ಪತ್ರದ ನೀಡಿಕೆಗೆ ಪೂರ್ವ ಷರತ್ತಾಗಿ, ಯಾರಿಗೆ ಅವನು ಪ್ರಮಾಣಪತ್ರ ನೀಡಲು ಉದ್ದೇಶಿಸಿರುವನೋ ಆ ವ್ಯಕ್ತಿಯು, ಅವನು ಸ್ವೀಕರಿಸಿದ ಋಣಗಳು ಮತ್ತು ಭದ್ರತೆಗಳ ಬಗ್ಗೆ ಲೆಕ್ಕವನ್ನು ಸಲ್ಲಿಸುವುದಕ್ಕಾಗಿ ಮತ್ತು ಋಣಗಳು ಮತ್ತು ಭದ್ರತೆಗಳ ಇಡೀ ಅಥವಾ ಯಾವುದೇ ಭಾಗಕ್ಕೆ ಹಕ್ಕುಳ್ಳವರಾಗಿರಬಹುದಾದ ವ್ಯಕ್ತಿಗಳಿಗೆ ನಷ್ಟ ಭರ್ತಿ ಮಾಡುವುದಕ್ಕಾಗಿ ಒಬ್ಬ ಜಾಮೀನುದಾರ ಅಥವಾ ಹೆಚ್ಚು ಜಾಮೀನುದಾರರ ಸಹಿತ ಜಿಲ್ಲಾ ನ್ಯಾಯಾಧೀಶನಿಗೆ ಬಂಧಪತ್ರವನ್ನು ಅಥವಾ ಇತರ ಸಾಕಷ್ಟು ಭದ್ರತೆಯನ್ನು ಕೊಡತಕ್ಕುದೆಂದು ಅಗತ್ಯಪಡಿಸತಕ್ಕುದು ಮತ್ತು ಯಾವುದೇ ಇತರ ಪ್ರಕರಣದಲ್ಲಿ ಅಗತ್ಯಪಡಿಸಬಹುದು.

(2) ನ್ಯಾಯಾಧೀಶನು, ಮನವಿಯ ಮೂಲಕ ಸಲ್ಲಿಸಿದ ಅರ್ಜಿಯ ಮೇಲೆ, ಮತ್ತು ತನಗೆ ಮನದಟ್ಟಾಗುವಂತೆ ಕಾರಣವನ್ನು ತೋರಿಸಿದ ಮೇಲೆ ಮತ್ತು ಭದ್ರತೆಯ ಬಗ್ಗೆ ಅಥವಾ ಸ್ವೀಕರಿಸಿದ ಹಣವನ್ನು ನ್ಯಾಯಾಲಯಕ್ಕೆ ಸಂದಾಯಮಾಡಬೇಕೆಂಬ ವ್ಯವಸ್ಥೆಯ ಬಗ್ಗೆ ಅಥವಾ ಅನ್ಯಥಾ ತಾನು ಸೂಕ್ತವೆಂದು ಯೋಚಿಸುವಂಥ ನಿಬಂಧನೆಗಳ ಮೇಲೆ ಬಂಧಪತ್ರ ಅಥವಾ ಭದ್ರತೆಯನ್ನು ಒಬ್ಬ ಸೂಕ್ತ ವ್ಯಕ್ತಿಗೆ ವಹಿಸಿಕೊಡಬಹುದು, ಮತ್ತು ಆ ತರುವಾಯ ಆ ವ್ಯಕ್ತಿಯು, ಅದನ್ನು ನ್ಯಾಯಾಧೀಶನಿಗೆ ಬದಲು ತನಗೇ ಮೂಲತಃ ಕೊಟ್ಟಿದ್ದಿದ್ದರೆ ಹೇಗೋ

ಹಾಗೆ ತನ್ನ ಸ್ವಂತ ಹೆಸರಿನಲ್ಲಿ, ಅದರ ಮೇಲೆ ದಾವೆ ಹೂಡಲು ಮತ್ತು ಅದರ ಮೇರೆಗೆ ವಸೂಲೀಯವಾಗಬಹುದಾದಂಥ ಮೊಬಲಗನ್ನು, ಹಿತಾಸಕ್ತಿಯುಳ್ಳ ಎಲ್ಲ ವ್ಯಕ್ತಿಗಳ ಟ್ರಸ್ಟಿಯಾಗಿ ವಸೂಲು ಮಾಡಲು ಹಕ್ಕುಳ್ಳವನಾಗಿರತಕ್ಕುದು.

376. ಪ್ರಮಾಣ ಪತ್ರದ ವಿಸ್ತರಣೆ:- (1) ಜಿಲ್ಲಾ ನ್ಯಾಯಾಧೀಶನು ಈ ಭಾಗದ ಮೇರೆಗೆ ಪ್ರಮಾಣಪತ್ರದ ಧಾರಕನ ಅರ್ಜಿಯ ಮೇಲೆ ಪ್ರಮಾಣಪತ್ರವನ್ನು ಅದರಲ್ಲಿ ಮೂಲತಃ ನಿರ್ದಿಷ್ಟಪಡಿಸಿಲ್ಲದ ಯಾವುದೇ ಋಣ ಅಥವಾ ಭದ್ರತೆಗೆ ವಿಸ್ತರಿಸಬಹುದು ಮತ್ತು ಅಂತಹ ಪ್ರತಿಯೊಂದು ವಿಸ್ತರಣೆಯು ಯಾವ ಋಣ ಅಥವಾ ಭದ್ರತೆಗೆ ಆ ಪ್ರಮಾಣ ಪತ್ರವನ್ನು ವಿಸ್ತರಿಸಲಾಗಿದೆಯೋ ಆ ಋಣ ಅಥವಾ ಭದ್ರತೆಯನ್ನು ಅದರಲ್ಲಿ ಮೂಲತಃ ನಿರ್ದಿಷ್ಟಪಡಿಸಿದ್ದಿದ್ದರೆ ಹೇಗೊ ಹಾಗೆ ಅದೇ ಪರಿಣಾಮವನ್ನು ಹೊಂದಿರತಕ್ಕುದು.

(2) ಪ್ರಮಾಣಪತ್ರದ ವಿಸ್ತರಣೆಯ ತರುವಾಯ ಯಾವ ಭದ್ರತೆಗೆ ಆ ಪ್ರಮಾಣ ಪತ್ರವನ್ನು ವಿಸ್ತರಿಸಲಾಗಿದೆಯೋ ಆ ಯಾವುದೇ ಭದ್ರತೆಯ ಮೇಲೆ ಬಡ್ಡಿ ಅಥವಾ ಲಾಭಾಂಶಗಳನ್ನು ಸ್ವೀಕರಿಸುವ ಅಥವಾ ಅದರ ಬಗ್ಗೆ ವ್ಯವಹರಿಸುವ ಅಥವಾ ಅದನ್ನು ವರ್ಗಾವಣೆ ಮಾಡುವ ಬಗೆಗಿನ ಅಧಿಕಾರಗಳನ್ನು ಪ್ರದಾನ ಮಾಡಬಹುದು ಮತ್ತು 375ನೇ ಪ್ರಕರಣದಲ್ಲಿ ನಮೂದಿಸಿದ ಉದ್ದೇಶಗಳಿಗಾಗಿ ಬಂಧಪತ್ರ ಅಥವಾ ಇನ್ನೂ ಹೆಚ್ಚಿನ ಬಂಧಪತ್ರ ಅಥವಾ ಇತರ ಭದ್ರತೆಯನ್ನು, ಪ್ರಮಾಣಪತ್ರದ ಮೂಲ ನೀಡಿಕೆಯನ್ನು ಮಾಡುವಾಗ ಯಾವ ರೀತಿಯಲ್ಲಿ ಅಗತ್ಯಪಡಿಸಬಹುದೋ ಅದೇ ರೀತಿಯಲ್ಲಿ ಅಗತ್ಯಪಡಿಸಬಹುದು.

377. ಪ್ರಮಾಣ ಪತ್ರ ಮತ್ತು ವಿಸ್ತರಿಸಿದ ಪ್ರಮಾಣ ಪತ್ರದ ನಮೂನೆಗಳು:- VIII ನೇ ಅನುಸೂಚಿಯಲ್ಲಿ ನಮೂದಿಸಿದ ನಮೂನೆಗಳಲ್ಲಿ ಸನ್ನಿವೇಶಗಳು ಅವಕಾಶ ಕೊಡುವಷ್ಟು ಮಟ್ಟಿಗೆ ಪ್ರಮಾಣ ಪತ್ರಗಳನ್ನು ನೀಡತಕ್ಕುದು ಮತ್ತು ಪ್ರಮಾಣ ಪತ್ರಗಳ ವಿಸ್ತರಣೆಯನ್ನು ಮಾಡತಕ್ಕುದು.

378. ಭದ್ರತೆಗಳ ಬಗೆಗಿನ ಅಧಿಕಾರಗಳಿಗೆ ಸಂಬಂಧಿಸಿದಂತೆ ಪ್ರಮಾಣಪತ್ರಗಳ ತಿದ್ದುಪಡಿ:- ಜಿಲ್ಲಾ ನ್ಯಾಯಾಧೀಶನು ಪ್ರಮಾಣ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಭದ್ರತೆಗೆ ಸಂಬಂಧಿಸಿದಂತೆ ಯಾವುದೇ ಅಧಿಕಾರವನ್ನು ಪ್ರಮಾಣ ಪತ್ರಧಾರಕನಿಗೆ ಪ್ರದಾನ ಮಾಡಿಲ್ಲದೆ ಇರುವಲ್ಲಿ, ಅಥವಾ ಭದ್ರತೆಯ ಮೇಲೆ ಬಡ್ಡಿ ಅಥವಾ ಲಾಭಾಂಶಗಳನ್ನು ಸ್ವೀಕರಿಸಲು ಅಥವಾ ವ್ಯವಹರಿಸಲು ಅಥವಾ ವರ್ಗಾವಣೆ ಮಾಡಲು ಮಾತ್ರ ಅವನನ್ನು ಶಕ್ತಗೊಳಿಸಿರುವಲ್ಲಿ ನ್ಯಾಯಾಧೀಶನು, ಮನವಿಯ ಮೂಲಕ ಮಾಡಿಕೊಂಡ ಅರ್ಜಿಯ ಮೇಲೆ ಮತ್ತು ಅವನಿಗೆ ಮನವರಿಕೆಯಾಗುವ ಹಾಗೆ ಕಾರಣವನ್ನು ತೋರಿಸಿದ ಮೇಲೆ 374ನೇ ಪ್ರಕರಣದಲ್ಲಿ ನಮೂದಿಸಿದ ಯಾವುದೇ ಅಧಿಕಾರವನ್ನು ಪ್ರದಾನ ಮಾಡುವ ಮೂಲಕ ಅಥವಾ ಆ ಅಧಿಕಾರಗಳಲ್ಲಿ ಯಾವುದೇ ಒಂದನ್ನು ಇನ್ನೊಂದಕ್ಕೆ ಬದಲಾಗಿ ಪ್ರತಿಯೋಜಿಸುವ ಮೂಲಕ ಆ ಪ್ರಮಾಣಪತ್ರವನ್ನು ತಿದ್ದುಪಡಿ ಮಾಡಬಹುದು.

379. ಪ್ರಮಾಣಪತ್ರಗಳ ಸಂಬಂಧದಲ್ಲಿ ನ್ಯಾಯಾಲಯ ಫೀಜುಗಳನ್ನು ವಸೂಲ್ಮಾಡುವ ವಿಧಾನ:- (1) ಪ್ರಮಾಣ ಪತ್ರಕ್ಕಾಗಿನ ಅಥವಾ ಪ್ರಮಾಣಪತ್ರದ ವಿಸ್ತರಣೆಗಾಗಿನ ಪ್ರತಿಯೊಂದು ಅರ್ಜಿಯ ಜೊತೆಗೆ ಯಾವ ಪ್ರಮಾಣಪತ್ರ ಅಥವಾ ಅದರ ವಿಸ್ತರಣೆಗಾಗಿ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ಪ್ರಮಾಣಪತ್ರ ಅಥವಾ ವಿಸ್ತರಣೆಗೆ ಸಂಬಂಧಿಸಿದಂತೆ, ನ್ಯಾಯಾಲಯ ಫೀಜುಗಳ ಅಧಿನಿಯಮ, 1870 (1870ರ 7) ರ ಮೇರೆಗೆ ಸಂದಾಯ ಮಾಡಬೇಕಾದ ಫೀಜಿಗೆ ಸಮನಾದ ಮೊತ್ತದ ಠೇವಣಿಯು ಇರತಕ್ಕುದು.

(2) ಅರ್ಜಿಯನ್ನು ಅಂಗೀಕರಿಸಿದರೆ ಅರ್ಜಿದಾರನು ಠೇವಣಿ ಇಟ್ಟ ಮೊತ್ತವನ್ನು, ಹಿಂದೆ ಹೇಳಿದಂತೆ ಸಂದಾಯ ಮಾಡಬೇಕಾದ ಫೀಜನ್ನು ಸೂಚಿಸುವುದಕ್ಕಾಗಿ ಉಪಯೋಗಿಸಬೇಕಾದ ಸ್ಟಾಂಪನ್ನು ಖರೀದಿಸಲು ನ್ಯಾಯಾಧೀಶನ ನಿರ್ದೇಶನದ ಮೇರೆಗೆ ವೆಚ್ಚ ಮಾಡತಕ್ಕುದು.

(3) (1)ನೇ ಉಪ-ಪ್ರಕರಣದ ಮೇರೆಗೆ ಸ್ವೀಕರಿಸಿದ ಮತ್ತು (2)ನೇ ಉಪ-ಪ್ರಕರಣದ ಮೇರೆಗೆ ವೆಚ್ಚ ಮಾಡದೇ ಇರುವ ಯಾವುದೇ ಮೊತ್ತವನ್ನು, ಅದನ್ನು ಠೇವಣಿ ಇಟ್ಟ ವ್ಯಕ್ತಿಗೆ ಮರುಪಾವತಿ ಮಾಡತಕ್ಕುದು.

380. ಪ್ರಮಾಣಪತ್ರದ ಸ್ಥಳೀಯ ವ್ಯಾಪ್ತಿ:- ಈ ಭಾಗದ ಮೇರೆಗಿನ ಪ್ರಮಾಣಪತ್ರವು ಭಾರತದಾದ್ಯಂತ ಪರಿಣಾಮಕಾರಿಯಾಗಿರತಕ್ಕುದು.

ಈ ಪ್ರಕರಣವು ಬರ್ಮ ಮತ್ತು ಏಡನ್‌ಗಳು ಭಾರತದಿಂದ ಪ್ರತ್ಯೇಕವಾದ ತರುವಾಯ, ಆ ಪ್ರತ್ಯೇಕತೆಯ ದಿನಾಂಕಕ್ಕೆ ಮುಂಚೆ, ಅಥವಾ ಆ ದಿನಾಂಕದ ತರುವಾಯ, ಬರ್ಮ ಮತ್ತು ಏಡನ್‌ಗಳಲ್ಲಿ ಆ ದಿನಾಂಕದಂದು ಇತ್ಯರ್ಥದಲ್ಲಿದ್ದ ವ್ಯವಹರಣೆಗಳಲ್ಲಿ ನೀಡಿದ್ದ ಪ್ರಮಾಣಪತ್ರಗಳಿಗೆ ಭಾರತದಲ್ಲಿ ಅನ್ವಯವಾಗತಕ್ಕುದು.

ಭಾರತದಿಂದ ಪಾಕಿಸ್ತಾನವು ಪ್ರತ್ಯೇಕಗೊಂಡ ತರುವಾಯ, ಆ ಪ್ರತ್ಯೇಕತೆಯ ದಿನಾಂಕಕ್ಕೆ ಮುಂಚೆ ಅಥವಾ ಆ ದಿನಾಂಕದ ತರುವಾಯ, ಆ ದಿನಾಂಕದಂದು ಪಾಕಿಸ್ತಾನವಾಗಿದ್ದಂಥ ಯಾವುದೇ ರಾಜ್ಯ ಕ್ಷೇತ್ರಗಳಲ್ಲಿ ಇತ್ಯರ್ಥದಲ್ಲಿರುವ ವ್ಯವಹರಣೆಗಳಲ್ಲಿ ನೀಡಲಾಗಿದ್ದ ಪ್ರಮಾಣಪತ್ರಗಳಿಗೂ ಭಾರತದಲ್ಲಿ ಅನ್ವಯವಾಗತಕ್ಕುದು.

381. ಪ್ರಮಾಣಪತ್ರದ ಪರಿಣಾಮ:- ಈ ಭಾಗದ ಉಪಬಂಧಗಳಿಗೆ ಒಳಪಟ್ಟು, ಜಿಲ್ಲಾ ನ್ಯಾಯಾಧೀಶನ ಪ್ರಮಾಣಪತ್ರವು, ಅದರಲ್ಲಿ ನಿರ್ದಿಷ್ಟಪಡಿಸಿದ ಋಣಗಳು ಮತ್ತು ಭದ್ರತೆಗಳಿಗೆ ಸಂಬಂಧಿಸಿದಂತೆ ಅಂಥ ಋಣಗಳನ್ನು ಕೊಡಬೇಕಾದ ಅಥವಾ ಅಂಥ ಭದ್ರತೆಗಳಿಗೆ ಹೊಣೆಗಾರರಾದ ವ್ಯಕ್ತಿಗಳ ವಿರುದ್ಧ ನಿರ್ಣಾಯಕವಾಗಿರತಕ್ಕುದು ಮತ್ತು 370ನೇ ಪ್ರಕರಣದ ಯಾವುದೇ ಉಲ್ಲಂಘನೆ ಅಥವಾ ಇತರ ನ್ಯೂನತೆ ಇದ್ದಾಗ್ಯೂ ಪ್ರಮಾಣಪತ್ರವನ್ನು ಯಾವ ವ್ಯಕ್ತಿಗೆ ನೀಡಲಾಗಿತ್ತೋ ಆ ವ್ಯಕ್ತಿಗೆ ಅಂಥ ಋಣಗಳು ಅಥವಾ ಭದ್ರತೆಗಳಿಗೆ ಸಂಬಂಧಿಸಿದಂತೆ ಸದ್ಭಾವನೆಯಿಂದ ಮಾಡಲಾದ ಎಲ್ಲಾ ಸಂದಾಯಗಳು ಅಥವಾ ಅವನೊಂದಿಗೆ ಮಾಡಲಾದ ಎಲ್ಲಾ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಅಂಥ ಎಲ್ಲ ವ್ಯಕ್ತಿಗಳಿಗೆ ಪೂರ್ಣ ನಷ್ಟ ಭರ್ತಿಯನ್ನು ಒದಗಿಸತಕ್ಕುದು.

382. ವಿದೇಶಿ ರಾಜ್ಯದಲ್ಲಿ ಭಾರತೀಯ ಪ್ರತಿನಿಧಿಯು ಮತ್ತು ಇತರ ಪ್ರಕರಣಗಳಲ್ಲಿ ನೀಡಿದ ಅಥವಾ ವಿಸ್ತರಿಸಿದ ಪ್ರಮಾಣಪತ್ರದ ಪರಿಣಾಮ:- ಸನ್ನಿವೇಶಗಳು ಅವಕಾಶ ಕೊಡುವಷ್ಟರ ಮಟ್ಟಿಗೆ VIII ನೇ ಅನುಸೂಚಿಯ ನಮೂನೆಯಲ್ಲಿನ ಪ್ರಮಾಣ ಪತ್ರವನ್ನು-

(ಎ) ವಿದೇಶೀ ರಾಜ್ಯದೊಳಗಿರುವ ನಿವಾಸಿಗೆ ಆ ರಾಜ್ಯಕ್ಕೆ ಅಧಿಪ್ರೇಷಿತನಾದ ಭಾರತೀಯ ಪ್ರತಿನಿಧಿಯು ನೀಡಿರುವಲ್ಲಿ ;

(ಬಿ) 'ಬಿ' ಭಾಗದ ರಾಜ್ಯಗಳ (ಕಾನೂನುಗಳ) ಅಧಿನಿಯಮ, 1951ರ (1951ರ 3) ಪ್ರಾರಂಭಕ್ಕೆ ಮುಂಚೆ ಯಾವುದೇ 'ಬಿ' ಭಾಗದ ರಾಜ್ಯದೊಳಗಿನ ನಿವಾಸಿಗೆ ಆ ರಾಜ್ಯದ ಜಿಲ್ಲಾ ನ್ಯಾಯಾಧೀಶನು ನೀಡಿರುವಲ್ಲಿ ಅಥವಾ ಅವನು ಅಂಥ ನಮೂನೆಯಲ್ಲಿ ಅದನ್ನು ವಿಸ್ತರಿಸಿರುವಲ್ಲಿ ;

(ಸಿ) 'ಬಿ' ಭಾಗದ ರಾಜ್ಯಗಳ (ಕಾನೂನುಗಳ) ಅಧಿನಿಯಮ, 1951ರ ಪ್ರಾರಂಭದ ತರುವಾಯ ಜಮ್ಮು ಮತ್ತು ಕಾಶ್ಮೀರ ರಾಜ್ಯದೊಳಗಿನ ನಿವಾಸಿಗೆ ಆ ರಾಜ್ಯದ ಜಿಲ್ಲಾ ನ್ಯಾಯಾಧೀಶನು ನೀಡಿರುವಲ್ಲಿ ಅಥವಾ ಅವನು ಅದನ್ನು ಅಂಥ ನಮೂನೆಯಲ್ಲಿ ವಿಸ್ತರಿಸಿರುವಲ್ಲಿ

- ಆ ಪ್ರಮಾಣಪತ್ರವು ಈ ಭಾಗದ ಮೇರೆಗೆ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳ ಫೀಜುಗಳ ಅಧಿನಿಯಮ, 1870ರ (1870ರ 7) ಉಪಬಂಧಗಳಿಗೆ ಅನುಸಾರವಾಗಿ ಸ್ಟಾಂಪನ್ನು ಹಾಕಿರುವಾಗ ಈ ಭಾಗದ ಮೇರೆಗೆ ನೀಡಿದ ಅಥವಾ ವಿಸ್ತರಿಸಿದ ಪ್ರಮಾಣಪತ್ರದಂತೆಯೇ ಭಾರತದಲ್ಲಿ ಅದೇ ಪರಿಣಾಮವನ್ನು ಹೊಂದಿರತಕ್ಕುದು.

383. ಪ್ರಮಾಣಪತ್ರದ ರದ್ದಿಯಾತಿ:- ಈ ಭಾಗದ ಮೇರೆಗೆ ನೀಡಿದ ಪ್ರಮಾಣ ಪತ್ರವನ್ನು ಈ ಕೆಳಕಂಡ ಯಾವುದೇ ಕಾರಣಕ್ಕಾಗಿ ರದ್ದುಗೊಳಿಸಬಹುದು, ಎಂದರೆ :-

(ಎ) ಆ ಪ್ರಮಾಣಪತ್ರವನ್ನು ಪಡೆಯಲು ನಡೆಸಿದ ವ್ಯವಹರಣೆಗಳು ಸಾರಭೂತವಾಗಿ ದೋಷಪೂರ್ಣವಾಗಿದ್ದರೆ ;

(ಬಿ) ಆ ಪ್ರಮಾಣಪತ್ರವನ್ನು ಸುಳ್ಳು ಸೂಚನೆಯನ್ನು ಮಾಡುವ ಮೂಲಕ ಅಥವಾ ಪ್ರಕರಣಕ್ಕೆ ಮುಖ್ಯವಾದ ಯಾವುದನ್ನಾದರೂ ನ್ಯಾಯಾಲಯದಿಂದ ಬಚ್ಚಿಡುವ ಮೂಲಕ ಮೋಸದಿಂದ ಪಡೆಯಲಾಗಿದ್ದರೆ ;

(ಸಿ) ಆ ಪ್ರಮಾಣ ಪತ್ರದ ನೀಡಿಕೆಯನ್ನು ಸಮರ್ಥಿಸಿಕೊಳ್ಳಲು ಕಾನೂನಿನ ದೃಷ್ಟಿಯಿಂದ ಅವಶ್ಯವಾದ ಸಂಗತಿಯನ್ನು ನಿಜವಲ್ಲದ ಹೇಳಿಕೆಯ ಮೂಲಕ, ಅಂಥ ಹೇಳಿಕೆಯನ್ನು ತಿಳಿಯದೇ ಅಥವಾ ಅಜಾಗರೂಕತೆಯಿಂದ ಮಾಡಿದ್ದಾಗ್ಯೂ, ಅದನ್ನು ಪಡೆದುಕೊಳ್ಳಲಾಗಿದ್ದರೆ ;

(ಡಿ) ಆ ಪ್ರಮಾಣ ಪತ್ರವು ಸಂದರ್ಭಗಳ ಕಾರಣದಿಂದ ನಿರುಪಯುಕ್ತ ಮತ್ತು ಅಪ್ರವರ್ತನೀಯವಾಗಿದ್ದರೆ ;

(ಇ) ಆ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿದ ಋಣಗಳು ಅಥವಾ ಭದ್ರತೆಗಳನ್ನು ಒಳಗೊಂಡ ಸ್ವತ್ತುಗಳಿಗೆ ಸಂಬಂಧಿಸಿದಂತೆ ದಾವೆ ಅಥವಾ ಇತರ ವ್ಯವಹರಣೆಯಲ್ಲಿ ಸಕ್ಷಮ ನ್ಯಾಯಾಲಯವು ಮಾಡಿದ ಡಿಕ್ರಿ ಅಥವಾ ಆದೇಶವು ಆ ಪ್ರಮಾಣಪತ್ರವನ್ನು ರದ್ದುಗೊಳಿಸುವುದು ಯುಕ್ತವಾಗಿದ್ದರೆ.

384. ಅಪೀಲು:- (1) ಈ ಭಾಗದ ಇತರ ಉಪಬಂಧಗಳಿಗೆ ಒಳಪಟ್ಟು, ಈ ಭಾಗದ ಮೇರೆಗೆ ಪ್ರಮಾಣಪತ್ರವನ್ನು ನೀಡುವ, ನಿರಾಕರಿಸುವ ಅಥವಾ ರದ್ದುಗೊಳಿಸುವ ಜಿಲ್ಲಾ ನ್ಯಾಯಾಧೀಶನ ಆದೇಶದ ಮೇಲೆ ಉಚ್ಚ ನ್ಯಾಯಾಲಯಕ್ಕೆ ಅಪೀಲಿಗೆ ಅವಕಾಶವಿರತಕ್ಕುದು ಮತ್ತು ಉಚ್ಚ ನ್ಯಾಯಾಲಯವು ತಾನು ಯುಕ್ತವೆಂದು ಯೋಚಿಸಿದರೆ, ಅಪೀಲಿನ ಮೇಲಿನ ತನ್ನ ಆದೇಶದ ಮೂಲಕ ಯಾವ ವ್ಯಕ್ತಿಗೆ ಪ್ರಮಾಣಪತ್ರವನ್ನು ನೀಡತಕ್ಕುದೋ ಆ ವ್ಯಕ್ತಿಯನ್ನು ಘೋಷಿಸತಕ್ಕುದು ಮತ್ತು ಪ್ರಮಾಣ ಪತ್ರಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ಮೇಲೆ, ಈಗಾಗಲೇ ಮಂಜೂರು ಮಾಡಿರುವ ಪ್ರಮಾಣ ಪತ್ರ ಯಾವುದಾದರೂ ಇದ್ದರೆ ಅದನ್ನು ರದ್ದುಗೊಳಿಸಿ, ತದನುಸಾರವಾಗಿ ಪ್ರಮಾಣ ಪತ್ರವನ್ನು ನೀಡುವಂತೆ ಜಿಲ್ಲಾ ನ್ಯಾಯಾಧೀಶನಿಗೆ ನಿರ್ದೇಶಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗಿನ ಅಪೀಲನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ರ ಮೇರೆಗೆ ಅಪೀಲಿಗಾಗಿ ಅವಕಾಶ ಕೊಟ್ಟಿರುವ ಕಾಲದೊಳಗೆ ಸಲ್ಲಿಸತಕ್ಕುದು.

(3) (1)ನೇ ಉಪ-ಪ್ರಕರಣದ ಉಪಬಂಧಗಳಿಗೆ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) 141ನೇ ಪ್ರಕರಣದ ಮೂಲಕ ಅನ್ವಯಿಸಲಾದಂತೆ ಉಚ್ಚ ನ್ಯಾಯಾಲಯದ ಅಭಿಪ್ರಾಯ ಕೋರಿಕೆಗೆ ಮತ್ತು ಪುನರೀಕ್ಷಣೆಗೆ ಮತ್ತು ಸೂಕ್ತ ತೀರ್ಪಿನ ಪುನರಾವಲೋಕನಕ್ಕೂ ಸಂಬಂಧಿಸಿದ ಉಪ ಬಂಧಗಳಿಗೆ ಒಳಪಟ್ಟು ಈ ಭಾಗದ ಮೇರೆಗಿನ ಜಿಲ್ಲಾ ನ್ಯಾಯಾಧೀಶನ ಆದೇಶವು ಅಂತಿಮವಾಗಿರತಕ್ಕುದು.

385. ಪ್ರಮಾಣಪತ್ರದ ಮೇಲೆ ಈ ಹಿಂದೆ ನೀಡಿದ ಪ್ರಮಾಣಪತ್ರ, ಪ್ರೊಬೇಟು ಅಥವಾ ಆಡಳಿತಾಧಿಕಾರ ಪತ್ರದ ಪರಿಣಾಮ:- ಈ ಅಧಿನಿಯಮದ ಮೂಲಕ ಉಪಬಂಧಿಸಿದಂತೆ ಹೊರತು ಮೃತನ ಯಾವುದೇ ಸ್ವತ್ತಿಗೆ ಸಂಬಂಧಿಸಿ ಅದರ ಮೇರೆಗೆ ನೀಡಿದ ಪ್ರಮಾಣ ಪತ್ರವು, ಮೃತನ ಎಸ್ಟೇಟಿಗೆ ಸಂಬಂಧಿಸಿದಂತೆ ಅಂಥ ಪ್ರಮಾಣ ಪತ್ರ ಅಥವಾ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ಈ ಹಿಂದೆ ನೀಡಿದ್ದರೆ ಮತ್ತು ಹಿಂದೆ ನೀಡಿದ್ದ ಪ್ರಮಾಣಪತ್ರವು ಜಾರಿಯಲ್ಲಿದ್ದರೆ, ಅದು ಅಸಿಂಧುವಾಗತಕ್ಕುದು.

386. ಅಸಿಂಧುವಾದ ಪ್ರಮಾಣಪತ್ರದ ಧಾರಕನಿಗೆ ಸದ್ಭಾವನೆಯಿಂದ ಮಾಡಿದ ಕೆಲವು ಸಂದಾಯಗಳನ್ನು ಸಿಂಧುಗೊಳಿಸುವುದು:- ಈ ಭಾಗದ ಮೇರೆಗಿನ ಪ್ರಮಾಣ ಪತ್ರವನ್ನು ರದ್ದುಗೊಳಿಸಿರುವಲ್ಲಿ ಅಥವಾ 383ನೇ ಪ್ರಕರಣದ ಮೇರೆಗೆ ಪ್ರಮಾಣ ಪತ್ರವನ್ನು ರದ್ದುಗೊಳಿಸಿದ ಕಾರಣದಿಂದ ಅಥವಾ 384ನೇ ಪ್ರಕರಣದ ಮೇರೆಗೆ ಅಪೀಲಿನಲ್ಲಿ ಮಾಡಿದ ಆದೇಶದಲ್ಲಿ ಹೆಸರಿಸಿರುವ ವ್ಯಕ್ತಿಗೆ ಪ್ರಮಾಣ ಪತ್ರವನ್ನು ನೀಡಿರುವ ಕಾರಣದಿಂದ ಅಥವಾ ಪ್ರಮಾಣಪತ್ರವನ್ನು ಈ ಹಿಂದೆ ನೀಡಲಾಗಿದ್ದ ಕಾರಣದಿಂದ ಅಥವಾ ಯಾವುದೇ ಇತರ ಕಾರಣದಿಂದ ಅಸಿಂಧುವಾಗಿರುವಲ್ಲಿ, ರದ್ದಾದ ಅಥವಾ ಅಸಿಂಧುವಾದ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿದ ಋಣಗಳು ಮತ್ತು ಭದ್ರತೆಗಳಿಗೆ ಸಂಬಂಧಪಟ್ಟಂತೆ ಅದು ರದ್ದಾಗಿರುವುದು ಅಥವಾ ಅಸಿಂಧುವಾಗಿರುವುದನ್ನು ತಿಳಿಯದೇ ಆ ಪ್ರಮಾಣಪತ್ರಧಾರಕನಿಗೆ ಮಾಡಿದ ಎಲ್ಲ ಸಂದಾಯಗಳು ಅಥವಾ ಅವನೊಂದಿಗೆ ನಡೆಸಿದ ವ್ಯವಹಾರಗಳು, ಯಾವುದೇ ಇತರ ಪ್ರಮಾಣ ಪತ್ರದ ಮೇರೆಗಿನ ಕ್ಲೇಮುಗಳ ಸಂಬಂಧದಲ್ಲಿ ಮಾನ್ಯವಾಗತಕ್ಕುದು.

387. ಈ ಅಧಿನಿಯಮದ ಮೇರೆಗಿನ ತೀರ್ಮಾನಗಳ ಪರಿಣಾಮ ಮತ್ತು ಅದರ ಮೇರೆಗಿನ ಪ್ರಮಾಣ ಪತ್ರದ ಧಾರಕನ ಹೊಣೆಗಾರಿಕೆ:- ಯಾರೇ ಪಕ್ಷಕಾರರ ನಡುವಣ ಹಕ್ಕಿನ ಯಾವುದೇ ಪ್ರಶ್ನೆಯ ಮೇಲೆ, ಈ ಭಾಗದ ಮೇರೆಗಿನ ಯಾವುದೇ ತೀರ್ಮಾನವು, ಅದೇ ಪಕ್ಷಕಾರರ ನಡುವಣ ಯಾವುದೇ ದಾವೆ ಅಥವಾ ಇತರ ಯಾವುದೇ ವ್ಯವಹರಣೆಯಲ್ಲಿ ಅದೇ ಪ್ರಶ್ನೆಯ ಅಧಿವಿಚಾರಣೆಯನ್ನು ಪ್ರತಿಷೇಧಿಸುತ್ತದೆಂದು ತಿಳಿಯತಕ್ಕುದಲ್ಲ ಮತ್ತು ಈ ಭಾಗದಲ್ಲಿರುವುದು ಯಾವುದೂ, ಯಾವುದೇ ಋಣ ಅಥವಾ ಭದ್ರತೆಯನ್ನು ಇಡಿಯಾಗಿ ಅಥವಾ ಅದರ ಯಾವುದೇ ಭಾಗವನ್ನು ಅಥವಾ ಯಾವುದೇ ಭದ್ರತೆಯ ಮೇಲೆ ಯಾವುದೇ ಬಡ್ಡಿ ಅಥವಾ ಲಾಭಾಂಶವನ್ನು ಸ್ವೀಕರಿಸಬಹುದಾದ ಯಾವನೇ ವ್ಯಕ್ತಿಯು, ಅದಕ್ಕೆ ಕಾನೂನು ಸಮ್ಮತವಾಗಿ ಹಕ್ಕುಳ್ಳವನಾದ ವ್ಯಕ್ತಿಗೆ, ಆ ಬಗ್ಗೆ ಲೆಕ್ಕ ಒಪ್ಪಿಸುವ ಅವನ ಹೊಣೆಗಾರಿಕೆಗೆ ಬಾಧಕವಾಗುತ್ತದೆಂದು ಅರ್ಥೈಸತಕ್ಕುದಲ್ಲ.

388. ಈ ಅಧಿನಿಯಮದ ಉದ್ದೇಶಗಳಿಗಾಗಿ ಕೆಳ ನ್ಯಾಯಾಲಯಗಳಲ್ಲಿ ಜಿಲ್ಲಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ನಿಹಿತಗೊಳಿಸುವುದು:- (1) ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಜಿಲ್ಲಾ ನ್ಯಾಯಾಧೀಶನ ನ್ಯಾಯಾಲಯದ ದರ್ಜೆಗಿಂತ ಕೆಳಗಿನ ದರ್ಜೆಯ ಯಾವುದೇ ನ್ಯಾಯಾಲಯದಲ್ಲಿ ಈ ಭಾಗದ ಮೇರೆಗಿನ ಜಿಲ್ಲಾ ನ್ಯಾಯಾಧೀಶನ ಪ್ರಕಾರ್ಯಗಳನ್ನು ಚಲಾಯಿಸುವ ಅಧಿಕಾರವನ್ನು ನಿಹಿತಗೊಳಿಸಬಹುದು.

(2) ಹಾಗೆ ನಿಹಿತಗೊಳಿಸಲಾದ ಯಾವುದೇ ಕೆಳ ನ್ಯಾಯಾಲಯವು ಅದರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ, ಜಿಲ್ಲಾ ನ್ಯಾಯಾಧೀಶನಿಗೆ ಈ ಭಾಗದ ಮೂಲಕ ಪ್ರದಾನ ಮಾಡಿದ ಎಲ್ಲಾ ಅಧಿಕಾರಗಳನ್ನು ಚಲಾಯಿಸುವಲ್ಲಿ, ಜಿಲ್ಲಾ ನ್ಯಾಯಾಧೀಶನೊಂದಿಗೆ ಸಮವರ್ತಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕುದು ಮತ್ತು ಜಿಲ್ಲಾ ನ್ಯಾಯಾಧೀಶನಿಗೆ ಸಂಬಂಧಪಟ್ಟ ಈ ಭಾಗದ ಉಪಬಂಧಗಳು ಅಂಥ ಕೆಳದರ್ಜೆ ನ್ಯಾಯಾಲಯಕ್ಕೂ ಅದು ಜಿಲ್ಲಾ ನ್ಯಾಯಾಧೀಶನ ನ್ಯಾಯಾಲಯವಾಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕುದು:

ಪರಂತು, 384ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ನಮೂದಿಸಿದ ಕೆಳದರ್ಜೆಯ ನ್ಯಾಯಾಲಯದ ಯಾವುದೇ ಆದೇಶದ ವಿರುದ್ಧ ಜಿಲ್ಲಾ ನ್ಯಾಯಾಧೀಶನಿಗೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕುದೇ ಹೊರತು ಉಚ್ಚ ನ್ಯಾಯಾಲಯಕ್ಕಲ್ಲ ಮತ್ತು ಜಿಲ್ಲಾ ನ್ಯಾಯಾಧೀಶನ ಆದೇಶದ ವಿರುದ್ಧದ ಅಪೀಲಿನ ಮೇಲೆ ಉಚ್ಚ ನ್ಯಾಯಾಲಯವು ತನ್ನ ಆದೇಶದ ಮೂಲಕ ಘೋಷಣೆ ಮಾಡಲು ಮತ್ತು ನಿರ್ದೇಶನ ನೀಡಲು ಆ ಉಪ-ಪ್ರಕರಣವು ಅಧಿಕೃತಗೊಳಿಸಿದಂತೆ, ಆ ಜಿಲ್ಲಾ ನ್ಯಾಯಾಧೀಶನು ತಾನು ಸೂಕ್ತವೆಂದು ಯೋಚಿಸಿದರೆ ಅಪೀಲಿನ ಮೇಲಿನ ತನ್ನ ಆದೇಶದ ಮೂಲಕ ಯಾವುದೇ ಅಂಥ ಘೋಷಣೆಯನ್ನು ಮಾಡಬಹುದು ಮತ್ತು ನಿರ್ದೇಶನವನ್ನು ನೀಡಬಹುದು.

(3) ಕೊನೆಯ ಹಿಂದಿನ ಉಪ-ಪ್ರಕರಣದ ಮೇರೆಗೆ ಕೆಳ ದರ್ಜೆ ನ್ಯಾಯಾಲಯದ ಆದೇಶದ ವಿರುದ್ಧದ ಅಪೀಲಿನಲ್ಲಿ ಜಿಲ್ಲಾ ನ್ಯಾಯಾಧೀಶನ ಆದೇಶವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ರ 141ನೇ ಪ್ರಕರಣದ ಮೂಲಕ ಅನ್ವಯಿಸಲಾದಂತೆ ಆ ಸಂಹಿತೆಯು ಉಚ್ಚ ನ್ಯಾಯಾಲಯದಲ್ಲಿ ಅಭಿಪ್ರಾಯ ಕೋರಿಕೆಗೆ ಮತ್ತು ಪುನರೀಕ್ಷಣೆಗೆ ಮತ್ತು ತೀರ್ಪಿನ ಪುನರಾವಲೋಕನಕ್ಕೆ ಸಂಬಂಧಿಸಿದ ಉಪಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕುದು.

(4) ಜಿಲ್ಲಾ ನ್ಯಾಯಾಧೀಶನು ಈ ಭಾಗದ ಮೇರೆಗಿನ ಯಾವುದೇ ವ್ಯವಹರಣೆಗಳನ್ನು ಕೆಳದರ್ಜೆಯ ನ್ಯಾಯಾಲಯದಿಂದ ಹಿಂದಕ್ಕೆ ತೆಗೆದುಕೊಳ್ಳಬಹುದು ಮತ್ತು ಅವುಗಳನ್ನು ತಾನೇ ವಿಲೆ ಮಾಡಬಹುದು ಅಥವಾ ಆ ಜಿಲ್ಲಾ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಲ್ಲಿ ಸ್ಥಾಪಿಸಲಾದ ಮತ್ತು ಆ ವ್ಯವಹರಣೆಗಳನ್ನು ವಿಲೆ ಮಾಡಲು ಅಧಿಕಾರವನ್ನು ಹೊಂದಿರುವ ಇನ್ನೊಂದು ಅಂಥ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಬಹುದು.

(5) (1)ನೇ ಉಪ-ಪ್ರಕರಣದ ಮೇರೆಗಿನ ಅಧಿಸೂಚನೆಯು, ಯಾವುದೇ ಕೆಳದರ್ಜೆಯ ನ್ಯಾಯಾಲಯವನ್ನು ವಿಶೇಷವಾಗಿ, ಅಥವಾ ಯಾವುದೇ ಸ್ಥಳೀಯ ಪ್ರದೇಶದಲ್ಲಿನ ಅಂಥ ನ್ಯಾಯಾಲಯಗಳ ಯಾವುದೇ ವರ್ಗವನ್ನು ನಿರ್ದಿಷ್ಟಪಡಿಸಬಹುದು.

(6) ಯಾವುದೇ ಅಧಿನಿಯಮಿತಿಯ ಯಾವುದೇ ಉದ್ದೇಶಕ್ಕಾಗಿ ಜಿಲ್ಲಾ ನ್ಯಾಯಾಧೀಶನಿಗೆ ಅಧೀನವಾಗಿರುವ ಅಥವಾ ಅವನ ನಿಯಂತ್ರಣಕ್ಕೆ ಒಳಪಟ್ಟಿರುವಂಥ ಯಾವುದೇ ಸಿವಿಲ್ ನ್ಯಾಯಾಲಯವು ಈ ಪ್ರಕರಣದ ಉದ್ದೇಶಗಳಿಗಾಗಿ ಜಿಲ್ಲಾ ನ್ಯಾಯಾಧೀಶನ ದರ್ಜೆಗಿಂತ ಕೆಳಗಿನ ದರ್ಜೆಯ ನ್ಯಾಯಾಲಯವಾಗಿರುವುದಾಗಿ ಭಾವಿಸತಕ್ಕುದು.

389. ರದ್ದುಗೊಳಿಸಿದ ಮತ್ತು ಅಸಿಂಧುವಾದ ಪ್ರಮಾಣ ಪತ್ರಗಳನ್ನು ಒಪ್ಪಿಸುವುದು:- (1) ಈ ಭಾಗದ ಮೇರೆಗಿನ ಪ್ರಮಾಣ ಪತ್ರವನ್ನು 386ನೇ ಪ್ರಕರಣದಲ್ಲಿ ನಮೂದಿಸಿದ ಯಾವುದೇ ಕಾರಣದಿಂದಾಗಿ ರದ್ದುಗೊಳಿಸಿದಾಗ ಅಥವಾ ಅದು ಅಸಿಂಧುವಾದಾಗ, ಅದರ ಧಾರಕನು ಅದನ್ನು ನೀಡಿದ್ದಂಥ ನ್ಯಾಯಾಲಯದ ಕಡ್ಡಾಯ ಕೋರಿಕೆಯ ಮೇಲೆ ಆ ನ್ಯಾಯಾಲಯಕ್ಕೆ ಅದನ್ನು ವಶಾವಣೆ ಮಾಡತಕ್ಕುದು.

(2) ಅವನು ಉದ್ದೇಶಪೂರ್ವಕವಾಗಿ ಮತ್ತು ಯಾವುದೇ ಯುಕ್ತ ಕಾರಣವಿಲ್ಲದೇ ಅದನ್ನು ಹಾಗೆ ವಶಾವಣೆ ಮಾಡಲು ತಪ್ಪಿದರೆ ಅವನು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕುದು.

390. ಮುಂಬಯಿ ರೆಗ್ಯುಲೇಶನ್, 1827 ರ 8ರ ಮೇರೆಗಿನ ಪ್ರಮಾಣಪತ್ರಗಳಿಗೆ ಸಂಬಂಧಿಸಿದಂತೆ ಉಪಬಂಧಗಳು:- ಮುಂಬಯಿ ರೆಗ್ಯುಲೇಶನ್, 1827ರ 8ರಲ್ಲಿ ಏನೇ ಇದ್ದಾಗ್ಯೂ ಈ ಭಾಗದ ಮೇರೆಗಿನ ಪ್ರಮಾಣಪತ್ರಗಳಿಗೆ ಮತ್ತು ಅವುಗಳಿಗಾಗಿನ ಅರ್ಜಿಗಳಿಗೆ ಸಂಬಂಧಿಸಿದಂತೆ 370ನೇ ಪ್ರಕರಣದ (2)ನೇ ಉಪಪ್ರಕರಣ, 372ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎಫ್) ಖಂಡ ಮತ್ತು 374, 375, 376,377, 378, 379,381, 383, 384, 387, 388 ಮತ್ತು 389ನೇ ಪ್ರಕರಣಗಳು ಮತ್ತು ನಿರ್ವಾಹಕರು ಮತ್ತು ಆಡಳಿತಗಾರರು ವಿವರಣ ಪಟ್ಟಿಗಳು ಮತ್ತು ಲೆಕ್ಕಪತ್ರಗಳನ್ನು ಪ್ರದರ್ಶಿಸುವುದಕ್ಕೆ ಸಂಬಂಧಿಸಿದಂತೆ ಅವುಗಳನ್ನು ಅನ್ವಯಗೊಳಿಸಲು ಸಾಧ್ಯವಿರುವಷ್ಟರ ಮಟ್ಟಿಗೆ 317ನೇ ಪ್ರಕರಣದ ಉಪಬಂಧಗಳು 1889ನೇ ಮೇ ಮೊದಲನೇ ದಿವಸದ ತರುವಾಯ ಆ ರೆಗ್ಯುಲೇಶನ್ನಿನ ಮೇರೆಗೆ ನೀಡಿದ

ಪ್ರಮಾಣಪತ್ರಗಳಿಗೆ ಮತ್ತು ಅದರ ಮೇರೆಗೆ ಪ್ರಮಾಣ ಪತ್ರಗಳಿಗಾಗಿ ಮಾಡಿಕೊಂಡ ಅರ್ಜಿಗಳಿಗೆ ಮತ್ತು ಹಾಗೆ ನೀಡಲಾದ ಪ್ರಮಾಣಪತ್ರಗಳ ಧಾರಕರು ವಿವರಣ ಪಟ್ಟಿಗಳು ಮತ್ತು ಲೆಕ್ಕಪತ್ರಗಳನ್ನು ಪ್ರದರ್ಶಿಸುವುದಕ್ಕೆ ಅನುಕ್ರಮವಾಗಿ ಅನ್ವಯವಾಗತಕ್ಕುದು.

## ಭಾಗ - XI

### ಸಂಕೀರ್ಣ

391. ಉಳಿಸುವಿಕೆಗಳು:- ಭಾಗ VIII, ಭಾಗ IX ಅಥವಾ X ರಲ್ಲಿರುವುದು ಯಾವುದೂ,-

(i) ಅನ್ಯಥಾ ಅಸಿಂಧುವಾಗಬಹುದಾಗಿದ್ದ ಅಂಥ ಯಾವುದೇ ಮರಣಶಾಸನ ಸಹಿತ ವಿಲೇವಾರಿಯನ್ನು ಸಿಂಧುಗೊಳಿಸತಕ್ಕುದಲ್ಲ;

(ii) ಅನ್ಯಥಾ ಸಿಂಧುವಾಗಿರಬಹುದಾಗಿದ್ದ ಅಂಥ ಯಾವುದೇ ವಿಲೇವಾರಿಯನ್ನು ಅಸಿಂಧುಗೊಳಿಸತಕ್ಕುದಲ್ಲ ;

(iii) ಯಾವನೇ ವ್ಯಕ್ತಿಯು ಅನ್ಯಥಾ ಹಕ್ಕುಳ್ಳವನಾಗಿರಬಹುದಾಗಿದ್ದಂಥ ಜೀವನಾಂಶದ ಯಾವುದೇ ಹಕ್ಕನ್ನು ಅವನಿಂದ ಕಸಿದುಕೊಳ್ಳತಕ್ಕುದಲ್ಲ ; ಅಥವಾ


(iv) ಅಡ್ಮಿನಿಸ್ಟ್ರೇಟರ್ ಜನರಲ್‌ನ ಅಧಿನಿಯಮ, 1913 ಇದಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

392. (ನಿರಸನಗಳು) :- ನಿರಸನಗೊಳಿಸುವ ಅಧಿನಿಯಮ, 1927ರ 2ನೇ ಪ್ರಕರಣದ (1927ರ 12) ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

## ಅನುಸೂಚಿ - I

(28ನೇ ಪ್ರಕರಣವನ್ನು ನೋಡಿ)

ರಕ್ತಸಂಬಂಧದ ಕೋಷ್ಟಕ



## ಅನುಸೂಚಿ - II

### ಭಾಗ - I

(54ನೇ ಪ್ರಕರಣವನ್ನು ನೋಡಿ)

(1) ತಂದೆ ಮತ್ತು ತಾಯಿ

(2) ಸಹೋದರರು ಮತ್ತು ಸಹೋದರಿಯರು (ಭಿನ್ನೋದರ ಸಹೋದರರು ಮತ್ತು ಸಹೋದರಿಯರನ್ನು ಹೊರತುಪಡಿಸಿ) ಮತ್ತು ಮರಣ ಶಾಸನ ರಹಿತನಿಗಿಂತ ಮೊದಲೇ ಮರಣ ಹೊಂದಿರತಕ್ಕಂಥವರ ಪೈಕಿ ಪಿತೃವಂಶೀಯರು.

(3) ತಾತ ಮತ್ತು ಅಜ್ಜಿ

(4) ತಾತನ ಮಕ್ಕಳು ಮತ್ತು ಮರಣಶಾಸನ ರಹಿತನಿಗಿಂತ ಮೊದಲೇ ಮರಣಹೊಂದಿರತಕ್ಕಂಥವರ ಪೈಕಿ ಪಿತೃವಂಶೀಯರು

(5) ಮುತ್ತಾತ ಮತ್ತು ಮುತ್ತಜ್ಜಿ

(6) ಮುತ್ತಾತನ ಮಕ್ಕಳು ಮತ್ತು ಮರಣಶಾಸನ ರಹಿತನಿಗಿಂತ ಮೊದಲೇ ಮರಣ ಹೊಂದಿರತಕ್ಕಂಥವರ ಪೈಕಿ ಪಿತೃವಂಶೀಯರು.

### ಭಾಗ - II

(55ನೇ ಪ್ರಕರಣವನ್ನು ನೋಡಿ)

(1) ತಂದೆ ಮತ್ತು ತಾಯಿ

(2) ಸಹೋದರ ಮತ್ತು ಸಹೋದರಿಯರು (ಭಿನ್ನೋದರ ಸಹೋದರರು ಮತ್ತು ಸಹೋದರಿಯರನ್ನು ಹೊರತುಪಡಿಸಿ) ಮತ್ತು ಮರಣ ಶಾಸನ ರಹಿತನಿಗಿಂತ ಮೊದಲೇ ಮರಣ ಹೊಂದಿರತಕ್ಕಂಥವರ ಪೈಕಿ ಪಿತೃವಂಶೀಯರು.

(3) ತಾತ ಮತ್ತು ಅಜ್ಜಿ

(4) ತಾತನ ಮಕ್ಕಳು ಮತ್ತು ಮರಣಶಾಸನ ರಹಿತನಿಗಿಂತ ಮೊದಲೇ ಮರಣ ಹೊಂದಿರತಕ್ಕಂಥವರ ಪೈಕಿ ಪಿತೃವಂಶೀಯರು

(5) ಮುತ್ತಾತ ಮತ್ತು ಮುತ್ತಜ್ಜಿ

(6) ಮುತ್ತಾತನ ಮಕ್ಕಳು ಮತ್ತು ಮರಣಶಾಸನ ರಹಿತನಿಗಿಂತ ಮೊದಲೇ ಮರಣ ಹೊಂದಿರತಕ್ಕಂಥವರ ಪೈಕಿ ಪಿತೃವಂಶೀಯರು

(7) ಭಿನ್ನೋದರ ಸಹೋದರ ಮತ್ತು ಸಹೋದರಿಯರು ಮತ್ತು ಮರಣಶಾಸನ ರಹಿತನಿಗಿಂತ ಮೊದಲೇ ಮರಣ ಹೊಂದಿರತಕ್ಕಂಥವರ ಪೈಕಿ ಪಿತೃವಂಶೀಯರು.

(8) ಸಹೋದರನ ಅಥವಾ ಭಿನ್ನೋದರ ಸಹೋದರರ ವಿಧವೆಯರು ಮತ್ತು ಸಹೋದರಿಯರ ಅಥವಾ ಭಿನ್ನೋದರ ಸಹೋದರಿಯರ ವಿಧುರರು

(9) ತಾತ ಅಥವಾ ಅಜ್ಜಿಯ ಮಕ್ಕಳ ವಿಧುರರು ಅಥವಾ ವಿಧವೆಯರು

(10) ಮರಣ ಶಾಸನ ರಹಿತನ ಮರಣಕ್ಕೆ ಮುಂಚೆ ಮರುವಿವಾಹವಾಗಿರದ ಮರಣಶಾಸನ ರಹಿತನ ಮೃತ ಪಿತೃವಂಶೀಯರ ವಿಧವೆಯರು ಅಥವಾ ವಿಧುರರು

ಅನುಸೂಚಿ III

(57ನೇ ಪ್ರಕರಣವನ್ನು ನೋಡಿ)

(57ನೇ ಪ್ರಕರಣದಲ್ಲಿ ವಿವರಿಸಿದ ಕೆಲವು ಉಯಿಲುಗಳು ಮತ್ತು ಮರಣ ಶಾಸನದ ಅನುಬಂಧಗಳಿಗೆ ಅನ್ವಯವಾಗುವ VI ನೇ ಭಾಗದ ಉಪಬಂಧಗಳು

59, 61, 62, 63, 64, 68, 70, 71, 73, 74, 75, 76, 77, 78, 79, 80, 81, 82, 83, 84, 85, 86, 87, 88, 89, 90, 95, 96, 98, 101, 102, 103, 104, 105, 106, 107, 108, 109, 110, 111, 112, 113, 114, 115, 116, 117, 119, 120, 121, 122, 123, 124, 125, 126, 127, 128, 129, 130, 131, 132, 133, 134, 135, 136, 137, 138, 139, 140, 141, 142, 143, 144, 145, 146, 147, 148, 149, 150, 151, 152, 153, 154, 155, 156, 157, 158, 159, 160, 161, 162, 163, 164, 165, 166, 167, 168, 169, 170, 171, 172, 173, 174, 175, 176, 177, 178, 179, 180, 181, 182, 183, 184, 185, 186, 187, 188, 189 ಮತ್ತು 190ನೇ ಪ್ರಕರಣಗಳು.

ಮೇಲೆ ಹೇಳಿದ ಪ್ರಕರಣಗಳನ್ನು ಅನ್ವಯಿಸುವಲ್ಲಿ ಪರಿಬಂಧಗಳು ಮತ್ತು ಮಾರ್ಪಾಟುಗಳು:-

1. ಇವುಗಳಲ್ಲಿ ಅಡಕವಾಗಿರುವುದು ಯಾವುದೂ ಮರಣ ಶಾಸನ ಕರ್ತನನ್ನು, ಅವನು ತನ್ನ ಜೀವಿತ ಕಾಲದಲ್ಲಿ ಪರಭಾರೆ ಮಾಡಲು ಸಾಧ್ಯವಿಲ್ಲದಿದ್ದಂಥ ಸ್ವತ್ತನ್ನು ಮರಣ ಶಾಸನದ ಮೂಲಕ ಕೊಡಲು ಅಥವಾ ಈ ಪ್ರಕರಣಗಳು ಅನ್ವಯವಾಗದೆ ಹೋಗಿದ್ದರೆ ಅವನು ಉಯಿಲು ಮೂಲಕ ಯಾವ ವ್ಯಕ್ತಿಗಳಿಗೆ ಜೀವನಾಂಶದ ಹಕ್ಕನ್ನು ತಪ್ಪಿಸಲು ಆಗುತ್ತಿರಲಿಲ್ಲವೋ ಆ ವ್ಯಕ್ತಿಗಳಿಗೆ ಜೀವನಾಂಶದ ಹಕ್ಕನ್ನು ತಪ್ಪಿಸಲು, ಅಧಿಕೃತಗೊಳಿಸತಕ್ಕುದಲ್ಲ.

2. ಇವುಗಳಲ್ಲಿ ಅಡಕವಾಗಿರುವುದಾವುದೂ, ಯಾವನೇ ಹಿಂದು, ಬೌದ್ಧ , ಸಿಖ್ ಅಥವಾ ಜೈನ ವ್ಯಕ್ತಿಯನ್ನು, 1870ನೇ ಸೆಪ್ಟೆಂಬರ್ ಮೊದಲನೇ ದಿವಸಕ್ಕೆ ಮುಂಚೆ ಸ್ವತ್ತಿನಲ್ಲಿ ಅವನು ಸೃಷ್ಟಿಸಲು ಸಾಧ್ಯವಾಗದಿದ್ದಂಥ ಯಾವುದೇ ಹಿತಾಸಕ್ತಿಯನ್ನು ಸೃಷ್ಟಿಸಲು ಅಧಿಕೃತಗೊಳಿಸತಕ್ಕುದಲ್ಲ.

3. ಇವುಗಳಲ್ಲಿ ಅಡಕವಾಗಿರುವುದು ಯಾವುದೂ ದತ್ತಕ ಅಥವಾ ಮರಣ ಶಾಸನರಹಿತ ಉತ್ತರಾಧಿಕಾರದ ಯಾವುದೇ ಕಾನೂನಿಗೆ ಬಾಧಕವನ್ನು ಉಂಟು ಮಾಡತಕ್ಕುದಲ್ಲ.

4. 70ನೇ ಪ್ರಕರಣವನ್ನು ಅನ್ವಯಗೊಳಿಸುವಾಗ ಅದರಲ್ಲಿರುವ "ವಿವಾಹದ ಮೂಲಕ ಅಥವಾ" ಎಂಬ ಪದಗಳನ್ನು ಲೋಪಿಸತಕ್ಕುದು.

5. ಈ ಕೆಳಕಂಡ ಯಾವುದೇ ಪ್ರಕರಣವನ್ನು ಎಪ್ಪತ್ತೈದು, ಎಪ್ಪತ್ತಾರು, ಒಂದು ನೂರ ಐದು, ಒಂದು ನೂರ ಒಂಬತ್ತು, ಒಂದು ನೂರ ಹನ್ನೊಂದು, ಒಂದು ನೂರ ಹನ್ನೆರಡು, ಒಂದು ನೂರ ಹದಿಮೂರು, ಒಂದು ನೂರ ಹದಿನಾಲ್ಕು, ಒಂದು ನೂರ ಹದಿನೈದು, ಮತ್ತು ಒಂದು ನೂರ ಹದಿನಾರನೇ ಪ್ರಕರಣ-ಇವುಗಳನ್ನು ಅಂಥ ಉಯಿಲು ಮತ್ತು ಮರಣ ಶಾಸನ ಅನುಬಂಧಗಳಿಗೆ ಅನ್ವಯಿಸುವಲ್ಲಿ, "ಮಗ", "ಗಂಡು ಮಕ್ಕಳು", "ಮಗು" ಮತ್ತು "ಮಕ್ಕಳು" ಎಂಬ ಪದಗಳು ದತ್ತು ಮಗನನ್ನೂ ಒಳಗೊಳ್ಳುವುದೆಂದು ಭಾವಿಸತಕ್ಕುದು ; ಮತ್ತು "ಮೊಮ್ಮಕ್ಕಳು" ಎಂಬ ಪದವು ದತ್ತು ಅಥವಾ ಔರಸ ಮಗುವಿನ ದತ್ತು ಅಥವಾ ಔರಸ ಮಕ್ಕಳನ್ನು ಒಳಗೊಳ್ಳುವುದಾಗಿ ಭಾವಿಸತಕ್ಕುದು; ಮತ್ತು "ಸೊಸೆ" ಎಂಬ ಪದವು ದತ್ತು ಮಗನ ಹೆಂಡತಿಯನ್ನು ಒಳಗೊಳ್ಳುವುದಾಗಿ ಭಾವಿಸತಕ್ಕುದು.

ಅನುಸೂಚಿ IV

(274 (2)ನೇ ಪ್ರಕರಣವನ್ನು ನೋಡಿ)

ಪ್ರಮಾಣ ಪತ್ರದ ನಮೂನೆ

.................... ದಿವಸದಂದು...........................ನಲ್ಲಿರುವ ಉಚ್ಚನ್ಯಾಯಾಲಯವು (ಅಥವಾ ಸಂದರ್ಭಾನುಸಾರ)............................. ಸ್ಥಳಕ್ಕೆ ಸೇರಿದ ಮೃತ 'ಸಿ ಡಿ' ಎಂಬುವನ ಉಯಿಲಿನ ಪ್ರೊಬೇಟನ್ನು (ಅಥವಾ ಅವನ ಎಸ್ಟೇಟಿನ ಆಡಳಿತ ಪತ್ರವನ್ನು...................................(ಸ್ಥಳದ) 'ಇ ಎಫ್' ಎಂಬುವನಿಗೆ ಮತ್ತು ..................... (ಸ್ಥಳದ) 'ಜಿ. ಎಚ್' ಎಂಬುವನಿಗೆ ನೀಡಿದೆ ಎಂದು ಮತ್ತು ಅಂಥ ಪ್ರೊಬೇಟು (ಅಥವಾ ಪತ್ರವು) ಭಾರತಾದ್ಯಂತ ಮೃತನ ಎಲ್ಲ ಸ್ವತ್ತಿಗೆ ಸಂಬಂಧಿಸಿ ಪರಿಣಾಮಕಾರಿಯಾಗಿರುತ್ತದೆ ಎಂದು ......................... ನಲ್ಲಿರುವ (ಅಥವಾ ಸಂದರ್ಭಾನುಸಾರ) ಉಚ್ಚನ್ಯಾಯಾಲಯದ ರಿಜಿಸ್ಟ್ರಾರ್ ಆಗಿರುವ (ಅಥವಾ ಸಂದರ್ಭಾನುಸಾರ) 'ಎ' 'ಬಿ' ಆದ ನಾನು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಅನುಸೂಚಿ V

(284 (4)ನೇ ಪ್ರಕರಣವನ್ನು ನೋಡಿ)

ಎಚ್ಚರಿಕೆ ಪತ್ರದ ನಮೂನೆ

.................. (ಸ್ಥಳದಲ್ಲಿ) ..........................(ದಿನಾಂಕದಂದು) ಮೃತನಾದ .................... (ಸ್ಥಳದಲ್ಲಿನ) ದಿವಂಗತ 'ಎ' 'ಬಿ' ನ ಎಸ್ಟೇಟಿನ ವಿಷಯದಲ್ಲಿ ............................ (ಸ್ಥಳದ) ಸಿ, ಡಿ, ನಿಗೆ ನೋಟೀಸು ಕೊಡದೇ ಯಾವುದನ್ನೂ ಮಾಡಕೂಡದು.

ಅನುಸೂಚಿ VI

(289 ನೇ ಪ್ರಕರಣ ನೋಡಿ)

ಪ್ರೊಬೇಟಿನ ನಮೂನೆ

.................. ಜಿಲ್ಲೆಯ ನ್ಯಾಯಾಧೀಶನಾದ (ಅಥವಾ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ನೀಡುವುದಕ್ಕಾಗಿ ನೇಮಕಗೊಂಡ ಪ್ರತಿನಿಧಿಯಾದ (ಪ್ರತಿನಿಧಿಯ ಅಧಿಕಾರ ವ್ಯಾಪ್ತಿಯ ಪರಿಮಿತಿಗಳನ್ನು ಇಲ್ಲಿ ನಮೂದಿಸಿ) ......................... ಎಂಬ ನಾನು .................................... (ಸ್ಥಳದ) ಮೃತನ ಕೊನೆಯ ಉಯಿಲಿನ ಪ್ರತಿಯನ್ನು ಇದಕ್ಕೆ ಲಗತ್ತಿಸಲಾಗಿದ್ದು ಆ ಕೊನೆಯ ಉಯಿಲನ್ನು ................... ವರ್ಷದ ....................... ತಿಂಗಳ ......................... ದಿವಸದಂದು ನನ್ನ ಮುಂದೆ ರುಜುವಾತು ಪಡಿಸಲಾಗಿದೆ ಮತ್ತು ನೋಂದಾಯಿಸಲಾಗಿದೆ ಎಂದು, ಮತ್ತು ಸದರಿ ಮೃತನ ಸ್ವತ್ತು ಹಾಗೂ ಜಮೆಗಳು ಮತ್ತು ಅವನ ಉಯಿಲಿಗೆ ಯಾವುದೇ ರೀತಿಯಲ್ಲಿ ಸಂಬಂಧಿಸಿದ ಸ್ವತ್ತಿನ ಆಡಳಿತಪತ್ರವನ್ನು ಸದರಿ ಉಯಿಲಿನಲ್ಲಿ ಹೆಸರಿಸಿರುವ ನಿರ್ವಾಹಕನಾದ ................................ ಎಂಬುವನಿಗೆ ನೀಡಲಾಗಿದೆಯೆಂದು ಮತ್ತು ಆ ನಿರ್ವಾಹಕನು ಅದನ್ನು ನಿರ್ವಹಿಸಲು ಮತ್ತು ಸದರಿ ಸ್ವತ್ತು ಮತ್ತು ಜಮೆಗಳ ಪೂರ್ಣ ಮತ್ತು ನಿಜವಾದ ವಿವರಣಪಟ್ಟಿಯನ್ನು ತಯಾರಿಸಲು ಮತ್ತು ಆಡಳಿತ ಪತ್ರದ ನೀಡಿಕೆಯ ದಿನಾಂಕದಿಂದ ಆರು ತಿಂಗಳ ಒಳಗೆ ಅಥವಾ ನ್ಯಾಯಾಲಯವು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಇನ್ನು ಹೆಚ್ಚಿನ ಕಾಲದೊಳಗೆ ಅದನ್ನು ಈ ನ್ಯಾಯಾಲಯದಲ್ಲಿ ಪ್ರದರ್ಶಿಸಲು ಮತ್ತು ಅದೇ ದಿನಾಂಕದಿಂದ ಒಂದು ವರ್ಷದೊಳಗೆ ಅಥವಾ ಈ ನ್ಯಾಯಾಲಯವು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಇನ್ನೂ ಹೆಚ್ಚಿನ ಕಾಲದೊಳಗೆ ಸದರಿ ಸ್ವತ್ತು ಮತ್ತು ಜಮೆಗಳ ನಿಜವಾದ ಲೆಕ್ಕವನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಲೂ ಸಹಾ ನಿರ್ವಾಹಕನು ಜವಾಬ್ದಾರಿ ವಹಿಸಿಕೊಂಡಿರುವುದರಿಂದ ಅವನಿಗೆ ಆಡಳಿತ ನಿರ್ವಹಣೆಯನ್ನು ವಹಿಸಲಾಗಿದೆಯೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಅನುಸೂಚಿ VII

(290ನೇ ಪ್ರಕರಣ ನೋಡಿ)

ಆಡಳಿತ ಪತ್ರದ ನಮೂನೆ

....................................ಜಿಲ್ಲೆಯ ನ್ಯಾಯಾಧೀಶನಾದ (ಅಥವಾ ಪ್ರೊಬೇಟು ಅಥವಾ ಆಡಳಿತ ಪತ್ರವನ್ನು ನೀಡುವುದಕ್ಕಾಗಿ ನೇಮಕಗೊಂಡ ಪ್ರತಿನಿಧಿಯಾದ (ಪ್ರತಿನಿಧಿಯ ಅಧಿಕಾರ ವ್ಯಾಪ್ತಿಯ ಪರಿಮಿತಿಗಳನ್ನು ಇಲ್ಲಿ ನಮೂದಿಸಿ) .................................. ಎಂಬ ನಾನು ಮೃತನ ತಂದೆಯ (ಅಥವಾ ಸಂದರ್ಭಾನುಸಾರ) .......................... ನು, ಮೃತನ ಸ್ವತ್ತು ಮತ್ತು ಜಮೆಗಳ ಪೂರ್ಣ ಮತ್ತು ನಿಜವಾದ ವಿವರಣಾ ಪಟ್ಟಿಯನ್ನು ತಯಾರಿಸಲು ಮತ್ತು ಈ ನೀಡಿಕೆಯ ದಿನಾಂಕದಿಂದ ಆರು ತಿಂಗಳೊಳಗೆ ಅಥವಾ ನ್ಯಾಯಾಲಯವು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಇನ್ನೂ ಹೆಚ್ಚಿನ ಕಾಲದೊಳಗೆ ಅದನ್ನು ಈ ನ್ಯಾಯಾಲಯದಲ್ಲಿ ಪ್ರದರ್ಶಿಸಲು ಮತ್ತು ಅದೇ ದಿನಾಂಕದಿಂದ ಒಂದು ವರ್ಷದೊಳಗೆ ಅಥವಾ ನ್ಯಾಯಾಲಯವು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಇನ್ನೂ ಹೆಚ್ಚಿನ ಕಾಲದೊಳಗೆ ಸದರಿ ಸ್ವತ್ತು ಮತ್ತು ಜಮೆಗಳ ನಿಜವಾದ ಲೆಕ್ಕವನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಲೂ ಸಹಾ ಜವಾಬ್ದಾರಿಯನ್ನು ವಹಿಸಿಕೊಂಡಿರುವುದರಿಂದ ಅವನಿಗೆ (ಸಂದರ್ಭಾನುಸಾರ ಉಯಿಲು ಲಗತ್ತಿಸಿ ಅಥವಾ ಲಗತ್ತಿಸದೆಯೇ) ................... ದಿವಸದಂದು ಆಡಳಿತಪತ್ರವನ್ನು ನೀಡಲಾಗಿದೆಯೆಂದು ಈ ಮೂಲಕ ತಿಳಿಯಪಡಿಸುತ್ತೇನೆ.

# ಅನುಸೂಚಿ - VIII

(377ನೇ ಪ್ರಕರಣವನ್ನು ನೋಡಿ)

## ಪ್ರಮಾಣ ಪತ್ರದ ಮತ್ತು ವಿಸ್ತೃತ ಪ್ರಮಾಣ ಪತ್ರದ ನಮೂನೆಗಳು

........................................ ನ್ಯಾಯಾಲಯದಲ್ಲಿ 'ಎ', 'ಬಿ', ನಿಗೆ,

ಈ ಕೆಳಕಂಡ ಋಣಗಳು ಮತ್ತು ಭದ್ರತೆಗಳಿಗೆ ಸಂಬಂಧಿಸಿದಂತೆ ಭಾರತ ಉತ್ತರಾಧಿಕಾರ ಅಧಿನಿಯಮ, 1925ರ X ನೇ ಭಾಗದ ಮೇರೆಗಿನ ಪ್ರಮಾಣಪತ್ರಕ್ಕಾಗಿ ........................... ವರ್ಷದ ......................... ದಿವಸದಂದು ನೀವು ಅರ್ಜಿಯನ್ನು ಸಲ್ಲಿಸಿರುವುದರಿಂದ; ಕೆಳಕಂಡವುಗಳಿಗೆ ಸಂಬಂಧಿಸಿ, ಎಂದರೆ -

ಋಣಗಳು

| ಕ್ರಮಾಂಕ | ಋಣಿಯ ಹೆಸರು | ಪ್ರಮಾಣಪತ್ರಕ್ಕಾಗಿನ ಅರ್ಜಿಯ ದಿನಾಂಕದಂದಿನ ಬಡ್ಡಿಯನ್ನು ಒಳಗೊಂಡ ಋಣದ ಮೊಬಲಗು | ಋಣವನ್ನು ಭದ್ರಗೊಳಿಸಿರುವಂತಹ ಲಿಖಿತ ಯಾವುದಾದರೂ ಇದ್ದರೆ ಅದರ ವಿವರ ಮತ್ತು ದಿನಾಂಕ |
|---|---|---|---|
| | | | |

ಭದ್ರತೆಗಳು

| ಕ್ರಮಾಂಕ | ವಿವರಣೆ | | | ಪ್ರಮಾಣಪತ್ರಕ್ಕಾಗಿನ ಅರ್ಜಿಯ ದಿನಾಂಕ ದಂದು ಭದ್ರತೆಯ ಮಾರುಕಟ್ಟೆ ಮೌಲ್ಯ |
|---|---|---|---|---|
| | ಭದ್ರತೆಯನ್ನು ಗುರುತಿಸುವ ಸಂಖ್ಯೆ ಅಥವಾ ಅಕ್ಷರ | ಭದ್ರತೆಯ ಹೆಸರು ಶೀರ್ಷಿಕೆ ಅಥವಾ ವರ್ಗ | ಭದ್ರತೆಯ ಮೊಬಲಗು ಅಥವಾ ಸಮಮೌಲ್ಯ | |
| | | | | |

ಈ ಪ್ರಮಾಣ ಪತ್ರವನ್ನು ತದನುಸಾರವಾಗಿ ನಿಮಗೆ ನೀಡಲಾಗಿದೆ ಮತ್ತು ಇದು ನಿಮಗೆ ಆ ಋಣಗಳನ್ನು ವಸೂಲ್ಮಾಡಲು ಆ ಭದ್ರತೆಗಳ ಮೇಲಿನ ಬಡ್ಡಿ, ಲಾಭಾಂಶಗಳನ್ನು ಸ್ವೀಕರಿಸಲು ಮತ್ತು ಅವುಗಳೊಡನೆ ವ್ಯವಹರಿಸಲು, ಅವುಗಳನ್ನು ವರ್ಗಾಯಿಸಲು ಅಧಿಕಾರ ಕೊಡುತ್ತದೆ.

ದಿನಾಂಕ ..................... ಜಿಲ್ಲಾ ನ್ಯಾಯಾಧೀಶ

........................ ನ್ಯಾಯಾಲಯದಲ್ಲಿ

.......................... ದಿವಸದಂದು 'ಎ', 'ಬಿ' ನು ಮಾಡಿಕೊಂಡ ಅರ್ಜಿಯ ಮೇಲೆ ನಾನು ಈ ಮೂಲಕ ಈ ಪ್ರಮಾಣಪತ್ರವನ್ನು ಈ ಕೆಳಕಂಡ ಋಣಗಳು ಮತ್ತು ಭದ್ರತೆಗಳಿಗೆ ವಿಸ್ತರಿಸುತ್ತೇನೆ, ಎಂದರೆ:-

ಋಣಗಳು

| ಕ್ರಮಾಂಕ | ಋಣಿಯ ಹೆಸರು | ವಿಸ್ತರಣೆಗಾಗಿನ ಅರ್ಜಿಯ ದಿನಾಂಕದಂದು ಬಡ್ಡಿಯನ್ನು ಒಳಗೊಂಡ ಋಣದ ಮೊಬಲಗು | ಋಣವನ್ನು ಭದ್ರಗೊಳಿಸಿರುವಂತಹ ಲಿಖಿತ ಯಾವುದಾದರೂ ಇದ್ದರೆ ಅದರ ವಿವರಣೆ ಮತ್ತು ದಿನಾಂಕ |
|---|---|---|---|
| | | | |

ಭದ್ರತೆಗಳು

| ಕ್ರಮಾಂಕ | ವಿವರಣೆ | | | ವಿಸ್ತರಣೆಗಾಗಿನ ಅರ್ಜಿಯ ದಿನಾಂಕ ದಂದು ಭದ್ರತೆಯ ಮಾರುಕಟ್ಟೆ ಮೌಲ್ಯ |
|---|---|---|---|---|
| | ಭದ್ರತೆಯನ್ನು ಗುರುತಿಸುವ ಸಂಖ್ಯೆ ಅಥವಾ ಅಕ್ಷರ | ಭದ್ರತೆಯ ಹೆಸರು, ಶೀರ್ಷಿಕೆ ಅಥವಾ ವರ್ಗ | ಭದ್ರತೆಯ ಮೊಬಲಗು ಅಥವಾ ಸಮಮೌಲ್ಯ | |
| | | | | |

ಈ ವಿಸ್ತರಣೆಯು, 'ಎ' 'ಬಿ' ನಿಗೆ ಆ ಋಣಗಳನ್ನು ವಸೂಲ್ಮಾಡಲು ಮತ್ತು ಭದ್ರತೆಗಳ ಮೇಲಿನ ಬಡ್ಡಿ, ಲಾಭಾಂಶಗಳನ್ನು ಸ್ವೀಕರಿಸಲು, ಅವುಗಳೊಡನೆ ವ್ಯವಹರಿಸಲು, ಅವುಗಳನ್ನು ವರ್ಗಾಯಿಸಲು ಅಧಿಕಾರ ಕೊಡುತ್ತದೆ.

ದಿನಾಂಕ ..................... ಜಿಲ್ಲಾ ನ್ಯಾಯಾಧೀಶ

ಅನುಸೂಚಿ - **IX**

(ನಿರಸನಗೊಳಿಸಿದ ಅಧಿನಿಯಮಿತಿಗಳು)

ನಿರಸನಗೊಳಿಸುವ ಅಧಿನಿಯಮ, 1927 (1927ರ 12)ರ 2ನೆಯ ಪ್ರಕರಣ ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

* * * * * *

ಸರ್ಕಾರಿ ಮುದ್ರಣಾಲಯ, ಪೀಣ್ಯ, ಬೆಂಗಳೂರು WD-2881/DPAL/C-8